ಲಿಪಿಯ ಹುಟ್ಟು ಮತ್ತು ಬೆಳವಣಿಗೆ

ಡಾ. ದೇವರಕೊಂಡಾರೆಡ್ಡಿ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು-560 002

ಲಿಪಿಯ
ಹುಟ್ಟು ಮತ್ತು ಬೆಳವಣಿಗೆ

ಆಕರ ಗ್ರಂಥಮಾಲೆ

ಲಿಪಿಯ ಹುಟ್ಟು ಮತ್ತು ಬೆಳವಣಿಗೆ

ಡಾ. ದೇವರಕೊಂಡಾರೆಡ್ಡಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ ಸಿ ರಸ್ತೆ, ಬೆಂಗಳೂರು-೫೬೦ ೦೦೨

Lipiya Huttu Mattu Belavanige (Origin and Evolution of Script) by **Dr. Devarakonda Reddy** (Rtd.), Prof. of Kannada University, Hampi, Published by **Ashok N. Chalawadi,** Administrative Officer, Kannada Pustaka Pradhikara, Kannada Bhavana, J.C. Road, Bangalooru-560 002.

ಮೊದಲನೆ ಮುದ್ರಣ : ೨೦೦೨
ಎರಡನೆ ಮುದ್ರಣ : ೨೦೦೯
ಪುಟಗಳು : xii + ೩೪೮
ಬೆಲೆ : **ರೂ. ೨೦೦/-**
ಪ್ರತಿಗಳು : ೧೦೦೦

First Print : 2002
Second Print : 2009
Page : xii + 348
Price : **Rs. 200/-**
Copies : 1000
ISBN : 81-7713-077-3

ಪ್ರಕಾಶಕರು
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು :
ರಾಜಾ ಪ್ರಿಂಟರ್ಸ್
ಬೆಂಗಳೂರು-೫೬೦ ೦೨೭, ದೂ: ೨೨೨೩೪೦೬೬

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ಜನಪ್ರಿಯವಲ್ಲದ ಶಾಸ್ತ್ರ ಸಾಹಿತ್ಯಕ್ಕೆ ಸಂಬಂಧಿಸಿದಂತಹ, ಅನೇಕ ಪುಸ್ತಕಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದೆ. ಆದರೆ ಇಂದಿಗೂ ಸಮಾಜಶಾಸ್ತ್ರ, ಮಾನವಶಾಸ್ತ್ರ, ವಿಜ್ಞಾನ ಮುಂತಾದ ಪ್ರಕಾರಗಳಲ್ಲಿ ಕನ್ನಡದಲ್ಲಿ ತೃಪ್ತಿಕರ ಎನಿಸುವಷ್ಟು ಗ್ರಂಥಗಳು ಹೊರಬಂದಿಲ್ಲದೇ ಇದ್ದು, ಅದರ ಕೊರತೆಯನ್ನು ನೀಗಿಸುವ ಸಲುವಾಗಿ ಪ್ರಾಧಿಕಾರ ಹಲವು ಕೃತಿಗಳನ್ನು ಪ್ರಕಟಿಸಿದೆ. ಈ ಪುಸ್ತಕಗಳಿಗೆ ಸಾರ್ವಜನಿಕರಿಂದಲೂ ಒಳ್ಳೆಯ ಪ್ರತಿಕ್ರಿಯೆ ಮೂಡಿಬರುತ್ತಿರುವುದು ಸಂತಸದ ಸಂಗತಿಯಾಗಿದೆ. ಸಾರ್ವಜನಿಕರ ಒತ್ತಾಯದ ಮೇರೆಗೆ ಈ ಕೃತಿಯನ್ನು ಪ್ರಾಧಿಕಾರ ಪುನರ್ ಮುದ್ರಣ ಮಾಡುತ್ತಿದೆ.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅತ್ಯಂತ ವಿರಳ ಪ್ರಕಾರವಾದ ಲಿಪಿಶಾಸ್ತ್ರದ ಬಗ್ಗೆ ಕೃತಿಗಳು ಅಲಭ್ಯವಿರುವ ಸಂದರ್ಭದಲ್ಲಿ ಡಾ. ದೇವರಕೊಂಡಾರೆಡ್ಡಿಯವರ "ಲಿಪಿಯ ಹುಟ್ಟು ಮತ್ತು ಬೆಳವಣಿಗೆ" ಕೃತಿ ಅಪರೂಪದ ಕೃತಿಯಾಗಿದೆ. ಲಿಪಿಯ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ಅನೇಕ ವರ್ಷಗಳ ಆಳವಾದ ಅಭ್ಯಾಸದ ಫಲವಾಗಿ ಈ ಕೃತಿ ಮೂಡಿ ಬಂದಿದೆ. ಲೇಖಕರೇ ತಿಳಿಸಿರುವಂತೆ ಈ ವಿಷಯದ ಬಗ್ಗೆ ಇಷ್ಟೊಂದು ಮಾಹಿತಿ ಕನ್ನಡದಲ್ಲಿ ಬೇರೆಲ್ಲೂ ಒಂದೇ ಕಡೆ ಲಭ್ಯವಿಲ್ಲ. ಅಪ್ಪಟ ಶಾಸ್ತ್ರಗ್ರಂಥವಾದ ಇದನ್ನು ಲಿಪಿಶಾಸ್ತ್ರದ ಬಗ್ಗೆ ಆಸಕ್ತಿಯುಳ್ಳ ಮತ್ತು ಕನ್ನಡದ ಬಗ್ಗೆ ಅಭಿಮಾನವುಳ್ಳ ಎಲ್ಲರೂ ಸ್ವಾಗತಿಸುತ್ತಾರೆಂಬ ನಂಬಿಕೆ ನನಗಿದೆ.

ಈ ಪುಸ್ತಕದ ಪುನರ್‌ಮುದ್ರಣಕ್ಕೆ ತಮ್ಮ ಒಪ್ಪಿಗೆ ಇತ್ತ ಡಾ. ದೇವರಕೊಂಡಾರೆಡ್ಡಿಯವರಿಗೆ, ಈ ಪುಸ್ತಕವನ್ನು ಹೊರತರುವಲ್ಲಿ ಶ್ರಮಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಾರಿಯಾಗಿದ್ದೇನೆ.

ಡಾ॥ ಸಿದ್ಧಲಿಂಗಯ್ಯ
ಅಧ್ಯಕ್ಷರು

ಅಕ್ಷರಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನಸಂಪತ್ತನ್ನು ಉಳಿಸಿ ಬೆಳಿಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್ ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ನಮಗೆ ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ನಾನು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ ? ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರ ದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ ಗ್ರಾಮಾಂತರಗಳಿಗೂ ತಾಲ್ಲೂಕು ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ತಿಳಿಯಾಗಿಸುವ, ಅಕ್ಷರ ಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ ಕನ್ನಡ ಪುಸ್ತಕ ಪ್ರಾಧಿಕಾರ ಎಂಬ ಮಾತಿಗೆ ಬೆಲೆ ಬರುತ್ತದೆ, ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು.

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು. ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳು ಮತ್ತು ಸಂಕಟಗಳು ಉಂಟು. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ

ಕಾಲವೂ ಆಗಿದೆ. ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ. ಅನೇಕ ತಳವರ್ಗದ ಜನಸ್ಥಾನಗಳು ಮೊದಲಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಆ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ, ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದವು. ೧೮೨೦ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ ಜ್ಞಾನ ಸಂಪತ್ತನ್ನು – ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೂ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ಈ ಮಾಲೆಗಳಲ್ಲಿ ಆಕರ ಗ್ರಂಥಮಾಲೆಯೂ ಒಂದು. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಆಕರ ಗ್ರಂಥಮಾಲೆಯ ಅಡಿಯಲ್ಲಿ ಪ್ರಕಟಿಸುತ್ತಿರುವ ಡಾ. ದೇವರಕೊಂಡಾರೆಡ್ಡಿ ಅವರ ಲಿಪಿಯ ಹುಟ್ಟು ಮತ್ತು ಬೆಳವಣಿಗೆ ಕನ್ನಡದ ವಿದ್ವದ್ ಸಂದರ್ಭದಲ್ಲಿ ಒಂಮ ಮುಖ್ಯ ಆಕರಕೃತಿಯಾಗಿದೆ. ಲಿಪಿಯ ಹುಟ್ಟು ಮತ್ತು ಬೆಳವಣಿಗೆಯ ಬಗೆಗಿನ ಇತಿಹಾಸವ: ಒಂದು ರೋಚಕವಾದ ಅಧ್ಯಯನ. ಬರೆಹವು ಸಂಸ್ಕೃತಿಯಲ್ಲಿ ಮೈದಾಳಿದ ಬಗೆಯು ಮಾನವೇತಿಹಾಸದ ಒಂದು ಭಾಗವೇ ಆಗಿದೆ. ಸಂಸ್ಕೃತಿಯ ಅಧ್ಯಯನದಲ್ಲಿ ಬರೆಹದಿಂದ ದೊರಕಿರುವ ನೆರವು ಕಡಿಮೆಯೇನಲ್ಲ, ಕನ್ನಡ ಲಿಪಿಯ ಹುಟ್ಟು ಮತ್ತು ಬೆಳವಣಿಗೆಯ ಬಗೆಗೆ ಬಹು ಹಿಂದೆ ಪುಸ್ತಕವೊಂದು ಪ್ರಕಟವಾಗಿತ್ತು. ಆದರೆ, ಜಗತ್ತಿನಾದ್ಯಂತ ಇರುವ ಲಿಪಿಯ ಬಗೆಗೆ ಯಾವ ಮಾಹಿತಿಯಾಗಲಿ, ವಿವರವಾಗಲಿ ಕನ್ನಡದ ಸಂದರ್ಭದಲ್ಲಿ ಈವರೆಗೂ ಇರಲಿಲ್ಲ, ಆ ಕೊರತೆಯನ್ನು ಡಾ. ದೇವರಕೊಂಡಾರೆಡ್ಡಿಯವರು ನೀಗಿಸುತ್ತಿದ್ದಾರೆ.

ಕನ್ನಡವು ತನ್ನನ್ನು ತಾನು ತಿಳಿದುಕೊಳ್ಳಬೇಕಾದರೆ ವೈಶ್ವಿಕ ಜಗತ್ತಿನ ವಿದ್ಯಮಾನಗಳು ಕನ್ನಡ ಸಂಸ್ಕೃತಿಯ ಜತೆ ಸಂಲಗ್ನಗೊಳ್ಳುವ ಅಗತ್ಯವಿದೆ. ಇದು ಇಂದು ತುರ್ತಾಗಿ ಆಗಬೇಕಾಗಿದೆ.

ಡಾ. ದೇವರಕೊಂಡಾರೆಡ್ಡಿ ಅವರು ಲಿಪಿಯ ಹುಟ್ಟು ಮತ್ತು ಬೆಳವಣಿಗೆಯ ಬಗೆಗೆ ಆಳವಾದ ಸಂಶೋಧನೆ ಮಾಡಿದ್ದಾರೆ. ಅವರು ಹತ್ತಾರು ಮೂಲ ಗ್ರಂಥಗಳನ್ನು ಪರಿಶೀಲಿಸಿದ್ದಾರೆ; ಅಮೂಲ್ಯವಾದ ಸಾಮಗ್ರಿಗಳನ್ನು ಸಂಗ್ರಹಿಸಿದ್ದಾರೆ. ತಾವು ಸಂಪಾದಿಸಿದ ಬರೆಹದ ಜ್ಞಾನವನ್ನು ಅತ್ಯಂತ ಉಚಿತ ರೀತಿಯಲ್ಲಿ ಆಯಾ ಅಧ್ಯಾಯಗಳಲ್ಲಿ ಅಡಕಗೊಳಿಸಿದ್ದಾರೆ. ಪ್ರತಿಯೊಂದು ಅಧ್ಯಾಯಕ್ಕೂ ಅವರು ನೀಡಿರುವ ಲಿಪಿ ನಕ್ಷೆಗಳು, ಜೋಡಿಸಿರುವ ವಿವರಗಳು, ಅಪುರೂಪದ ಸಂದರ್ಭವಾಕ್ಯಗಳು ಒಂದಕ್ಕೊಂದಕ್ಕೆ ಪೂರಕವಾಗಿವೆ. ಇದು ಕನ್ನಡಕ್ಕೆ ಲಿಪಿಯ ಕುರಿತ ಮೊತ್ತಮೊದಲ ಅಧಿಕೃತ ಗ್ರಂಥವಾಗಿದೆ. ಇಂಥ ಮಹತ್ವದ ಪುಸ್ತಕವನ್ನು ಸಿದ್ಧಪಡಿಸಿ ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಲು ಒಪ್ಪಿಗೆ ನೀಡಿರುವುದಕ್ಕೆ ವಿದ್ವಾಂಸಮಿತ್ರರಾದ ಲೇಖಕರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಪುಸ್ತಕದ ಪ್ರಕಟಣೆಯಲ್ಲಿ ಪ್ರಾಧಿಕಾರದ ಸದಸ್ಯಮಿತ್ರರು ನನ್ನೊಡನೆ ಯಾವೊತ್ತೂ ನಿಂತಿದ್ದಾರೆ. ಮುದ್ರಕರಿಗೆ, ಮುಖಪುಟ ವಿನ್ಯಾಸಕರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

**

ಎರಡು ಮಾತು

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಂಶೋಧನ ವಿಭಾಗದ ಭಾಗವಾಗಿ ನಡೆಸುತ್ತಿದ್ದ ಶಾಸನಶಾಸ್ತ್ರ ತರಗತಿಗಳಿಗೆ ನಾನು ೧೯೭೭ ರಿಂದ ೧೯೯೫ರ ವರೆಗೆ ಲಿಪಿಶಾಸ್ತ್ರ ಕಲಿಸುವ ಅಧ್ಯಾಪಕನಾಗಿ ಕೆಲಸ ಮಾಡಿದೆ. ಈ ಅವಧಿಯಲ್ಲಿ ಕನ್ನಡದಲ್ಲಿ ಲಿಪಿಗಳ ಮೇಲೆ ಬಂದಿದ್ದ ಪುಸ್ತಕಗಳು ತೀರಾ ಕಡಿಮೆಯಿದ್ದವು. ಆ ಪುಸ್ತಕಗಳು ನನ್ನ ಜ್ಞಾನ ದಾಹವನ್ನಾಗಲೀ, ವಿದ್ಯಾರ್ಥಿಗಳ ಜ್ಞಾನ ದಾಹವನ್ನಾಗಲೀ,vi ವಿದ್ಯಾರ್ಥಿಗಳ ಜ್ಞಾನದಾಹವನ್ನಾಗಲೀ ತಣಿಸಲು ಸಾಕಾಗುತ್ತಿರಲಿಲ್ಲ, ಶಾಸನಶಾಸ್ತ್ರ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾ ನಾನೂ ಎಷ್ಟೋ ವಿಷಯಗಳನ್ನು ಕಲಿತೆ. ಆ ಕಲಿಕೆಯೇ ಈ ಪುಸ್ತಕ ರಚನೆಗೆ ಪ್ರೇರಣೆಯನ್ನೊದಗಿಸಿತು.

ಈ ಪುಸ್ತಕವನ್ನು ರಚಿಸಲು ಸುಮಾರು ಮೂರು ವರ್ಷಗಳಿಂದ ವಿಷಯ ಸಂಗ್ರಹಣೆ ಮತ್ತು ಬರೆವಣಿಗೆಯನ್ನು ನಡೆಸಿ ಈ ರೂಪಕ್ಕೆ ತಂದಿದ್ದೇನೆ. ಈ ಪುಸ್ತಕದಲ್ಲಿ ಆಗ್ನೇಯ ಏಷಿಯಾದ ಲಿಪಿಗಳ ಬಗ್ಗೆ ಬರೆಯುವಾಗ ಡೇವಿಡ್ ಡಿರಿಂಜರ್ ಅವರ ದಿ ಆಲ್ಫಬೆಟ್ ಪುಸ್ತಕವನ್ನು ಹೆಚ್ಚಿಗೆ ಅವಲಂಬಿಸಿದ್ದೇನೆ. ಉಳಿದಂತೆ ಲಿಪಿಯ ಮೇಲೆ ಬಂದಿದ್ದ ಅನೇಕ ಪುಸ್ತಕಗಳನ್ನು ಓದಿ ಅವುಗಳಿಂದ ವಿಷಯಗಳನ್ನು ಸಂಗ್ರಹಿಸಿದ್ದೇನೆ. ಹಿಂದಿನವರ ಕೆಲವು ತೀರ್ಮಾನಗಳನ್ನು ವಿಶ್ಲೇಷಿಸಿದ್ದೇನೆ, ಕೆಲವೆಡೆ ನನ್ನದೇ ಆದ ತೀರ್ಮಾನಗಳಿಗೆ ಬಂದಿದ್ದೇನೆ. ಕನ್ನಡ ಲಿಪಿಯ ಬಗೆಗೆ ಹೆಚ್ಚಿನ ವಿಷಯ ಸಂಗ್ರಹಿಸಿ, ಇದುವರೆವಿಗೆ ಯಾರೂ ನೀಡದಷ್ಟು ವಿವರಗಳನ್ನು ನೀಡಿದ್ದೇನೆ. ಪ್ರತಿ ೫೦ ವರ್ಷಗಳಿಗೊಮ್ಮೆ ಕನ್ನಡ ಲಿಪಿ ಬದಲಾಗಿರುವುದನ್ನು ವಿವರಿಸಿ ಅದಕ್ಕೆ ಪೂರಕವಾಗಿ ಲಿಪಿಪಟ್ಟಿಕೆಗಳನ್ನು ನೀಡಿದ್ದೇನೆ. ಇಲ್ಲಿಯ ವರೆಗೆ ಲಿಪಿಯ ಬಗೆಗೆ ಬಂದಿರುವ ಪುಸ್ತಕಗಳಲ್ಲಿ ಕನ್ನಡ ಲಿಪಿಯ ಬೆಳವಣಿಗೆಯನ್ನು ವಿಜಯನಗರ ಕಾಲಕ್ಕೆ ಸೀಮಿತಗೊಳಿಸುತ್ತಿದ್ದರು. ನಾನು ಈ ಕೊರತೆಯನ್ನು ಹೋಗಲಾಡಿಸಿ ಮುದ್ರಣ ಕಾಲದವರೆಗೆ ಲಿಪಿ ಹೇಗೆ ಬದಲಾಗುತ್ತಾ, ಏಳು ಬೀಳುಗಳನ್ನು ಅನುಭವಿಸುತ್ತಾ ಬಂದ ವಿವರಗಳನ್ನು ನೀಡಿದ್ದೇನೆ. ವರ್ಣಮಾಲೆಯಲ್ಲದೆ ನಾವು ದಿನನಿತ್ಯ ಕಾಣುವ ಬಣ್ಣ, ದೀಪ ಮೊದಲಾದವು ಹೇಗೆ ಭಾಷೆ ಹಾಗೂ ಲಿಪಿಯನ್ನು ಧ್ವನಿಸುತ್ತವೆ ಎಂಬ ಬಗೆಗೆ ವಿವರಗಳನ್ನು ನೀಡಿದ್ದೇನೆ. ರಾಜಕೀಯವಾಗಿ, ಧಾರ್ಮಿಕವಾಗಿ ಲಿಪಿ ವಹಿಸಿದ ಪಾತ್ರಗಳ ಬಗೆಗೆ ಪ್ರತ್ಯೇಕ ಅಧ್ಯಾಯಗಳಲ್ಲಿ ವಿವರಗಳನ್ನು ಮೊದಲ ಬಾರಿಗೆ ನೀಡಿದ್ದೇನೆ.

ಅಂಕಲಿಪಿಯ ಮಟ್ಟಿಗೆ ಹೇಳುವುದಾದಲ್ಲಿ ಅನೇಕ ದೇಶಗಳಲ್ಲಿ ಬಳಕೆಯಿರುವ ಅಂಕೆಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಭಾರತದಲ್ಲಿ ಬಳಕೆಯಲ್ಲಿದ್ದ ವಿವಿಧ ಬಗೆಯ ಅಂಕಲಿಪಿಗಳ ವಿವರಗಳನ್ನು ನೀಡಲಾಗಿದೆ. ಈ ಪುಸ್ತಕಕ್ಕೆ ಬೇಕಾಗಿದ್ದ ಅನೇಕ ಲಿಪಿಪಟ್ಟಿಕೆಗಳನ್ನು ನಾನೇ ರಚಿಸಿದ್ದೇನೆ. ಕೆಲವನ್ನು ಬೇರೆ ಬೇರೆ ಗ್ರಂಥಗಳಿಂದ ಪಡೆದು ಅಲ್ಲಿ ಅವುಗಳ ಆಕರವನ್ನು ಸೂಚಿಸಿದ್ದೇನೆ. ಕೆಲವಕ್ಕೆ ಕಂಪ್ಯೂಟರ್ ಸಹಾಯ ಅಗಾಧ. ಶಾಸನಗಳ ರೇಖಾಚಿತ್ರ ತೆಗೆಯುವಲ್ಲಿ ಹಾಗೂ

ಪುಸ್ತಕವನ್ನು ಒಂದು ರೂಪಕ್ಕೆ ತರುವಲ್ಲಿ ಡಾ। ಪಿ.ವಿ. ಕೃಷ್ಣಮೂರ್ತಿಯವರ ನೆರವು ಪಡಿಸಿದ್ದೇನೆ. ಕೃತಿ ರಚನೆಯಲ್ಲಿ ಸಹಾಯ ಮಾಡಿದ ಪ್ರೊ। ಲಕ್ಷ್ಮಣ್ ತೆಲಗಾವಿ, ಡಾ। ಕೆ. ವಸಂತಲಕ್ಷ್ಮಿ ಶ್ರೀಮತಿ ಕು.ಸ. ಅಪರ್ಣಾ, ಎಚ್. ಜಯಮ್ಮ ಡಾ. ಕೆಳದಿ ಜಿ. ವೆಂಕಟೇಶ್, ಡಾ. ಶಿವಾನಂದ ವಿರಕ್ತಮಠ ಮತ್ತು ನನ್ನ ಮಗಳು ಶ್ರೀಮತಿ ಸ್ಮಿತಾ ಇವರನ್ನೆಲ್ಲ ಕೃತಜ್ಞತೆಯಿಂದ ನೆನೆಯುತ್ತೇನೆ. ಪುಸ್ತಕದ ರಚನೆಯಲ್ಲಿ ಹಲವು ಬಗೆಯ ಸಲಹೆ ಮತ್ತು ಸಹಕಾರ ನೀಡಿದ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ। ಎಂ.ಎಂ. ಕಲಬುರ್ಗಿ, ಅನಂತಪುರದ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ। ಆರ್. ಶೇಷಶಾಸ್ತ್ರಿ ಹಾಗೂ ಸನ್ಮಿತ್ರರಾದ ಪ್ರೊ। ಮಲ್ಲೇಪುರಂ ಜಿ. ವೆಂಕಟೇಶ್ ಇವರೆಲ್ಲರಿಗೂ ನನ್ನ ಗೌರವಪೂರ್ವಕ ನಮನಗಳು. ಈ ಪುಸ್ತಕವನ್ನು ರಚಿಸುವಾಗ ಬೆಂಗಳೂರಿನ ಮಿಥಿಕ್ ಸೊಸೈಟಿಯ ಗ್ರಂಥಭಂಡಾರ, ಕನ್ನಡ ಸಾಹಿತ್ಯ ಪರಿಷತ್ತಿನ ಸಂಶೋಧನ ವಿಭಾಗದ ಗ್ರಂಥಭಂಡಾರ, ಭಾರತೀಯ ಪುರಾತತ್ವ ಸರ್ವೇಕ್ಷಣಾಲಯದ ಗ್ರಂಥಭಂಡಾರ, ಬೆಂಗಳೂರು ಹಾಗೂ ಕನ್ನಡ ವಿಶ್ವವಿದ್ಯಾಲಯದ ಗ್ರಂಥಭಂಡಾರಗಳ ನೆರವನ್ನು ಪಡೆದಿದ್ದೇನೆ. ಈ ಗ್ರಂಥಾಲಯಗಳ ಸಿಬ್ಬಂದಿ ನೀಡಿದ ನೆರವಿಗೆ ನನ್ನ ಕೃತಜ್ಞತೆಗಳು. ಈ ಗ್ರಂಥದ ಕೊನೆಯಲ್ಲಿ ಪರಾಮರ್ಶನ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ.

ಈ ಪುಸ್ತಕವನ್ನು ಲಿಪಿಶಾಸ್ತ್ರ ಓದುವ ಆಸಕ್ತರಿಗಾಗಿ ಬರೆಯಲಾಗಿದೆ. ಭಾರತದಲ್ಲಿ ಭಾಷೆ ಮತ್ತು ಲಿಪಿಗಳ ವ್ಯಾಮೋಹ ಹೆಚ್ಚು. ಆದರೆ, ಆ ಲಿಪಿಗಳೆಲ್ಲಾ ಒಂದೇ ತಾಯಿಯ ಮೂಲದವು ಎಂಬುದನ್ನು ನಾವು ಮರೆತು ವೈಮನಸ್ಯರಾಗಿದ್ದೇವೆ. ಅಂಥವರಿಗೆ ಪುಸ್ತಕ ಸ್ವಲ್ಪ ಮಟ್ಟಿಗಾದರೂ ತಿಳುವಳಿಕೆ ನೀಡಬಲ್ಲದೆಂಬ ವಿಶ್ವಾಸ ನನ್ನದು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ। ಮಲ್ಲೇಪುರಂ ಜಿ.ವೆಂಕಟೇಶ್ ಅವರು ಈ ಪುಸ್ತಕವನ್ನು ವಿಶೇಷ ಆಸ್ಥೆ ವಹಿಸಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಿಸಿರುತ್ತಾರೆ. ಇವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಪುಸ್ತಕ ಪ್ರಾಧಿಕಾರದ ಸದಸ್ಯರೆಲ್ಲರು ಈ ಪುಸ್ತಕ ಹೊರ ಬರುವಲ್ಲಿ ಕಾರಣರಾಗಿದ್ದಾರೆ. ಅವರೆಲ್ಲರಿಗೂ ನನ್ನ ಕೃಜ್ಞತೆಗಳು ಹಸ್ತಪ್ರತಿಯನ್ನು ಆಮೂಲಾಗ್ರ ಪರಿಶೀಲಿಸಿ ಸಲಹೆ-ಸೂಚನೆ ನೀಡಿದ ಡಾ। ಬಸವರಾಜ ಕಲ್ಗುಡಿ ಅವರಿಗೂ, ಈ ಹಸ್ತಪ್ರತಿಯನ್ನು ಕಂಪ್ಯೂಟರ್ ಬೆರಳಚ್ಚು ಮಾಡಿ ಪುಸ್ತಕರೂಪ ನೀಡಿದ ಶ್ರೀಮತಿ ಎಸ್.ವೈ. ನಿರ್ಮಲಾ ಗಣೇಶ್, ಹೆಚ್. ಉದಯ್‌ಕುಮಾರ್ ಬೆಂಗಳೂರು ಇವರಿಗೂ, ಇದನ್ನು ಸುಂದರವಾಗಿ ಮುದ್ರಿಸಿದ ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು ಇವರಿಗೂ ನನ್ನ ಕೃತಜ್ಞತೆಗಳು.

ವಿದ್ಯಾರಣ್ಯ ಆವರಣ **ದೇವರಕೊಂಡಾರೆಡ್ಡಿ**
ಏಪ್ರಿಲ್ ೧೪, ೨೦೦೨

ಎರಡು ಮಾತು

(ಎರಡನೇ ಮುದ್ರಣ)

ಶಾಸನಶಾಸ್ತ್ರ ತರಗತಿಗಳ ಪಾಠ ಮಾಡುವಾಗ ಎಷ್ಟೋ ವಿಷಯಗಳನ್ನು ನಾನು ಕಲಿಕೆಯ ಪ್ರೇರಣೆಯೇ ಲಿಪಿಯ ಹುಟ್ಟು ಮತ್ತು ಬೆಳವಣಿಗೆ ಪುಸ್ತಕ ಬರೆಯಲು ಕಾರಣವಾಯಿತು. ಕನ್ನಡದಲ್ಲಿ ಲಿಪಿಯ ಮೇಲೆ ಬಂದಿರುವ ಪುಸ್ತಕಗಳು ಕಡಿಮೆ ಎಂದು ಹೇಳಬಹುದಾಗಿದೆ. ಈ ಪುಸ್ತಕವನ್ನು ಬರೆಯುವಾಗ ಡೇವಿಡ್ ಡಿರಿಂಜರ್ ಅವರ ದಿ ಆಲ್ಫಬೆಟ್ ಪುಸ್ತಕವನ್ನು ಹೆಚ್ಚಾಗಿ ಅವಲಂಬಿಸಿದ್ದೇನೆ. ಉಳಿದಂತೆ ಲಿಪಿಯ ಮೇಲೆ ಬಂದಿದ್ದು ಪುಸ್ತಕಗಳನ್ನು ಓದಿ ಅವುಗಳನ್ನು ಸಂಗ್ರಹಿಸಿ ಹಿಂದಿನವರ ತೀರ್ಮಾನಗಳನ್ನು ವಿಶ್ಲೇಷಿಸಿದ್ದೇನೆ. ಕನ್ನಡ ಪುಸ್ತಕ ಪ್ರಾಧಿಕಾರ ಈ ಪುಸ್ತಕವನ್ನು ಮರು ಮುದ್ರಿಸಲು ಮುಂದಾಗಿರುವುದಕ್ಕೆ ಸಂತೋಷವಾಗಿದೆ. ಕನ್ನಡ ಪುಸ್ತಕ ಪ್ರಾಧಿಕಾರದ ಮಾನ್ಯ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಹಾಗೂ ಆಡಳಿತಾಧಿಕಾರಿಗಳಾದ ಅಶೋಕ ಎನ್. ಚಲವಾದಿ ಅವರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಪುಸ್ತಕವನ್ನು ೨ನೇ ಮುದ್ರಣವಾಗಿ ಮುದ್ರಿಸುತ್ತಿರುವ ಮೆ. ರಾಜಾ ಪ್ರಿಂಟರ್ಸ್, ಬೆಂಗಳೂರು ಅವರಿಗೂ ನನ್ನ ಧನ್ಯವಾದಗಳು.

ಡಾ. ದೇವರಕೊಂಡಾರೆಡ್ಡಿ

ಪರಿವಿಡಿ

ಅಕ್ಷರಸೂರ್ಯನಿಗೆ ನಮನ

ಲೇಖಕರ ಮಾತು

ಅಧ್ಯಾಯ ೧ ೧ - ೫

ಭಾಷೆ-ಲಿಪಿ-ಧ್ವನಿ ನಿರೂಪಕಗಳು -2, ಅರೆವರ್ಣ ಲಿಪಿಗಳು -
ವರ್ಣಲಿಪಿಗಳು -3, ಬರೆವಣಿಗೆಯ ರೀತಿ -4

ಅಧ್ಯಾಯ ೨ ೬ - ೩೮

ಬರೆವಣಿಗೆ -6, ಈಜಿಪ್ಟ್ -8, ಚಿತ್ರಲಿಪಿ -9, ಧಾರ್ಮಿಕಲಿಪಿ -11
ಸಾಮಾನ್ಯ ಲಿಪಿ -12, ಮೆಸಪೊಟೋಮಿಯಾದ ಮೊನಚುಲಿಪಿ -15
ಕ್ರೀಟ್ ಲಿಪಿ -22, ಹಿತ್ತೈತರಲಿಪಿ -23, ಚೈನಾಲಿಪಿ -24
ಸಿಂಧೂಲಿಪಿ -28, ಮೆಕ್ಸಿಕೋ ದೇಶದ ಮಯ ಲಿಪಿ -33
ಈಸ್ಟರ್ ದ್ವೀಪಗಳ ಲಿಪಿ -35, ಜಪಾನಿನ ಲಿಪಿ -36

ಅಧ್ಯಾಯ ೩ ೩೯ -೬೭

ವರ್ಣ ಲಿಪಿಗಳು -39, ಈಜಿಪ್ಟ್ ಮೂಲ -39, ಕ್ರೀಟರಮೂಲ -40
ಸಿನಿಯಾಟರ ಮೂಲ -41, ಉಗರಿತ್ ಮೊಳೆಲಿಪಿ ಮೂಲ -41
ಬೈಬ್ಲೊಗಳ ತೋರಿಕೆ ಲಿಪಿ -42, ಕನಾನೈಟ್ ಮೂಲ -43
ಉತ್ತರ ಸೆಮಿಟಿಯಾ ಮೂಲ -43, ದಕ್ಷಿಣ ಸೆಮಿಟಿಯಾ ವರ್ಣಲಿಪಿ -45
ಉತ್ತರ ಅರೇಬಿಯಾ ಶಾಸನಗಳು -45, ಇಥಿಯೋಪಿಯಾ ಲಿಪಿ -46
ಕನಾನೈಟ್ ಲಿಪಿ -47, ಹಿಬ್ರೂಲಿಪಿ -47, ಫೋನೀಷಿಯಾ ಲಿಪಿ -49
ಲಿಬಿಯಾ ಲಿಪಿ -49, ಇಬೇರಿಯ ಲಿಪಿ -49, ಅರಾಮಿಯಾ -50
ಹಿಬ್ರೂ -51, ನಬಾತಿಯಾ -51, ನೂತನ ಸೈನಾಯ್ -51
ಅರಾಬಿಯಾ -51, ಪರ್ಷಿಯಾ ಲಿಪಿ -55, ಗ್ರೀಕ್ ಲಿಪಿ -55
ಕೋಪ್ಟಿಕ್ -58, ಲತಿನ -58, ಇಂಗ್ಲೀಷ್ -61, ವರ್ಣಗಳ ಹೆಸರು -65

ಅಧ್ಯಾಯ ೪ ೬೮ - ೧೨೦

ಭಾರತದಲ್ಲಿ ಬರೆವಣಿಗೆ ಆರಂಭ -68, ಬ್ರಾಹ್ಮಿಯ ಮೂಲದ ಬಗೆಗಿನ
ವಾದಗಳು -71, ಅಶೋಕನ ಬರೆವಣಿಗೆ -76, ಅಶೋಕನ
ಬ್ರಾಹ್ಮಿ ಲಿಪಿ -83, ಖರೋಷ್ಠಿ -90, ಅಶೋಕನ ನಂತರದ
ಲಿಪಿಗಳು -95, ನಾಗರಿ - ದೇವನಾಗರಿ -101, ನಂದಿನಾಗರಿ -111
ಶಾರದಾ ಲಿಪಿ -116, ಬಂಗಾಳಿ ಲಿಪಿ -118, ಶಂಕು ಲಿಪಿ -118

ಅಧ್ಯಾಯ ೫ ೧೨೧ - ೨೩೦

ದಕ್ಷಿಣ ಭಾರತದ ಲಿಪಿಗಳು -121, ಶಾತವಾಹನ -121, ಕದಂಬ -127
ಗಂಗ -134, ಬಾದಾಮಿ ಚಲುಕ್ಯ -147, ಪಲ್ಲವ -156
ಗಂಗ - ರಾಷ್ಟ್ರಕೂಟ -162, ಕಲ್ಯಾಣ ಚಾಲುಕ್ಯ - ಹೊಯ್ಸಳ

ಸೇಊಣ -175, ವಿಜಯನಗರ -184
ವಿಜಯನಗರೋತ್ತರ -190, ತಮಿಳುನಾಡಿನ ಲಿಪಿಗಳು -198
ವಟ್ಟೆಳುತ್ತು -201, ಗ್ರಂಥ -204, ತಮಿಳು -210
ಮಲೆಯಾಳ -213, ತುಳು -214, ತಿಗಳಾರಿ -215
ಅಮರಗನ್ನಡ -216, ತೆಲುಗು -221, ಪರ್ಷಿಯಾ - ಅರಾಬಿಯಾ -
ಉರ್ದು -227, ಕಲಾತ್ಮಕ ಬರೆವಣಿಗೆ -228, ಮೋಡಿ -230

ಅಧ್ಯಾಯ ೬ ೨೩೧ - ೨೫೬
ಅಂಕೆಗಳು -231, ಚೀನಾ -235, ಮಯಾ -236, ಭಾರತ -237
ದಶಾಂಶ ಪದ್ಧತಿ -238, ಕಟಪಯಾದಿ -241, ಬಾರಖಡಿ -241
ಖರೋಷ್ಠಿ -242, ಕನ್ನಡ -244, ತಮಿಳು -253, ಭೂತಸಂಖ್ಯೆ -256
ಹಲ್‌ಗಳು -255

ಅಧ್ಯಾಯ ೭ ೨೫೭ - ೨೭೯
ಭಾರತೀಯ ಲಿಪಿಗಳ ಹರವು ·257, ಟಿಬೆಟ್ -258, ಸಿಂಹಳಿ -260
ಮಾಲ್ದೀವಿ -261, ಚಾಮ್ ಲಿಪಿ -262, ಖ್ಮೇರ್ -264, ಪ್ಯು -265
ಬರ್ಮಾ -266, ಲಾವೋ -267, ಸಯಾಮಿ -268 ಖಮ್ತಿ -269
ಜಾವಾ -270, ಸುಮಾತ್ರಾ -273, ಬತಕ -274, ಸೆಲಬ -276
ವಾಗಿ-26, ಫಿಲಿಪೀನ್ಸ್ -277, ತಗಲಾಗ್ -279

ಅಧ್ಯಾಯ ೮ ೨೮೦ - ೨೮೬
ಲಿಪಿ ಮತ್ತು ವಿದ್ಯೆ -280, ಲಿಪಿ ಮತ್ತು ಧರ್ಮ -283
ಲಿಪಿ ಮತ್ತು ರಾಜಕೀಯ -285

ಅಧ್ಯಾಯ ೯ ೨೮೭ - ೨೮೯
ಮುದ್ರಣ ಕಾಲದ ಬರೆವಣಿಗೆ -287, ಕಾಗದ ಮೇಲಿನ ಬರೆವಣಿಗೆ -288
ಬೆರಳಚ್ಚು - ಕಂಪ್ಯೂಟರ್ -289

ಅಧ್ಯಾಯ ೧೦ ೨೯೦ - ೨೯೬
ಸಂಜ್ಞಾಲಿಪಿ -290, ಬ್ರೈಲ್‌ಲಿಪಿ -290, ಮಾರ್ಸ್‌ಕೋಡ್ -291
ಧಾರ್ಮಿಕ ಚಿಹ್ನೆ -291, ಶೀಘ್ರಲಿಪಿ -292
ರಸ್ತೆಯ ಸಂಕೇತ - 292, ನಾಟ್ಯಮುದ್ರೆ -293, ಸಹಿ -293

ಅನುಬಂಧಗಳು
ಕಾಗುಣಿತಗಳು ೨೯೭ - ೨೯೯
ಶಾಸನ ಪಾಠಗಳು ೩೦೦ - ೩೨೮
ಗ್ರಂಥ ಸೂಚಿ ೩೨೯ - ೩೩೪
ಪದಸೂಚಿ

ನಿಯತಕಾಲಿಕೆಗಳು ಮತ್ತು ಸಾಕ್ಷೇಪಸೂಚಿ

ಇತಿಹಾಸ ದರ್ಶನ (ಇತಿ.ದ)
ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ (ಕಸಾಪ)
ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ (ಆಂಧ್ರ ಸಾ.ಪ)
Journal of Royal Asiatic Society (JRAS)
Indian Antiquery (IA)
Bhandarkar Oriental Reseach Institute Vol.LXXXI (BORI)
Travancore Archaeological Series Vol.I & XIV (TAS.I)
Quarterly Journal of Mythic Society Vols.(QJMS)
Archaeological Report of Mysore (MAR)

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ (ಕವಿಶಾ)
Epigraphia Indica (EI)
Epigraphia Carnatica (EC)
South Indian Inscriptions (SII)
Karnatak Inscriptions (KI)
Inscriptions of Western Gangas(IWG)

* * *

ಅಧ್ಯಾಯ - ೧

ಭಾಷೆ

ಪ್ರಪಂಚದಲ್ಲಿ ಭಾಷೆ ಗೊತ್ತಿರದ ಜನಾಂಗಗಳು ಯಾವುವೂ ಇಲ್ಲ, ಒಂದಲ್ಲಾ ಒಂದು ಭಾಷೆಯನ್ನು ಅವರು ಮಾತನಾಡುತ್ತಾರೆ. ಭಾಷೆಯ ಬಗ್ಗೆ ಅನೇಕ ಭಾಷಾವಿಜ್ಞಾನಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಲಿಪಿಗಿಂತ ಮೊದಲು ಭಾಷೆ. ಭಾಷೆಯನ್ನು ಶ್ರಮಸಾಧ್ಯದಿಂದ ಕಲಿಯಬೇಕಾಗುತ್ತದೆ. ಇದು ಸಾಧನೆಯೇ ಸರಿ. ಮಗು ತೊದಲು ಮಾತಿನಿಂದ ಪದಗಳ ಅನುಕರಣೆ ಮಾಡಿ ನಂತರ ಕಲಿಯುತ್ತದೆ. ಪ್ರಾಣಿಗಳು ಧ್ವನಿಸಂಕೇತಗಳ ಮೂಲಕ ಮಾತನಾಡಬಲ್ಲವು.

ಸ್ಟೂರ್‌ಟೆವಂಟ್ ಎಂಬುವವನು ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿಸಂಕೇತಗಳ ವ್ಯವಸ್ಥೆಯೇ ಭಾಷೆಯೆಂದಿರುತ್ತಾನೆ. ಹೀಗೆ ಅನೇಕ ವಿಜ್ಞಾನಿಗಳು ತಮಗನ್ನಿಸಿದ ರೀತಿಯಲ್ಲಿ ಭಾಷೆಯನ್ನು ಕುರಿತು ತರ್ಕಗಳನ್ನು ಮಂಡಿಸಿರುತ್ತಾರೆ. ಭಾಷೆಯ ಉಗಮದ ಬಗ್ಗೆ ಬಂದಿರುವ ಚರ್ಚೆಗಳನ್ನು ಅನುಕರಣವಾದ, ಉದ್ಗಾರವಾದ ಮತ್ತು ಅನುರಣನವಾದವೆಂದು ವಿಂಗಡಿಸುತ್ತಾರಾದರೂ ಯಾವುವೂ ಸ್ಪಷ್ಟವಾಗಿ ವಿವರಿಸಲು ಸಾಧ್ಯವಾಗಿಲ್ಲ. ಕೇಶಿರಾಜನ ಪ್ರಕಾರ ಶಬ್ದ ಜನಿಸುವುದು ಮನೋವೃತ್ತಿ ನಿಮಿತ್ತವಾಗಿ. 'ತನುವಾದ್ಯಂ ನಾಲಿಗೆ ವಾದನದಂಡಂ ಕರ್ತೃವಾತ್ಮನಾತನ ಮನೋವೃತ್ತಿ ನಿಮಿತ್ತವಾಗಿ ಶಬ್ದಂ ಜನಿಯಿಸಿಗುಂ ಧವಳವರ್ಣಾಮಕ್ಷರ ರೂಪಂ' ಎಂದಿದ್ದಾನೆ (ಶಬ್ದಮಣಿದರ್ಪಣಂ - ಅಧ್ಯಾಯ.೧, ಸೂತ್ರ.೩೪).

ಲಿಪಿ

ಭಾಷೆಯು ನಾವು ಆಡುವ ಮಾತಾದರೆ, ಅದನ್ನು ಹಿಡಿದಿಡುವ ಸಾಧನವೇ ಲಿಪಿ (ಭಾಷಾವಿಜ್ಞಾನದ ಮೂಲತತ್ವಗಳು ಪುಟ.೪). ಹೀಗಾಗಿ ಮಾನವ ಗುಂಪು ಗುಂಪುಗಳಾಗಿ ವಾಸ ಮಾಡುವಾಗ ಕಲಿತದ್ದು ಭಾಷೆ. ಇದು ಗುಂಪು ಗುಂಪಿಗೆ ಬೇರೆ ಇರಬಹುದು. ಭಾಷೆಯ ನಂತರ ಬಂದ ಬರಹವು ಮನುಷ್ಯನ ನಾಗರೀಕತೆಯ ಮಾನದಂಡವಾಗಿದೆ. ಯಾವುದೇ ಭಾಷೆಯನ್ನು ಯಾವುದೇ ಲಿಪಿಯಲ್ಲಿ ಬರೆಯಬಹುದಾದರೂ ಇದಕ್ಕೂ ಒಂದು [illegible] ಇದೆ. ಎಷ್ಟೋ ಲಿಪಿಗಳು ತಮ್ಮ ಮೂಲದ ಉಚ್ಚಾರವನ್ನು ಕಳೆದುಕೊಂಡು ಗೊಂದಲದ ಲಿಪಿಗಳಾಗಿರುವುದ ಇವುಂಟು. ಹರಿಹರ ಮತ್ತು ಇವನ ಕಾಲದಲ್ಲಿದ್ದ ಕೇಶಿರಾಜ ಕನ್ನಡದಲ್ಲಿ ಕ್ಷಳ, ಕುಳ ಮತ್ತು ಟಿ ಗಳ ಬಗ್ಗೆ ಇಂತಹ ಗೊಂದಲವಿದ್ದ ಬಗ್ಗೆ ನಮ್ಮ ಗಮನ ಸೆಳೆದಿದ್ದಾರೆ. ಹರಿಹರನ ಪದ್ಯ 'ನೋಡುವೊಡೊಂದಕ್ಕರಮದು ಉಚ್ಛರಿಸಲರಿದು ....' ಎಂದು ಹೇಳಿ ತನ್ನ ಕಾಲದಲ್ಲಿದ್ದ 'ಬಿ'

'ಳ' 'ಲ' ಗಳ ಗೊಂದಲವನ್ನು ತೋರಿಸಿದ್ದಾನೆ. ಹಾಗೆಯೇ ಕೇಶಿರಾಜ 'ಱ' ಕಾರವನ್ನು ಹೇಗೆ ಬಳಸಬೇಕೆಂಬ ಬಗ್ಗೆ ಉಪದೇಶಿಸಿದ್ದಾನೆ. ಇಲ್ಲೆಲ್ಲಾ ಕಾಣುವುದು ಭಾಷೆ ಮತ್ತು ಅದನ್ನು ಹಿಡಿದಿಡಲು ಬಳಸುವ ಬರಹದ ಮಾಧ್ಯಮದ ಬಗ್ಗೆ ಇದ್ದ ಗೊಂದಲ 'ಱ'ದ ಗೊಂದಲ ಇಂದಿಗೂ ತಮಿಳಿನಲ್ಲಿದೆ. ಕೆಲವೆಡೆ ಇದನ್ನು 'ಗ' ಎಂದರೆ ಕೆಲವೆಡೆ ಇದನ್ನು 'ಜ' ಕಾರವಾಗಿ ಕೆಲವೆಡೆ 'ಳ' ಕಾರವಾಗಿ ಬಳಸುತ್ತಾರೆ. ಇಂದಿಗೂ ಸಂಸ್ಕೃತ ಭಾಷೆಯ ಬ್ರಹ್ಮ ಎಂಬುದು ಬರೆಯುವುದೇ ಬೇರೆ ಉಚ್ಚಾರವೇ ಬೇರೆ. ಇಂತಹ ಗೊಂದಲಗಳು ಬರೆವಣಿಗೆಯಲ್ಲಿ ಹಾಗೂ ಅದನ್ನು ಉಚ್ಚಾರ ಮಾಡುವುದರಲ್ಲಿ ಕಾಣಿಸಿಕೊಂಡಿವೆ. ಕೇಶಿರಾಜನು ಅಕ್ಷರಗಳಲ್ಲಿ ಎರಡು ರೀತಿಯೆಂದು ಗುರುತಿಸುತ್ತಾನೆ. 'ವ್ಯವಹರಿಪುವೆರಡು ರೂಪಿಂದವಕ್ಕರಂ ಶ್ರಾವಣಂ ಸ್ವನ್ಯಕಾಕಾರಂ ವಿವಿಧಾಕಾರಂ ಲಿಪಿಬೇಧವೃತ್ತಿಯಿಂ ಚಾಕ್ಷುಷಂ ಪುರಾತನಮತದಿಂ' (ಶಬ್ದಮಣಿದರ್ಪಣಂ – ಅಧ್ಯಾಯ.೧, ಸೂತ್ರ.೩).

ಪ್ರಪಂಚದಾದ್ಯಂತ ಇಂದು ವರ್ಣಲಿಪಿ ಬಳಕೆಯಲ್ಲಿದ್ದರೂ ಈ ವರ್ಣಲಿಪಿಯು ಬಳಕೆಗೆ ಬರುವುದಕ್ಕೆ ಮೊದಲು ಬರೆವಣಿಗೆಯಲ್ಲಿ ಅನೇಕ ಪ್ರಯೋಗಗಳಾಗಿವೆ. ಮಾನವ ಮೊದಲು ಬರೆದ ಚಿತ್ರಲಿಪಿಯಿಂದ ಆರಂಭವಾಗಿ, ಭಾವ ಲಿಪಿ, ಮಧ್ಯಮ ಲಿಪಿ (Transitional script), ಧ್ವನಿರೂಪಕ ಲಿಪಿ, ಅರೆವರ್ಣಲಿಪಿ ಹಾಗೂ ಈಗಿನ ವರ್ಣಲಿಪಿಯ ರೂಪಕ್ಕೆ ಬಂದಿವೆ. ಈ ಬದಲಾವಣೆಯ ಅವಧಿ ಸಾವಿರಾರು ವರ್ಷಗಳು. ಲ್ಯಾಟಿನ್ (ಲತಿನ) ಲಿಪಿಯಲ್ಲಿ ವ್ಯಂಜನಗಳಿಗೆ ಮತ್ತು ಸ್ವರಗಳಿಗೆ ಪ್ರತ್ಯೇಕ ಚಿಹ್ನೆಗಳಿದ್ದು ಪೂರ್ಣರೂಪದ ವ್ಯಂಜನಗಳನ್ನು ಹೊಂದಿದೆ. ಹೀಗಾಗಿ ಇದರ ಬರೆವಣಿಗೆಗೆ ಸುಲಭ. ಯಾವುದೇ ಭಾಷೆಯನ್ನು ಈ ಲಿಪಿಯಲ್ಲಿ ಬರೆಯಬಹುದು. ಹಾಗೆಯೇ ಭಾರತದ ವರ್ಣಮಾಲೆಯಲ್ಲಿ ವ್ಯಂಜನಗಳು ಸ್ವರಸಮೇತವಾಗಿದ್ದರೂ ಸ್ವರಗಳನ್ನು ವ್ಯಂಜನಗಳಿಂದ ಬೇರ್ಪಡಿಸಬಹುದಾಗಿದ್ದು ಪ್ರಪಂಚದ ಯಾವುದೇ ಭಾಷೆಯನ್ನು ಇದರಿಂದ ಬರೆಯಬಹುದಾಗಿದೆ.

ಪ್ರಪಂಚದಲ್ಲಿ ದೊರೆತಿರುವ ಲಿಪಿಗಳಲ್ಲಿ ಪ್ರಾಚೀನವಾದುವೆಂದರೆ ಸುಮೇರಿಯರನ್ನು ಬಳಸಿದ ಲಿಪಿ. ಈ ಲಿಪಿಯು ಮೊಳೆಯಾಕಾರದಲ್ಲಿದ್ದು, ಕ್ರಿ.ಪೂ.೪೦೦೦ ವರ್ಷಗಳ ಹಿಂದಿನ ಇವರ ಬರೆವಣಿಗೆಯ ಮುದ್ರಿಕೆಗಳು ದೊರೆಯುತ್ತವೆ. ಈ ಚಿತ್ರಗಳು ಭಾವ ಮತ್ತು ಧ್ವನಿನಿರೂಪಗಳಾಗಿ ಬದಲಾಗಿದೆ. ಕ್ರಿಪೂ.೬ನೆಯ ಶತಮಾನದ ಕಾಲಕ್ಕೆ ಇದು ವರ್ಣಲಿಪಿಯಾಗಿ ಪರಿವರ್ತಿತವಾಯಿತು. ಈ ಲಿಪಿಯನ್ನು ಪರ್ಷಿಯದವರು, ಅಸ್ಸೀರಿಯರು, ಬ್ಯಾಬಿಲೋನಿಯರು, ಎಲಮೈಟ್, ಕಸ್ಸೈಟ್, ಹಿಟ್ಟೈಟ್, ಮಿಟಾನಿ, ಹುರ್ರಿಯನ್ ಉರರ್ತು ಮುಂತಾದ ಜನರು ಬಳಸಿರುತ್ತಾರೆ. ಹಮ್ಮುರಬಿಯು ತನ್ನ ಆಜ್ಞೆಗಳನ್ನು ಈ ಲಿಪಿಯಲ್ಲಿ ಬರೆಸಿದ್ದಾನೆ. ಈಜಿಪ್ಟಿನಲ್ಲಿ ಇದೇ ಕಾಲಕ್ಕೆ ಚಿತ್ರಲಿಪಿ, ಇದರ ನಂತರ ಸಿಂಧೂ, ಚೀನಾ ಮುಂತಾದ ದೇಶಗಳಲ್ಲಿ ಭಾವಲಿಪಿಗಳಂತಹ ಲಿಪಿಗಳು ಕಾಣಿಸಿಕೊಂಡಿವೆ. ಚೀನಾದ ಲಿಪಿಗಳು ಇಂದಿಗೂ ಅರೆವರ್ಣ, ಅರೆಭಾವ ಲಿಪಿಗಳಾಗಿ ಬಳಕೆಯಾಗುತ್ತಿವೆ.

ಧ್ವನಿ ನಿರೂಪಕ ಲಿಪಿಗಳು

ಸಿರಿಯಾದ ಬಿಬ್ಲೋಸ್ ಎಂಬಲ್ಲಿ ದೊರೆತ ಬೈಬ್ಲೋ ಚಿತ್ರಲಿಪಿಯು ಅರೆವರ್ಣ ಲಿಪಿಯಂತಿದ್ದು ಧ್ವನಿನಿರೂಪದ ಚಿಹ್ನೆಯನ್ನು ಹೊಂದಿದೆ. ಇದರ ಕೆಲವು ಚಿಹ್ನೆಗಳು ಈಜಿಪ್ಟ್ ಚಿತ್ರಲಿಪಿಯಂತಿದ್ದರೆ ಕೆಲವು ಜಾಮಿತಿ ರೇಖೆಗಳನ್ನು ಹೊಂದಿವೆ.

ಅರೆವರ್ಣ ಲಿಪಿಗಳು

ಮೊಳೆಯಾಕಾರದ ಲಿಪಿಯು ಈ ವರ್ಗಕ್ಕೆ ಸೇರುತ್ತದೆ. ಇದರೊಂದಿಗೆ ಇಥಿಯೊಪಿಯಾದ ಮೆರೋಇಟಕ್ ಲಿಪಿಯೂ ಸೇರುತ್ತದೆ. ಮೊಳೆಯಾಕಾರದ ಲಿಪಿಯು ಕ್ರಿ.ಪೂ.೬ನೆಯ ಶತಮಾನದಲ್ಲಿ ಈ ಅರೆವರ್ಣ ಲಿಪಿಯಾಗಿ ರೂಪುಗೊಂಡಿತು. ಈ ಲಿಪಿಯು ೪೫ ಸಂಕೇತಗಳಿಂದ ಕೂಡಿತ್ತು. ಈ ಲಿಪಿಯ ಸ್ಥಾನವನ್ನು ಮುಂದೆ ಅರಾಮಿಯ ಮತ್ತು ಪಹ್ಲವೀ ಲಿಪಿಗಳು ಸ್ಥಳಾಂತರಿಸಿದವು. ಮೆರೋಇಟಿಕ್ ಲಿಪಿಯು ಧ್ವನಿನಿರೂಪಕ ಹಾಗೂ ವರ್ಣಲಿಪಿ ಈ ಎರಡೂ ಲಕ್ಷಣಗಳನ್ನು ಹೊಂದಿತ್ತು.

ವರ್ಣಲಿಪಿಗಳು

ಈಗ ಚೀನಾ ಮತ್ತದರ ಜನ್ಯ ಲಿಪಿಗಳನ್ನು ಬಿಟ್ಟರೆ ಬಳಕೆಯಲ್ಲಿರುವ ಎಲ್ಲಾ ಲಿಪಿಗಳೂ ವರ್ಣಲಿಪಿಗಳಾಗಿವೆ. ಇವುಗಳಲ್ಲಿ ಸೆಮೆಟಿಯಾ ಮೂಲದ ಲಿಪಿಗಳಿಂದ ಗ್ರೀಕ್ ಮತ್ತು ಅರಾಮಿಯಾ ಲಿಪಿಗಳು ಉದಿಸಿ, ಅವುಗಳಿಂದ ಯೂರೋಪಿನ ಲಿಪಿಗಳು ಹಾಗೂ ಅರಬ್ಬೀ ಮೂಲದ ಲಿಪಿಗಳು ಉದಿಸಿವೆ. ಹಾಗೆಯೇ ಭಾರತ ಮೂಲದ ಲಿಪಿಗಳಿಂದ ಭಾರತ, ಟಿಬೇಟ್, ಬರ್ಮಾ, ಶ್ರೀಲಂಕಾ ಮತ್ತು ಆಗ್ನೇಯ ಏಷಿಯಾ ದೇಶಗಳ ಲಿಪಿಗಳು ಉದಿಸಿವೆ. ಸೆಮಿಟಿಯಾ ವರ್ಣಲಿಪಿಯು ಕ್ರಿ.ಪೂ.೧೧ನೆಯ ಶತಮಾನದಲ್ಲಿಯೇ ಉದಿಸಿದ್ದರೂ ಅದಕ್ಕಿಂತ ಹಿಂದೆ ಈ ವರ್ಣಲಿಪಿಗಳ ಜನನಕ್ಕೆ ಕಾರಣವಾಗಿರಬಹುದಾದ ಬೈಬ್ಲೋಗಳ ಅರೆವರ್ಣಲಿಪಿಯು ಕ್ರಿ.ಪೂ.೧೬ನೆಯ ಶತಮಾನದಲ್ಲಿ ಬಳಕೆಯಲ್ಲಿತ್ತು.

ಭಾರತದಲ್ಲಿ ಅಕ್ಷರಗಳನ್ನು ಸ್ವರಸಮೇತ ಉಚ್ಚರಿಸಿದರೂ ಅವುಗಳಿಗೆ ಮತ್ತೊಂದು ಹೆಸರಿರುವುದಿಲ್ಲ, ಶಾರದಾಲಿಪಿಯಲ್ಲಿ ಮಾತ್ರ ಇಂತಹ ಹೆಸರಿದೆ. ಗ್ರೀಕ್‌ಲಿಪಿಯನ್ನು ಮೂಲವಾಗುಳ್ಳ ಯೂರೋಪಿನ ಲಿಪಿಗಳು ಈಗ ಆ ಹೆಸರುಗಳ ಮೊದಲ ಅಕ್ಷರವನ್ನು ಮಾತ್ರ ಉಚ್ಚಾರಾಂಶವನ್ನಾಗಿ ಹೊಂದಿವೆ. ಬಹುತೇಕ ಅರಾಮಿಯಾ ಮೂಲದ ಲಿಪಿಗಳಾದ ಹಿಬ್ರೂ, ಅರೇಬಿಯಾ ಮತ್ತು ಅವುಗಳಿಂದ ಜನ್ಯವಾದ ಲಿಪಿಗಳು ಇಂದಿಗೂ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಮೂಲದ ಪದಗುಚ್ಛದ ಉಚ್ಚಾರವನ್ನು ಉಳಿಸಿಕೊಂಡು ಬಂದಿವೆ. ಹಳೆಯ ಗ್ರೀಕ್ ಲಿಪಿಗೆ ಈ ಬಗೆಯ ಉಚ್ಚಾರವಿತ್ತು. ಗಣಿತ ಮತ್ತು ಭೌತಶಾಸ್ತ್ರಗಳಲ್ಲಿ ಬಳಸುವ ಆಲ್ಫಾ, ಬೀಟಾ, ಸಿಗ್ಮಾ ಮುಂತಾದ ಶಬ್ದಗಳು ಮೂಲತಃ ಗ್ರೀಕ್ ವರ್ಣಮಾಲೆಯ ಅಕ್ಷರಗಳು. ಪ್ರತಿಯೊಂದು ವರ್ಣಮಾಲೆಯ ಉಚ್ಚಾರಕ್ಕೂ ಒಂದೊಂದು ಅರ್ಥವಿತ್ತು ಸೆಮೆಟಿಯಾ ಭಾಷೆಯಲ್ಲಿ ಈ ಉಚ್ಚಾರಗಳಿಗೆ ಒಂದೊಂದು ಸಂಕೇತವಿದ್ದು ಒಂದೊಂದು ಅರ್ಥವೂ ಇತ್ತು. ಅಲೇಫ್-ಎತ್ತು, ಬೇತ್-ಮನೆ, ದಲೇತ್-ಬಾಗಿಲು, ವಾವ್-ಕೊಕ್ಕೆ, ಯೋದ್-ಕೈ, ಕಾಫ್-ಹಸ್ತ, ಅಯಿನ್-ಕಣ್ಣು ಪೇ-ಬಾಯಿ, ರೆಷ್ ಅಥವಾ ರೋಷ್-ತಲೆ, ಜಮೆಲ್ ಅಥವಾ ಗಾಮೆಲ್-ಒಂಟೆ, ನುನ್-ಮೀನ್, ಖೋಫ್-ಕೋತಿ ಎಂಬ ಅರ್ಥಗಳಿವೆ. ಈ ಉಚ್ಚಾರಗಳ ಮೊದಲ ಅಕ್ಷರಗಳನ್ನು ತೆಗೆದುಕೊಂಡು ವರ್ಣಮಾಲೆಯನ್ನು ಸೃಷ್ಟಿಸಿರುತ್ತಾರೆ. ಉದಾಹರಣೆಗೆ ಬೇತ್-ಬಿ, ಜಿಮೆಲ್-ಜಿ, ದಲೇತ್-ಡಿ, ಹೇ-ಎಚ್, ವಾವ್-ಡಬ್ಲಿಯೂ, ಜಯಿನ್-ಜಡ್, ಖೇತ್-ಖ ಇತ್ಯಾದಿ.

ಇಂದಿನ ವರ್ಣಮಾಲೆಗಳಲ್ಲಿ ಭಾರತ ಜನ್ಯ ಲಿಪಿಗಳನ್ನು ಬಿಟ್ಟು ಉಳಿದ ಭಾಷೆಗಳಲ್ಲಿನ ಲಿಪಿಗಳ ಸಂಖ್ಯೆ ೨೦ ರಿಂದ ೩೦. ಆದರೂ ಆಯಾ ಭಾಷೆಯ ಉಚ್ಚಾರಕ್ಕೆ ತಕ್ಕಂತೆ ಲಿಪಿಚಿಹ್ನೆಗಳ ಸಂಖ್ಯೆ ಬದಲಾಗುತ್ತಾ ಹೋಗುತ್ತದೆ. ಬಹು ಕಡಿಮೆ ಸಂಖ್ಯೆಯ ಅಕ್ಷರಗಳನ್ನು ಸಾಲೋಮನ್ ದ್ವೀಪದ ರೋಟೋಕರು ಹೊಂದಿದ್ದಾರೆ. ಈ ಲಿಪಿಗಳ ಸಂಖ್ಯೆ ೧೧. ಖ್ಮೇರ್ ಭಾಷೆಯು ೭೪ ಅಕ್ಷರಗಳನ್ನು ಹೊಂದಿದೆ.

ದಕ್ಷಿಣ ಐರ್‌ಲ್ಯಾಂಡಿನ ಐರಿಷ್ ಮತ್ತು ಪಿಕ್‌ಟಿಷ್ ಭಾಷೆಯಲ್ಲಿ ಕ್ರಿ.ಶ.೪ನೆಯ ಶತಮಾನಕ್ಕೆ ಸೇರಿದ ಸುಮಾರು ೫೦೦ ಶಾಸನಗಳು ದೊರೆತಿವೆ. ಈ ಲಿಪಿಯನ್ನು 'ಒಘಮ್' ಲಿಪಿ ಎಂದು ಕರೆಯುತ್ತಾರೆ. ೩೦ ಅಕ್ಷರಗಳನ್ನು ಹೊಂದಿದ್ದ ಈ ಲಿಪಿಯನ್ನು ಉದ್ದನೆಯ ಗೆರೆಯನ್ನು ಅಡ್ಡವಾಗಿ, ಓರೆಯಾಗಿ ಕತ್ತರಿಸುವ ಗೆರೆಗಳ ಮೂಲಕ ತೋರಿಸಿರುತ್ತಾರೆ. ಈ ಲಿಪಿಗಳನ್ನು ಬರೆವಣಿಗೆಯ ದಿಕ್ಕನ್ನು ಅನುಸರಿಸಿ ಕೆಳಗಿನಿಂದ ಮೇಲಕ್ಕೆ ಅಥವಾ ಬಲದಿಂದ ಎಡಕ್ಕೆ ಓದಬೇಕಿತ್ತು.

ಬರೆವಣಿಗೆಯ ರೀತಿ

ಪ್ರಪಂಚದಲ್ಲಿ ಬಳಕೆಯಲ್ಲಿದ್ದ – ಇರುವ ಲಿಪಿಗಳನ್ನು ನಾಲ್ಕು ರೀತಿಗಳಿಂದ ಬರೆಯುತ್ತಾರೆ.

1. ಬಲದಿಂದ ಎಡಕ್ಕೆ
2. ಎಡದಿಂದ ಬಲಕ್ಕೆ
3. ಕೆಳಗಿನಿಂದ ಮೇಲಕ್ಕೆ
4. ಮೇಲಿನಿಂದ ಕೆಳಕ್ಕೆ

ಈಗ ಕೆಳಗಿನಿಂದ ಮೇಲಕ್ಕೆ ಬರೆಯುವ ಲಿಪಿ ಬಳಕೆಯಲ್ಲಿಲ್ಲ, ಉಳಿದಂತೆ ಮೂರು ರೀತಿಯ ಬರೆವಣಿಗೆ ಇಂದಿಗೂ ಪ್ರಪಂಚದಲ್ಲಿ ಬಳಕೆಯಲ್ಲಿದೆ. ಅರಾಮಿಯಾ ಗುಂಪಿಗೆ ಸೇರಿದ ಲಿಪಿಗಳು, ಫೊನೀಷಿಯಾ ಗುಂಪಿಗೆ ಸೇರಿದ ಲಿಪಿಗಳು ಮೂಲದಲ್ಲಿ ಬಲದಿಂದ ಎಡಕ್ಕೆ ಬರೆಯುವ ಲಿಪಿಗಳಾಗಿವೆ. ಫೊನೀಷಿಯಾ ಲಿಪಿಯಿಂದ ಪ್ರತ್ಯೇಕವಾದ ಯೂರೋಪಿಯಾದ ಲಿಪಿಗೆ ಮೂಲವಾದ ಗ್ರೀಕ್ ಲಿಪಿಯು ಮುಂದೆ ಎಡದಿಂದ ಬಲಕ್ಕೆ ಬರೆಯುವ ಲಿಪಿಯಾಗಿ ಮಾರ್ಪಟ್ಟಿತು. ಮಧ್ಯಪ್ರಾಚ್ಯದಲ್ಲಿ ಬಳಕೆಯಿರುವ ಎಲ್ಲಾ ಲಿಪಿಗಳು ಬಲದಿಂದ ಎಡಕ್ಕೆ ಬರೆಯುವ ಲಿಪಿಗಳಾಗಿದ್ದು, ತಮ್ಮ ಮೂಲದ ಬರೆವಣಿಗೆಯ ರೀತಿಯನ್ನು ಉಳಿಸಿಕೊಂಡಿವೆ.

ಕೆಲವು ವಿದ್ವಾಂಸರು ಭಾರತದಲ್ಲಿದ್ದ ಬ್ರಾಹ್ಮಿಲಿಪಿಯು, ಮೂಲದಲ್ಲಿ ಬಲದಿಂದ ಎಡಕ್ಕೆ ಬರೆಯುತ್ತಿದ್ದ ಲಿಪಿಯೆಂದು ಅಭಿಪ್ರಾಯಪಡುತ್ತಾರೆ. ಆದರೆ ಒಂದೆರಡು ಉದಾಹರಣೆಯನ್ನು ಬಿಟ್ಟರೆ ಉಳಿದಂತೆ ಈ ಲಿಪಿಯು ಎಡದಿಂದ ಬಲಕ್ಕೆ ಬರೆಯುವ ಲಿಪಿಯಾಗಿದೆ. ಹೀಗಾಗಿ ಭಾರತದ ಬ್ರಾಹ್ಮಿಲಿಪಿಯಿಂದ ಜನ್ಯವಾದ ಎಲ್ಲಾ ಲಿಪಿಗಳು ಎಡದಿಂದ ಬಲಕ್ಕೆ ಬರೆಯುವಂತಹವಾಗಿವೆ.

ಈಜಿಪ್ಟಿನ ಚಿತ್ರಲಿಪಿಯ ಬರೆವಣಿಗೆಯು ಬಲಗಡೆಯಿಂದ ಎಡಗಡೆ ಮತ್ತು ಮೇಲಿನಿಂದ ಕೆಳಕ್ಕೆ ಬರೆಯುವ ಬರೆವಣಿಗೆಯಾಗಿತ್ತು. ಚೀನಾಲಿಪಿ ಮತ್ತು ಅದರಿಂದ ಜನ್ಯವಾದ ಲಿಪಿಗಳು

ಮೇಲಿನಿಂದ ಕೆಳಕ್ಕೆ ಬರೆಯುವಂತಹವಾಗಿವೆ ಭಾರತದಲ್ಲಿ ಕೆಲವು ಶಾಸನಗಳ ಸಾಲುಗಳನ್ನು ಕೆಳಗೆ ಆರಂಭಿಸಿ ಮೇಲಕ್ಕೆ ಸಾಲುಗಳನ್ನು ಬರೆದಿರುತ್ತಾರೆ. ಕೃಷ್ಣಾ ಜಿಲ್ಲಾ ದಿವಿ ತಾಲೂಕು ಲಕ್ಷ್ಮೀಪುರದ ಶಾಸನದಲ್ಲಿ ಹೀಗೆ ಬರೆಯಲಾಗಿದೆ. ಇದು ಆಕಸ್ಮಿಕ ಬರವಣಿಗೆ. ಆದರೆ ಅಕ್ಷರಗಳನ್ನು ಎಡದಿಂದ ಬಲಕ್ಕೆ ಬರೆಯಲಾಗಿದೆ. ತಾಳಗುಂದ ಶಾಸನದಲ್ಲಿ ಸಾಲುಗಳನ್ನು ಕೆಳಗಿನಿಂದ ಮೇಲಕ್ಕೆ ಬರೆಯಲಾಗಿದೆ. ಆದರೆ ಬರವಣಿಗೆ ಮಾತ್ರ ಎಡದಿಂದ ಬಲಕ್ಕೆ ಇಂತಹ ಕೆಲವು ಉದಾಹರಣೆಗಳನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ಇಂತಹ ಕಡೆಗಳಲ್ಲಿ ಶಾಸನಶಿಲ್ಪಿ ಅನುಕೂಲವನ್ನು ನೋಡಿರುತ್ತಾನೆ. ಹೀಗೆ ಪ್ರಪಂಚದಾದ್ಯಂತ ಈಗ ಮೇಲಿನಿಂದ ಕೆಳಕ್ಕೆ ಬಲದಿಂದ ಎಡಕ್ಕೆ ಎಡದಿಂದ ಬಲಕ್ಕೆ ಬರೆಯುವ ಲಿಪಿಗಳು ಹರಡಿವೆ.

**

ಅಧ್ಯಾಯ - ೨

ಬರೆವಣಿಗೆ


ಪ್ರಪಂಚದಲ್ಲಿ ಇತಿಹಾಸ ಪೂರ್ವಕಾಲದ ಮಾನವನು ನೆಲೆಸಿದ್ದ ಸ್ಥಳಗಳಲ್ಲಿ ತಾನು ರಚಿಸಿದ ಚಿತ್ರಗಳನ್ನು ಪಳೆಯುಳಿಕೆಯಾಗಿ ಬಿಟ್ಟುಹೋಗಿದ್ದಾನೆ. ಈ ಚಿತ್ರಗಳು ರೇಖೆಗಳಿಂದ ಕೂಡಿದ್ದು, ಇವು ಆತನ ಯಾವುದೋ ಘಟನೆಯನ್ನು ನೆನಪಿಸುವ ಸನ್ನಿವೇಶವಾಗಿರುತ್ತದೆ. ಅಂತಹ ಸಂದರ್ಭಗಳನ್ನು ಚಿತ್ರಿಸುವಲ್ಲಿ ಬೇಟೆಯ ಸನ್ನಿವೇಶಗಳೇ ಹೆಚ್ಚು. ಬೇಟೆಯನ್ನೇ ಮುಖ್ಯ ಕಸುಬಾಗಿ ಹೊಂದಿದ್ದ ಆದಿಮಾನವ ತನಗೆ ಬೇಟೆ ದೊರೆತಾಗ ಅದರ ಸಂತೋಷದಲ್ಲಿಯೋ ಅಥವಾ ಬೇಟೆಯಾಡುವಾಗ ಬಲಿಯಾದ ತಮ್ಮವರ ನೆನಪಿನಲ್ಲಿಯೋ ಇವನ್ನು ರಚಿಸಿರಬೇಕು. ಈ ಬಗೆಯ ಬೇಟೆಯ ಚಿತ್ರಗಳೇ ಅಲ್ಲದೆ ಕುಣಿಯುವ, ಬರೀ ಪ್ರಾಣಿಗಳ, ಇಂದಿಗೆ ಅರ್ಥೈಸಲಾಗದ ಅನೇಕ ರೇಖಾಚಿತ್ರಗಳನ್ನು ಸಹಜ ಗುಹಾಲಯಗಳಲ್ಲಿ ಹಾಗೂ ಕಲ್ಲಾಸರೆಗಳಲ್ಲಿ ಕಾಣುತ್ತೇವೆ. ಸಾಮಾನ್ಯವಾಗಿ ಅರಗಿನ ಬಣ್ಣದ ರೇಖಾಚಿತ್ರಗಳೇ ಹೆಚ್ಚು, ಇದರ ಜೊತೆಗೆ ಅಲ್ಲಲ್ಲಿ ಬಿಳಿಬಣ್ಣದ ಚಿತ್ರಗಳನ್ನು ಕಾಣುತ್ತೇವೆ.

ಈ ರೇಖೆಗಳು ಮಾನವನ ಆರಂಭಕಾಲದ ಬರೆವಣಿಗೆಯಾಗಿದ್ದು, ಅಲೆಮಾರಿಯಾಗಿದ್ದ ಆತ ತಾನು ಮತ್ತೆ ಆ ಪರಿಸರಕ್ಕೆ ಬಂದಾಗ ತನ್ನವರಿಗೆ ಆ ಚಿತ್ರದ ವಿವರಗಳನ್ನು ತಿಳಿಸುತ್ತಿದ್ದಿರಬೇಕು. ಈ ಚಿತ್ರಗಳು ಹಿಂದೆ ನಡೆದ ಘಟನೆಯ ಭಾಷೆಯನ್ನು ಸ್ವಲ್ಪಮಟ್ಟಿಗೆ ಹಿಡಿದಿರುವ ಪ್ರಯತ್ನ ಮಾಡಿದವು. ಇಂತಹ ಚಿತ್ರಗಳು ಪ್ರಪಂಚದಾದ್ಯಂತ ಇತಿಹಾಸ ಪೂರ್ವಕಾಲದ ನೆಲೆಗಳಲ್ಲೆಲ್ಲಾ ಕಾಣಬರುತ್ತವೆ. ಕೆಲವೊಮ್ಮೆ ಈ ಚಿತ್ರಗಳನ್ನು ಕಲ್ಲಿನಲ್ಲಿ ಕೊರೆದ ರೇಖೆಗಳ ಮೂಲಕ ತೋರಿಸಿರುವುದುವುಂಟು. ಭಾರತದಲ್ಲಿ ಇಂತಹ ಎರಡೂ ಬಗೆಯ ಚಿತ್ರಗಳು ಆದಿಮಾನವನ ನೆಲೆಗಳಾದ ಬಿಂಬೇಡ್ಕಾ, ಹಿರೇ ಬೆಣಕಲ್, ಕೊಪ್ಪಳ, ಚಿತ್ರದುರ್ಗ, ಗಬ್ಬೂರು ಮುಂತಾದ ಕಡೆಗಳಲ್ಲಿ ಕಾಣಬರುತ್ತವೆ.

ಅನೇಕ ಸ್ಥಳಗಳಲ್ಲಿ ಪ್ರಾಚೀನ ಚಿತ್ರಗಳ ಮೇಲೆ ಕಾಲಕಾಲಕ್ಕೆ ಬೇರೆ ಬೇರೆ ಚಿತ್ರಗಳನ್ನು ಬರೆದಿರುತ್ತಾರೆ. ಹೊಸಪೇಟೆ ತಾಲೂಕಿನ ಗುಂಡಾಕೆರೆಯ ಬಳಿ ಬಿಳಿಬಣ್ಣದಲ್ಲಿ ಬರೆದಿರುವ ಪ್ರಾಗೈತಿಹಾಸಿಕ ಮಾನವ ಚಿತ್ರವನ್ನು ಹೋಲುವ ಚಿತ್ರವನ್ನು ಪೂಜಿಸುತ್ತಾರೆ. ಅಲ್ಲದೆ ಅನಕ್ಷರಸ್ಥರು ದನಕಾಯುವ ಸ್ಥಳಗಳಲ್ಲಿ ಇತ್ತೀಚೆಗೆ ಸಿಮೆಂಟ್ ಗೋಡೆಗಳ ಮೇಲೆ (ಹೊಸಪೇಟೆ ತಾಲೂಕು) ಕೊರೆದಿರುವ ರೇಖಾಚಿತ್ರಗಳು ಪ್ರಾಚೀನ ಚಿತ್ರಗಳನ್ನು ಹೋಲುತ್ತವೆ. ಇಂತಹ ಕಡೆ ಮನುಷ್ಯ ಮತ್ತು ದನಗಳ ಚಿತ್ರಗಳೇ ಪ್ರಧಾನವಾಗಿರುತ್ತವೆ. ಬೇಟೆ ಚಿತ್ರಗಳಿರುವುದಿಲ್ಲ, ಕ್ರಿ.ಶ.೧೧ನೆಯ ಶತಮಾನದ ದೇವಾಲಯವೊಂದರ ದೇವಾಲಯದ ಗೋಡೆಗಳ ಮೇಲಿನ ಕಲ್ಲಿನಲ್ಲಿ ದನಗಳ

ಚಿತ್ರವನ್ನು ಕೊರೆಯಲಾಗಿದೆ. ಇಲ್ಲೆಲ್ಲಾ ಅನಕ್ಷರಸ್ಥರು ತಮ್ಮ ಭಾಷೆಯನ್ನು ಹಿಡಿದಿಡುವ ಪ್ರಯತ್ನವನ್ನು ಕಾಣಬಹುದು. (ಅಂಟೂರುತಾಣ ಮತ್ತು ಅನಗವಾಡಿ)

ಮೊದಲೇ ತಿಳಿಸಿರುವಂತೆ ಈ ಚಿತ್ರಗಳನ್ನು ಮಾನವ ತಾನು ಆ ಸ್ಥಳದಲ್ಲಿ ಕುಳಿತುಕೊಂಡಾಗಲೋ ಅಥವಾ ಯಾವುದಾದರೂ ನಿಶ್ಚಿತ ಸಂದರ್ಭಗಳಲ್ಲಿ ತಾನು ಈ ಚಿತ್ರಗಳ ಬಗ್ಗೆ ತನ್ನ ಹಿರಿಯರಿಂದ ಕೇಳಿದ ಸಂಗತಿಗಳನ್ನು ನೆರೆದ ಜನರಿಗೆ ವಿವರಿಸುತ್ತಿದ್ದ. ಈ ವಿವರಣೆ ತಲೆಮಾರಿನಿಂದ ತಲೆಮಾರಿಗೆ ಭಿನ್ನವಾಗಿದ್ದಿರಬಹುದು. ಚಿತ್ರಗಳಲ್ಲಿನ ವ್ಯಕ್ತಿಗಳ ಹೆಸರು ಮುಂತಾದವು ಬದಲಾಗಿರಬಹುದು. ಆದರೂ ಚಿತ್ರದ ಘಟನೆ ಬದಲಾಗುತ್ತಿರಲಿಲ್ಲ. ಅಂದರೆ ಬೇಟೆಯ ಚಿತ್ರದಲ್ಲಿ ಯಾವ ಪ್ರಾಣಿಯನ್ನು ಸಾಯಿಸಿದ್ದು ಎಂಬುದನ್ನು ಚಿತ್ರದಲ್ಲಿನ ಪ್ರಾಣಿಯನ್ನು ನೋಡಿ ತಿಳಿಯಬಹುದಿತ್ತು. ಒಟ್ಟಿನಲ್ಲಿ ಬರೆದ ಚಿತ್ರಗಳನ್ನು ಸಂದರ್ಭಕ್ಕೆ ತಕ್ಕಂತೆ ಅರ್ಥೈಸುವ ಪದ್ಧತಿ ಆಗಿನಿಂದಲೇ ಇದ್ದು, ಚಿತ್ರದ ಮೂಲಕ ಬರವಣಿಗೆಯಲ್ಲಿ ಭಾಷೆಯನ್ನು ಹಿಡಿದಿಡುವ ಮೊದಲ ಪ್ರಯತ್ನವಿದು.



ಹಿರೇ ಬೆಣಕಲ್ ಗುಡ್ಡದ ಕಲ್ಲಾಸರೆಯ ಚಿತ್ರಗಳು ಕೃಪೆ Erwin neumayer

ಆದಿಕಾಲದ ಮಾನವನು ಬೇಟೆಯ ಜೀವನವನ್ನು ಬಿಟ್ಟು ವ್ಯವಸಾಯ ಹಾಗೂ ಪಶುಪಾಲನೆಯಲ್ಲಿ ತೊಡಗಿ ಒಂದೆಡೆ ನೆಲೆನಿಂತ. ಅವನು ನೆಲೆ ನಿಲ್ಲಲು ಆಯ್ದುಕೊಂಡ ಸ್ಥಳಗಳು ನದಿತೀರಗಳಾಗಿದ್ದವು. ಹರಿಯುವ ನದಿ, ಸಹಜವಾಗಿ ಬೆಳೆದಿರುವ ಮರಗಳಲ್ಲಿನ ಹಣ್ಣು ಹಂಪಲು, ಪಶುಪಾಲನೆ ಅವನ ಜೀವನಕ್ಕೆ ಗಟ್ಟಿ ನೆಲೆಯನ್ನು ಒದಗಿಸಿದವು. ವರ್ಷದ ಪೂರ್ಣಾವಧಿಯ ಅನಿಶ್ಚಿತ ದುಡಿಮೆ ಕೊನೆಗೊಂಡು ನೆಮ್ಮದಿಯ ಜೀವನ ನಡೆಸತೊಡಗಿದ.

ಸಣ್ಣ ಸಣ್ಣ ಗುಂಪುಗಳು ರಚನೆಗೊಂಡವು. ಇಂತಹ ವಾತಾವರಣದಲ್ಲಿ ಮಾನವ ತನ್ನ ಬಿಡುವಿನ ವೇಳೆಯನ್ನು ಹಾಡುವುದರಲ್ಲಿ, ಕುಣಿಯುವುದರಲ್ಲಿ ಕಳೆದ. ಹಿಂದಿನ ಗುಹಾಚಿತ್ರಗಳ ರಚನೆ ಇನ್ನೂ ವಿಸ್ತೃತಗೊಂಡು ಹೆಚ್ಚು ಹೆಚ್ಚು ವಿವರಗಳೊಂದಿಗೆ ಮೂಡಿದವು. ಘಟನೆಗಳನ್ನು ಬೇರೆಯವರಿಗೆ, ಮುಂದಿನವರಿಗೆ ತಿಳಿಸಲು ಆ ಮಾನವನಿಗೆ ಚಿತ್ರಗಳನ್ನು ಬಿಟ್ಟರೆ ಬೇರೆ ಮಾಧ್ಯಮವಿರಲಿಲ್ಲ.

ಮೊಟ್ಟಮೊದಲು ಮಾನವ ನೆಲೆನಿಂತ ನಾಗರೀಕತೆಯ ಕುರುಹುಗಳು ಪ್ರಪಂಚದಲ್ಲಿ ಮುಖ್ಯವಾಗಿ ನಾಲ್ಕು ಸ್ಥಳಗಳಲ್ಲಿ ಕಂಡುಬಂದಿವೆ.

೧. ಈಜಿಪ್ಟಿನ ನೈಲ್ ನದೀಬಯಲು
೨. ಇರಾಖಿನ ಯೂಫ್ರಟಿಸ್, ಟೈಗ್ರಿಸ್ ನದಿಗಳ ಬಯಲು
೩. ಸಿಂಧೂ ನದಿಯ ಬಯಲು
೪. ಚೀನಾದೇಶ ಯಾಂಗ್ಸಿಕಿಯಾಂಗ್ ಮತ್ತು ಹೊಯಾಂಗ್‌ಹೋ ನದೀಬಯಲು.

ಈ ನದಿ ಬಯಲಿನ ನಾಗರೀಕತೆಗಳು ಒಂದು ಮತ್ತೊಂದಕ್ಕೆ ಪರಿಚಯವಿಲ್ಲದಿದ್ದರೂ ಬರವಣಿಗೆಯನ್ನು ತಮ್ಮದೇ ಆದ ರೀತಿಯಲ್ಲಿ ರೂಢಿಸಿ ಬೆಳೆಸಿಕೊಂಡಿವೆ. ಈ ನಾಗರೀಕತೆಗಳಲ್ಲಿ ಕಂಡುಬರುವ ಮೊದಲ ಬರವಣಿಗೆಯೆಂದರೆ ಚಿತ್ರಲಿಪಿಗಳು. ಮಾನವನಲ್ಲಿ ಭಾಷೆಯು ಗುಂಪು ಗುಂಪುಗಳ ಮಧ್ಯೆ ಬೆಳೆದಿದ್ದು ಅದನ್ನು ಹಿಡಿದಿಡುವ ಪ್ರಯತ್ನವಾಗಿ ಹಿಂದಿನಿಂದಲೂ ಕಲ್ಲಾಸರೆಗಳಲ್ಲಿ ಚಿತ್ರಗಳನ್ನು ಬರೆಯುತ್ತಲೇ ಬಂದಿದ್ದ. ಈಗ ನೆಲೆ ನಿಂತ ಮೇಲೆ ನಿಶ್ಚಿಂತ ಜೀವನದ ನೆಮ್ಮದಿಯಲ್ಲಿ ಇವನ್ನು ಪರಿಷ್ಕರಿಸಿದ. ಇವೇ ಮುಂದೆ ಚಿತ್ರಲಿಪಿಗಳೆನಿಸಿಕೊಂಡವು.

ನಾಗರೀಕತೆಗಳ ಬರವಣಿಗೆ

ಈಜಿಪ್ಟ್

ನೆಪೋಲಿಯನ್ನನ ಕಾಲದಲ್ಲಿ ಈಜಿಪ್ಟಿಗೆ ಧಾಳಿ ಮಾಡಿದ ಫ್ರೆಂಚ್ ಸೈನಿಕರು ರೊಸೆಟ್ಟ (ರಷೀದ್) ಎಂಬ ಸ್ಥಳದಲ್ಲಿ ಕೋಟೆಯೊಂದನ್ನು ಅಗೆಯುತ್ತಿದ್ದಾಗ ಕ್ರಿ.ಶ.೧೭೯೯ರಲ್ಲಿ ಒಂದು ಶಾಸನವನ್ನು ಪತ್ತೆ ಹಚ್ಚಿದರು. ಅದು ಮೂರು ಲಿಪಿಗಳನ್ನು ಹೊಂದಿದ್ದ ಶಾಸನವಾಗಿತ್ತು. ಅದೇ ಪ್ರಸಿದ್ಧವಾದ 'ರೊಸೆಟ್ಟ' ಶಾಸನ. ಅದರಲ್ಲಿ ಚಿತ್ರಲಿಪಿ, ಅದೇ ಲಿಪಿಯ ಇನ್ನೊಂದು ರೂಪವಾದ ಸಾಮಾನ್ಯ ಲಿಪಿ (Demotic) ಮತ್ತು ಗ್ರೀಕ್‌ನಲ್ಲಿ ಬರೆಯಲಾಗಿತ್ತು. ಕ್ರಿ.ಶ.೧೮೧೬ರಲ್ಲಿ ಸರ್ ಥಾಮಸ್‌ಯಂಗ್ ಎಂಬುವವನು ಶಾಸನವನ್ನು ಪರಿಶೀಲಿಸಿ ಇದರಲ್ಲಿ ಒಂದೇ ಭಾಷೆಯನ್ನು ಎರಡು ಲಿಪಿಗಳನ್ನು ಬರೆದಿರುವುದನ್ನು ಕಂಡುಹಿಡಿದ. ಕ್ರಿ.ಶ.೧೮೨೨ರಲ್ಲಿ ಜೆ.ಎಫ್.ಚಾಂಪಲಿಯನ್ ಎಂಬುವವನು ಕೆಲವು ಅಕ್ಷರಗಳನ್ನು ಗುರುತಿಸಿ 'ಕ್ಲಿಯೋಪಾಟ್ರ' ಎಂಬ ಪದವನ್ನು ಓದಿದ. ಈ ಅಕ್ಷರಗಳನ್ನು ಆಧಾರವಾಗಿಟ್ಟುಕೊಂಡು 'ಥುತುಮಸ್' ಎಂಬ ಪದವನ್ನು ಓದಿದ. ಮುಂದೆ ಇಡೀ ಶಾಸನವನ್ನು ಓದಿದ. ಈ ಓದಿನಿಂದ ಈಜಿಪ್ಟಿನ ಪ್ರಾಚೀನ ಇತಿಹಾಸ ಹಾಗೂ ನಾಗರೀಕತೆಯ ಬಾಗಿಲು ತೆರೆದಂತಾಯಿತು.

ಈಜಿಪ್ಟಿನ ರಾಜವಂಶವನ್ನು ಕೊನೆಗಾಣಿಸಿ ಅದನ್ನು ಗೆದ್ದ ಗ್ರೀಕರು, ಈಜಿಪ್ಟಿನ ಚಿತ್ರಲಿಪಿಯ ಬಗ್ಗೆ ಒಲವು ತೋರಿಸಲಿಲ್ಲ. ಈ ಲಿಪಿಗಳನ್ನು ಸಾಂಕೇತಿಕ ಬರವಣಿಗೆಗಳೆಂದೇ

ಅವರು ಭಾವಿಸಿದ್ದರು. ಪೈಥಾಗೋರಾಸನಿಗೆ ಈ ಲಿಪಿಯ ಪರಿಚಯವಿತ್ತು. ಹಾರೋಪೆಲ್ಲೋನ್ ಎಂಬ ಈಜಿಪ್ಟಿನ ಗ್ರೀಕ್‌ಶಾಸ್ತ್ರಜ್ಞ ಈ ಬರೆವಣಿಗೆಯ ಮೇಲೆ 'ಹೀರೋಗ್ಲಫಿಕ' ಎಂಬ ಕೃತಿ ರಚಿಸಿದ. ಆದರೆ ಈತನಿಗೆ ಈ ಚಿತ್ರಲಿಪಿ ಓದಲು ಬರುತ್ತಿರಲಿಲ್ಲ. ಆದರೂ ಅವನ ಕೃತಿಯನ್ನು ಸಂರಕ್ಷಿಸಿದರು. ಈ ಚಿತ್ರಗಳನ್ನನುಸರಿಸಿ ಚರ್ಚುಗಳ ಮೇಲೆ ಚಿತ್ರಗಳನ್ನು ಬರೆಸಿದರು.

ಈಜಿಪ್ಟಿನ ಭಾಷೆಯು ಸೆಮೆಟಿಯಾ ಮತ್ತು ಹಮಟಿಯಾ ಭಾಷಾ ಗುಂಪಿಗೆ ಸೇರಿದ್ದು. ಹಮಟಿಯಾ ಭಾಷೆಯು ಸ್ಥಿರವಾಗಿರದೆ ಕಾಲದಿಂದ ಕಾಲಕ್ಕೆ ಬದಲಾಗಿದೆ. ಹೊಸಪದಗಳು ಬಂದಾಗ ಮೂಲ ಭಾಷೆಯ ಪದಗಳು ಬಿಟ್ಟುಹೋಗಿವೆ. ಇಲ್ಲವೇ ಅನೇಕ ವೇಳೆ ಈ ಹಳೆಯ ಪದಗಳು ತಮ್ಮ ಅರ್ಥವನ್ನು ಬದಲಿಸಿಕೊಂಡಿವೆ. ಈ ಭಾಷೆಯ ಅಂತಿಮ ಹಂತವೇ ಕೋಪ್ಟಿಕ್ ಭಾಷೆ. ಇದು ಆರಂಭದಲ್ಲಿ ಈಜಿಪ್ಟಿನ ಚರ್ಚಿನ ಭಾಷೆಯಾಗಿತ್ತು.


ಈಜಿಪ್ಟಿನ ಚಿತ್ರಲಿಪಿಯ ವಿಕಾಸವನ್ನು ಮೂರು ಹಂತಗಳಲ್ಲಿ ಗುರುತಿಸಬಹುದು.

೧. ಚಿತ್ರಲಿಪಿ (Heiroglypic)
೨. ಧಾರ್ಮಿಕ ಲಿಪಿ (Heiratic)
೩. ಸಾಮಾನ್ಯ ಲಿಪಿ (Demotic)

ಚಿತ್ರಲಿಪಿ (ಹೀರಾಗ್ಲಿಫ್) : ಈಜಿಪ್ಟ್ ನಾಗರೀಕತೆಯ ಭವ್ಯ ಕೊಡುಗೆ ಈ ಲಿಪಿ. ಈ ಲಿಪಿಯು ಚಿತ್ರಗಳ ರೂಪದಲ್ಲಿರುವುದರಿಂದ ಇದನ್ನು ಚಿತ್ರಲಿಪಿಯೆಂದು ಕರೆಯುತ್ತಾರೆ. ದೇವಾಲಯಗಳ ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ಬರೆದಿರುವುದರಿಂದ ಇದನ್ನು ಗ್ರೀಕರು 'ಹೀರಾಗ್ಲಿಫ್' ಎಂದು ಕರೆದರು. 'ಹಿರಾ' ಎಂದರೆ ಪವಿತ್ರವಾದ, 'ಗ್ಲಫೀನ್' ಎಂದರೆ ಕೊರೆದ ಬರೆವಣಿಗೆ ಎಂದರ್ಥ. ಈ ಲಿಪಿಯು ಈಜಿಪ್ಟ್‌ನಲ್ಲಿ ನಾಗರೀಕತೆಯ ಆರಂಭದಲ್ಲಿ ಕಾಣಬರುವುದಿಲ್ಲ. ಸುಮಾರು ಕ್ರಿ.ಪೂ.೩೦೦೦ದಿಂದೀಚೆಗೆ ಕಾಣಿಸಿಕೊಂಡಿದೆ. ಆರಂಭದಲ್ಲಿ ಈ ಲಿಪಿಗಳು ಚಿತ್ರಗಳ ರೂಪದಲ್ಲಿಯೇ ಇವೆ. ನಾರ್-ಮೆನ್‌ನಲ್ಲಿ ದೊರೆತ ಕೊರೆದ ಚಿತ್ರದ ಹಲಗೆಯಲ್ಲಿ ಈ ಬಗೆಯ ಚಿತ್ರಲಿಪಿಗಳನ್ನು ಕಾಣಬಹುದು. ಈ ಲಿಪಿಯೂ ಸಹ ಇದ್ದಕ್ಕಿದ್ದಂತೆ ಉದಿಸಿದುದಲ್ಲ. ಈಜಿಪ್ಟಿನ ಚಿತ್ರಲಿಪಿಯು ಪ್ರಾರಂಭದ ಹಂತದಲ್ಲಿ ಕೇವಲ ಹೆಸರುಗಳನ್ನು ಒಳಗೊಂಡಿತ್ತು. ಕಾಲ ಕಳೆದಂತೆ ಹೆಸರಿನ ಜೊತೆಗೆ ಬಿರುದುಗಳೂ, ಮೂರನೆಯ ಹಂತದಲ್ಲಿ ವಾಕ್ಯಗಳೂ ರಚಿತವಾದವು. ಈ ಬರವಣಿಗೆಯಲ್ಲಿ ಪ್ರಾಚೀನ ಕಾಲದ ಚಿತ್ರಗಳು ಕಾಲ ಕಾಲಕ್ಕೆ ಬೆಳೆದು ಅವುಗಳ ಚಿತ್ರದ ಮೂಲರೂಪವನ್ನು ಅಷ್ಟಿಷ್ಟು ಕಳೆದುಕೊಂಡು ಸಂಕೇತವಾಗಿ ಬಂದವು. ಒಂದೇ ಚಿತ್ರಕ್ಕೆ ಬೇರೆಬೇರೆ ಅರ್ಥ ನೀಡಬಹುದಿತ್ತು. ಉದಾಹರಣೆಗೆ ನಕ್ಷತ್ರದ ಚಿಹ್ನೆಗೆ ಬೆಳಗಿನ ನಕ್ಷತ್ರ, ಘಂಟೆ, ಪ್ರಾರ್ಥನೆಯ ಸಮಯ, ಪ್ರಾರ್ಥನೆ ಎಂಬ ಅರ್ಥಗಳನ್ನು ನೀಡಬಹುದಾಗಿತ್ತು.

ಈ ಚಿತ್ರಲಿಪಿಗಳು ಕಾಲದಿಂದ ಕಾಲಕ್ಕೆ ಮಾರ್ಪಾಟಾಗಿಲ್ಲ. ಇದಕ್ಕೆ ಕಾರಣ ಈಜಿಪ್ಟಿಯರು ಇದನ್ನು ಧಾರ್ಮಿಕಲಿಪಿಯಾಗಿ ಬಳಸಿಕೊಂಡದ್ದು ಕಾರಣವಾಯಿತು. ಇದನ್ನು ಸಾಮಾನ್ಯರ ಬಳಕೆಗೆ ತರಲಿಲ್ಲ. ಈಜಿಪ್ಟಿನ ಪುರೋಹಿತರು ಮತ್ತು ರೂವಾರಿಗಳು (ಕೆತ್ತನೆಕಾರರು) ಕಾಪಾಡಿಕೊಂಡು ಬಂದರು. ಅಷ್ಟೇ ಅಲ್ಲ, ಅದರ ಅಲಂಕಾರಿಕತೆಯನ್ನು ಮುಂದುವರಿಸಿದರು. ಈಜಿಪ್ಟಿನ ಪಿರಿಮಿಡ್ಡಿನ ಒಳಭಾಗ ಹಾಗೂ ಪವಿತ್ರ ಸ್ಥಳಗಳ ಗೋಡೆಗಳ ಮೇಲೆ ಕೊರೆದೋ ಇಲ್ಲವೇ ಬಣ್ಣಗಳ


ಮೂಲಕವೋ ಈ ಲಿಪಿಗಳನ್ನು ಮೂಡಿಸಿರುತ್ತಾರೆ. ಅಲಂಕಾರಿಕತೆಯಲ್ಲಿ ಹಾಗೂ ಬರೆದಿರುವ ರೀತಿಯಲ್ಲಿ ಪ್ರಪಂಚದ ಯಾವ ನಾಗರೀಕತೆಯ ಚಿತ್ರಲಿಪಿಯೂ ಇದಕ್ಕೆ ಸಾಟಿಯಿಲ್ಲ, ರೋಮನರು ಈಜಿಪ್ಟಿನ ಮೇಲೆ ಧಾಳಿ ಮಾಡಿ ಈ ನಾಗರೀಕತೆಯನ್ನು ನಾಶಮಾಡುವವರೆಗೆ ಈ ಲಿಪಿ ಅಸ್ತಿತ್ವದಲ್ಲಿತ್ತು.



ಟಾಲೆಮಿ



ಕ್ಲಿಯೋಪಾಟ್ರ




ಚಿತ್ರಲಿಪಿಯ ಟಾಲೆಮಿ ಮತ್ತು ಕ್ಲಿಯೋಪಾತ್ರ ಹೆಸರನ್ನು ಬಿಡಿಸಿದಾಗ (ಕೃಪೆ : ಐ.ಸಿ. ರಾಹಿ)

ಬಲದಿಂದ ಎಡಕ್ಕೆ ಬರೆಯುವ, ಕೆಲವೊಮ್ಮೆ ಮೇಲಿನಿಂದ ಕೆಳಕ್ಕೆ ಚೌಕಗಳನ್ನು ಮಾಡಿ ಬರೆಯುತ್ತಿದ್ದರು. ಕೆಲವು ವೇಳೆ ಬಲದಿಂದ ಎಡಕ್ಕೂ, ಎಡದಿಂದ ಬಲಕ್ಕೂ ಬರೆದಿರುವುದುಂಟು. ಶವಸಂಪುಟಗಳ ಮೇಲೆ ಈ ಬಗೆಯ ಲಿಪಿಯನ್ನು ಕಾಣಬಹುದು. ಲಿಪಿಯಲ್ಲಿನ ಚಿತ್ರಗಳು ಯಾವ ಕಡೆಗೆ ಮುಖ ಮಾಡಿಕೊಂಡಿರುತ್ತವೆಯೋ ಆ ಕಡೆಯಿಂದ ಓದಬೇಕಾಗಿತ್ತು.

ಚಿತ್ರಲಿಪಿಯು ಕಲಾತ್ಮಕವೂ ಆಗಿದ್ದು ಕಾಲಕಳೆದಂತೆ ಕೆಲವು ಬದಲಾವಣೆಗಳಾಗಿವೆ. ನೈಜಚಿತ್ರಕ್ಕಿಂತ ಯಥಾದೃಷ್ಯರೂಪದ ರೀತಿಯಲ್ಲಿ (Perspective) ಬಿಡಿಸಿರುತ್ತಾರೆ. ತೋಳನ್ನು ಸೂಚಿಸಲು ಹಸ್ತವನ್ನೂ, ಬಾಯಿಯನ್ನು ತೋರಿಸಲು ಮುಂಭಾಗದ ಮುಖವನ್ನೂ ರಚಿಸಿರುತ್ತಾರೆ. ಈ ನಿಯಮಗಳು ಚಿತ್ರಲಿಪಿಯ ಅಂತ್ಯಕಾಲದವರೆಗೆ ಇದ್ದವು. ಈ ಚಿತ್ರಗಳಲ್ಲಿ ಸಹಜ ಬಣ್ಣವಿರುತ್ತಿತ್ತು. ಲೋಹಗಳಲ್ಲಿ ತಾಮ್ರವನ್ನು ತೋರಿಸಲು ನೀಲಿಯಾಗಿಯೂ, ಚಿನ್ನವನ್ನು ಹರಿಷಿಣ ಬಣ್ಣದಲ್ಲೂ, ಮರವನ್ನು ಹಸಿರು ಇಲ್ಲವೇ ಕೆಂಪು, ನೀರನ್ನು ಕಪ್ಪುಗೆರೆಗಳೊಂದಿಗೆ ನೀಲಿ ಬಣ್ಣದಲ್ಲಿ, ಬಟ್ಟೆಗಳನ್ನು ಕೆಂಪು ಬಣ್ಣದಲ್ಲಿಯೂ ತೋರಿಸಿರುತ್ತಾರೆ.

ಈಜಿಪ್ಟಿನ ಈ ನಾಗರೀಕತೆಯ ಚಿತ್ರಗಳು, ಚಿತ್ರಲಿಪಿಗಳ ಮೇಲೆಯೂ ಪ್ರಭಾವವನ್ನು ಬೀರಿರುತ್ತವೆ. ಚಿತ್ರಗಳಲ್ಲಿ ದೇಹದ ಮುಂಭಾಗವನ್ನು ಎದುರಾಗಿ ಬಿಡಿಸಿದ್ದು ತಲೆಯನ್ನು ಒಂದು ಪಕ್ಕಕ್ಕೆ ತಿರುಗಿಸಿರುವಂತೆ ಬಿಡಿಸಿರುತ್ತಾರೆ. ಪಕ್ಷಿಗಳಲ್ಲಿ ಗೂಬೆಯನ್ನು ಬಿಟ್ಟರೆ ಉಳಿದಂತೆ ಮುಂಭಾಗದ ತಲೆಯ ಚಿತ್ರವನ್ನು ಬಿಡಿಸಿರುವುದಿಲ್ಲ. ಈ ತಂತ್ರವನ್ನೇ ಚಿತ್ರಲಿಪಿಗಳಲ್ಲಿ ಶಿಲ್ಪಿ ಅಥವಾ ಚಿತ್ರಗಾರ

ಅನುಸರಿಸಿದ್ದಾನೆ. ಚಿತ್ರಗಳಲ್ಲಿ ಮರ್ಮಾಂಗದ ನಗ್ನತೆ ತೋರಿಸಿರುವುದಿಲ್ಲ. ಪ್ರಾಚೀನ ಈಜಿಪ್ಟ್‌ನ ಚಿತ್ರಲಿಪಿ ಚಿಹ್ನೆಗಳ ಸಂಖ್ಯೆ ಸುಮಾರು ೭೦೦. ಮುಂದೆ ಕ್ರಿ.ಪೂ.೬೦೦ರ ಹೊತ್ತಿಗೆ ಇವು ಎರಡರಷ್ಟಾದವು. ಮುಖ್ಯವ್ಯಕ್ತಿಗಳ ಹೆಸರನ್ನು ಸೂಚಿಸಲು ಹೆಸರಿನ ಸುತ್ತ ಗೆರೆಗಳನ್ನು ರಚಿಸುತ್ತಿದ್ದರು. ಒಂದು ಪದ ರಚಿಸಬೇಕಾದರೆ ಅನೇಕ ಚಿಹ್ನೆಗಳನ್ನು ಸೇರಿಸಿ ಬರೆಯಬೇಕಾದ್ದರಿಂದ ಪದಗಳು ಉದ್ದುದ್ದವಾಗಿರುತ್ತವೆ.



ಈಜಿಪ್ಟಿನ ಚಿತ್ರಲಿಪಿಯ ಮೂರು ಹಂತಗಳು


೧. ಚಿತ್ರಲಿಪಿ ೨. ಧಾರ್ಮಿಕ ಲಿಪಿ ೩.ಸಾಮಾನ್ಯ ಲಿಪಿ

ಚಿತ್ರಲಿಪಿಯನ್ನು ಭಾವಲಿಪಿಯಾಗಿ ಗ್ರಹಿಸಿದಾಗ ಒಂದು ಚಿತ್ರವನ್ನು ಒಂದೇ ರೂಪವಾಗಿ ಪರಿಗಣಿಸುವುದು. ಮರದ ಕೊಂಬೆ ಚಿತ್ರವಿದ್ದಲ್ಲಿ ಮರದ ಕೊಂಬೆಯೆಂಬ ಅರ್ಥವನ್ನೇ ಗ್ರಹಿಸುವುದು. ಭಾಷಾಧ್ವನಿ ಸೂಚಕದಲ್ಲಿ ಚಿಹ್ನೆಗಳ ಅರ್ಥವನ್ನು ಸೂಚಿಸದೆ ಒಂದು ಅಥವಾ ಹೆಚ್ಚಿನ ಚಿತ್ರಗಳ (ವ್ಯಂಜನಗಳ) ಸಂಯೋಜನೆಯಿಂದ ಬೇರೆ ಅರ್ಥವನ್ನು ನೀಡುತ್ತದೆ. ಮೂರನೆಯದರಲ್ಲಿ ಚಿಹ್ನೆಗಳಿಗೆ ಭಾಷಾಧ್ವನಿಯಿಲ್ಲ, ಅರ್ಥಕ್ಕೆ ಸರಿಯಾಗಿ ಓದಲು ಅನುಕೂಲವಾಗುವಂತೆ ಬರೆಯಲಾಗಿದೆ.



ಧಾರ್ಮಿಕ ಲಿಪಿ (ಹೆರಟಿಕ್) : ಈಜಿಪ್ಟಿನಲ್ಲಿ ಬಹಳ ಕಾಲದವರೆಗೆ ಚಿತ್ರಲಿಪಿಯೇ ಬಳಕೆಯಲ್ಲಿತ್ತು. ಧಾರ್ಮಿಕ ಗ್ರಂಥಗಳ ಬರೆವಣಿಗೆಗೆ, ರಾಜಶಾಸನಗಳಂತಹ ಆಸ್ಥಾನದ ಸೀಮಿತ ಬರೆವಣಿಗೆಗೆ ಚಿತ್ರಲಿಪಿಯ ಇನ್ನೊಂದು ರೀತಿಯ ಲಿಪಿಯನ್ನು ಬಳಸಿರುತ್ತಾರೆ. ಹೀಗೆ ಬಳಸಿದ ಲಿಪಿಯೇ ಧಾರ್ಮಿಕ ಲಿಪಿ ಅಥವಾ ಹೆರಟಿಕ್ ಲಿಪಿ. ಗ್ರೀಕ್‌ನಲ್ಲಿ 'ಹೆರಟಿಕೋಸ್' ಎಂದರೆ ಪವಿತ್ರವಾದ ಎಂದರ್ಥ. ಪಪೈರಸ್ ಗರಿಯ ಮೇಲೆ ಕುಂಚದಂತಹ ಲೇಖನಿಯಲ್ಲಿ ಬರೆಯುತ್ತಿದ್ದುದರಿಂದ ಸಹಜವಾಗಿ ವಕ್ರರೇಖೆಗಳು ಇದರಲ್ಲಿ ಪ್ರಧಾನವಾಗಿವೆ. ಚಿತ್ರಲಿಪಿಯನ್ನೇ ಅನುಸರಿಸಿ ಬರೆದರೂ ಇದರಲ್ಲಿ ಚಿತ್ರಗಳನ್ನು ಗುರುತಿಸುವುದು ಸುಲಭವಲ್ಲ, ಚಿತ್ರಗಳನ್ನು ಬೇಗ ಬೇಗ (ವೇಗವಾಗಿ) ಬರೆದಿರುವುದರಿಂದ ಈ ರೂಪ ಬಂದಿದೆ. ಅನೇಕ ಚಿಹ್ನೆಗಳು ಕುಂಚವನ್ನು ಎಳೆಯುವಾಗ ಒಂದಕ್ಕೊಂದು ಸೇರಿಕೊಂಡಿವೆ. ಹೀಗಾಗಿ ಗೆರೆಗಳಂತಹ ರೂಪಗಳು ಕಾಣಬರುತ್ತವೆ. ಈ ಬರೆವಣಿಗೆಯು ಮೊದಲು ಅಡ್ಡಡ್ಡವಾಗಿತ್ತು, ಕ್ರಿ.ಪೂ.೨೦೦೦ದ ಹೊತ್ತಿಗೆ ಉದ್ದಕ್ಕೆ ತಿರುಗಿತು.


ಈ ಧಾರ್ಮಿಕ ಲಿಪಿಯ ಸೂಚನೆಗಳು ಮೊದಲ ರಾಜವಂಶದಲ್ಲಿಯೇ ಕಂಡುಬಂದರೂ ಮುಂದೆ ಕಾಲದಿಂದ ಕಾಲಕ್ಕೆ ಈ ಲಿಪಿ ಹೆಚ್ಚು ಬಳಕೆಯಾಗುತ್ತಾ ಬಂದಿತು. ಮುಂದೆ ಕ್ರಿಪೂ.ಏಳನೆಯ




ಆಡಳಿತ ಮತ್ತು ಕೊಪ್ಟಿಕ್ ಲಿಪಿಯಲ್ಲಿನ ಟಾಲೆಮಿ ಎಂಬ ಪದ.

ಶತಮಾನದ ನಂತರ ಡೊಮೆಟಿಕ್ ಲಿಪಿ ಬಳಕೆಗೆ ಬಂದ ಮೇಲೆ ಇದರ ಬಳಕೆ ಕೇವಲ ಪಾರಂಪರಿಕ ಮತ್ತು ಧಾರ್ಮಿಕ ಗ್ರಂಥಗಳಿಗೆ ಮಾತ್ರ ಸೀಮಿತವಾಯಿತು. ಸುಮಾರು ಕ್ರಿ.ಶ.ಮೂರನೆಯ ಶತಮಾನದವರೆಗೆ ಇದು ಬಳಕೆಯಲ್ಲಿತ್ತು. ಈ ಬರೆವಣಿಗೆಯು ಮೊದಲು ಮೇಲಿನಿಂದ ಕೆಳಕ್ಕಿದ್ದು ನಂತರ ಅಡ್ಡಡ್ಡಕ್ಕೆ ಬಂತು. ಬರೆವಣಿಗೆಯ ದಿಕ್ಕು ಬಲದಿಂದ ಎಡಕ್ಕೆ.


ಸಾಮಾನ್ಯ ಲಿ; (Domatic) : ಈ ಲಿಪಿಯು ಧಾರ್ಮಿಕ ಲಿಪಿಯು ಮುಂದುವರಿದ ಲಿಪಿಯಾಗಿದೆ. ಈ ಬರೆವಣಿಗೆಯು ಹೆಚ್ಚು ಅಂಕುಡೊಂಕುಗಳನ್ನು ಪಡೆದಿದ್ದು ಚಿತ್ರಲಿಪಿಗಿಂತ ಭಿನ್ನವಾಗಿದೆ. ಈ ಬರೆವಣಿಗೆಯು ಪಪೈರಸ್ ಗರಿಗಳ ಮೇಲೆ ಸಾಮಾನ್ಯವಾದ ವಿವರಗಳನ್ನು ಅಂದರೆ ಖಾಸಗಿ ಪತ್ರಗಳನ್ನು ಬರೆಯಲು, ವ್ಯಾಪಾರಕ್ಕೆ ಸಂಬಂಧಿಸಿದಂತೆ ಹಾಗೂ ಮುಂದೆ ದೀರ್ಘವಾದ ಸಾಹಿತ್ಯ ಕೃತಿಗಳಿಗೆ, ಪ್ರಾಚೀನ ಪುಸ್ತಕಗಳನ್ನು ಪ್ರತಿ ಮಾಡಲು ಬಳಸಿರುತ್ತಾರೆ. ಈ ಲಿಪಿಯು ಕ್ರಿ.ಪೂ.೭-೬ನೆಯ ಶತಮಾನದಲ್ಲಿಯೇ ಬಳಕೆಯಲ್ಲಿತ್ತು, ಮೊದಲು ದಕ್ಷಿಣ ಈಜಿಪ್ಟಿನಲ್ಲಿ ಬಳಕೆಯಲ್ಲಿದ್ದು ಮುಂದೆ ಈ ಬರೆವಣಿಗೆ ಈಜಿಪ್ಟ್ ದೇಶದ ತುಂಬೆಲ್ಲಾ ಬೇಗ ಹರಡುತ್ತದೆ. ಈ ಆಡಳಿತ ಲಿಪಿಯನ್ನು ಅದರ ಬರೆವಣಿಗೆ ರೀತಿಯಿಂದ ಓದಲು ಕಷ್ಟವಾಗಿದೆ. ಟಾಲಮಿಯ ಕಾಲದಲ್ಲಿ ಈ ಬರೆವಣಿಗೆಯ ಬಳಕೆ ಇತರ ಲಿಪಿಗಳಿಗಿಂತ ಮೂಂಚೂಣಿಯಲ್ಲಿತ್ತು. ರಾಜನ ಮತ್ತು ಪೌರೋಹಿತರ ಬರೆವಣಿಗೆಯನ್ನು ಮುಂದೆ ಚಿತ್ರಲಿಪಿ, ಸಾಮಾನ್ಯ ಲಿಪಿ ಮತ್ತು ಗ್ರೀಕ್ ಲಿಪಿಯಲ್ಲಿ ಬರೆದಿರುತ್ತಾರೆ. ರಾಸೆಟ್ಟ ಶಿಲಾಲಿಪಿ ಇಂತಹದು. ಕ್ರಿ.ಶ.ಐದನೆಯ ಶತಮಾನದ ವರೆಗೆ ಈ ಲಿಪಿ ಬಳಕೆಯಲ್ಲಿದ್ದು ಮುಂದೆ ಗ್ರೀಕ್ ಲಿಪಿ ಬಳಕೆಗೆ ಬಂದು, ಈಜಿಪ್ಟ್ ಭಾಷೆಯ ಉಚ್ಚಾರ




ಚಿತ್ರಲಿಪಿ ಶಾಸನ




ಈಜಿಪ್ಟ್ ಮತ್ತು ಕಾರಿಯನ್ ದ್ವಿಭಾಷಾ ಶಾಸನ



ಹಿಂದಿನ ಶಾಸನದ ಚಿತ್ರಲಿಪಿ ರೂಪ



ಪಪೈರಸ್ ಮೇಲೆ ಬರೆದಿರುವ ಧಾರ್ಮಿಕಲಿಪಿ (ಕೃಪೆ : ಜೆ.ಆರ್.ಎ.ಎಸ್. ೧೯೨೯)




ಹೆರಟಿಕ್ ಲಿಪಿಯ ಮೂಲವಾದ ಚಿತ್ರಲಿಪಿ (ಕೃಪೆ : ಜೆ.ಆರ್.ಎ.ಎಸ್. ೧೯೨೯)

ಬರೆಯಲು ಅಸಾಧ್ಯವಾದ ಕಡೆ ಕೋಪ್ಟಿಕ್ ಲಿಪಿಯಾಗಿ ಮಾರ್ಪಾಡಾಯಿತು. ಈ ಬರೆವಣಿಗೆಯೂ ಸಹ ಅಡ್ಡಡ್ಡವಾಗಿದ್ದು ಬಲದಿಂದ ಎಡಕ್ಕೆ ಬರೆದಿದ್ದಾರೆ.

ಕ್ರೈಸ್ತಧರ್ಮವು ಈಜಿಪ್ಟಿಗೆ ಕಾಲಿಟ್ಟ ಮೇಲೆ ಕ್ರೈಸ್ತಧರ್ಮದ ಪ್ರಸರಣದ ಜೊತೆಗೆ ಈಜಿಪ್ಟಿಯರು ಗ್ರೀಕ್ ಲಿಪಿ ಬಳಸುತ್ತಾರೆ. ಇಲ್ಲಿಂದ ಮುಂದೆ ಪ್ರೋತ್ಸಾಹವಿಲ್ಲದೆ ಈಜಿಪ್ಟಿನ ಪ್ರಾಚೀನ ಲಿಪಿಗಳು ಕಣ್ಮರೆಯಾದವು.

ಮೆಸಪೊಟೋಮಿಯ

ಮೊನಚು ಲಿಪಿ (Cuneiform) : ಈ ಅಕ್ಷರಗಳು ಮೊಳೆಯಂತೆ ತಲೆ ದಪ್ಪದಾಗಿ ಮುಂದೆ ಮೊನಚಾಗಿರುವುದರಿಂದ ಈ ಲಿಪಿಗೆ ಮೊನಚು ಲಿಪಿ ಎಂಬ ಹೆಸರು ಬಂದಿದೆ. ಸುಮಾರು ಕ್ರಿ.ಶ.೧೭೦೦ರಲ್ಲಿ 'ಥಾಮಸ್ ಹೈಡ್' ಎಂಬುವವನು ಈ ಲಿಪಿಗೆ ಲತಿನ ಭಾಷೆಯಲ್ಲಿ ಈ ಪದವನ್ನು ಬಳಸಿದ. ಲತಿನ ಭಾಷೆಯಲ್ಲಿ cuneus ಎಂದರೆ 'ಮೊನಚಾದ', forma ಎಂದರೆ 'ರೂಪ' ಎಂದು ಅರ್ಥ.




ಮೊನಚು ಲಿಪಿಯ ಉಗಮ ಮತ್ತು ವಿಕಾಸ ಕೃಪೆ : Nicholos Post Gale

ಮೊನಚು ಲಿಪಿಯು ಎಂದು ಉದಿಸಿತು ಎಂಬುದು ನಿರ್ಧಾರವಿಲ್ಲ, ಆದರೂ ಕ್ರಿ.ಪೂ.೪೦೦೦ ವರ್ಷಗಳಲ್ಲಿಯೇ ಇದು ಪ್ರಚಲಿತದಲ್ಲಿತ್ತು. ಈ ಲಿಪಿಯು ಸೆಮೆಟಿಯ ಅಥವಾ ಇಂಡೋ-ಯುರೋಪಿಯನ್ ಭಾಷೆಯನ್ನು ಮಾತನಾಡದ ಒಂದು ರೀತಿಯ ಸ್ಥಳೀಯ ಮಿಶ್ರಭಾಷೆಯನ್ನು (agglutinative) ಮಾತನಾಡುತ್ತಿದ್ದ ಸುಮೇರಿಯನ್ನರ ಶೋಧವಾಗಿದೆ. ಆದರೂ ಈ ಗೆರೆ ಗೆರೆಯ ರೇಖಾಲಿಪಿಯು ಎಲಾಮೈಟರಲ್ಲಿ ಹಾಗೂ ಸಿಂಧೂ ಲಿಪಿಯಲ್ಲಿಯೂ ಕಾಣಬರುತ್ತದೆ. ಈ ಲಿಪಿಗಳು ಮೊನಚಾಕಾರದ ಲಿಪಿಯ ಮೇಲೆ ಪ್ರಭಾವ ಬೀರಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಅದು ಏನೇ ಇದ್ದರೂ ಇದರ ಮೂಲ ಜಟಿಲವಾಗಿದೆ.

ಆರಂಭದ ಈ ಮೊನಚಾಕಾರದ ಲಿಪಿಯನ್ನು ಮೊದಲು ಮೆಸಪೊಟೋಮಿಯಾದ ವರ್ಕ (Ruk or warka) ಎಂಬ ಸ್ಥಳದಲ್ಲಿ ಕಂಡುಹಿಡಿಯಲಾಯಿತು. ಇದನ್ನು 'ವರ್ಕ ಪೀರಿಯಡ್' ಎಂದು ಕರೆಯಲಾಗಿದೆ. ಈ ಸ್ಥಳದಲ್ಲಿ ದೊರೆತ ಅನೇಕ ಮುದ್ರೆಗಳಲ್ಲಿ ಚಿತ್ರಗಳನ್ನು ಹೋಲುವ ರೇಖಾ ಗೆರೆಗಳಿವೆ. ಈ ಚಿತ್ರಗಳು ಮೊನಚಾಕಾರದ ಬರವಣಿಗೆಯನ್ನು ಹೊಂದಿಲ್ಲ, ಈ ಚಿತ್ರಗಳು ಸಜೀವ ಮತ್ತು ನಿರ್ಜೀವ ವಸ್ತುಗಳ ಚಿತ್ರಗಳನ್ನು ಹೊಂದಿದ್ದವು. ಈ ಚಿತ್ರಗಳು ನಾಜೂಕಾಗಿಲ್ಲದೆ ಬೆಳೆಯುವ ಹಂತದಲ್ಲಿದ್ದು ಬಹುಶಃ ಸುಮೇರಿಯಾ ಭಾಷೆಗೆ ಬಳಸಿರುತ್ತಾರೆ.

ಎರಡನೆಯ ಹಂತದಲ್ಲಿ ಈ ಚಿತ್ರಚಿಹ್ನೆಗಳು ಸಂಕ್ಷಿಪ್ತ ಅರ್ಥವನ್ನು ನಿರೂಪಿಸುತ್ತವೆ. ಉದಾಹರಣೆಗೆ ಸೂರ್ಯನನ್ನು ಪ್ರತಿನಿಧಿಸುವ ವೃತ್ತಾಕಾರದ ಚಿಹ್ನೆಯು ಹಗಲು ಮತ್ತು ಸಮಯ



ಡೇರಿಯಸ್ಸನ ಮೂರುಲಿಪಿಯ ಚಿನ್ನದ ಶಾಸನ

ಕೃಪೆ : JRAS : 1926

ಎಂಬ ಅರ್ಥಗಳನ್ನು ನೀಡಬಲ್ಲದು. ಈ ಹಂತದಲ್ಲಿ ಬಳಸಿರುವ ಲಿಪಿಯನ್ನು ಭಾವಲಿಪಿಯೆಂದು ಕರೆಯಬಹುದಾಗಿದೆ. ಈ ಹಂತದಲ್ಲಿ ಚಿತ್ರಲಿಪಿಗಳು ಕೇವಲ ವಸ್ತುಗಳನ್ನಷ್ಟೇ ನಿರ್ದೇಶಿಸದೆ, ಅದಕ್ಕೆ ಸಂಬಂಧಿಸಿದ ಇತರ ಅರ್ಥಗಳನ್ನೂ ಧ್ವನಿಸಿರುವುದಲ್ಲದೆ ಭಾಷಾಧ್ವನಿ ಉಚ್ಚಾರಾಂಶವನ್ನೂ ಧ್ವನಿಸಿವೆ. ಹೀಗಾಗಿ ಇವು ಉಚ್ಚಾರಾಂಶ ಚಿತ್ರಲಿಪಿಯಾಗಿ ಮಾರ್ಪಾಟಾಗಿದೆ. ಆದರೂ ವರ್ಣಮಾಲೆಯ ಯಾವ ಸೂಚನೆಗಳನ್ನೂ ಇವು ಸೂಚಿಸುತ್ತಿಲ್ಲ.

ಪ್ರಾಚೀನ ಪರ್ಷಿಯಾ

ದಾರಯವಉಶ್ ಖ್ಷಾಯತಿಯ ವಜರ್ಕ ಖ್ಷಾಯತಿಯ ಕ್ಷಾಯತಿಯಾ ನಾಮ್
ಖ್ಷಾಯತಿಯ ದಹ್ಯು ನಾಮ್ ವಿಶ್ತಾಶ್ಪಹ್ಯಾ ಪುಥ್ರ ಹಖಾಮನಿಶಿಯ ಥಾತಿಯ್
ದಾರಯವ ಉಶ್ ಖ್ಷಾಯತಿಯ ಇ ಮ ಕ್ಷ ಸ್ರಮ್ ತ್ಸ ಅದಮ್
ದಾರಯಮಿಯ್ ಹಕ ಸಕಬಿಶ್ ತ್ಯಾಯ್ ಷ್ಪರ ಸುಗ್ದಮ್
ಮತ ಯಾಅತಾ ಅ ಕೂಶಾ ಹಚಿ ಹಿದುವ್ ಅಮತ ಯಾತಾ ಅ
ಸಪರ್ದಾ ತ್ಯಾಮಿಯ್ ಅಹುರಮಜ್ದಾ ಪ್ರಾಬರ ಹ್ಯ
ಮತಿಶ್ತಾ ಮಾ ಮ್ ಅಉರ ಮಜ್ದಾ ಪಾತೂಯ್ ಉತಾಮ್ಯೆಯ್
ಪೀತಮ್

ನೂತನ ಎಲಮೈಟ್

ದ-ರಿ-ಇಅ- ಮ- ಉ- ಇಶ್ ಸುನ್‌ಕುಕ್ ಇರ್-ಶ-ರ ಸುನ್ ಕುಕ್
ಸುನ್‌ಕುಕ್-ಇಪ್-ವ ಸುನ್ ಕುಕ್ ದ-ಅ-ಹು-ಇಶ್-ಬೆ- ನ
ಮಿ-ಇಶ್-ದ-ಅಶ್-ಬ ಶ-ಅಕ್-ರಿ [ಹ-ಕ-ಮನ್ ನು
ಇಶ್-ಶಿ- ಇಅ ದ- ರಿ- ಇ ಅ- ಮ- ಉ- ಇಶ್ ಸುನ್ ಕುಕ್ ನ-
ಅನ್-ರಿ ಸುನ್ ಕುಕ್- ಉಮ್- ಮೀ ಅಪ್- ಪ ಉ ಮರ್- ರಿ- ರ
ಶ-ಅಕ್- ಕಬೆ-ಇಕ್- ಕಿ- ಮರ್ ಅಕ್- ಕ- ಬೆ
ಕು-ಇಕ್- ದ -ಮಿ- ಉದ್- ದು- ಮ [ಕು- ಇಶ್- ಕು- ಶ- ಅ- ಇಅ
ಹಿ-ಇನ್- ದು- ಇಶ್- ಮರ್- ಕು- ಇಶ್- ಶ್‌ಪರ್- ದ- ಅಪ್-ಪ
[ಅನು]-ರ-ಮಸ್-ದ ಉ-ದು- ನು- ಇಶ್- ದ-ಅಕ್-ಕ ಇರ್- ಶ-ರ
[ಅನ್- ನ- ಅಪ- ಪುನ್- ನ ಉ] (ಅನು) ಉ- ರ- ಮಸ್ದ ಉನ್ದ್‌ನು
-ಇಶ್-ಗಿ-ಇಶ್- ನಿ ಕು-ಉದ್- ದಬ್- ವೆಲ್ಮನ್ನು ಚ್ಯ

ಬ್ಯಾಬಿಲೋನಿಯ ಪಾಠ

ದ-ಅ-ರಿ-ಇಅ-ಮಶ್ ಶರ್ರು ರಬೂ ಶರ್ ಶರ್ರಾನಿ

ಸರ್‌ಮತತಿ ಅಪಿಲ್ ಉಶ್-ತ-ಅಸ್-ಪ ಅಹ-ಮ-ನಿಸ್-ಸಿ

ದ-ಅ-ರಿ-ಇ ಅ-ಮುಸ್ ಶರ್ರು ಇ-ಗಬ್-ಬಿ-ಶರ್ರು-ಉ-

ತು ಅ-ಗ-ಅ-ತ ಶ ಅನ-ಕು ಕು-ಉಲ್-ಲ-ಕ-ಉಲ್-ತು

(ಮತ್) ಗಿ-ಮಿರ್-ರಿ ಶನಿ-ದಿರ್-ತುಮ್ (ಮತ್)

ಸು-ಉಗ್-ದು ಅ-ದಿ-ಇ-ಮತ್-ಕು-ಉ-ಶು-ಉಲ್-ತು

(ಮತ್) ಇನ್-ದು-ಉ ಅ-ದಿ-ಇ-ಮತ್ ಸ-ಪರ್-ದ


ಶ-ಇಲು-ಅ-ಹು-ಉರ್-ಮ-ಅಜ್-ದ-ಇದ್-ದಿ-ನು

ಶರ-ಬು-ಉಅಲ್-ಲ-ಇಲನಿ(ಇಲು)ಅ-ಹು-ಉರ್-ಮ


ಅಜ್-ದ ಅನ-ಕುಪ ಲಿ-ಇಷ್-ಷುರ್-ಅನ್-ನಿ ಇತ್-ತಿ

ಇಲನಿ-ಉಅ-ನ ಬಿತಿ- ಇಅ

ಡೇರಿಯಸ್ಸನ ಶಾಸನದ ಕನ್ನಡ ಲಿಪ್ಯಂತರ



ಡೇರಿಯಸ್ಸನ ಕಾಲದ ಮೊಳೆ ಅಕ್ಷರಗಳ ವರ್ಣಮಾಲೆ



ಕೃಪೆ : Select Inscriptions Vol I, plate II & III

ಡೆರಿಯಸ್ಸನ ಪರ್ಷಿಯ ಭಾಷೆ ಮತ್ತು
ಮೊಳೆ ಅಕ್ಷರದ ಶಾಸನ

ಈ ಮೊನಚು ಲಿಪಿಯ ಉಚ್ಚಾರವು ಬಹುವೈವಿಧ್ಯವಾದದು. ಕೆಲವು ಚಿಹ್ನೆಗಳು ವಿವಿಧ ಉಚ್ಚಾರಗಳನ್ನು ನೀಡಿದರೆ, ಕೆಲವು ಒಂದೇ ಬಗೆಯ ಉಚ್ಚಾರವನ್ನೇ ಹೊಂದಿವೆ (homophone). ಚಿತ್ರಗಳು ಮುಂದಿನ ಹಂತದಲ್ಲಿ ಸರಳೀಕರಣಗೊಂಡು ಸುಲಭವಾಗಿ ಗುರುತಿಸುವಂತೆ ರೇಖಾಚಿತ್ರಗಳಾಗಿ ಮಾರ್ಪಾಟಾದವು. ಈ ರೇಖಾಚಿತ್ರಗಳು ಮೊದಲಿಗಿಂತ ಹೆಚ್ಚಿನ ಬೆಳವಣಿಗೆಯನ್ನು ತೋರಿಸಿರುತ್ತವೆ. ರೇಖಾಚಿತ್ರಕ್ಕೆ ಮಾರ್ಪಡಿಸಿಕೊಳ್ಳುವಾಗ ಚಿತ್ರಗಳನ್ನು 90^0 ಗೆ ತಿರುಗಿಸಿಕೊಂಡಿರುತ್ತಾರೆ. ಅಂದರೆ ಅಡ್ಡಕ್ಕಿದ್ದ ಚಿತ್ರಗಳನ್ನು ಉದ್ದಕ್ಕೆ ತಿರುಗಿಸಿಕೊಂಡಿರುತ್ತಾರೆ. ಮುಂದೆ ರೇಖಾಗೆರೆಗಳಿಂದ ಮೊನಚಾದ ರೇಖೆಗಳಿಗೆ ಬದಲಾವಣೆಯಾಗುತ್ತದೆ. ಈ ಬದಲಾವಣೆಯನ್ನು ಲಿಪಿಕಾರರು ಉದ್ದೇಶಪೂರ್ವಕ ಮಾಡಿದ್ದಲ್ಲ, ಆಕಸ್ಮಿಕವಾಗಿ ಮಾಡಿದ್ದು.

ಸುಮೇರಿಯರು ಮಣ್ಣನ್ನು ಬರೆವಣಿಗೆಯ ಸಾಧನವಾಗಿ ಬಳಸಿರುತ್ತಾರೆ. ಮಣ್ಣಿನಲ್ಲಿ ಹಲಗೆಗಳನ್ನು ಮಾಡಿ, ಅದರ ಮೇಲೆ ಮೊನಚಾಕಾರದಲ್ಲಿ ಬರೆದು ಒಣಗಿಸಿ ಸುಟ್ಟಿರುತ್ತಾರೆ. ಹೀಗಾಗಿ ಅವು ಇಂದಿಗೂ ಉಳಿದು ಬಂದಿವೆ. ಮಣ್ಣಿನ ಹಲಗೆಗಳ ಮೇಲೆ ಕೊರೆಯುವಾಗ ಬರೆವಣಿಗೆಯಲ್ಲಿನ ವಕ್ರರೇಖೆಗಳು, ವೃತ್ತಗಳು, ಉದ್ದವಾದ ಗೆರೆಗಳು – ಇವುಗಳಲ್ಲಿ ತುಂಡಾದ, ನೇರವಾದ, ಸಮಗೆರೆಗಳಾಗಿ, ಕೋನಾಕಾರದ ಗೆರೆಗಳಾಗಿ ಪರಿವರ್ತನೆಯಾಗುತ್ತವೆ. ಹೀಗಾಗಿ ಇವು ನೇರವಾದ ಗೆರೆಗಳ ರೂಪದಲ್ಲಿ ದಪ್ಪತಲೆಯನ್ನು ಹೊಂದಿ ಮೊಳೆಯಾಕಾರದಲ್ಲಿ ಮೂಡಿವೆ. ಆರಂಭದಲ್ಲಿ ಇದರ ಬರೆವಣಿಗೆ ಎಡದಿಂದ ಬಲಕ್ಕಿತ್ತು. ಈ ಲಿಪಿಯು ಮೊನಚಾಕಾರದ ಅನೇಕ ಲಿಪಿಗಳಿಗೆ ಮೂಲವಾಗುತ್ತದೆ.

ಅಸ್ಸೀರಿಯರು ಈ ಮೊನಚಾಕಾರದ ಲಿಪಿಗಳನ್ನು ಸರಳೀಕರಣಗೊಳಿಸುತ್ತಾರೆ. ಬರೆವಣಿಗೆಯ ಚಿಹ್ನೆಗಳನ್ನು ೫೭೦ಕ್ಕೆ ಇಳಿಸುತ್ತಾರೆ. ಮುಂದೆ ಈ ಅಸ್ಸೀರಿಯಾದ ಮೊನಚು ಲಿಪಿಯು ಉಚ್ಚಾರಾಂಶ ಲಿಪಿಯಾಗಿ ಮಾರ್ಪಾಟಾಗುತ್ತದೆ. ಈ ಮೊನಚು ಲಿಪಿಯನ್ನು ಮೊದಲು ಸುಮೇರಿಯರು ಬಳಸಿದರು. ಇದನ್ನು ಅವರು ಕಂಡುಹಿಡಿದರೋ ಇಲ್ಲವೋ ತಿಳಿಯದು. ಆದರೆ ಗೆರೆಗಳ ಚಿತ್ರಗಳನ್ನು ಬಳಸಿದವರು ಇವರೇ ಆಗಿರುತ್ತಾರೆ. ಇವರು ಮೆಸಪೊಟೋಮಿಯಾದ ಮೂಲ ನಿವಾಸಿಗಳೋ ಅಥವಾ ಹೊರಗಿನಿಂದ ಬಂದವರೋ ತಿಳಿಯದು. ಬಹುಶಃ ಕ್ರಿ.ಪೂ.೪೦೦೦ ವರ್ಷಗಳ ಹಿಂದೆ ಸೆಮೆಟಿಯರನ್ನು ಸೋಲಿಸಿ ರಾಜ್ಯ ಸಂಪಾದಿಸಿರಬೇಕು. ಮುಂದೆ ಇವರನ್ನು ಸೆಮೆಟಿಯರು ಸೋಲಿಸಿದರೂ ಸುಮೇರಿಯರಿಂದ ಲಿಪಿ, ಧಾರ್ಮಿಕ ಭಾಷೆ ಮುಂತಾದವನ್ನು ಪಡೆದಿರುತ್ತಾರೆ.

ಸುಮಾರು ೩೦೦೦ ಬರವಣಿಗೆಯ ಬಿಲ್ಲೆಗಳು ದೊರೆತಿದ್ದು, ಅವು ಕ್ರಿ.ಪೂ.೨೦೦೦ಕ್ಕೆ ಸೇರಿದುದವಾಗಿವೆ. ಇವುಗಳಲ್ಲಿ ದಾಖಲೆಗಳು, ವ್ಯವಹಾರಿಕ ವಿಷಯಗಳು, ನ್ಯಾಯಕ್ಕೆ ಸಂಬಂಧಿಸಿದ ತೀರ್ಪುಗಳು, ಧಾರ್ಮಿಕ ವಿಷಯಗಳು ಉಲ್ಲೇಖಗೊಂಡಿವೆ. ಕ್ರಿ.ಪೂ.೧೮೦೦ರ ವರೆಗೆ ಈ ಭಾಷೆ ಪ್ರಚಲಿತದಲ್ಲಿರುತ್ತದೆ.

ಬಾಬಿಲೋನಿಯರು ಮತ್ತು ಅಸ್ಸೀರಿಯರು

ಕ್ರಿ.ಪೂ.೩೦೦೦ ವರ್ಷಗಳ ಹಿಂದೆ ಸುಮೇರಿಯರು ತಮ್ಮ ಲಿಪಿಯನ್ನು ಸೆಮೆಟಿಯರಿಗೆ ವರ್ಗಾಯಿಸಿದರು. ಇವರು ಯೂಫ್ರಟೀಸ್–ಟೈಗ್ರಿಸ್ ನದಿ ಬಯಲಿನಲ್ಲಿದ್ದವರು. ಇವರು ಬಳಸಿದ ಮೊನಚು ಲಿಪಿಯನ್ನು ವಿದ್ವಾಂಸರು ಆರು ಹಂತಗಳಲ್ಲಿ ಗುರುತಿಸುತ್ತಾರೆ.

೧. ಪ್ರಾಚೀನ ಅಕ್ಕಡರ ಕಾಲ – ಸು.ಕ್ರಿ.ಪೂ.೨೫೦೦–೨೦೦೦.
೨. ಬ್ಯಾಬಿಲೋನಿಯರ ಆರಂಭ ಕಾಲ – ಸು.ಕ್ರಿ.ಪೂ.೧೯೦೦–೧೭೦೦.
೩. ಕಾಸ್ಸೈಟರ ಕಾಲ – ಸು.ಕ್ರಿ.ಪೂ.೧೭೦೦–೧೧೭೧.
೪. ಅಸ್ಸೀರಿಯರ ಕಾಲ – ಸು.ಕ್ರಿ.ಪೂ.೧೨೦೦–೭೦೦.
೫. ನೂತನ ಬಾಬಿಲೋನಿಯರು – ಸು.ಕ್ರಿ.ಪೂ.೬ ನೆಯ ಶತಮಾನ.
೬. ಪರಿಷ್ಕರಣ ಹಾಗೂ ಮೊನಚು ಅಕ್ಷರದ ಅಂತ್ಯ – ಸು.ಕ್ರಿ. ಪೂ.೩೦೦–೧೦೦.

ಈ ಕಾಲಗಳಲ್ಲಿ ಕ್ರಿ.ಪೂ.೧೯ನೆಯ ಶತಮಾನದಲ್ಲಿ ಹಮ್ಮುರಬಿಯು ಈ ಲಿಪಿಯನ್ನು ಬಳಸಿದ್ದಾನೆ. ಹಮ್ಮುರಬಿಯ ಶಾಸನ ಈ ಕಾಲದ ಮಹತ್ವವಾದ ದಾಖಲೆ. ವಿಜ್ಞಾನ, ಗಣಿತ, ನ್ಯಾಯ, ಚರಿತ್ರೆ ಮುಂತಾದವನ್ನು ಈ ಶಾಸನಗಳಲ್ಲಿ ಬರೆದಿರುತ್ತಾರೆ. ಅಸ್ಸಿರಿಯರು ತಮ್ಮ ಎಲ್ಲಾ ವಿವರಗಳನ್ನು ಆರು, ಏಳು, ಎಂಟು, ಹತ್ತು ಮುಖಗಳುಳ್ಳ ಸಿಲಿಂಡರ್‌ಗಳ ಮೇಲೆ ಬರೆದಿರುತ್ತಾರೆ. ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿ ಅಲ್ಲೆಲ್ಲಾ ಈ ಲಿಪಿ (ಬರೆಹ)ಗಳನ್ನು ಬಳಸಿರುತ್ತಾರೆ.

ಎಲಮಿಯರು

ಇವರು ಟೈಗ್ರಿಸ್ ನದಿಯ ದಕ್ಷಿಣದಲ್ಲಿ ಪೂರ್ವಕ್ಕೆ ಹಾಗೂ ಪರ್ಷಿಯಾ ಖಾರಿಯ ಉತ್ತರಕ್ಕೆ ಇದ್ದವರು. ಇವರ ಭಾಷೆಯು ಸೆಮೆಟಿಯವೂ ಅಲ್ಲ ಹಾಗೂ ಇಂಡೋ–ಯುರೋಪ್ ಭಾಷೆಗೂ ಸೇರಿರದೆ, ಕಕೇಶಿಯಾ ಭಾಷೆಯ ಕಲಬೆರಕೆಯ ಭಾಷೆಯಾಗಿತ್ತು.

೨೦ನೆಯ ಶತಮಾನದಲ್ಲಿ ಮೊನಚು ಲಿಪಿಯನ್ನು ಓದಿದ್ದೂ ಕುತೂಹಲಕಾರಿ ಅಷ್ಟೇ ಅಲ್ಲದೆ ಬಹು ದೊಡ್ಡ ಸಾಧನೆಯಾಗಿದೆ. ಮೊದಲು ಪರ್ಷಿಯಾದ ಪ್ರಾರಂಭಿಕ ಲಿಪಿ ಅಂದರೆ ಅಂತ್ಯಕಾಲದ ಮೊನಚು ಲಿಪಿಯನ್ನು ಓದಲಾಯಿತು. ಅನಂತರ ನೂತನ ಎಲಮೈಟ್ ಲಿಪಿಯನ್ನು ಓದಿದರು. ಅನಂತರ ಬ್ಯಾಬಿಲೋನಿಯ ಲಿಪಿಯನ್ನು ಅನಂತರ ಉಳಿದ ಲಿಪಿಗಳನ್ನು ಓದಿದರು. ಕ್ರಿ.ಶ.೧೮೦೨ರಲ್ಲಿ ಜರ್ಮನಿಯ ಹೈಸ್ಕೂಲು ಉಪಾಧ್ಯಾಯನಾದ ಜಿ.ಎಫ್. ಗ್ರೋಟ್‌ಫೆಂಡ್ (Grotefend) ಎಂಬುವವನು ಈ ಲಿಪಿಗಳನ್ನು ಓದಲು ಪ್ರಾರಂಭಿಸಿದ. ಆದರೆ ಕ್ರಿ.ಶ.೧೮೪೬ರಲ್ಲಿ ಸರ್. ಹೆನ್ರಿ ರಾಲಿನ್‌ಸನ್ (Henri Rawlinson) ಬಿಹಿಸ್ತಾನ್‌ದಲ್ಲಿ ದೊರೆತ ಪ್ರಾಚೀನ ಪರ್ಷಿಯಾ ಭಾಷೆಯ ತ್ರಿಭಾಷಾ ಶಾಸನವನ್ನು ಪೂರ್ಣವಾಗಿ ಓದಿ ಅನುವಾದಿಸಿದ. ಮುಂದೆ ಎಲ್ಲ ಲಿಪಿಗಳನ್ನು ಓದುವ ರಹಸ್ಯವನ್ನು ಬಿಡಿಸಿದ.

ಕ್ರೀಟ್ ಲಿಪಿ

ಯುರೋಪ್ ಖಂಡದ ಕ್ರೀಟ್ ದೇಶ ಮಾತ್ರ ಈಜಿಪ್ಟ ಅಥವಾ ಮೆಸಪೊಟೋಮಿಯಾ ನಾಗರೀಕತೆಗಳಿಗೆ ಸಮಾನಾಂತರವಾಗಿ ಬೆಳೆದ ನಾಗರೀಕತೆಯಾಗಿದೆ. ಗ್ರೀಕ್ ಸಂಸ್ಕೃತಿಯ ಮೇಲೆ ಅತಿ ಹೆಚ್ಚಿನ ಪ್ರಭಾವ ಬೀರಿರುವ ಇದರ ಆಡಳಿತಗಾರರು ಯಾರು? ಇವರು ಯಾವ ಜನಾಂಗಕ್ಕೆ ಸೇರಿದ್ದರು? ಮುಂತಾದ ವಿವರಗಳು ಹೆಚ್ಚಿಗೆ ತಿಳಿದು ಬಂದಿಲ್ಲ.

ಈ ನಾಗರೀಕತೆಯ ಬರೆವಣಿಗೆಯ ಕುರುಹಾಗಿ ಸೋಪುಕಲ್ಲಿನ ಮುದ್ರೆಗಳು, ದಂತದ ಮೇಲೆ ಬರೆದಿರುವ ಬರೆಹಗಳು ದೊರೆತಿವೆ. ಈ ಮುದ್ರೆಗಳು ಶಂಖಾಕೃತಿ ಹಾಗೂ ಮೂರು

ಮುಖವುಳ್ಳವುಗಳಾಗಿವೆ. ಇವುಗಳ ಮೇಲೆ ಬರಹವಿದೆ. ಆದರೆ ಇವು ಓದುವ ಲಿಪಿಯೋ ಅಲ್ಲವೋ ಎಂಬ ಬಗ್ಗೆ ಅನುಮಾನವಿದೆ. ಲಿಪಿ ಚಿಹ್ನೆಗಳು ಮಾನವನ ಚಿತ್ರ, ಅವನ ಅಂಗಾಂಗಗಳು, ತೋಳುಗಳು, ಸಾಕು ಪ್ರಾಣಿಗಳು, ಗೋಧಿ, ಖಗೋಳ ಚಿಹ್ನೆ ಮುಂತಾದವನ್ನು ಒಳಗೊಂಡಿವೆ. ಈ ಲಿಪಿಯ ಕಾಲ ಸು.ಕ್ರಿ.ಪೂ.೩೦೦೦.

ಸು.ಕ್ರಿ.ಪೂ.೧೭೦೦ರ ಸುಮಾರಿಗೆ ಈ ಚಿತ್ರಲಿಪಿ ರೇಖಾಲಿಪಿಯಾಗಿ ಮಾರ್ಪಾಟಾಗುತ್ತದೆ. ಈ ಶಾಸನಗಳನ್ನು ಶಿಲೆ, ಲೋಹ ಹಾಗೂ ಮಣ್ಣಿನ ಮೇಲೆ ಬರೆಯಲಾಗಿದೆ. ಕೆಲವು ಕ್ರೀಟ್ ದೇಶದ ಹೊರಗೂ ದೊರೆತಿವೆ. ಇವುಗಳ ಬರವಣಿಗೆ ಎಡದಿಂದ ಬಲಕ್ಕೆ. ಇಂದಿಗೂ ಓದಲಾಗದ ಈ ಲಿಪಿಯು ಬಹುಶಃ ಭಾವಲಿಪಿಯಾಗಿದ್ದಿರಬೇಕು.

ಹಿತ್ತೈತರ ಲಿಪಿ

ಹಿತ್ತೈತರು ಏಷಿಯ ಮೈನರ್ ಮತ್ತು ಉತ್ತರ ಸಿರಿಯಾ ಪ್ರದೇಶದಲ್ಲಿ ವಾಸವಾಗಿದ್ದ ಜನಾಂಗ. ಕ್ರಿ.ಪೂ.೧೪೦೦-೧೨೦೦ರ ವರೆಗೆ ಹಿಂದೆ ಇದ್ದ ಪಾಲಸ್ತೇನಿಯರು ಮತ್ತು ಕನಾನೈಟರಿಗೆ ಸಮೀಪದ ಜನಾಂಗ. 'ಬೋಗಾಜ್‌ಕಾಯ್' ಇವರ ಪ್ರಾಚೀನ ರಾಜಧಾನಿಯಾಗಿದ್ದು, ಈ ನಾಗರೀಕತೆಯನ್ನು ಅರಿಯಲು ಅನೇಕ ಅವಶೇಷಗಳು ಇಲ್ಲಿ ದೊರೆತಿವೆ. ಇವರಿಗೆ ಸಂಬಂಧಿಸಿದ ಅನೇಕ ಶಾಸನಗಳು ಅಕಾಡಿಯಾ ಭಾಷೆ ಮತ್ತು ಲಿಪಿಯಲ್ಲಿ ದೊರೆಯುತ್ತವೆ. ಆದರೆ ಹೆಚ್ಚಿನವು ಹಿತ್ತೈತರ ಭಾಷೆ ಮತ್ತು ಲಿಪಿಯಲ್ಲಿ ಬರೆಯಲಾಗಿವೆ. ಇವರ ಭಾಷೆಯು ಇಂಡೋ-ಯೂರೋಪಿಯ ಭಾಷಾ ಗುಂಪಿಗೆ ಸೇರಿದೆ.


ಹಿತ್ತೈತರ ಆರಂಭಿಕ ಲಿಪಿಯು ಚಿತ್ರಲಿಪಿಯಾಗಿದ್ದು ಸು.ಕ್ರಿ.ಪೂ.೧೫೦೦ರ ವೇಳೆಗೆ ಈ ಲಿಪಿಯ ಬಳಕೆ ಆರಂಭವಾಗಿರುತ್ತದೆ. ಬಹಳಷ್ಟು ಶಾಸನಗಳು ಉತ್ತರ ಸಿರಿಯಾದ ಕಾರ್ಚೆಮಿಷ್, ಹಮತ್, ಅಲೆಪ್ಪೋ ಸ್ಥಳಗಳಲ್ಲಿ ದೊರೆತಿವೆ. ಹೆಚ್ಚಿನ ಶಾಸನಗಳು ಉಬ್ಬುಕೆತ್ತನೆ ಅಥವಾ ಕೊರೆದವುಗಳಾಗಿವೆ. ಶಾಸನಗಳು ಬಲ ಮೇಲ್ಭಾಗದಿಂದ ಆರಂಭವಾಗಿ ಎಡಕ್ಕೆ ಬರುತ್ತದೆ. ಮುಂದಿನ ಸಾಲು ಎಡಗಡೆಯಿಂದ ಬಲಗಡೆಗೆ ಹರಿಯುತ್ತದೆ. ನಂತರದ ಸಾಲು ಬಲದಿಂದ ಎಡಕ್ಕೆ ಬರುತ್ತದೆ. (ಹಾವಿನ ನಡಿಗೆಯಂತೆ Boustrophedon) ಕೆಲವು ವೇಳೆ ಬಲದಿಂದ ಎಡಕ್ಕೆ, ಎಡದಿಂದ ಬಲಕ್ಕೆ ಬರೆಯಲಾಗಿದೆ. ಲಿಪಿಗಳು ಅಥವಾ ಚಿತ್ರಗಳು ಸಾಲಿನ ಆರಂಭದ ಕಡೆಗೆ ಮುಖ ಮಾಡಿರುತ್ತವೆ. ಈ ಬರೆಹದಲ್ಲಿ ಸುಮಾರು ೨೨೦ ಚಿಹ್ನೆಗಳಿರುತ್ತವೆಯಾದರೂ, ಮೆರಿಗ್ಗಿಯವರ ಪ್ರಕಾರ ಈ ಬರವಣಿಗೆಯಲ್ಲಿ ೪೧೯ ಚಿಹ್ನೆಗಳಿದ್ದು ಇವು ಭಾಗಶಃ ಭಾವಲಿಪಿ, ಭಾಗಶಃ ಭಾಷಾಧ್ವನಿ ನಿರೂಪಕ (phonetic)ವಾಗಿವೆ. ಹೆಚ್ಚಿನವು ಭಾವಲಿಪಿ ವಸ್ತುನಿರೂಪಕದವು (ideograms). ಗೆಲ್ಬ್ ಅವರ ಪ್ರಕಾರ ಈ ಲಿಪಿಗಳಲ್ಲಿ ೫೭ ಚಿಹ್ನೆಗಳು ಉಚ್ಚಾರಾಂಶ ಲಿಪಿಗಳಾಗಿವೆ.

ಹಿತ್ತೈತ್ ಲಿಪಿಗಳು ಚಿತ್ರಲಿಪಿಗಳಾದರೂ ಯಾರಿಂದ ಪಡೆದರೆಂಬ ಬಗ್ಗೆ ನಿಖರತೆಯಿಲ್ಲ. ಈಜಿಪ್ಟ್ ನಾಗರೀಕತೆಯಿಂದ ಪ್ರಭಾವಿತರಾದರೆಂದರೆ ಇಬ್ಬರಿಗೂ ನೇರವಾದ ಸಂಬಂಧಗಳಿಲ್ಲ. ಇನ್ನು ಕ್ರೀಟ್ ಚಿತ್ರಲಿಪಿಗೆ ಸ್ವಲ್ಪ ಸಾಮ್ಯವಿದ್ದಿರಬಹುದಾದರೂ ಇಬ್ಬರಿಗೂ ನೇರವಾದ ಸಂಬಂಧಗಳು ಕಾಣುತ್ತಿಲ್ಲ.

ಚೈನಾ ಲಿಪಿ

ಚೀನಾದೇಶದ ಲಿಪಿಗಳು ಪ್ರಾಚೀನ ಲಿಪಿಗಳಾಗಿದ್ದು ಇಂದಿಗೂ ಅವು ವಸ್ತುಸೂಚಕ ಚಿಹ್ನೆಗಳಾಗಿಯೇ ಉಳಿದಿವೆ. ಅಲ್ಲಿಂದ ಮುಂದಿನ ಹಂತಕ್ಕೆ ಬೆಳೆಯಲಿಲ್ಲ. ಚೀನಾಭಾಷೆಯು ಟಿಬೆಟೋ-ಚೀನಾ ಗುಂಪಿಗೆ ಸೇರಿದೆ. ಚೀನಾಭಾಷೆಯ ಪದವೊಂದು ಕ್ರಿಯಾಪದವಾಗಬಹುದು. ನಾಮಪದವಾಗಬಹುದು. ಗುಣವಾಚಕವಾಗಬಹುದು.

ಚೀನೀಯರ ಪರಂಪರಾಗತ ನಂಬಿಕೆಯಂತೆ ಮೂರು ಗೆರೆಗಳ ಧಾರ್ಮಿಕ ಗೆರೆಗಳ (spiritual trigrams) ಎಂಟು ಗುಂಪುಗಳಿಂದ ಚೀನಾ ಲಿಪಿ ಹುಟ್ಟಿದೆ. ಈ ಮೂರು ಗೆರೆಗಳುಳ್ಳ ಎಂಟು ಗುಂಪುಗಳನ್ನು 'ಪಕುಅ' ಎಂದು ಕರೆಯುತ್ತಾರೆ. ಈ ಎಂಟು ಚಿಹ್ನೆಗಳಿಗೆ ಒಂದೊಂದು ಅರ್ಥವನ್ನೂ ನೀಡಿರುತ್ತಾರೆ. ಈ ಚಿಹ್ನೆಗಳ ಜೊತೆಗೆ ಧಾರ್ಮಿಕ ಚಿಹ್ನೆಗಳ (ritual symbolism) ಮುದ್ರೆಗಳು ಈ ಲಿಪಿಯ ಉಗಮಕ್ಕೆ ಕೆಲಮಟ್ಟಿಗೆ ಕಾರಣವಾಗಿವೆ. ಈ ಲಿಪಿಯು ಪಕುಷೆನ್ (ಕ್ರಿ.ಶ.೨ನೇ ಶತಮಾನ)ನ ಕಾಲದಿಂದ ಇಂದಿಗೂ ಯಾವುದೇ ಬದಲಾಗಿಲ್ಲ.



ಚೀನಾ ಬರವಣಿಗೆಯ ಮೂಲಗೆರೆಗಳು


ಮೂಲ ಗೆರೆಗಳು

ಚೀನಾದ ಲಿಪಿಯನ್ನು ಯಾವುದೇ ಲಿಪಿಯಿಂದ ಪಡೆದದ್ದಲ್ಲ, ಹಾಗೂ ಯಾವುದೇ ಲಿಪಿಯಿಂದ ಲಿಪಿಗಳನ್ನು ಎರವಲು ಪಡೆದಿಲ್ಲ. ತನ್ನದೇ ಆದ ರೀತಿಯಲ್ಲಿ ಅದು ಬೆಳೆದಿದೆ. ಸು.ಕ್ರಿ.ಪೂ.೨೦೦೦ ವರ್ಷಗಳ ಹಿಂದೆಯೇ ಲಿಪಿ ಆರಂಭವಾಗಿತ್ತು.

ಔ-ಯಾಂಗ್ ಹಸಿಯು ಎಂಬುವವನು ಕ್ರಿ.ಶ.೧೧ನೆಯ ಶತಮಾನದಲ್ಲಿ ಜೀವಿಸಿದ್ದು 'ಚಿ-ಕು-ಲೊ-ಪೊ-ವೀ' ಎಂಬ ಪುಸ್ತಕವನ್ನು ಪ್ರಕಟಿಸಿರುತ್ತಾನೆ. ಇದರಲ್ಲಿ ಇವನು ಹಿಂದಿನಿಂದ ಇದ್ದ ಐದು ವಂಶಗಳ ಸುಮಾರು ೪೦೦ ಶಾಸನಗಳ ಟಿಪ್ಪಣಿ ಮಾಡಿರುತ್ತಾನೆ. ಚೀನಾದೇಶದಲ್ಲಿ ಶಾಸನಗಳನ್ನು ಹೆಚ್ಚಾಗಿ ಮರ, ಬಿದಿರು ಮೊದಲಾದವುಗಳ ಮೇಲೆ ಬರೆದಿದ್ದು, ಆ ದೇಶದ ಶೀತ ವಾತಾವರಣದಿಂದ ಬಹಳಷ್ಟು ಹಾಳಾಗಿವೆ. ಲೋಹದ ಮೇಲೆ, ಮಡಕೆಯ ಮೇಲೆ ಬರೆದಿರುವ ಶಾಸನಗಳು ಪ್ರಾಚೀನ ಕಾಲದಿಂದಲೂ ದೊರೆತಿವೆ. ಶಿಲಾಶಾಸನಗಳು ಇಲ್ಲವೆನ್ನಬಹುದು.

'ಯು' ಎಂಬ ಬಿಲ್ಲೆಯ ಮೇಲೆ ಬರೆದಿರುವ ಶಾಸನವು ಪ್ರಾಗೈತಿಹಾಸಿಕ ಲಿಪಿಗಳ ನಕಲಾಗಿದ್ದು ಇದು ಕ್ರಿ.ಪೂ.೧೮೦೦ಕ್ಕೆ ಸೇರುತ್ತದೆ. ಕ್ರಿ.ಪೂ.೮೨೭-೭೮೨ರ ವರೆಗೆ ಇದ್ದ ಹುಷು-ಅನ್ ರಾಜನ ಕಾಲದ ಶಾಸನಗಳು ಪೀಕಿಂಗ್‌ನ ಕನ್‌ಫ್ಯೂಷಿಯನ ದೇವಾಲಯದ ಬಳಿಯ ಕಂಬಗಳಲ್ಲಿವೆ. ಇವಲ್ಲದೆ ಕಂಚಿನ ಮೇಲೆ ಬರೆದಿರುವ ಶಾಸನಗಳು ಪತ್ತೆಯಾಗಿವೆ. ಇವುಗಳ

ಕಾಲವು ಷಾಂಗ್-ಯಿನ್ ವಂಶಕ್ಕೆ ಸೇರಿದ್ದು ಕೇವಲ ಹೆಸರುಗಳನ್ನೊಳಗೊಂಡಿವೆ. ನಂತರ ಕಾಲದ ಈ ಶಾಸನಗಳು ಉದ್ದವಾದ ಶಾಸನಗಳನ್ನೊಳಗೊಂಡಿವೆ.

ಮುಂದೆ ಪ್ರಾಚೀನ ನಗರವಾದ 'ಹಸಿಯೊತುನ್' ನಗರದಲ್ಲಿ ಉತ್ಖನನ ಮಾಡಿವಾಗ ಸುರಕ್ಷಿತವಾಗಿ ಕಾಪಾಡಿದ್ದ ಅನೇಕ ಶಾಸನಗಳು ದೊರೆತವು. ಅವು ಮೂಳೆಗಳ ಮೇಲೆ ಹಾಗೂ ಆಮೆಯ ಚಿಪ್ಪನ್ನು ಚೆನ್ನಾಗಿ ಉಜ್ಜಿ ಹೊಳಪು ನೀಡಿ ಅದರ ಮೇಲೆ ಬರೆದವವಾಗಿದ್ದವು. ಇವುಗಳ ಕಾಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದ್ದು, ವುತಿಂಗ್ (ಕ್ರಿ.ಪೂ.೧೩೨೪-೧೨೬೬)ನ ಕಾಲಕ್ಕೂ, ಕೆಲವು ಶಾಸನಗಳು ಪಾನ್ ಕೇಂಗ್ (ಕ್ರಿ.ಪೂ.೧೪೦೧-೧೩೭೪)ನ ಕಾಲಕ್ಕೆ ಸೇರಿದವುಗಳಾಗಿವೆಯೆಂದೂ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಮುಂದಿನ ಕಾಲದಿಂದ ಬೆಳವಣಿಗೆ ಪಡೆದ ಲಿಪಿ 'ಚಿನ್' ವಂಶದವರು ಸೃಷ್ಟಿಸಿದ 'ಲಿಷು' ಲಿಪಿಯ (ಈ ಲಿಪಿಯನ್ನು ಚಿಯಾಂಗ್ ವಿಯಾಓ ಸೃಷ್ಟಿಸಿದನೆಂದೂ ನಂಬಿಕೆ ಇದೆ.) ಬೆಳವಣಿಗೆಯಲ್ಲಿ ನಾಲ್ಕು ಬೇಧಗಳನ್ನು ಗುರುತಿಸುತ್ತಾನೆ. ಈ ಲಿಪಿಯು ಚೀನಾದ ಅನೇಕ ಪ್ರಾಚೀನ ಲಿಪಿಗಳಿಂದ ಆವಿಷ್ಕಾರವಾಗಿದ್ದು ೨೦೦೦ ವರ್ಷಗಳಿಂದ ಇಂದಿಗೂ ಹಾಗೆಯೇ ಇದೆ.

ಈ ಲಿಪಿಯ ಬೆಳವಣಿಗೆಯಲ್ಲಿ ಕಾಣುವ ಹಂತಗಳೆಂದರೆ –

೧. 'ಕಾಯ್‌ಶು' (Kaishu) (ಕಾರಕೂನರ ಕೈ) ಈ ಲಿಪಿಯನ್ನು ವಾಂಗ್ ಹಸಿಚಿನ್ ಕಂಡುಹಿಡಿದ.

೨. ತಾಓಷು (Tsaoshu) (ಹುಲ್ಲಿನ ರೀತಿಯದು) ಇದನ್ನು ಸುಮಾರು ಕ್ರಿ.ಪೂ.೨೦೦ದಲ್ಲಿ ಬಳಸಿರುತ್ತಾರೆ. ಇದನ್ನು ಕಲಿಯಲು ವಿಶೇಷ ಅಭ್ಯಾಸ ಬೇಕು.

೩. ಹ್ಸಿಂಗ್‌ಷು (Hsingshu) (ಬೇಗ ಬರೆಯುವ ಲಿಪಿ). ಸಾಮಾನ್ಯವಾದ ಬಳಕೆಯದು. ಮಧ್ಯಕಾಲದಲ್ಲಿ ಬೆಳೆಸಿಕೊಂಡಿದ್ದು.

೪. ಷುಂಗ್‌ತ್ಸು (Sungtzu) ಈ ಲಿಪಿಯು ಬಾಗುರೇಖೆಗಳಿಂದ ಕೂಡಿದ್ದು. ಇದನ್ನು ಶುಂಗ್ ವಂಶಸ್ಥರು (ಕ್ರಿ.ಶ.೯೬-೧೨೭೯) ಬಳಸಿರುತ್ತಾರೆ.

ಚೀನಾದ ಅನೇಕ ಪಂಡಿತರು ಕಾಲದಿಂದ ಕಾಲಕ್ಕೆ ತಮಗಿಂತ ಮೊದಲಿದ್ದ ಚಿಹ್ನೆಗಳ, ಚಿತ್ರಗಳ ಅರ್ಥವನ್ನು ವಿವರಿಸಿರುತ್ತಾರೆ. ಚೀನಾ ಲಿಪಿಯನ್ನು ಸುಧಾರಿಸಲು ಪ್ರಯತ್ನಿಸಿರುತ್ತಾರೆ.

ಚೀನಾದ ನಿಘಂಟುಕಾರರು ಚೀನಾದ ಲಿಪಿಯನ್ನು ಹೇಗೆ ಉಚ್ಚರಿಸಬೇಕು, ಬರೆಯಬೇಕು ಎಂಬ ಬಗ್ಗೆ ವಿವರಿಸಿರುತ್ತಾರೆ. ಈ ವಿಂಗಡಣೆಯನ್ನು ಲೀಯು-ಷು (Six scripts) ಎಂದು ಕರೆದಿರುತ್ತಾರೆ.

೧. ಹ್ಸಿಯಾಂಗ್ ಅಥವಾ ಹ್ಸಿಯಾಂಗ್ ಹ್ಸಿಂಗ್ ಎಂದರೆ ರೂಪದಂತೆ ಬರೆವಣಿಗೆ. ಇಲ್ಲಿ ಸೂರ್ಯ, ಬೆಟ್ಟ ಇತ್ಯಾದಿಗಳನ್ನು ಅವು ಇರುವಂತೆ ಬರೆಯುವುದು. ಇವು ಒಂದು ರೀತಿಯ ಚಿತ್ರಲಿಪಿಯೇ ಆಗಿದೆ. ವೃತ್ತಾಕಾರದೊಳಗೆ ಚುಕ್ಕೆಯೊಂದನ್ನು ಇಟ್ಟಲ್ಲಿ ಅದು ಸೂರ್ಯ ಆಗುತ್ತದೆ. ಈ ಸೂರ್ಯ ಹಗಲಿನ ಅರ್ಥವನ್ನು ನೀಡಬಹುದು. ಹಾಗೆಯೇ ಚಂದ್ರನ ಚಿಹ್ನೆ ತಿಂಗಳನ್ನೂ ಸೂಚಿಸಬಹುದು.

೨. ಚಿಹ್ ಷಿಹ್ : ಸ್ವತಃ ಅರ್ಥೈಸುವ (Self explanations) ಇತರೆ ಪದಗಳಿಂದ ಚಿಹ್ನೆಗಳನ್ನು ಅವುಗಳಿಗೆ ಸಮೀಪದ ಅರ್ಥವನ್ನು ನೀಡುವುದು. ಸಂಖ್ಯೆಗಳಲ್ಲಿ ಇದನ್ನು ಕಾಣಬಹುದು. ಒಂದು ಗೆರೆ – ಒಂದು, ಎರಡು ಗೆರೆ = ಎರಡು . . . . ಇಂತಹ ಸರಳ ನಿಷ್ಪತ್ತಿಗಳನ್ನು ಕಾಣಬಹುದು.

೩. ಹುಯಿ ಇ : ತಾರ್ಕಿಕ ಸೇರ್ಪಡೆಗಳು (Logical aggregates) ಈ ಪದಗಳ ಸೇರ್ಪಡೆಗಳಲ್ಲಿ ಸಹಜವಾದ ಅರ್ಥವಿರುತ್ತದೆ. ಒಂದು ಬಗೆಯ ಭಾವನಾತ್ಮಕ ಮಿಶ್ರಣವಾಗಿರುತ್ತವೆ. ಎರಡು ಅಥವಾ ಮೂರು ಚಿತ್ರಗಳನ್ನು ಒಂದೆಡೆ ತಂದು ಅರ್ಥವನ್ನು ನಿಷ್ಪತ್ತಿ ಮಾಡಲಾಗುತ್ತದೆ. ಎರಡು ಹೆಂಗಸಿನ ಚಿತ್ರ ಜಗಳವೆಂಬ ಅರ್ಥವನ್ನು ನೀಡುತ್ತದೆ. ಬಾಯಿ ಮತ್ತು ಹಕ್ಕಿಯ ಚಿತ್ರ ಸೇರಿಸಿದಲ್ಲಿ ಹಾಡು, ಸಂಗೀತ ಎಂಬ ಅರ್ಥ ನೀಡುತ್ತದೆ.



ಕ್ರಿ.ಪೂ. ೧೮೦೦ ರಿಂದ ಕ್ರಿ. ಶ. ೮೦೦ರವರೆಗ
ಚೀನಾ ಲಿಪಿಯ ಬೆಳವಣಿಗೆ
ಕೃಪೆ : World Alphabets

೪. ಚೌನ್–ಚು ಬಾಗಿದ ಅಥವಾ ದಿಕ್ಕು ಬದಲಾಯಿಸಿದ ಚಿಹ್ನೆಗಳ ಈ ಲಿಪಿಯಲ್ಲಿ ಪದ ಚಿಹ್ನೆಗಳನ್ನು ಬಾಗಿಸುವ ಮೂಲಕ, ವಿರುದ್ಧ ದಿಕ್ಕಿಗೆ ತಿರುಗಿಸುವ ಮೂಲಕ, ಬೇರೆ ಅರ್ಥವನ್ನು ಪಡೆಯುವ ರೀತಿಗೆ ಈ ಮಾತನ್ನು ಹೇಳಿದೆ. ಉದಾಹರಣೆಗೆ ರಾಜ ಎಂಬ ಅರ್ಥ ನೀಡುವ ಪದದ ಚಿಹ್ನೆಯನ್ನು ತಿರುಗಿಸಿ ಬರೆದಾಗ ಅದು ಅಧಿಕಾರಿ, ಸೇವಕ ಎಂಬ ಅರ್ಥ ಬರುತ್ತದೆ.

೫. ಚಿಯಾ–ಚಿಚ್ ಅಂದರೆ 'ಸಹಾಯ ಪಡೆಯುವುದು' ಎಂದು ಅರ್ಥ. ಇಲ್ಲಿ ಪದ ಚಿಹ್ನೆಗೆ ಇನ್ನೊಂದು ಪದ ಚಿಹ್ನೆ ಸೇರಿದರೂ ಧ್ವನಿ ಒಂದೇ. ಆದರೆ ಅರ್ಥ ಬೇರೆ ಆಗುತ್ತದೆ. ವಾನ್ ಎಂಬ ಶಬ್ದಕ್ಕೆ ಚೇಳು ಎಂಬ ಅರ್ಥವಿದ್ದರೆ ಅದೇ ಪದವನ್ನು ೧೦,೦೦೦ ಎಂಬ ಅರ್ಥಕ್ಕೂ ಬಳಸುವುದು. 'ತ್ಸು' ಎಂದರೆ ಪಾದ. ಇದನ್ನು ಸಾಕಷ್ಟು ಎಂಬ ಅರ್ಥದಲ್ಲೂ ಬಳಸಿರುತ್ತಾರೆ.

೬. ಹ್ಸಿಂಗ್ ಷೇಂಗ್ ಅಂದರೆ ಕ್ರಮಬದ್ಧವಾಗಿ ಜೋಡಿಸುವುದು ಅಥವಾ ಭಾಷಾಧ್ವನಿ ನಿರೂಪಕ ಸಂಯೋಜನೆಯೆಂದು ಅರ್ಥೈಸುವುದು. ಇಲ್ಲಿ ಒಂದು ಶಬ್ದದ ಮುಂದೆ ಬೇರೆ ಬೇರೆ ಚಿಹ್ನೆಗಳನ್ನು ಸೇರಿಸಿ ಬೇರೆ ಬೇರೆ ಅರ್ಥಗಳನ್ನು ಪಡೆಯುವುದು. 'ಕೊ' ಎಂಬ ಶಬ್ದದ ಮುಂದೆ ನಿಂತ ಮನುಷ್ಯನ ಚಿತ್ರ ಬಿಡಿಸಿದರೆ ಅದೇ ಉಚ್ಚಾರವಿದ್ದರೂ ಅದು 'ಹೋಗು' ಎಂಬ ಅರ್ಥ ನೀಡುತ್ತದೆ. ಹಾಗೆಯೇ ಅದೇ 'ಕೊ' ಶಬ್ದದ ಮುಂದೆ ಅರೆ ಮಾನವನನ್ನು ಚಿತ್ರಿಸಿದರೆ ನದಿ ಎಂಬ ಅರ್ಥ ಬರುತ್ತದೆ.



ಷಾನ್ ವಂಶದ ಒರಕಲ್ ಮೂಳೆ ಶಾಸನ
ಕೃಪೆ : Raymond Dawson

ಈಗ ಬಳಸುತ್ತಿರುವ ಲಿಪಿ : –

ಈಗ ಬಳಸುವ ಚೀನಾಲಿಪಿಯಲ್ಲಿ ಮೂರು ಬಗೆಯನ್ನು ಕಾಣಬಹುದು.

೧. ಪದಗಳ ಅರ್ಥಕ್ಕೆ ಸರಿಯಾಗಿ.
೨. ಶಬ್ದ ಅಥವಾ ಭಾಷಾಧ್ವನಿ ನಿರೂಪಕ ಶಬ್ದಗಳು.
೩. ಗೆರೆಗಳ ಲಿಪಿಗಳು.

ಈ ಲಿಪಿಯ ಬರೆವಣಿಗೆ ಮೇಲಿನಿಂದ ಕೆಳಕ್ಕೆ ಹಾಗೂ ಬಲಗೈಯ ಕಡೆಯಿಂದ ಬರೆವಣಿಗೆ ಪ್ರಾರಂಭ.

ಚೈನಾಲಿಪಿಯು ಬಹು ಸಂಕೀರ್ಣವಾಗಿರುವುದರಿಂದ ಇದನ್ನು ಬೇರೆ ಬೇರೆ ಭಾಷಿಕರು ಬಳಸುವುದು ಕಡಿಮೆ. ಆದರೂ ಜಪಾನ್, ಅನ್ನಮೈಟರು, ಕೆಲವು ಚೀನಿಯೇತರ ಜನರು ಬಳಸಿರುತ್ತಾರೆ. ಮಂಗೋಲಿಯ ಮತ್ತು ಕೊರಿಯಾ ಲಿಪಿಯ ಮೇಲೆ ಇದು ತನ್ನ ಪ್ರಭಾವವನ್ನು ಬೀರಿದೆ.

ಪೂರ್ವ ಏಷಿಯಾದ ಅನೇಕ ದೇಶಗಳು ಚೈನಾದೇಶದ ಲಿಪಿಗಳನ್ನು ತಮ್ಮ ಭಾಷೆಗೆ ಅಳವಡಿಸಿಕೊಂಡಿವೆ. ಜಪಾನಿಯರು ಕ್ರಿ.ಶ.೪ನೆಯ ಶತಮಾನ ದಲ್ಲಿ ತೆಗೆದುಕೊಂಡರೆಂದು ಹೇಳಿರುವರಾದರೂ ಬರೆವಣಿಗೆ ಸಿಗುವುದು ಕ್ರಿ.ಶ.೭೧೨ ರಿಂದೀಚೆಗೆ, ಚೈನಾಲಿಪಿಯನ್ನು ಪಡೆಯುವಾಗ ಕೆಲವು ಚಿಹ್ನೆಗಳನ್ನು ತಮ್ಮ ಉಚ್ಚಾರಕ್ಕೆ ಅಳವಡಿಸಿಕೊಳ್ಳುತ್ತಾರೆ. ಅವನ್ನು 'ಸೊಗನ' ಎಂದಿರುತ್ತಾರೆ. ಮುಂದೆ ಇದೇ 'ಹಿರಗನ' ಎಂಬ ಹೆಸರನ್ನು ಪಡೆಯಿತು. ವಿದೇಶಿ ಪದಗಳನ್ನು ಬರೆಯಲು


ಬಳಸುವ ಹೊಸ ಪದಗಳಿಗೆ 'ಕುಕನ' ಎಂದು ಕರೆಯುತ್ತಾರೆ. ಚೀನಾದಲ್ಲಿ ವೃತ್ತಪತ್ರಿಕೆ ಮುದ್ರಿಸಲು ಸುಮಾರು ೭೦೦೦ ಚಿಹ್ನೆಗಳನ್ನು ಬಳಸಬೇಕಾಗುತ್ತದೆ. ಜಪಾನಿನಲ್ಲಿ ೩೦೦೦ ಚಿಹ್ನೆಗಳು ಬೇಕಾಗುತ್ತವೆ. ಈ ಲಿಪಿಯನ್ನು ಸುಂದರವಾಗಿ ಬರೆಯಲು ಇಂದಿಗೂ ಶಾಲೆಗಳಲ್ಲಿ ಬೋಧಿಸಲಾಗುತ್ತದೆ. (The Unesco Courier, March 1964)

ಸಿಂಧೂ ಲಿಪಿ


ಕ್ರಿ.ಶ.೧೯೨೨ರಲ್ಲಿ ಸರ್ ಜಾನ್ ಮಾರ್ಷಲ್ ಎಂಬುವವನು ಹರಪ್ಪಾ ಮತ್ತು ಮೊಹೆಂಜೋದಾರೋಗಳಲ್ಲಿ ಉತ್ಖನನ ಮಾಡಿ ಅದರ ವರದಿಯನ್ನು ೩ ಸಂಪುಟಗಳಲ್ಲಿ ಪ್ರಕಟಿಸಿದ. ಮುಂದೆ ಅರ್ನೆಸ್ಟ್ ಮ್ಯಾಕೆ ಎಂಬುವವನು ೧೯೩೦ರಲ್ಲಿ ಮುಂದಿನ ಉತ್ಖನನ ಮಾಡಿದ. ಮಾಧೋ ಸ್ವರೂಪ ವತ್ಸ ಎಂಬುವವನು ೧೯೩೯ರಲ್ಲಿ ಹರಪ್ಪದಲ್ಲಿ ಉತ್ಖನನ ಮಾಡಿದ. ಮುಂದೆ ಡೇಲ್ಸ್, ವೀಲರ್, ಎಫ್.ಎ.ಖಾನ್, ಎಸ್.ಆರ್.ರಾವ್, ಲಾಲ್ ಮತ್ತು ಥಾಪರ್ ಮುಂತಾದವರು ಹರಪ್ಪ, ಲೋಥಲ್, ಕಾಲಿಬಂಗನ್, ಸುರ್‌ಕೋಲ್ಡ ಮುಂತಾದ ಸ್ಥಳಗಳಲ್ಲಿ ಉತ್ಖನನ ಮಾಡಿರುತ್ತಾರೆ.

ಈ ಉತ್ಖನನಗಳಿಂದ ತಿಳಿದು ಬಂದಂತೆ ಈ ನಾಗರೀಕತೆಯ ಹರವು ಸುಮಾರು ೧೦೦೦ ಮೈಲಿಗಳ ವಿಸ್ತಾರವುಳ್ಳದ್ದಾಗಿತ್ತು. ಈ ನಾಗರೀಕತೆಯು ಕ್ರಿ.ಪೂ.೩೦೦೦ ರಿಂದ ೨೦೦೦ದ ವರೆಗೆ ಅಸ್ತಿತ್ವದಲ್ಲಿತ್ತು. ಉತ್ಖನನ ಅವಧಿಯಲ್ಲಿ ಕಂಡುಬಂದ ನೇರವಾದ ಬೀದಿಗಳು, ಚರಂಡಿ ವ್ಯವಸ್ಥೆ, ಸ್ನಾನಘಟ್ಟ ಮುಂತಾದವು ಈ ನಾಗರೀಕತೆಯ ಬಹು ಮುಂದುವರಿದಿತ್ತೆಂಬುದನ್ನು ಸೂಚಿಸುತ್ತದೆ. ಈ ಉತ್ಖನನದಲ್ಲಿ ಅನೇಕ ಮುದ್ರಿಕೆಗಳು ದೊರೆತಿದ್ದು ಅವುಗಳಲ್ಲಿ ಆನೆ, ಘೇಂಡಾಮೃಗ, ಒಂಟಿಕೊಂಬಿನ ಪ್ರಾಣಿ, ಗೂಳಿ ಮುಂತಾದ ಚಿತ್ರಗಳಿದ್ದು ಅವುಗಳ ಮೇಲೆ ಗೆರೆಗಳ ಬರೆವಣಿಗೆ ಕಂಡುಬಂದಿದೆ. ಈ ಬಗೆಯ ಕೆಲವು ಮುದ್ರಿಕೆಗಳು ಮೆಸಪೊಟೋಮಿಯಾದ ಉರ್, ಟೆಲ್ಲೊಹ್, ಕಿಷ್, ಉಮ್ಮ, ಸೂಸ ಮುಂತಾದ ಕಡೆಗಳಲ್ಲಿಯ ಉತ್ಖನನಗಳಲ್ಲಿ ಕಂಡುಬಂದಿವೆ. ಈ ಆಧಾರದಿಂದ ಈ ನಾಗರೀಕತೆಯೊಂದಿಗೆ ಮೆಸಪೊಟೋಮಿಯಾ ಜನರ ಸಂಪರ್ಕವಿದ್ದದ್ದು ತಿಳಿಯುತ್ತದೆ.






ಸಿಂಧೂ ನಾಗರೀಕತೆಯ ಮುದ್ರಿಕೆಗಳು



ಝಾ ಅವರು ಸೂಚಿಸಿರುವ ಸಿಂಧೂ ಲಿಪಿಯ ವರ್ಣಮಾಲೆ


ಸಿಂಧೂ ನಾಗರಿಕತೆಯಲ್ಲಿ ದೊರೆತಿರುವ ಲಿಪಿಗಳು ಸ್ಥಳೀಯವಾಗಿದ್ದು ಇವುಗಳು ಶಿಲೆ ಅಥವಾ ತಾಮ್ರದ ಮೇಲೆ ಬರೆಯಲಾಗಿದೆ. ಬಹು ಕಲಾತ್ಮಕವಾಗಿ ಬರೆದಿರುವ ಇವುಗಳು ಮುಖ್ಯವಾಗಿ ಮನುಷ್ಯ, ಪಾತ್ರೆ, ಮೀನು, ಬೆಟ್ಟ ಮತ್ತು ಮರಗಳ ಆಕೃತಿಯ ಚಿಹ್ನೆಗಳನ್ನು ಹೊಂದಿವೆ. ಮುದ್ರೆಗಳ ಮೇಲಿನ ಚಿಹ್ನೆಗಳು ಸರಾಸರಿ ಐದು ಚಿಹ್ನೆಗಳನ್ನು ಹೊಂದಿದೆ. ಸುಮಾರು ೨೯೦೦ ಮುದ್ರೆಗಳು ದೊರೆತಿದ್ದು, ಅವುಗಳಲ್ಲಿ ೧೧೬೪ರಲ್ಲಿ ವಿವಿಧ ಪ್ರಾಣಿಗಳ ಚಿತ್ರಗಳಿವೆ. ಒಂದು ಸಾಲಿನಿಂದ ಮೂರು ಸಾಲಿನವರೆಗೆ ಬರೆವಣಿಗೆ ಇದೆ. ಇದುವರೆವಿಗೆ ಯಾವ 'ದ್ವಿಭಾಷಾ' ಶಾಸನಗಳು ದೊರೆತಿಲ್ಲ. ಹೀಗಾಗಿ ಇದನ್ನು ಓದುವುದರಲ್ಲಿ ತೊಡಕಾಗಿದೆ.



ಎಸ್.ಆರ್. ರಾಯರ ಸಿಂಧೂ ಲಿಪಿಯ ವಿಂಗಡಣೆ ಕೃಪೆ : S.R. Rao

ಡಿರಿಂಜರ್ ಅವರು ಸಿಂಧೂಲಿಪಿಗಳು ಅಕ್ಷರಗಳೂ ಅಲ್ಲ, ಉಚ್ಚಾರಾಂಶದ ಶಬ್ದಗಳೂ ಅಲ್ಲ, ಅವು ಪೂರ್ಣವಾಗಿ ಭಾವಸೂಚಕ ಶಬ್ದಗಳೆಂದಿರುತ್ತಾರೆ. ಹೀಗಾಗಿ ಇದು ಭಾಗಶಃ ಭಾವಸೂಚಕ ಶಬ್ದ ಮತ್ತು ಭಾಗಶಃ ಭಾಷಾಧ್ವನಿ ಸೂಚಕವಾಗಿರುತ್ತವೆ. ಸಿಕ್ಕಿರುವವು ಮುದ್ರಿಕೆಗಳಾಗಿರುವುದರಿಂದ ಇವು ಹೆಸರುಗಳಾಗಿರಬೇಕು ಎಂಬ ಅಭಿಪ್ರಾಯವನ್ನೂ ಪಟ್ಟಿರುತ್ತಾರೆ.

ಈ ಲಿಪಿಯನ್ನು ಓದಲು ಅನೇಕರು ಪ್ರಯತ್ನಪಟ್ಟಿರುತ್ತಾರೆ. ಅವರಲ್ಲಿ ಮೆರಿಗ್ಗಿ ಅವರು ಇದನ್ನು ಭಾವಸೂಚಕ ಲಿಪಿಗಳೆಂದು ಓದಲು ಪ್ರಯತ್ನಿಸಿದ್ದರೆ ಹಂಟರ್ ಮತ್ತು ವ್ಯಾಂಗ್‌ಡನ್



• S.SEMITIC.

ಸೆಮಿಟಿಕ್ ಮತ್ತು ಸಿಂಧೂ ಲಿಪಿಗಳ ಭಾಷಾ ಧ್ವನಿ ಕೃಪೆ : S.R. Rao

ಅವರುಗಳು ಬ್ರಾಹ್ಮಿಲಿಪಿಗೆ ಸಂಬಂಧ ಸೂಚಿಸಲು ಪ್ರಯತ್ನಿಸಿರುತ್ತಾರೆ. ಬಿಹ್ರೊಜ್ನಿ ಎಂಬುವವರು ಈ ಲಿಪಿಯನ್ನು ಹಿತ್ತೈತ್ ಲಿಪಿಯೊಂದಿಗೆ ಸಂಬಂಧವನ್ನು ಬೆಸೆದಿರುತ್ತಾರೆ. ಇವರ ಪ್ರಕಾರ ಸಿಂಧೂ ನಾಗರೀಕತೆಯ ಜನರು ಮಿಶ್ರಜನಾಂಗವಾಗಿದ್ದು ಇಂಡೋ–ಯೂರೋಪಿಯಾ ಧಾಳಿಕಾರರ ಆಳ್ವಿಕೆಯಲ್ಲಿರುತ್ತಾರೆ. ಡೆ–ಹೇವಸಿ ಎಂಬುವವರು ಸಿಂಧೂ ಬರವಣಿಗೆಯ ಅನೇಕ ಚಿಹ್ನೆಗಳನ್ನು ಈಸ್ಟರ್ ದ್ವೀಪಗಳಲ್ಲಿ ದೊರೆಯುವ ಲಿಪಿಯೊಂದಿಗೆ ಹೋಲಿಸಿರುತ್ತಾರೆ.

ಫಾದರ್ ಹೆರಾಸ್, ಮಾರ್ಷಲ್ ಮೊದಲಾದವರು ಈ ಚಿಹ್ನೆಗಳನ್ನು ದ್ರಾವಿಡ ಭಾಷಾಚಿಹ್ನೆಗಳೆಂಬಂತೆ ಭಾವಿಸಿ ಓದಲು ಪ್ರಯತ್ನಿಸಿರುತ್ತಾರೆ ಹಾಗೂ ಎಡದಿಂದ ಬಲಕ್ಕೆ ಈ ಬರೆವಣಿಗೆ ಇದೆಯೆಂದು ಹೇಳಿರುತ್ತಾರೆ. ಎಲ್.ಎ.ವಾಡೆಲ್ಲರು ಸುಮೇರಿಯನ್ನರು ಈ ಲಿಪಿಯನ್ನು ಬಳಕೆಗೆ ತಂದರೆಂದು ಹೇಳಿ ಅಲ್ಲಿನ ಮುದ್ರೆಗಳಲ್ಲಿನ ಆರ್ಯರ ಹೆಸರುಗಳನ್ನು ಅವರ ರಾಜಧಾನಿಗಳನ್ನು ಗುರುತಿಸಿರುತ್ತಾರೆ. ಡಾ। ಪ್ರಾಣನಾಥರು ವಾಡೆಲ್ಲರ ಅಭಿಪ್ರಾಯವನ್ನು ಸಮರ್ಥಿಸುತ್ತಾರೆ. ಆದರೂ ಪ್ರಾಚೀನ ಲಿಪಿಗಳು ಚಿತ್ರಗಳ ರೂಪದಲ್ಲಿದ್ದು ಕೆಲವು ಲಿಪಿಗಳಲ್ಲಿ ಸಾಮ್ಯವಿರಬಹುದಾದರೂ ಯಾರಿಂದ ಯಾರು ಪಡೆದರೆಂಬುದು ಸ್ಪಷ್ಟವಿಲ್ಲ.

ಎಲಿಸಬೆತ್ ಅವರು ಒಂದೇ ರೀತಿಯ ಪ್ರಾಣಿಗಳನ್ನು ಹೊಂದಿರುವ ಯೂನಿಕಾರ್ನ್ ಚಿಹ್ನೆಗಳು ಧೂಪ ಉರಿಸುವ ಪಾತ್ರೆಯಾಗಿದ್ದು, ಸಿಂಧೂ ನಾಗರೀಕತೆಯಲ್ಲಿ ಇದು ಒಂದೇ ರೀತಿಯ ಪ್ರಾಣಿಯನ್ನು ಹೊಂದಿರುವ ಚಿತ್ರಲಿಪಿಯ ಕಲೆಯಾಯಿತೆಂದು ಹೇಳಿರುತ್ತಾರೆ (Akshayani). ಎಂ.ವಿ.ಎನ್. ಕೃಷ್ಣರಾಯರು ಸಿಂಧೂ ಜನರು ಉಚ್ಚಾರಾಂಶವನ್ನು ಹೊಂದಿರುವ ಮಿಶ್ರ ಬರೆವಣಿಗೆಯನ್ನು ಸುಮೇರಿಯ ಮತ್ತು ಈಜಿಪ್ಟಿನವರಿಂದ ಪಡೆದು ತಮ್ಮ ಭಾಷೆಗೆ ಹಾಗೂ ಬರೆವಣಿಗೆಯ ಸಾಧನಗಳಿಗೆ ಹೊಂದಿಕೊಳ್ಳುವಂತೆ ಸುಧಾರಿಸಿಕೊಂಡರು ಎಂದಿರುತ್ತಾರೆ.

ಪ್ರಾಣನಾಥರು ಸಿಂಧೂಲಿಪಿಯ ಬಗ್ಗೆ ಬರೆಯುತ್ತಾ, ೧. ಆರ್ಯರ ಭಾಷೆಯು ಈಜಿಪ್ಟ ಮತ್ತು ಸುಮೇರಿಯನ್ನರ ಭಾಷೆಯೊಂದಿಗೆ ಸಂಬಂಧವನ್ನು ಹೊಂದಿತ್ತು. ೨. ಪ್ರಾಚೀನ ಈಜಿಪ್ಟಿನ ಭಾಷೆಯು ಪ್ರಾಕೃತ ಸಂಸ್ಕೃತವಾಗಿತ್ತು. ೩. ಸುಮೇರಿಯನ್ನರ ಮೊನಚಾಕಾರದ ಲಿಪಿಯ ಭಾಷಾಧ್ವನಿ ನಿರೂಪವು ಅವರಿಗೆ ಅಕ್ಕಡಿಯದ ಅನುವಾದವೇ ಆಗಿದೆ. ಈ ಭಾಷಾಚಿಹ್ನೆಗಳು ಭಾರತದ ಪ್ರಾಕೃತ ಮತ್ತು ಸಂಸ್ಕೃತಕ್ಕೆ ಹತ್ತಿರವಾಗಿವೆ ಎಂದಿರುತ್ತಾರೆ.

ಹೀಗಾಗಿ ಈಜಿಪ್ಟಿನ ಚಿತ್ರಲಿಪಿ, ಸುಮೇರಿಯಾದ ಮೊನಚು ಲಿಪಿ ಮತ್ತು ಸಿಂಧೂಲಿಪಿಯ ಚಿಹ್ನೆಗಳು ಒಂದಕ್ಕೊಂದು ಸಂಬಂಧವಿದೆ.

ಬಿ.ವಿ.ಸುಬ್ಬರಾಯಪ್ಪನವರು ಈ ಚಿಹ್ನೆಗಳನ್ನು ಅಂಕೆಗಳೆಂದು ಹೇಳಿ, ಅವು ಇತರೆಡೆಯ ಲಿಪಿಗಳಂತೆ ಸೇರ್ಪಡೆ (additive)ಯಲ್ಲಿ ಅವು ಹೆಚ್ಚಾಗುತ್ತಾ (Multipletive) ಹೋಗುವ ಪ್ರವೃತ್ತಿಯವು ಎಂದಿರುತ್ತಾರೆ. ಈ ಚಿಹ್ನೆಗಳಲ್ಲಿ ಬರುವ ಗೆರೆಗಳನ್ನು ಅವರು ಅಂಕೆಗಳೆಂದೇ ಹೇಳಿರುತ್ತಾರೆ. ಮುದ್ರೆಗಳಲ್ಲಿನ ಪ್ರಾಣಿಗಳ ಮುಂದಿನ ಚಿತ್ರವು ತಾವು ಕಳುಹಿಸುತ್ತಿರುವ ವಸ್ತುವಿನ ರೂಪವನ್ನು ತೋರಿಸುತ್ತಿದ್ದವೆಂದು ಹೇಳಿರುತ್ತಾರೆ.

ಇತ್ತೀಚೆಗೆ ಎನ್.ಝಾ ಮತ್ತು ಎನ್.ಎಸ್.ರಾಜಾರಾಂ ಎಂಬುವವರು The Deciphered Indus script Methodology, reading, interpretation ಎಂಬ ಪುಸ್ತಕದಲ್ಲಿ

ಸಿಂಧೂಮುದ್ರಿಕೆಗಳ ಭಾಷೆಯು ವೇದಗಳ ಕಾಲದ ಸಂಸ್ಕೃತವೆಂದೂ, ಮೂಲ ಸಿಂಧೂಲಿಪಿಯು ೫೨ ವರ್ಣಗಳನ್ನು ಹೊಂದಿತ್ತೆಂದು ಹೇಳಿ ಅವುಗಳು :- ಓ ಕಾರ ೧, ಸ್ವರಗಳು ೩, ಅಯೋಗವಃ ೨ (ಅಂ ಅಃ), ಸ್ಪರ್ಶ (ಅಲ್ಪ ಮತ್ತು ಮಹಾ) (೧೫+೧೫) = ೩೦, ಅಂತಸ್ಥ (೪+೪) = ೮, ಊಷ್ಮ (೪+೪) = ೮ ಎಂದಿರುತ್ತಾರೆ. ಕೆಲವು ಅಕ್ಷರಗಳು ಅಂಕಿಗಳಿಂದ ಉದಿಸಿವೆಯಂತೆ. ಬರೆಯುವ ಪದ್ಧತಿಯು ಹಲಾಯುಧ ಪದ್ಧತಿಯೆಂದಿರುತ್ತಾರೆ. ಅಂಕೆಗಳು ಮೇಲಿನಿಂದ ಕೆಳಗಿನ ಗೆರೆಗಳನ್ನು ಹೊಂದಿದ್ದವು. ಈ ಗೆರೆಗಳು ಒಂಬತ್ತರವರೆಗೆ ಉದ್ದುದ್ದವಾಗಿಯೂ ಹತ್ತರ ನಂತರ ಬೇರೆ ಬೇರೆ ಚಿಹ್ನೆಗಳನ್ನು ಬಳಸಲಾಗಿದೆಯಂತೆ.

ಇರಾವತಮ್ ಮಹದೇವನ್ ಅವರು ಸಿಂಧೂಲಿಪಿಯನ್ನು ಓದಲು ಪ್ರಯತ್ನಿಸಿರುತ್ತಾರೆ. ರಷ್ಯನ್ ಮತ್ತು ಫಿನ್ನಿಷ್ ವಿದ್ವಾಂಸರು ಸಿಂಧೂಮುದ್ರಿಕೆಗಳಲ್ಲಿನ ಭಾಷೆ ಮೂಲದ್ರಾವಿಡವೆಂಬ ತೀರ್ಮಾನಕ್ಕೆ ಬಂದಿರುತ್ತಾರೆ. ಇತ್ತೀಚೆಗೆ ಓದಲು ಪ್ರಯತ್ನಿಸಿರುವ ಡಾ। ಎಸ್.ಆರ್.ರಾವ್ ಅವರ ಪ್ರಯತ್ನ ಪ್ರಮುಖವಾದದು. ಇವರು ಇದರ ಭಾಷೆ ಮೂಲ ಸಂಸ್ಕೃತ, ಲಿಪಿ ಬಲದಿಂದ ಎಡಕ್ಕೆ ಇದ್ದು ಇಂಡೊ-ಆರ್ಯ್‌ನ್ ಭಾಷೆಗೆ ಹೆಚ್ಚು ಸಾದೃಷ್ಯವಿದ್ದ ಭಾಷೆಯೆಂದಿರುತ್ತಾರೆ. ಕ್ರಿ.ಪೂ.೧೫೦೦ರ ವೇಳೆಗೆ ಈ ಬರೆವಣಿಗೆಯು ಉಚ್ಚಾರಾಂಶ ಮತ್ತು ವರ್ಣಮಾಲೆಯ ಬರೆಹವಾಗಿತ್ತು ಎಂದಿರುತ್ತಾರೆ.

ಒಟ್ಟಿನಲ್ಲಿ ಈ ಲಿಪಿಯನ್ನು ಓದುವ ಪ್ರಯತ್ನ ನಡೆದಿದೆಯೇ ಹೊರತು ಸರ್ವ ವಿದ್ವಾಂಸರ ಸರ್ವಸಮ್ಮತದ ಫಲಿತಾಂಶ ದೊರೆತಿಲ್ಲ. ದ್ವಿಭಾಷಾ ಅಥವಾ ತ್ರಿಭಾಷಾ ಮುದ್ರಿಕೆ ದೊರೆಯುವವರೆಗೆ ಈ ಲಿಪಿಯು ಕಗ್ಗಂಟಾಗಿಯೇ ಉಳಿಯುವ ಸಾಧ್ಯತೆಗಳಿವೆ. (Akshayani) ಜೂನ್ ೮, ೨೦೦೧ರಂದು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಆಶ್ರಯದಲ್ಲಿ ಲಿಪಿಗಳ ಮೇಲೆ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಬಿ.ವಿ.ಸುಬ್ಬರಾಯಪ್ಪನವರು ಮಾತನಾಡುತ್ತಾ ಮಾನವನು ಬರೆವಣಿಗೆಯನ್ನು ಸಂಖ್ಯೆಯಿಂದಲೇ ಆರಂಭಿಸಿದನೆಂದು ಹೇಳಿ ಸಿಂಧೂ ನಾಗರೀಕತೆಯ ಲಿಪಿ ಎಂದು ಕರೆಯುವ ಚಿಹ್ನೆಗಳು ಸಂಖ್ಯೆಗಳೆಂದೇ ಪ್ರತಿಪಾದಿಸಿದರು. ಈ ಅಂಕೆಗಳು ಚೈನಾದ ಅಂಕೆಗಳ ಮೇಲೆ ಪ್ರಭಾವ ಬೀರಿವೆ ಎಂದಿರುತ್ತಾರೆ. ಅದೇ ವಿಚಾರ ಸಂಕಿರಣದಲ್ಲಿ ಡಾ। ಕೆ.ವಿ.ರಮೇಶ್ ಅವರು ಮಾತನಾಡುತ್ತಾ ಸಿಂಧೂ ಮುದ್ರಿಕೆಗಳಲ್ಲಿನ ಬರೆವಣಿಗೆ ಅಕ್ಷರಗಳಲ್ಲ, ವೇದದ ಉಚ್ಚಾರದ ಸಂಕೇತವೆಂದು ಹೇಳಿರುತ್ತಾರೆ. ಉದಾ. ದಂಡ, ವಾಜ, ಕಪಾಲ ಏಕಪಾ ಭಾರದ್ವಜ, ಇತ್ಯಾದಿ.

ಮೆಕ್ಸಿಕೋ ದೇಶದ ಮಯಾ ನಾಗರೀಕತೆ ಲಿಪಿ

ಮಧ್ಯ ಅಮೇರಿಕದ ದೇಶಗಳಲ್ಲಿ ಒಂದಾದ ಮೆಕ್ಸಿಕೊ ದೇಶದಲ್ಲಿ ಪ್ರಾಚೀನ ನಾಗರೀಕತೆಯೊಂದು ಇತ್ತು. ಇದನ್ನು ಸ್ಪೇನಿನ ನಾವಿಕರು ಆ ದೇಶದಲ್ಲಿನ ಸಂಪತ್ತನ್ನು ದೋಚುವ ಉದ್ದೇಶದಿಂದ ೧೫ನೆಯ ಶತಮಾನದ ಅಂತ್ಯ ಹಾಗೂ ೧೬ನೆಯ ಶತಮಾನದ ಆರಂಭದ ವರ್ಷಗಳಲ್ಲಿ ಗೆಲ್ಲಲಾಯಿತು (ಕ್ರಿ.ಶ.೧೫೨೧). ಈ ನಾಗರೀಕತೆಯನ್ನು ಅಜೆಟಿಕ್ ಚಕ್ರಾಧಿಪತ್ಯವೆಂದು ಕರೆದಿರುತ್ತಾರೆ. ಇಲ್ಲಿ ದೊರೆತ ಹಸ್ತಪ್ರತಿಗಳನ್ನು 'ಭೂತಗಳ ಸುರುಳಿ'ಗಳೆಂದು ಆರ್ಚ್ ಬಿಷಪ್

ಡಿಗೋ.ಡೆ. ಲಂಡಾ ಸುಟ್ಟು ಹಾಕುತ್ತಾನೆ. ರಾಜ್ಯವನ್ನು ಗೆದ್ದ ಸ್ಪೇನೀಯರು ಅಲ್ಲಿನ ಸಂಪತ್ತನ್ನು ಲೂಟಿ ಮಾಡುತ್ತಾರೆ.

ಈ ಸಂಸ್ಕೃತಿಯು ಹರಡಿದ್ದ ಕಡೆಗಳಲ್ಲಿ ಎಲ್ಲವನ್ನೂ ತಾವೇ ಬೆಳೆದುಕೊಳ್ಳುತ್ತಿದ್ದರು. ನಗರ ರಚನೆ, ಬರೆವಣಿಗೆ ರೀತಿ, ಕಟ್ಟಡಗಳು ಶಿಲ್ಪಗಳು ಮುಂತಾದವು ಈ ನಾಗರೀಕತೆ ಪ್ರಬುದ್ಧವಾಗಿ ಬೆಳೆದಿತ್ತೆಂಬುದನ್ನು ಸೂಚಿಸುತ್ತವೆ. ಈ ನಾಗರೀಕತೆಗೆ ಮೂಲ ಯಾವುದೆಂಬ ಬಗ್ಗೆ ಅನೇಕ ವಾದಗಳಿದ್ದು 'ಇದಮಿತ್ಥಂ' ಎಂದು ಹೇಳಲು ಸಾಧ್ಯವಾಗಿಲ್ಲ.

ಆರಂಭದ ವಿದ್ವಾಂಸರ ಪ್ರಕಾರ ಅಜೆಟಿಕರಲ್ಲಿ ಮೂರು ಗುಂಪುಗಳಿದ್ದು ಮಯ, ಅಜೆಟಿಕ್ ಮತ್ತು ಟೋಲ್‌ಟೆಕ್ ಎಂಬುವವಾಗಿವೆ. ಇವುಗಳಲ್ಲಿ ಆಜೆಟಿಕ್ ಮತ್ತು ಟೋಲ್‌ಟೆಕ್ ಒಂದೇ ಭಾಷಿಕ ಗುಂಪಿನವಾಗಿವೆ. ಇತ್ತೀಚೆಗೆ ವಿದ್ವಾಂಸರು ಮಯಾ ಜನರೇ ಈ ನಾಗರೀಕತೆಗೆ ಮೂಲವೆಂದಿರುತ್ತಾರೆ. ಈ ನಾಗರೀಕತೆಯ ಜನರು ಗಣಿತ ಅದರಲ್ಲೂ ಜ್ಯೋತಿಶ್ಶಾಸ್ತ್ರದಲ್ಲಿ ಪರಿಣತರಾಗಿದ್ದರು. ವಿದ್ವಾಂಸರ ಪ್ರಕಾರ ಜೂಲಿಯನ್ ಪಂಚಾಂಗಕ್ಕಿಂತ ಇವರ ಪಂಚಾಂಗ ಮುಂದುವರಿದುದ್ದಾಗಿತ್ತು.

ಈ ನಾಗರೀಕತೆಯ ಭಾಗವಾದ ಅಜೆಟಿಕ್ ಬರೆವಣಿಗೆಯು ಬಹುಮಟ್ಟಿಗೆ ಚಿತ್ರಗಳೇ ಆಗಿವೆ. ಈ ಚಿತ್ರಗಳು ಕಚ್ಚಾ ಆಗಿದ್ದು ಇವುಗಳನ್ನು ಅರ್ಥೈಸುವಾಗ ಅದರಲ್ಲಿರುವುದನ್ನು ವಿಪರೀತಾರ್ಥವಾಗಿ ಹೇಳುವುದುಂಟು. ಅನೇಕ ಚಿಹ್ನೆಗಳು ಭಾಷಾಧ್ವನಿ ನಿರೂಪಕವಾಗಿವೆ. ಒಂದರಿಂದ ೧೯ರ ವರೆಗೆ ಚುಕ್ಕೆ ಅಥವಾ ವೃತ್ತಗಳಿಂದ ತೋರಿಸುತ್ತಿದ್ದರು. ೪೦೦ (20x20) ಎಂದು ಹೇಳಬೇಕಾದಲ್ಲಿ ಫೈನ್‌ಮರವನ್ನೂ, ೮೦೦೦ (20x20x20)ವನ್ನು ಹೇಳಬೇಕಾದಲ್ಲಿ ಧೂಪದ ಪಾತ್ರೆಯನ್ನು (incensepouch) ಬರೆಯುತ್ತಿದ್ದರು. ಇವರ ಪಂಚಾಂಗವು ಬಹುಶಃ ಮಯಾ ಪಂಚಾಂಗದಿಂದ ಬಂದಿದ್ದು ಅದಕ್ಕಿಂತ ಸರಳವಾಗಿದೆ. ಇವರ ಧಾರ್ಮಿಕ ಆಚರಣಾ ವರ್ಷವನ್ನು ೧೮ ತಿಂಗಳುಗಳನ್ನಾಗಿಸಿ ತಿಂಗಳಿಗೆ ೨೦ ದಿನಗಳಂತೆ ಎಣಿಕೆ ಹಾಕಿರುತ್ತಾರೆ. ಪ್ರತಿದಿನಕ್ಕೂ ಬೇರೆ ಬೇರೆ ಹೆಸರಿತ್ತು. ೩೬೦ ದಿನಗಳಾದ ಮೇಲೆ ಬರುವ ಐದು ದಿನಗಳನ್ನು ಎಣಿಕೆಗೆ ಬಾರದ ಅಥವಾ ಕೆಟ್ಟದಿನಗಳೆಂದು ಭಾವಿಸಿದ್ದರು.

ಮಯಾ ಲಿಪಿ

ಮೇಲೆ ಹೇಳಿದ ಅಜೆಟಿಕ್ ಲಿಪಿಯು ಮಯಾ ಲಿಪಿಯಿಂದ ನಿಷ್ಪನ್ನವಾದುದೆಂದು ಹೇಳಿದೆಯಷ್ಟೆ. ಅಜೆಟಿಕರ ಕಚ್ಚಾ ಲಿಪಿಗಳಿಗಿಂತ ಇವು ಸುಂದರವಾಗಿವೆ. ಮಯಾ ಜನರು ಯಾವಾಗ ಈ ಲಿಪಿಯನ್ನು ಕಂಡುಹಿಡಿದರೆಂದು ಹೇಳುವುದು ಸುಲಭ ಸಾಧ್ಯವಲ್ಲ. ಹಸ್ತಪ್ರತಿಗಳ ಜೊತೆಗೆ ಕಟ್ಟಡಗಳ ಕಂಬಗಳಲ್ಲಿ, ಗೋಡೆಗಳಲ್ಲಿ ಮಣ್ಣಿನ ಪಾತ್ರೆಗಳ ಮೇಲೆ, ಮೂಳೆಗಳ ಮೇಲೆ ಹಾಗೂ ಲೋಹಗಳ ಮೇಲೆ ರಚಿಸಿರುವ ಚಿತ್ರಲಿಪಿಗಳು ದೊರೆತಿವೆ. ಶಿಲಾಕಂಬಗಳ ಮೇಲೆ ಬರೆದಿರುವ ಬರೆವಣಿಗೆ ಕ್ರಿ.ಶ.೪ನೆಯ ಶತಮಾನಕ್ಕೆ ಸೇರುತ್ತದೆಂಬುದು ವಿದ್ವಾಂಸರ ಅಭಿಪ್ರಾಯ ಆಯಾ ವರ್ಷಗಳಲ್ಲಿ ಪಟ್ಟಣದಲ್ಲಿ ನಡೆದ ಘಟನೆಗಳನ್ನು ೫, ೧೦, ೨೦ ವರ್ಷಗಳ ಅಂತರದಲ್ಲಿ ಕೆತ್ತಿರುತ್ತಾರೆ. ಈ ಮಯಾ ಲಿಪಿಯನ್ನು ಓದಲು ಇಂದು ಸಾಧ್ಯವಾಗಿಲ್ಲ. ಸುಮಾರು ೨೦೦-೨೫೦ ವರ್ಷಗಳ ಹಿಂದೆ ಈ ಲಿಪಿಯನ್ನು ಓದಲಾಗುತ್ತಿತ್ತು.


ಮಯಾ ನಾಗರಿಕತೆಯ ನಾಶಕ್ಕೆ ಕಾರಣನಾದ ವ್ಯಕ್ತಿಯ ಬರೆವಣಿಗೆಗಳೇ ಇಂದು ಆ ನಾಗರಿಕತೆಯನ್ನು ತಿಳಿಯಲು ಸಹಾಯಕವಾದ ಬರೆವಣಿಗೆಯಾಗಿದೆ. ಡಿಗೋಡೆ. ಲಂಡಾ (ಕ್ರಿ.ಶ.೧೫೨೪-೧೫೭೯) ಬರೆದ ಪುಸ್ತಕದಿಂದ ಈ ನಾಗರೀಕತೆಯ ಬಗ್ಗೆ ಅನೇಕ ವಿವರಗಳನ್ನು ತಿಳಿಯಲು ಆಧಾರವಾಗಿದೆ. ಆದರೆ ಲಂಡಾ ಅವರು ನೀಡುವ ವಿವರಣೆಗಳಿಂದ ಮಯಾ ಲಿಪಿಯನ್ನು ಓದಲು ಸಾಧ್ಯವಾಗಿಲ್ಲ. ಹೀಗಾಗಿ ಲಂಡಾ ಅವರ ಬರೆವಣಿಗೆಯ ಬಗ್ಗೆ ವಿದ್ವಾಂಸರು ಸಂಶಯ ತಾಳಿದ್ದಾರೆ. ಆದರೂ ಮಯಾ ಲಿಪಿಯು ಭಾಗಶಃ ಚಿತ್ರಲಿಪಿ, ಭಾಗಶಃ ಹೇಳುವಂತಹದು ಭಾಗಶಃ ಭಾವಲಿಪಿ, ಭಾಗಶಃ ಭಾಷಾಧ್ವನಿ ನಿರೂಪಕವಾಗಿರಬಹುದು.

ಲಂಡಾ ಅವರ ವಿವರಣೆಯಿಂದ ಮಯಾ ಜನರು ಬಳಸುತ್ತಿದ್ದ ದಿನಗಳು ಮತ್ತು ತಿಂಗಳುಗಳನ್ನು ತಿಳಿಯಬಹುದಾಗಿದೆ. ಅಜೆಟಿಕ್ ಪಂಚಾಂಗಕ್ಕಿಂತ ಇವರ ಪಂಚಾಂಗ ಕ್ಲಿಷ್ಟವಾಗಿದೆ. ಎರಡು ಬಗೆಯ ತಿಂಗಳುಗಳು 'ಉ' ಚಂದ್ರನ ೨೦ ದಿನಗಳ ತಿಂಗಳು ಮತ್ತು ಉಇನಲ್ಸ್ ೩೦ ದಿನಗಳ ಸೂರ್ಯನನ್ನಾಧರಿಸಿದ ತಿಂಗಳು. ಇದು ೧೮ ತಿಂಗಳನ್ನು ಹೊಂದಿರುತ್ತದೆ. ಇಲ್ಲಿ ಉಳಿಯುವ ಐದು ದಿನಗಳನ್ನು ಕೆಟ್ಟದಿನಗಳು (unfortunate) ಅಥವಾ ವರ್ಷದ ಆರಂಭದ ಆಧಾರ ದಿನಗಳೆಂದು (bed of the year) ಗಣಿಸುತ್ತಾರೆ. ಮಯಾ ಜನರಿಗೆ ಅಧಿಕ ವರ್ಷವಿಲ್ಲ. ಆದರೆ ಸೂರ್ಯನ ಚಲನೆಯನ್ನು ನಿಖರವಾಗಿ ಗುರುತಿಸಿರುತ್ತಾರೆ.

ಸೊನ್ನೆಯ ಬಳಕೆ ಈ ಜನಾಂಗದಲ್ಲಿ ಕಂಡುಬರುವ ವಿಶೇಷ. ಜಗತ್ತಿನ ಮೊದಲ ಸೊನ್ನೆ ಬಳಕೆದಾರರು ಇವರು. ೧ ರಿಂದ ೪ರ ವರೆಗೆ ಚುಕ್ಕೆಗಳಿಂದಲೂ, ೫, ೧೦, ೧೫ನ್ನು ಕಡ್ಡಿಗಳಿಂದ ಅಥವಾ ಗೆರೆಗಳಿಂದಲೂ ೩೦ನ್ನು ಚಂದ್ರನಿಂದಲೂ ಗುರುತಿಸಿರುತ್ತಾರೆ.

ಈಸ್ಟರ್ ದ್ವೀಪಗಳ ಲಿಪಿ

ಫೆಸಿಫಿಕ್ ಸಾಗರದ ದ್ವೀಪವಾಗಿರುವ ಇದು ಕೇವಲ ೭೦ ಚದರ ಮೈಲಿಗಳಷ್ಟು ವಿಸ್ತಾರವಾಗಿದೆ. ಚಿಲಿಯ ತೀರದಿಂದ ೨೫೦೦ ಮೈಲಿಗಳ ದೂರದಲ್ಲಿದೆ. ಪ್ರಾಗೈತಿಹಾಸಿಕ ನೆಲೆಗಳಿಂದ, ಕಡೆದ ಶಿಲ್ಪಗಳಿಂದ ಕೂಡಿದ ಈ ದೇಶದ ಪ್ರಾಚೀನ ನಾಗರೀಕತೆಯ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲಲು ಸಾಧ್ಯವಾಗುತ್ತಿಲ್ಲ. ಕ್ರಿ.ಶ.೧೭೨೨ರಲ್ಲಿ ಡಚ್ ನಾವಿಕ ಈ ದ್ವೀಪವನ್ನು ಕಂಡುಹಿಡಿದ. ಈಗ ಇರುವ ಜನರು ಪಾಲನೇಷಿಯಾ-ನಿಗ್ರಾಯಿಡ್ ಗುಂಪಿಗೆ ಸೇರಿದವರು. ಹೀಗಾಗಿ ಹಿಂದೆ ಇಲ್ಲಿ ವಾಸವಾಗಿದ್ದ ಜನರಾರು ಎಂಬುದು ಸ್ಪಷ್ಟವಿಲ್ಲ.



ಈಸ್ಟರ್ ದ್ವೀಪಗಳ ಬರವಣಿಗೆ

ಆರಂಭದಲ್ಲಿ ಕೆಲವು ಪಾದ್ರಿಗಳು ಇಲ್ಲಿನ ವಿಚಿತ್ರ ಬರೆವಣಿಗೆಯುಳ್ಳ ಮರದ ಹಲಗೆಗಳನ್ನು ಕಂಡರು. ಕೆಲವನ್ನು ಸಂಗ್ರಹಿಸಿದರು. ಈಗ ೧೫ ಹಲಗೆಗಳು ಮಾತ್ರ ಉಳಿದೆ. ಇವುಗಳ ಮೇಲಿನ ಚಿಹ್ನೆಗಳನ್ನು ಶಾರ್ಕ್ ಮೀನಿನ ಹಲ್ಲಿನಿಂದ ಕೊರೆಯಲಾಗಿದೆ. ಇದನ್ನು ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ಆರಂಭವಾಗುವಂತೆ ಹಾವಿನ ನಡಿಗೆಯಂತೆ (boustrophedon) ಬರೆಯಲಾಗಿದೆ. ಸಾಲು ಕೊನೆಯಾಗುತ್ತಿದ್ದಂತೆ ಮುಂದಿನ ಸಾಲನ್ನು ತಲೆಕೆಳಗಾಗಿ ಬರೆಯಲಾಗಿದೆ. ಲಿಪಿಚಿಹ್ನೆಗಳಲ್ಲಿ ಮನುಷ್ಯ, ಪಕ್ಷಿ, ಮೀನು ಮುಂತಾದುವನ್ನು ಬಳಸಲಾಗಿದೆ. ಈ ಲಿಪಿಚಿಹ್ನೆಯಿರುವ ಹಲಗೆಗಳನ್ನು ಕೊಹಲು-ರಂಗೋ-ರಂಗೋ ಎಂದು ಸ್ಥಳೀಯರು ಕರೆಯುತ್ತಿದ್ದರು. ಈ ಫಲಕಗಳನ್ನು ಓದಲು ಇಂದಿಗೂ ಸಾಧ್ಯವಾಗಿಲ್ಲ. ಈಗ ವಿದ್ವಾಂಸರ ಮುಂದಿರುವ ಪ್ರಶ್ನೆಯೆಂದರೆ ಈ ಲಿಪಿ ಎಲ್ಲಿನದು ? ಸ್ಥಳೀಯ ಐತಿಹ್ಯಗಳು ಹೊಟು-ಮಟುಅ ಎಂಬುವವನು ೩೦೦ ಜನ ಯೋಧರು ಅವರ ಕುಟುಂಬದೊಡನೆ ಇಲ್ಲಿ ಬಂದು ನೆಲೆಸಿದ. ಅವನೊಂದಿಗೆ ಲಿಪಿ ಚಿಹ್ನೆ ಕೆತ್ತಿದ ೬೭ ಫಲಕಗಳನ್ನು ತಂದನೆನ್ನುತ್ತವೆ.

ಈ ಲಿಪಿಯು ಸರಿಸುಮಾರಾಗಿ ಸಿಂಧೂ ನಾಗರಿಕತೆಯ ಲಿಪಿಯೊಂದಿಗೆ ಸಾಮ್ಯತೆಯನ್ನು ಹೊಂದಿದೆಯೆಂಬುದು ವಿದ್ವಾಂಸರ ಅಭಿಪ್ರಾಯ. ಆದರೆ ಎರಡಕ್ಕೂ ಇರುವ ದೂರವು ಎರಡೂ ಲಿಪಿಗಳು ಒಂದರಿಂದ ಒಂದು ನಿಷ್ಪನ್ನವಾಯಿತೆಂದು ಹೇಳಲು ಅಡ್ಡಿಯಾಗಿದೆ.

ಜಪಾನಿನ ಲಿಪಿ

ಜಪಾನಿನಲ್ಲಿ ದೇಶೀಯವಾಗಿ ಉದಿಸಿದ ಲಿಪಿ ಇಲ್ಲ. ಪರಂಪರಾಗತ ಹೇಳಿಕೆಯಂತೆ ಕೆಲವು ಲಿಪಿಗಳು ಬಳಕೆ ಇದ್ದಂತೆ ಹೇಳಿದರೂ ಅವನ್ನು ಒಪ್ಪಲು ಆಧಾರಗಳು ಸಾಲದು. ಪವಿತ್ರ ಲಿಪಿಯಾದ ಷಿನ್ಜಿ ಅಥವಾ 'ಕಾಮಿನೋಮೋಜಿ'ಯು ಕೊರಿಯ ಲಿಪಿಯ ಶಾಖೆಯೇ ಆಗಿದೆ. ಆದರೂ ಜಪಾನಿನ ಇತಿಹಾಸಪೂರ್ವದ ಲಿಪಿಗೂ ಅರ್ವಾಚೀನ ಲಿಪಿಗೂ ಯಾವ ಸಂಬಂಧವೂ ಇಲ್ಲ.

ಜಪಾನಿನ ಈಗಿನ ಲಿಪಿಗೆ ಮೂಲ ಚೀನಾ ಲಿಪಿ. ಜಪಾನ್ ದೇಶವು ಚೀನದ ವಸಾಹತು ಆಗಿತ್ತು. ಆದರೆ ಚೀನಾದಿಂದ ನೇರವಾಗಿ ಜಪಾನಿಗೆ ಚೀನಾ ಲಿಪಿ ಹೋಗಿಲ್ಲ. ಕೊರಿಯಾದಿಂದ ಹೋಗಿದೆ. ಕ್ರಿ.ಶ.೪ನೆಯ ಶತಮಾನದಲ್ಲೇ ಜಪಾನಿನಲ್ಲಿ ಚೀನಾ ಲಿಪಿಯು ಕಂಡುಬಂದಿದೆ. ಜಪಾನಿನಲ್ಲಿ ಬೌದ್ಧಧರ್ಮವು ಹರಡಿದ ಮೇಲೆ ಅನೇಕ ಚೀನಾ ವಿದ್ವಾಂಸರು, ಪುರೋಹಿತರು ಜಪಾನಿಗೆ ಬಂದರು. ಹೀಗಾಗಿ ಚೀನಾ ಬರೆವಣಿಗೆ ಮತ್ತು ಭಾಷೆಯ ಬಳಕೆ ಹೆಚ್ಚಾಯಿತು. ಚೀನಾಭಾಷಾ ಗ್ರಂಥಗಳ ಅನುವಾದ ಮಾಡುವಾಗ ಚೀನಾ ಲಿಪಿಯನ್ನು ಜಪಾನೀ ಭಾಷೆಗೆ ಹೊಂದಾಣಿಕೆ ಮಾಡಿರುತ್ತಾರೆ. ಈ ಹೊಂದಾಣಿಕೆಗೆ ಕಾರಣಗಳೆಂದರೆ ಜಪಾನಿ ಭಾಷೆಯು ಚೀನಾದಂತೆ ಏಕೋಚ್ಚಾರ ಭಾಷೆಯಾಗಿರದೆ ಜೋಡಣೆಯ ಭಾಷೆಯಾಗಿದೆ. ಈ ಲಿಪಿಗಳು ಕೆಲವು ವೇಳೆ ಭಾವಲಿಪಿಯಾಗಿ, ಕೆಲವು ವೇಳೆ ಭಾಷಾಧ್ವನಿ ನಿರೂಪಕವಾಗಿ ಬಳಕೆಯಾಗಿವೆ. ಚೀನಾದ ಲಿಪಿಯು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬೇರೆ ಬೇರೆಯಾಗಿ ಬಳಕೆಯಾಗಿರುವುದರಿಂದ ಜಪಾನಿನ ಲಿಪಿಯೂ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಪ್ರಾಂತ್ಯಗಳಿಂದ ಪಡೆದುದಾಗಿದೆ.

ア a	カ ka	ガ ga	サ sa	ザ za	タ ta	ダ da	ナ na	ハ ha	バ ba	パ pa	マ ma	ラ ra	ワ wa	ファ fa	ン n
イ i	キ ki	ギ gi	シ shi	ジ ji	チ chi	ヂ ji	ニ ni	ヒ hi	ビ bi	ピ pi	ミ mi	リ ri		フィ fi	
ウ u	ク ku	グ gu	ス su	ズ zu	ツ tsu	ヅ zu	ヌ nu	フ fu	ブ bu	プ pu	ム mu	ル ru			
エ e	ケ ke	ゲ ge	セ se	ゼ ze	テ te	デ de	ネ ne	ヘ he	ベ be	ペ pe	メ me	レ re		フェ fe	
オ o	コ ko	ゴ go	ソ so	ゾ zo	ト to	ド do	ノ no	ホ ho	ボ bo	ポ po	モ mo	ロ ro		フォ fo	ヲ o
ヤ ya	キャ kya	ギャ gya	シャ sha	ジャ ja	チャ cha	ヂャ ja	ニャ nya	ヒャ hya	ビャ bya	ピャ pya	ミャ mya	リャ rya			
ユ yu	キュ kyu	ギュ gyu	シュ shu	ジュ ju	チュ chu	ヂュ ju	ニュ nyu	ヒュ hyu	ビュ byu	ピュ pyu	ミュ myu	リュ ryu			
ヨ yo	キョ kyo	ギョ gyo	ショ sho	ジョ jo	チョ cho	ヂョ jo	ニョ nyo	ヒョ hyo	ビョ byo	ピョ pyo	ミョ myo	リョ ryo			

ಜಪಾನಿನ ಕಟಕನ ಲಿಪಿ

ಜಪಾನಿನ ಬರೆವಣಿಗೆಯಲ್ಲಿ ಸು.೧೦,೦೦೦ ಭಾವ ಚಿಹ್ನೆ (ideogram)ಗಳಿವೆ. ಓದು ಬರೆಹ ಬರುವ ಜಪಾನಿಯ ಸುಮಾರು ೨೦೦೦ ಚಿಹ್ನೆಗಳನ್ನು ಅರಿತಿರುತ್ತಾನೆ. ಪದವೀಧರನಾದ ವ್ಯಕ್ತಿ ಸುಮಾರು ೭೦೦೦ ದಿಂದ ೮೦೦೦ ಚಿಹ್ನೆಗಳ ಪರಿಚಯ ಹೊಂದಿರುತ್ತಾನೆ. ಪೂರ್ಣವಾಗಿ ಬರೆಹವನ್ನು ಬಹು ಪರಿಣತರು ಮಾತ್ರ ತಿಳಿದಿರುತ್ತಾರೆ. ೨೦ನೆಯ ಶತಮಾನದ ಆರಂಭದಲ್ಲಿ ಬರೆವಣಿಗೆಯನ್ನೂ ಸರಳಗೊಳಿಸಿದರು. ಆಗ ಕನಿಷ್ಠ ೧,೨೦೦ ಚಿಹ್ನೆಗಳನ್ನು ಕಲಿಯಬೇಕಾಗುತ್ತಿತ್ತು. ಕ್ರಿ.ಶ.೧೯೪೨ರಲ್ಲಿ ೨೦೨೮ ಭಾವಚಿಹ್ನೆಗಳನ್ನು ನಿಗದಿಪಡಿಸಿದರು. ಜಪಾನಿನ ಭಾವಚಿಹ್ನೆಗಳು ನಾಮಪದ, ಗುಣವಾಚಕ ಮತ್ತು ಕ್ರಿಯಾಧಾತುಗಳನ್ನು ಸೂಚಿಸುವವಾಗಿವೆ. ಚೀನಾ ಭಾಷೆಯಲ್ಲಿ ಈ ವ್ಯವಸ್ಥೆ ಇಲ್ಲ.

ಜಪಾನಿನಲ್ಲಿ ಕ್ರಿ.ಶ.೮–೯ ನೆಯ ಶತಮಾನದಲ್ಲಿ 'ಕನ' ಎಂಬ ಬಗೆಯ ಬರೆವಣಿಗೆ ಆರಂಭವಾಯಿತು. ಇವು ಎರಡು ರೀತಿಯಲ್ಲಿದ್ದು, ೧. ಕಟಕನ ಅಥವಾ ಯಮತೊಗನ ಎಂಬ ಬರೆವಣಿಗೆಯನ್ನು ಕಾವ್ಯಗಳಿಗೆ, ಆಡಳಿತ ದಾಖಲೆಗಳಿಗೂ, ಲಿಪ್ಯಂತರವಾದ ವ್ಯಕ್ತಿನಾಮಗಳಲ್ಲಿ ಬಳಸಲಾಗಿದೆ. ೨. ಹಿರಗನ (ಸರಳ) ಎಂಬ ಬರೆವಣಿಗೆಯನ್ನು ವ್ಯಾಕರಣ ಗ್ರಂಥಗಳಲ್ಲಿ ಮತ್ತು ಇಂತಹದೇ ಉದ್ದೇಶಗಳಿಗೆ ಬಳಸಲಾಗಿದೆ. ಈ ಎರಡೂ ಬಗೆಯ ಲಿಪಿಗಳಲ್ಲಿ ಕಟಕನವು ಕೈಷು ಎಂಬುದರಿಂದಲೂ, ಹಿರಗನವು ತ್ಸಾವೊಷು ಎಂಬ ಚೈನಾ ಚಿಹ್ನೆಗಳಿಂದಲೇ ಬಂದವುಗಳಾಗಿವೆ.

'ಕನ' ಚಿಹ್ನೆಗಳು ನಿಜವಾದ ವರ್ಣಲಿಪಿಗಳಲ್ಲ. ಅವನ್ನು ಸ್ವತಂತ್ರ ಚಿಹ್ನೆಗಳಂತೆ ಬಳಸಲಾಗಿದೆ. ಜಪಾನಿನ ಅಕ್ಷರಗಳನ್ನು ಸ್ವತಂತ್ರವಾಗಿ ಉಪಯೋಗಿಸಬಹುದು. 'ಕನ' ಲಿಪಿಯನ್ನು

ಪೂರ್ಣಲಿಪಿಯನ್ನಾಗಿ ಇನ್ನೂ ಸ್ವೀಕರಿಸಿಲ್ಲ. ಹೀಗಾಗಿ ಭಾವಚಿಹ್ನೆಗಳನ್ನು ಪೂರ್ಣ ಬಿಡಲಾಗಿಲ್ಲ. ಜಪಾನಿನ ಕಟಕನ ಮತ್ತು ಹಿರಗನ ಬರೆವಣಿಗೆಯು ಪ್ರಾಚೀನ ಕಾಲದಲ್ಲಿ ೪೭ ಅಕ್ಷರಗಳನ್ನು ಹೊಂದಿತ್ತು. ಮುಂದೆ ಮೂರು ಅಕ್ಷರಗಳನ್ನು ಸೇರಿಸಿ ೫೦ ಅಕ್ಷರಗಳನ್ನು ಮಾಡಲಾಯಿತು. ಈ ಅಕ್ಷರಗಳನ್ನು ನಿಘಂಟುಗಳಲ್ಲಿ ಬಳಸಲಾಗಿದೆ. ಇದು ಸಂಸ್ಕೃತ ವ್ಯಾಕರಣದ ಮೂಲವನ್ನು ಹೊಂದಿದೆ. ಆದರೂ ಕಟಕನ ಮತ್ತು ಹಿರಗನ ಅಕ್ಷರಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ಹಿರಗನವು ೩೦೦ ಚಿಹ್ನೆಗಳನ್ನು ಹೊಂದಿದೆ. ಇವುಗಳಲ್ಲಿ ಮುದ್ರಣದಲ್ಲಿ ಸುಮಾರು ೧೦೦ ಚಿಹ್ನೆಗಳನ್ನು ಬಳಸುತ್ತಾರೆ. ಕಟಕನಕ್ಕಿಂತ ಹಿರಗನ ಲಿಪಿಯು ಹೆಚ್ಚು ಅಂಕುಡೊಂಕುಗಳನ್ನು ಉಳ್ಳದ್ದಾಗಿದೆ.

ಪಾರಂಪರಿಕ ಜಪಾನಿ ಲಿಪಿಯು ದಟ್ಟವಾದ ಎದ್ದು ಕಾಣುವಂತಹ ಗೆರೆಗಳನ್ನು ಹೊಂದಿದೆ. ಕುಂಚವನ್ನು ಮಸಿಯಲ್ಲಿ ಅದ್ದಿ ಇದನ್ನು ಬರೆಯುತ್ತಾರೆ. ಬರೆಯುವ ಪದ್ಧತಿ ಚೀನಾ ಲಿಪಿಯಂತೆಯೇ ಮೇಲಿನಿಂದ ಕೆಳಕ್ಕೆ ಹಾಗೂ ಬಲದಿಂದ ಎಡಕ್ಕೆ. ಆದರೆ ಒಂದೇ ಚಿಹ್ನೆಯನ್ನು ಬರೆಯುವಾಗ ಎಡದಿಂದ ಬಲಕ್ಕೆ ಬರೆಯುತ್ತಾರೆ. ಇತ್ತೀಚೆಗೆ ಇಂತಹ ನಿಯಮವೇನೂ ಇಲ್ಲ. ಎಡದಿಂದ ಬಲಕ್ಕೆ ಮುದ್ರಣವಾಗಿರುವುದೂವುಂಟು. ಕ್ರಿ.ಶ.೧೯೪೨ರಿಂದ ಇದನ್ನು ಎಡದಿಂದ ಬಲಕ್ಕೆ ಬರೆಯಲು ಸೂಚಿಸಿರುತ್ತಾರೆ. ಲತಿನ ಲಿಪಿಯ ಬಳಕೆಯನ್ನು ಜಪಾನಿ ಭಾಷೆಗೆ ಬಳಸಿದರೂ, ಜಪಾನಿ ಲಿಪಿಯ ಬಳಕೆ ಕಡಿಮೆಯಾಗಿಲ್ಲ.

**

ಅಧ್ಯಾಯ - ೩

ವರ್ಣಲಿಪಿಗಳು


ಪ್ರಪಂಚದ ಇಂದಿನ ವರ್ಣಲಿಪಿಗಳಿಗೆ ಮೂಲದಲ್ಲಿ ಚಿತ್ರಲಿಪಿಗಳೇ ಮೂಲವಾದರೂ ಚಿತ್ರಕ್ಕೂ ವರ್ಣಲಿಪಿಗೂ ಸಂಬಂಧ ಕಲ್ಪಿಸಲು ಆಗುವುದಿಲ್ಲ. ಆಯ್ಕೆಗೊಂಡ ಪದಗಳ ಉಚ್ಚಾರವನ್ನು ಮಾತ್ರ ಪಡೆದುಕೊಂಡಿರುತ್ತವೆ. 'ಅಲೇಫ್' ಎಂಬ ಶಬ್ದಕ್ಕೆ ಚಿತ್ರಲಿಪಿಯಲ್ಲಿ ಹಸುವಿನ ತಲೆ ಎಂಬ ಅರ್ಥವಿದ್ದರೆ ವರ್ಣಲಿಪಿಯಲ್ಲಿ ಬರವಣಿಗೆಯ ಚಿಹ್ನೆ ಪ್ರಧಾನವಾಯಿತು. ಅರ್ಥ ಮಾಯವಾಯಿತು. 'ಅಲೇಫ್' ಎಂಬುದು ಈ ವರ್ಣದ ಅವಸ್ಥೆಗೆ ಮಾತ್ರ ಸೀಮಿತವಾಯಿತು. ಯಾವ ಪದದಲ್ಲಿ ಬೇಕಾದರೂ ಈ ವರ್ಣವನ್ನು ಸೇರಿಸಬಹುದಿತ್ತು. ಪದವನ್ನು ರಚಿಸಬೇಕಾದಲ್ಲಿ ಈ 'ಅಲೇಫ್' ಎಂಬ ಶಬ್ದವು ಪದದಲ್ಲಿನ ಒಂದು ಸ್ವರವಾಗಿಯೋ ಅಥವಾ ವ್ಯಂಜನವಾಗಿಯೋ ಬಳಕೆಯಾಗುತ್ತದೆ.

ಲಿಪಿಗಳ ಸಂಶೋಧನೆಯು ಬರವಣಿಗೆಯ ಇತಿಹಾಸದಲ್ಲಿ ಕ್ರಾಂತಿಕಾರಿ ಸಂಶೋಧನೆ. ಮುಂದೆ ಬರವಣಿಗೆಯ ವ್ಯಾಪಕತೆಗೆ ಇದು ಕಾರಣವಾಗುತ್ತದೆ. ಈಜಿಪ್ಟ್, ಯೂಫ್ರಟಿಸ್-ಟೈಗ್ರಿಸ್ ನದಿಬಯಲಿನ ಜನ, ಮೆಡಿಟರೇನಿಯನ್ ಸಮುದ್ರ ತೀರದ ಜನರು, ಭಾರತೀಯರು ಈ ವರ್ಣಲಿಪಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ವರ್ಣಲಿಪಿ ಮೂಲ

ಈಜಿಪ್ಟಿ ಮೂಲ

ಅನೇಕ ವಿದ್ವಾಂಸರು ವರ್ಣಲಿಪಿಯ ಬಳಸಿದವರು ಮೊದಲಿಗೆ ಈಜಿಪ್ಟಿಯನ್ನರೆಂದು ಅಭಿಪ್ರಾಯಪಡುತ್ತಾರೆ. ಡೇವಿಡ್ ಡಿರಿಂಜರ್ ಅವರ ಪ್ರಕಾರ ಈಜಿಪ್ಟಿನ ಬರವಣಿಗೆಯು ಅರೆವ್ಯಂಜನ (biconsonant) ಮತ್ತು ಬಹುವ್ಯಂಜನ (uniconsonantal). ನಿಜವಾದ ವರ್ಣಮಾಲೆಯ ಉಚ್ಚಾರವು ಏಕ ವ್ಯಂಜನೋಚ್ಚಾರವನ್ನು ಹೊಂದಿರುತ್ತದೆ ಮತ್ತು ಇವಕ್ಕೆ ಒಂದು ಉಚ್ಚಾರಕ್ಕೆ ಬೇರೆ ಬೇರೆ ಚಿಹ್ನೆಗಳನ್ನು ಬಳಸಿರುತ್ತಾರೆ. ಇದಲ್ಲದೆ ಶತಮಾನಗಳ ಕಾಲ ಬರವಣಿಗೆಯನ್ನು ಬಳಸಿದರೂ ಅವರು ಚಿತ್ರಲಿಪಿಯನ್ನಾಗಲೀ, ಧಾರ್ಮಿಕ ಲಿಪಿಯನ್ನಾಗಲೀ ಸರಳೀಕರಣಗೊಳಿಸಲಿಲ್ಲ. ಈ ಕಾರಣಗಳಿಂದ ಈಜಿಪ್ಟಿನಲ್ಲಿ ವರ್ಣಲಿಪಿ ಉದಿಸಿಲ್ಲವೆಂಬ ಅಭಿಪ್ರಾಯವನ್ನು ಹೊಂದಿದ್ದಾರೆ.



ಚಿತ್ರಲಿಪಿಯಿಂದ ವರ್ಣಲಿಪಿಯ ನಿಷ್ಪತ್ತಿ (ಟಾಯ್ನರನ ವಾದ)

ಕೃಪೆ : ಡಿ. ಡಿರಿಂಜರ್

ಕ್ರೀಟರ ಮೂಲ

ಪಾಲಸ್ತಾನಿಯ ದೇಶಕ್ಕೆ ಫಿಲಾಸ್ತಾನಿಯರು ಕ್ರೀಟ್ ದೇಶದಿಂದ ವರ್ಣಲಿಪಿಯನ್ನು ತೆಗೆದುಕೊಂಡರು. ಅವರಿಂದ ಫೊನೀಷಿಯರು ಇದನ್ನು ಪಡೆದುಕೊಂಡರೆಂದು ಸರ್ ಆರ್ಥರ್ ಈವಾನ್ಸ್ ಮುಂತಾದ ಪಂಡಿತರು ವಾದ ಮಾಡಿದ್ದಾರೆ. ಆದರೆ ಫಿಲಾಸ್ತಾನೀಯರು ಪಾಲಸ್ತಾನವನ್ನು ಗೆಲ್ಲುವುದಕ್ಕೆ ಮೊದಲೇ ಶತಮಾನಗಳು ಕಳೆದಿದ್ದವು. ಇಷ್ಟಾದರೂ ಕ್ರೀಟಿನ ಬರೆವಣಿಗೆಯನ್ನು ಇನ್ನೂ ಓದಲು ಸಾಧ್ಯವಾಗಿಲ್ಲ. ಕೆಲವು ಚಿಹ್ನೆಗಳಲ್ಲಿ ಸಾಮ್ಯತೆ ಇದ್ದು ಅವೆಲ್ಲಾ ಕೇವಲ ರೇಖಾಚಿತ್ರಗಳಾಗಿವೆ.

ಸರ್ ಡಬ್ಲಿಯೂ.ಎಂ. ಫ್ಲಿಂಡರ್ ಪೆಟ್ರೀ ಎಂಬುವವನು ಫೊನೀಷಿಯಾ ಮತ್ತು ಗ್ರೀಕ್ ಲಿಪಿಗಳೊಂದಿಗೆ ಏಷಿಯಾ ಮೈನರ್, ದಕ್ಷಿಣ ಸೆಮಿಟಿಯಾ, ಸೈಪ್ರಿಯಾದ ಏಕೋಚ್ಚಾರ ಲಿಪಿ, ಈಜಿಪ್ಟಿನ ಕೆಲವು ಓದಲಾರದ ಲಿಪಿಗಳು ಮತ್ತು ಸೈನೈಟಿಯಾದ ಬರೆವಣಿಗೆಗಳು ಪ್ರಾಚೀನ ಕಾಲದಿಂದ ಮೆಡಿಟರೇನಿಯಾ ಪ್ರದೇಶದಲ್ಲಿದ್ದ ಪ್ರಾಗೈತಿಹಾಸಿಕ ಜ್ಯಾಮಿತಿ ರೇಖೆಗಳಿಂದ ಅಭಿವೃದ್ಧಿಯಾಗಿವೆಯೆಂಬ ಅಭಿಪ್ರಾಯ ಪಡುತ್ತಾನೆ. ಆದರೆ ಈ ಪ್ರಮೇಯವನ್ನು ಯಾರೂ ಒಪ್ಪಿಲ್ಲ.

ಭಾವಲಿಪಿ

ಕೆಲವು ಪ್ರಾಚೀನ ವರ್ಣಲಿಪಿಗಳು ವಸ್ತುಗಳಿಗೆ ಅನ್ವಯಿಸಿದ್ದು, ಆ ಹೆಸರುಗಳನ್ನೇ ಅವಕ್ಕೆ ನೀಡಲಾಗಿದೆ. ಈ ಚಿಹ್ನೆಗಳನ್ನು ಹಿಂದೆ ಭಾವಲಿಪಿಯಾಗಿ ಬಳಸುತ್ತಿದ್ದರು. ಈಜಿಪ್ಟ್ ಅಥವಾ ಬಾಬಿಲೋನಿಯದ ಸಹಜವಾದ ಚಿಹ್ನೆಗಳು ಯಾವುದೇ ಭಾವಲಿಪಿಯಿಂದ ಪಡೆದವಾಗಿರುತ್ತವೆಯೆಂಬ ವಾದಕ್ಕೆ ಹೆಚ್ಚಿನ ಪುರಾವೆಗಳು ದೊರೆತಿಲ್ಲ.

ಸಿನಿಯಾಟರ ಮೂಲ

ಕ್ರಿ.ಶ.೧೯೦೪-೦೫ರಲ್ಲಿ ದೊರೆತ ಸಿನೈಟಿಕರ ಅನೇಕ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಸಿನೈಟಿಯರ ಶಾಸನಗಳು ಬರೆವಣಿಗೆಯ ಹಂತದಲ್ಲಿದ್ದು ಈಜಿಪ್ಟಿನ ಚಿತ್ರಲಿಪಿಗೂ, ಸೆಮೆಟಿಯಾ ಲಿಪಿಗೂ ಕೊಂಡಿಯಂತಿವೆಯೆಂದಿರುತ್ತಾರೆ. ಕೆಲವು ವಿದ್ವಾಂಸರು ಸೈನೈಟಿಯಾ ಶಾಸನಗಳು ಸೆಮೆಟಿಯಾ ಭಾಷೆಯವಾಗಿದ್ದು ಇವನ್ನು ಈಜಿಪ್ಟಿನ ಚಿತ್ರಲಿಪಿ ಮತ್ತು ಸೆಮೆಟಿಯಾ ಲಿಪಿಯನ್ನು ಬಲ್ಲವರು ಬರೆದಿರುವರೆಂಬ ಅಭಿಪ್ರಾಯ ಪಡುತ್ತಾರೆ. ಈ ಬಗ್ಗೆ ಇನ್ನೂ ಹೆಚ್ಚಿನ ಶೋಧನೆಯಾಗಬೇಕೆಂಬ ಅಭಿಪ್ರಾಯ ಪಡುತ್ತಾರೆ.

ಉಗರಿತ್ ಮೊಳೆ ಲಿಪಿಯ ಮೂಲ


ಸಿರಿಯಾದ ಸಮುದ್ರ ತೀರದ, ಸೈಪ್ರಸ್ ಭೂಶಿರದಿಂದ ಪೂರ್ವಕ್ಕೆ ಪ್ರಾಚೀನ ಉಗರಿತ್‌ನ ರಾಸ್‌ಷರ್‍ರಾ ಎಂಬಲ್ಲಿ ದೊರೆತಿರುವ ಅನೇಕ ಮಣ್ಣಿನ ಮುದ್ರಿಕೆಗಳು ಆ ಪ್ರದೇಶದ ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹವಾಗಿವೆ. ಈ ಮುದ್ರಿಕೆಗಳಲ್ಲಿನ ಲಿಪಿಗಳು ೩೨ ಅಕ್ಷರಗಳ ವರ್ಣಮಾಲೆಯನ್ನು ಹೊಂದಿವೆ. ಇದು ಸುಮೇರಿಯಾ-ಬ್ಯಾಬಿಲೋನಿಯಾ-ಅಸ್ಸೀರಿಯಾದ ಮೊಳೆಯಾಕಾರದ ಅಕ್ಷರಗಳೊಡನೆ ಯಾವುದೇ ಸಂಬಂಧ ಹೊಂದಿಲ್ಲದ ಮೊಳೆಯಾಕಾರದ ಅಕ್ಷರಗಳನ್ನು ಹೊಂದಿದೆ. ಬರೆವಣಿಗೆ ರೀತಿಯಲ್ಲಿ ಮಾತ್ರ ಸಾಮ್ಯತೆ ಇದೆ. ಬರೆವಣಿಗೆ ಬರೆಯುವ ದಿಕ್ಕು ಉತ್ತರ ಸೆಮೆಟಿಯದಂತೆ ಎಡದಿಂದ ಬಲಕ್ಕೆ. ಈ ಬರೆವಣಿಗೆಯ ಕ್ರಿ.ಪೂ.೧೬-೧೫ನೆಯ ಶತಮಾನದಲ್ಲಿ ಆರಂಭವಾಗಿ ಕ್ರಿ.ಪೂ.೧೩ನೆಯ ಶತಮಾನಕ್ಕೆ ನಿಲ್ಲುತ್ತದೆ. ಇದರ ಆರು ಲಿಪಿಗಳು ಉತ್ತರ ಸೆಮೆಟಿಯಾ ಲಿಪಿಯ ಉಚ್ಚಾರಣೆಯನ್ನು ಹೊಂದಿದೆ.

ಉತ್ತರ ಸೆಮೆಟಿಯಾ ವರ್ಣಲಿಪಿಯ ಪರಿಚಯವಿರುವವನು ಅದರಿಂದ ಉಗರಿತ್‌ನ ವರ್ಣಲಿಪಿಯ ವ್ಯಂಜನಗಳನ್ನು ಪಡೆದಿರಬಹುದು. ಚಾವೇರ್ ಎಂಬ ವಿದ್ವಾಂಸನ ಪ್ರಕಾರ ಉಗರಿತ್ ಲಿಪಿಯನ್ನು ಸೆಮೆಟಿಯಾವಲ್ಲದ ಭಾಷೆಗೆ ಕಂಡುಹಿಡಿದಿದ್ದಂತೆ. ದುಸಂದ್ ಎಂಬುವವನ ಪ್ರಕಾರ ಬೈಬ್ಲೋದವರು ಬಳಸುತ್ತಿದ್ದ ವರ್ಣನಾತ್ಮಕ ಲಿಪಿಯನ್ನು ಮೊಳೆಯಾಕಾರದ ಲಿಪಿಯನ್ನು ರೂಪಿಸಿದವನು ತಿಳಿದವನಾಗಿದ್ದ.

ಈ ಲಿಪಿಗೆ ಸಂಬಂಧಿಸಿದಂತೆ ಅನೇಕ ತೊಡಕುಗಳಿದ್ದು ಮುಖ್ಯವಾಗಿ ಇದರಲ್ಲಿನ ವರ್ಣಮಾಲೆ. ಇದರಲ್ಲಿ ೩೨ ವರ್ಣಗಳಿವೆ. ಆದರೆ ಉತ್ತರ ಸೆಮೆಟಿಯಾದಲ್ಲಿ ೨೨ ವರ್ಣಗಳಿವೆ. ಈ ವರ್ಣಗಳನ್ನು ಸರಿಯಾಗಿ ವಿವರಿಸಲು ಸಾಧ್ಯವಾಗಿಲ್ಲ.

ಉಗ್ರಿತ್‌ನ ಮೊಳೆಯ ಲಿಪಿಯಿಂದ ಉದಿಸಿರಬಹುದಾದ ವರ್ಣಲಿಪಿ





ಕೃಪೆ : ಡಿ. ಡಿರಿಂಜರ್

ಬೈಬ್ಲೋಗಳ ತೋರಿಕೆ ಲಿಪಿ

ಬೈಬ್ಲೋಗಳ ತೋರಿಕೆಯ (pseudo) ಚಿತ್ರಲಿಪಿಯು ಈಗಿನ ವರ್ಣಲಿಪಿಗೆ ಮೂಲವೆಂದು ಮಾರಿಸ್ ಡುನಂದ್ ಅವರು ವಾದಿಸುತ್ತಾರೆ. ಇವನ ಪ್ರಕಾರ ಎರಡು ಬಗೆಯ ಮಧ್ಯಸ್ಥ ಚಿಹ್ನೆ ಕಾಣಸಿಕೊಳ್ಳುತ್ತವೆ. ಈ ಮಧ್ಯಸ್ಥ ತೋರಿಕೆಯ ಚಿತ್ರಲಿಪಿಯ ಚಿಹ್ನೆಗಳು ರೇಖಾಕೃತಿಗಳನ್ನು ಹೊಂದಿವೆ. ಒಂದು ಸಮಯ ಈ ತೋರಿಕೆಯ ಚಿತ್ರಲಿಪಿಯ ಚಿಹ್ನೆಗಳನ್ನು ಸೆಮೆಟಿಯೇತರ ಜನ ಕಂಡುಹಿಡಿದರೂ ಇವರ ರೇಖಾ ಬರೆವಣಿಗೆಯನ್ನು ಅದರ ಸರಳೀಕರಣದೊಂದಿಗೆ ಫೊನೀಷಿಯಾ ಭಾಷೆಗೆ ಹೊಂದುವಂತೆ ಬಳಸಲಾಯಿತು.

ಈ ಲಿಪಿಯ ಬಗ್ಗೆ ಆರು ಅಂಶಗಳನ್ನು ಡುನಂದ್ ಅವರು ತಿಳಿಸುತ್ತಾರೆ. ಬೈಬ್ಲೋಗಳ ಎರಡೂ ಲಿಪಿಗಳು ಒಂದೇ ಪ್ರಾಂತ್ಯದಲ್ಲಿ ಬಳಕೆಯಲ್ಲಿದ್ದವು. ಫೊನೀಷಿಯಾದ ಬಹುತೇಕ

ಲಿಪಿಗಳು ಬೈಬ್ಲೋಗಳ ತೋರಿಕೆಯ ಚಿತ್ರಲಿಪಿಯ ರೇಖೆಯನ್ನು ಹೋಲುತ್ತಿವೆ. ಎರಡೂ ಲಿಪಿಗಳ ಬರೆಯುವ ದಿಕ್ಕು ಬಲದಿಂದ ಎಡಕ್ಕೆ. ಎರಡೂ ಬಗೆಯ ಲಿಪಿಗಳನ್ನು ಒಂದೇ ಬಗೆಯ ವಸ್ತುಗಳ ಮೇಲೆ ಬರೆಯಲಾಗಿದೆ. ಈ ಬೈಬ್ಲೋಗಳ ಬರೆವಣಿಗೆ ಈಜಿಪ್ಟಿನ ಚಿತ್ರಲಿಪಿಯನ್ನು ಅನುಸರಿಸಿದ್ದು ಗೆರೆಗಳು ಅಡ್ಡ-ಅಡ್ಡವಾಗಿವೆ. ಕೆಲವು ತೋರಿಕೆಯ ಚಿತ್ರಲಿಪಿಗಳನ್ನು, ಕೆಲವು ವರ್ಣಲಿಪಿಯಂತಹ ಬರೆವಣಿಗೆಯಲ್ಲಿ ಉದ್ಭವಾದ ಚಿಹ್ನೆಗಳಿಂದ ಪದಗಳನ್ನು ಬೇರ್ಪಡಿಸಿದೆ. ಬೈಬ್ಲೋಗಳ ತೋರಿಕೆಯ ಲಿಪಿಯ ಕಾಲ ಕ್ರಿ.ಪೂ.೨೦೦೦-೧೮೦೦.

ದುನಂಡ್ ಅವರ ವಾದದಲ್ಲಿ ಕೆಲವು ತೊಡಕುಗಳನ್ನು ವಿದ್ವಾಂಸರು ಗುರುತಿಸುತ್ತಾರೆ. ಬೈಬ್ಲೋಗಳ ತೋರಿಕೆಯ ಚಿತ್ರಲಿಪಿಯು, ವರ್ಣಲಿಪಿಯ ಮೂಲ ಬರೆವಣಿಗೆಯೆಂಬುದನ್ನು ಒಪ್ಪಬಹುದಾದರೂ ನಿಖರವಾಗಿ ವಾದವನ್ನು ಮಂಡಿಸುವುದು ಸಾಧ್ಯವಾಗಿಲ್ಲ. ಶಾಸನಗಳ ಕಾಲದ ಬಗ್ಗೆ ಸ್ಪಷ್ಟವಿಲ್ಲ. ಆದರೂ ಬೈಬ್ಲೋಗಳು ಕ್ರಿ.ಪೂ.೨೦೦೦ದಲ್ಲಿಯೇ ವರ್ಣಲಿಪಿಯನ್ನು ಪರಿಚಯಿಸಲು ಪ್ರಯತ್ನಿಸಿದರು.

ಕನ್ನಾನೈಟ್ ಮೂಲ

ಗೆಜರ್, ಶೆಷಮ್, ಬೆಟ್-ಎಲ್-ಹೆಸಿ, ಟೆಲ್-ಎಲ್-ಅಜ್ಜುಲ್, ಲೆಷಿಶ್ ಮುಂತಾದ ಕಡೆ ಶಾಸನಗಳಿರುವ ಮಡಕೆ, ಕಲ್ಲಿನ ಫಲಕಗಳು ದೊರೆತಿವೆ. ಡಿರಿಂಜರ್ ಅವರ ಪ್ರಕಾರ ಈ ಶಾಸನಗಳಿಂದ ಕನ್ನಾನೈಟ್‌ನಲ್ಲಿ ಕ್ರಿ.ಪೂ.೨೦೦೦ ವರ್ಷಗಳಷ್ಟು ಹಿಂದೆಯೇ ವರ್ಣನಾತ್ಮಕ ಬರೆವಣಿಗೆಯನ್ನು ಬಳಸಿರುವುದನ್ನು ಕಾಣಬಹುದಾಗಿದೆ. ದುನಂಡ್ ಅವರ ಪ್ರಕಾರ ಕ್ರಿ.ಪೂ.೨೦೦೦ದಲ್ಲಿ ಪಾಲಸ್ತೀನ್ ದೇಶವು ವರ್ಣನಾತ್ಮಕ ಲಿಪಿಯನ್ನು ರೂಪಿಸುವಲ್ಲಿ ಪ್ರಯೋಗ ಕೇಂದ್ರವಾಗಿತ್ತು. ಒಂದೆಡೆ ಈಜಿಪ್ಟ್, ಪ್ರಾಚೀನ ಸೈನಾಟಿಯಾ ಮತ್ತು ಕ್ರೀಟ್. ಇನ್ನೊಂದೆಡೆ ಉತ್ತರ ಸೆಮೆಟಿಯಾ ಲಿಪಿಗಳಿದ್ದವು. ಈ ಕನ್ನಾನೈಟ್ ಲಿಪಿಗಳು ಉತ್ತರ ಸೆಮೆಟಿಯಾ ಲಿಪಿಗಳಿಗೆ ಹತ್ತಿರವಾಗಿವೆ. ಹೀಗಾಗಿ ಈ ಕನ್ನಾನೈಟ್ ಲಿಪಿಗಳೇ ಈಗಿನ ಲಿಪಿಯ ಪ್ರಾಚೀನ ರೂಪವಾಗಿರಬೇಕು ಅಥವಾ ಮೂಲ ಲಿಪಿಯ ಇನ್ನೊಂದು ಶಾಖೆಯಾಗಿರಬೇಕೆಂಬ ಅಭಿಪ್ರಾಯಪಡುತ್ತಾರೆ.

ಇಷ್ಟೆಲ್ಲಾ ವಾದಗಳು ನಡೆಯುತ್ತಿರುವಾಗಲೇ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಶಾಸನಗಳು ದೊರೆತಿವೆ. ಕ್ರಿ.ಪೂ.೯ನೆಯ ಶತಮಾನದ ಉತ್ತರ ಸೆಮೆಟಿಯಾ ಶಾಸನವು ಮೇಷ ಎಂಬಲ್ಲಿ ದೊರೆತಿದೆ. ಸೈಪ್ರಸ್‌ನಲ್ಲಿ ಇದೇ ಕಾಲಕ್ಕೆ ಸೇರಿದ ಫೊನೀಷಿಯಾ ಶಾಸನ ದೊರೆತಿದೆ. ಸಿರಿಯಾದ ಜೆಂಜಿಲಿನ ಎಂಬಲ್ಲಿ ದೊರೆತಿರುವ ಕ್ರಿ.ಪೂ.೯ನೆಯ ಶತಮಾನದ ಅರಾಮಿಯಾ ಶಾಸನಗಳು ವರ್ಣಲಿಪಿಯನ್ನು ಹೊಂದಿದ ಶಾಸನಗಳಾಗಿವೆ. ಕ್ರಿ.ಪೂ.೧೩ನೆಯ ಶತಮಾನಕ್ಕೆ ಸೇರಿದ ಶಾಸನವೊಂದು ಉತ್ತರ ಸೆಮೆಟಿಯಾ ಭಾಷೆಯಲ್ಲಿದ್ದು ಅಬಿರಂ ಎಂಬಲ್ಲಿನ ಶವಸಂಪುಟದ ಮೇಲೆ ದೊರೆತಿದೆ. ಇವೆಲ್ಲಾ ಬರೆವಣಿಗೆಯ ಇತಿಹಾಸಕ್ಕೆ ಕೊಡುಗೆಗಳನ್ನು ನೀಡಿವೆ.

ಈ ಲಿಪಿಯನ್ನು ಯಾರು ಕಂಡುಹಿಡಿದರೆಂಬುದು ಇನ್ನೂ ಸ್ಪಷ್ಟವಾಗಿ ತೀರ್ಮಾನವಾಗದಿದ್ದರೂ ಒಂದಲ್ಲಾ ಒಂದು ರೀತಿಯಲ್ಲಿ ಈ ಪ್ರದೇಶದಲ್ಲಿನ ಸೆಮೆಟಿಯನ್ನರು, ಹಿಬ್ರೂಗಳು, ಹಿತ್ತೈತ್ತರು ಮುಂತಾದವರು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಇವರಲ್ಲಿ ಸೆಮೆಟಿಯನ್ನರ ಪಾತ್ರ ಬಹು ಮುಖ್ಯವಾದದ್ದು. ಪಾಲಸ್ತೀನ್ ಮತ್ತು ಸಿರಿಯಾ ದೇಶಗಳು ಹಿಂದೆ

ಅನೇಕ ದೇಶಗಳಿಗೆ ವ್ಯಾಪಾರ ಇತ್ಯಾದಿಗಳಿಗೆ ಸೇತುವೆಯಂತೆಯಿಂದ್ದವು. ಮೆಸಪೊಟೋಮಿಯಾದ ವ್ಯಾಪಾರಿಗಳು ಸಿರಿಯಾ ಅಥವಾ ಪಾಲಸ್ತೀನ್ ಬಂದರುಗಳಿಂದ ವ್ಯಾಪಾರ ಮಾಡುವುದರ ಮೂಲಕ ಈ ದೇಶದ ಸಂಪರ್ಕವನ್ನು ಹೊಂದಿದ್ದರು. ಇದಕ್ಕೆ ಪೂರಕವಾಗಿ ಬೇರೆ ಬೇರೆ ಲಿಪಿಯ ಮುದ್ರಿಕೆಗಳು ಸಿರಿಯಾದಲ್ಲಿ ದೊರೆತಿವೆ. ಭೌಗೋಳಿಕವಾಗಿ ಈ ದೇಶಗಳು ಪ್ರಾಚೀನ ನಾಗರೀಕತೆಯ ದೇಶಗಳ ಮಧ್ಯೆ ಇದ್ದವು. ಬೈಬ್ಲೋನಗರವು ಈ ಲಿಪಿಯ ಉಗಮ ಸ್ಥಾನವಾಗಿರಬೇಕೆಂದು ದುನಿಂದ್ ಅವರು ಅಭಿಪ್ರಾಯ ಪಡುತ್ತಾರೆ. ಕೆಲವು ಹೇಳಿಕೆಗಳ ಪ್ರಕಾರ ಪಾಲಸ್ತೀನನ್ನು ಅಕ್ಷರಗಳ ನಗರವೆಂದೂ ಬೈಬ್ಲೋವನ್ನು ಪುಸ್ತಕಗಳ ನಗರವೆಂದೂ ಕರೆದಿದ್ದಾರೆ. ಆದರೆ ಇದಕ್ಕೆ ಯಾವುದೇ ಆಧಾರಗಳಿಲ್ಲ.

ಲಿಪಿಯನ್ನು ಕಂಡುಹಿಡಿದ ಸಂದರ್ಭದಲ್ಲಿ ಬರೀ ಚಿಹ್ನೆಗಳನ್ನು ಮಾತ್ರ ಸೃಷ್ಟಿಸಲಿಲ್ಲ. ಪೂರ್ಣವಾಗಿ ವರ್ಣಮಾಲೆಯನ್ನು ಸೃಷ್ಟಿಸಿದ್ದರು. ಪ್ರತಿ ಚಿಹ್ನೆಯೂ ಒಂದೊಂದು ಧ್ವನಿಗೆ ನಿಗದಿಯಾಯಿತು. ಇಂದು ವರ್ಣಮಾಲೆ ನಮಗೆ ಬಹು ಸರಳವೆನ್ನಿಸಬಹುದು. ಆದರೆ ಹಿಂದೆ ಅಕ್ಷರವನ್ನು ಕಂಡುಹಿಡಿದಿದ್ದೇ ನಾಗರೀಕತೆಗೆ ನಾಂದಿಯಾಗಿದೆ. ಈ ಅಕ್ಷರಕ್ರಾಂತಿ ಮಾನವ ಸಂಸ್ಕೃತಿಗೆ ಭವ್ಯ ಕೊಡುಗೆ ನೀಡಿದೆ. ಈಜಿಪ್ಟ್, ಮೆಸಪೊಟೋಮಿಯಾ, ಕ್ರೀಟ್, ಏಷಿಯಾ ಮೈನರ್ ಪ್ರದೇಶದ ಜನ, ಸಿಂಧೂಕಣಿವೆ, ಚೈನಾ, ಮಧ್ಯ ಅಮೇರಿಕಾ ಮುಂತಾದೆಡೆಯ ಜನ ಈ ಅಕ್ಷರ ಸೃಷ್ಟಿಸುವ ಕ್ರಾಂತಿಯಲ್ಲಿ ಪಾಲ್ಗೊಂಡಿದ್ದಾರೆ. ಕೆಲವು ನಾಗರೀಕತೆಗಳಲ್ಲಿ ಪೂರ್ಣ ಲಿಪಿ ಹೊಂದಲಾಗಲಿಲ್ಲ. ಕೇವಲ ಉಚ್ಚಾರಾಂಶ (syllabary)ವನ್ನು ಹೊಂದಿದ್ದವು.

ಉತ್ತರ ಸೆಮೆಟಿಯಾ ಲಿಪಿ

ಉತ್ತರ ಸೆಮೆಟಿಯಾ ವರ್ಣಲಿಪಿಯು ೨೨ ಅಕ್ಷರಗಳನ್ನು ಹೊಂದಿದ್ದು, ಇವು ಗ್ರೀಕ್ ವರ್ಣಲಿಪಿಯ ಆರಂಭದ ೨೨ ಲಿಪಿಗಳಿಗೆ ಮೂಲವಾಗಿದೆ. ಈ ೨೨ ಅಕ್ಷರಗಳೂ ಶುದ್ಧ ವ್ಯಂಜನಗಳಾಗಿದ್ದವು. ಮುರೈಸ್ ಮತ್ತು ದುನಂದ್ ಅವರು ಹೇಳುವಂತೆ ಸೆಮೆಟಿಯರು ಉದ್ದೇಶಪೂರ್ವಕವಾಗಿ ಸ್ವರಗಳನ್ನು ತೋರಿಸಲಿಲ್ಲ. ಸಿದ್ಧವಿದ್ದ ಅಕ್ಷರಗಳನ್ನು ಪಡೆದರು ಮತ್ತು ಲಿಪಿಯ ಬಳಕೆಯ ಕ್ಷೇತ್ರ ವಿಸ್ತಾರವಾದದ್ದು ಇದಕ್ಕೆ ಕಾರಣವಾಗಿರಬಹುದು. ಇನ್ನೂ ಕೆಲವು ವಿದ್ವಾಂಸರ ಪ್ರಕಾರ ಪ್ರತಿ ಅಕ್ಷರವೂ ಏಕ ಉಚ್ಚಾರವನ್ನು ಹೊಂದಿರದೆ ಉಚ್ಚಾರಾಂಶದ ಮೌಲ್ಯವನ್ನು ಹೊಂದಿದೆ ಎಂದಿದ್ದಾರೆ.

ಇದಕ್ಕೆ ಮುಖ್ಯ ಕಾರಣ ವರ್ಣಲಿಪಿಯು ಪಶ್ಚಿಮದಲ್ಲಿ ಸೃಷ್ಟಿಯಾದದ್ದು ಸೆಮೆಟಿಯಾ ಭಾಷೆಗಳಿಗೆ ಅದು ಹೊಂದಿಕೊಳ್ಳುತ್ತಿತ್ತು. ಈ ಲಿಪಿ ಸೃಷ್ಟಿಯಾದ ಕಾಲದಲ್ಲಿ ಅದು ಶುದ್ಧ ವರ್ಣಲಿಪಿಯಾಗಿತ್ತು. ಆದರೆ ಯಾವ ವರ್ಣಲಿಪಿಯೂ ಪೂರ್ಣವಲ್ಲ. ಆಯಾಭಾಷೆಗೆ ಮಾತ್ರ ಆ ಲಿಪಿ ಸರಿಹೊಂದುತ್ತದೆ. ಕೆಲವು ಭಾಷೆಗಳಲ್ಲಿ ಹಿಂದೆ ಇದ್ದ ಉಚ್ಚಾರವು ಕಳೆದುಹೋಗಿದೆ. ಉದಾರಣೆಗೆ would, wood, cat, mat, bat ಇಲ್ಲಿ (ಅ) ಕಾರವು 'ಆ' ಎಂಬಂತೆ ಉಚ್ಚಾರವಾಗುತ್ತಿದೆ. got, goat ... ಇತ್ಯಾದಿ

ಈ ಉಚ್ಚಾರದ ವ್ಯತ್ಯಾಸಕ್ಕೆ ಕಾರಣ ಜನರಲ್ಲ. ಆ ಪ್ರದೇಶದಲ್ಲಿನ ಸ್ವರಗಳಲ್ಲಿನ ಉಚ್ಚಾರದಲ್ಲಿ ವ್ಯತ್ಯಾಸವೇ ಕಾರಣ ಆಗಿರುತ್ತದೆ.

ದಕ್ಷಿಣ ಸೆಮೆಟಿಯಾ ವರ್ಣಲಿಪಿಗಳು

ದಕ್ಷಿಣ ಸೆಮೆಟಿಯಾ ಶಾಸನಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ೧. ದಕ್ಷಿಣ ಅರೇಬಿಯಾದ ಶಾಸನಗಳು. ೨. ಉತ್ತರ ಅರೇಬಿಯಾದ ಶಾಸನಗಳು. ಅರೇಬಿಯಾ ದೇಶವು ಕ್ರಿ.ಪೂ.೨೦೦೦ ವರ್ಷಗಳಷ್ಟು ಹಿಂದಿನ ನಾಗರೀಕತೆಯನ್ನು ಹೊಂದಿದ ದೇಶವಾಗಿತ್ತು. ಭಾರತದಿಂದ ನಡೆಯುತ್ತಿದ್ದ ವ್ಯಾಪಾರಕ್ಕೂ ಮೆಡಿಟರೇನಿಯನ್ ಸಮುದ್ರ ವ್ಯಾಪಾರದ ಮಧ್ಯವರ್ತಿಯಾಗಿತ್ತು. ಇಸ್ಲಾಂನ ಉದಯದೊಂದಿಗೆ ಅಲ್ಲಿನ ಪ್ರಾಚೀನ ನಾಗರೀಕತೆ ನಾಶವಾಯಿತು. ಯಮನ್ ರಾಜ್ಯವೂ ಸಹ ಪ್ರಾಚೀನ ರಾಜ್ಯಗಳಲ್ಲೊಂದು. ಇದರೊಂದಿಗೆ ಸಬೀಯನ್ ರಾಜ್ಯ, ಇವೆಲ್ಲಾ ಅರೇಬಿಯಾದಲ್ಲಿನ ಪ್ರಾಚೀನ ನಾಗರೀಕತೆಯ ರಾಜ್ಯಗಳು.

ದಕ್ಷಿಣ ಅರೇಬಿಯಾದಲ್ಲಿ ಸು. ೨೫೦೦ ಶಾಸನಗಳು ದೊರೆತಿವೆ. ಇವುಗಳನ್ನು ಐದು ಭಾಗಗಳಾಗಿ ವಿಂಗಡಿಸಬಹುದು. ೧. ಮೀನಿಯನ್, ೨. ಸಬೀಯನ್, ೩. ಹಿಮ್ಯರಿಟಿಕ್, ೪. ಕ್ವಟಬನಿಕ್ ಮತ್ತು ೫. ಹಧ್ರಮೌಟಿಕ್.

ಈ ಶಾಸನಗಳಲ್ಲಿ ೨೯ ವರ್ಣಗಳನ್ನು ಗುರುತಿಸಬಹುದಾಗಿದೆ. ಇವುಗಳನ್ನು ಬಲದಿಂದ ಎಡಕ್ಕೆ ಬರೆಯಲಾಗಿದೆ. ಕೆಲವನ್ನು ಹಾವಿನ ನಡಿಗೆಯಂತೆ (boustrophedon) ಬರೆಯಲಾಗಿದೆ. ಪ್ರಾಚೀನ ಹಿಬ್ರೂ, ಫೊನೀಷಿಯಾ, ಅರಾಮಿಯಾ ಭಾಷೆಗಳು ಅರೇಬಿಯಾದ ವಾಯುವ್ಯಕ್ಕಿದ್ದು ಅರೇಬಿಯಾ ಭಾಷೆಗೆ ಉಪಭಾಷೆಗಳಾಗಿದ್ದರೆ ಈಶಾನ್ಯಕ್ಕೆ ಬ್ಯಾಬಿಲೋನಿಯಾ ಮತ್ತು ಅಸ್ಸಿರಿಯಾ ಮುಂತಾದ ಪ್ರಬೇಧಗಳಿದ್ದವು.

ಉತ್ತರ ಅರೇಬಿಯಾ ಶಾಸನಗಳು

ಈ ಶಾಸನಗಳು ಅರೇಬಿಯಾದ ವಾಯುವ್ಯ ಪ್ರದೇಶ, ಸಿರಿಯಾ ಮತ್ತು ಜೋರ್ಡಾನ್‌ನಲ್ಲಿ ದೊರೆತಿವೆ. ಈ ಶಾಸನಗಳು ಒಂದೇ ರೀತಿಯಲ್ಲಿಲ್ಲ, ಬಹುಶಃ ಹಿಂದಿನ ಅಲೆಮಾರಿ ಜನಾಂಗ ಬರೆದಿರುವುದರಿಂದ ಗುಂಡಗೂ ಇಲ್ಲ, ಈ ಶಾಸನಗಳನ್ನು ಮೂರು ಗುಂಪಾಗಿ ವಿಂಗಡಿಸುತ್ತಾರೆ.

೧. ಥಮದನೆ ಅಥವಾ ಥಮುದಿಕ್ – ಸುಮಾರು ೧೭೦೦ ಶಾಸನಗಳನ್ನು ಹೊಂದಿರುವ ಇವು ಕ್ರಿ.ಪೂ.೬–೫ನೆಯ ಶತಮಾನಕ್ಕೆ ಸೇರಿದವುಗಳು.

೨. ದೆದಾನ್ ಶಾಸನಗಳು – ಕ್ರಿ.ಪೂ.೭–೬ನೆಯ ಶತಮಾನಕ್ಕೆ ಸೇರಿವೆ. ಓಯಸಿಸ್ಸಿನ ಬಳಿ ಇರುವ ಉಲಾ ಎಂಬ ಸ್ಥಳವು ಹಿಂದೆ ಪ್ರಸಿದ್ಧವಾದ ವ್ಯಾಪಾರ ಕೇಂದ್ರವಾಗಿತ್ತು. ಇಲ್ಲಿ ಈ ಶಾಸನಗಳು ಹೆಚ್ಚಿಗೆ ದೊರೆತಿವೆ.

೩. ಸಪಹಿಟಿಕ್ ಶಾಸನಗಳು – ಡಮಾಸ್ಕಸ್‌ನ ಆಗ್ನೇಯಕ್ಕೆ ಎನ್–ಸಫ ಎಂಬ ಜಿಲ್ಲೆಯಲ್ಲಿ ಹೆಚ್ಚಾಗಿ ದೊರೆತಿವೆ. ಈ ಶಾಸನಗಳು ಕ್ರಿಸ್ತಶಕದ ಆರಂಭ ಕಾಲಕ್ಕೆ ಸೇರಿದವು.

ಈ ಅರೇಬಿಯಾ ಲಿಪಿಗಳ ಮೂಲದ ಬಗ್ಗೆ ಕೆಲವು ವಾದಗಳಿವೆ. ೧. ಸಬೀಯನ್ ಲಿಪಿಯು ದಕ್ಷಿಣ ಸೆಮೆಟಿಯಾದ ಎಲ್ಲಾ ಲಿಪಿಗಳಿಗೆ ಮೂಲವೆಂದಿದ್ದು ಇದು ಉತ್ತರ ಸೆಮೆಟಿಯಾ ಲಿಪಿಯನ್ನು ಹೋಲುತ್ತಿದ್ದ ಗ, ತೇಥ್, ಅಯಿನ್, ಷ್, ತ್ ಗಳ ಅದೇ ಉಚ್ಚಾರವನ್ನು ಹೊಂದಿವೆ.

ಗ್ರಿಮ್ಮ್ ಎಂಬಾತ ಥಮುದೆನೆ ಲಿಪಿಯೇ ಪ್ರಾಚೀನವಾದ ಉತ್ತರ ಅರೇಬಿಯಾ ಲಿಪಿಯೆಂದಿರುತ್ತಾನೆ. ಮೂರ್ರೈಸ್ ದುಸಂದ್ ಎಂಬುವವನು ಬೈಬ್ಲೋಗಳ ತೋರಿಕೆಯ ಚಿತ್ರಲಿಪಿಯೊಂದಿಗೆ ದಕ್ಷಿಣ ಸೆಮೆಟಿಕ್‌ನ ಸಂಬಂಧವಿತ್ತೆಂದು ಹೇಳಿ ಈ ತೋರಿಕೆಯ ಚಿತ್ರಲಿಪಿಗೆ ಸರಿಹೊಂದುವ ೧೮ ಚಿಹ್ನೆಗಳನ್ನು ಗುರುತಿಸಿದ್ದಾನೆ. ಬೈಬ್ಲೋಗಳ ರೇಖೆಗಳನ್ನು ಸಬೀಯರು ಪಡೆದರು. ಆದರೆ ಉಚ್ಚಾರಣೆಯನ್ನು ಪಡೆಯಲಿಲ್ಲ. ಬೈಬ್ಲೋಗಳು ಮತ್ತು ಸಬೀಯರ ಮಧ್ಯೆ ಸಂಬಂಧಗಳಿತ್ತು. ಹೀಗಾಗಿ ಸಬೀಯರು ಈ ಲಿಪಿಯನ್ನು ಕಂಡುಹಿಡಿದರು ಎಂದಿರುತ್ತಾನೆ. ಸೇಥೆ, ನೆಲ್‌ಸನ್, ಆಲ್‌ಬ್ರೈಟ್ ಮುಂತಾದವರು ಬೇರೆ ಬೇರೆ ವಾದಗಳನ್ನು ಮಂಡಿಸಿದ್ದರೂ ಡೇವಿಡ್ ಡಿರಿಂಜರ್ ಅವರು ದಕ್ಷಿಣ ಸೆಮೆಟಿಯಾ ಲಿಪಿಗಳು ಪ್ರಾಚೀನ ಸೈನಾಟಿಯ ಲಿಪಿಯಿಂದ ನೇರವಾಗಿ ಉದಿಸಿದವುಗಳಾಗಿವೆ. ಉತ್ತರ ಸೆಮೆಟಿಯಾ ಲಿಪಿಯು ಉಗಮವಾದ ಅನೇಕ ಶತಮಾನಗಳ ನಂತರ ದಕ್ಷಿಣದ ಈ ಲಿಪಿಗಳು ಉದಿಸಿವೆ. ದಕ್ಷಿಣದ ಬುದ್ಧಿವಂತ ಯಾತ್ರಿಕರು ಲಿಪಿಯ ಬಗ್ಗೆ ಒಂದು ಅಭಿಪ್ರಾಯವುಳ್ಳವರಾಗಿದ್ದರು. ತಮಗೆ ಬೇಕಾದ ಒಂದು ಲಿಪಿಯನ್ನು ರೂಪಿಸಿದ್ದರು. ಹೀಗೆ ರೂಪಿಸುವಾಗ ಉತ್ತರ ಸೆಮೆಟಿಯಾ ಲಿಪಿಯನ್ನು ಆಧಾರವಾಗಿ ಹೊಂದಿದ್ದರು ಎಂದಿದ್ದಾರೆ.

ಇಥಿಯೋಪಿಯಾ ಲಿಪಿ

ಈ ಲಿಪಿಯು ಯಾವ ಲಿಪಿಯಿಂದ ಉದಿಸಿತೆಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ವಿದ್ವಾಂಸರು ಗ್ರೀಕ್ ಲಿಪಿ, ಭಾರತದ ಲಿಪಿ, ಸಿರಿಯಾ ಅಥವಾ ಕೋಪ್ಟಿಕ್, ಸಮರಿಟನ್, ಸಬೀಯನ್ ಮುಂತಾದ ಲಿಪಿಗಳ ಕಡೆಗೆ ಒಬ್ಬೊಬ್ಬರು ಮೂಲವನ್ನು ತೋರಿಸಿರುತ್ತಾರೆ. ಆದರೆ ಕ್ರಿ.ಪೂ.೨೦೦೦ ವರ್ಷಗಳ ಹಿಂದೆ ಅರೇಬಿಯಾದ ಕಾಲೊನಿಗಳು ಅಬಿಸೀನಿಯಾ ದೇಶದಲ್ಲಿದ್ದ ಕಾರಣ, ಅಲ್ಲಿ ದಕ್ಷಿಣ ಸೆಮೆಟಿಕ್ ಭಾಷೆ ಮತ್ತು ಲಿಪಿಯನ್ನು ಸ್ವೀಕರಿಸಿರುತ್ತಾರೆಂಬ ಸಾಮಾನ್ಯ ಅಭಿಪ್ರಾಯವನ್ನು ಒಪ್ಪಿರುತ್ತಾರೆ. ದಕ್ಷಿಣ ಸೆಮೆಟಿಯಾದ ಅನೇಕ ಶಾಸನಗಳು ಅಬಿಸೀನಿಯಾದಲ್ಲಿ ಸಿಕ್ಕಿವೆ.

ಇಥಿಯೋಪಿಯಾದಲ್ಲಿ ಮೊದಲು ಸಬೀಯನ್ ಭಾಷೆ ಮತ್ತು ಲಿಪಿ ಬಳಕೆಯಲ್ಲಿತ್ತು. ಕ್ರಿ.ಶ.ಸು.೪೫೦ರಲ್ಲಿ ಈ ಭಾಷೆಯನ್ನು ಬಿಟ್ಟು ಇಥಿಯೋಪಿಯಾ ಭಾಷೆ ಮತ್ತು ಲಿಪಿಯನ್ನು ಮತ್ತೆ ಬಳಕೆಗೆ ತಂದರು. ಈ ಕಾಲಕ್ಕೆ ಸೇರಿದ ಅನೇಕ ಶಾಸನಗಳು ಪತ್ತೆಯಾಗಿವೆ. ಈ ಶಾಸನಗಳ ಮೇಲೆ ದಕ್ಷಿಣ ಅರೇಬಿಯಾ ಭಾಷೆ ಮತ್ತು ದಕ್ಷಿಣ ಸೆಮೆಟಿಯಾ ಲಿಪಿಗಳ ಪ್ರಭಾವವಾಗಿದೆ. ಆದರೂ ಈ ದಕ್ಷಿಣ ಸೆಮೆಟಿಯಾ ಲಿಪಿಗೂ ಇಥಿಯೋಪಿಯಾ ಲಿಪಿಗೂ ಬಹು ಅಂತರವಿರುವುದರಿಂದ ಈ ಲಿಪಿಯು ಮೂಲದ ಬಗ್ಗೆ ಗೊಂದಲಗಳಿವೆ. ಇಥಿಯೋಪಿಯಾದ ಸಂಖ್ಯೆಗಳು ಗ್ರೀಕ್ ಮೂಲದವು.

ಇಥಿಯೋಪಿಯಾ ವರ್ಣಮಾಲೆ ೨೬ ಅಕ್ಷರಗಳನ್ನು ಹೊಂದಿದೆ. ಇವು ವೃತ್ತಾಕಾರವಾಗಿವೆ. ಬರೆವಣಿಗೆಯ ದಿಕ್ಕು ಮೊದಲು ಬಲದಿಂದ ಎಡಕ್ಕೆ ಇತ್ತು. ಗ್ರೀಕ್ ಪ್ರಭಾವದಿಂದ ಎಡದಿಂದ ಬಲಕ್ಕೆ ಬಂದಿದೆ. ವರ್ಣಗಳ ಹೆಸರೂ ಸಹ ಗ್ರೀಕ್, ಹಿಬ್ರೂ, ಸಿರಿಯಾ ವರ್ಣಮಾಲೆಗಳ ಉಚ್ಚಾರಕ್ಕಿಂತ (ಹೆಸರಿಗಿಂತ) ಭಿನ್ನವಾಗಿವೆ. ಇನ್ನೊಂದು ವಿಶೇಷ ವಿಷಯವೆಂದರೆ ಇಥಿಯೋಪಿಯಾ

ಲಿಪಿಯನ್ನು ಸ್ವರಸಮೇತ ಬರೆಯುವುದು. ಸ್ವರಚಿಹ್ನೆಗಳ ಸೇರ್ಪಡೆಯನ್ನು ಸೂಚಿಸಲು ವ್ಯಂಜನಕ್ಕೆ ಸಣ್ಣಗೆರೆಗಳನ್ನು ಎಡಕ್ಕೆ ಅಥವಾ ಬಲಕ್ಕೆ ಮೇಲೆ ಅಥವಾ ಕೆಳಗೆ ಸೇರಿಸುವ ಮೂಲಕ ಸೂಚಿಸುತ್ತಾರೆ. ಸ್ವರಚಿಹ್ನೆ ಗೆರೆಗಳನ್ನು ಚಿಕ್ಕದಾಗಿ, ಉದ್ದವಾಗಿ ತೋರಿಸಿ ವ್ಯತ್ಯಾಸವನ್ನು ತೋರಿಸುತ್ತಾರೆ.

ಈ ಲಿಪಿಯು ಕ್ರಿ.ಶ.೧೩ನೆಯ ಶತಮಾನದವರೆಗೆ ಯಾವ ಬದಲಾವಣೆಗೂ ಒಳಗಾಗಿರಲಿಲ್ಲ. ಮುಂದೆ ಬದಲಾವಣೆಗೆ ಒಳಗಾಯಿತು. ಇಥಿಯೋಪಿಯಾದ ಸಾಹಿತ್ಯಕ ಭಾಷೆ ಗೇಏಜ್ (Ge'ez) ಭಾಷೆಯನ್ನು ಬರೆಯಲು ಇಥಿಯೋಪಿಯಾ ಲಿಪಿಯನ್ನು ಬಳಸುತ್ತಾರೆ. ಗೇಏಜ್ ಭಾಷೆಯು ಬಹು ಹಿಂದೆಯೇ ನಷ್ಟವಾಗಿದ್ದರೂ, ಚರ್ಚಿನ ಭಾಷೆಯಾಗಿ ಮುಂದುವರಿದಿತ್ತು. ಈಗ ಇಥಿಯೋಪಿಯಾದ ಎಲ್ಲಾ ಭಾಷೆಗಳಿಗೆ ಇದೇ ಲಿಪಿಯನ್ನು ಬಳಸುತ್ತಾರೆ.

ಕನಾನೈಟ್ ಲಿಪಿ ಮತ್ತು ಅದರ ಶಾಖೆಗಳು

ಕನಾನ್ ಎಂಬ ಶಬ್ದವನ್ನು ಹಿಬ್ರೂ ಭಾಷೆಯಲ್ಲಿ ಕೆನಾಅನ್ (Kena'an) ಚಿತ್ರಲಿಪಿಯಲ್ಲಿ k-n'-n' ಎಂದೂ ಮೊಳೆಯಾಕಾರದ ಲಿಪಿಯಲ್ಲಿ ಕಿ–ನಾ–ಅಖ್–ಖಿ ಎಂದೂ, ಗ್ರೀಕ್‌ನಲ್ಲಿ chanaan ಎಂದೂ ಕರೆದಿದೆ. ಇದು ಪ್ರಾಚೀನ ಪಾಲಿಸ್ತೀನ್ ದೇಶಕ್ಕಿದ್ದ ಹೆಸರು. ಹಿಬ್ರೂ ಭಾಷೆಯಲ್ಲಿ ಕೆಳಪ್ರಾಂತ್ಯವೆಂದರ್ಥ. ಕನಾನೈಟರು ಸೆಮೆಟಿಯರಿಗಿಂತ ಪೂರ್ವಜರೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಡಬ್ಲ್ಯು.ಎಫ್. ಆಲ್‌ಬ್ರೈಟ್ ಅವರು ಈ ಕನಾನೈ ಎಂಬುದು ಐತಿಹಾಸಿಕವಾಗಿ, ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಫೊನೀಷಿಯದಂತೆ ಇದ್ದದೆಂದು ಹೇಳಿದ್ದಾರೆ.


ಭಾಷಾಶಾಸ್ತ್ರಜ್ಞರ ದೃಷ್ಟಿಯಿಂದ ಕನಾನೈಟ್ ವಾಯುವ್ಯ ಸೆಮೆಟಿಯಾ ಭಾಷೆಯ ಗುಂಪಿಗೆ ಸೇರಿದ ಭಾಷೆಯಾಗಿದ್ದು, ಇದರ ಇನ್ನೊಂದು ಶಾಖೆ ಅರಾಮಿಯಾ ಆಗಿದೆ ಎಂದಿರುತ್ತಾರೆ.

ಕನಾನೈಟ್‌ನ ವರ್ಣಮಾಲೆಯನ್ನು ಹೀಗೆ ವಿಂಗಡಿಸಬಹುದು. ೧. ಪ್ರಾಚೀನ ಹಿಬ್ರೂ ಮತ್ತು ಅದರ ಶಾಖೆಗಳಾದ ಮೊಅಬೈಟ್ ಮತ್ತು ಅಮ್ಮೋನೈಟ್. ೨. ಫೊನೀಷಿಯಾ – ಅದರ ಶಾಖೆಗಳು ಮತ್ತು ಪುನಿಕ್ ಲಿಪಿ.

ಈ ಪುನಿಕ್‌ನಿಂದ ಉದಿಸಿರಬಹುದಾದ ಲಿಪಿಗಳು ಲಿಬಿಯಾ ಮತ್ತು ಇಬೇರಿಯಾ.

ಪ್ರಾಚೀನ ಹಿಬ್ರೂ ಲಿಪಿ

ಕ್ರಿ.ಪೂ.೫೦೦ ರಿಂದೀಚೆಗೆ ಬಳಸಿದ ಲಿಪಿ. ಈ ಲಿಪಿಯು ಚೌಕಾಕಾರದ ಲಿಪಿಯಾಗಿದ್ದು ಈಗಿನ ಹಿಬ್ರೂಲಿಪಿಗೆ ಮೂಲವಾಗಿದೆ. ಇಸ್ರಾಯಿಲ್‌ನಲ್ಲಿ ಪ್ರಾಚೀನ ಶಾಸನಗಳು ದೊರೆತಿರುವುದು ಕಡಿಮೆ. ಪ್ರಾಚೀನ ಬೈಬಲ್ಲಿನ ಪ್ರತಿಗಳಲ್ಲಿ ಮಾತ್ರ ಈ ಲಿಪಿ ದೊರೆತಿದೆ. ದೊರೆತಿರುವ ಪ್ರಾಚೀನ ಹಿಬ್ರೂ ಬರವಣಿಗೆಯೆಂದರೆ ಗೇಜರ್ ಕ್ಯಾಲೆಂಡರ್. ಇದರ ಕಾಲ ಕ್ರಿ.ಪೂ.೧೧ನೆಯ ಶತಮಾನಕ್ಕೆ ಸೇರಿದರೂ, ಇದರಲ್ಲಿನ ಲಿಪಿ ಉತ್ತರ ಸೆಮೆಟಿಯಾ ಲಿಪಿಯಾಗಿದ್ದು ಹಿಬ್ರೂ ಲಿಪಿಯ ಲಕ್ಷಣವನ್ನು ಕಾಣಬಹುದು. ಸಮರಿಟನ್ ವರ್ಣಮಾಲೆಯೂ ಈ ಲಿಪಿಯಿಂದ ಉದಿಸಿದೆ.



ಕನಾನ್ಯೆಟ್ ಲಿಪಿಯಿಂದ ನಿಷ್ಪನ್ನವಾಗಿರಬಹುದಾದ ಶಾಖೆಗಳು

೧. ಧ್ವನಿ ೨. ಉತ್ತರ ಸೆಮಿಟಿಕ್ ೩. ಪ್ರಾಚೀನ ಫೊನೀಷಿಯಾ ೪. ಸೈಪ್ರೋ ಫೊನೀಷಿಯಾ
೫. ಪ್ಯೂನಿಕ್ /. ಕಾರ್ಥಜಿನ್ ೬. ಹೊಸಪ್ಯೂನಿಕ್ ೭. ಪ್ರಾಚೀನಹಿಬ್ರೂ ೮. ಮಾಓಬ್ ೯. ಯಹೂದಿ ನಾಣ್ಯಗಳು ೧೦. ಸಮರ್ ೧೧. ಲಿಬಿಯಾ ೧೨. ಟಿಫಿನ್
೧೩. ಉ. ಇಬೇರಿಯನ್ ೧೪. ದ. ಇಬೇರಿಯನ್ ೧೫. ತುರ್ದೆತ್

ಕೃಪೆ : ಡಿ. ಡಿರಿಂಜರ್

ಫೊನೀಷಿಯಾ ಲಿಪಿ

ಈ ಭಾಷೆ ಮತ್ತು ಲಿಪಿಯ ಶಾಸನಗಳು ಫೊನೀಷಿಯಾದಲ್ಲಲ್ಲದೆ, ಇವರು ಆಡಳಿತ ನಡೆಸಿದ (colony) ಪ್ರದೇಶಗಳಾದ ಸೈಪ್ರಸ್, ಗ್ರೀಸ್, ಉತ್ತರ ಆಫ್ರಿಕ, ಮಾಲ್ಟ, ಸಿಸಿಲಿ, ಸಾರ್ಡಿಯನ್, ಮರ್ಸಿಲೀನ್ ಮತ್ತು ಸ್ಪೇನ್ ದೇಶಗಳಲ್ಲಿ ದೊರೆತಿವೆ. ಸಿಸಿಲಿಯಲ್ಲಿ ದೊರೆತ ಕ್ರಿ.ಪೂ.೮ನೆಯ ಶತಮಾನಕ್ಕೆ ಸೇರಿದ ಶಾಸನವೇ ಪ್ರಾಚೀನವಾದದ್ದು. ಇದರಲ್ಲಿ ಮೂರು ಬಗೆ. ೧. ಸೈಪ್ರೊ-ಫೊನೀಷಿಯಾ. ಕ್ರಿ.ಪೂ.೧೦ನೆಯ ಶತಮಾನದಿಂದ ಕ್ರಿ.ಪೂ.೨ನೆಯ ಶತಮಾನಕ್ಕೆ ಸೇರಿದವು. ೨. ಸಾರ್ಡಿಯನ್ ಮತ್ತದರ ಉಪಶಾಖೆಗಳು. ಕ್ರಿ.ಪೂ.೯ನೆಯ ಶತಮಾನ. ೩. ಕಾರ್ಥಜೀನಿಯನ್. ಈ ಕಾರ್ಥಜೀನಿಯನನ್ನೇ ಪುನಿಕ್ ಎಂದೂ ಕರೆಯುತ್ತಾರೆ.

ಫೊನೀಷಿಯಾ ಲಿಪಿಯಿಂದ ನಿಷ್ಪನ್ನವಾಗಿರಬಹುದಾದ ಲಿಪಿಗಳು

ಲಿಬಿಯಾ ಲಿಪಿ

ಲಿಬಿಯಾ ಲಿಪಿಗಳು ಫೊನೀಷಿಯಾದಿಂದ ಬಂದವಾಗಿವೆ. ಈ ಲಿಪಿಗಳಿಗೆ ಮೊದಲು ಸ್ಥಳೀಯವಾಗಿ ಲಿಪಿಯೊಂದಿತ್ತು. ಸು.೫೦೦ ಶಾಸನಗಳು ಇಲ್ಲಿ ದೊರೆತಿವೆ (ಆಲ್ಜೀರಿಯದಲ್ಲಿ). ಇವೆಲ್ಲಾ ರೋಮನರ ಕಾಲಕ್ಕೆ ಸೇರಿದವು. ಇವುಗಳಲ್ಲಿ ಅನೇಕವು ಬೇರೆ ಬೇರೆ ಭಾಷೆಯನ್ನುಳ್ಳ ದ್ವಿಭಾಷಾ ಶಾಸನಗಳು. ಲಿಬಿಯಾ-ಪ್ಯೂನಿಕ್, ಲಿಬಿಯಾ ಹೊಸ ಪ್ಯೂನಿಕ್, ಲಿಬಿಯ-ಲತಿನ ಲಿಪಿಗಳನ್ನು ಹೊಂದಿವೆ. ಈ ಭಾಷಾ ಶಾಸನಗಳನ್ನು ಕಲ್ಲಿನ ಮೇಲೆ ಕೊರೆದು ಅಥವಾ ಬಣ್ಣದಲ್ಲಿ ಬರೆದಿರುತ್ತಾರೆ. ಬರೆವಣಿಗೆಯ ದಿಕ್ಕು ಸಾಮಾನ್ಯವಾಗಿ ಬಲದಿಂದ ಎಡಕ್ಕೆ, ಕೆಲವೊಮ್ಮೆ ಮೇಲಿನಿಂದ ಕೆಳಕ್ಕೆ ನೆಟ್ಟಗೆ ಬರೆದಿರುವುದೂವುಂಟು. ಸ್ವರಚಿಹ್ನೆಗಳಿಲ್ಲ, ಬಹುಶಃ ಕಾರ್ಥಜಿಯನರಿಂದ ಇವರು ಲಿಪಿಯನ್ನು ಪಡೆದಿರಬಹುದು. ಎಲ್ಲಾ ಲಿಪಿಗಳನ್ನು ಯಥಾವತ್ತಾಗಿ ತೆಗೆದುಕೊಳ್ಳದೆ ಕೆಲವು ಚಿಹ್ನೆಗಳನ್ನು ಮಾತ್ರ ಪಡೆದಿದ್ದಾರೆ. ತಾವು ಪಡೆದುಕೊಂಡ ಪ್ಯೂನಿಕ್ ಅಕ್ಷರಗಳನ್ನು ಬದಲಾಯಿಸಿಕೊಂಡರು.

ಇಬೇರಿಯನ ಲಿಪಿ

ಸುಮಾರು ೧೫೦ ಶಾಸನಗಳು ಸ್ಪೇನಿನಲ್ಲಿ ದೊರೆತಿವೆ. ಈ ಲಿಪಿಯನ್ನು ಹಿಸ್ಪಾನಿಯಾ ಸಿಟೇರಿಯರ್ ಮತ್ತು ತುರ್‌ದ್‌ಟಾನ್ ಎಂದು ಎರಡು ರೀತಿ ವಿಂಗಡಿಸಲಾಗಿದೆ. ಈ ಶಾಸನಗಳು ಕ್ರಿ.ಪೂ.ಐದನೆಯ ಶತಮಾನಕ್ಕೆ ಸೇರಿದವು. ಈ ಲಿಪಿಯು ಬಲದಿಂದ ಎಡಕ್ಕೆ ಬರೆಯುವುದಾಗಿದೆ. ಕೆಲವೊಮ್ಮೆ ನೇರವಾಗಿ ಮೇಲಿನಿಂದ ಕೆಳಕ್ಕೆ ಬರೆಯುವದಾಗಿತ್ತು. ವರ್ಣಮಾಲೆಯಲ್ಲಿ ೩೦ ಅಕ್ಷರಗಳು ಇದ್ದು, ಇವುಗಳಲ್ಲಿ ೨೫ ವ್ಯಂಜನಗಳು ಐದು ಸ್ವರಗಳು. ಬ-ಪ-, ಗ-ಕ, ದ-ತ ಇವುಗಳ ಮಧ್ಯೆ ವ್ಯತ್ಯಾಸವಿಲ್ಲ. ಫ್, ಹ್, ವ್ ಇವುಗಳಿಗೆ ಅಕ್ಷರಗಳಿಲ್ಲ. ನ್ನ್, ರ್ರ್ ಎಂಬ ಸಜಾತಿ ದ್ವಿತ್ವದ ವ್ಯಂಜನಾಕ್ಷರಗಳಿವೆ. ಈ ಲಿಪಿಯು ಭಾಗಶಃ ವರ್ಣಲಿಪಿ ಭಾಗಶಃ ಉಚ್ಚಾರಾಂಶ ಲಿಪಿ.

ಈ ಇಬೇರಿಯಾ ಲಿಪಿಯು ಪ್ರಾಚೀನ ಗ್ರೀಕ್ ಅಥವಾ ಕ್ರೀಟ್ ಅಥವಾ ಇತಿಹಾಸ ಪೂರ್ವಕಾಲದ ಲಿಪಿಯಿಂದ್ದ ಸ್ಥಳೀಯರೇ ಬೆಳೆಸಿರಬಹುದೆಂಬ ಅಭಿಪ್ರಾಯವನ್ನು ವಿದ್ವಾಂಸರು

ವ್ಯಕ್ತಪಡಿಸುತ್ತಾರೆ. ಡಿರಿಂಜರ್ ಅವರು ಲಿಪಿಯ ಕಲ್ಪನೆಯನ್ನು ಬೇರೆಯವರಿಂದ ಪಡೆದು ಸ್ಥಳೀಯರು ಬೆಳೆಸಿರಬಹುದು ಎಂದಿರುತ್ತಾರೆ.

ಅರಾಮಿಯಾ

ಅರಾಮಿಯಾ ಜನರ ಮೂಲಸ್ಥಳ ಯಾವುದೆಂಬ ಬಗ್ಗೆ ವಾದ ವಿವಾದಗಳಿವೆ. ಬಹುಶಃ ಇವರು ಅರೇಬಿಯಾದ ಈಶಾನ್ಯ ಕಡೆಯಿಂದ ಮೆಸಪೊಟೇಮಿಯಾ ಮತ್ತು ಸಿರಿಯಾದ ಕಡೆಗೆ ವಲಸೆ ಹೋಗಿರಬೇಕು. ಕ್ರಿ.ಪೂ.೧೩ನೆಯ ಶತಮಾನದಲ್ಲಿ ಇವರು ಮೆಸಪೊಟೋಮಿಯಾದ ವಾಯುವ್ಯ ಮತ್ತು ನೈರುತ್ಯ ಭಾಗಗಳಲ್ಲಿ ಕಾಣಿಸಿಕೊಂಡಿರುತ್ತಾರೆ. ಕ್ರಿ.ಪೂ.೧೨–೧೧ನೆಯ ಶತಮಾನದಲ್ಲಿ ಈಜಿಪ್ಟ್, ಅಸ್ಸೀರಿಯಾ, ಉತ್ತರದ ಹಿತ್ತೈತ್, ಪಶ್ಚಿಮದ ಮಿನೋಯನ್ ರಾಜ್ಯಗಳು ಅವಸಾನದಲ್ಲಿದ್ದವು. ಈ ಅವಧಿಯಲ್ಲಿ ಅರಾಮನಿಯಾ ಪಂಗಡಗಳು ಅನೇಕ ಸಣ್ಣಪುಟ್ಟ ರಾಜ್ಯಗಳನ್ನು ಸ್ಥಾಪಿಸುತ್ತಾರೆ. ಈ ಅರಾಮಿಯಾ ರಾಜ್ಯಗಳಲ್ಲಿ ಮುಖ್ಯವಾದುವೆಂದರೆ ದಮಾಸ್ಕಸ್ (ದಮೈಶೆಕ್), ಅರಮ್‌ನಹರೈಮ್ ಮತ್ತು ಸಮ್–ಅಲ್, ಅಲೆಪ್ಪೊ ಮತ್ತು ಕಾರ್ಖೆಮಿಷ್. ಆದರೆ ಈ ರಾಜ್ಯಗಳು ಎಂದೂ ಒಗ್ಗೂಡಿರಲಿಲ್ಲ. ಹೀಗಾಗಿ ಈ ರಾಜ್ಯಗಳು ಮುಂದೆ ಅಸ್ಸೀರಿಯರ ಪಾಲಾಗುತ್ತವೆ.

ಅರಾಮಿಯರು ರಾಜ್ಯವನ್ನು ಕಳೆದುಕೊಂಡರೂ ಅವರ ಭಾಷೆ ಮತ್ತು ಲಿಪಿಯನ್ನು ತಾವು ಆಳ್ವಿಕೆ ನಡೆಸುತ್ತಿದ್ದ ಪ್ರದೇಶದಲ್ಲೆಲ್ಲಾ ಹರಡಿದ್ದರು. ಮುಂದೆ ಬಂದ ಬೇರೆ ಬೇರೆ ರಾಜವಂಶಗಳೂ ಇವರ ಲಿಪಿಯನ್ನು ಮತ್ತು ಭಾಷೆಯನ್ನು ಒಪ್ಪಿಕೊಂಡರು. ಈ ಅರಾಮಿಯಾ ಭಾಷೆ ರಾಜರ ಆಸ್ಥಾನದ ಭಾಷೆಯಾಗಿತ್ತು. ಈ ಭಾಷೆಯು ಅಧಿಕಾರಿಗಳ, ವ್ಯಾಪಾರಿಗಳ ಭಾಷೆಯೂ ಆಗಿತ್ತು. ಈಜಿಪ್ಟಿನಿಂದ ಆಪ್ಘಾನಿಸ್ಥಾನದ ವರೆಗೆ ಸುಮಾರು ೧೦೦೦ ವರ್ಷಗಳ ಕಾಲ. ಅರಬರು, ಯೆಹೂದಿಗಳು, ಕ್ರೈಸ್ತರು ಈ ಲಿಪಿಯನ್ನು ಮತ್ತು ಭಾಷೆಯನ್ನು ಬಳಸಿರುತ್ತಾರೆ. ಅರಾಮಿಯಾ ಭಾಷೆಯು ಆಡಳಿತದ ಭಾಷೆಯಾಗಿದ್ದು, ಜನಸಾಮಾನ್ಯರ ಭಾಷೆಯಾಗಿರಲಿಲ್ಲವೆಂದು ಡಾ। ರೋಸೆನ್ಥಲ್ ಅವರು ಅಭಿಪ್ರಾಯ ಪಡುತ್ತಾರೆ.

ಅರಾಮಿಯಾ ಲಿಪಿ

ಅರಾಮಿಯಾ ಲಿಪಿಯು ಉತ್ತರ ಸೆಮೆಟಿಯಾ ಲಿಪಿಯು ಮುಖ್ಯವಾದ ಶಾಖೆ ಅರಾಮಿಯಾದ ಪ್ರಾಚೀನ ಶಾಸನವು ಟೆಲ್‌ಅಲಾಫ್ ಎಂಬಲ್ಲಿ ದೊರೆತಿದೆ. ಕ್ರಿ.ಪೂ.೭೭೫ರ ಶಾಸನವು ಅಲೆಪ್ಪೊ ಬಳಿ ಇರುವ ಅಫಿಸ್ ಎಂಬಲ್ಲಿ ದೊರೆತಿದೆ. ದೊರೆತಿರುವ ಬಹುಮುಖ್ಯ ಬರೆವಣಿಗೆಗಳೆಂದರೆ ಕ್ರಿ.ಪೂ.೫೧೫ರಲ್ಲಿ ಪಪಿರಸ್ ಎಲೆಗಳ ಮೇಲೆ ಬರೆದಿರುವ ಯಹೂದಿಗಳ ಬರೆವಣಿಗೆ. ಗ್ರೀಕ್–ಅರಾಮಿಯಾ, ಲಿಡಿಯಾ–ಅರಾಮಿಯಾ ದ್ವಿಭಾಷಾ ಶಾಸನಗಳೂ ದೊರೆತಿವೆ.

ಅರಾಮಿಯಾ ಬಳಕೆಯನ್ನು ಎರಡು ಕಾಲ ಘಟ್ಟಗಳಲ್ಲಿ ಗುರುತಿಸುತ್ತಾರೆ. ೧. ಕ್ರಿ.ಪೂ. ಒಂಬತ್ತರಿಂದ ಏಳನೆಯ ಶತಮಾನ. ೨. ಕ್ರಿ.ಪೂ. ಏಳರಿಂದ ೨೦೦ರ ವರೆಗೆ. ಈ ಕಾಲವು ಅರಾಮಿಯಾ ಭಾಷೆ ಮತ್ತು ಲಿಪಿಯ ಸುವರ್ಣಯುಗ. ಅರಾಮಿಯಾ ಮುಖ್ಯ ಲಕ್ಷಣಗಳೆಂದರೆ ಬೇತ್, ದಲೇತ್, ರೆಷ್, ಅಯಿನ್ ಮೊದಲಾದ ಅಕ್ಷರಗಳ ಮೇಲ್ಭಾಗ ಮತ್ತು ಅಂಚುಗಳು ತೆರೆದುಕೊಂಡಿವೆ. ಬೇತ್ ಮತ್ತು ತೇತ್‌ನ ಮೂಲ ಅಕ್ಷರಗಳಲ್ಲಿನ ಗೆರೆಗಳನ್ನು ಪ್ರಯತ್ನ

ಪೂರ್ವಕವಾಗಿ ಕಡಿತ ಮಾಡಲಾಗಿದೆ. ಮೂಲೆಗಳು ವೃತ್ತಾಕಾರಕ್ಕೆ ತಿರುಗಿವೆ. ಕ್ರಿ.ಪೂ.೫೦೦ ರಿಂದ ೨೦೦ ರ ಮಧ್ಯೆ ಬಾಗಿದ ಗೆರೆಗಳುಳ್ಳ ಅರಾಮಿಯಾ ಲಿಪಿಗಳನ್ನು ಈಜಿಪ್ಟ್‌ನಲ್ಲಿ ಬಳಸಲಾಗಿದೆ.

ಅರಾಮಿಯಾ ಲಿಪಿಯ ಶಾಖೆಗಳು

ಅರಾಮಿಯಾ ಲಿಪಿಯು ಮುಖ್ಯವಾಗಿ ಸೆಮೆಟಿಯೇತರ ಭಾಷೆಗಳಿಗೆ ಲಿಪಿಯಾಗಿ ಬಳಕೆಯಾಗಿದೆ. ಹಿಬ್ರೂ, ನಬಾತಿಯಾ, ಪಲ್ಮೈರೆಸ್, ಸಿರಿಯಾದ ನೆಸ್ಟೋರಿಯಾ, ಮಂದೀಯಾ ಮತ್ತು ಮಂಚಿಯಾ ಲಿಪಿಗಳು ಅರಾಮಿಯಾದಿಂದ ನಿಷ್ಪನ್ನವಾಗಿವೆ.

ಹಿಬ್ರೂ ಲಿಪಿ

ಹಿಬ್ರೂ ಲಿಪಿಯು ೨೨ ಅಕ್ಷರಗಳ ವರ್ಣಮಾಲೆಯನ್ನು ಹೊಂದಿದೆ. ಬರೆಯುವ ದಿಕ್ಕು ಬಲದಿಂದ ಎಡಕ್ಕೆ. ಈ ಅಕ್ಷರಗಳು ಅಂಕೆಗಳಾಗಿಯೂ ಬಳಕೆಯಾಗಿವೆ. ಮೊದಲ ಒಂಬತ್ತು ಅಕ್ಷರಗಳನ್ನು ೧ ರಿಂದ ಒಂಬತ್ತರ ಅಂಕೆಗಳಿಗೂ ಮುಂದಿನ ಅಂದರೆ ೧೦ ರಿಂದ ೧೮ ರ ವರೆಗಿನ ಅಕ್ಷರಗಳನ್ನು ೧೦ರಿಂದ ೯೦ರ ವರೆಗೂ, ಮುಂದಿನ ೧೯ ರಿಂದ ೨೨ರ ವರೆಗಿನ ನಾಲ್ಕು ಅಕ್ಷರಗಳನ್ನು ಕ್ರಮವಾಗಿ ೧೦೦, ೨೦೦, ೩೦೦ ಮತ್ತು ೪೦೦ ಅಂಕೆಗಳಾಗಿ ಬಳಸಲಾಗಿದೆ. ಹಿಬ್ರೂ ಲಿಪಿಯಲ್ಲಿ ಸ್ವರಸೂಚಕ ಚಿಹ್ನೆಗಳಿಲ್ಲ, ಶುದ್ಧವ್ಯಂಜನಗಳಿವೆ. ಆದರೂ ಅಲೇಫ್, ಹೇ, ವವ್ ಮತ್ತು ಯೋದ್ ಅಕ್ಷರಗಳನ್ನು ದೀರ್ಘಸ್ವರಗಳಾಗಿ ಬಳಸಲಾಗಿದೆ.

ಈ ಹಿಬ್ರೂ ಲಿಪಿಯಿಂದ ಯಿದ್ದಿಷ್ ಮತ್ತು ಜಡೆಜ್ಮೋ ಲಿಪಿಗಳು ಅವಿಷ್ಕಾರವಾಗಿವೆ. ಇವುಗಳಲ್ಲಿಯೂ ಅಲೇಫ್, ವವ್, ಯೋದ್ ಮತ್ತು ಅಯಿನ್ ವರ್ಣಗಳು ಅ ಅಥವಾ ಓ, ಉ, ಇ (ಯ್) ಮತ್ತು ಏ ರೂಪಗಳನ್ನು ಹೊಂದಿವೆ.

ನಬಾತಿಯಾ ಲಿಪಿ

ನಬಾತಿಯಾ ಜನರು ಅರೇಬಿಯಾದ ಉತ್ತರಕ್ಕೆ ಜೋರ್ಡನ್ ಮತ್ತು ಸಿರಿಯಾಕ್ಕೆ ಹೊಂದಿಕೊಂಡಂತಿರುವ ಪ್ರದೇಶದಲ್ಲಿದ್ದ ಜನ. ಇವರ ಶಾಸನಗಳು ಈಜಿಪ್ಟ್, ಇಟಲಿಗಳಲ್ಲಿಯೂ ದೊರೆತಿವೆ. ಗ್ರೀಕ್-ನಬಾತಿಯಾ ದ್ವಿಭಾಷಾ ಶಾಸನವೊಂದು ದೊರೆತಿದೆ. ಈ ಶಾಸನದಲ್ಲಿ ಬಳಸಿರುವ ಲಿಪಿ ಅರಾಮಿಯಾ, ಇದು ಕ್ರಿ.ಪೂ. ಎರಡನೆಯ ಶತಮಾನಕ್ಕೆ ಸೇರಿದ ಲಿಪಿಯಾಗಿದೆ.


ನೂತನ ಸೈನಾಯ್ ಲಿಪಿ

ಈ ಲಿಪಿಯು ಪೆಚ್ಚಿನ ಬಾಗುಗಳನ್ನು ಹೊಂದಿದೆ. ಸೈನಾಯ್ ಪರ್ಯಾಯ ದ್ವೀಪದಲ್ಲಿ ಈ ಲಿಪಿಯ ಶಾಸನಗಳು ದೊರೆತಿವೆ. ಈ ಲಿಪಿಯು ಕ್ರಿ.ಶ. ಒಂದನೆಯ ಶತಮಾನದಲ್ಲಿ ನಬಾತಿಯಾ ಲಿಪಿಯಿಂದ ನಿಷ್ಪನ್ನವಾಗಿದೆ.

ಅರಾಬಿಯಾ ಲಿಪಿ (ಅರೇಬಿಯಾ)

ಕ್ರಿ.ಶ.೪ನೆಯ ಶತಮಾನದ ಸುಮಾರಿಗೆ ಈ ಲಿಪಿ ಕಾಣಿಸಿಕೊಳ್ಳುತ್ತದೆ. ಕ್ರಿ.ಶ.೫೧೨ರ ಶಾಸನವೊಂದು ಗ್ರೀಕ್-ಸಿರಿಯಾ-ಅರಾಬಿಯಾ ತ್ರಿಭಾಷೆಯಲ್ಲಿ ದೊರೆತಿದೆ. ಇಸ್ಲಾಂ ಸ್ಥಾಪನೆಗೆ ಮೊದಲೇ ಅಂದರೆ ಕ್ರಿ.ಶ.೩೦೦ರಲ್ಲಿ ಈ ಲಿಪಿ ಮತ್ತು ಭಾಷೆ ಬಳಕೆಯಲ್ಲಿತ್ತೆಂದು ಹೇಳಬಹುದು.

ಅರಾಮಿಯಾ ಲಿಪಿಯಿಂದ ಬಂದಿರುವ ಶಾಖೆಗಳು



1. ಪಲ್ಮಿರೆನ್ 2. ಪ್ರಾಚೀನಸಿರಿಯಕ್ 3. ಎಸ್ಟ್ರಾಂಗೆಲ 4. ಪಶ್ಚಿಮ ಸಿರಿಯನ್ 5. ಪೂರ್ವಸಿರಿಯನ್ (ನೆಸ್ಟೋರಿಯನ್)
6. ಜಾಕೋಬೈಟ್ 7. ಕ್ರೈಸ್ತಪಾಲಸ್ತೀನ್ 8. ಮಂದೀಯನ್ 9. ಮನಿಚೀನಿಯನ್

ಕೃಪೆ : ಡಿ. ಡಿರಿಂಜರ್

ಈ ಅರಾಬಿಯಾ ಲಿಪಿಯು ನಬಾತಿಯಾ ಲಿಪಿಯಿಂದ ಉದಿಸಿದೆ. ಈ ಲಿಪಿಯೊಂದಿಗೆ ಇದರ ಶಾಖೆಗಳಾದ ನಸ್ಖ್ ಮತ್ತು ಕುಫಿಕ್ ಲಿಪಿಗಳೂ ಬೆಳೆದವು. ಕ್ರಿ.ಶ.೧೦ನೆಯ ಶತಮಾನದಲ್ಲಿ ಬಾಗದಾದಿನಲ್ಲಿದ್ದ ಅರೇಬಿಯಾ ವಿದ್ವಾಂಸ ನದೀಂ ಎಂಬುವವನ ಪ್ರಕಾರ ಈ ಲಿಪಿಯು ನಾಲ್ಕು ಶಾಖೆಗಳಾಗಿ ಕ್ರಮವಾಗಿ ಮೆಕ್ಕಾ, ಮದೀನ, ಬಸ್ರಾ ಮತ್ತು ಕುಫ ಎಂಬಲ್ಲಿ ಬೆಳೆಯಿತು. ಆದರೆ ದಮಾಸ್ಕಾಸ್‌ನಂತಹ ಅನೇಕ ಪಟ್ಟಣಗಳು ಈ ಲಿಪಿಯ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿವೆ. ಮೆಸಪೊಟೋಮಿಯಾದ ಕುಫ ಮತ್ತು ಬಸ್ರದಲ್ಲಿದ್ದ ಲಿಪಿ ಲೋಪ ಹಾಗೂ ಶಿಲೆಗಳ

ಮೇಲೆ ಬರೆಯುವ ಲಿಪಿಯಾಗಿತ್ತು. ಮುಂದೆ ಕುರಾನಿನ ಅನೇಕ ಹಸ್ತಪ್ರತಿಗಳು ಕುಫಿಕ ಲಿಪಿಯಲ್ಲಿ ಬರೆಯಲಾಗಿದೆ. ಕುಪಿಕ್ ಅಕ್ಷರಗಳು ದಪ್ಪವಾಗಿ ಅಡ್ಡಡ್ಡವಾಗಿವೆ. ಅರೇಬಿಯಾದ ಉಬ್ಬು ಕೆತ್ತನೆ ಅಕ್ಷರಗಳಿಗೆ ಈ ಲಿಪಿಯ ಕೊಡುಗೆ ಅಪಾರ. ಈ ಕುಫಿಕ್‌ನ ಪ್ರಬೇಧವೇ ನಸ್ಕ್ ಲಿಪಿ. ಕುಫಿಕ್ ಬಳಸಲು ಎಲ್ಲಿ ಸಾಧ್ಯವಿಲ್ಲವೋ ಅಲ್ಲಿ ಈ ನಸ್ಕ್ ಲಿಪಿಯನ್ನು ಬಳಸಲಾಗಿದೆ.

ಅರೇಬಿಯಾ ಲಿಪಿಯು ಬಲದಿಂದ ಎಡಕ್ಕೆ ಬರೆಯುವ ಲಿಪಿ. ೨೮ ಅಕ್ಷರಗಳ ವರ್ಣಮಾಲೆಯನ್ನು ಹೊಂದಿದೆ. ಇವುಗಳಲ್ಲಿ ೨೨ ಪ್ರಾಚೀನ ಸೆಮೆಟಿಯಾ ಲಿಪಿಗಳು, ಆರು ಹೊಸ ವ್ಯಂಜನಗಳನ್ನು ವರ್ಣಮಾಲೆಯ ಅಂತ್ಯದಲ್ಲಿ ಸೇರಿಸಲಾಗಿದೆ. ವರ್ಣಮಾಲೆಯನ್ನು ಅರಾಬಿಯಾ ಭಾಷೆಯ ವ್ಯಾಕರಣಕ್ಕನುಸಾರವಾಗಿ ಜೋಡಿಸಲಾಗಿದೆ.


ಅಲೀಫ್	ಹ್ಹ	ಜ	ಟ	ಕಾಫ್	ವವ್
ಬ	ಖ	ಸಿನ್	ಝ	ಲಮ್	ಯ
ತ	ದಲ್	ಷಿನ್	ಅಯಿನ್	ಮಿಮ್	
ಥ	ಧಲ್	ಶದ್	ಘೈನ್	ನುನ್	
ಜಿಮ್	ರ	ದಾರ್	ಫ	ಹ	

ಕ್ವಾಫ್

ಇವುಗಳಲ್ಲಿ ಟ, ಖ, ದಲ್, ದಾದ್, ಝು ಮತ್ತು ಘೈನ್ ಅಕ್ಷರಗಳು ಅರಾಬಿಯಾ ಲಿಪಿಗೆ ಸೇರಿಸಿದ ಅಕ್ಷರಗಳು. ಈ ವರ್ಣಮಾಲೆಯಲ್ಲಿನ ಅಲೇಫ್, ವವ್, ಯ ಅಕ್ಷರಗಳನ್ನು ಸ್ವರಗಳಾಗಿಯೂ ಬಳಸುತ್ತಾರೆ. ಅರಾಬಿಯಾದ ಮುದ್ರಿತ ಪುಸ್ತಕಗಳಲ್ಲಿ ವ್ಯಂಜನಗಳನ್ನು ಸ್ವರಸಮೇತ ತೋರಿಸಿರುತ್ತಾರೆ. ವ್ಯಂಜನವು ಸ್ವರಸಮೇತವಾಗಿದೆ ಅಥವಾ ಇಲ್ಲ ಎಂಬುದನ್ನು ತೋರಿಸಲು ಅಕ್ಷರಗಳ ಮೇಲೆ ಅಥವಾ ಕೆಳಗೆ ಗೆರೆಗಳನ್ನು ಗುರುತಿಸುವ ಮೂಲಕ ತೋರಿಸಿರುತ್ತಾರೆ. ಅರಾಬಿಯಾ ಲಿಪಿಯ ವಿಶೇಷತೆಯೆಂದರೆ ಅದರ ಬರೆವಣಿಗೆಯಲ್ಲಿ ಕಾಣಬರುವ ಈ ವಿಭಜನೆ ಚಿಹ್ನೆಗಳು.

ಅರಾಬಿಯಾ ಲಿಪಿಯು ಇಸ್ಲಾಂ ಧರ್ಮದ ಪ್ರಸರಣದೊಂದಿಗೆ ಅನೇಕ ಪ್ರದೇಶಗಳಲ್ಲಿ ಹರಡಿ ಅನೇಕ ಪ್ರಾಚೀನ ಲಿಪಿಗಳನ್ನು ಪಕ್ಕಕ್ಕೆ ಸರಿಸಿತು. ಈ ಲಿಪಿಯು ಅಲ್ಪ ಸ್ವಲ್ಪ ವ್ಯತ್ಯಾಸದೊಂದಿಗೆ ಸಾಲ್ವಾನಿಕ್, ಸ್ಪೇಯಿನ್, ಆಫ್ರಿಕಾದ ಅನೇಕ ದೇಶಗಳು, ಪರ್ಷಿಯಾ, ಟರ್ಕಿ, ಅಫ್ಘಾನಿಸ್ತಾನ ಲಿಪಿಗಳಲ್ಲದೆ ಭಾರತದ ಉರ್ದು ಲಿಪಿಗೂ ಮೂಲವಾಗಿದೆ. ಹೀಗೆ ಬಳಸುವಾಗ ಆಯಾ ಭಾಷೆಗೆ ತಕ್ಕಂತೆ ಲಿಪಿಯಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡಿರುತ್ತಾರೆ. ಅರಾಬಿಯಾದ 'ಡ' ಕಾರವನ್ನು ಪರ್ಷಿಯನ್ನರು 'ಜ' ಎಂದೂ, 'ಕ' ಕಾರವನ್ನು ತುರ್ಕಿಯರು 'ಗ' ಎಂದೂ ಉಚ್ಚರಿಸುತ್ತಾರೆ.

ಅರಾಬಿಕ್ ಲಿಪಿಯ ಬೆಳವಣಿಗೆ



1. ನಬಾತಿಯಾ, 2. ಸಿನಾಯಿಟಿಕ್ 3. ಪ್ರಾಚೀನ ಅರಾಬಿಕ್ 4. ೭ನೆಯ ಶತಮಾನ, 5. ಕುಫಿಕ್
6. ಪ್ರಾಚೀನ ನಸ್ಖ್, 7. ಮಘ್ರಿಬಿ, 8. ಕ್ಯಾರ್ಮಥಿಯನ್, 9 ನೂತನನಸ್ಖ್

ಕೃಪೆ : ಡಿ. ಡಿರಿಂಜರ್

ಪರ್ಷಿಯಾ ಲಿಪಿ

ಪರ್ಷಿಯಾವನ್ನು ಆಳಿದ ಅಖಿಮೆನಿಯರ ಕಾಲದಲ್ಲಿ ಪರ್ಷಿಯಾದಲ್ಲಿ ಮೊಳೆಯಾಕಾರದ ಲಿಪಿ ಬಳಕೆಯಲ್ಲಿತ್ತು. ಬಳಸುತ್ತಿದ್ದ ಭಾಷೆ ಅರಾಮಿಯಾ. ಮುಂದೆ ಪಹ್ಲವಿ ಈ ಪ್ರದೇಶದ ಭಾಷೆಯಾಗುತ್ತದೆ. ಈ ಪಹ್ಲವಿ ಅಥವಾ ಪೆಹ್ಲವಿ ಲಿಪಿಗೆ ಅರಾಮಿಯಾವೇ ಮೂಲ. ಈ ಭಾಷೆಯಲ್ಲಿ ಅರಾಮಿಯಾದ ಅನೇಕ ಪದಪುಂಜಗಳು ಸೇರಿವೆ. ಆದರೆ ಉಚ್ಚರಿಸುವಾಗ ಪೆಹ್ಲವಿಯ ಉಚ್ಚಾರದಲ್ಲಿ ಉಚ್ಚರಿಸುತ್ತಾರೆ. ಉದಾ: ರಾಜಾಧಿರಾಜ ಎಂಬ ಪದಕ್ಕೆ ಸಸೇನಿಯರು ಬಳಸುತ್ತಿದ್ದ ಪದ 'ಮ್‌ಲ್‌ಕ್‌ನ್‌ಮ್‌ಲ್‌ಕ್' (ಮಲ್ಕನ್‌ಮಲ್ಕ) ಎಂದಿದ್ದರೆ ಇದೇ ಪದಪುಂಜ ಪಹ್ಲವಿಯಲ್ಲಿ ಷಾಹ ಅನ್ ಷಾಹ ಎಂದು ಉಚ್ಚಾರವಾಗುತ್ತದೆ.

ಕ್ರಿ.ಪೂ.೩–೨ನೆಯ ಶತಮಾನದಲ್ಲಿ ಪರ್ಷಿಯಾದವರು ತಮ್ಮದ್ದೇ ಆದ ಭಾಷೆ ಮತ್ತು ಲಿಪಿಯನ್ನು ಸೃಷ್ಟಿಸಿಕೊಂಡರು. ಈ ಭಾಷೆ ಮತ್ತು ಲಿಪಿಯನ್ನು 'ಪಹ್ಲವಿ' ಎಂದು ಕರೆದರು. ವಿದ್ವಾಂಸರ ಅಭಿಪ್ರಾಯದಂತೆ ಡೇರಿಯಸ್ಸನ ಶಾಸನದಲ್ಲಿ ಉಲ್ಲೇಖವಾಗಿರುವ ಪಾರ್ಥವ ಅಥವಾ ಪಾರ್ಥಿಯನ್ ಎಂಬ ಪದದಿಂದ ಇದು ನಿಷ್ಪನ್ನವಾಗಿದೆ. ಹೀಗಾಗಿ ಡೇರಿಯಸ್ಸನ ಕಾಲದಲ್ಲಿ ಈ ಲಿಪಿ ನಿಷ್ಪನ್ನವಾಗಿರಬೇಕು. ಇದರಲ್ಲಿ ೩೩ ಅಕ್ಷರಗಳಿವೆ. 'ಅಲೇಫ್' ಅನ್ನು 'ಅ' ಎಂದೂ 'ವ್' ನ್ನು 'ವ' ಎಂದೂ, 'ಯ' ಕಾರವು ವ್ಯಂಜನವಾಗಿಯೂ, ಸ್ವರವಾಗಿ 'ಇ' ಕಾರವಾಗಿಯೂ ಬಳಸುತ್ತಾರೆ. 'ಗ' ಕಾರವು 'ಗ' ಮತ್ತು 'ಫ' ಎಂಬ ಎರಡು ಉಚ್ಚಾರಗಳಿಗೂ ಬಳಕೆಯಾಗಿದೆ.

ಗ್ರೀಕ್ ಲಿಪಿ ಅದರ ಶಾಖೆಗಳು

ಗ್ರೀಕ್ ಲಿಪಿಯ ಮೂಲ

ಗ್ರೀಕ್ ಮತ್ತು ರೋಮಕರ ಪಾರಂಪರಿಕ ಹೇಳಿಕೆಯಂತೆ ಪುರಾಣಪುರುಷನಾದ ಪಲಮೆದೇಸ್, ಪ್ರೊಮೇಥೇಯಸ್ ಆರ್‌ಫೇಯಸ್, ಮುಸಃಸ್, ಲಿನೋಸ್, ಎಪಿಚಾರ್‌ಮೋಸ್, ಸೆಕ್ರೋಪ್ಸ್, ಸಿಮೋನಿದೇಸ್ ಮತ್ತು ಮುಖ್ಯವಾಗಿ ಥೇಬ್ಸ್‌ನ ಕಾಡ್‌ಮೋಸ್ ಮೊದಲಾದವರು ಗ್ರೀಕ್ ಲಿಪಿಯನ್ನು ಬೆಳೆಸಿದರೆಂದು ನಂಬುತ್ತಾರೆ.

ಕಾಡ್‌ಮೋಸ್ ಬಹಳ ವರ್ಷಗಳು ಫೊನೀಷಿಯಾದಲ್ಲಿ ಜೀವನವನ್ನು ಕಳೆದು ಥೀಬ್ಸಿಗೆ ವಾಪಸ್ಸು ಬಂದ. ಬರುವಾಗ ೧೬ ಲಿಪಿಗಳನ್ನು ಜೊತೆಯಲ್ಲಿ ತಂದ (ಕ್ರಿ.ಪೂ.೧೩೧೩) ಟ್ರೋಜನ್ ಯುದ್ಧದ ಸಮಯದಲ್ಲಿ ಪಲಮದೇಸ್ ಎಂಬುವವನು ಥ, ಕ್ಷ, ಫ ಮತ್ತು ಖ ಅಕ್ಷರಗಳನ್ನೂ, ಸಿಮೋನಿದೇಸನು ಜ, 'ಏ' ಕಾರ. ಪ್ಸ ಮತ್ತು ಓ ಕಾರಗಳನ್ನು ಸೇರಿಸಿದ. ಗ್ರೀಕ್ ವರ್ಣಮಾಲೆಯನ್ನು 'ಕದ್ಮೀಯಗ್ರಮ್ಮತ' ಎಂದು ಕರೆಯುತ್ತಾರೆ.

ಗ್ರೀಕರು ತಮ್ಮ ಬರೆವಣಿಗೆಯನ್ನು ಫೊನೀಷಿಯರಿಂದ ಪಡೆದರೆಂದು ಗ್ರೀಕ್ ಪರಂಪರೆ ಜೊತೆಗೆ ಬಹುತೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಕೊಡುವ ಮೂರು ಕಾರಣಗಳೆಂದರೆ

೧. ಗ್ರೀಕ್ ಅಕ್ಷರಗಳ ರೂಪಗಳು ಸೆಮೆಟಿಯ ಅಕ್ಷರಗಳಂತೆ ಇವೆ.

೨. ಗ್ರೀಕ್ ಅಕ್ಷರಗಳ ವರ್ಣಾನುಕ್ರಮಣಿಕೆಯು ಸರಿಸುಮಾರಾಗಿ ಸೆಮೆಟಿಯದಂತೆಯೇ ಇವೆ.

೩. ಗ್ರೀಕ್ ವರ್ಣಮಾಲೆಯ ಹೆಸರುಗಳು ಸೆಮೆಟಿಯನಲ್ಲಿರುವಂತೆಯೇ ಇವೆ. ಇವಕ್ಕೆ ಗ್ರೀಕ್‌ನಲ್ಲಿ ಅರ್ಥವೇ ಇಲ್ಲ.

ಗ್ರೀಕರು ಫೊನೀಷಿಯನರಿಂದ ಯಾವಾಗ ಲಿಪಿಯನ್ನು ಪಡೆದರೆಂದು ಹೇಳುವುದು ಕಷ್ಟ. ಸರಿಸುಮಾರಾಗಿ ಕ್ರಿ.ಪೂ.೧೧ನೆಯ ಶತಮಾನದಲ್ಲಿ ಪಡೆದಿರಬೇಕು. ಕ್ರಿ.ಪೂ.೯–೮ನೆಯ ಶತಮಾನದ ಗ್ರೀಕ್ ಶಾಸನಗಳು ಥೇರ ಎಂಬಲ್ಲಿ ದೊರೆತಿವೆ. ಗ್ರೀಕ್ ಲಿಪಿಯ ಒಂದು ಪ್ರಭೇಧವಾದ ಎಟ್ರುಸ್ಕಾನ್ ಲಿಪಿಯು ಇದೇ ಕಾಲಕ್ಕೆ ಅಸ್ತಿತ್ವದಲ್ಲಿತ್ತು. ಹೀಗಾಗಿ ಗ್ರೀಕರು ಫೊನೀಷಿಯರಿಂದ ಕ್ರಿ.ಪೂ.೧೧ನೆಯ ಶತಮಾನದಲ್ಲಿ ಲಿಪಿಯನ್ನು ಪಡೆದಿರಬೇಕು.

ಸೆಮೆಟಿಯಾ ಲಿಪಿಯಂತೆ ಆರಂಭದ ಗ್ರೀಕ್ ಬರೆವಣಿಗೆ ಬಲದಿಂದ ಎಡಕ್ಕೆ ಇತ್ತು. ಮುಂದೆ ಇದು ಹಾವಿನ ನಡಿಗೆಯಂತಹ ಬರೆವಣಿಗೆಗೆ ಬಂದು ನಂತರ ಎಡದಿಂದ ಬಲಕ್ಕೆ ತಿರುಗಿತು. ಸುಮಾರು ಕ್ರಿ.ಪೂ.೫೦೦ ರಿಂದ ಗ್ರೀಕ್ ಬರೆವಣಿಗೆಯು ಸ್ಪಷ್ಟವಾಗಿ ಎಡದಿಂದ ಬಲಕ್ಕೆ ಬರೆಯುವ ಹಾಗೂ ಮೇಲಿನಿಂದ ಕೆಳಕ್ಕೆ ಸಾಲುಗಳನ್ನು ಬರೆಯುವ ಬರೆವಣಿಗೆಯಾಗಿ ಮಾರ್ಪಟ್ಟಿತು.


ಗ್ರೀಕರು ಸೆಮೆಟಿಯಾ ಲಿಪಿಯ ಬೇತ್, ಗಮ್ಮ, ದೆಲ್ತ, ಜೇಟ, ಕಾಪ್ಪ, ಮು, ನು, ಲಂಬ್ಡ, ಪಿ, ರ್‍ಹೊ, ಥೇಟ ಅಕ್ಷರಗಳನ್ನು ಸೆಮೆಟಿಯಾದಿಂದ ಪಡೆದರು. ಈ ಅಕ್ಷರಗಳು ಗ್ರೀಕ್ ಮತ್ತು ಸೆಮೆಟಿಯಾ ಎರಡರಲ್ಲೂ ಒಂದೇ ಉಚ್ಚಾರವನ್ನು ಹೊಂದಿವೆ. ವವ್ ಎಂಬ ಅಕ್ಷರವನ್ನು ಗ್ರೀಕ್‌ನಲ್ಲಿ 'ದಿಗಮ್ಮ' ಎಂಬ ಉಚ್ಚಾರಕ್ಕಾಗಿ ಪಡೆದಿದ್ದಾರೆ. ಥೇತ್ ಸೆಮೆಟಿಯದಲ್ಲಿ ಮಹಾಪ್ರಾಣ 'ಥ' ಆಗಿದ್ದರೆ ಗ್ರೀಕ್‌ನಲ್ಲಿ 'ತ' ಆಯಿತು. 'ಕ್ವಾಪ್' ಅಕ್ಷರವು 'ಕಪ್ಪ' ಎಂಬ ಬೇರೆ ಉಚ್ಚಾರವನ್ನು ಪಡೆಯಿತು.

ಇದಲ್ಲದೆ ಲಿಪಿಯಲ್ಲಿ ಕೆಲವು ಮುಖ್ಯವಾದ ಸುಧಾರಣೆಗಳನ್ನು ಗ್ರೀಕರು ಮಾಡಿಕೊಂಡರು. ೧. ಸೆಮೆಟಿಯಾ ಲಿಪಿಯಲ್ಲಿ ಸ್ವರಗಳಿಲ್ಲ, ಗ್ರೀಕರು ಎರಡು ಸೆಮೆಟಿಯ ವ್ಯಂಜನಗಳನ್ನು ಸ್ವರಚಿಹ್ನೆಗಳಾಗಿ ಮಾರ್ಪಡಿಸಿಕೊಂಡರು. ೨. ಊಷ್ಮ ಧ್ವನಿ (ಸ ಕಾರದ) ಅಕ್ಷರಗಳನ್ನು ಬೇರೆ ರೀತಿಯಲ್ಲಿ ಜೋಡಿಸಿದ್ದು. ೩. ಸೆಮೆಟಿಯಾದಲ್ಲಿಲ್ಲದ ಫ, ಪ್ಸ, ಖ ಕ್ಸ, ಅಕ್ಷರಗಳನ್ನು ಸೇರಿಸಿದ್ದು.

ಸೆಮೆಟಿಯಾ ಲಿಪಿಯಿಂದ ಪಡೆದ ಕೆಲವು ವ್ಯಂಜನಗಳನ್ನು ಸ್ವರಗಳಾಗಿ ಮಾರ್ಪಡಿಸಿಕೊಂಡರೆಂದು ಹಿಂದೆ ಹೇಳಲಾಗಿದೆಯಷ್ಟೆ. ಅವುಗಳಲ್ಲಿ ಅಲೇಫ್, ಹೇ, ವವ್, ಯೋಧ್ ಮತ್ತು ಅಯಿನ್‌ಗಳಲ್ಲಿ, ಅಲೇಫ್‌ನ್ನು ಗ್ರೀಕ್‌ನಲ್ಲಿ ಆಲ್ಫ ಎಂದಿದ್ದು ಅದನ್ನು 'ಅ' ಕಾರವಾಗಿ ಪರಿಗಣಿಸಿದರು. ಯೋದ್ ಎಂಬುದನ್ನು 'ಇ' ಕಾರದ ಸ್ವರವಾಗಿ ಗಣಿಸಿದರು. 'ಹೇ' ಎಂಬುದು 'ಏ' ಕಾರವಾಯಿತು. ಹೇತ್ ಎಂಬುದು ಎ ಮತ್ತು ಏ ಕಾರವಾಯಿತು. 'ವವ್' ಗ್ರೀಕ್‌ನಲ್ಲಿ 'ದಿಗಮ್ಮ' ಎಂಬ ಪದವಾಗಿದ್ದು 'ಉ' ಕಾರಕ್ಕೆ ಬಳಸಲಾಯಿತು. 'ಅಯಿನ್' ಎಂಬುದು ಗ್ರೀಕ್‌ನಲ್ಲಿ ಓಮಿಕ್ರೋನ್ ಆಗಿದ್ದು 'ಓ' ಅಕ್ಷರಕ್ಕೆ ನಾಂದಿಯಾಯಿತು.

ಕ್ರಿ.ಶ.೪೦೩ರಲ್ಲಿ ಅಥೆನ್ಸ್‌ನಲ್ಲಿ ಆಡಳಿತ ಲಿಪಿಯಾಗಿ ಈ ಲಿಪಿಯನ್ನು ಅಂಗೀಕರಿಸಿತು. ಇತರ ರಾಜ್ಯಗಳೂ ಈ ಲಿಪಿಯನ್ನು ಅಂಗೀಕರಿಸಿದವು. ಹೀಗಾಗಿ ಸ್ಥಳೀಯವಾಗಿದ್ದ ಅನೇಕ

ಪ್ರಾಚೀನ ಗ್ರೀಕಿನ ಶಾಖೆಗಳು



1. ಉತ್ತರ ಸೆಮಿಟಿಕ್ 2. ಪ್ರಾಚೀನ ಗ್ರೀಕ್ 3. ಪೂರ್ವಶಾಖೆ 4. ಅಯೋನಿಕ್ 5. ಅಟ್ಟಿಕ್
6 ಪಶ್ಚಿಮ ಶಾಖೆ 7. ಪಾರಂಪರಿಕ ಗ್ರೀಕ್ ಹೆಸರು

ಕೃಪೆ : ಡಿ. ಡಿರಿಂಜರ್

ಲಿಪಿಗಳು ತೆರೆಗೆ ಸರಿದವು. ಹೀಗೆ ೨೪ ಅಕ್ಷರಗಳ ಪ್ರಾಚೀನ (classical) ಗ್ರೀಕ್ ಲಿಪಿಯು ಪ್ರಚಾರಕ್ಕೆ ಬಂತು.

ಮುಂದೆ ಈ ಗ್ರೀಕ್ ಲಿಪಿಯಲ್ಲಿ ಅನೇಕ ಸಹಸ್ರ ಶಾಸನಗಳಲ್ಲದೆ ಹಸ್ತಪ್ರತಿಗಳೂ ದೊರೆತಿದ್ದು, ಲಿಪಿಯ ವ್ಯಾಪಕ ಬಳಕೆಯ ಮೇಲೆ ಬೆಳಕು ಚೆಲ್ಲಿವೆ. ಹೀಗಾಗಿ ಬರೆವಣಿಗೆಯ ಇತಿಹಾಸದಲ್ಲಿ ಗ್ರೀಕ್ ಲಿಪಿಯು ಪ್ರಮುಖ ಸ್ಥಾನವನ್ನು ಹೊಂದಿದೆ. ಸೆಮೆಟಿಯಾದ ವ್ಯಂಜನಾಕ್ಷರಗಳನ್ನು ನವನಾಗರೀಕತೆಯ ಲಿಪಿಯನ್ನಾಗಿಸಿದೆ. ಎಟ್ರುಸ್ಕಾನ್, ಲತಿನ ಮತ್ತು ಸೈರಿಲಿಕ್ ಲಿಪಿಗಳಿಗಲ್ಲದೆ ಈಗಿನ ಯೂರೋಪಿಯ ದೇಶದ ಎಲ್ಲಾ ಲಿಪಿಗಳಿಗೆ ಈ ಲಿಪಿಯು ಜನನಿಯಾಗಿದೆ.

ಗ್ರೀಕ್ ಲಿಪಿಯನ್ನು ಆಧಾರವಾಗಿಟ್ಟುಕೊಂಡು ಲಿಸಿಯಾ, ಫೈಜಿಯಾ, ಪಂಫಿಲಿಯಾ, ಲಿಡಿಯಾ ಮತ್ತು ಕಾರಿಯ ಲಿಪಿಗಳನ್ನು ರೂಪಿಸಲಾಗಿದೆ. ಇವುಗಳಲ್ಲಿ ಕಾರಿಯ ಲಿಪಿಯು ಕಡಿಮೆ ಪ್ರಭಾವಿತಗೊಂಡಿದೆ.

ಕೋಪ್ಟಿಕ್ ಲಿಪಿ


ಕೋಪ್ಟ್ ಎಂದರೆ ಅರಬ್ಬಿ ಭಾಷೆಯಲ್ಲಿ ಗ್ರೀಕ್ ಎಂದರ್ಥ. ಕೋಪ್ಟಿಕ್ ಭಾಷೆಯು ಈಜಿಪ್ಟಿನ ಚರ್ಚಿನ ಭಾಷೆಯಾಗಿತ್ತು. ಇದು ಈಜಿಪ್ಟ್ ಭಾಷೆಯ ಕೊನೆಯ ಹಂತ. ಸುಮಾರು ಕ್ರಿ.ಶ.೧೩ನೆಯ ಶತಮಾನದವರೆಗೆ ಇದು ಬಳಕೆಯಲ್ಲಿತ್ತು. ಈ ಭಾಷೆಯ ಶಾಸನಗಳು ಕ್ರಿ.ಶ.೨-೩ನೆಯ ಶತಮಾನಗಳಿಂದಲೇ ದೊರೆಯಲಾರಂಭಿಸುತ್ತವೆ. ಆದರೆ ಹಸ್ತಪ್ರತಿಗಳು ಕ್ರಿ.ಶ.೫ನೆಯ ಶತಮಾನದಿಂದ ದೊರೆಯುತ್ತವೆ. ಈ ಭಾಷೆಯು ಈಜಿಪ್ಟಿನ ಪ್ರಾಚೀನ ರಾಜಧಾನಿ ಥೇಬ್ಸ್‌ನ ಸುತ್ತ ಮತ್ತು ಅಲೆಕ್ಸಾಂಡ್ರಿಯದಲ್ಲಿ ಬಳಕೆಯಲ್ಲಿತ್ತು.

ಕೋಪ್ಟಿಕ್ ವರ್ಣಮಾಲೆಯು ೩೨ ಅಕ್ಷರಗಳ ವರ್ಣಮಾಲೆಯನ್ನು ಹೊಂದಿದೆ. ಇವುಗಳಲ್ಲಿ ೨೫ನ್ನು ಗ್ರೀಕ್ ಲಿಪಿಯ ಬಾಗುರೇಖೆಯ (uncial) ಅಕ್ಷರಗಳಿಂದ ಪಡೆದಿದೆ. ಏಳು ಅಕ್ಷರಗಳನ್ನು ಈಜಿಪ್ಟಿನ ಆಡಳಿತ (ಡೆಮೊಟಿಕ್) ಲಿಪಿಯಿಂದ ಪಡೆದಿದೆ.

ಈ ಮೇಲಿನ ಲಿಪಿಗಳಲ್ಲದೆ ದಕ್ಷಿಣ ಇಟಲಿಯದಲ್ಲಿದ್ದ ಮೆಸ್ಸಪಿಯ, ಗೋಥಿಕ್, ಪ್ರಾಚೀನ ಸ್ಲವನಿಯಾ, ಅಲ್ಬೇನಿಯಾ ಮುಂತಾದ ಲಿಪಿಗಳು ಈ ಗ್ರೀಕ್ ಲಿಪಿಯಿಂದ ಉದಿಸಿವೆ.

ಲತಿನ ಲಿಪಿ

ಲತಿನ ಲಿಪಿಯನ್ನು ಗ್ರೀಕಿನಿಂದ ಪಡೆದಿದ್ದಾರೆಂಬುದಕ್ಕಿಂತ ಎಟ್ರುಸ್ಕಾನ್ ಲಿಪಿಯಿಂದ ಹೆಚ್ಚಿಗೆ ಪಡೆದಿದ್ದಾರೆ. ಕ್ರಿ.ಶ.೭ನೆಯ ಶತಮಾನದಲ್ಲಿಯೇ ಲತಿನ ಲಿಪಿಯ ಉಗಮವಾಯಿತೆಂದು ಡೇವಿಡ್ ಡಿರಿಂಜರ್ ಅಭಿಪ್ರಾಯ ಪಡುತ್ತಾರೆ. ಎಟ್ರುಸ್ಕಾನ್ ಲಿಪಿಯು ೨೬ ಅಕ್ಷರಗಳನ್ನು ಹೊಂದಿದೆ. ರೋಮನ್ನರು ಅವುಗಳಲ್ಲಿ ೨೧ ಮಾತ್ರ ಪಡೆದರು. ಗ್ರೀಕ್ ಮಹಾಪ್ರಾಣಾಕ್ಷರಗಳಾದ ಥೇಟ, ಫಿ ಮತ್ತು ಖಿ ಗಳನ್ನು ತ್ಯಜಿಸಿದರು. ಏಕೆಂದರೆ ಇವಕ್ಕೆ ಲತಿನದಲ್ಲಿ ಬಳಕೆಯಾಗುವ ಪದಗಳಿರಲಿಲ್ಲ. ಆದರೆ ಅವನ್ನು ಅಂಕೆಗಳಿಗೆ ಬಳಸಿದರು. C C = ೧೦೦ ಸೆಂಟುಂ, M M = ೧೦೦೦ ಮಿಲ್ಲೆ (Mille) ಇದರ ಅರ್ಧ D = ೫೦೦ಆಯಿತು.




ಕೃಪೆ : ಡಿ. ಡಿರಿಂಜರ್

ಕೋಪ್ಟಿಕ್ ಲಿಪಿ

೧. ಕೋಪ್ಟಿಕ್ ಲಿಪಿ ೨. ಗ್ರೀಕ್ ದೊಡ್ಡ ಅಕ್ಷರ ೩. ಕೋಪ್ಟಿಕ್ ಲಿಪಿಯ ಹೆಸರು ೪. ಧ್ವನಿ
೫. ಆಡಳಿತ ಲಿಪಿಯ ಚಿಹ್ನೆ ೬. ಧಾರ್ಮಿಕ ಲಿಪಿ ೭. ಚಿತ್ರಲಿಪಿ

ಗ್ರೀಕ್ ಲಿಪಿಯ ಮುಂದಿನ ಬೆಳವಣಿಗೆ



೧. ಪಾರಂಪರಿಕ ಗ್ರೀಕ್ ೨-೪ ಗ್ರೀಕ್ ದೊಡ್ಡ ಅಕ್ಷರ ೪ನೆಯ ಶತಮಾನ ೩. ಏಳನೆಯ ಶತಮಾನ
೪. ಒಂಬತ್ತನೆಯ ಶತಮಾನ) ೫-೭ ಕ್ರಿ.ಪೂ.ಎರಡನೆಯ ಶತಮಾನದ ಗ್ರೀಕ್ ಬಾಗು ಅಕ್ಷರಗಳು
೫.ಕ್ರಿ.ಶ.ಎರಡನೆಯ ಶತಮಾನ ೬. ಕ್ರಿ.ಶ.೭ನೆಯ ಶತಮಾನ ೮-೧೦ ೯ನೆಯ ಶತಮಾನದ ಗ್ರೀಕ್ ಚಿಕ್ಕ ಅಕ್ಷರಗಳು
೮. ಹತ್ತು-ಹನ್ನೊಂದನೆಯ ಶತಮಾನ ೯.ಹನ್ನೆರಡು-ಹದಿನಾಲ್ಕನೆಯ ಶತಮಾನ ೧೧-೧೨ ಕೈಬರವಣಿಗೆ
೧೧. ದೊಡ್ಡಅಕ್ಷರ ೧೨. ಚಿಕ್ಕಅಕ್ಷರ ೧೩. ಅಚ್ಚಿನ ಚಿಕ್ಕ ಅಕ್ಷರಗಳು ೧೪. ಧ್ವನಿ

ಕೃಪೆ : ಡಿ. ಡಿರಿಂಜರ್

ಲತಿನ ಲಿಪಿಯಲ್ಲಿ ಎ, ಬಿ, ಸಿ, ಡಿ, ಇ, ಎಫ್, ಜಿ, ಎಚ್, ಐ, ಎಲ್, ಎಮ್, ಎನ್, ಓ, ಪಿ, ಕ್ಯೂ, ಆರ್, ಎಸ್, ಟಿ, ವಿ, ಎಕ್ಸ್ ೨೦ ಅಕ್ಷರಗಳೂ ಗ್ರೀಕ್ ಲಿಪಿಯ ಸಿಗ್ಮ ಇಲ್ಲಿ 'ಎಸ್' ಆಯಿತು. ಜೇಟ ಅಕ್ಷರಕ್ಕೆ ಬದಲಾಗಿ ಜಿ ಅಕ್ಷರವನ್ನು ಸೇರಿಸಲಾಯಿತು. ಕ್ರಿ.ಪೂ.ಒಂದನೆಯ ಶತಮಾನದಲ್ಲಿ ಗ್ರೀಕ್ ಭಾಷಾಪ್ರಭಾವದಿಂದ ವೈ ಮತ್ತು ಜೆಡ್ ಅಕ್ಷರಗಳನ್ನೂ ಪಡೆಯಲಾಯಿತು. ಇವುಗಳೆಲ್ಲವುಗಳ ಸೇರ್ಪಡೆಯಿಂದ ಅಕ್ಷರಗಳ ಸಂಖ್ಯೆ ೨೩ಕ್ಕೆ ಏರಿತು. ಸುಮಾರು ೧೪-೧೫ನೆ. ಶತಮಾನದಲ್ಲಿ 'ಯು', 'ಡಬ್ಲಿಯೂ' ಮತ್ತು 'ಜೆ' ಅಕ್ಷರಗಳ ಸೇರ್ಪಡೆಯಿಂದ ಅಕ್ಷರಗಳ ಸಂಖ್ಯೆ ೨೬ ಆಯಿತು. ಈ ಕಾರಣದಿಂದ ಲತಿನ ಲಿಪಿಯು ಸೆಮೆಟಿಯಾ-ಗ್ರೀಕ್-ಎಟ್ರುಸ್ಕಾನ್ ನಿಷ್ಪನ್ನ ಲಿಪಿಯಾಗಿದೆಯೆನ್ನಬಹುದಾಗಿದೆ.

ದೊಡ್ಡ ಮತ್ತು ಸಣ್ಣ ಅಕ್ಷರಗಳು

ಲತಿನ ಲಿಪಿಯ ದೊಡ್ಡ ಮತ್ತು ಸಣ್ಣ ಅಕ್ಷರಗಳೆರಡೂ ಪ್ರಾಚೀನ ಲತಿನ ಲಿಪಿಯಿಂದಲೇ ನಿಷ್ಪನ್ನವಾಗಿವೆ. ಅಕ್ಷರಗಳ ಕೆಲವು ಭಾಗಗಳನ್ನು ಕಳೆದೊ ಅಥವಾ ಅಕ್ಷರಗಳಿಗೆ ಹೊಸ ಭಾಗಗಳನ್ನು ಸೇರಿಸಿಯೋ ಬರೆದವುಗಳಾಗಿವೆ. H-h, B-b, Q-q, D-d ಹೀಗೆ. ಮೊದಲು ಅಕ್ಷರಗಳನ್ನು ಕೊರೆಯುತ್ತಿದ್ದರು. ಹಾಗೆಯೇ ಅವನ್ನು ಪೆನ್ನಿನಲ್ಲಿ ಪಪೈರಸ್ ಎಲೆಗಳ ಮೇಲೆ ಬರೆಯಲು ಆರಂಭಿಸಿದಾಗ ಅಂಕುಡೊಂಕುಗಳು ಕಾಣಿಸಿಕೊಂಡವು. ಅಕ್ಷರಗಳು ಲಿಪಿಕಾರನಿಂದ ಲಿಪಿಕಾರನಿಗೆ ಬದಲಾಗುತ್ತಿದ್ದುದು ಮತ್ತು ಬಹುತೇಕ ಕೊರೆಯುವ ಗೆರೆ ಅಕ್ಷರಗಳಾದ್ದರಿಂದ ಒಂದೊಂದು ಪ್ರದೇಶದಲ್ಲಿ ಅಕ್ಷರದಲ್ಲಿ ಬಾಗುಗಳು ಕಾಣಿಸಿಕೊಂಡವು. ಆಯಾ ದೇಶಗಳಲ್ಲಿ ಕಾಣಿಸಿಕೊಂಡ ಬಾಗಿದ ಅಕ್ಷರಗಳನ್ನು ಆಯಾ ದೇಶದ ಮಾದರಿ ಎಂಬಂತೆ ಗುರುತಿಸಿರುತ್ತಾರೆ. ಇಂದಿಗೂ ಕೆಲವು ಕೈಬರಹದ ಮಾದರಿಗಳು ಮುದ್ರಣದಲ್ಲೂ ಆ ಹೆಸರಿನಿಂದ ಉಳಿದುಬಂದಿವೆ. ಗೋಥಿಕ್ ಇಟಾಲಿಕ್, ರೋಮನ್, ಆಂಗ್ಲೋಸಾಕ್ಸನ್ ಮುಂತಾದ ಮಾದರಿಗಳನ್ನು ಹೆಸರಿಸಬಹುದು.

ಲತಿನ ಲಿಪಿಯ ಹರವು


ಲತಿನ ಲಿಪಿಯನ್ನು ಅನೇಕ ದೇಶಗಳಲ್ಲಿ ಬಳಸಲಾಯಿತು. ಈ ಭಾಷೆ ಮತ್ತು ಲಿಪಿಯನ್ನು ಮೊದಲು ರೋಮಿನ ಸೈನಿಕರು ಮತ್ತು ಆಡಳಿತಾಂಗದವರು ಗ್ರೀಕಿನ ಪ್ರಭಾವವಿಲ್ಲದ ಕಡೆಗಳಲ್ಲಿ ಬಳಸುತ್ತಾರೆ. ಕೆಲವೇ ಶತಮಾನಗಳಲ್ಲಿ ಕೆಲವು ದೇಶಗಳ ಭಾಷೆಗಳನ್ನೇ ಲತಿನ ಭಾಷೆ ಮತ್ತು ಲಿಪಿ ಸ್ಥಳಾಂತರಿಸುತ್ತದೆ. ಇಟಲಿ, ಸ್ಪೇನ್, ಪೋರ್ಚುಗಲ್, ಫ್ರೆಂಚ್ ಮತ್ತು ರುಮೇನಿಯಾಗಳು ಲತಿನ ಲಿಪಿಯನ್ನು ತಮ್ಮ ಬರೆವಣಿಗೆಗೆ ಬಳಸಿಕೊಂಡವು.

- ಮುಂದೆ ಚರ್ಚಿನವರು ಮತ್ತು ಪಾದ್ರಿಗಳು ಈ ಭಾಷೆ ಮತ್ತು ಲಿಪಿಯನ್ನು ಅದರಲ್ಲೂ ಮುಖ್ಯವಾಗಿ ಕ್ಯಾಥೋಲಿಕ್ ಪಂಗಡಕ್ಕೆ ಸೇರಿದ ರೋಮನರು (Catholic Rome) ಧರ್ಮದೊಂದಿಗೆ ಭಾಷೆ ಮತ್ತು ಲಿಪಿಯನ್ನು ಕೊಂಡೊಯ್ದರು. ಬುದ್ಧಿವಂತರ ಭಾಷೆಯಾಗಿಯೂ ಇದು ಮೆರೆಯಿತು.

ಇಂಗ್ಲೀಷ್ ಲಿಪಿ

ಎ, ಇ, ಐ ಓ, ಯು ಈ ಐದು ಸ್ವರಗಳು ಪಾರಂಪರಿಕವಾಗಿ ಬಂದು ಚಿಹ್ನೆಗಳಾಗಿ, ಇಂಗ್ಲೀಷ್‌ನ್ನು ಸರಿಯಾಗಿ ಉಚ್ಚರಿಸಲು ತಿಳಿಯಲು ಅನುಕೂಲವಾಗಿವೆ. ಈ ಸ್ವರಗಳನ್ನು

೧. ಕ್ರಿ.ಪೂ.೪ನೆಯ ಶತ
೨. ಕ್ರಿ.ಪೂ.೩ನೆಯ ಶತ
೩. ಕ್ರಿ.ಶ.೪ನೆಯ ಶತ
೪. ಮುಂದಿನ ಬೆಳವಣಿಗೆ
೫. ದೊಡ್ಡ ಅಕ್ಷರ
೬. ಇತ್ತೀಚಿನ ದೊಡ್ಡ ಅಕ್ಷರಗಳು




ಲತಿನ ಲಿಪಿಯ ಬೆಳವಣಿಗೆ

ಕೃಪೆ : ಡಿ. ಡಿರಿಂಜರ್

ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯಾಗಿ ಉಚ್ಚರಿಸುತ್ತಾರೆ. ಒಂದೊಂದು ಸ್ವರವೂ ಅನೇಕ ಉಚ್ಚಾರಗಳನ್ನು ಹೊಂದಿದೆ. ಉದಾ: ಎ (ಅ) ಕಾರವು ದೀರ್ಘಸ್ವರ ಆ, ಒ ಅಥವಾ ಎ, ಅಥವಾ ಹ್ರಸ್ವ 'ಅ' ಕಾರವಾಗಿ, ಸಂಯುಕ್ತ ಸ್ವರವಾಗಿ ae oe ei ಆಗಿ ಹೀಗೆ ಬೇರೆ ಬೇರೆ ರೀತಿಯಲ್ಲಿ ಉಚ್ಚಾರವಾಗುತ್ತದೆ. 'ಒ' ಕಾರವನ್ನು ಎರಡು ಸಾರಿ ಬರೆದರೆ ದೀರ್ಘಾಕ್ಷರ 'ಒ' ಆಗುತ್ತದೆ. ಹಾಗೆಯೇ ou 'ಒ' ಆಗುತ್ತದೆ. au ಅದೂ 'ಔ' ಆಗುತ್ತದೆ. ಇವೇ ದೀರ್ಘ ಹಾಗೂ ಹ್ರಸ್ವ ಸ್ವರಗಳಾಗಿಯೂ ಬಳಕೆಯಾಗುತ್ತವೆ. ಪ್ರಪಂಚದ ಅನೇಕ ಭಾಷೆಗಳ ಬರವಣಿಗೆಗೆ ಈ ಲಿಪಿಯನ್ನು ಬಳಸುವಾಗ ಈ ಧ್ವನಿ ವ್ಯತ್ಯಾಸಗಳು ಕೇಳಿಬರುತ್ತವೆ.

ಪಾರಂಪರಿಕ ಹಿಬ್ರೂ ವರ್ಣ ಲಿಪಿಯ ಬೆಳವಣಿಗೆ



1. ಅರಾಮಿಕ್ 2. ಚೌಕಹಿಬ್ರೂ, 3. ೧೧ನೆಯ ಶತಮಾನ, 4. ರಬ್ಬಾನಿಕ್, 5. ವೃತ್ತಾಕಾರದ ಲಿಪಿ

6-7 ನೂತನ ಲಿಪಿ

ಕೃಪೆ : ಡಿ. ಡಿರಿಂಜರ್

ಲತಿನ ಭಾಷೆಯಿಂದ ಪಡೆದ ೨೬ ಅಕ್ಷರಗಳನ್ನು ಇಂಗ್ಲೀಷ್ ಹೊಂದಿದೆ. ಬಳಕೆಯಿಂದಾಗಿ ಇಂದು ಪ್ರಪಂಚದಾದ್ಯಂತ ಹೆಚ್ಚಾಗಿ ಬಳಕೆಯಾಗುತ್ತಿರುವ ಲಿಪಿ ಇದಾಗಿದೆ. ಒಂದು ಅರ್ಥದಲ್ಲಿ ತಾನು ಆಳಿದ ಪ್ರದೇಶದಲ್ಲೆಲ್ಲಾ ಭಾಷೆ ಮತ್ತು ಲಿಪಿಯನ್ನು ಪಳೆಯುಳಿಕೆಯಾಗಿ ಉಳಿಸಿಹೋಗಿದೆ.

ಲತಿನ ಲಿಪಿಯನ್ನು ಯೂರೋಪಿನ ಭಾಷೆಗಳಿಗಲ್ಲದೆ ಇತರಡೆಯ ಲಿಪಿಗಳಿಗೂ ಬಳಸಲು ಪ್ರಯತ್ನಿಸಲಾಗಿದೆ. ಅರಾಬಿಯಾ, ರಷಿಯಾ, ಆಫ್ರಿಕಾದ ಅನೇಕ ಭಾಷೆಗಳು, ಏಷಿಯದ ಅನೇಕ ಭಾಷೆಗಳು, ಇಂಡೋನೇಷಿಯಾ, ತುರ್ಕಿ ಭಾಷೆಗಳಿಗೆ ಬಳಸಲಾಗಿದೆ. ಇದಲ್ಲದೆ ಚೈನಾ ಮತ್ತು ಜಪಾನಿ ಭಾಷೆಗೂ ಇದನ್ನು ಬಳಸುವ ಪ್ರಯೋಗ ನಡೆದಿತ್ತು. ಕೆಲವು ಭಾರತೀಯ ಭಾಷೆಗಳಿಗೂ ಇದನ್ನು ಆರಂಭದಲ್ಲಿ ಬಳಸಿದ್ದುಂಟು. ಶಾಸನಪತ್ರಗಳಲ್ಲಿ ಈ ಲಿಪಿಯನ್ನು ಬಳಸಲಾಗಿದೆ. ಹೀಗೆ ಬಳಸುವಾಗ ಆಯಾ ಪ್ರದೇಶದ ಭಾಷೆಗಳಿಗೆ ಅನುಕೂಲವಾಗುವಂತೆ ಅಕ್ಷರಗಳಿಗೆ ವ್ಯತ್ಯಾಸಸೂಚಕ ಗೆರೆಗಳನ್ನು ಚುಕ್ಕೆಗಳನ್ನು ಸೇರಿಸುವ ಮೂಲಕ ಬಳಸಲಾಗಿದೆ.

ಸುಮಾರು ಕ್ರಿ.ಪೂ.೨೦೦೦ ವರ್ಷಗಳ ಹಿಂದೆ ವರ್ಣಲಿಪಿಯ ಶೋಧನೆ ಆಯಿತು. ಈ ಕ್ರಿಯೆಯಲ್ಲಿ ಅನೇಕ ಮೂಲನಿವಾಸಿಗಳು, ನಾನಾ ಜನಾಂಗದವರು ತಮ್ಮದೇ ಆದ ಲಿಪಿಯನ್ನು ಬೆಳೆಸಿದ್ದಾರೆ.

ಸೆಮೆಟಿಯರು ತಮ್ಮ ಭಾಷೆಗಳಾದ ಸೆಮೆಟಿಯಾ-ಹಮಟಿಯಾ ಭಾಷೆಗೆ ಹೊಂದಿಕೊಳ್ಳುವಂತೆ ವ್ಯಂಜನ ಲಿಪಿಯನ್ನು ಬೆಳೆಸಿದರು. ಆದರೆ ಮುಂದೆ ಈ ಲಿಪಿ ಬೇರೆ ಬೇರೆ ಭಾಷೆಗಳಿಗೆ ಬಳಸಬೇಕಾದಾಗ ಸ್ವರಗಳ ಸೃಷ್ಟಿಯಾಯಿತು. ಹೀಗೆ ತಮ್ಮ ಭಾಷೆಗೆ ತಕ್ಕಂತೆ ಕೆಲವು ಹೊಸ ಲಿಪಿಗಳನ್ನು ಸೃಷ್ಟಿಸಿಕೊಂಡರು. ಕೆಲವನ್ನು ಬಿಟ್ಟರು. ತಮ್ಮ ಭಾಷೆಯ ಅಗತ್ಯವನ್ನು ಪೂರೈಸಿಕೊಂಡರು. ಇದೇ ಇಂದು ಬೇರೆ ಬೇರೆ ರೂಪಾಂತರಗಳನ್ನು ಹೊಂದಿ ಪ್ರಪಂಚದಾದ್ಯಂತ ಬಳಕೆಯಲ್ಲಿದೆ.

ABCDEFGHIJKLMNOPQRSTUVWXYZ

abcdefghijklmnopqrstuvwxyz

abcdefghijklmnopqrstuvwxyz

abcdefghijklmnopqrstuvwxyz

abcdefghijklmnopqrstuvwxyz

abcdefghijklmnopqrstuvwxyz

abcdefghijklmnopqrstuvwxyz

abcdefghijklmnopqrstuvwxyz

ಇಂಗ್ಲಿಷ್ ಭಾಷೆಗೆ ಬಳಸುವ ವಿವಿಧ ರೀತಿಯ ಕೆಲವು ಅಕ್ಷರಗಳ ಮಾದರಿ

ವರ್ಣಗಳ ಹೆಸರು

ಭಾರತದಲ್ಲಿ ಅಕ್ಷರಗಳನ್ನು ಸ್ವರಸಮೇತ ಉಚ್ಚರಿಸಿದರೂ ಅವುಗಳಿಗೆ ಮತ್ತೊಂದು ಹೆಸರಿರುವುದಿಲ್ಲ (ಶಾರದಾ ಲಿಪಿಯನ್ನು ಬಿಟ್ಟು). ಆದರೆ ಫೊನೀಷಿಯಾ ಮೂಲದ ಅಕ್ಷರಗಳಿಗೆ ಒಂದೊಂದಕ್ಕೂ ಒಂದೊಂದು ಹೆಸರುಂಟು. ಗ್ರೀಕ್ ಲಿಪಿಗಳನ್ನು ಮೂಲವಾಗಿ ಪಡೆದಿರುವ ಈಗಿನ ಯೂರೋಪಿನ ಲಿಪಿಗಳು ಹಿಂದಿನ ಹೆಸರುಗಳ ಉಚ್ಚಾರದ ಮೊದಲ ಅಕ್ಷರವನ್ನು ಮಾತ್ರ ಉಚ್ಚಾರಾಂಶವನ್ನು ಹೊಂದಿವೆ. ಹಳೆಯ ಗ್ರೀಕ್ ಲಿಪಿಯ ಪ್ರತಿ ವರ್ಣಮಾಲೆಯೂ ಒಂದೊಂದು ಶಬ್ದದ ಗುಚ್ಛವಾಗಿತ್ತು. ಇಂದಿಗೂ ಹಿಬ್ರೂ, ಅರಾಬಿಯಾ ಮುಂತಾದ ಲಿಪಿಗಳ ವರ್ಣಮಾಲೆಯ ಒಂದೊಂದು ಸಂಕೇತಕ್ಕೂ ಒಂದೊಂದು ಸ್ವತಂತ್ರ ಉಚ್ಚಾರವಿದೆ. ಗಣಿತ ಮತ್ತು ಭೌತಶಾಸ್ತ್ರವನ್ನು ಓದುವ ವಿದ್ಯಾರ್ಥಿಗಳಿಗೆ ಆಲ್ಫಾ, ಬೀಟಾ, ಸಿಗ್ಮಾ ಮುಂತಾದ ಹೆಸರುಗಳು ಪರಿಚಿತ. ಈ ಹೆಸರುಗಳು ಗ್ರೀಕ್ ವರ್ಣಮಾಲೆಯ ಉಚ್ಚಾರಗಳಾಗಿವೆ.


ಈ ಉಚ್ಚಾರಗಳು ಮೂಲದಲ್ಲಿ ಅರ್ಥವನ್ನು ಹೊಂದಿದ್ದ ಉಚ್ಚಾರಗಳಾಗಿದ್ದವು. ಸೆಮೆಟಿಯಾ ಭಾಷೆಯಲ್ಲಿ ಅಲೇಫ್ ಎಂದರೆ ಎತ್ತು ಎಂದರ್ಥ. ಹಾಗೆಯೇ ಬೇತ್=ಮನೆ, ದಲೇತ್=ಬಾಗಿಲು, ವಾವ್=ಕೊಕ್ಕೆ, ಯೋದ್=ಕೈ, ಕಾಫ್=ಮುಂತೋಳು, ಅಯಿನ್=ಕಣ್ಣು, ಪೇ=ಬಾಯಿ, ರೆಷ್/ರೋಷ್=ತಲೆ, ಗಾಮೆಲ್(ಜಿಮೆಲ್)=ಒಂಟೆ, ನುನ್=ಮೀನು, ಖೋಫ್=ಕೋತಿ ಎಂಬ ಅರ್ಥಗಳಿವೆ. ಈ ಪದಗಳ ಮೊದಲ ಅಕ್ಷರವನ್ನು ತೆಗೆದುಕೊಂಡು ಮೂಲದ ಪೂರ್ಣ ಉಚ್ಚಾರವನ್ನು ವರ್ಣಗಳಿಗೆ ನೀಡಿರುತ್ತಾರೆ. ಉದಾ : ಬೇತ್=ಬಿ, ಜಿಮೆಲ್=ಜಿ, ದಲೇಥ್=ಡಿ, ಹೇ=ಎಚ್, ವಾವ್=ಬ, ಜಯಿನ್=ಜಡ್ ... ಮುಂತಾಗಿ.


ಈಗ ಬಳಕೆಯಲ್ಲಿರುವ ಹಿಂದೆ ಬಳಕೆಯಲ್ಲಿದ್ದ ವರ್ಣಗಳ ಹೆಸರಿನ ಪಟ್ಟಿಯನ್ನು ಈ ಮುಂದೆ ನೀಡಲಾಗಿದೆ. ಸೆಮೆಟಿಯಾ ಗುಂಪಿನ ಹಾಗೂ ಅದರಿಂದ ಲಿಪಿಯನ್ನು ಪಡೆದಿರುವ ಯೂರೋಪಿನ ಲಿಪಿಗಳ ಉಚ್ಚಾರದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳಿವೆಯಾದರೂ ಮೂಲತಃ ಒಂದೇ ಉಚ್ಚಾರದಲ್ಲಿ ಬಂದಿರುವವುಗಳಾಗಿವೆ.


ಈಗ ಬಳಕೆಯಲ್ಲಿರುವ ಹಿಂದೆ ಬಳಕೆಯಲ್ಲಿದ್ದ ಲಿಪಿಗಳ ಉಚ್ಚಾರಗಳು

ಉತ್ತರ ಸೆಮಿಟಿಕ್	ಹಿಬ್ರೂ	ಗ್ರೀಕ್	ಕೋಪ್ಟಿಕ್	ಇಂಗ್ಲೀಷ್	ಅರಬ್ಬಿ	ಅರಮೇನಿಯಾ	ಜಾರ್ಜಿಯಾ	ಸಂಸ್ಕೃತ
ಅಲೇಫ್	ಅಲೇಫ್	ಆಲ್ಟ	ಆಲ್ಟ	ಎ	ಅಲಿಫ್	ಅಜ್‌ಬ್	ಅನಿ	ಅಆ
ಬೇಥ್	ಬೇಥ್	ಬೇಟ	ವಿಡ	ಬಿ	ಬ	ಬೆನ್	ಬನಿ	ಇಈ
ಗಿಮೇಲ್	ಗಿಮೇಲ್	ಗಾಮ್ಮ	ಗಮ	ಸಿ	ತ	ಮ್	ಗನಿ	ಉಊ
ದಲೇತ್	ದಾಲೇಥ್	ಡೆಲ್ಟ	ದಲ್ದ	ಡಿ	ಥಾ	ದ	ದೋನಿ	ಋೠ
ಹೇ	ಹೇ	ಎಪ್ಸಿ-ಲೋನ್	ಎಜೀ	ಇ	ಜಿಮ್	ಜ	ಎನಿ	ಌೡ
ವವ್	ವವ್	ಜೇಟ್	ಸೌ	ಎಫ್	ಹಾ	ವಿ	ಜೇನಿ	ಎ
ಜಯಿನ್	ಜಯಿನ್	ಏಟ	ಜತ	ಜಿ	ಖಾ	ಅತ್ಸ್	ವಿನಿ	ಐ

ಖೇತ್	ಹೇಥ್	ತೇಟ	ಓಡ	ಎಚ್	ಧಾಇ	ತೋ	ಥಾನಿ	ಔ
ಟೇತ್	ಯೋದ್	ಇಯೋಟ	ಥೀಡ	ಎಚ್	ರಾ	ಜೇ	ಇನಿ	ಕ
ಯೋದ್	ಕಾಫ್	ಕಪ್ಪ	ಜೋಡ	ಐ	ಜಾಚ್	ಇನಿ	ಕಾನಿ	ಖ
ಕಾಫ್	ಲಾಮೇಧ್	ಲಮ್ಡ	ಕಪ್ಪ	ಜೆ	ಸಿನ್	ಲ್‌ಜನ್	ಲಜಿ	ಗ
ಲಮೆದ್	ಮೆಮ್	ಮು	ಲೋಲ	ಕೆ	ಷಿನ್	ಕ್ಲೇ	ಮನಿ	ಘ
ಮೆಮ್	ನುನ್	ನು	ಮಿ	ಎಲ್	ಸಾದ್	ತ್ಸ	ನರಿ	ಙ
ಸಮೇಖ್	ಅಯಿನ್	ಕ್ಸಿ	ನಿ	ಎಮ್	ದಾದ್	ಕೆನ್	ಜೇನಿ	ಚ
ಅಯಿನ್	ಪೇ	ಒಮ್ರಿಕೋನ್	ಎಕ್ಸಿ	ಎನ್	ತಾ	ಹೋ	ಓನಿ	ಛ
ಪೇ	ಸದೆ	ಪಿ	ಔ	ಓ	ಜಾ	ಡ್ಜ	ಪಾರಿ	ಜ
ಶದೆ	ಕ್ವಾಪ್	ರ್ರೋ	ರೋಸ್	ಪಿ	ಅಯ್ನ್	ಯದ್	ಜಾನಿ	ಝ
ಕ್ವಾಫ್	ರೆಷ್	ಸಿಗ್ಮ	ಸಮ್ಮ	ಕ್ಯೂ	ಫಯ್ನ್	ತ್ಲೇ	ರೇ	ಞ
ರೇಷ್	ಸಿನ್	ತೌ	ದೌ	ಆರ್	ಫಾ	ಮೆನ್	ಸನಿ	ಟ
ಷಿನ್	ಷಿನ್	ಅಪ್ಸಿಲೋನ್	ಹೇ	ಎಸ್	ಕ್ವಾಫ್	ಹಿ	ತಾನಿ	ಠ
ತವ್	ತಾವ್	ಫಿ	ಫಿಜ್	ಟಿ	ಕಾಪ್	ಸು	ಉನಿ	ಡ
		ಬಿ	ಬಿಜ್	ಯು	ಮುಮ್	ಫ	ಯ್ನಿ	ಢ
		ಪ್ಸಿ	ಪ್ಸಿ	ವಿ	ನುನ್	ವೋ	ಪಾರಿ	ಣ
		ಒಮೇಗ	ಪೈ	ಡಬ್ಬಿಯೂ	ಹಾ	ತ್ಷ	ಖಾನಿ	ತ
			ಅಉ	ಎಕ್ಸ್	ವಾವ್	ಷೇ	ಯನಿ	ಥ
			ಷೇಇ	ವೈ	ಯಾ	ದ್ಜೇ	ಕ್ವಾರಿ	ದ
			ಪೇಇ	ಜೆಡ್		ರ್ರ	ಷಿನಿ	ಧ
			ಚೇಯಿ			ಸೆ	ತ್ಷಿನಿ	ನ
			ಹೋರಿ			ವೆವ್	ತ್ಷನಿ	ಪ
			ದ್ಜನ್ಜ			ತ್ಜುನ್	ಡ್ಜಲಿ	ಫ
			ತೆಹ್			ರೇ	ತ್ಲಿಲಿ	ಬ
			ಟಿ			ತ್ಸೋ	ತ್ಸಾರಿ	ಭ
						ಜುನ್	ಕ್ಸಾನಿ	ಮ
						ಪ್ಜುರ್	ಕ್ವಾನಿ	ಯ
						ಖೇ	ಡ್ಜಾನಿ	ರ
						ಓ	ಹೇ	ಲ
						ಫೇ	ವಾನಿ	ವ
								ಶ
								ಷ
								ಸ
								ಹ
								ಂ


ಮೂಲ ಸೆಮೆಟಿಕ್
ಉತ್ತರ ಸೆಮೆಟಿಕ್
ದಕ್ಷಿಣ ಸೆಮೆಟಿಕ್
ಇಥಿಯೋಪಿಯ
ಗ್ರೀಕ್ ಶಾಖೆ
ಕನ್ನನೈಟ್ ಶಾಖೆ
ಅರಾಮಿಯಾ ಶಾಖೆ
ಏಷಿಯಾ
ಕೋಪ್ಟಿಕ್
ಗೋಥಿಕ್
ಮೆಸಿಪಿಯನ್
ಸಿರಿಲಿಕ್
ರಷ್ಯಾ ಮತ್ತಿತರ ಸಾಲ್ವನಿಕ ಲಿಪಿಗಳು
ಎಟ್ರುಸ್ಕಾನ್
ಇಟಲಿಯ ಉಪಶಾಖೆ
ಉತ್ತರ ಎಟ್ರುಸ್ಕಾನ್
ಲತಿನ
ರುನಿಕ್
ಯುರೋಪಿನ ಲಿಪಿಗಳು
ಇಂಗ್ಲೀಷ್ ಲಿಪಿಗಳು


ಕನ್ನನೈಟ್ ಶಾಖೆ
ಫೋನೀಷಿಯಾ
ಪ್ರಾಚೀನ ಹಿಬ್ರೂ ಮತ್ತವರ ಶಾಖೆಗಳು
ಪುನಿಕ್
ನೂತನ ಪುನಿಕ್


ಅರಾಮಿಯಾ ಶಾಖೆಗಳು
ಹಿಬ್ರೂ
ಅರಾಬಿಕ್
ಇತರೆ

**

ಅಧ್ಯಾಯ - ೪

ಭಾರತದಲ್ಲಿ ಬರೆವಣಿಗೆಯ ಆರಂಭ

ಭಾರತದಲ್ಲಿ ಸ್ಪಷ್ಟವಾದ ಬರೆವಣಿಗೆಯ ಆಧಾರಗಳು ಸಿಕ್ಕುವುದು ಅಶೋಕನ ಕಾಲದಲ್ಲಿ. ಈ ಕಾಲಕ್ಕೆ ಅದಕ್ಕಿಂತ ಹಿಂದೆ ಇದ್ದ ಸಿಂಧೂ ನಾಗರೀಕತೆ ಅಳಿದು ಹೋಗಿತ್ತು. ಈ ನಾಗರೀಕತೆಯ ಲಿಪಿಗಳನ್ನು ಇನ್ನೂ ಸರ್ವಸಮ್ಮತವಾಗಿ ಓದಲಾಗಿಲ್ಲ. ಈ ಸಿಂಧೂ ಲಿಪಿಗೂ ಬ್ರಾಹ್ಮೀ ಲಿಪಿಗೂ ಇರುವ ಸಂಬಂಧವನ್ನು ಸಾಧಿಸಲು ಯಾವುದೇ ಕೊಂಡಿ ದೊರೆತಿಲ್ಲ. ಮೌರ್ಯರಿಗಿಂತ ಪೂರ್ವದ ನಾಣ್ಯಗಳ ಮುದ್ರೆಗಳಲ್ಲಿನ ಚಿಹ್ನೆಗಳ ವ್ಯಾಪಕ ಅಧ್ಯಯನ ನಡೆದಿಲ್ಲ.

ಭಾರತದ ಪ್ರಾಚೀನ ಸಾಹಿತ್ಯವಾದ ವೇದಗಳಲ್ಲಿ ಭಾರತದಲ್ಲಿದ್ದಿರಬಹುದಾಗಿದ್ದ ಬರೆವಣಿಗೆಯ ಬಗ್ಗೆ ಏನೂ ಹೇಳುವುದಿಲ್ಲ. ಅದು ಮೌಖಿಕ ಸಾಹಿತ್ಯವಾಗಿತ್ತು. ಇತರರು ಅಂದರೆ ಶೂದ್ರರು ಅದನ್ನು ಕೇಳುವುದಾಗಲೀ, ಉಚ್ಚರಿಸುವುದಾಗಲೀ ಅಥವಾ ನೆನಪಿನಲ್ಲಿಟ್ಟುಕೊಳ್ಳುವುದಾಗಲೀ ನಿಷಿದ್ಧವಿತ್ತು. ೧೯ನೆಯ ಶತಮಾನದವರೆಗೆ ವೇದಗಳು ಮೌಖಿಕ ಸಾಹಿತ್ಯವಾಗಿಯೇ ಇದ್ದವು. ಸರಸ್ವತಿಯನ್ನು ಬುದ್ಧಿಯ, ವಾಕ್-ಸಂಪತ್ತಿನ ದೇವತೆಯಾಗಿ ಹೆಸರಿಸಲಾಗಿದೆ. ಆದರೆ ಬರೆವಣಿಗೆಯ ದೇವತೆಯಾಗಿ ಅಲ್ಲ.

ನಾರದಸ್ಮೃತಿಯಲ್ಲಿ ಬರೆವಣಿಗೆಯು ಬ್ರಹ್ಮನ ಸೃಷ್ಟಿಯೆಂದಿದೆ. ಇದನ್ನೇ ಬೃಹಸ್ಮತಿಯ ವಾರ್ತಿಕದಲ್ಲಿ ಸ್ವಲ್ಪ ಬದಲಾವಣೆಯೊಂದಿಗೆ ಹೇಳಲಾಗಿದೆ. ಆರು ತಿಂಗಳಲ್ಲಿ ಹೇಳಿದ ವಿಷಯದ ಬಗ್ಗೆ ಗೊಂದಲ ಬರುತ್ತಿದ್ದು ಆದನ್ನು ನಿವಾರಿಸಲು ಬ್ರಹ್ಮನು ಅಕ್ಷರಗಳನ್ನು ಸೃಷ್ಟಿಸಿದನೆಂದಿದೆ (ಪಾಂಡೆ). ಜೈನ ಧಾರ್ಮಿಕ ಗ್ರಂಥಗಳ ಪ್ರಕಾರ ಆದಿದೇವನು ತನ್ನ ಇಬ್ಬರು ಹೆಣ್ಣುಮಕ್ಕಳಾದ ಬ್ರಾಹ್ಮಿ ಮತ್ತು ಸುಂದರಿಗೆ ಕ್ರಮವಾಗಿ ಮೊದಲನೆಯ ಮಗಳಿಗೆ ಲಿಪಿಯನ್ನೂ ಎರಡನೆಯವಳಿಗೆ ಗಣಿತವನ್ನೂ ಕಲಿಸಿದನಂತೆ. ಇವರು ಲೋಕಕ್ಕೆ ಈ ವಿದ್ಯೆಗಳನ್ನು ಕಲಿಸಿದರೆಂದಿದೆ. ಇದೇ ಧರ್ಮದ ಸಮವಾಯಾಂಗ ಸೂತ್ರ, ಪಣ್ಣವಣಾ ಸೂತ್ರದಲ್ಲಿಯೂ ಬರೆವಣಿಗೆಯ ಉಲ್ಲೇಖಗಳಿವೆ.

ಬೌದ್ಧ ಸಾಹಿತ್ಯವು ಬರೆವಣಿಗೆಯ ಬಗ್ಗೆ ಸ್ಪಷ್ಟವಾದ ಆಧಾರಗಳನ್ನು ನೀಡುತ್ತದೆ. ಸುತ್ತಾಂತದಲ್ಲಿ (ಸಿಲಸುತ್ತ ಕ್ರಿ.ಪೂ.೫ನೇ ಶತ) ಅಖ್ಖರಿಕಾ ಎಂಬ ಆಟವನ್ನು ವಿದ್ಯಾರ್ಥಿಗಳು ಆಡುತ್ತಿದ್ದರೆಂದು ಹೇಳಿದೆ. ಈ ಅಖ್ಖರಿಕಾ ಒಂದು ಬಗೆಯ ಮಕ್ಕಳ ಆಟ. ವಿನಯಪಿಟಿಕದಲ್ಲಿ ಸನ್ಯಾಸಿಗಳು ಲೇಖನದಲ್ಲಿ ಸಿದ್ಧಹಸ್ತರಿರಬೇಕೆಂದು ಹೇಳಿದೆ. ಅಲ್ಲದೆ ಬೌದ್ಧ ತತ್ವಗ್ರಂಥಗಳಲ್ಲಿ ಸ್ವಂತ ಮತ್ತು ಆಡಳಿತ ಪತ್ರಗಳು, ರಾಜನ ಆಜ್ಞೆಗಳು, ಕುಟುಂಬಕ್ಕೆ ಸಂಬಂಧಿಸಿದ ವಿಷಯಗಳು, ಹಸ್ತಪ್ರತಿಗಳು ಮುಂತಾದವುಗಳ ಉಲ್ಲೇಖವಿವೆ. ಮಹಾವಗ್ಗ ಜಾತಕದಲ್ಲಿ ಬರೆವಣಿಗೆಯ ಇರುವಿಕೆಯ

ಬಗ್ಗೆ ಮಾತ್ರವಲ್ಲದೆ ಬರೆವಣಿಗೆಯನ್ನು ಕಲಿಸುತ್ತಿದ್ದ ಸಂಸ್ಥೆ ಮತ್ತು ಶಾಲೆಗಳ ಬಗ್ಗೆ ಉಲ್ಲೇಖವಿದೆ. ಫಲಕ ಮತ್ತು ವರ್ಣ್ಣಕದ (ಮರದ ಲೇಖನಿ) ಉಲ್ಲೇಖವಿದೆ. ಲಲಿತವಿಸ್ತರದಲ್ಲಿ ಬುದ್ಧನು ಚಿಕ್ಕಂದಿನಲ್ಲಿ ಚಿನ್ನದ ಲೇಖನಿಯಲ್ಲಿ ಗಂಧದ ಹಲಗೆ ಮೇಲೆ ಬರೆಯುತ್ತಿದ್ದ ಎಂಬ ಉಲ್ಲೇಖವಿದೆ.

ಬೂಹ್ಲರ್ ಅವರು ಬೌದ್ಧ ಸಾಹಿತ್ಯದಲ್ಲಿ ಬರೆವಣಿಗೆಯ ಬಗ್ಗೆ ಇರುವ ಉಲ್ಲೇಖಗಳಲ್ಲಿ ಚಿಂದತಿ. ಲಿಖತಿ, ಲೇಖ, ಲೇಖಕ, ಅಖ್ಖರ ಅಲ್ಲದೆ ಬರೆವಣಿಗೆಯ ಸಾಧನಗಳಾದ ಮರ, ಬಿದಿರು, ಎಲೆ, ಸ್ವರ್ಣಪತ್ರಗಳನ್ನು ಉಲ್ಲೇಖಿಸಿರುತ್ತಾರೆ. ಚಿಂದತಿಯೆಂದರೆ ಗಟ್ಟಿವಸ್ತುಗಳ ಮೇಲೆ ಕೊರೆಯುವುದು. ತಾಳಪತ್ರ ಅಂತಹದು. ಶಿಲಾಶಾಸನ ಸಹ ಚಿಂದತಿಯೇ ಆಗಿದೆ. ರಾಮಾಯಣ ಮತ್ತು ಮಹಾಭಾರತದಲ್ಲಿ ಲಿಖ್, ಲೇಖ, ಲೇಖನ, ಲೇಖಕ ಪದಗಳು ಉಲ್ಲೇಖವಾಗಿವೆ. ಮಹಾಭಾರತದಲ್ಲಿ ವ್ಯಾಸನು ಹೇಳಿದ ಕಾವ್ಯವನ್ನು ಗಣಪತಿಯು ಬರೆದಂತೆ ಹೇಳಿದೆ. ಅರ್ಥಶಾಸ್ತ್ರದಲ್ಲಿ ಶಾಸನಗಳ ಬರೆವಣಿಗೆಗೆ ಸಂಬಂಧಿಸಿದಂತೆ ಒಂದು ಅಧ್ಯಾಯವೇ ಇದೆ. ಅನೇಕ ಬಗೆಯ ಪತ್ರಗಳನ್ನು ಉಲ್ಲೇಖಿಸಲಾಗಿದೆ. ಗೃಹ್ಯ ಮತ್ತು ಧರ್ಮಸೂತ್ರಗಳಲ್ಲಿ ವಸಿಷ್ಟ ಮತ್ತು ವಿಷ್ಣುಧರ್ಮಸೂತ್ರಗಳಲ್ಲಿ ಬರೆವಣಿಗೆಯ ಬಗ್ಗೆ ಉಲ್ಲೇಖಗಳಿವೆ. ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಲಿಪಿ, ಲಿಬಿ, ಲಿಪಿಕಾರ, ಯವನಾನಿ, ಗ್ರಂಥ, ಸ್ವರಿತ (ಬರೆವಣಿಗೆಯ ಗುರುತು)ಗಳನ್ನು ಉಲ್ಲೇಖಿಸಿದೆ. ಅಲ್ಲದೆ ಸಂಖ್ಯೆಗಳ ಉಲ್ಲೇಖವಿದ್ದು ದಶ, ಶತ, ಸಹಸ್ರ, ಆಯತ (೧೦,೦೦೦) ನಿಯತ (೧,೦೦,೦೦೦) ಪ್ರಯತ (೧೦,೦೦,೦೦೦) ಅರ್ಬುದ (೧,೦೦,೦೦,೦೦೦) ನ್ಯರ್ಬುದ (೧೦,೦೦,೦೦,೦೦೦) ಮುಂತಾದ ಉದ್ದುದ್ದದ ಸಂಖ್ಯೆಗಳನ್ನು ಉಲ್ಲೇಖಿಸಿರುತ್ತಾನೆ.

ವಿದೇಶಿಯರು ಈ ಭಾರತಕ್ಕೆ ಬಂದಾಗ ತಮ್ಮ ಬರೆಹಗಳಲ್ಲಿ ಇಲ್ಲಿದ್ದ ಬರವಣಿಗೆ ಬಗ್ಗೆ ದಾಖಲಿಸಿರುತ್ತಾರೆ. ಗ್ರೀಕ್ ಬರಹಗಾರ ನೀರ್‌ಖೋಸ್ ಎಂಬುವವನು ಅಲೆಗ್ಸಾಂಡರನ ಸೇನಾಧಿಕಾರಿಯಾಗಿದ್ದ. ಇವನು ಭಾರತದಲ್ಲಿ ಹತ್ತಿಯಿಂದ ಬರೆವಣಿಗೆಯ ಕಾಗದವನ್ನು ತಯಾರಿಸುವ ಕಲೆ ಗೊತ್ತಿತ್ತೆಂದು ಹೇಳಿದ್ದಾನೆ. ಮೌರ್ಯರ ಆಸ್ಥಾನದಲ್ಲಿದ್ದ ಮೆಗಾಸ್ತನೀಸನು ತನ್ನ ಗ್ರಂಥ ಇಂಡಿಕದಲ್ಲಿ ರಸ್ತೆಗಳಲ್ಲಿ ಮೈಲಿಕಲ್ಲುಗಳ ಮೇಲೆ ಬರೆದಿದ್ದನ್ನು ಉಲ್ಲೇಖಿಸುತ್ತಾನೆ. ಕರ್ಟಿಯಸ್ ಎಂಬಾತ ಒಂದು ಬಗೆಯ ಮರದ ಒಳ ತೊಗಟೆಯನ್ನು ಬರೆವಣಿಗೆಯ ವಸ್ತುವಾಗಿ ಬಳಸುತ್ತಿದ್ದರೆಂದು ಹೇಳಿದ್ದಾನೆ.

ಹ್ಯೂಯೆನ್‌ತ್ಸಾಂಗನು ಭಾರತದಲ್ಲಿ ಹಿಂದಿನಿಂದಲೂ ಬರೆವಣಿಗೆ ಇದ್ದ ಬಗ್ಗೆ ತಿಳಿಸಿದ್ದಾನೆ. ಚೈನಾದ ವಿಶ್ವಕೋಶಕಾರ ಫ-ವಾನ್-ಷು-ಲಿನ್‌ನು ಬ್ರಾಹ್ಮಿಯು ಎಡದಿಂದ ಬಲಕ್ಕೆ ಬರೆಯುವದೆಂದೂ, ಇದನ್ನು ಬ್ರಹ್ಮನು ಕಂಡುಹಿಡಿದನೆಂದೂ ಹೇಳಿದ್ದಾನೆ. ಅರಬ್ಬೀ ವಿದ್ವಾಂಸ ಅಲ್ಬೆರೂನಿಯು ಭಾರತೀಯರು ಬರೆವಣಿಗೆಯನ್ನು ಮರೆತಿದ್ದರು .... ಮುಂದೆ ಪರಾಶರ, ವ್ಯಾಸರು ಅದನ್ನು ಪುನಃ ಕಂಡುಹಿಡಿದರು. ಇದು ನಡೆದದ್ದು ಕಲಿಯುಗ ಆರಂಭದಲ್ಲಿ (ಕ್ರಿ.ಪೂ.೩೧೦೧ರಲ್ಲಿ) ಎಂದಿದ್ದಾನೆ.

ಬರೆವಣಿಗೆ

ಅಶೋಕನು ತನ್ನ ಬರೆವಣಿಗೆಗಳನ್ನು ಆ ಕಾಲದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಬಳಕೆಯಲ್ಲಿದ್ದ ಲಿಪಿಗಳಲ್ಲಿ ಬರೆಸಿದ. ಈ ಶಾಸನಗಳ ಹಿಂದಿನ ಮತ್ತು ಮುಂದಿನ ಕಾಲಗಳಲ್ಲಿ ನಮಗೆ ಭಾರತದಲ್ಲಿ ಬರೆವಣಿಗೆಯ ದಾಖಲೆಗಳು ದೊರೆಯುತ್ತವೆ.



EI. II p. 324 ಭಟ್ಟಿಪ್ರೋಲು ಕರಂಡದ ಶಾಸನ ದೇ.ಕೊ. ರೆಡ್ಡಿ

ಏರಾಣ್ ನಾಣ್ಯದಲ್ಲಿನ ಪಾಠವು ಬಲದಿಂದ ಎಡಕ್ಕೆ ಇದೆ. ಬೂಹ್ಲರ್ ಇದನ್ನು ಬ್ರಾಹ್ಮಿಯು ಎಡದಿಂದ ಬಲಕ್ಕೆ ಬರೆಯುತ್ತಿದ್ದ ಕಾಲದ್ದೆಂದು ಹೇಳಿ ಇದರ ಕಾಲವನ್ನು ಕ್ರಿ.ಪೂ.೫ನೆಯ ಶತಮಾನದ್ದೆಂದು ನಿಗದಿ ಪಡಿಸಿರುತ್ತಾನೆ. ಎರ್ರಗುಡಿ ಶಾಸನವು ಹಾವಿನ ನಡಿಗೆಯಂತಹ ಶಾಸನವಾಗಿದ್ದು (Boustrophedon), ಭಟ್ಟಿಪ್ರೋಲು ಶಾಸನದಲ್ಲಿ ಲ ಮತ್ತು ಳ ಕಾರಗಳ ಉಲ್ಲೇಖ ಬಂದಿದೆ. ತಕ್ಷಶಿಲಾ ನಾಣ್ಯದ ಅಕ್ಷರಗಳ ಆಧಾರದಿಂದ ಇದನ್ನು ಕ್ರಿ.ಪೂ.೪ನೆಯ ಶತಮಾನಕ್ಕೆ ಹಾಕಬಹುದಾಗಿದೆ. ಮಹಾಸ್ಥಾನದ ತುಂಡು ಶಾಸನವು ಬಂಗಾಳದ ಬೋಗ್ರಾ ಜಿಲ್ಲೆಯಲ್ಲಿ ದೊರೆತಿದ್ದು ಪಂಚವರ್ಗೀಯ ಬೌದ್ಧರಿಗೆ ದಾನ ನೀಡಿದ ಉಲ್ಲೇಖವಿದೆ. ಸೌಗಾರ ತಾಮ್ರ ಶಾಸನವು ಉತ್ತರಪ್ರದೇಶದ ಗೋರಖಪುರದಲ್ಲಿ ದೊರೆತಿದ್ದು ಇದೂ ಸಹ ಅಶೋಕನಿಗಿಂತ ಹಿಂದಿನದೆಂದು ಪರಿಗಣಿಸಲಾಗಿದೆ. ಪಿಪ್ರಾಹ್ವ ಬೌದ್ಧ ಕರಂಡದ ಶಾಸನವು ಉತ್ತರಪ್ರದೇಶದ ಬಸ್ತಿಜಿಲ್ಲೆಯಲ್ಲಿ ದೊರೆತಿದ್ದು ಬುದ್ಧನ ಅಸ್ತಿಗಳಿಟ್ಟಿದ್ದ ಬಗ್ಗೆ ಹೇಳುತ್ತದೆ. ಇದರ ಕಾಲವು ಕ್ರಿ.ಪೂ.೪೮೩. ಬುದ್ಧನ ನಿರ್ವಾಣದ ದಿನ. ಕೆಲವರು ಇದನ್ನು ಅಷ್ಟು ಹಿಂದಿನದ್ದಲ್ಲವೆಂದು ವಾದಿಸುತ್ತಾರೆ. ಬಡ್ಲಿ (ಅಜ್ಮೀರ್ ಜಿಲ್ಲೆ) ಎಂಬಲ್ಲಿ ದೊರೆತಿರುವ ಶಾಸನದಲ್ಲಿ 'ವೀರಾಯ ಭಗವತೇ ಚತುಸಿತೇವಸೇ' ಎಂದಿದೆ. ಅಂದರೆ ಮಹಾವೀರನ ೮೪ನೇ ವರ್ಷ (ಕ್ರಿ.ಪೂ.೪೮೪)ದ ಉಲ್ಲೇಖವಿದೆ: ಅಶೋಕನ ಶಾಸನಗಳು ಕ್ರಿ.ಪೂ.೩ನೆಯ ಶತಮಾನದವು. ಮೇಲಿನ ಉಲ್ಲೇಖಗಳು ಚರ್ಚಾಸ್ಪದವೂ ಆಗಿವೆ. ಕೆಲವು ವಿದ್ವಾಂಸರು ಅವು ಅಷ್ಟು ಪ್ರಾಚೀನವಲ್ಲವೆಂದೂ, ಅಶೋಕನ ಕಾಲದವೆಂದು ತರ್ಕಿಸಿರುತ್ತಾರೆ.

ಬ್ರಾಹ್ಮಿಲಿಪಿಯ ಮೂಲದ ಚರ್ಚೆ

ಇದರಲ್ಲಿ ೧. ಸ್ಥಳೀಯ ಲಿಪಿ, ೨. ಬೇರೆ ಕಡೆಯಿಂದ ಪಡೆದ ಲಿಪಿ (ವಿದೇಶಿ ಮೂಲ) ಎಂಬ ಎರಡು ಚರ್ಚೆಗಳಿವೆ.

೧. ಸ್ಥಳೀಯ ಲಿಪಿ : ಎಡ್ವರ್ಡ್ ಥಾಮಸ್ ಎಂಬುವವನು ಬ್ರಾಹ್ಮಿಯು ದ್ರಾವಿಡರ ಅನ್ವೇಷಣೆ ಎಂದು ಭಾವಿಸಿದ್ದ. ಜನರಲ್ ಕನ್ನಿಂಗ್ ಹ್ಯಾಂ, ಡೌಸನ್ ಇವರು ಬ್ರಾಹ್ಮಿಯನ್ನು ಭಾರತದ ಪುರೋಹಿತರು ಚಿತ್ರಲಿಪಿಯಿಂದ ಬೆಳೆಸಿದರು ಎಂಬ ಅಭಿಪ್ರಾಯಪಟ್ಟಿದ್ದಾರೆ. ಮುಂದೆ ಸಿಂಧೂ ನಾಗರೀಕತೆಯ ಲಿಪಿಯನ್ನು ಕಂಡುಹಿಡಿದ ಮೇಲೆ ಆ ಲಿಪಿಗೆ ಇದರ ಮೂಲವನ್ನು ಇವರು ಸೇರಿಸಿದರು. ಅನೇಕ ವಿದ್ವಾಂಸರು ಇವರ ವಾದವನ್ನು ಒಪ್ಪಿರುತ್ತಾರೆ.

ಡೇವಿಡ್ ಡಿರಿಂಜರ್ ಎಂಬುವವನು ಭಾರತೀಯ ವಿದ್ವಾಂಸರು ಬ್ರಾಹ್ಮಿಲಿಪಿಯು ಸ್ಥಳೀಯವಾಗಿದ್ದ ಚಾರಿತ್ರ ಪೂರ್ವಕಾಲದ ಲಿಪಿಯಿಂದ ಉದಿಸಿದೆಯೆಂದು ದೇಶಾಭಿಮಾನದಿಂದ ಅಭಿಪ್ರಾಯಪಡುತ್ತಾರೆ ಎಂದಿದ್ದಾನೆ. (ದಿ ಆಲ್ಫಬೇಟ್ ಪು.೩೨೮) ಅವನ ಪ್ರಕಾರ ಕ್ರಿ.ಪೂ.೮ರಿಂದ ೭ನೆಯ ಶತಮಾನದ ಮಧ್ಯೆ ಆರ್ಯಾವರ್ತದಲ್ಲಿ ಬರೆವಣಿಗೆಯ ಆರಂಭವಾಯಿತು. ಹೀಗಾಗಿ ಕ್ರಿ.ಪೂ.೭ನೆಯ ಶತಮಾನದಲ್ಲಿ ಭಾರತದಲ್ಲಿ ಬರೆವಣಿಗೆ ಆರಂಭವಾಗಿರಬೇಕೆಂದು ಅಭಿಪ್ರಾಯಪಡುತ್ತಾನೆ. ಆದರೆ ಭಾರತದಲ್ಲಿ ಬಹು ಹಿಂದಿನಿಂದಲೂ ಅಂದರೆ ವೇದಗಳ ಕಾಲದಿಂದಲೂ ಬರೆವಣಿಗೆ ರೂಢಿಯಲ್ಲಿದ್ದಿತ್ತೆಂಬ ಬಗ್ಗೆ ಮತ್ತು ಆ ಬರೆವಣಿಗೆ ಮರಳಿನ ಮೇಲೆ ಬರೆಯುವ ಬರೆವಣಿಗೆಯಾಗಿದ್ದು, ಗಟ್ಟಿ ವಸ್ತುಗಳ ಮೇಲೆ ಬರೆಯುವಂತಹದಾಗಿರಲಿಲ್ಲ, ಹೀಗಾಗಿ ಬರೆವಣಿಗೆಯ ಕುರುಹುಗಳು ಪ್ರಾಚೀನ ಭಾರತದಲ್ಲಿ ಉಳಿದು ಬಂದಿಲ್ಲ. ಈ ಬಗ್ಗೆ ಅಶೋಕನ ಕಾಲದ ಬರೆವಣಿಗೆ ಎಂಬ ಅಧ್ಯಾಯದಲ್ಲಿ ವಿವರವಾಗಿ ವಿವರಿಸಲಾಗಿದೆ.

ಭಾರತದಲ್ಲಿ ಪ್ರಾಚೀನ ಕೃತಿಗಳೆಂದರೆ ವೇದಗಳು. ಇವು ಬಾಯಿಂದ ಬಾಯಿಗೆ ಬಂದವು. ಇಂದಿಗೂ ಇದು ಹೀಗೆಯೇ ಬಂದಿದೆ. ವೇದಗಳಲ್ಲಿ ಮೊದಲು ಸಂಕಲನವಾದದ್ದು ಋಗ್ವೇದ. ಋಗ್ವೇದದಲ್ಲಿ ಗಾಯತ್ರೇಣ ಪ್ರತಿಮಿಮೀತೇ ಅರ್ಕ್ಂ ಅರ್ಕೇಣ ಸಾಮತ್ರೈಷ್ಟುಭೇನವಾಕಂ ವಾಕೇನ ವಾಕಂ ದ್ವಿಪದಾ ಚತುಷ್ಪದಾ ಅಕ್ಷರೇಣ ಮಿಮೀತೇ ಸಪ್ತವಾಣಿ (೧-೧೬೪. ೨೪)

(ಸಪ್ತಛಂದಸ್ಸುಗಳೂ ಅಕ್ಷರಗಳಲ್ಲಿ ರೂಪಹೊಂದುತ್ತವೆ. ಗಾಯಿತ್ರಿ ಛಂದಸ್ಸಿಗೆ ಎಂಟು ಅಕ್ಷರಗಳು. ತ್ರಿಷ್ಟುಪ್ ಛಂದಸ್ಸಿಗೆ ಹನ್ನೊಂದು ಅಕ್ಷರ. ಜಗತೀ ಛಂದಸ್ಸಿಗೆ ಹನ್ನೆರಡು ಅಕ್ಷರಗಳು. ಇಷ್ಟು ಅಕ್ಷರಗಳಾದಲ್ಲಿ ಪಾದವೆಂದೂ, ಇಷ್ಟು ಪಾದಗಳಾದಲ್ಲಿ ಇಂತಹ ಛಂದಸ್ಸೆಂದು ಹೇಳುತ್ತಾರೆ. ಹೀಗಾಗಿ ಪಾದಗಳಿಗೆ, ಛಂದಸ್ಸಿಗೆ ಅಕ್ಷರಗಳೇ ಪ್ರಮಾಣ.)

ಹಸುಗಳನ್ನು ಗುರುತು ಸಿಗಲು ಅವುಗಳ ಕಿವಿಗೆ ಗುರುತು ಹಾಕುತ್ತಿದ್ದಂತೆ ಋಗ್ವೇದದಲ್ಲಿ ಅಷ್ಟಕರ್ಣಿಯ ಕಥೆ ಇದೆ. ಹೀಗಾಗಿ ವೇದಗಳ ಕಾಲದಲ್ಲಿಯೇ ಅಕ್ಷರಜ್ಞಾನವಿತ್ತೆಂಬ ಅಂಶ ತಿಳಿಯುತ್ತದೆ.

ತೈತ್ತರೀಯ ಸಂಹಿತೆಯಲ್ಲಿ ಇಂದ್ರನು ಭಾಷೆಗೆ ವ್ಯಾಕರಣವನ್ನೂ ಬರೆದನೆಂದಿದೆ. ದೇವತೆಗಳು ಇಂದ್ರನನ್ನು ಭಾಷೆಗೆ ವ್ಯಾಕರಣವನ್ನು ಹೇಳಬೇಕೆಂದು ಇಂದ್ರನನ್ನು ಪ್ರಾರ್ಥಿಸಿದರಂತೆ.

ಇಂದ್ರನು ಇದು ವರ್ಣ, ಇದು ಪ್ರಕೃತಿ, ಇದು ಪ್ರತ್ಯಯ, ಇದು ಪದ, ಇದು ವಾಕ್ಯ ಎಂದು ಬಿಡಿಸಿ ವ್ಯಾಕರಣವನ್ನು ಹೇಳಿದನಂತೆ. ವೈಯಾಕರಣಿಗಳು ಹಿಂದಿನ ವ್ಯಾಕರಣಕಾರರನ್ನು ನೆನೆಯುವಾಗ ಮೊದಲು ಇಂದ್ರನನ್ನು ಸ್ಮರಿಸಿರುತ್ತಾರೆ. ಹೀಗಾಗಿ ಋಗ್ವೇದದ ಕಾಲಕ್ಕೆ ಲಿಪಿ ಬಳಕೆಯಿತ್ತೆಂದು ಹೇಳಬಹುದಾಗಿದೆ. ಇದೇ ಸಂಹಿತೆಯಲ್ಲಿ ಬಹು ಸಂಖ್ಯೆಯ ಸಂಖ್ಯೆಗಳನ್ನು ಉಲ್ಲೇಖಿಸಲಾಗಿದೆ. ಪಂಚವಿಂಶ ಬ್ರಾಹ್ಮಣ, ಶತಪಥ ಬ್ರಾಹ್ಮಣಗಳಲ್ಲಿ ಚಿನ್ನದ ತೂಕದ ಲೆಕ್ಕ ಮತ್ತು ಸಮಯದ ಲೆಕ್ಕದ ವಿವರಗಳಿವೆ.

ನಂತರದ ಕಾಲದಲ್ಲಿ ರಚಿತವಾದ ಗೋಪಥ ಬ್ರಾಹ್ಮಣದಲ್ಲಿ ಓಂಕಾರದ ಚರ್ಚೆ ಇದೆ. ಇದರಲ್ಲಿ ವರ್ಣ ಎಂಬ ಶಬ್ದ ಉಲ್ಲೇಖ ಬಂದಿದೆ. ಓಂಕಾರಂಪೃಚ್ಛಾಮಃ ಕೋಧಾತುಃ ಕಿಂ ಪ್ರಾತಿಪದಿಕಂ ಕಿಂ ನಾಮಾ ಖ್ಯಾತಂ ಕಿಂ ಲಿಂಗಂ ಕಿಂ ವಚನಂ ಕಾ ವಿಭಕ್ತಿಃ ಕಃ ಪ್ರತ್ಯಯಃ ಕಃ ಸ್ವರಃ ಉಪಸರ್ಗೋ ನಿಪಾತಃ ಕಿಂ ವೈ ವ್ಯಾಕರಣಂ ವಿಕಾರಃ ಕೋ ವಿಕಾರಿ ಕತಿಮಾತ್ರಃ ಕತಿರ್ವರ್ಣಃ ಕತ್ಯಕ್ಷರಃ ಕತಿಪದಃ ಕಸ್ಸಂಯೋಗಃ ಕಿಂ ಸ್ಥಾನಾನು ಪ್ರಧಾನಕರಣಂ ಶಿಕ್ಷುಕಾಃ ಕಿಮುಚ್ಚಾರಯಂತಿ ಕಿಂ ಛಂಧಃ ಕೋವರ್ಣಃ ಇತಿ ಪೂರ್ತೀ ಪ್ರಶ್ನಾಃ (೧–೨೪)

(ಓಂಕಾರವನ್ನು ಕುರಿತು ಕೇಳುತ್ತಿದ್ದೇವೆ. ಅದಕ್ಕೆ ಧಾತುವು ಯಾವುದು? ಪ್ರಾತಿಪದಿಕ ಯಾವುದು? ಅಖ್ಯಾತ ಯಾವುದು? ಲಿಂಗ ಯಾವುದು? ವಚನ ಯಾವುದು? ವಿಭಕ್ತಿ ಯಾವುದು ? ಪ್ರತ್ಯಯವಾವುದು ? ಸ್ವರವಾವುದು? ಉಪಸರ್ಗ ಯಾವುದು ? ನಿಪಾತ ಯಾವುದು ? ಯಾವ ವ್ಯಾಕರಣದಿಂದ ಆ ರೀತಿಯ ರೂಪ ಪಡೆದಿದೆ ? ಆಗಿರುವ ಬದಲಾವಣೆಯೇನು ? ಬದಲಾವಣೆಯಾಗಿರುವುದು ಯಾವುದು ? ಇದರಲ್ಲಿ ಎಷ್ಟು ಮಾತ್ರೆಗಳು? ವರ್ಣಗಳೆಷ್ಟು ? ಎಷ್ಟು ಅಕ್ಷರಗಳು ? ಎಷ್ಟು ಪದಗಳು ? ಸ್ಥಾನವಾವುದು ? ಇದನ್ನು ಶಿಕ್ಷಕರು ಹೇಗೆ ಉಚ್ಚರಿಸುತ್ತಾರೆ ? ಇದರ ಛಂದಸ್ಸಾವುದು ? ವರ್ಣವಾವುದು ? – ಇವು ಪ್ರಶ್ನೆಗಳು) ಇದರಲ್ಲಿ ವರ್ಣಮಾಲೆಯ ಬಗ್ಗೆ ಸ್ಪಷ್ಟವಾದ ಉಲ್ಲೇಖವಿದೆ.

ಶುಕ್ಲಯಜುರ್ವೇದ ಸಂಹಿತೆಯ ವಾಜಸನೇಯ ಸಂಹಿತೆಯಲ್ಲಿ ಅಕ್ಷರಪ್ರಸಕ್ತಿ, ಲೇಖನ ಸಾಧನಗಳ ಉಲ್ಲೇಖವಿದೆ. ಋಗ್ವೇದಕ್ಕೆ ಸಂಬಂಧಿಸಿದ ಐತರೇಯ ಬ್ರಾಹ್ಮಣದಲ್ಲಿ ಅಕ್ಷರಗಳ ಮೇಲೆ ಚರ್ಚೆ ನಡೆದಿದೆ. ಇದರಲ್ಲಿ ವರ್ಣ ಎಂಬ ಶಬ್ದ ಬಂದಿದ್ದು ಓಮ್ ಕಾರವು ಅ ಕಾರ ಉ ಕಾರ ಮ ಕಾರ ಎಂಬ ಮೂರು ವರ್ಣಗಳಿಂದ ಹುಟ್ಟಿದೆ ಎಂದಿದೆ. ವೇದಾಂಗ ಜ್ಯೋತಿಷ್ಯವು ಬಹು ಪ್ರಾಚೀನವಾದದ್ದು, ನಕ್ಷತ್ರದರ್ಶನ ಹಾಗೂ ಇದನ್ನು ಗಣಿಸುವ ಲೆಕ್ಕವಿದೆ.

ಪಾಣಿನಿಯು ವೈಯಾಕರಣಿಗಳಲ್ಲಿ ಬಹು ಮುಖ್ಯನಾದವನು ಹಾಗೂ ಹಿಂದಿನವನು. ಇವನ ಕಾಲ ಸು.ಕ್ರಿ.ಪೂ.೬ನೆಯ ಶತಮಾನ. ಎಂಟು ಅಧ್ಯಾಯವುಳ್ಳ ವ್ಯಾಕರಣಗ್ರಂಥ ಬರೆದ. ಇದನ್ನು ಅಷ್ಟಾಧ್ಯಾಯಿ ಎಂದೇ ಕರೆದಿದ್ದಾರೆ. ಇದರಲ್ಲಿ ಅಕ್ಷರ, ವರ್ಣಗಳ ಉಲ್ಲೇಖಗಳಲ್ಲದೆ ಲಿಪಿ, ಲಿಬಿ, ಲಿಪಿಕರ, ಗ್ರಂಥ ಪದಗಳು ಉಲ್ಲೇಖವಾಗಿವೆ. ಯವನಾನಿ ಎಂಬ ವಿದೇಶಿ ಲಿಪಿಯ ಉಲ್ಲೇಖವನ್ನು ಮಾಡಿದ್ದಾನೆ.

ಆದರೆ ವೇದಗಳಲ್ಲಿ, ಬ್ರಾಹ್ಮಣಗಳಲ್ಲಿ ಉದಾಹರಿಸಿರುವ ಅಕ್ಷರ ಮತ್ತು ವರ್ಣ ಎಂಬ ಪದಗಳು ಧ್ವನಿಯನ್ನು ಸೂಚಿಸುತ್ತವೆ ಲಿಪಿಯನ್ನಲ್ಲ. ಆ ಕಾಲದಲ್ಲಿ ಲಿಪಿಯಿರಲಿಲ್ಲವೆಂದು

ಕೆಲವರು ವಾದಿಸುತ್ತಾರೆ. ಅಕ್ಷರ ಎಂದರೆ ನಾಶವಿಲ್ಲದ್ದು. ವರ್ಣವೆಂದರೆ ಬಣ್ಣಗಳಿಂದ ಬರೆದ ಆಕಾರ ಎಂಬ ಅರ್ಥವಾಗುತ್ತದೆ. ಹಾಗೆಯೇ ವೇದಗಳಿಗೆ ಶ್ರುತಿ ಎಂಬ ಅರ್ಥವಿದೆ. ಅಂದರೆ ಇವನ್ನು ಬರೆಯದೆ ಕಿವಿಯಿಂದ ಕಿವಿಗೆ ಬಂದವು ಎಂದರ್ಥ. ಭಾರತೀಯರು ಬರೆದು ಕಲಿಯುವುದಕ್ಕಿಂತ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದು ಮೌಖಿಕಕ್ಕೇ. ಹೀಗಾಗಿ ವೇದಗಳು ಮೌಖಿಕವಾಗಿಯೇ ಉಳಿದು ಬಂದವು. ಈ ಮೇಲಿನ ಆಧಾರಗಳಿಂದ ಭಾರತದಲ್ಲಿ ವೇದಗಳ ಕಾಲದಲ್ಲಿಯೇ ಬರೆವಣಿಗೆ ಬಳಕೆಯಲ್ಲಿತ್ತು ಎಂಬುದು ದೃಢಪಡುತ್ತದೆ. ಬರೆವಣಿಗೆಯ ಆಧಾರಗಳು ದೊರೆಯಲಿಲ್ಲವೆಂದಾಕ್ಷಣ ಬರೆವಣಿಗೆಯೇ ಇರಲಿಲ್ಲವೆಂದು ಅರ್ಥೈಸುವುದು ಸಾಧುವಲ್ಲ.

ವಿದೇಶಿ ವಾದ : ಜೇಮ್ಸ್ ಪ್ರಿನ್ಸೆಪ್, ರಾಓಲ್-ಡೆ-ರೋಷೆಟ್ (Raoul-de-rochette) ಓಟ್‌ಫ್ರೈಡ್ ಮ್ಯೂಲರ್, ಎಮಿಲೆಸೆನರ್ಟ್, ಗೊಬ್ಲೆಟ್ ದಿ ಅಲ್‌ವೇಲ್ಲ ಮುಂತಾದರು ಬ್ರಾಹ್ಮಿ ಲಿಪಿಯು ಗ್ರೀಕ್ ಲಿಪಿಯಿಂದ ಉದಿಸಿದೆ ಎಂಬ ಅಭಿಪ್ರಾಯ ಪಡುತ್ತಾರೆ. ಜೋಸೆಫ್ ಹಲೇವಿ, ವಿಲ್‌ಸನ್ ಮುಂತಾದವರು ಬ್ರಾಹ್ಮಿಯನ್ನು ರೂಪಿಸುವಲ್ಲಿ ಗ್ರೀಕ್ ಲಿಪಿಯು ಪ್ರಭಾವ ಬೀರಿದೆಯೆಂಬ ಅಭಿಪ್ರಾಯ ಪಡುತ್ತಾರೆ.

ಆದರೆ ಈ ವಾದವನ್ನು ಬಹಳ ವಿದ್ವಾಂಸರು ಒಪ್ಪುವುದಿಲ್ಲ. ಇದಕ್ಕೆ ಕಾರಣ ಗ್ರೀಕ್ ಲಿಪಿಯೇ ಬೇರೆ ಲಿಪಿಯಿಂದ ಉದಿಸಿದೆ. ಭಾರತಕ್ಕೆ ಗ್ರೀಕ್ ಸಂಬಂಧ ಹೊಸದು. ಗ್ರೀಕ್ ಸಂಬಂಧವಾಗುವ ಮೊದಲೇ ಬ್ರಾಹ್ಮಿ ಭಾರತದಲ್ಲಿತ್ತು. ಗ್ರೀಕ್ ಲಿಪಿಗೂ ಬ್ರಾಹ್ಮೀ ಲಿಪಿಗೂ ಸಾಮ್ಯತೆಯಿಲ್ಲ.

ಜೋನ್ಸ್ (೧೮೦೬), ವೊನ್‌ಸೀಟ್ ಜೆನ್ (೧೮೧೧), ಕೋಪ್ಟ್ (೧೮೨೧), ಲೆಪ್ಸಿಯಸ್ (೧೮೩೪) ಇದನ್ನೇ ವಿಸ್ತರಿಸಿ ವೇಬರ್ (೧೮೫೬) ಬೂಹ್ಲರ್ ೧೯ನೆಯ ಶತಮಾನದ ಅಂತ್ಯದಲ್ಲಿ ಫೊನೀಷಿಯಾ ಮೂಲದ ವಾದವನ್ನು ಮಂಡಿಸಿರುತ್ತಾರೆ. ಇವರು ತಮ್ಮ ವಾದವನ್ನು ಸಮರ್ಥಿಸಲು ನಾಲ್ಕು ಅಂಶಗಳನ್ನು ಮಂಡಿಸಿರುತ್ತಾರೆ.

(೧) ಬೆನ್‌ಫೆ, ವೇಬರ್, ಬೂಹ್ಲರ್, ಜೆನ್‌ಸೆನ್ ಮುಂತಾದವರು ಫೊನೀಷಿಯಾ ಲಿಪಿಯಲ್ಲಿನ ಮೂರನೆಯ ಒಂದರಷ್ಟು ಲಿಪಿಗಳು ಪ್ರಾಚೀನ ಬ್ರಾಹ್ಮಿ ಲಿಪಿಯೊಂದಿಗೆ ತಾಳೆ ಹೊಂದಿವೆ ಎಂದಿರುತ್ತಾರೆ. ಆದರೆ ಫೊನೀಷಿಯಾದವರಿಗೂ ಭಾರತೀಯರಿಗೂ ನೇರವಾದ ಸಂಬಂಧವಿಲ್ಲ. ಭಾರತವು ಮೆಡಿಟರೇನಿಯನ್ ಸಮುದ್ರದ ಪೂರ್ವತೀರದೊಂದಿಗೆ ಸಂಬಂಧವಿರಲಿಲ್ಲ. ಹೀಗಾಗಿ ಈ ವಾದವನ್ನು ಒಪ್ಪುವುದು ಸರಿಯಲ್ಲ.

(೨) ಡೀಕೆ, ಕನಾನ್, ಟಾಯ್ಲರ್ ಮತ್ತು ಇತ್ತೀಚೆಗೆ ಸೇಥೆ ಮುಂತಾದವರು ಬ್ರಾಹ್ಮಿಯು ದಕ್ಷಿಣ ಸೆಮೆಟಿಯಾ ಲಿಪಿಯಿಂದ ಉದಿಸಿರಬೇಕೆಂದು ಅಭಿಪ್ರಾಯ ಪಡುತ್ತಾರೆ. ಇದನ್ನೂ ಕೂಡ ಅಂಗೀಕರಿಸಲು ಸಾಧ್ಯವಿಲ್ಲ. ಏಕೆಂದರೆ ಅರಾಬಿಯಾ ಮತ್ತು ಭಾರತದ ನಡುವೆ ಸಂಬಂಧಗಳಿರಲಿಲ್ಲ ಹಾಗೂ ಯಾವುದೇ ಸಾಂಸ್ಕೃತಿಕ ಸಂಬಂಧಗಳಿರಲಿಲ್ಲ. ಬ್ರಾಹ್ಮಿ ಮತ್ತು ದಕ್ಷಿಣ ಸೆಮೆಟಿಯಾದ ಲಿಪಿಗಳ ಸಾಮ್ಯತೆ ಕಡಿಮೆ.

(೩) ಪ್ರೊ। ರೈಸ್ ಡೇವಿಡ್ ಅವರ ಪ್ರಕಾರ ಮೊಳೆಯಾಕಾರದ ಲಿಪಿಯಿಂದ ಬ್ರಾಹ್ಮಿ ಲಿಪಿ ಉದಿಸಿರಬೇಕೆಂದು ಅಭಿಪ್ರಾಯ ಹೊಂದಿದ್ದಾರೆ. ಯೂಫ್ರಟಿಸ್ ಕಣಿವೆಯಲ್ಲಿ ಬಳಕೆಯಲ್ಲಿದ್ದ ಸೆಮೆಟಿಯಾ ಲಿಪಿಯಿಂದ ಬ್ರಾಹ್ಮಿ ಲಿಪಿ ಉದಿಸಿರಬಹುದೆಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

(೪) ಕೆಲವರು ಅರಾಮಿಯಾ ಲಿಪಿಯೇ ಮೂಲ ಬ್ರಾಹ್ಮಿ ಲಿಪಿಗೆ ಆಧಾರವೆಂದಿರುತ್ತಾರೆ. ಈ ಲಿಪಿಯೂ ಸಹ ಸೆಮೆಟಿಕ್‌ನಿಂದಲೇ ಬಂದದ್ದು. ಡಿರಿಂಜರ್ ಅವರು ಈ ವಾದವನ್ನು ವಿರೋಧಿಸುತ್ತಾರೆ. ಅವರ ಪ್ರಕಾರ ಬ್ರಾಹ್ಮಿ ಲಿಪಿಯಲ್ಲಿ ಬಲದಿಂದ ಎಡಕ್ಕೆ ಬರೆಯುವ ಪದ್ಧತಿಯು ಸೆಮೆಟಿಕ್‌ನಿಂದ ಬಂದದ್ದೆಂದು ಹೇಳಿ, ಬ್ರಾಹ್ಮಿ ಲಿಪಿಯನ್ನು ಬ್ರಾಹ್ಮಣರು ಸಂಸ್ಕೃತವನ್ನು ಬರೆಯಲು ರೂಪಿಸಿದ್ದು, ಅವರೇ ಇದರ ಅನ್ವೇಷಕರಾಗಿರುತ್ತಾರೆ ಎಂದಿರುತ್ತಾರೆ.

ಡಿರಿಂಜರ್ ಮತ್ತು ದಾನಿಯವರಲ್ಲದೆ ಎಸ್.ಆರ್.ರಾವ್ ಮೊದಲಾದವರು ಸೆಮೆಟಿಯಾ ಮೂಲದಿಂದ ಭಾರತೀಯ ಬ್ರಾಹ್ಮಿ ನಿಷ್ಪನ್ನವಾಗಿದೆಯೆಂಬ ಅಭಿಪ್ರಾಯ ಪಡುತ್ತಾರೆ. ಭಾರತವು ಪಶ್ಚಿಮ ದೇಶಗಳೊಡನೆ ಸಿಂಧೂ ನಾಗರೀಕತೆಯ ಸಮಯದಲ್ಲಿಯೇ ವ್ಯಾಪಾರಿ ಸಂಬಂಧಗಳನ್ನು ಹೊಂದಿತ್ತು. ಉರ್ ಎಂಬಲ್ಲಿ ಸಿಂಧೂ ಮುದ್ರಿಕೆಯನ್ನು ಯಥಾವತ್ತಾಗಿ ಹೋಲುವ ಮುದ್ರಿಕೆಯೊಂದು ದೊರೆತಿದೆ. ಎರಡೂ ದೇಶಗಳ ನಡುವೆ ಭೂ ಅಥವಾ ಸಮುದ್ರ ಮಾರ್ಗವಾಗಿ ಹಿಂದಿನಿಂದಲೂ ವ್ಯಾಪಾರಿ ವ್ಯವಹಾರಗಳಿದ್ದವು. ಹೀಗಾಗಿ ಭಾರತೀಯ ವ್ಯಾಪಾರಿಗಳು ಬ್ಯಾಬಿಲೋನಿಯನ್ನರಿಂದ ಪಡೆದು ಅದನ್ನು ಭಾರತದಲ್ಲಿ ಬಳಕೆಗೆ ತಂದಿರಬಹುದೆಂಬ ಅಭಿಪ್ರಾಯ ಪಡುತ್ತಾರೆ.

ಭಾರತದ ಲಿಪಿಗಳಲ್ಲಿ ವ್ಯಂಜನವು ಸ್ವರಸಮೇತವಾಗಿರುವುದಕ್ಕೆ ಇಂಡೋ-ಯುರೋಪಿಯಾ ಭಾಷೆಗಳಲ್ಲಿ ಈ ಪದ್ಧತಿಯಿರುವುದನ್ನು ತಿಳಿಸಿ, ಇವುಗಳಲ್ಲಿ ಬರೀ ವ್ಯಂಜನಗಳನ್ನು ಬಳಸಿದರೆ ಅವಕ್ಕೆ ಅರ್ಥವೇ ಇರುವುದಿಲ್ಲವೆಂದಿದ್ದಾರೆ. ಇಂಗ್ಲೀಷಿನ c-t ಅಕ್ಷರಗಳಿಗೆ ಅರ್ಥವಿಲ್ಲ, ಆದರೆ ಸ್ವರಗಳು ಸೇರಿದಾಗ **cat, cot, cut, cute, act,** ಹೀಗೇ ಅರ್ಥವೇ ಬದಲಾಗುತ್ತದೆ ಎಂದಿರುತ್ತಾರೆ. ಹಾಗೆಯೇ ಭಾರತೀಯ ವ್ಯಂಜನಕ್ಕೆ ಸ್ವರದ ಅವಶ್ಯಕತೆಯು ಅರಾಮಿಯಾ ಲಿಪಿಯ ಪ್ರಭಾವದಿಂದ ಬಂದಿರಬಹುದು ಎಂದಿರುತ್ತಾರೆ. ಪ್ರೊ। ಬೈಲಿಯವರು ಶಾಸನಗಳಲ್ಲಿ ಮತ್ತು ಗ್ರಂಥಗಳಲ್ಲಿ ಉಲ್ಲೇಖವಾಗಿರುವ ಲಿಪಿಯ ಶಬ್ದವು ಪರ್ಷಿಯನ್ ಮೂಲದಿಂದ ಬಂದಿರಬೇಕೆಂದು ಸೂಚಿಸಿದ್ದಾರೆ. ಬೂಹ್ಲರ್ ಅವರು ಪರ್ಷಿಯಾದ ದಿಪಿ ಶಬ್ದದಿಂದ ಲಿಪಿ ಬಂದಿರಬೇಕೆಂದು ಅಭಿಪ್ರಾಯ ಪಡುತ್ತಾರೆ.

ಈ ವಿದ್ವಾಂಸರು ವಿದೇಶಿ ಲಿಪಿಯಿಂದ ಭಾರತವು ಲಿಪಿಯನ್ನು ಪಡೆಯಿತೆಂಬ ಬಗ್ಗೆಯೂ ಚರ್ಚಿಸಿರುತ್ತಾರೆ. ಇವರ ಪ್ರಕಾರ ಬ್ರಾಹ್ಮಿಯ ಆರಂಭದ ಕಾಲದ ಬಗ್ಗೆ ಸ್ಪಷ್ಟವಿಲ್ಲ. ಕ್ರಿ.ಪೂ.೮-೭ನೆಯ ಶತಮಾನದಲ್ಲಿ ಉದಿಸಿರಬಹುದೆಂದಿರುತ್ತಾರೆ. ಆರ್.ಎನ್.ಕಸ್ಟ್ (೧೮೮೪) ಅವರ ಪ್ರಕಾರ ಭಾರತೀಯ ಲಿಪಿಯು ಭಾರತೀಯರ ಸ್ವಂತ ಅನ್ವೇಷಣೆ ಅಲ್ಲ, ತಾವು ಪಡೆದ ಅಂಶಗಳನ್ನು ತಮಗೆ ಬೇಕಾದಂತೆ ಬಳಸಿಕೊಂಡರು. ಸ್ವರ ಮತ್ತು ವ್ಯಂಜನಗಳನ್ನು ಪ್ರತಿನಿಧಿಸುವ ಅಂಶವೂ ಪಶ್ಚಿಮ ಏಷಿಯಾದಿಂದ ಬಂದದ್ದೆಂದು ಹೇಳಿರುತ್ತಾರೆ.

ಮ್ಯಾಕ್ಸ್‌ಮುಲ್ಲರ್ ಅವರು ಪಾಣಿನಿಯಲ್ಲಿ ಬರೆವಣಿಗೆ ಉಲ್ಲೇಖವಿಲ್ಲದಿರುವುದರಿಂದ ಕ್ರಿ.ಪೂ.೪ನೆಯ ಶತಮಾನದ ನಂತರ ಲಿಪಿ ಬಳಕೆಗೆ ಬಂದಿರಬೇಕು ಎಂದಿರುತ್ತಾರೆ. ಬರ್ನೆಲ್‌ನ

ಪ್ರಕಾರ ಭಾರತದ ಬ್ರಾಹ್ಮಿ ಲಿಪಿ ಫೊನೀಷಿಯಾ ಲಿಪಿಯಿಂದ ಜನಿಸಿದ್ದು, ಭಾರತದಲ್ಲಿ ಕ್ರಿ.ಪೂ.೫ನೆಯ ಶತಮಾನದ ನಂತರ ಬಳಕೆಗೆ ಬಂದಿರಬೇಕೆಂದು ಅಭಿಪ್ರಾಯ ಪಡುತ್ತಾರೆ. ಬೂಹ್ಲರನು ಸೆಮೆಟಿಕ್ ಮೂಲದ ಲಿಪಿ ಭಾರತದಲ್ಲಿ ಕ್ರಿ.ಪೂ.೮೦೦ರ ವೇಳೆಗೆ ಬಳಕೆಗೆ ತಂದು ಕ್ರಿ.ಪೂ.೫೦೦ರ ವೇಳೆಗೆ ಪೂರ್ಣವಾಗಿ ಬೆಳೆಯಿತು. ಈಗ ದೊರೆತಿರುವ ಆಧಾರದಿಂದ ಮೇಲಿನ ಕಾಲವನ್ನು ಹೇಳಿದ್ದರೂ ಮುಂದೆ ಆಧಾರಗಳು ದೊರೆತಲ್ಲಿ ಕ್ರಿ.ಪೂ.೧೦ನೆಯ ಶತಮಾನಕ್ಕೂ ಹಾಕಬಹುದೆಂದಿರುತ್ತಾರೆ. ಇಷ್ಟೆಲ್ಲಾ ಇದ್ದರೂ ಪ್ರಪಂಚದಲ್ಲಿ ಮಾನವನು ಲಿಪಿಗಳನ್ನು ಕಂಡುಹಿಡಿದ ಕಾಲಾವಧಿಯಲ್ಲಿ ಅನೇಕ ಕಡೆಯ ಜನರು ಸ್ವತಂತ್ರವಾಗಿ ಲಿಪಿಯ ಸೃಷ್ಟಿ ಮಾಡಿರುತ್ತಾರೆ. ಹಾಗೆಯೇ ಭಾರತೀಯರು, ಚೀನೀಯರು, ಒಬ್ಬರು ಇನ್ನೊಬ್ಬರ ಸಂಪರ್ಕವಿಲ್ಲದೆ ಲಿಪಿ ಬೆಳೆಸುವುದಾದಲ್ಲಿ ಭಾರತೀಯರು ಸಹ ಸ್ವತಂತ್ರವಾಗಿ ಏಕೆ ಲಿಪಿಯನ್ನು ಸೃಷ್ಟಿಸಿಕೊಂಡಿರಬಾರದು? ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ.

೧. ಭಾರತದಲ್ಲಿ ಹಿಂದಿನಿಂದಲೂ ಲಿಪಿ ಬಳಕೆ ಇದ್ದರೂ ಅವನ್ನು ಶಾಶ್ವತ ವಸ್ತುಗಳ ಮೇಲೆ ಬರೆಯುವಂತಿರಲಿಲ್ಲ. ಲಿಪಿಯನ್ನು ಬರೆಯಬೇಕಾದ ಅವಶ್ಯಕತೆ ಬಿದ್ದಲ್ಲಿ ಮರಳಿನ ಮೇಲೆ ಬರೆದು ಕಂಠಪಾಠ ಮಾಡಿ ಅದು ಮುಗಿದ ಮೇಲೆ ಅಳಿಸಿಬಿಡಬೇಕಿತ್ತು. ಇಂದಿಗೂ ವೈದಿಕ ಧರ್ಮದಲ್ಲಿ ಅಕ್ಷರಾಭ್ಯಾಸವನ್ನೂ ಅಕ್ಕಿಯ ಮೇಲೆ ಅಥವಾ ಮರಳಿನ ಮೇಲೆ ಮಾಡಿಸುತ್ತಾರೆ. ಈ ಪದ್ಧತಿ ಪ್ರಾಚೀನ ಕಾಲದಿಂದ ಅಂದರೆ ವೇದಗಳ ಕಾಲದಿಂದ ಬಳಕೆಯಲ್ಲಿರಬೇಕು.

೨. ಪರ್ಷಿಯಾದ ದಿಪಿ ಶಬ್ದದಿಂದ ಭಾರತದ ಶಾಸನಗಳ ಲಿಪಿ ಬಂತೆಂದು ವಿದ್ವಾಂಸರು ಹೇಳುತ್ತಾರಾದರೂ ಅವರು ಪರ್ಷಿಯಾ ಮತ್ತು ಸಂಸ್ಕೃತ ಭಾಷೆಗಳೆರಡೂ ಜ್ಞಾತಿಭಾಷೆಗಳು ಎಂಬುದನ್ನು ಗಮನಿಸಿಲ್ಲ.

೩. ವೈದಿಕಧರ್ಮದಲ್ಲಿ ಸಾರ್ವಜನಿಕವಾಗಿ ಬರೆವಣಿಗೆಯನ್ನು ಬರೆಯುವಂತಿರಲಿಲ್ಲ. ಆದರೆ ಈ ಧರ್ಮವನ್ನು ವಿರೋಧಿಸಿ ಉದಿಸಿದ ಬೌದ್ಧ ಜೈನ ಧರ್ಮೀಯರು ವೈದಿಕಧರ್ಮದಲ್ಲಿ ಯಾವುದು ನಿಷೇಧವಿತ್ತೋ ಅದರ ನಿಷೇಧವನ್ನು ತೆಗೆಯುತ್ತಾರೆ. ಅದರ ಫಲವೇ ಅಶೋಕನ ಶಾಸನಗಳು. ಇದ್ದಕ್ಕಿದ್ದಂತೆ ಅಶೋಕನ ಕಾಲದಲ್ಲಿ ವ್ಯವಸ್ಥಿತ ವರ್ಣಮಾಲೆ ಕಾಣಿಸಿಕೊಳ್ಳಬೇಕಾದರೆ ಬಹು ಹಿಂದಿನಿಂದ ಬೇರೊಂದು ರೀತಿಯಲ್ಲಿ ಅದು ಬಳಕೆಯಲ್ಲಿತ್ತು. ಸಿಂಧೂಲಿಪಿಯ ಬಗ್ಗೆ ಇತ್ತೀಚೆಗೆ ಅನೇಕ ಶೋಧಗಳು ನಡೆಯುತ್ತಿದ್ದು ಅವುಗಳಿಂದ ಇದು ಉದಿಸಿರಬೇಕು ಎಂಬ ವಾದವೂ ಇದೆ.

– ೪. ಸೆಮೆಟಿಯಾ ಲಿಪಿಯ ಶಾಖೆಯಾದ ಫೊನೀಷಿಯಾ ಲಿಪಿಯ ಸಾಮ್ಯತೆ ಕೆಲವು ಅಕ್ಷರಗಳಲ್ಲಿರಬಹುದಾದರೂ ಅದನ್ನು ಆಕಸ್ಮಿಕವೆನ್ನಬೇಕು. ಅಂಕೆಗಳಲ್ಲಿ ಒಂದರಿಂದ ಮೂರರವರೆಗೆ ಪ್ರಪಂಚದ ಬಹುತೇಕ ಲಿಪಿಗಳಲ್ಲಿ, ಚೈನಾ ಲಿಪಿ ಸೇರಿದಂತೆ ಅಡ್ಡ ಅಥವಾ ಉದ್ದ ಗೆರೆಗಳನ್ನು ಬಳಸಿರುತ್ತಾರೆ. ಇವರು ಯಾರಿಂದ ಯಾರು ಪಡೆದರು? ಸೆಮೆಟಿಯಾ ಲಿಪಿಗಳಿಂದ ನಿಷ್ಪನ್ನವೆಂದು ತೋರಿಸಿರುವ ಲಿಪಿಗಳಲ್ಲಿ ಕೆಲವನ್ನು ಬಲವಂತವಾಗಿ ಸಾಮ್ಯತೆ ತೋರಿಸಲಾಗಿದೆ.

೫. ಬ್ರಾಹ್ಮಿಯು ಬಲದಿಂದ ಎಡಕ್ಕೆ ಬರೆಯುತ್ತಿದ್ದ ಉದಾಹರಣೆ ಸಿಕ್ಕಿರುವುದು ಒಂದು ನಾಣ್ಯದಲ್ಲಿ ಮಾತ್ರ. ಅದನ್ನು ಬಿಟ್ಟರೆ ಭಟ್ಟಿಪ್ರೋಲು ಶಾಸನದ ಹಾವಿನ ನಡಿಗೆ ರೀತಿಯ

ಬರೆವಣಿಗೆ. ಇದೊಂದು ಆಕಸ್ಮಿಕ ಬರೆವಣಿಗೆ ಮಾತ್ರ. ಕಾರಣ ಅಶೋಕನು ತನ್ನ ಶಾಸನಗಳನ್ನು ಬರೆಯಲು ನಿಯೋಜಿಸಿದ ಲಿಪಿಕಾರರಲ್ಲಿ ಕೆಲವರು ಖರೋಷ್ಠಿ ಬಲ್ಲಂಥವರೂ ಇದ್ದರು. ಬಹುಶಃ ಇವರ ಕೈವಾಡದಿಂದ ಈ ಬಗೆಯ ಬರೆವಣಿಗೆಗಳು ಭಾರತದ ಬರೆವಣಿಗೆಯಲ್ಲಿ ನುಸುಳಿರಬೇಕು. ಸೌಗಾರ ಅಥವಾ ಮಹಾಸ್ಥಾನ ಶಾಸನದಲ್ಲಿ ಈ ಬಗೆಯ ಬರೆವಣಿಗೆ ಕಾಣುವುದಿಲ್ಲ. ಅವೆಲ್ಲಾ ಎಡದಿಂದ ಬಲಕ್ಕೆ ಇವೆ. ಬ್ರಹ್ಮಗಿರಿ ಶಾಸನವೂ ಸಹ ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿ ತಿಳಿದಿದ್ದ ಲಿಪಿಕಾರನು ಬರೆದು ಕೆತ್ತಿರುವುದಾಗಿದೆ.

೬. ಎ.ಎಚ್.ದಾನಿಯವರು ಸೆಮೆಟಿಯಾದಿಂದ ನಿಷ್ಪನ್ನವಾಗಿದೆಯೆನ್ನುವುದಕ್ಕಿಂತ ಉತ್ತರ ಸೆಮೆಟಿಯಾ ಲಿಪಿಯ ಆಧಾರದ ಮೇಲೆ ಸೃಷ್ಟಿಸಿದುದಾಗಿವೆ. ಆದರೆ ಬ್ರಾಹ್ಮಿಯು ಗುಲಾಮನಂತೆ ಉತ್ತರ ಸೆಮೆಟಿಯಾ ಲಿಪಿಯಿಂದ ಎಲ್ಲವನ್ನು ಪಡೆದುಕೊಳ್ಳಲಿಲ್ಲ ಎಂಬ ಅಭಿಪ್ರಾಯ ಪಡುತ್ತಾರೆ. (ಪು.೨೮) ಇಂದಿಗೂ ಪ್ರಪಂಚದ ಅನೇಕ ಲಿಪಿಗಳನ್ನು ಓದಲಾಗಿಲ್ಲ. ಅವುಗಳ ಮೂಲವೂ ತಿಳಿದಿಲ್ಲ. ಹೀಗಾಗಿ ಮೂಲ ತಿಳಿಯದ, ಆದರೆ ಓದಿರುವ ಲಿಪಿಗಳಲ್ಲಿ ಬ್ರಾಹ್ಮಿಯೂ ಒಂದು.


೭. ಕೆಲವು ವಿದ್ವಾಂಸರ ಪ್ರಕಾರ ಬ್ರಾಹ್ಮೀ ಲಿಪಿಯು ತಾಂತ್ರಿಕ ಬೀಜಾಕ್ಷರಗಳಿಂದ ಬಂದಿದೆಯೆಂಬ ಅಭಿಪ್ರಾಯವಿದೆ. ತಾಂತ್ರಿಕ ಸಂಪ್ರದಾಯ ನಮ್ಮ ದೇಶದಲ್ಲಿ ಪ್ರಾಚೀನ ಪದ್ಧತಿಯೇನೋ ಹೌದು. ಇದರ ಪ್ರಧಾನ ವಿಷಯ ಶಿವಶಕ್ತಿಯರ ಪೂಜೆ. ಇದರಲ್ಲಿ ದಕ್ಷಿಣಾಚಾರ ಮತ್ತು ವಾಮಾಚಾರವೆಂಬ ಎರಡು ಬೇಧಗಳಿವೆ. ಪ್ರತಿ ಜೀವಿಯಲ್ಲೂ ಸ್ತ್ರೀ, ಪುರುಷ ತತ್ವಗಳೆರಡೂ ಇರುತ್ತವೆಯೆಂದು ಹೇಳುತ್ತಾರೆ. ಇದಕ್ಕೆ ಉದಾಹರಣೆ ಅರ್ಧನಾರೀಶ್ವರ, ವಿಷ್ಣುವಿನ ವಕ್ಷಸ್ಥಳದಲ್ಲಿನ ಲಕ್ಷ್ಮಿ, ಬ್ರಹ್ಮನ ಬಾಯಿಯಲ್ಲಿರುವ ವಾಗ್ದೇವಿ, ಇವೆಲ್ಲ ಆ ಶಕ್ತಿಗಳೇ. ಈ ವಿವರ ಬಿಟ್ಟು ಮುಂದೆ ಹೋದಲ್ಲಿ ಈ ತಂತ್ರ ಸಂಪ್ರದಾಯದಲ್ಲಿ ದೇವತೆಗಳನ್ನು ಪೂಜಿಸಲು ಆಯಾ ದೇವತೆಯ ಆಕಾರವನ್ನು ಬಣ್ಣ ಬಣ್ಣದ ರಂಗೋಲಿ ಮೂಲಕ ಬರೆಯುತ್ತಾರೆ. ಇವೇ ಆ ದೇವತೆಗಳ ಹೆಸರಿನ ಮೊದಲ ಅಕ್ಷರವನ್ನು ಸೂಚಿಸುವ ಸಂಕೇತಗಳಾದವು. ಆದರೆ ಇವುಗಳ ವಿಕಾಸ ಹಂತವಾಗಲೀ, ಸಾಮ್ಯತೆಯ ಕೊಂಡಿಯಾಗಲೀ ದೊರೆತಿಲ್ಲ. (ಪಟ್ಟಿಕೆ ನೋಡಿ)


ಅಶೋಕನ ಬರೆವಣಿಗೆ

ಭಾರತದಲ್ಲಿ ಅಶೋಕನಿಗಿಂತ ಹಿಂದೆ ಲಿಪಿಯ ಬಳಕೆ ಇತ್ತೇ ಇಲ್ಲವೆ ಎಂಬುದು ಚರ್ಚಾಸ್ಪದ ವಿಷಯವಾದರೂ, ಅಶೋಕನ ಕಾಲದಲ್ಲಿ ಬಳಕೆಯಿತ್ತೆಂಬ ಬಗ್ಗೆ ಯಾವುದೇ ಚರ್ಚೆಯಿಲ್ಲ. ಅಶೋಕನಿಗಿಂತ ಹಿಂದಿನ ಮತ್ತು ಇವನ ಕಾಲದ ಬ್ರಾಹ್ಮಿ ಶಾಸನಗಳನ್ನು ಎಡದಿಂದ ಬಲಕ್ಕೆ ಬರೆಯಲಾಗಿವೆ.

ಅಶೋಕನು ತಾನು ಪಟ್ಟಕ್ಕೆ ಬಂದ ಕೂಡಲೇ ಶಿಲಾಲೇಖನಗಳನ್ನು ಬರೆಸಲಿಲ್ಲ. ಅದನ್ನು ತನ್ನ ಶಾಸನಗಳಲ್ಲಿಯೇ ಹೇಳಿಕೊಂಡಿದ್ದಾನೆ. ಕಳಿಂಗದ ಮೇಲೆ ಯುದ್ಧ ಮಾಡಿ ತನಗೆ ಗೆಲುವಾದ ಮೇಲೆ - ಆ ಗೆಲುವಿಗಾಗಿ ತಾನು ಮಾಡಿದ ಕೊಲೆ, ಯುದ್ಧಾನಂತರ ಕಳಿಂಗದ ಜನರ ನರಳಾಟ - ಇದರ ಪರಿಣಾಮವಾಗಿ ಜೀವನದಲ್ಲಿ ಜಿಗುಪ್ಸೆ ಹೊಂದಿದ. ಮುಂದೆ ಆತನು ಅಹಿಂಸಾವಾದಿಯಾಗಲು ಬೌದ್ಧ ಧರ್ಮಕ್ಕೆ ಸೇರಿ ಆ ತತ್ವಗಳನ್ನು ಆಚರಿಸತೊಡಗಿದಾಗ, ಅವನಿಗೆ ಬೌದ್ಧ ಧರ್ಮದ ತತ್ವಗಳನ್ನು ತನ್ನ ಆಳ್ವಿಕೆಯ ಪ್ರದೇಶದಲ್ಲೆಲ್ಲಾ ಹಾಕಿಸಬೇಕೆಂಬ

ತಾಂತ್ರಿಕ ಲಿಪಿ





ತಾಂತ್ರಿಕ ಬೀಜಾಕ್ಷರ	ತಾಂತ್ರಿಕ ಬೀಜಾಕ್ಷರದ ಹೆಸರು	ಬ್ರಾಹ್ಮಿ ಅಕ್ಷರ	ಕನ್ನಡ ಅಕ್ಷರ
	ಕಾಮ, ಶಿವ		ಕ
	ಏಕಪಾದ, ಆದಿಶಕ್ತಿ, ಏಕದಶಾಧಾರ		ಏ
	ಇಂದ್ರಾಣಿ		ಇ
	ಅಮೃತ ಕಲಸ, ಅಮೃತೇಶ್ವರ		ಅ ಆ
	ಉಮ, ಕರ್ಣ		ಉ
	ತಾರೆ, ಧ್ರುವ		ಥ
	ಬಿಂದು, ಶೂನ್ಯ		೦
	ವಿಸರ್ಗ		ಃ
	ಕ್ಷಿತಿ ಲಿಪಿ		ಲ
	ಕರುಣೆ, ಪದ್ಮ		ವ
	ರಕ್ತ, ಭುಜ		ರ
	ವಾಯು, ನಾಸಿಕ		ಯ
	ಶರ		
	ಶೂಲ		ಶ
	ಪಾಶ		ಸ
	ಕಪಾಲ, ದೇಹ ಶಿರಸ್		ಪ
	ಧನಸ್ಸ್		ಧ
	ಧನು :		ದ
	ದಕ್ಷಿಣ ಭಾಗ		ಫ
	ಮಹಾಕಾಯ		ಮ
			ಖ
	ಘಂಟಾಧಾರಿಣಿ		ಘ
	ಚರ್ಮಮುಂಡಾಧಾರಿಣಿ		ಚ
	ಅರ್ಧಚಂದ್ರ, ಜಿಂಕೆ		ಟ
	ನಾದಾಂತ		ನ

ಆಧಾರ : ಮಣಿಲಿಪಿ ಹುಟ್ಟು, ಪೂರ್ವೋತ್ತರಾಲು

ಮನಸ್ಸಾಗಿ ಶಾಸನಗಳನ್ನು ಬರೆಸಿದ. ಈ ಶಾಸನಗಳನ್ನು ಕೆತ್ತಲು ಆತ ತನ್ನ ದೇಶದಾದ್ಯಂತ ಧರ್ಮಮಹಾಮಾತ್ಯರ ಹಾಗೂ ಲಿಪಿಕಾರರ ನೆರವು ಪಡೆದ.

ಅಸಂಖ್ಯಾತ ಅನಕ್ಷರಸ್ಥರಿದ್ದ ಈ ದೇಶದಲ್ಲಿ ತಾನು ಹಾಕಿಸಿದ ಶಾಸನಗಳ ಪಾಠವನ್ನು ಓದುವ, ಅರ್ಥೈಸುವ ವ್ಯವಸ್ಥೆ ಮಾಡಿದ್ದ. ವರ್ಷಕ್ಕೊಮ್ಮೆ ತಿಸ್ಸ ನಕ್ಷತ್ರದಂದು ಧರ್ಮಮಹಾಮಾತ್ಯರು ಈ ಶಾಸನಗಳನ್ನು ಓದಿ ನೆರೆದ ಜನಕ್ಕೆ ತಿಳಿಸಿ ಹೇಳಬೇಕಾಗಿತ್ತು. ತನ್ನ ಚಕ್ರಾಧಿಪತ್ಯದ ಪ್ರಮುಖ ಸ್ಥಳಗಳಲ್ಲಿ ಅಥವಾ ಆ ಕಾಲಕ್ಕೆ ಪ್ರಮುಖ ಜನವಸತಿಯಿದ್ದ ಪ್ರದೇಶಗಳಲ್ಲಿ ತನ್ನ ಧರ್ಮಲಿಪಿಗಳನ್ನು ಕೆತ್ತಿಸಿದ. ಈ ಕಾರ್ಯದಿಂದ ಅಶೋಕನಿಗೆ ತಾನು ನಂಬಿದ್ದ ಧರ್ಮದ ತತ್ವಗಳನ್ನು ಎಲ್ಲಾ ಕಡೆ ಬರೆಸಿದೆನೆಂಬ ಸಂತೃಪ್ತಿ ನೀಡಿದ್ದರೆ, ಇವು ನಮ್ಮ ಪಾಲಿಗೆ ಭಾರತದಲ್ಲಿ ಮೊಟ್ಟ ಮೊದಲ ವರ್ಣಲಿಪಿ ಬಳಕೆಯ ಚಾರಿತ್ರಿಕ ದಾಖಲೆಗಳಾಗಿದೆ.

ಅಶೋಕನು ತಾನು ಅನುಸರಿಸುವ ಧರ್ಮದ ತತ್ವಗಳನ್ನು ಎಲ್ಲರೂ ತಿಳಿಯಬೇಕು, ಹಾಗೂ ಪಾಲಿಸಬೇಕೆಂಬ ಆಕಾಂಕ್ಷೆಯಿಂದ ತನ್ನ ರಾಜ್ಯದಲ್ಲೆಲ್ಲಾ, ಆಯಾ ಪ್ರಾಂತ್ಯಗಳಲ್ಲಿ ಬಳಕೆಯಲ್ಲಿದ್ದ ಲಿಪಿಗಳಲ್ಲಿ ಹಾಗೂ ಭಾಷೆಗಳಲ್ಲಿ ಹಾಕಿಸುತ್ತಾನೆ. ವಾಯುವ್ಯ ಭಾರತ ಮತ್ತು ಕಾಂಧಾಹಾರಗಳಲ್ಲಿ ಖರೋಷ್ಠಿ, ಅರಾಮಿಯಾ, ಗ್ರೀಕ್ ಲಿಪಿಗಳನ್ನೂ ಉಳಿದ ಭಾರತದಲ್ಲಿ ಬ್ರಾಹ್ಮಿ ಲಿಪಿಯನ್ನು ಬಳಸಿದ್ದಾನೆ. ಖರೋಷ್ಠಿ ಮತ್ತು ಬ್ರಾಹ್ಮಿ ಲಿಪಿಗಳ ಶಾಸನಗಳಲ್ಲಿ ಪ್ರಾಕೃತ ಭಾಷೆಯನ್ನೂ ಉಳಿದವುಗಳಲ್ಲಿ ಆಯಾ ಭಾಷೆಯನ್ನೇ ಬಳಸಿದ್ದಾನೆ.

ಪ್ರಾಚೀನ ಅರಾಮೇನಿಯರ ರೀತಿಯಲ್ಲಿ ಅಶೋಕನು ತನ್ನ ಶಾಸನಗಳನ್ನು ಹಾಕಿಸಿದ ಮೊದಲ ರಾಜನೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. (Addenda-I p.255) ಎಫ್.ಆರ್.ಆಡ್ರೂಸ್ ಎಂಬುವವನೂ ಸಹ ಇದೇ ಅಭಿಪ್ರಾಯ ಪಡುತ್ತಾರೆ. ಡೇರಿಯಸ್ಸನ ನಸ್ಕ್–ಇ–ರುಸ್ತಂ ಶಾಸನ, ಇವನ ನಂತರದ ಪೇರ್ಸಿಪೋಲಿಯ ಶಾಸನ, ಬಿಸ್ತೂನ್ ಶಾಸನ ಮುಂತಾದವು ಅಶೋಕನ ಶಾಸನಗಳ ಮೇಲೆ ಪ್ರಭಾವ ಬೀರಿವೆಯೆಂದಿರುತ್ತಾರೆ. ಶಾಸನದಲ್ಲಿ 'ರಾಜಾ ಡೇರಿಯಸ್ಸನು ಹೇಳುತ್ತಾನೆ' ಎಂದಿದೆ. ಅಶೋಕನು ಹೀಗೇ ಶಾಸನದಲ್ಲಿ ಹಾಕಿಸುತ್ತಾನೆ. ಇದಲ್ಲದೆ ಅಶೋಕನು ಪರ್ಷಿಯಾದ ವಾಸ್ತುಶೈಲಿಯನ್ನು (ವಾಸ್ತವವಾಗಿ ಅರೆ ಗ್ರೀಕ್ ವಾಸ್ತುಶಿಲ್ಪ (Semi Hellanised) ಅನುಸರಿಸಿದಂತೆ ಆಡ್ರೂಸ್ ಹೇಳಿದ್ದಾರೆ. ಇದಕ್ಕ ಕಾರಣ ಹಿಂದಿನಿಂದ ಈ ಪ್ರದೇಶದೊಡನೆ ಇದ್ದ ಸಂಬಂಧಗಳು. (Amritadhara p.5)

ಅಡ್ರೂಸ್.ಎಫ್.ಆರ್. ಅವರು ಮುಂದುವರಿದು ಪಿಯದಸಿ, ದೇವಾನಂಪಿಯ ಎಂಬ ಹೆಸರುಗಳು ಗ್ರೀಕಿನ Soter = ರಕ್ಷಕ. ಥಿಯೋಫಿಲೋಸ್=ದೇವರ ಸ್ನೇಹಿತ, ಮುಂತಾದ ಪದಗಳಿಗೆ ಸಮಾನವಾಗಿವೆ ಎಂದಿರುತ್ತಾರೆ. ಪ್ರಿಯದರ್ಶಿ ಅಥವಾ ಪಿಯದಸಿ ಎಂಬ ವಿಶೇಷಣವು ಚಂದ್ರಗುಪ್ತ ಮತ್ತು ಅಶೋಕ ಇಬ್ಬರಿಗೂ ಇತ್ತು. ಈ ಬಿರುದು ಅಶೋಕನ ಮೊಮ್ಮಗ ದಶರಥನಿಗೂ ಇತ್ತು. (Amritadhara p.131) ಹಾಗೆಯೇ ಅಂತಿಯೋಕನ ಶಾಸನದಲ್ಲಿ ಭಾರತದ ಶಾಸನದ ಛಾಯೆ ಕಾಣಬರುತ್ತದೆ ಎಂದಿದ್ದಾರೆ. ಇಲ್ಲಿ ಮುಂಬರುವ ಪ್ರಶ್ನೆಯೆಂದರೆ ಅಶೋಕನ ತಂದೆ ಅಥವಾ ತಾತಂದಿರು ಮತ್ತು ಇವರಿಗಿಂತ ಹಿಂದಿನ ರಾಜವಂಶಗಳು ಶಾಸನಗಳನ್ನು ಏಕೆ ಹಾಕಿಸಲಿಲ್ಲ? ಸ್ವತಃ ಅಶೋಕನೂ ಸಹ ಆರಂಭದಲ್ಲಿ ಶಾಸನಗಳನ್ನು ತನ್ನ ಆರಂಭದ

ಅವಧಿಯಲ್ಲಿ ಏಕೆ ಬರೆಸಲಿಲ್ಲ ? ಇದಕ್ಕೆ ಉತ್ತರವೂ ಈ ಪ್ರಶ್ನೆಗಳಲ್ಲಿಯೂ ಇದೆ. ಅಶೋಕನ ಕಾಲದವರೆಗೆ ಇವರು ವೈದಿಕಧರ್ಮದ ಅನುಯಾಯಿಗಳಾಗಿದ್ದರು. ವೈದಿಕಧರ್ಮದಲ್ಲಿ ಸಾರ್ವಜನಿಕವಾಗಿ ಬರೆವಣಿಗೆ ನಿಷಿದ್ಧವಿತ್ತು. ಲಿಪಿ ಕಲಿಯಲೇ ಬೇಕಾದಲ್ಲಿ ಮರಳಿನ ಮೇಲೆ ಬರೆದು, ಕಲಿತು, ಹಾಗೆಯೇ ಅಳಿಸುತ್ತಿದ್ದರು. ಶ್ಲೋಕಗಳ ಕಂಠಪಾಠ ಮಾಡಿದ ಮೇಲೆ ಲಿಪಿಗಳ ಅವಶ್ಯಕತೆಯಿಲ್ಲ. ಗಟ್ಟಿಯಾದ ವಸ್ತುಗಳ ಮೇಲೆ ಬರೆವಣಿಗೆ ಬರೆಯುವುದನ್ನು, ಕೊರೆಯುವುದನ್ನು ನಿಷೇಧಿಸಿದ್ದರು. ಈ ಕಾಲಕ್ಕೆ ಪ್ರಪಂಚದ ಅನೇಕ ನಾಗರೀಕತೆಗಳು ಹಿಂದಿನಿಂದಲೂ ಬರೆವಣಿಗೆಯನ್ನು ಸಾರ್ವಜನಿಕವಾಗಿ ರೂಢಿಸಿಕೊಂಡಿದ್ದವು. ಅಶೋಕನು ಬೌದ್ಧ ಧರ್ಮ ಸ್ವೀಕರಿಸುವ ವರೆಗೆ ಲಿಪಿಯನ್ನು ಸಾರ್ವಜನಿಕವಾಗಿ ಗಟ್ಟಿವಸ್ತುಗಳ ಮೇಲೆ ಬರೆಯುವ ಸಾಹಸ ಮಾಡಿರಲಿಲ್ಲ. ವೈದಿಕವಲ್ಲದ ಅನ್ಯ ಧರ್ಮ ಸ್ವೀಕರಿಸಿದ ಮೇಲೆ ಅವನಿಗೆ ಈ ಕಟ್ಟುಪಾಡುಗಳು ಅನ್ವಯಿಸಲಿಲ್ಲ. ಹೀಗಾಗಿ ಬೌದ್ಧ ಧರ್ಮದ ತತ್ವಗಳನ್ನು ಬಂಡೆಯ ಮೇಲೆ ಬರೆಯಿಸುವ ಸಾಹಸ ಮಾಡಿದ. ಈ ಕಾಲಕ್ಕೆ ಅಶೋಕನ ಮೇಲೆ ಪರ್ಷಿಯಾ, ಗ್ರೀಕ್ ಅರಸರ ಪ್ರಭಾವವೂ ಬಿದ್ದಿತ್ತು.

ಅಶೋಕನ ನಂತರ ಭರತಖಂಡವನ್ನಾಳಿದ ಬೇರೆ ಬೇರೆ ಧರ್ಮದ ರಾಜರು ಶಿಲಾಶಾಸನಗಳನ್ನು ಬರೆಸಲು ಮೊದಮೊದಲು ಹಿಂಜರಿದರೂ, ಮುಂದೆ ಎಲ್ಲ ಧರ್ಮದ ಅರಸರೂ ಬರೆವಣಿಗೆಯನ್ನು ತಮ್ಮ ರಾಜ್ಯಾಡಳಿತದ ಕುರುಹು ಎಂಬಂತೆ ಬಂಡೆಗಳ ಮೇಲೆ, ಲೋಹಗಳ ಮೇಲೆ ಬರೆಸಿರುತ್ತಾರೆ. ಈ ಪರಂಪರೆ ಮುಂದೆ ಅವಿಚ್ಛಿನ್ನವಾಗಿ ಮುಂದುವರಿದು ಲಿಪಿಗಳ ಬೆಳವಣಿಗೆಯನ್ನು ಗುರುತಿಸಲು ಸಹಾಯವಾಗಿದೆ.

ಅಶೋಕನ ಕಾಲದಲ್ಲಿ ಒಮ್ಮೆಗೆ ಭರತಖಂಡದಲ್ಲೆಲ್ಲಾ ಬರೆವಣಿಗೆ ಪ್ರಾರಂಭವಾದರೂ ಅಶೋಕನ ನಂತರ ಶತಮಾನಗಳು ಕಳೆದಂತೆ ಲಿಪಿಕಾರರ ಹಾಗೂ ಅವರು ಬರೆಯಲು, ಕೆತ್ತಲು ಉಪಯೋಗಿಸಿದ ಸಾಧನಗಳಿಂದ ಲಿಪಿಗಳು ಬದಲಾಗುತ್ತಾ ಬಂದವು. ಒಂದು ಸಾರಿ ಬದಲಾವಣೆಗೆ ಒಳಪಟ್ಟ ಲಿಪಿಗಳು ಕ್ರಿ.ಶ.೧೯-೨೦ನೆಯ ಶತಮಾನದವರೆಗೆ, ಮುದ್ರಣದಲ್ಲಿ ಅಚ್ಚಿನ ಮೊಳೆಗಳು ಬಳಕೆಗೆ ಬರುವವರೆಗೆ ಬದಲಾವಣೆ ಆಗುತ್ತಲೇ ಬಂದವು. ಇಂತಹ ಬದಲಾವಣೆಗಳು ಒಮ್ಮಲೇ ಬಂದವಲ್ಲ; ಒಂದೊಂದು ಸಣ್ಣ ಬದಲಾವಣೆಗೆ ಶತಮಾನಗಳೇ ತೆಗೆದುಕೊಂಡಿವೆ.

ಅಶೋಕನು ಶಾಸನಗಳನ್ನು ಬರೆದ ಕಾಲ ಕ್ರಿ.ಪೂ.ಮೂರನೆಯ ಶತಮಾನ. ಈ ಶಾಸನಗಳ ಲಿಪಿಗಳನ್ನು ಗಮನಿಸಿದಾಗ ಇವನ ಕಾಲಕ್ಕಾಗಲೇ ಸ್ವರ ಸಹಿತವಾದ ವ್ಯಂಜನಗಳು ಭಾರತೀಯ ಲಿಪಿಗಳಲ್ಲಿ ಕಾಣಿಸಿಕೊಂಡಿದ್ದವು. ಭಾರತೀಯ ಭಾಷೆಗಳಲ್ಲಿ ಕಾಣಸಿಗುವ ವರ್ಣಮಾಲೆಯು ಇವನ ಕಾಲಕ್ಕಾಗಲೇ ಕಾಣಬರುತ್ತದೆ. ಇವನು ತನ್ನ ಶಾಸನಗಳಲ್ಲಿ ಪ್ರಾಕೃತ ಭಾಷೆಯನ್ನು ಬಳಸಿರುವುದರಿಂದ ಕೆಲವು ಲಿಪಿಗಳ ಪ್ರಯೋಗವು ಇವನ ಶಾಸನಗಳಲ್ಲಿ ಕಾಣುವುದಿಲ್ಲ. ಆದರೆ ಕಾಗುಣಿತಗಳ ಕರಾರುವಾಕ್ಕಾದ ಪ್ರಯೋಗ, ಒತ್ತಕ್ಷರಗಳ ಪ್ರಯೋಗ ಇವನ್ನೆಲ್ಲಾ ಗಮನಿಸಿದಾಗ ಲಿಪಿಯು ಈ ಕಾಲಕ್ಕೆ ಪಕ್ವಾವಸ್ಥೆಯನ್ನು ಹೊಂದಿತ್ತು. ಮುಂದೆ ಭಾರತೀಯ ಹಾಗೂ ಆಗ್ನೇಯ ಏಷಿಯಾದ ಭಾಷೆಗಳು ಈ ಲಿಪಿಯನ್ನು ತಮ್ಮ ಭಾಷೆಗೆ ಅನುಕೂಲವಾಗುವ ಹಾಗೆ ಅಳವಡಿಸಿಕೊಂಡವು.

ಅಶೋಕನು ರಾಜ್ಯಭಾರ ಮಾಡುವ ಕಾಲದಲ್ಲಿ ಭರತಖಂಡದ ಪಶ್ಚಿಮಕ್ಕೆ ಐದು ದೇಶಗಳಿರುತ್ತವೆ. ಈ ದೇಶಗಳಿಗೆ ಅಶೋಕನು ಧರ್ಮ ಪ್ರಸರಣಕ್ಕಾಗಿ ಮಹಾಮಾತ್ರರನ್ನು ಕಳುಹಿಸಿದಂತೆ ಅವನ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಆ ಐದು ದೇಶಗಳು :

೧. ಅಂತಿಯೋಕ Antiochus II theos : ಪಶ್ಚಿಮ ಸಿರಿಯಾದ ರಾಜ (ಕ್ರಿ.ಪೂ.೨೬೧ ರಿಂದ ೨೪೬)

೨. ತುಲಮಾಯ Ptolemy II Philadelphus : ಈಜಿಪ್ಟಿನ ರಾಜ (ಕ್ರಿ.ಪೂ.೨೮೫ ರಿಂದ ೨೪೭)

೩. ಅಂತಿಕಿನಿ Antigonas Gonatas : ಮೆಸಿಡೋನಿಯಾದ ರಾಜ (ಕ್ರಿ.ಪೂ.೨೭೬ ರಿಂದ ೨೩೦)


೪. ಮಗ Magas : ಸೈರೇನಿನ ರಾಜ (ಕ್ರಿ.ಪೂ.೩೦೦ ರಿಂದ ೨೫೦)

೫. ಅಲಿಕಸುದರ Alexander : ಎಪಿರಸ್‌ನ ರಾಜ (ಕ್ರಿ.ಪೂ.೨೭೨ ರಿಂದ ೨೫೫)


ಇಪಲ್ಲದೆ ಯವನ, ಕಾಂಬೋಜ, ಭೋಜ, ರಾಷ್ಟ್ರಿಕ, ಆಂಧ್ರ, ಪುಲಿಂದ, ನಾಭಕ ಮತ್ತು ನಾಭಪಕ್ತಿ ಎಂಬುವವರಲ್ಲದೆ ಅಶೋಕನ ರಾಜ್ಯದ ಹೊರಗಿನ ರಾಜ್ಯಗಳಾದ ಚೋಡ, ಕೇರಳಪುತ, ಸತಿಯಪುತ ಮತ್ತು ತಾಮ್ರಪರ್ಣಿಯ ಉಲ್ಲೇಖಗಳಿವೆ. ಯವನ ರಾಜನೆಂದರೆ ಯಾರೆಂಬ ಬಗ್ಗೆ ವಿದ್ವಾಂಸರು ಚರ್ಚಿಸಿದ್ದಾರೆ. ಪಾಣಿನಿಯು ಯವನಾನಿ ಎಂಬ ವಿದೇಶ ಲಿಪಿಯ ಬಗ್ಗೆ ಹೇಳಿದ್ದಾನೆ. ಇದು ಅರಾಮಿಯಾ ಆಗಿರಬೇಕೆಂದು ಊಹಿಸುತ್ತಾರೆ. (Addenda p.256-257) ಯೋನರೆಂದರೆ ಇರಾನಿಯರು. ವಿಷ್ಣುಪುರಾಣದಲ್ಲಿ ಯವನರು ಮತ್ತು ಕಾಂಬುಜರು ಗಡ್ಡಬಿಟ್ಟು ತಲೆ ಬೋಳಿಸಿಕೊಂಡಿರುತ್ತಿದ್ದರೆಂದೂ, ದನದ ಮಾಂಸ ತಿನ್ನುತ್ತಿದ್ದರೆಂದು ಹೇಳಿದೆ. ರುದ್ರಧಾಮನು ಇರಾನಿನ ರಾಜ ತುಸಾಸ್ಪನನ್ನು ಯವನರಾಜನೆಂದು ಕರೆದಿದ್ದಾನೆ.

ಈ ರಾಜರ ಆಳ್ವಿಕೆಯ ಆಧಾರದಿಂದ ಬರೂವಾ ಅವರು ಅಶೋಕನ ಪಟ್ಟಾಭಿಷೇಕದ ಕಾಲವನ್ನು ಕ್ರಿ.ಪೂ.೨೭೦ ಎಂದೂ, ಕಳಿಂಗ ಯುದ್ಧವು ಕ್ರಿ.ಪೂ.೨೬೩-೬೨ ಎಂದೂ ಬ್ರಹ್ಮಗಿರಿ ಮತ್ತು ಮಸ್ಕಿ ಶಾಸನಗಳ ಕಾಲವನ್ನು ಕ್ರಿ.ಪೂ.೨೪೫-೪೪ ಎಂದು ಸೂಚಿಸುತ್ತಾರೆ. (Asoka and his Inscriptions)

ಬೌದ್ಧಗ್ರಂಥಗಳಲ್ಲಿ ಅಶೋಕನ ಜೀವನದ ವಿವರಗಳ ಬಗ್ಗೆ ಒಮ್ಮತವಿಲ್ಲ. ವಿಭಿನ್ನ ಹೇಳಿಕೆಗಳಿವೆ. ಪಾಳಿಗ್ರಂಥಗಳ ಪ್ರಕಾರ ಅಶೋಕನು ಉಜ್ಜಯನಿಯಲ್ಲಿ ಯುವರಾಜನಾಗಿ ಆಳಿದ. ಇವನಿಗೆ ಮಹೇಂದ್ರನೆಂಬ ಮಗನೂ, ಸಂಘಮಿತ್ರೆ ಎಂಬ ಮಗಳೂ ಇದ್ದಂತೆ ತಿಳಿಸುತ್ತವೆ. ದಿವ್ಯಾವದಾನದ ಪ್ರಕಾರ ಅಶೋಕನ ಮೊಮ್ಮಗ ಕುನಾಳ, ಇವನ ಮಗ ಸಂಪದಿ, ಇವನ ನಂತರ ಬೃಹಸ್ಪತಿ, ವೃಷಸೇನ, ಪುಷ್ಯಧರ್ಮ ಮತ್ತು ಪುಷ್ಯಮಿತ್ರರು ರಾಜ್ಯಭಾರ ಮಾಡಿದರೆಂದು ತಿಳಿಸುತ್ತದೆ.



ಅಫ್‌ಘಾನಿಸ್ತಾನದಲ್ಲಿ ದೊರೆತ ಅಶೋಕನ ಅರಾಮಿಯಾ ಶಾಸನ



ಅಫ್‌ಘಾನಿಸ್ತಾನದಲ್ಲಿ ದೊರೆತ ಅಶೋಕನ ಗ್ರೀಕ್ ಶಾಸನ

ಕೃಪೆ : Epigraphia Indica

ಶಾಸನಗಳಲ್ಲಿ ದೊರೆಯುವ ಆಧಾರದಂತೆ ಅಶೋಕನ ಎರಡನೆಯ ಪತ್ನಿ ಕಾಲುವಾಕಿ ಎಂದೂ ಇವಳ ಮಗ ತೀವಲನೆಂದೂ ಉಲ್ಲೇಖವಿದೆ. ಅಭಿಷಿಕ್ತನಾದ ೨೭ನೆಯ ವರ್ಷದ ಶಾಸನದಲ್ಲಿ (ಶಾಸನ VII) ಅವನ ಮಕ್ಕಳ ಮತ್ತು ಧರ್ಮದ ಬಗ್ಗೆ ಹೇಳಿದೆ. ಪಟ್ಟಕ್ಕೆ ಬಂದ ಮೇಲೆ ೩೭ ವರ್ಷ ರಾಜ್ಯಭಾರ ಮಾಡುತ್ತಾನೆ. ಉತ್ತರದ ಬಹುತೇಕ ಶಾಸನಗಳಲ್ಲಿ 'ದೇವನಾಂಪಿಯ ಪಿಯದಸಿರಾಜ' ಎಂದಿದ್ದರೆ, ಕರ್ನಾಟಕದ ಮಸ್ಕಿ, ಉಡೆಗೊಳ, ನಿಟ್ಟೂರು ಶಾಸನಗಳಲ್ಲಿ 'ಅಶೋಕ' ಹೆಸರಿನ ಉಲ್ಲೇಖವಿದೆ.

ಅಶೋಕನು ಪಟ್ಟಕ್ಕೆ ಬರುವ ಪೂರ್ವದಲ್ಲಿ ಮೌರ್ಯಸಾಮ್ರಾಜ್ಯದ ಮೂಲಪುರುಷ ಚಂದ್ರಗುಪ್ತನ (ಕ್ರಿ.ಪೂ.೩೨೪-೩೦೦) ಕಾಲಕ್ಕೆ ಗ್ರೀಕ್ ದೇಶದಿಂದ ಅಲೆಗ್ಸಾಂಡರನು ಭಾರತದ ವಾಯುವ್ಯ ಪ್ರಾಂತ್ಯವನ್ನಲ್ಲದೆ ಪರ್ಷಿಯಾ ದೇಶವನ್ನೂ ಗೆದ್ದಿದ್ದ. ಈ ಕಾಲಕ್ಕೆ ಈ ಭಾಗಗಳನ್ನು ನಂದರಾಜನ ವಂಶಸ್ಥರು ಆಳುತ್ತಿದ್ದರು. ಇವನು ವಾಪಸಾದ ಕೂಡಲೇ ಚಂದ್ರಗುಪ್ತನು ಭಾರತದ ವಾಯುವ್ಯ ಪ್ರಾಂತ್ಯಗಳನ್ನು ಗೆದ್ದುಕೊಂಡ. ಗ್ರೀಕ್ ರಾಜ್ಯದ ರಾಜಪ್ರತಿನಿಧಿಯಾದ ಸೆಲ್ಯೂಕಸ್ ನಿಕಟೋರ್ ಎಂಬುವವನನ್ನು ಸೋಲಿಸಿ, ಜೆದ್ರೂಷಿಯಾ (ಬಲೂಚಿಸ್ಥಾನ), ಆರಿಯ (Herat), ಅರಚೋಷಿಯ, ಕಾಂದಾಹಾರ, ಪರಪಂಸಿದಿ (ಹಿಂದೂಕುಷ್) ಪ್ರಾಂತ್ಯಗಳನ್ನು ಅವನಿಂದ ಪಡೆದ ಹಾಗೂ ಇವನ ಮಗಳನ್ನು ಮದುವೆಯಾದ. (Addenda I and Inscriptions of Asoka, D.C.Sarkar)

ಇದಕ್ಕೂ ಮೊದಲು ದೇರಿಯಸ್ಸನು (ಕ್ರಿ.ಪೂ.೫೧೫-೫೧೬) ಗಾಂಧಾರ ಮತ್ತು ಸಿಂಧೂ, ಗದಾ ಮತ್ತು ಹಿದುಷ್ (ಸಿಂಧೂ) ಪ್ರಾಂತ್ಯಕ್ಕೆ ಬಂದಿದ್ದು, ಈ ಭಾಗದಲ್ಲಿ ಅನೇಕ ಸತ್ರಪಿಗಳನ್ನು ಸೃಷ್ಟಿಸುತ್ತಾನೆ. ಈ ಸತ್ರಪಿಗಳ ಮೇಲೆ ಪರ್ಷಿಯಾದ ಭಾಷೆ, ಲಿಪಿಯ ಪ್ರಭಾವವಾಗುತ್ತದೆ. ಪರ್ಷಿಯಾದ ದಿಪಿ, ನಿಪಿಸಿತಂ ಶಬ್ದಗಳನ್ನು ಅಶೋಕನ ಶಾಸನಗಳಲ್ಲಿ ಕಾಣಬಹುದಾಗಿದೆ. ನಿಪಿಸಿತಂ, ಸಿಪಿಸ್ತಂ ಎಂಬ ಪದ ಷಹಬಾಜ್‌ಗರ್ ಶಾಸನದಲ್ಲಿ ಬಂದಿದ್ದು, ಇದರ ಮೂಲರೂಪ ನಿ-ಪಿಸ್ ಎಂದಿದ್ದು ಇದು ಈಗಿನ ಪರ್ಷಿಯಾ ಭಾಷೆಯ ನವಿಷ್ತನ್‌ಗೆ ಸಮಾನ ಪದವಾಗಿದ್ದು, ಅರ್ಥ ಲಿಪಿಕಾರ ಎಂದಾಗುತ್ತದೆ. (Amritadhana, F.R.Adrados) ಬೂಹ್ಲರ್ ದಿಪಿಕಾರ, ಲಿಪಿಕಾರ ಎಂಬ ಪದಕ್ಕೆ ಕರಣಿಕ (ಗುಮಾಸ್ತ) ಎಂಬ ಅರ್ಥ ನೀಡುತ್ತಾರೆ.

ಅಶೋಕನು ತನ್ನ ಧರ್ಮಲಿಪಿಗಳನ್ನು ಆರ್ಯಾವರ್ತ ಸೇರಿದಂತೆ ಭರತಖಂಡದಲ್ಲಿ ಬ್ರಾಹ್ಮಿ ಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿಯೂ, ವಾಯುವ್ಯ ಪ್ರಾಂತ್ಯದಲ್ಲಿ ಖರೋಷ್ಠಿ ಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿಯೂ, ಇನ್ನೂ ಮೇಲಿನ ಪ್ರದೇಶವಾದ ತಕ್ಷಶಿಲೆಯಲ್ಲಿ ಅರಾಮಿಯಾ ಭಾಷೆ ಮತ್ತು ಲಿಪಿಯ ಶಾಸನವನ್ನೂ, ಕಾಂದಾಹಾರ್ ಬಳಿಯ ಷರ್-ಇ-ಕುನ ಎಂಬಲ್ಲಿ ಗ್ರೀಕ್ ಮತ್ತು ಅರಾಮಿಯಾ ಲಿಪಿ ಮತ್ತು ಭಾಷೆಯ ದ್ವಿಭಾಷಾ ಶಾಸನವನ್ನು ಹಾಕಿಸಿರುತ್ತಾನೆ. ಗ್ರೀಕ್ ಶಾಸನವು ಅಶೋಕನ ಶಿಲಾಶಾಸನದ ೧೨ ಮತ್ತು ೧೩ನೆಯ ಪಾಠವನ್ನು ಹೊಂದಿದೆ. ಅರಾಮಿಯಾ ಶಾಸನವು ಅಶೋಕನ ಸ್ತಂಭಶಾಸನದ ಏಳನೆಯ ಪಾಠವನ್ನು ಹೊಂದಿದೆ.

ಅಶೋಕನ ಶಾಸನಗಳನ್ನು ಗವಿಶಾಸನ, ಶಿಲಾಶಾಸನ, ಪ್ರತ್ಯೇಕ ಶಿಲಾಶಾಸನ, ಲಘು ಶಿಲಾಶಾಸನ, ಕಲ್ಲಿನ ಪಿಂಡಿಗಳ ಮೇಲಿನ ಶಾಸನ (block), ಸ್ತಂಭಶಾಸನ, ಲಘು ಸ್ತಂಭಶಾಸನ ಎಂದು ಏಳು ವಿಭಾಗಗಳಾಗಿಗಿ ವಿಂಗಡಿಸುತ್ತಾರೆ. (Asoka & his times - Barua) ಲಿಪಿಯ ಆಧಾರದ ಮೇಲೆ ಬ್ರಾಹ್ಮಿ ಲಿಪಿಯ ಶಾಸನಗಳು, ಖರೋಷ್ಠಿ ಲಿಪಿಯ ಶಾಸನಗಳು, ಅರಾಮಿಯಾ ಲಿಪಿಯ ಶಾಸನಗಳು ಹಾಗೂ ಗ್ರೀಕ್ ಲಿಪಿಯ ಶಾಸನಗಳೆಂದು ವಿಂಗಡಿಸಬಹುದಾಗಿದೆ.

ಬುದ್ಧನು ಜನಿಸಿದ ಲುಂಬಿಣಿವನ, ಉಪದೇಶ ನೀಡಿದ ವಾರಣಾಸಿ, ಯುದ್ಧ ಮಾಡಿ ಜಯಿಸಿದ ಕಳಿಂಗ, ತನ್ನ ಆಡಳಿತದ ಅಂತಿಮ ಗಡಿಯಾದ ಬ್ರಹ್ಮಗಿರಿ, ಯರ್ರಗುಡಿ, ಪಶ್ಚಿಮದಲ್ಲಿ ಗುಜರಾತಿನ ಗಿರಿನಾರ್, ಪಾಕಿಸ್ಥಾನದ ಷಹಬಾಜ್‌ಘರ್, ಆಫ್ಘಾನಿಸ್ಥಾನದ ಕಂದಾಹಾರ್ ಮುಂತಾದ

ಪ್ರದೇಶಗಳ ಮಧ್ಯೆ ಇರುವ ಭರತಖಂಡದಲ್ಲೆಲ್ಲಾ ಅಶೋಕನು ತನ್ನ ಧರ್ಮಲಿಪಿಗಳನ್ನು ಬರೆಸಿದ್ದಾನೆ. ಏಕಕಾಲಕ್ಕೆ ಇವನು ಭಾರತದಲ್ಲಿ ಬರೆವಣಿಗೆಯನ್ನು ಸಾರ್ವತ್ರಿಕ ಉದ್ದೇಶಕ್ಕೆ ಗಟ್ಟಿಯಾದ ವಸ್ತುಗಳ ಮೇಲೆ ಬರೆಸಿದ ಮೊದಲಿಗ.

ಅಶೋಕನು ಅಭಿಷಕ್ತನಾದ ೧೨ನೆಯ ವರ್ಷದಲ್ಲಿ ಧರ್ಮಲಿಪಿಗಳನ್ನು ಬರೆಸಲಾರಂಭಿಸಿದ. ೧೩ನೆಯ ವರ್ಷದಲ್ಲಿ ಧರ್ಮಮಹಾಮಾತ್ರರನ್ನು ನೇಮಿಸಿದ. ಲುಂಬಿಣಿ ಮತ್ತು ನಿಗಾಲಿಸಾಗರದ ಸ್ತಂಭಶಾಸನಗಳನ್ನು ತನ್ನ ಅಭಿಷೇಕದ ೨೦ನೆಯ ವರ್ಷದಲ್ಲಿ ಬರೆಸಿದ. ಚಂಪಾರಣ್ಯದ ಸ್ತಂಭಶಾಸನವನ್ನು ತನ್ನ ೨೬ನೆಯ ವರ್ಷದಲ್ಲಿ ಬರೆಸಿದ. ಉಳಿದವನ್ನು ಈ ಅವಧಿಯೊಳಗೆ ಬರೆಸಿರಬೇಕು.

ಅಶೋಕನ ಕಾಲದಲ್ಲಿಯೇ ಈ ಲಿಪಿಗಳ ಅರಿವು ಎಲ್ಲರಿಗೂ ಅಥವಾ ಬಹುತೇಕ ಜನರಿಗೆ ಇರಲಿಲ್ಲ. ಹೀಗಾಗಿ ಈ ಲಿಪಿಗಳನ್ನು ತಿಸ್ಸ ನಕ್ಷತ್ರದಂದು (ಪುಷ್ಯ ನಕ್ಷತ್ರ) ಧರ್ಮಮಹಾಮಾತ್ರರು ಓದಿ ತಿಳಿಸಬೇಕೆಂಬ ಕಟ್ಟಳೆಯನ್ನು ಮಾಡಿದ್ದ. ಈ ಪದ್ಧತಿ ಚಿತ್ರಲಿಪಿಗಳಲ್ಲಿಯೂ ಇತ್ತು. ಪುರೋಹಿತರು ಅಥವಾ ಮಾಂತ್ರಿಕ ಈ ಲಿಪಿಯನ್ನು ಅರ್ಥೈಸುತ್ತಿದ್ದ. ಅಶೋಕನ ಕಾಲದವರೆಗೂ ಇಂತಹ ಪದ್ಧತಿ ಭಾರತದಲ್ಲಿಯೂ ಜಾರಿಯಲ್ಲಿದ್ದಿರಬೇಕು. ಇಂದಿಗೂ ಪುರಾಣ ಪಠಣ ಇದರ ಅವಶೇಷವೇ ಆಗಿದೆ. ಅಶೋಕನ ನಂತರದ ಕಾಲದಲ್ಲಿ ಲಿಪಿಯ ಬಳಕೆಯಲ್ಲಿ ಮಹತ್ತರವಾದ ಬದಲಾವಣೆಯಾಗುತ್ತದೆ. ಮೌರ್ಯ ಸಾಮ್ರಾಜ್ಯದ ಕುಸಿತದ ನಂತರ ಹರಿದು ಹಂಚಿಹೋದ ಭಾರತದಲ್ಲಿ ತಲೆ ಎತ್ತಿದ ಸಣ್ಣಪುಟ್ಟ ರಾಜ್ಯಗಳ ರಾಜರು, ಹೊರಗಿನಿಂದ ಬಂದು ನೆಲೆಸಿದ ಧಾಳಿಕಾರರು, ಅಶೋಕನು ಬಳಸಿದ ಲಿಪಿಗಳನ್ನೇ ಮುಂದುವರೆಸಿ ಬಳಸುತ್ತಾರೆ. ಇಲ್ಲಿಂದ ಮುಂದೆ ಎಲ್ಲಾ ಧರ್ಮದವರು, ಸಾರ್ವಜನಿಕರು ಈ ಲಿಪಿಯನ್ನು ಬಳಸಿರುತ್ತಾರೆ. ರಾಜರು ತಮ್ಮ ರಾಜಕೀಯ ಪ್ರತಿಷ್ಠೆಯಾಗಿ ಈ ಲಿಪಿಯನ್ನು ಬಳಸಲಾರಂಭಿಸುತ್ತಾರೆ. ಲಿಪಿಯ ಬಳಕೆ ಸಾರ್ವತ್ರಿಕವಾಗುತ್ತಾ ಬಂತು. ಹೀಗಾಗಿ ಅಶೋಕನ ಕಾಲದಲ್ಲಿದ್ದ ಲಿಪಿಗಳನ್ನು ಓದಿ ಅರ್ಥೈಸುವ ಪದ್ಧತಿ ಮುಂದೆ ಕಡಿಮೆಯಾಗುತ್ತದೆ.

ಅಶೋಕನ ಬ್ರಾಹ್ಮಿ ಲಿಪಿ

ಅಶೋಕನ ಕಾಲದಲ್ಲಿ ಈ ಲಿಪಿಯ ಎಲ್ಲಾ ವರ್ಣಗಳು ದೊರೆಯುವುದಿಲ್ಲ, ಕಾರಣ ಅಶೋಕನು ಪ್ರಾಕೃತ ಭಾಷೆಯನ್ನು ತನ್ನ ಶಾಸನಗಳಲ್ಲಿ ಬಳಸಿರುವುದು. ಈ ಭಾಷೆಯಲ್ಲಿ ಋ, ಷ, ಳ, ಲೃ ಮುಂತಾದವುಗಳ ಬಳಕೆ ಇಲ್ಲದಿರುವುದು. ಕಾರಣವಾಗಿದೆ.

ಈ ನಲವತ್ತೊಂದು ಅಕ್ಷರಗಳು ಮಾತ್ರ ಬಳಕೆಯಾಗಿವೆ. ದಾನಿಯವರ ಪ್ರಕಾರ ಉತ್ತರ ಸೆಮೆಟಿಯಾದ ಲಿಪಿಯಂತೆ ಬ್ರಾಹ್ಮಿಯು ಮೂಲದಲ್ಲಿ ೩೩ ಅಕ್ಷರಗಳನ್ನು ಮಾತ್ರ ಹೊಂದಿದ್ದು, ಈ ಲಿಪಿಗಳ ಆಧಾರದಿಂದ ಉಳಿದವನ್ನು ಸೃಷ್ಟಿಸಿಕೊಳ್ಳಲಾಗಿದೆ. ಸಾಮ್ಯತೆಯುಳ್ಳ ಆ ಉತ್ತರ ಸೆಮೆಟಿಯಾ ಲಿಪಿಗಳ ವಿವರ ದಾನಿಯವರ ಪ್ರಕಾರ ಈ ಕೆಳಕಂಡಂತಿದೆ.

ಅಲೇಫ್ – ಅ
ಅಯಿನ್ ಇ ಅಥವಾ ಏ
ಕಾಫ್ – ಕ
ಕ್ವೋಫ್ – ಖ
ಜಿಮೆಲ್ – ಗ
ತ್ಸದ್ – ಚ
ಜಯನ್ – ಜ
ತನ್ – ತ
ಟೇತ್ – ಥ
ದಲೇತ್ – ದ
ನುನ್ – ನ
ಪೇ – ಪ
ಬೇತ್ – ಬ
ಮೆಮ್ – ಮ
ಯೋದ್ – ಯ
ರೆಷ್ – ರ
ಲಮೇದ್ – ಲ
ವವ್ – ವ
ಷಿನ್ – ಶ
ಸಮೇಖ್ – ಸ
ಹೇ – ಹ

ಖೇತ್ ಎಂಬ ಅಕ್ಷರ ಬ್ರಾಹ್ಮಿಯಲ್ಲಿ ಉ ಅಥವಾ ಓ ಆಗಿರಬಹುದೆಂದಿದ್ದಾರೆ. ಈ ಅಕ್ಷರಗಳ ಆಧಾರದ ಮೇಲೆ ಬ್ರಾಹ್ಮಿಯ ಲಿಪಿಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎಂದಿರುತ್ತಾರೆ. ಆದರೂ ಭಾರತದಲ್ಲಿ ಅಶೋಕನಿಗಿಂತ ಮೊದಲು ಪಾಣಿನಿಯ ಕಾಲಕ್ಕೆ ೯ ಮೂಲಸ್ವರಗಳು, ೨೫ ವ್ಯಂಜನಗಳು ೮ ಅವರ್ಗೀಯ ವ್ಯಂಜನಗಳು ಸೇರಿ ೪೨ ಅಕ್ಷರಗಳ ಅಕ್ಷರಮಾಲೆ ಇತ್ತು. ಮುಂದೆ ಯೋಗವಾಹಕಗಳು ೪, ದೀರ್ಘಾಕ್ಷರಗಳು ೪ ಸೇರಿ ೫೦ ಅಕ್ಷರಗಳ ವರ್ಣಮಾಲೆ ಬಳಕೆಗೆ ಬಂತು. (A Higher Sanskrit Grammer, M.R.Kale, Motilal Bananasidas, 1977) ಮುಂದೆ ಸಂಸ್ಕೃತದಲ್ಲಿ ಶಾಸನಗಳು ಬರೆಯಲಾರಂಭಿಸಿದಾಗ ಈ ಎಲ್ಲಾ ಅಕ್ಷರಗಳನ್ನು ಬಳಸಿರುತ್ತಾರೆ. ಹೀಗಾಗಿ ಈ ಎಲ್ಲಾ ವಾದಗಳ ಹಿನ್ನೆಲೆಯಲ್ಲಿ ಭಾರತದ ಬ್ರಾಹ್ಮಿ ಲಿಪಿಗೆ ಬೇರೆ ಮೂಲವೊಂದಿದ್ದಿರಬೇಕು. ಆ ಮೂಲವು ಸ್ಥಳೀಯ ಸೃಷ್ಟಿಯಾಗಿದ್ದಿರಬೇಕು.

ಹಿಂದೆ ತಿಳಿಸಿರುವಂತೆ ಅಶೋಕನು ಶಾಸನಗಳನ್ನು ಸ್ತಂಭಗಳ (ಸಿಲಾಥಂಬ), ಶಿಲೆಗಳ (ಸಿಲಾಫಲಕ) ಮೇಲೆ ಬರೆಸಿದ್ದಾನೆ. ಸಾಮಾನ್ಯವಾಗಿ ಸ್ತಂಭಗಳನ್ನು ವೃತ್ತಾಕಾರವಾಗಿ ಕೆತ್ತಿ ಬಹು ನಯವಾಗಿ ಮಾಡಲಾಗಿದೆ. ಈ ಸ್ತಂಭಗಳು ನೇಪಾಳದ ರುಮ್ಮಿಂದೇಯಿ ಮತ್ತು ನಿಗಾಲಿಸಾಗರ್‌ಗಳನ್ನು ಬಿಟ್ಟರೆ ಉಳಿದವು ಗಂಗಾನದೀ ಬಯಲಲ್ಲಿ ಹಾಗೂ ಮಧ್ಯಭಾರತದ ಸಾಂಚಿಯಲ್ಲಿ ದೊರೆತಿವೆ. ಉಳಿದೆಡೆಯಲ್ಲಿ ಶಾಸನಗಳನ್ನು ಹುಟ್ಟುಬಂಡೆಗಳ ಮೇಲೆ ಕೆತ್ತಲಾಗಿದೆ. ಈ ಬಂಡೆಗಳನ್ನು ಶಾಸನ ಕೆತ್ತಲು ನಯ ಮಾಡಿಕೊಂಡಿಲ್ಲ, ಆಯಾಸ್ಥಳಗಳಲ್ಲಿ ದೊರೆಯುವ ನಯವಾದ ಬಂಡೆಗಳನ್ನೇ ಆಯ್ಕೆ ಮಾಡಿಕೊಂಡು ಕೆತ್ತಲಾಗಿದೆ. ಹೀಗಾಗಿ ಸ್ತಂಭದ ಶಾಸನಲಿಪಿಗೂ ಶಿಲಾಶಾಸನ ಲಿಪಿಗೂ ಅಲ್ಪಸ್ವಲ್ಪ ವ್ಯತ್ಯಾಸ ಕಾಣಬರುತ್ತದೆ. ಶಿಲಾಫಲಕದ ಶಾಸನಗಳು ಭಭ್ರು ಮತ್ತು ಸನ್ನತಿಯಲ್ಲಿ ದೊರೆತಿವೆ. ಇದುವರೆವಿಗೆ ೯ ಶಿಲಾಶಾಸನಗಳು, ೫ ಸ್ತಂಭಶಾಸನಗಳು ೬ ಲಘು ಸ್ತಂಭಶಾಸನಗಳು, ೧೬ ಲಘು ಶಿಲಾಶಾಸನಗಳು ಭಾರತದಾದ್ಯಂತ ದೊರೆತಿವೆ.


ಅಶೋಕನ ಶಾಸನಗಳಲ್ಲಿ ಕೆಲವು ಪ್ರಾದೇಶಿಕ ಅಂಶಗಳಿದ್ದಾಗೂ ಅವು ಹೇಳಿಕೊಳ್ಳುವಂತಹವಲ್ಲ. ಸ್ತಂಭಶಾಸನಗಳು ನುರಿತ ಶಿಲ್ಪಿಗಳಿಂದ ಬರೆಯಲಾಗಿದ್ದು, ಶಿಲಾಶಾಸನ

ಲಿಪಿಗಳು ಸಾಮಾನ್ಯ ಶಿಲ್ಪಿಗಳಿಂದ ಬರೆಯಲಾಗಿದೆ. ಆದರೂ ಲಿಪಿಯ ಸಮಾನ ಲಕ್ಷಣಗಳನ್ನು ಎರಡರಲ್ಲಿಯೂ ಕಾಣಬಹುದಾಗಿದೆ. ಶಾಸನಗಳನ್ನು ತನ್ನ ರಾಜ್ಯದಲ್ಲೆಲ್ಲಾ ಕೆತ್ತಲು ಅಶೋಕನು ಲಿಪಿಕಾರರನ್ನು ನೇಮಿಸಿದ್ದ. ಈ ಲಿಪಿಕಾರರಲ್ಲಿ ಕೆಲವರು ಖರೋಷ್ಠಿ ಲಿಪಿಯನ್ನು ಬಲ್ಲವರಾಗಿದ್ದರು. ಬ್ರಹ್ಮಗಿರಿ ಶಾಸನ, ಸಹಸ್ರಾಮ್ ಶಾಸನ, ಗಿರಿನಾರ್ ಶಾಸನಗಳಲ್ಲಿ ಖರೋಷ್ಠಿಯ ಕೆಲವು ಲಿಪಿಗಳನ್ನೂ ಕಾಣಬಹುದಾಗಿದೆ. ಗಿರಿನಾರ್‌ನಲ್ಲಿ ಹೆಸರಿದ್ದ ಖರೋಷ್ಠಿ ಭಾಗವು ಹಾಳಾಗಿದೆ. ಬ್ರಹ್ಮಗಿರಿ ಶಾಸನದಲ್ಲಿ ಖರೋಷ್ಠಿ ಲಿಪಿಯಲ್ಲಿ ಲಿಪಿಕಾರ ತನ್ನ ಹೆಸರಿನ ಮುಂದೆ 'ಲಿಪಿಕರೇಣ' ಎಂದು ಬರೆದಿದ್ದಾನೆ. ಎರ್ರಗುಡಿ ಶಾಸನದಲ್ಲಿ ಶಾಸನವನ್ನು ಹಾವಿನ ನಡಿಗೆಯಂತೆ ಬರೆದಿದ್ದಾನೆ. ಹೀಗಾಗಿ ಕೈಯಿಂದ ಕೈಗೆ ಮತ್ತು ಶಾಸನಕ್ಕೆ ಬಳಕೆಯಾಗಿರುವ ಶಿಲೆಯ ಹೊರ ಪದರದ ಆಧಾರದ ಮೇಲೆ ಅಕ್ಷರಗಳು ಸ್ವಲ್ಪ ಬದಲಾವಣೆಯಾಗಿರುವುದುವುಂಟು. ಕೆಲವು ಅಕ್ಷರಗಳು ಹಿಂದುಮುಂದಾಗಿವೆ. ಉದಾ: ಧ ಅಕ್ಷರ ಓ ಅಕ್ಷರಗಳು. ಓ ಕಾರದ ತಲೆಕಟ್ಟಿನಲ್ಲಿ ಕೆಲವೆಡೆ ಬದಲಾಗಿದೆ. ಉದಾ: 'ನೋ'. ಇಂತಹ ಕೆಲವು ಉದಾಹರಣೆಗಳನ್ನು ಬಿಟ್ಟಲ್ಲಿ ಉಳಿದಂತೆ ಆ ಕಾಲದ ಅಂದರೆ ಲಿಪಿಲಕ್ಷಣವನ್ನು ಇದು ಪಡೆದಿದೆ. ಏಕೆಂದರೆ ಒಂದೇ ಕಾಲದಲ್ಲಿ ಸುಮಾರು ೧೫ ವರ್ಷಗಳ ಅಂತರದಲ್ಲಿ ಅಶೋಕನ ಶಾಸನಗಳು ರಚಿತವಾಗಿವೆ. ಹೀಗಾಗಿ ಲಿಪಿಯಲ್ಲಿ ಹೇಳಿಕೊಳ್ಳುವಂತಹ ಬದಲಾವಣೆಗಳು ಇಲ್ಲ.

ಅಶೋಕನ ಬ್ರಾಹ್ಮಿಲಿಪಿಯ ಪಟ್ಟಿಕೆ

ಅ ಆ ಇ ಉ ಏ ಓ
ಕ ಖ ಗ ಘ ಙ
ಚ ಛ ಜ ಝ ಞ
ಟ ಠ ಡ ಢ ಣ
ತ ಥ ದ ಧ ನ
ಪ ಫ ಬ ಭ ಮ
ಯ ರ ಲ ವ ಶ ಷ ಸ ಹ ೩೯ ಅಕ್ಷರಗಳು

ಸಂಸ್ಕೃತದಲ್ಲಿ ಕಾಣುವ ಋ, ಲೃ ದೀರ್ಘಸ್ವರಗಳಾದ ಈ, ಊ, ಐ ಮತ್ತು ಔ ಗಳು ಅಶೋಕನ ಶಾಸನಗಳಲ್ಲಿ ಪ್ರಯೋಗವಾಗಿಲ್ಲ. ಈ, ಊ, ಐ, ಔ ಗಳು ಕಾಗುಣಿತಗಳಲ್ಲಿ ಕಾಣಸಿಗುತ್ತವೆ. ಹೀಗಾಗಿ ಈ ಅಕ್ಷರಗಳೂ ಅಶೋಕನ ಕಾಲದಲ್ಲಿ ಬಳಕೆ ಇದ್ದಿರಬೇಕು. ಅವುಗಳ ಮೂಲರೂಪಗಳು ದೊರೆತಿಲ್ಲ. 'ಅ' ಕಾರವು ರೋಮನ್ ಲಿಪಿಯ 'ಕೆ' ಅಕ್ಷರವು ತಿರುವು-ಮುರುವಾಕಾರದಲ್ಲಿದ್ದಂತಿದೆ. ಈ ಅಕ್ಷರದ ಬಲಕ್ಕೆ ದಂಡವಿದ್ದು ದಂಡದ ಎಡಕ್ಕೆ ಮೇಲೆ ಮತ್ತೆ ಕೆಳಕ್ಕೆ ಬಾಗಿದ ಎರಡು ವಕ್ರರೇಖೆಗಳು ಸೇರಿವೆ. ಇದೇ ಅ ಕಾರದ ದಂಡದ ಮೇಲೆ ಬಲಕ್ಕೆ ಸಣ್ಣಗೆರೆಯನ್ನು ಎಳೆದು ಆ ಕಾರವನ್ನು ಸೃಷ್ಟಿಸಿರುತ್ತಾರೆ. ವ್ಯಂಜನಗಳಿಗೆ ಕಾಗುಣಿತವೂ ಸಹ ಇದೇ ರೀತಿ ಸಣ್ಣಗೆರೆಯನ್ನು ಸೇರಿಸುವುದರ ಮೂಲಕ ತೋರಿಸಿರುತ್ತಾರೆ. 'ಇ' ಕಾರವನ್ನು ಒಲೆಗುಂಡಿನ ಆಕಾರದಲ್ಲಿ ಮೂರು ಚುಕ್ಕೆಗಳನ್ನು ತೋರಿಸುವುದರ ಮೂಲಕ ಬರೆದಿರುತ್ತಾರೆ. ಈ ರೂಪ ಒಂದೆರಡು ಶತಮಾನಗಳ ಕಾಲ ಹೀಗೆಯೇ ಇರುತ್ತದೆ. 'ಉ' ಕಾರವು ಈಗಿನ ಇಂಗ್ಲೀಷ್



ಅಶೋಕನ ಶಾಸನಗಳ ವರ್ಣಮಾಲೆ ದೇ.ಕೊ. ರೆಡ್ಡಿ

ಲಿಪಿಯ ದೊಡ್ಡ ಅಕ್ಷರ 'ಎಲ್' ಅನ್ನು ಹೋಲುತ್ತದೆ. 'ಏ' ಕಾರವು ತ್ರಿಕೋಣದಂತಿದೆ. 'ಓ' ಕಾರವು ಇಂಗ್ಲಿಷ್ ಅಕ್ಷರ 'ಜಡ್' ನಂತಿದೆ. ಕೆಲವೊಮ್ಮೆ ಜಡ್ ಅಕ್ಷರವನ್ನು ತಿರುಗಿಸಿ ಬರೆದಂತೆ ಬಳಸಿರುವುದುಂಟು.


ವ್ಯಂಜನಗಳಲ್ಲಿ 'ಕ'ಕಾರವು ಸಿಲುಬೆಯಾಕಾರದಲ್ಲಿದೆ. 'ಖ'ಕಾರವು ಇಂಗ್ಲೀಷಿನ ತಿರುವುಮುರುವಾದ 'ಯು' ಆಕಾರದಲ್ಲಿದ್ದು ಅಕ್ಷರದ ಬಲದಂಡವು ಕೆಳಕ್ಕೆ ನೀಳವಾಗಿದೆ. 'ಗ' ಕಾರವು ಇಂಗ್ಲೀಷಿನ 'ವಿ' ಅಕ್ಷರವು ತಲೆಕೆಳಗಾಗಿರುವಂತೆ ಇದೆ. 'ಘ' ಕಾರವು ಮೇಲ್ಮುಖವಾಗಿರುವ ಅರ್ಧವೃತ್ತಾಕಾರದ ರೀತಿಯಲ್ಲಿದ್ದು ಎಡದಂಡವು ಸ್ವಲ್ಪ ಮೇಲಕ್ಕೆ ಬೆಳೆದಿದೆ. ಈ ಅರ್ಧವೃತ್ತಾಕಾರದ ಮಧ್ಯೆ ಮೇಲ್ಮುಖವಾಗಿರುವ ದಂಡ ಬಂದಿದೆ. 'ಙ' ಆಕಾರವು ಇಂಗ್ಲೀಷಿನ 'E' ಅಕ್ಷರದ ದಂಡದ ಬಲಗಡೆಯ ಮೇಲಿನ ಮತ್ತು ಕೆಳಗಿನ ಭಾಗಗಳಲ್ಲಿ ಅಡ್ಡಗೆರೆಯನ್ನು ಎಳೆಯುವ ಮೂಲಕ ತೋರಿಸಲಾಗಿದೆ. 'ಚ' ಕಾರವು ಎಡಮುಖವಾಗಿರುವ ಅರ್ಧಚಂದ್ರಾಕಾರದಿಂದ ದಂಡವನ್ನು ಮೇಲಕ್ಕೆ ಎಳೆಯಲಾಗಿದೆ. 'ಜ' ಅಕ್ಷರವು 'ಙ' ಅಕ್ಷರದ ಮಧ್ಯೆ ಅಡ್ಡಗೆರೆಯನ್ನು ಎಳೆಯಲಾಗಿದ್ದು ಇದು ಇಂದಿನ ಇಂಗ್ಲೀಷಿನ 'E' ಅಕ್ಷರದ ರೀತಿಯಲ್ಲಿದೆ. 'ಝ' ಅಕ್ಷರವು ಉದ್ದವಾದ ದಂಡದ ಮಧ್ಯೆ ೯೦^{0} ಲಂಬರೇಖೆಯೊಂದು ಹೊರಬಂದಂತಿದೆ. 'ಞ' ಅಕ್ಷರವು 'ಝ' ಅಕ್ಷರವನ್ನು ತಲೆಕೆಳಗಾಗಿಸಿ ಅದರ ದಂಡದ ಎಡಕ್ಕೆ ಒಂದು ಗೆರೆಯನ್ನು ಎಳೆದಂತೆ ಇದೆ. 'ಟ' ಕಾರವು ಅರ್ಧವೃತ್ತಾಕಾರದಲ್ಲಿದೆ. 'ಠ'ಕಾರವು ಪೂರ್ಣ ವೃತ್ತಾಕಾರವಾಗಿದೆ. 'ಡ' ಕಾರವು ಮೆಟ್ಟಿಲಿನ ಆಕಾರದಲ್ಲಿದೆ. 'ಢ' ಆಕಾರವು 'ಡ' ಕಾರದ ಕೆಳಭಾಗದಲ್ಲಿ ಬಲಕ್ಕೆ ಒಂದು ಗೆರೆಯನ್ನು ಹೊಂದಿದೆ. 'ಣ' ಕಾರವು ದಂಡದ ಮೇಲೆ ಕೆಳಗೆ ಎರಡು ಅಡ್ಡಗೆರೆಗಳನ್ನು ಎಳೆಯಲಾಗಿದೆ. 'ತ' ಕಾರವು ಇಂಗ್ಲೀಷಿನ 'ವೈ' ಅಕ್ಷರವು ತಲೆಕೆಳಗಾಗಿರುವಂತೆ ಇದೆ. 'ಥ' ಕಾರವು ಅಶೋಕನ ಕಾಲದ

'ಠ'ಕಾರದ ಒಳಗೆ ಚುಕ್ಕೆಯನ್ನು ಹೊಂದಿದೆ. 'ದ' ಅಕ್ಷರವು ದಂಡದ ಎಡಬದಿಯ ಮೇಲೆ ಕೆಳಗೆ ಅಡ್ಡಗೆರೆಗಳನ್ನು ಬಿಡಿಸಿ ಆ ಅಡ್ಡಗೆರೆಗಳ ಮೇಲಿನ ಮತ್ತು ಕೆಳಭಾಗದಲ್ಲಿ ಗೆರೆಗಳನ್ನು ಎಳೆದಿದೆ. 'ಧ' ಕಾರವು ಬಲಮುಖದ ಅರ್ಧಚಂದ್ರಾಕಾರದಲ್ಲಿದೆ. 'ನ' ಕಾರವು ದಂಡದ ಕೆಳಗೆ ಅಡ್ಡಗೆರೆ ಬಂದಿದೆ. 'ಪ' ಕಾರವು ಇಂಗ್ಲೀಷ್ 'ಯು' ಆಕಾರದಲ್ಲಿದ್ದು ಎಡಭಾಗದ ದಂಡವು ಮೇಲಕ್ಕೆ ಬೆಳೆದಿದೆ. 'ಫ' ಕಾರವನ್ನು 'ಪ' ಕಾರದ ಬಲದಂಡವು ಒಳಕ್ಕೆ ತಿರುಗುವ ಮೂಲಕ ತೋರಿಸಿದೆ. 'ಬ' ಕಾರವು ಚೌಕಾಕಾರದ ರೀತಿಯಲ್ಲಿದೆ. 'ಭ' ಕಾರವು ದಂಡದ ಎಡಭಾಗದ ಮಧ್ಯೆ ಅಡ್ಡಗೆರೆ ಹೊರಟು ಅದು ಕೆಳಕ್ಕೆ ಬಾಗಿದೆ. 'ಮ' ಕಾರವು ವೃತ್ತಾಕಾರದ ಮೇಲೆ ಎರಡು ಗೆರೆಗಳು ಹುಳುವಿನ ಮೀಸೆಯಂತೆ ಬಂದಿವೆ. 'ಯ' ಕಾರವು ಬಾಗಿದ ಅರ್ಧಚಂದ್ರಾಕೃತಿಯ ಮಧ್ಯೆ ನೇರವಾದ ದಂಡ ಬೆಳೆದಿದೆ. 'ರ' ಕಾರವು ನೇರವಾದ ದಂಡದ ಆಕಾರದಲ್ಲಿದೆ. 'ಲ' ಕಾರವು ಇಂಗ್ಲೀಷಿನ 'ಯು' ಆಕಾರದಲ್ಲಿದ್ದು ಅದರ ಬಲದಂಡವು ಮೇಲಕ್ಕೆ ಬಂದಿದೆ. ಹಾಗೆಯೇ ಎಡದಂಡದ ಕೊನೆಯಲ್ಲಿ ಅಡ್ಡಗೆರೆ ಬಂದಿದೆ. 'ವ' ಕಾರವು ವೃತ್ತಾಕಾರದ ಮೇಲೆ ಸಣ್ಣದಂಡವೊಂದು ಮೇಲೆ ಬಂದಿದೆ. 'ಶ' ಕಾರವು ಅಶೋಕನ ಕಾಲದ 'ಗ' ಕಾರದಂತಿದ್ದು ಎಡಗಡೆಯ ಗೆರೆಯಿಂದ ಸಣ್ಣಗೆರೆಯೊಂದು ಒಳಭಾಗದಲ್ಲಿ ಬಂದಿದೆ. 'ಸ' ಅಶೋಕನ ಕಾಲದ 'ಪ'ಕಾರದಂತಿದ್ದು ಎಡದಂಡದ ಮಧ್ಯಭಾಗದಿಂದ ಎಡಮುಖವಾಗಿ ಕೆಳಕ್ಕೆ ಬಾಗಿದ ಗೆರೆ ಹೊರಕ್ಕೆ ಬಂದಿದೆ. 'ಹ' ಕಾರವು ತಿರುಗಿಸಿದ 'ಲ' ಕಾರದಂತಿದೆ.

ಅಶೋಕನ ಅಕ್ಷರಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಒಂದನೆಯ ಗುಂಪು ರೇಖೆಗಳಿಂದ ರಚಿತವಾಗಿರುವುವು. ಎರಡನೆಯ ಗುಂಪು ಅಕ್ಷರ ಸಾಮ್ಯತೆ ಮತ್ತು ತಳಭಾಗ ವೃತ್ತಾಕಾರವಾಗಿ ತಿರುಗಿರುವುದು. ಮೂರನೆಯ ಗುಂಪು ವೃತ್ತಾಕಾರ, ಅರ್ಧವೃತ್ತಾಕಾರದ ಅಕ್ಷರಗಳು. ಈ ಮೂರು ರೀತಿಯ ಮೂಲೆಗಳು ಕೆಲವೊಮ್ಮೆ ಬಾಗಿರುವುದುವುಂಟು. ಘ, ಪ, ಫ, ಲ, ಸ, ಹ ಇವು ಒಂದೇ ಆಕಾರದಲ್ಲಿದ್ದು ಅಲ್ಪ ಸ್ವಲ್ಪ ವ್ಯತ್ಯಾಸದಿಂದಿದೆ. ಹಾಗೆಯೇ ಚ, ಛ, ಟ, ಥ, ಧ, ಮ, ವ ಇವು ಕೂಡ ಒಂದೇ ರೀತಿಯಲ್ಲಿವೆ. ಉಳಿದ ಅಕ್ಷರ ರೇಖಾಕಾರದಲ್ಲಿದೆ.

ಕಾಗುಣಿತ

ಕಾಗುಣಿತವನ್ನು ಸೂಚಿಸಲು ಅಕ್ಷರಗಳ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಚಿಕ್ಕ ಗೆರೆಗಳನ್ನು ಎಳೆಯುವ ಮೂಲಕ ತೋರಿಸಿರುತ್ತಾರೆ. 'ಆ' ಕಾರ ಕಾಗುಣಿತವನ್ನು ಅಕ್ಷರದ ಮೇಲ್ಭಾಗದಲ್ಲಿ ಬಲಗಡೆಗೆ ಅಡ್ಡಗೆರೆ ಎಳೆಯುವ ಮೂಲಕ ತೋರಿಸಿರುತ್ತಾರೆ. ಠ, ಥ, ಬ ಅಕ್ಷರಗಳ ಮಧ್ಯಭಾಗದಲ್ಲಿ ಈ ಗೆರೆ ಬಂದಿರುತ್ತದೆ. 'ಇ' ಕಾರವು ಅಕ್ಷರಗಳ ಮೇಲ್ಭಾಗದಲ್ಲಿ ಮೇಲ್ಮುಖವಾಗಿ ಬಂದಿರುವುದಾಗಿದೆ. ಅಕ್ಷರದ ಮೇಲ್ಭಾಗದಲ್ಲಿ 'ಆ' ಕಾರದ ರೇಖೆಯನ್ನು ತಂದು ಅದರ ಮೇಲೆ ನೇರವಾದ ಗೆರೆಯನ್ನು ಎಳೆದಿರುತ್ತಾರೆ. 'ಜ' ಮತ್ತು 'ಟ' ಅಕ್ಷರಗಳಲ್ಲಿ ಈ ಗೆರೆ ನೇರವಾಗಿ ಮೇಲಕ್ಕೆ ಹೋಗಿದೆ. 'ಈ' ಕಾರದ ಕಾಗುಣಿತವನ್ನು ತೋರಿಸಲು ಎರಡು ಗೆರೆಗಳನ್ನು ಸಮಾನಾಂತರವಾಗಿ ಮೇಲ್ಮುಖವಾಗಿ ತೋರಿಸಿರುತ್ತಾರೆ. ಠ, ಥ, ಬ ಅಕ್ಷರಗಳಲ್ಲಿ 'ಆ' ಕಾರದ ಅಡ್ಡಗೆರೆಯ ಮೇಲೆ ಮೇಲ್ಮುಖವಾಗಿ ಒಂದು ಗೆರೆ ಬಂದಿದ್ದರೆ 'ಈ' ಕಾರಕ್ಕೆ ಎರಡು ಗೆರೆಗಳು ಬಂದಿವೆ. 'ಉ' ಕಾರವು ಅಕ್ಷರದ ತಳಭಾಗದಲ್ಲಿ ಬರುವ ಗೆರೆಯಾಗಿದೆ. ಕ, ಚ, ದ, ಖ, ತ,



ಲೋರಿಯಾ ನಂದಗಡ ಸ್ಥಂಭ ಶಾಸನಗಳು ಕೃಪೆ : ಎ.ಎಂ. ಅಣ್ಣಿಗೇರಿ

ಗ, ಶ, ಝ, ರ ಅಕ್ಷರಗಳ ತಳಭಾಗದ ಗೆರೆಗಳು ನೇರವಾಗಿರುವುದರಿಂದ 'ಉ' ಕಾರದ ಕಾಗುಣಿತವನ್ನು ಅಕ್ಷರದ ಕೆಳಭಾಗದಲ್ಲಿ ಬಲಗಡೆಗೆ ಅಡ್ಡವಾಗಿ ಸೂಚಿಸಲಾಗಿದೆ. 'ಊ' ಕಾರದ ದೀರ್ಘಚಿಹ್ನೆಯನ್ನು 'ಉ' ಕಾರದ ಚಿಹ್ನೆಯ ಬಳಿಯಲ್ಲಿಯೇ ಮೇಲೆ ಹೇಳಿದ ರೀತಿಯಲ್ಲಿ ಉದ್ದಗೆರೆ ಎಳೆಯಲಾಗಿದೆ. 'ಋ' ಕಾರದ ಕಾಗುಣಿತ ಅಶೋಕನ ಶಾಸನಗಳಲ್ಲಿ ಕಾಣುವುದಿಲ್ಲ. 'ಏ' ಕಾರದ ಕಾಗುಣಿತವು ವ್ಯಂಜನದ ಮೇಲ್ಭಾಗದಲ್ಲಿ ಎಡಕ್ಕೆ ಸೂಚಿಸಲಾಗಿದೆ. 'ಆ'ಕಾರದ ಕಾಗುಣಿತದ ವಿರುದ್ಧ ದಿಕ್ಕಿನಲ್ಲಿ 'ಏ' ಕಾರವಿದೆ. ಅಕ್ಷರದ ದಂಡದ ಎಡಕ್ಕೆ ಗೆರೆ ಎಳೆದು ಸೂಚಿಸಿದೆ. ಮತ್ತೆ ಠ, ಥ, ಬ ಗಳಲ್ಲಿ ಅಕ್ಷರದ ಮಧ್ಯೆ ಎಡಕ್ಕೆ ಗೆರೆ ಎಳೆಯಾಗಿದೆ. 'ಐ' ಕಾರವನ್ನು ಸೂಚಿಸಲು 'ಏ' ಕಾರದ ಸೂಚಕ ಗೆರೆಯೊಂದಿಗೆ ಅದಕ್ಕೆ ಸಮಾನಾಂತರವಾಗಿ ಇನ್ನೊಂದು ಗೆರೆಯನ್ನು ಎಳೆಯುವ ಮೂಲಕ ಸೂಚಿಸಲಾಗಿದೆ. 'ಓ' ಕಾರಧ ಕಾಗುಣಿತವನ್ನು 'ಆ' ಕಾರದ ಕಾಗುಣಿತ ಮತ್ತು 'ಏ' ಕಾರದ ಕಾಗುಣಿತವನ್ನು ಅಕ್ಷರದ ಬಲ ಮತ್ತು ಎಡಭಾಗಗಳಲ್ಲಿ ಸೂಚಿಸುವ ಮೂಲಕ ತೋರಿಸಿದೆ. 'ಔ' ಕಾರದ ಕಾಗುಣಿತವು ಅಶೋಕನ ಶಾಸನಗಳಲ್ಲಿ ಕಾಣಬರುವುದಿಲ್ಲ. ಅನುಸ್ವಾರವು ಅಶೋಕನ ಶಾಸನಗಳಲ್ಲಿ ಕಂಡುಬರುತ್ತದೆ. ಅಕ್ಷರದ ತಲೆಯ ಮೇಲೆ ಅಥವಾ ಸ್ವಲ್ಪ ಬಲಪಕ್ಕಕ್ಕೆ ಚುಕ್ಕೆಯನ್ನು ತೋರಿಸುವ ಮೂಲಕ ಅನುಸ್ವಾರವನ್ನು ಬಳಸಿರುತ್ತಾರೆ.

ಅಶೋಕನ ಶಾಸನಗಳಲ್ಲಿ ಒತ್ತಕ್ಷರಗಳು ಕಾಣಬರುತ್ತವೆ. ಇವು ಮುಖ್ಯ ಅಕ್ಷರದ ಕೆಳಗೆ ಒತ್ತಕ್ಷರವನ್ನು ಬರೆಯುವುದರ ಮೂಲಕ ತೋರಿಸಿದೆ. ಹೀಗೆ ಬರೆಯುವಾಗ ಒತ್ತಕ್ಷರವು ಮೇಲಿನ ಅಕ್ಷರಕ್ಕೆ ಸೇರಿಕೊಂಡಿರಬೇಕು. ಒತ್ತಕ್ಷರವು ಕೆಲವೊಮ್ಮೆ ಮೇಲಿನ ಅಕ್ಷರದಷ್ಟೇ ಗಾತ್ರದಲ್ಲಿರಬಹುದು ಅಥವಾ ಚಿಕ್ಕದಾಗಿರಬಹುದು. ಆದರೆ ರೂಪದಲ್ಲಿ ಮೂಲಾಕ್ಷರದಂತೆಯೇ ಇರುತ್ತದೆ. 'ಕ್ಯ' ಎಂಬ ರೂಪ ಬರೆಯಬೇಕಾದಲ್ಲಿ 'ಕ' ಕೆಳಗೆ ಅದಕ್ಕೆ ತಾಗಿದಂತೆ ಅಥವಾ 'ಕ'ಕಾರದ ದಂಡ ಕೆಳಗೆ ಬೆಳೆದು ಅಲ್ಲಿ 'ಯ' ಕಾರವನ್ನು ಬರೆದಿರುತ್ತಾರೆ. 'ರ' ಕಾರದ ಒತ್ತಕ್ಷರ ಕೊಡಬೇಕಾದಲ್ಲಿ ನೇರವಾಗಿ 'ರ' ಅಕ್ಷರದ ದಂಡವನ್ನು ಬರೆಯುವುದಕ್ಕೆ ಬದಲಾಗಿ ಅದನ್ನು ಕೆಲವು ಬಾಗುಗಳ ಮೂಲಕ ತೋರಿಸಿ 'ರ' ಕಾರದ ಕೆಳಗೆ ಬರೆಯಬೇಕಾದ ಒತ್ತಕ್ಷರವನ್ನು ಬರೆದಿರುತ್ತಾರೆ. ಇದಕ್ಕೆ ಕಾರಣ ಮೇಲಿನ ಅಕ್ಷರದ ದಂಡ ಮತ್ತು 'ರ' ಕಾರದ ಒತ್ತಕ್ಷರ ಬೇರೆ ಎಂಬ ನಂಬಿಕೆ ಬರಲೆಂದು 'ಉ' ಕಾರದ ದಂಡ ಬೇರೆ 'ರ' ಕಾರದ ದಂಡ ಬೇರೆ ಎಂದು ತೋರಿಸಲು ಹೀಗೆ ಬರೆದಿರುತ್ತಾರೆ. ಆದರೂ ಪ್ರಾಕೃತ ಭಾಷೆಯ ಬಳಕೆಯ ಕಾರಣದಿಂದ ಅಶೋಕನ ಶಾಸನಗಳಲ್ಲಿ ಒತ್ತಕ್ಷರಗಳು ಕಡಿಮೆ. ಒತ್ತಕ್ಷರಗಳು ಬಂದಾಗ 'ಉ' ಕಾರದ ಕಾಗುಣಿತ ಬಿಟ್ಟು ಉಳಿದವು ಮೊದಲ ನೀತಿಯಂತೆಯೇ ಬಳಕೆಯಾಗುತ್ತವೆ. ಆದರೆ 'ಉ' ಕಾರದ ಕಾಗುಣಿತದ ಸೂಚಿತ ಸ್ಥಳ ಮಾತ್ರ ಬದಲಾಗುತ್ತದೆ. ಮೂಲಾಕ್ಷರದ ಕೆಳಗೆ ಯಾವ ಒತ್ತಕ್ಷರ ಬಂದಿರುತ್ತದೆಯೋ ಆ ಒತ್ತಕ್ಷರಕ್ಕೆ 'ಉ' ಕಾರದ ಕಾಗುಣಿತವನ್ನು ನೀಡಲಾಗುತ್ತದೆ. ಹೀಗೆ ನೀಡುವಾಗ ಹಿಂದೆ ತಿಳಿಸಿದ ನಿಯಮಗಳಂತೆ ನೀಡಿರುತ್ತಾರೆ. ಅಂದರೆ 'ಕ್ಯು' ಎಂಬ ಅಕ್ಷರದಲ್ಲಿ ಒತ್ತಕ್ಷರ 'ಯ' ಕಾರಕ್ಕೆ ಕೆಳಮುಖವಾಗಿ ಗೆರೆಯೆಳೆಯುವ ಮೂಲಕ ತೋರಿಸಿದರೆ, 'ಸ್ರು' ಎಂಬ ಅಕ್ಷರವ ಕೆಳಗೆ 'ರ' ಕಾರ ಬಂದಿರುವುದರಿಂದ 'ರ' ಕಾರಕ್ಕೆ ಸೇರಿಸುವ 'ಉ' ಕಾರದ ಕಾಗುಣಿತವು ಬಲಗಡೆಗೆ ಅಡ್ಡಗೆರೆ ಮೂಲಕ ತೋರಿಸಿದೆ.

ಮಂಗಳ ಚಿಹ್ನೆಗಳು

ಅಶೋಕನ ಎಲ್ಲಾ ಶಾಸನಗಳ ಆರಂಭದಲ್ಲಿ ಮಂಗಳ ಚಿಹ್ನೆಗಳು ಕಾಣಬರದಿದ್ದರೂ ಕೆಲವು ಶಾಸನಗಳ ಆರಂಭದಲ್ಲಿ ಸ್ವಸ್ತಿಕಗಳು, ಮಂ ಅಕ್ಷರಗಳನ್ನು ಬಿಡಿಸಿದೆ. (ಜುನಾಗಡ ಶಿಲಾಶಾಸನ). ರಾಜುಲಮಂದಗಿರಿ ಶಾಸನದಲ್ಲಿ ತ್ರಿಶೂಲದಂತಹ ಭಾಗ ಕಾಣಬರುತ್ತದೆ. ಕೆಲವು ಶಾಸನಗಳ ಬಳಿ (ಧೌಲಿ) ಆನೆಯ ಶಿಲ್ಪವನ್ನು ಬಿಡಿಸಲಾಗಿದೆ. ಹೀಗೆ ಶಾಸನಗಳಲ್ಲಿ ಮಂಗಳ ಚಿಹ್ನೆ ಬಳಸುವ ಪದ್ಧತಿ ಅಪರೂಪವಾದರೂ ಅಶೋಕನ ಕಾಲದಲ್ಲಿ ಬಳಕೆಯಲ್ಲಿತ್ತು.

ಖರೋಷ್ಠಿ ಲಿಪಿ

ಅಶೋಕನು ತನ್ನ ಧರ್ಮಲಿಪಿಗಳನ್ನು ಬ್ರಾಹ್ಮಿಯಲ್ಲಲ್ಲದೆ ಖರೋಷ್ಠಿ, ಅರಾಮಿಯಾ ಮತ್ತು ಗ್ರೀಕ್ ಲಿಪಿಯಲ್ಲಿ ಹಾಕಿಸಿರುವುದನ್ನು ಹಿಂದೆಯೇ ಹೇಳಲಾಗಿದೆ. ಇವುಗಳಲ್ಲಿ ಖರೋಷ್ಠಿ ಲಿಪಿಯು ಬ್ರಾಹ್ಮಿಯ ನಂತರ ವಾಯುವ್ಯ ಭಾರತದಲ್ಲಿ ಕ್ರಿ.ಶ.೫-೬ನೆಯ ಶತಮಾನದವರೆಗೆ ಬಹು ಪ್ರಭಾವಯುತವಾದ ಸಂಪರ್ಕ ಲಿಪಿಯಾಗಿತ್ತು. ಈ ಲಿಪಿಯೂ ಸಹ ಬ್ರಾಹ್ಮಿಯಂತೆ ಓದಲು ಅಸಾಧ್ಯವಾದ ಲಿಪಿಯಾಗಿತ್ತು. ದ್ವಿಭಾಷಾ ನಾಣ್ಯಗಳ ಸಹಾಯದಿಂದ ಇದನ್ನು ಓದಲಾಯಿತು. ಈ ಲಿಪಿಯ ಹೆಸರು ಲಲಿತವಿಸ್ತಾರ ಮತ್ತು ಚೀನಾದ ವಿಶ್ವಕೋಶ ಫಾ-ವನ್-ಷು-ಲಿನ್‌ನಲ್ಲಿ ಉಲ್ಲೇಖಗೊಂಡಿದೆ. ಆದರೂ ೧೮-೧೯ನೆಯ ಶತಮಾನದ ವಿದ್ವಾಂಸರು ಖರೋಷ್ಠಿ ಲಿಪಿಯನ್ನು ಬೇರೆ ಬೇರೆ ಹೆಸರುಗಳಿಂದ ಕರೆದಿರುತ್ತಾರೆ. ಕನ್ನಿಂಗ್ ಹ್ಯಾಂ ಈ ಲಿಪಿಯನ್ನು ಮೊದಲು ಬ್ಯಾಕ್ಟ್ರಿಯಾದ ಗ್ರೀಕ್ ಅರಸರ ನಾಣ್ಯಗಳಲ್ಲಿ ಗಮನಿಸಿ ಅದನ್ನು 'ಬ್ಯಾಕ್ಟ್ರಿಯನ್ ಲಿಪಿ' ಎಂದು ಕರೆದ. (Cions of India p.31.) ಆದರೆ ಈ ಪ್ರದೇಶವನ್ನು ಆಳಿದ ರಾಜರು ಭಾರತದೊಡನೆ ಸಂಪರ್ಕವನ್ನು ಇಟ್ಟುಕೊಂಡಿದ್ದುದರಿಂದ ಇದನ್ನು ಕೆಲವೊಮ್ಮೆ 'ಇಂಡೋ-ಬ್ಯಾಕ್ಟ್ರಿಯನ್' ಎಂದೂ ಕರೆದ. ಈ ಲಿಪಿಯು ಹಿಂದೂಕುಷ್ ಪರ್ವತದ ಉತ್ತರಕ್ಕೆ ಕಂಡುಬಂದಿಲ್ಲ. ಸಿಂಧೂನದಿಯ ಪಶ್ಚಿಮಕ್ಕೆ ಏರಿಯಾನಾದಿಂದ ಪೂರ್ವಕ್ಕೆ ಪಂಜಾಬ್ ವರೆಗೆ ಹಬ್ಬಿದುದರಿಂದ ಇದನ್ನು ಲಾಸನ್‌ನು 'ಕಾಬೂಲಿಯನ್' ಲಿಪಿ ಎಂದು ಕರೆದ. ವಿಲ್ಸನ್ ಎಂಬುವವನು 'ಏರಿಯಾನಿಯನ್' ಎಂದು ಕರೆದ ಕನ್ನಿಂಗ್ ಹ್ಯಾಂ ಈ ಎರಡೂ ಪದಗಳನ್ನು ವಿರೋಧಿಸಿ 'ಗಾಂಧಾರಿಯನ್' ಎಂದು ಕರೆದ. ಈ ಲಿಪಿಯ ಶಾಸನಗಳಲ್ಲಿ ಬಳಸಿರುವ ಭಾಷೆ ಪಾಳಿ ಅಥವಾ ಪ್ರಾಕೃತ. ಈ ಕಾರಣದಿಂದ ಕೆಲವರು ಇದನ್ನು 'ಬ್ಯಾಕ್ಟ್ರೋಪಾಳಿ ಅಥವಾ ಏರಿಯಾನೋ ಪಾಳಿ' ಎಂಬ ಹೆಸರಿನಲ್ಲಿಯೂ ಕರೆದರು. ಸಿಲ್ವಿಯನ್‌ಲೆವಿ ಎಂಬುವವನು ಈ ಲಿಪಿಯನ್ನು 'ಖರೋಷ್ಠಿ' ಎಂದು ಕರೆದ. (Asoka-Radhakumudamukarji Appendix 3.) ಆದರೆ ಬ್ಯೂಹ್ಲರ್ ಹೆಸರು ನೀಡಿದ್ದೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. (ದಾನಿ. ಪು.೨೫೦) ಒಟ್ಟಿನಲ್ಲಿ ಫ-ವಾನ್-ಷು-ಲಿನ್ ಎಂಬ ಗ್ರಂಥದ ಉಲ್ಲೇಖದ ಆಧಾರದಿಂದ ಇದನ್ನು ಖರೋಷ್ಠಿ ಅಥವಾ ಖರೋಶ್ಠಿ ಎಂದು ಕರೆಯಲಾಯಿತು. ಚೀನಾದ ಗ್ರಂಥವು ಈ ಲಿಪಿಯನ್ನು ಕತ್ತೆಯ ಲಿಪಿ (ಖರ-ಉಷ್ಟ್ರ) ಎಂದೂ, ಬಲದಿಂದ ಎಡಕ್ಕೆ ಬರೆಯುವ ಲಿಪಿ ಎಂದೂ, ಇದನ್ನು ಖರೋಷ್ಠ ಎಂಬುವವನು ಕಂಡುಹಿಡಿದನೆಂದೂ ಹೇಳಿದೆ. (JRAS.1920, R.D.Banerji)

ದಾನಿಯವರು ಈ ಲಿಪಿಯ ಬಗ್ಗೆ ಬರೆಯುತ್ತಾ ಖರ-ಓಷ್ಠ ಎಂಬ ಶಬ್ದವು ಪರ್ಷಿಯಾದಲ್ಲಿ ಖರ್-ಪೋಸ್ತ್ ಎಂದರೆ ಕತ್ತೆಯ ತುಟಿ ಎಂದರ್ಥ. ಅದೇ ಭಾಷೆಯಲ್ಲಿ ಖರ್-ಉಸ್ತರ್

ಎಂದರೆ ಕತ್ತೆ ಅಥವಾ ಒಂಟೆ ಎಂದರ್ಥ. ಇದಕ್ಕೆ ಕಾರವಾನ್, ವ್ಯಾಪಾರಿ ಎಂಬ ಅರ್ಥವೂ ಇದೆ. ಅರಾಮಿಯಾದಲ್ಲಿ ಹರೂತ್ಥ ಎಂದರೆ ಕೊರೆಯುವುದು, ಬರೆಯುವುದು ಎಂದರ್ಥ. ಇವುಗಳಲ್ಲಿ ಯಾವ ಅರ್ಥ ನೀಡುವುದೂ ಕಷ್ಟ. ಬಹು ಹಿಂದಿನಿಂದಲೇ ಈ ಲಿಪಿಗೆ ಈ ಹೆಸರು ಅಂಟಿಕೊಂಡಿದೆ ಎಂದಿರುತ್ತಾರೆ. (ದಾನಿ. ಪುಟ.೨-೩)

ಈ ಲಿಪಿಯ ಶಾಸನಗಳನ್ನು ಓದಲು ಸಾಧ್ಯವಾದದ್ದು ಇಂಡೋ-ಸಿಥಿಯನ್ನರ ಗ್ರೀಕ್ ಮತ್ತು ಬ್ರಾಹ್ಮಿ ಸಮೇತವಿರುವ ಶಾಸನಗಳಿಂದ ಇವು ಖರೋಷ್ಠಿ ಅಕ್ಷರ ಉಚ್ಚಾರವನ್ನು ಗುರುತಿಸಲು ಸಹಾಯವಾದವು. ರಾಜರ ಹೆಸರುಗಳನ್ನು ಮತ್ತು ಬಿರುದುಗಳನ್ನು ಮೊದಲು ಗುರುತಿಸಲಾಯಿತು. ಈ ಶೋಧನೆಯ ಸಹಾಯದಿಂದ ಷಹಬಾಜ್‌ಗರ್ ಮತ್ತು ಕಾಂಗ್ರಾ ಶಾಸನಗಳನ್ನು ಓದಲು ಸಾಧ್ಯವಾಯಿತು.

ಖರೋಷ್ಠಿ ಲಿಪಿಯ ಶಾಸನಗಳು ಆಫ್ಘಾನಿಸ್ತಾನದ ಖವತ್ ಮತ್ತು ಬಲೂಚಿಸ್ತಾನದ ಥಲ್ ಕಣಿವೆಯಲ್ಲಿ ದೊರೆತಿವೆ. ಈ ಪ್ರದೇಶದಲ್ಲಿ ದೊರೆತ ಶಾಸನಗಳು ವಲಸಿಗರು ಬರೆದ ಶಾಸನಗಳಾಗಿವೆ. ಉತ್ತರದಲ್ಲಿ ಸ್ವಾತ್‌ನ ತೀರಥ್ ಮತ್ತು ಲಡಾಖಿನ ಖಲತ್ಸೆ ಎಂಬಲ್ಲಿ ದೊರೆತಿವೆ. ದಕ್ಷಿಣದಲ್ಲಿ ಲಾರ್ಖಾನ್ ಜಿಲ್ಲೆಯ ಮೊಹೆಂಜೋದಾರೋದಲ್ಲಿ ಕೆಲವು ನಾಣ್ಯಗಳು ಮತ್ತು ಪಶ್ಚಿಮ ಕ್ಷತ್ರಪರ ಶಾಸನಗಳು ದೊರೆತಿವೆ. ಭಾರತದ ಒಳಭಾಗದಲ್ಲಿ ಭರಹೂತ್, ಉಜ್ಜೈನಿ ಮತ್ತು ಬ್ರಹ್ಮಗಿರಿಗಳಲ್ಲಿ ಈ ಲಿಪಿಯ ಉದಾಹರಣೆಗಳು ಸಿಕ್ಕಿವೆ. ಬ್ರಹ್ಮಗಿರಿಯ 'ಲಿಪಿಕರೇಣ' ಎಂಬುದು ಖರೋಷ್ಠಿ ಲಿಪಿಕಾರ ಉತ್ತರದಿಂದ ದಕ್ಷಿಣಕ್ಕೆ ಬಂದಿದ್ದುದ್ದನ್ನು ಸೂಚಿಸುತ್ತದೆ. ಇದಲ್ಲದೆ ಚೀನಾ ತುರ್ಕಿಸ್ತಾನ್‌ದಲ್ಲಿಯೂ ಖರೋಷ್ಠಿ ಲಿಪಿಯಲ್ಲಿ ಬರೆದಿರುವ ಸಂಸ್ಕೃತ ಗ್ರಂಥ ದೊರೆತಿದೆ. ಈ ಎಲ್ಲಾ ಶಾಸನಗಳನ್ನು ಗಮನಿಸಿದಾಗ ಖರೋಷ್ಠಿಯು ಎಲ್ಲಾ ಕಾಲದಲ್ಲಿಯೂ ತನ್ನ ಏಕರೂಪತೆಯನ್ನು ಕಾಯ್ದುಕೊಂಡಿರುವುದನ್ನು ಕಾಣಬಹುದು. ಹೀಗಾಗಿ ಬ್ರಾಹ್ಮಿಯಂತೆ ಇದಕ್ಕೆ ಶಾಖೆಗಳಿಲ್ಲ, ಬೆಳವಣಿಗೆಯಿಲ್ಲ.

ಖರೋಷ್ಠಿ ಲಿಪಿಯು ಮುಖ್ಯವಾಗಿ ಅಶೋಕನ ಕಾಲದಿಂದ ಆರಂಭವಾಗಿ ಕ್ರಿ.ಶ.೩-೪ನೆಯ ಶತಮಾನದವರೆಗೆ ಭಾರತದಲ್ಲಿ ಬಳಕೆಯಿರುತ್ತದೆ. ಮುಂದೆ ಭಾರತೀಕರಣಗೊಂಡ ವಿದೇಶಿ ರಾಜರು ಖರೋಷ್ಠಿಯನ್ನು ಬಿಟ್ಟು ಬ್ರಾಹ್ಮಿಲಿಪಿಯನ್ನು ಬಳಸುತ್ತಾರೆ. ಕ್ರಿ.ಶ.೮ನೆಯ ಶತಮಾನದವರೆಗೆ ಚೈನಾ, ತುರ್ಕಿಸ್ತಾನದಲ್ಲಿ ಬಳಕೆಯಲ್ಲಿತ್ತು. (ದಾನಿ.ಪು.೨) ಆದರೂ ಹೂಣರ ಅವಸಾನದೊಂದಿಗೆ ಈ ಲಿಪಿಯು ಮರೆಯಾಗುತ್ತದೆ. ಬೂಹ್ಲರ್ ಅವರು ಈ ಲಿಪಿಯನ್ನು (೧) ಮೌರ್ಯರ ಕಾಲದ ಲಿಪಿ, (೨) ಕ್ರಿ.ಪೂ.೨ರಿಂದ ೧ನೆಯ ಶತಮಾನದ ಇಂಡೋ-ಗ್ರೀಕ್ ನಾಣ್ಯಗಳು (೩) ಕ್ರಿ.ಪೂ.೧ ರಿಂದ ಕ್ರಿ.ಶ.೧ ರವರೆಗೆ ಶಕರ ಲಿಪಿಗಳು. (೪) ಕುಶಾನರ ಲಿಪಿಗಳು ಎಂದು ವಿಂಗಡಿಸುತ್ತಾರೆ. ಆದರೆ ಫ್ಲೀಟರು ಮೂರು ಮತ್ತು ನಾಲ್ಕನೆಯ ಗುಂಪಿನ ಲಿಪಿಗಳು ಒಂದೇ ಆಗಿವೆ ಎಂದಿದ್ದಾರೆ. ಬ್ರಾಹ್ಮಿಯಂತೆ ಈ ಖರೋಷ್ಠಿ ಲಿಪಿಯನ್ನು ಲೋಹ ಮತ್ತು ಲೋಹ ಕರಂಡಗಳು, ನಾಣ್ಯಗಳು, ಭೂರ್ಜಪತ್ರಗಳ ಮೇಲೆ ಅಲ್ಲದೆ ಮರ ಮತ್ತು ಚರ್ಮದ ಮೇಲೆಯೂ ಬರೆದಿದ್ದಾರೆ. ಈ ಎಲ್ಲಾ ವಸ್ತುಗಳ ಮೇಲಿನ ಬರವಣಿಗೆಯಲ್ಲಿ ಯಾವ ಬದಲಾವಣೆಯೂ ಇಲ್ಲದೆ ಏಕತಾನತೆಯನ್ನು ಹೊಂದಿದೆ. ಖರೋಷ್ಠಿಯಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಧ್ವನಿವ್ಯತ್ಯಾಸ ಸೂಚಿಸುವ ಕೆಲವು ಗೆರೆಗಳನ್ನು ಅಳವಡಿಸಿಕೊಂಡದ್ದು. ಈ ಗೆರೆಗಳನ್ನು

ಬಳಸಿದ್ದರೂ ಇವುಗಳ ಅಕ್ಷರರೂಪದಲ್ಲಿ ಹೆಚ್ಚಿನ ಬದಲಾವಣೆಯಾಗಲಿಲ್ಲ. ಖರೋಷ್ಠಿ ಲಿಪಿಯು ಒಂದೇ ಲಿಪಿಮಾಲೆಯನ್ನು ಹೊಂದಿದ್ದು, ಅದರಿಂದ ಸಂಸ್ಕೃತ ಅಥವಾ ವಿದೇಶಿ ಭಾಷೆಯ ಶಬ್ದವನ್ನು ಬರೆಯಬಹುದಾಗಿದೆ.

ಬರೆವಣಿಗೆಯ ರೀತಿ


ಖರೋಷ್ಠಿಯು ಲೇಖನಿಯಿಂದ ಬರೆಯುವ ಲಿಪಿಯಾಗಿದ್ದು ಒಂದೇ ರೀತಿಯ ಲೇಖನಿಯನ್ನು ಎಲ್ಲಾ ಕಾಲದಲ್ಲಿಯೂ ಬಳಸಲಾಗಿದೆ. ಲೋಹದ ಮೇಲೆ ಬರೆಯಬೇಕಾದಲ್ಲಿ ಚುಕ್ಕೆಗಳ ಮೂಲಕ ಬರೆಯಲಾಗಿದೆ. ಬಳಪದ ಕಲ್ಲಿನ ಕರಂಡಕಗಳ ಮೇಲೆ ಬರೆಯುವಾಗ ಚೂಪಾದ ಮೊಳೆಯಿಂದ (ಕಂಠ) ಗೀಚಿದ ಗೆರೆಗಳಂತೆ ಬರೆಯಲಾಗಿದೆ. ನಾಣ್ಯಗಳ ಮೇಲೆ ಕೆಲವು ಹೆಚ್ಚಿನ ಗೆರೆಗಳನ್ನು ಬಿಡಿಸಲಾಗಿದೆ.

ಖರೋಷ್ಠಿಯ ಮೂಲ

ಖರೋಷ್ಠಿಯು ಬಲದಿಂದ ಎಡಕ್ಕೆ ಬರೆಯುವ ಲಿಪಿ. ಹೀಗಾಗಿ ಇದನ್ನು ಅರಾಮಿಯಾ ಲಿಪಿಯಿಂದ ಬಂದಿದೆಯೆಂದು ಹೇಳಬಹುದು. ಈ ಅರಾಮಿಯಾ ಲಿಪಿಯು ಉತ್ತರ ಸೆಮೆಟಿಯಾದ ಶಾಖೆ. ಖರೋಷ್ಠಿಯ ನ, ಬ, ರ ಮತ್ತು ವ ಕಾರಗಳು ಅರಾಮಿಯಾದಂತೆಯೇ ಇವೆ. ಇಸ್ಸಾಕ್ ಟೈಲರನ ಪ್ರಕಾರ ಖರೋಷ್ಠಿಯ ಮೂಲವನ್ನು ಅಶೋಕನ ಶಾಸನಗಳ ಬೆಳವಣಿಗೆಯಲ್ಲಿ ಗುರುತಿಸಬಹುದು ಹಾಗೂ ಇದು ಅಖಮೇನಿಯರ ಆಶ್ರಯದಲ್ಲಿ ಬೆಳೆಯಿತು ಎಂದಿರುತ್ತಾರೆ. ಆದರೆ ಕನ್ನಿಂಗ್‌ಹ್ಯಾಮನು ಭಾರತೀಯ ಲಿಪಿಗಳು ಚೆನ್ನಾಗಿ ವಿಕಾಸ ಹೊಂದಿದ ಮೇಲೆ ಈ ಲಿಪಿ ಉಗಮಿಸಿರಬೇಕೆಂದು ಅಭಿಪ್ರಾಯಪಡುತ್ತಾನೆ.

ಖರೋಷ್ಠಿಯನ್ನು ಭಾರತಕ್ಕೆ ಬಂದ ಪರಕೀಯ ಧಾಳಿಕಾರರು ತಮ್ಮ ಸಂಬಂಧಗಳನ್ನು ಬೆಳೆಸಲು ಮತ್ತು ಆಡಳಿತಾತ್ಮಕ ಅವಶ್ಯಕತೆಗಳನ್ನು ಸ್ಥಳೀಯವಾಗಿ ಪೂರೈಸಲು ಬಳಸಿರಬಹುದಾದ ಲಿಪಿಯಾಗಿದೆ. ಇದನ್ನು ಅರಾಮಿಯ ಬಲ್ಲಂಥ ಆಡಳಿತಗಾರರು ಸ್ಥಳೀಯ ಭಾಷೆಗೆ ತಕ್ಕಂತೆ ಬಳಸಿಕೊಂಡರೆನ್ನಬಹುದು. ಈ ಲಿಪಿಯನ್ನು ಭಾರತವನ್ನಾಳಿದ ವಿದೇಶಿ ಅರಸರು ಮಾತ್ರ ಬಳಸಿದ್ದಾರೆ. ತಮ್ಮ ಆಡಳಿತದ ಉದ್ದೇಶಕ್ಕಾಗಿ ಅರಾಮಿಯಾದಿಂದ ಖರೋಷ್ಠಿಯನ್ನು ಸೃಷ್ಟಿಸಿದರು. ಮುಂದೆ ಆ ಲಿಪಿಯನ್ನು ಶಕ, ಕ್ಷತ್ರಪರು ಮಥರಾಕ್ಕೆ, ಪಶ್ಚಿಮ ಕ್ಷತ್ರಪರು ಗುಜರಾತಿಗೆ ಹರಡಿದರು.

ಅರಾಮಿಯಾ ಲಿಪಿ ಅರಾಮಿಯಾ ಭಾಷೆಗೆ ಹೊಂದಿಕೆಯಾಗುತ್ತದೆ. ಆದರೆ ಅರಾಮಿಯಾ ಲಿಪಿಯಲ್ಲಿ ಬೇರೆ ಭಾಷೆಯನ್ನು ಬರೆಯಲು ಪೂರ್ಣ ಸಾಧ್ಯವಿಲ್ಲ, ಹೀಗಾಗಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಿತ್ತು. ಅರಾಮಿಯಾ ಲಿಪಿಗೆ ಧ್ವನಿವ್ಯತ್ಯಾಸ ಸೂಚಿ ಗೆರೆಗಳನ್ನು ಸೂಚಿಸುವುದರ ಮೂಲಕ ಜಟಿಲವಾಯಿತು. ಖರೋಷ್ಠಿಯ ಅಕ್ಷರಗಳ ರೀತಿ ಮೂಲ ಅರಾಮಿಯಾ ಲಿಪಿಯಿಂದ ಕ್ರಮಕ್ರಮವಾಗಿ ವರ್ಗಾವಣೆ ಆಗಲಿಲ್ಲ. ಒಂದು ಧ್ವನಿಯನ್ನು ಒಳಗೊಂಡ ಉಚ್ಚಾರವೂ ಆಗಿದ್ದ ಪೂರ್ಣ ಲಿಪಿಯಾಗಿಲ್ಲ. ಒಂದು ಧ್ವನಿ ಹಾಗೂ ವರ್ಣದ ಆಕಾರವನ್ನು ಪಡೆದಿದೆ. ಇದರ ಧ್ವನಿಯು ಬ್ರಾಹ್ಮಿ ಲಿಪಿಯೊಂದಿಗೆ ಹೋಲಿಕೆ ಪಡೆದಿದೆ. ಆದರೆ ಅಕ್ಷರ ರೂಪಗಳು ಪೂರ್ಣವಾಗಿ ವ್ಯತ್ಯಾಸವಾಗಿವೆ. ಅರಾಮಿಯಾ ರೂಪಗಳನ್ನೇ ಖರೋಷ್ಠಿಯು ಪೂರ್ಣವಾಗಿ ಹೊಂದಿದೆ. ಸ್ಥಳೀಯ ಭಾಷೆಯ ಉಚ್ಚಾರವನ್ನು ಅರಾಮಿಯಾ ಲಿಪಿಯಲ್ಲಿ ಬರೆಯಲು ಸಾಧ್ಯವಿಲ್ಲದ್ದರಿಂದ ಈ ಬದಲಾವಣೆ ಮಾಡಿಕೊಂಡರು.




ಅಶೋಕನ ಕಾಲದ ಖರೋಷ್ಠಿ ವರ್ಣಮಾಲೆ ದೇ.ಕೊ. ರೆಡ್ಡಿ


ಖರೋಷ್ಠಿಯು ಪಾಳಿಭಾಷೆಯ ಅಗತ್ಯಕ್ಕೆ ತಕ್ಕಂತೆ, ಅದರ ವ್ಯಾಕರಣ ತತ್ವಕ್ಕೆ ಅನುಗುಣವಾಗಿ ಅಷ್ಟೇ ಸಂಖ್ಯೆಯ ಅಕ್ಷರಗಳನ್ನು ವೃದ್ಧಿಸಿಕೊಂಡಿತು. ಸಂಯುಕ್ತಪದಗಳೂ ಸಹ ಹಾಗೆಯೇ ರೂಪುಗೊಂಡಿವೆ. ಮುಖ್ಯವಾದ ವ್ಯತ್ಯಾಸವಿರುವುದು ಸ್ವರಗಳಲ್ಲಿ. ಬ್ರಾಹ್ಮಿಯಲ್ಲಿ ಮೂಲತಃ ಅ, ಇ, ಉ, ಎ, ಓ ಗಳಿಗೆ ಪ್ರತ್ಯೇಕ ಅಕ್ಷರಗಳಿದ್ದರೆ ಖರೋಷ್ಠಿಯಲ್ಲಿ 'ಅ' ಕಾರ ಮಾತ್ರ ಇದ್ದು ಉಳಿದ ಸ್ವರಗಳನ್ನು ಸೂಚಿಸಲು 'ಅ' ಕಾರದ ಚಿಹ್ನೆಗೆ ವ್ಯತ್ಯಾಸ ಸೂಚಿಗೆರೆಗಳನ್ನು (diacritic marks) ಬಳಸಿದ್ದಾರೆ. (ಗುಣಿತ) ದೀರ್ಘಸ್ವರಗಳಿಲ್ಲ (medial). ಹೀಗಾಗಿ ಖರೋಷ್ಠಿಯು ಪಾಳಿ ಭಾಷಾ ವ್ಯಾಕರಣಕ್ಕೆ ತಕ್ಕಂತೆ ರೂಪುಗೊಂಡಿದೆ. ಖರೋಷ್ಠಿಯು ಅಕ್ಷರದ ಕೆಳಗೆ ಬಲಗಡೆಗೆ ಹೆಚ್ಚುವರಿ ಗೆರೆಯನ್ನು ನೀಡಿ ದೀರ್ಘಗಳನ್ನು ರೂಪಿಸಿಕೊಂಡಿದ್ದರೆ ಬ್ರಾಹ್ಮಿಯಲ್ಲಿ ಇವು ಎರಡು ಗೆರೆಗಳಾಗುತ್ತವೆ.

ಅರಾಮಿಯಾ ಲಿಪಿಯ ಚಿಹ್ನೆಗಳನ್ನು ಖರೋಷ್ಠಿಲಿಪಿಗೆ ಪೂರ್ಣವಾಗಿ ತರಲಿಲ್ಲ. ಲಿಪಿಗೆ ಬೇಕಾದ ರೀತಿಯಲ್ಲಿ ಅದನ್ನು ವಿಕಾಸನಗೊಳಿಸಿಕೊಂಡಿದೆ. ಖರೋಷ್ಠಿಯು ಅರಾಮಿಯಾದ ೨೨ ಅಕ್ಷರಗಳನ್ನು ತೆಗೆದುಕೊಂಡಿದೆ.

ಅಲೇಫ್	- ಅ	ಯೋಎ್	- ಯ
ಕಾಫ್	- ಕ	ರೇಷ್	- ರ



ಇವಲ್ಲದೆ ಮೂಲದ ಸ್ವರಕ್ಕೆ ಪ್ರತ್ಯೇಕಿಸುವ ಚಿಹ್ನೆಯನ್ನು ತೋರಿಸುವ ಮೂಲಕ ಇತರೆ ಸ್ವರಗಳನ್ನು ಸೃಷ್ಟಿಸಲಾಗಿದೆ. ಖರೋಷ್ಠಿ ಲಿಪಿಯಲ್ಲಿ ಇ, ಉ, ಏ, ಓ ಗಳನ್ನು ಸೂಚಿಸಲು 'ಅ' ಕಾರದ ಕಾಗುಣಿತ ಬಳಸುವ ಗೆರೆಯನ್ನು ಬೇರೆ ಬೇರೆ ಕಡೆ ನೀಡುವ ಮೂಲಕ ಈ ಲಿಪಿಯನ್ನು ಸರಳಗೊಳಿಸಲಾಗಿದೆ. 'ಇ' ಕಾರವನ್ನು ಸೂಚಿಸಲು 'ಅ' ಅಕ್ಷರದ ಎಡಭಾಗದಲ್ಲಿ ಅಕ್ಷರವನ್ನು ಭೇದಿಸಿರುತ್ತದೆ ಅಥವಾ ಮುಂಬದಿಯಲ್ಲಿ ಹಾದುಹೋಗಿರುತ್ತದೆ. 'ಏ' ಕಾರವು 'ಇ' ಕಾರವನ್ನು ಸೂಚಿಸುವ ಗೆರೆಯ ಅರ್ಧದಷ್ಟಿದ್ದು ಅಕ್ಷರದ ತಲೆಯ ಮೇಲೆ ಮೂಡಿರುತ್ತದೆ. 'ಉ' ಕಾರವು 'ಅ' ಅಕ್ಷರದ ಎಡಭಾಗಕ್ಕೆ ಕೆಳಭಾಗದಲ್ಲಿ ಬಂದಿರುತ್ತದೆ. ಕೆಲವೊಮ್ಮೆ ಅಕ್ಷರದ ಎಡಕ್ಕೆ ತಿರುಗಿದಂತೆ ತೋರಿಸಿರುತ್ತಾರೆ. 'ಓ' ಕಾರವು ಅಕ್ಷರದ ಕೆಳಗೆ ಎಡಭಾಗಕ್ಕೆ ಕಾಣಿಸಿಕೊಳ್ಳುತ್ತದೆ. 'ಅಂ' ಅನುಸ್ವಾರವು ಅಕ್ಷರಗಳ ಕೆಳಗೆ 'ಮ' ಕಾರವನ್ನು ಚಿಕ್ಕದಾಗಿ ಬರೆಯುವ ಮೂಲಕ ತೋರಿಸಲಾಗಿದೆ. ಒತ್ತಕ್ಷರಗಳನ್ನು ಒಂದು ಅಕ್ಷರದಲ್ಲಿ ಇನ್ನೊಂದು ಅಕ್ಷರವನ್ನು ತೋರಿಸುವುದರ ಮೂಲಕ ಸೂಚಿಸಿರುತ್ತಾರೆ.



ದೇ.ಕೊ. ರೆಡ್ಡಿ

ಷಹಬಾಜ್‌ಗರ್

ಖರೋಷ್ಠಿ ಯ ಶಾಸನ

ದೀರ್ಘ, ವೃದ್ಧಿ ಮತ್ತು ಗುಣವನ್ನು ತೋರಿಸಲು ಒಂದು ಪ್ರತ್ಯೇಕ ಚಿಹ್ನೆಯನ್ನು ಬಳಸಲಾಗಿದೆ.

ಮೇಲೆ ಸೂಚಿಸಿರುವ ಅಕ್ಷರಗಳಲ್ಲಿ ೧೭ ಅಕ್ಷರಗಳು ಅರಾಮಿಯಾ ಮೂಲದವು.

ಘ, ಛ, ಝ, ಧ, ಫ ಮತ್ತು ಭ ಇವುಗಳಿಗೆ ಪ್ರತ್ಯೇಕ ಚಿಹ್ನೆಯನ್ನು ತೋರಿಸುವ ಮೂಲಕ ಸೃಷ್ಟಿಸಲಾಗಿದೆ.

ಖ, ಶ, ಥ ಇವು ಅರಾಮಿಯಾ ಮೂಲದವು.

ಟ, ಠ, ಡ, ಢ – ಮೂರ್ಧನ್ಯಾಕ್ಷರಗಳು ಛ ಅಕ್ಷರವನ್ನು ಮೂಲವಾಗಿ ಪಡೆದಿವೆ.


ನಾಸಿಕಗಳಾದ ಮ, ನ ಅಕ್ಷರಗಳು ಅರಾಮಿಯಾ ಮೂಲದವು.

ನಾಸಿಕ ಅಕ್ಷರ ಐ, ಜಕಾರ ಅಥವಾ ಝಕಾರ ಮೂಲದ್ದು.

ಈ ಅಕ್ಷರವು ಬ್ರಾಹ್ಮಿಯಿಂದ ನಿಷ್ಪನ್ನವಾಗಿರಬೇಕು. ಇವಲ್ಲದೆ ಠ, ಭ ಅಕ್ಷರಗಳಲ್ಲಿ ಠಕಾರಕ್ಕೆ ಹೆಚ್ಚಿನ ಗೆರೆ ಎಳೆಯುವ ಮೂಲಕ ಸೂಚಿಸಲಾಗಿದೆ. 'ಭ' ಅಕ್ಷರದಲ್ಲಿ ಹೆಚ್ಚಿನ ಅಡ್ಡಗೆರೆಯನ್ನು ತೆಗೆಯಲಾಗಿದೆ. ಇದಕ್ಕೆ ಬದಲಾಗಿ ಅಕ್ಷರದ ಕೆಳಗೆ ಒಂದು ಗೆರೆಯನ್ನು ಮೇಲ್ಮುಖವಾಗಿ ಎಳೆಯಲಾಗಿದೆ.

ಅಶೋಕನ ನಂತರದ ಲಿಪಿಗಳು

ಅಶೋಕನ ಆಳ್ವಿಕೆಯ ನಂತರ ಅವನು ಬಳಸಿದ ಲಿಪಿಗಳನ್ನು ಮುಂದಿನ ಎಲ್ಲಾ ರಾಜರೂ ಬಳಸುತ್ತಾರೆ. ಬ್ರಾಹ್ಮಿಯನ್ನು ಮಧ್ಯ, ಪೂರ್ವ ಮತ್ತು ದಕ್ಷಿಣ ಭಾರತದಲ್ಲೂ ಖರೋಷ್ಠಿಯನ್ನು ವಾಯುವ್ಯ ಪ್ರಾಂತ್ಯದಲ್ಲೂ ಬಳಸುತ್ತಾರೆ. ಖರೋಷ್ಠಿಯನ್ನು ಬಿಟ್ಟು ಉಳಿದಂತೆ ಬ್ರಾಹ್ಮಿಲಿಪಿಯು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಮುಂದುವರಿಯುತ್ತದೆ. ಈ ಬದಲಾವಣೆ ಅತ್ಯಲ್ಪ. ಅನೇಕ




EI. XVIII.p 160 ದೇ.ಕೊ. ರೆಡ್ಡಿ
ಕೋಸಂ ಶಾಸನ

ದ್ವಿಭಾಷಾ ನಾಣ್ಯಗಳು ಈ ಕಾಲಕ್ಕೆ ಬಿಡುಗಡೆಯಾಗಿವೆ. ಇದಲ್ಲದೆ ಅಶೋಕನ ಕಾಲದಲ್ಲಿ ರಾಜಮನೆತನದವರು ಮಾತ್ರ ಶಾಸನಗಳನ್ನು ಹೊರಡಿಸಿದ್ದರು. ಈ ಕಾಲಕ್ಕೆ ರಾಜಮನೆತನದವರು, ಅಧಿಕಾರಿಗಳು ಮತ್ತು ಜನರು ಶಾಸನಗಳನ್ನು ಹಾಕಿಸಿರುತ್ತಾರೆ. ಮೌರ್ಯ ಸಾಮ್ರಾಜ್ಯವು ಮುಂದೆ ನಾಶವಾಗಿ ಭರತಖಂಡ ಚಿಕ್ಕ ಚಿಕ್ಕ ರಾಜ್ಯಗಳಾಗಿ ಹಂಚಿಹೋಗುತ್ತದೆ. ಮುಂದೆ ಸ್ಥಳೀಯ ಭಾಷೆ ಹಾಗೂ ಸಂಸ್ಕೃತದಲ್ಲಿ ಶಾಸನಗಳು ರಚಿತವಾಗುತ್ತವೆ. ಇವುಗಳಲ್ಲಿ ಅಶೋಕನ ಲಿಪಿಗಳಲ್ಲಿ ಕಾಣದ ಅನೇಕ ಹೊಸ ಅಕ್ಷರಗಳು ಹಾಗೂ ಸಂಯುಕ್ತಾಕ್ಷರಗಳು ಕಾಣಬರುತ್ತವೆ. ಈ ಕಾರವು ಇ ಕಾರಕ್ಕೆ ಇನ್ನೊಂದು ಹೆಚ್ಚಿನ ಚುಕ್ಕೆಯನ್ನು ಸೇರಿಸುವ ಮೂಲಕ ಬಂದಿದೆ. ಊ ಕಾರ ಮತ್ತು ಉ ಕಾರಕ್ಕೆ ಹೆಚ್ಚಿನ ಗೆರೆ ಸೇರಿಸಲಾಗಿದೆ. ಐ ಕಾರ ಸೃಷ್ಟಿಸಲು ಏ ಕಾರಕ್ಕೆ ಮೇಲೆ ಒಂದು ಗೆರೆಯನ್ನು ಎಳೆಯುವ ಮೂಲಕ ಸೂಚಿಸಿದೆ. ಇವಲ್ಲದೆ ತಕೆ ್ಕ ರ ಕಾರವನ್ನು ಒತ್ತಕ್ಷರವಾಗಿ ನೀಡಿದೆ. ಋ ಕಾರವನ್ನು ವ್ಯಂಜನಗಳಿಗೆ ನೀಡಲಾಗಿದೆ. ಇದಲ್ಲದೆ ಸ್ಥಳೀಯವಾಗಿ ಬಳಕೆಯಿದ್ದ ಭಾಷೆಗೆ ಬೇಕಾದ 'ಳ' ಕಾರದ ಪ್ರಯೋಗ ಇಲ್ಲಿ ಕಾಣುತ್ತದೆ. ಇದನ್ನು ಟ ಕಾರದ ಕೆಳಗೆ ಗೆರೆ ಎಳೆಯುವ ಮೂಲಕ ಸೂಚಿಸಿದೆ. ಅಶೋಕನ ಲಿಪಿಗಳಲ್ಲಿ ಬದಲಾವಣೆಯೂ ಈ ಕಾಲಕ್ಕೆ ಆರಂಭವಾಗುತ್ತದೆ. ದಾನಿಯವರು ಈ ಪ್ರಭೇಧಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ. (ದಾನಿ. ಪು.೫೩)

ಪೂರ್ವ ಭಾರತದ ಲಿಪಿಗಳು – ಇದರಲ್ಲಿ ಮಗಧ, ಗಂಗಾನದಿಯ ದಕ್ಷಿಣದ ಕೌಶಾಂಬಿ, ನೈರುತ್ಯಕ್ಕೆ ಭರ್ಹೂತ್, ಪೂರ್ವಕ್ಕೆ ಬೋದಗಯಾ, ದಕ್ಷಿಣಕ್ಕೆ ಹಾಥಿಗುಂಫಾ, ಉತ್ತರಕ್ಕೆ ಗಂಗಾನದಿ, ಉತ್ತರದ ಆಯೋಧ್ಯೆಯ ವರೆಗೆ ವಾಯುವ್ಯ ಭಾರತದ ಲಿಪಿಗಳು. ಈ ಪ್ರದೇಶವು ತಕ್ಷಶಿಲೆ, ಮಥುರಾ, ಮಾಳವ ಪ್ರದೇಶವನ್ನು ಒಳಗೊಂಡಿದೆ.

ಪಶ್ಚಿಮದ ವಾಯುವ್ಯ ಪ್ರದೇಶದ ಲಿಪಿ – ಗುಜರಾತ್, ಮಾಳವದ ದಕ್ಷಿಣ, ನರ್ಮದಾ ನದಿಯ ಪಶ್ಚಿಮ ಭಾಗ.




EI. XIX.p. 67 ಮಥುರಾ ಶಾಸನ


ದಕ್ಷಿಣ ಭಾರತದ ಲಿಪಿಗಳು – ದಖನ್ನಿನ ಪೂರ್ವ ಭಾಗವೂ ಸೇರಿದಂತೆ ಉಳಿದ ಪ್ರದೇಶಗಳು.

ಈ ಪ್ರಬೇಧಗಳಲ್ಲಿನ ವ್ಯತ್ಯಾಸ ಅತ್ಯಲ್ಪ. ಅ, ಕ, ರ ಗಳ ಕೆಳಮುಖಗೆರೆ ಕತ್ತಿಯಂತೆ ಮೇಲಿನಿಂದ ಕೆಳಕ್ಕೆ ಮೊನಚಾಗಿದೆ. ಕಾಗುಣಿತದ ಗೆರೆಗಳು ಸ್ಪಷ್ಟವಾಗಿವೆ. ಸ್ಥಳೀಯ ಅಗತ್ಯಕ್ಕೆ ತಕ್ಕಂತೆ. ಕೆಲವು ಹೊಸ ಅಕ್ಷರಗಳ ಪ್ರವೇಶವಾಗಿವೆ. ಆದರೆ ಈ ಅಲ್ಪ ಸ್ವಲ್ಪ ಬದಲಾವಣೆಗಳೇ ಮುಂದಿನ ಪ್ರಾದೇಶಿಕ ಅಕ್ಷರಗಳಿಗೆ ಮೂಲವಾದವು.

ಬರಾಬರ್ ಗುಹೆಗಳು, ಪಿಪ್ರಾಹ್ವ, ಸ್ಗೊಗಾರ, ಮಹಾಸ್ಥಾನ, ರಾಮಗಡ್, ಬೇಸ್‌ನಗರ್, ಬರ್ಹೂತ್; ಅಯೋಧ್ಯ, ಹಾಥಿಗುಂಪ ಮೊದಲಾದವು ಪೂರ್ವ ಭಾರತದಲ್ಲಿ ಶಾಸನಗಳ ಚಟುವಟಿಕೆಗಳು ನಡೆದ ಸ್ಥಳಗಳು. ವಾಯುವ್ಯ ಭಾರತದಲ್ಲಿ ಹೆಚ್ಚಾಗಿ ವಿದೇಶಿ ರಾಜರಿದ್ದದ್ದರಿಂದ ತಕ್ಷಶಿಲೆ, ಮಥುರಾ, ಕೋಸಂ, ಬರ್ಲಿ, ಘೋಸುಂಡಿ, ಭಿಲ್ಸಾ, ಸಾಂಚಿ, ಕಾಂಗ್ರಾ ಕಣಿವೆ ಮುಂತಾದ ಪ್ರಿರೆಲ್‌ಗಳಲ್ಲಿ ದೊರೆತಿರುವ ಶಾಸನಗಳು ಈ ಗುಂಪಿಗೆ ಸೇರುತ್ತವೆ. ಇದಲ್ಲದೆ ಈ ಪ್ರದೇಶದಲ್ಲಿ ಈ ಕಾಲಕ್ಕೆ ಸೇರುವ ದ್ವಿಭಾಷಾ ನಾಣ್ಯಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆತಿವೆ. ನಂತರ ಪಶ್ಚಿಮ ಭಾರತ ಅಥವಾ ನೈರುತ್ಯ ಭಾರತ ಪ್ರದೇಶದಲ್ಲಿ ನಾನಾಘಾಟದ ಶಾಸನಗಳು, ಕ್ಷತ್ರಪರ ಶಾಸನಗಳು, ಗುಜರಾತಿನ ಶಾಸನಗಳು ಸೇರುತ್ತವೆ. ದಕ್ಷಿಣ ಭಾರತದ ಶಾಸನಗಳಲ್ಲಿ ಸನ್ನತಿ, ಭಟ್ಟಿಪ್ರೋಲು, ಅಮರಾವತಿ, ತಮಿಳುನಾಡಿನ ಗುಹಾಶಾಸನಗಳು ಸೇರುತ್ತವೆ. ತಮಿಳುನಾಡಿನ ಗುಹಾಶಾಸನಗಳಲ್ಲಿ ಶಕಟರೇಫ ಮತ್ತು ೞ ಗಳು ಸೇರ್ಪಡೆಯಾಗುತ್ತವೆ. ಇವು ದ್ರಾವಿಡ ಭಾಷೆಯಲ್ಲಿ ಬಳಕೆಯಲ್ಲಿದ್ದ ವರ್ಣಗಳು.


ಕ್ರಿ.ಶ. ಒಂದನೆಯ ಶತಮಾನದಲ್ಲಿ ಭಾರತದಲ್ಲಿ ಕುಶಾನರ ಆಡಳಿತ ಮುಂದುವರಿದಿರುತ್ತದೆ. ಈ ಕಾಲಕ್ಕೆ ಗುಜರಾತ್ ಮತ್ತು ಮಾಳವ ಪ್ರಾಂತ್ಯಗಳಲ್ಲಿ ಕ್ಷತ್ರಪರ ಆಳ್ವಿಕೆಯಿರುತ್ತದೆ. ದಕ್ಷಿಣದಲ್ಲಿ ಶಾತವಾಹನರು ರಾಜ್ಯಭಾರ ಮಾಡುತ್ತಿರುತ್ತಾರೆ. ಕುಶಾನ, ಶಕ-ಕ್ಷತ್ರಪದ ನಂತರ ಉತ್ತರ ಭಾರತದಲ್ಲಿ ಗುಪ್ತ ಸಾಮ್ರಾಜ್ಯ ತಲೆ ಎತ್ತುತ್ತದೆ. ಈ ಎಲ್ಲಾ ಆಡಳಿತಗಳಲ್ಲಿ ಅವರ ಆಳ್ವಿಕೆಯ ಪ್ರದೇಶಗಳಲ್ಲಿಯೇ ಒಂದೇ ಕಾಲದಲ್ಲಿ ಒಂದೇ ಲಿಪಿ ಬಳಕೆಯಲ್ಲಿ ಇರುವುದಿಲ್ಲ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಲಿಪಿ ಅಲ್ಪ ಸ್ವಲ್ಪ ಬೆಳವಣಿಗೆಯನ್ನು ವ್ಯತ್ಯಾಸವನ್ನು ತೋರಿಸಿವೆ. ಇದಕ್ಕೆ ಹೆಚ್ಚಿದ ಬರವಣಿಗೆಯ ಬಳಕೆ ಹಾಗೂ ಕುಶಲಕರ್ಮಿಗಳು ಮತ್ತು ಶಿಲ್ಪಿಗಳು ಶಾಸನ ರಚನೆಗೆ ಕೈ ಹಾಕಿದ್ದು. ಮೇಲೆ ನೀಡಿರುವ ಮಥುರಾದ ಶಾಸನಗಳಲ್ಲಿ ಗೆರೆಗಳು


ಅಶೋಕನ ಲಿಪಿ
ಅಶೋಕನ ನಂತರದ ಲಿಪಿ
ಅ
ಆ
ಇ
ಈ
ಉ
ಏ
ಓ
ಕ
ಖ
ಗ
ಘ
ಙ
ಚ
ಛ
ಜ
ಝ
ಞ
ಟ
ಠ
ಡ
ಢ



ವೇ.ಕೊ. ರೆಡ್ಡಿ

ದಟ್ಟವಾಗಿದ್ದರೆ ಉಳಿದ ಕಡೆ ತೆಳುವಾಗಿದೆ. ತಲೆಯ ಭಾಗ ಪ್ರಾಮುಖ್ಯವನ್ನು ಪಡೆಯುತ್ತಾ ಹೋಯಿತು. ತ್ರಿಕೋಣಾಕಾರವು ಮುಂದೆ ಸಣ್ಣ ಗೆರೆಯ ರೂಪಕ್ಕೆ ತಿರುಗಿ ಮುಂದೆ ಆ ಗೆರೆ ದಟ್ಟವಾಗಿ ಚೌಕಾಕಾರದ ಮನೆಯಾಯಿತು. ವೃತ್ತಾಕಾರ, ಅರೆ ವೃತ್ತಾಕಾರವಾಗಿದೆ. ಅಕ್ಷರಗಳು ಸರಳರೇಖೆಗಳಿಗೆ ತಿರುಗಿದವು. ಭೂರ್ಜಪತ್ರದ ಮೇಲೆ ಲೆಕ್ಕಣಿಕೆಯಿಂದ ಬರೆಯುವಾಗ ಅಕ್ಷರಗಳ ರೂಪ ವ್ಯತ್ಯಾಸವಾಗುತ್ತಾ ಬಂತು. ಗುಪ್ತರ ಶಾಸನಗಳಲ್ಲಿ ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯ ಅಕ್ಷರಗಳು ಕಾಣಿಸಿಗುತ್ತವೆ. ಗುಪ್ತರು ಉತ್ತರದಲ್ಲಿ ಪ್ರಭಾವಶಾಲಿ ಅರಸರಾಗಿ ಎಲ್ಲ ವಿದೇಶ



ದೇ.ಕೊ. ರೆಡ್ಡಿ

EI. II .p 243 ಮಥುರಾ ಶಾಸನ

ಮೂಲದ ಅರಸರನ್ನು ಸೋಲಿಸಿ ಸಾಮ್ರಾಜ್ಯ ವಿಸ್ತರಿಸುತ್ತಾರೆ. ಇದಲ್ಲದೆ ಕ್ರಿ.ಶ.ಸು.೩೨೦ರಲ್ಲಿ ಆರಂಭವಾದ ಸಾಮ್ರಾಜ್ಯ ಅಂತ್ಯವಾಗುವ ವರೆಗೆ ಸ್ಥಿರ ಸಾಮ್ರಾಜ್ಯವಾಗಿರುತ್ತದೆ. ಹೀಗಾಗಿ ಈ ರಾಜ್ಯದ ಬಳಕೆಯ ಲಿಪಿಗಳು ಗುಪ್ತ ಸಾಮ್ರಾಜ್ಯದಲ್ಲಿಯೇ ಅಲ್ಲದೆ ಅದರ ಪ್ರಭಾವವಿದ್ದ ಸ್ಥಳಗಳಲ್ಲೆಲ್ಲಾ (ದೂರದ ತುರ್ಕಿಸ್ಥಾನದಲ್ಲಿ) ಹರಡುತ್ತದೆ. ಅ, ಕ, ರ ಗಳ ಕೆಳಗೆರೆ ದಕ್ಷಿಣದಲ್ಲಿ ಬೆಳೆದಷ್ಟು ಉತ್ತರದಲ್ಲಿ ಬೆಳೆಯುವುದಿಲ್ಲ. ಶಾತವಾಹನರಲ್ಲಿ ತ್ರಿಕೋಣಾಕಾರದ ತಲೆಕಟ್ಟು ನಿಧಾನವಾಗಿ ಬಳಕೆಗೆ ಬರುತ್ತದೆ. ಹಾಗೆಯೇ ಪೆಟ್ಟಿಗೆಯ ತಲೆಕಟ್ಟುಗಳೂ ಸಹ ಉತ್ತರದವರ ಸಂಪರ್ಕದಿಂದ ದಕ್ಷಿಣಕ್ಕೆ ಹರಡುತ್ತವೆ.

ಇಷ್ಟೆಲ್ಲಾ ಬೆಳವಣಿಗೆ ಆದರೂ ಉತ್ತರ-ದಕ್ಷಿಣ ಲಿಪಿಗಳು ಎರಡು ಕಾರಣಗಳಿಂದ ಬದಲಾಗುತ್ತಾ ಹೋಗುತ್ತವೆ. ಉತ್ತರದಲ್ಲಿ ಬರೆವಣಿಗೆಯ ಸಾಧನಗಳಾದ ಭೂರ್ಜಪತ್ರ ಮತ್ತು ಲೆಕ್ಕಣಿಕೆ, ದಕ್ಷಿಣದಲ್ಲಿ ಬರೆವಣಿಗೆಯ ಸಾಧನಗಳಾದ ತಾಳೆಗರಿ ಮತ್ತು ಕಂಠ. ಒಂದು ರೀತಿಯದು ಲೆಕ್ಕಣಿಕೆಯಿಂದ ಬರೆಯುವ ಬರೆವಣಿಗೆಯಾದರೆ ಇನ್ನೊಂದು ರೀತಿಯದು ಕಂಠದಿಂದ ಕೊರೆಯುವುದು. ಹೀಗಾಗಿ ಲಿಪಿಗಳ ವ್ಯತ್ಯಾಸವಾಗಲು ಕಾರಣವಾಗುತ್ತದೆ.

ಗುಪ್ತರ ಲಿಪಿಗಳು ಅವರ ಆಳ್ವಿಕೆಯ ಪ್ರದೇಶಗಳಾದ ನೇಪಾಳ ಮತ್ತು ಬಂಗಾಳ ಪ್ರದೇಶಗಳಿಗೂ ಹರಡುತ್ತದೆ. ಒರಿಸ್ಸಾ ಪ್ರಾಂತ್ಯದಲ್ಲಿಯೂ ಈ ಲಿಪಿಗಳು ಹರಡುತ್ತವೆ. ಪಾಲರ ಕಾಲದಲ್ಲಿ ಗುಪ್ತರ ಲಿಪಿ ಇನ್ನೂ ಬದಲಾವಣೆಗೆ ಒಳಗಾಗುತ್ತದೆ. ಬಂಗಾಳ ಲಿಪಿಯಿಂದ ಅಸ್ಸಾಂ ಲಿಪಿಯನ್ನು ಪಡೆಯುತ್ತದೆ. ನೇಪಾಳ ಲಿಪಿಯು ಬಂಗಾಳದಲ್ಲಿ ಬಳಕೆಯಲ್ಲಿದ್ದ ಲಿಪಿಯಿಂದ ಬಂದಿದ್ದರೂ ನೇಪಾಳದಲ್ಲಿಯ ಲೇಖನಿ ದಪ್ಪಗಿದ್ದು ಅಕ್ಷರದ ಗೆರೆಗಳು ದಪ್ಪವಾಗಿವೆ. ತಲೆಕಟ್ಟುಗಳು ಎದ್ದು ಕಾಣುವಂತಿವೆ. ಇವು ಬಂಗಾಳದ ಬರೆವಣಿಗೆಯಲ್ಲಿ ಕಾಣುವುದಿಲ್ಲ. ಒರಿಸ್ಸಾ ಲಿಪಿಯು ಉತ್ತರದ ಲಿಪಿಗಳಿಂದ ಲಿಪಿಯನ್ನು ಪಡೆದಿದ್ದರೂ, ಒರಿಸ್ಸಾದಲ್ಲಿನ ಬರೆವಣಿಗೆಯ ಸಾಧನ ತಾಳೆಗರಿಯಾಗಿದೆ. ಹಾಗೂ ದಕ್ಷಿಣದ ಲಿಪಿಯಿಂದ ಪ್ರಭಾವಿತಗೊಂಡು ವಿಕಾಸವಾಗಿದೆ. ಹೀಗಾಗಿ ಅಲ್ಲಿನ ಲಿಪಿಗಳು ವೃತ್ತಾಕಾರವಾಗಲು ಕಾರಣವಾಗಿದೆ.

ಗುಪ್ತರ ಮತ್ತು ನಂತರದ ಶಾಸನಗಳಲ್ಲಿ ಅಲಂಕಾರಿಕ ಲಿಪಿ ಅಥವಾ ಲಿಪಿಯನ್ನು ಅಲಂಕರಣಗೊಳಿಸುವ ಕ್ರಿಯೆ ನಡೆಯುತ್ತದೆ. ಈ ಕಾಲಕ್ಕೆ ಲಿಪಿಯಷ್ಟೇ ಅಲ್ಲ, ಅದರ ಕಾಗುಣಿತಗಳಲ್ಲಿ ಹೆಚ್ಚಿನ ಅಲಂಕಾರ ಕಂಡುಬರುತ್ತದೆ. ಕ್ರಿ.ಶ.೬ನೆಯ ಶತಮಾನದ ಇಂತಹ ಅಲಂಕಾರಿಕ ನಾಗರಿ

ಶಾಸನವೊಂದು ತಮಿಳುನಾಡಿನಲ್ಲಿ ದೊರೆತಿದೆ. ಕದಂಬರ ಶಾಸನಗಳಲ್ಲಿ ಎರಡು ಹೊಸ ಅಕ್ಷರಗಳು ಕನ್ನಡದಲ್ಲಿ ಬಳಕೆಯಾಗುತ್ತದೆ. ಒಂದು ಐ ಮತ್ತು ಟಿ. ಇವೆರಡನ್ನೂ ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯವಾಗಿ ಸಂಸ್ಕೃತ ಶಾಸನಗಳಲ್ಲಿ ಬಳಸಲಾಗಿದೆ. ವೃತ್ತಾಕಾರದೊಳಗೆ ಉದ್ದ ಮತ್ತು ಅಡ್ಡವಾಗಿ ಭೇದಿಸಿದ ಗೆರೆಯಿದ್ದಲ್ಲಿ ಅದು ಐ ಎರಡು ವೃತ್ತಗಳು ಒಂದಕ್ಕೊಂದು ತಾಗಿಕೊಂಡಿರುವುದು ಟಿ.

ನಾಗರಿ ಅಥವಾ ದೇವನಾಗರಿ

ಈಗ ಭಾರತದಲ್ಲಿ ಬಳಕೆಯಿರುವ ಲಿಪಿಗಳಲ್ಲಿ ನಾಗರಿಯೂ ಒಂದು. ಇದು ಗುಪ್ತರ 'ಸಿದ್ಧಮಾತ್ರಕ' ಎಂಬ ಲಿಪಿಯಿಂದ ನಿಷ್ಪನ್ನವಾಗಿದೆ. ಸಿದ್ಧಮಾತ್ರಿಕಾ ಲಿಪಿಯಿಂದ ಉತ್ತರ ಭಾರತದ ಅನೇಕ ಲಿಪಿಗಳು ನಿಷ್ಪನ್ನವಾಗಿವೆ. ಈ ಅಕ್ಷರಗಳು ಚೌಕಾಕಾರವಾಗಿವೆ. ಇದರೊಂದಿಗೆ ಇನ್ನೊಂದು ಬಗೆಯ ಲಿಪಿ ಬಳಕೆಯಲ್ಲಿದ್ದು ಅದನ್ನು 'ಕುಟಿಲ' ಎಂದು ಕರೆಯಲಾಗಿದೆ. ಇದರ ಮೂಲ ಲಿಪಿಗಳು ಚೌಕಾಕಾರವಾಗಿದ್ದರೂ ಅದಕ್ಕೆ ಕೆಲವು ಅಲಂಕಾರಿಕ ಬಾಗುರೇಖೆಗಳನ್ನು ಸೇರಿಸಿರುತ್ತಾರೆ. ಹೀಗಾಗಿ ಇದನ್ನೂ ಓದುವುದು ಕಷ್ಟ. ಬೋಧ್‌ಗಯಾ ಶಾಸನದಲ್ಲಿ ಈ ಲಿಪಿಗಳು ಕಾಣಬರುತ್ತವೆ. ಡಾ। ಕೆ.ವಿ. ರಮೇಶ್ ಅವರು ಸಿದ್ಧಮಾತ್ರಿಕಾದ ಹೆಸರು ಸಿದ್ಧಮಾತ್ರಿಕಾ ಎಂದೂ ಸಿದ್ಧ ಎಂದರೆ ಸಿದ್ಧವಾಗಿದ್ದದ್ದು ಹಾಗೂ ನಾಗರಿ ಎಂದರೆ ನಾಗರ ರೀತಿಯ ವಾಸ್ತು ರೀತಿಯ ಅಕ್ಷರ ಎಂದಿದ್ದು ನಾಗರಿ ಲಿಪಿ ಆ ಲಕ್ಷಣಗಳನ್ನು ಹೊಂದಿದೆ ಎಂದು ಹೇಳಿರುತ್ತಾರೆ. ಆದರೆ ಡಾ। ಎಸ್. ನಾಗರಾಜು ಅವರು ಸಿದ್ಧಾಂ ಎಂದರೆ ಬೌದ್ಧ ಧರ್ಮದ ಪವಿತ್ರ ಶಬ್ದವಾಗಿದೆ. (Sanctity of Buddhism) ಆಗ್ನೇಯ ಏಷಿಯಾ ದೇಶಗಳಲ್ಲಿ ಇಂದಿಗೂ ಈ ಶಬ್ದ ಬಳಕೆಯಲ್ಲಿದೆ ಎಂದಿದ್ದಾರೆ. (೮-೬-೨೦೦೧ರ ಉಪನ್ಯಾಸಗಳು ಮತ್ತು ಪ್ರತಿಕ್ರಿಯೆಗಳು) ಈ ಪದ 'ಸಿದ್ಧಂ' ಎಂದರೆ ಅಕ್ಷರ ಆರಂಭದಲ್ಲಿ ಉಚ್ಚರಿಸುವ ಶಬ್ದ ಸಿದ್ಧಂ ಎಂಬ ಶಬ್ದದಿಂದ ಬಂದಿರಬೇಕು. ಹೀಗೆ ಸಿದ್ಧಂ ಎಂದು ಹೇಳಿ, ಅಕ್ಷರಾಭ್ಯಾಸ ಮಾಡಿಸುವ ಲಿಪಿಯೇ 'ಸಿದ್ಧಮಾತ್ರಿಕಾ' ಎಂದು ಹೆಸರು ಪಡೆದಿರಬೇಕು. ಕರ್ನಾಟಕ ಮತ್ತು ಆಂಧ್ರದಲ್ಲಿ ಅಕ್ಷರ ಕಲಿಯುವ ಕ್ರಿಯೆಗೆ ಓನಮಲು, 'ಓನಾಮ' ಎಂದು ಕರೆಯುತ್ತಾರೆ. ಹೀಗೆಂದರೆ ವೀರಶೈವ ಮಠಗಳಲ್ಲಿ ಓಂನಮಃ ಶಿವಾಯ ಎಂದು ಬರೆಸಿ ಅನಂತರ ಅಕ್ಷರ ಬರೆಸುವುದರಿಂದ ಈ ಇಡೀ ಕ್ರಿಯೆಗೆ ಓನಮಲು, ಓನಾಮ ಎಂಬ ಶಬ್ದ ಬಳಕೆಯಾಗಿದೆ. 'ಸಿದ್ಧಮಾತ್ರಿಕಾ' ಕೂಡ ಈ ಹಿನ್ನೆಲೆಯಲ್ಲಿ ಹೆಸರನ್ನು ಪಡೆದಿರಬೇಕು. ನಾಗರಿ ಎಂಬ ಪದದ ಮೂಲ ಅರ್ಥದ ಬಗ್ಗೆ ಸ್ಪಷ್ಟವಿಲ್ಲ, ಕೆಲವರ ಪ್ರಕಾರ ಇದರ ಮೊದಲ ಉಲ್ಲೇಖವು ಲಲಿತವಿಸ್ತರದಲ್ಲಿ ದೊರೆತಿದೆ. ನಾಗಲಿಪಿ ಅಥವಾ ನಾಗರು ಎಂಬುವವರ ಬರೆವಣಿಗೆ ಎಂದಿದೆ. ಆದರೆ ಎಲ್.ಡಿ.ಬರ್‌ನೆಟ್ ಅವರ ಪ್ರಕಾರ ನಾಗಲಿಪಿ ಮತ್ತು ದೇವನಾಗರಿ ಲಿಪಿಗೆ ಸಂಬಂಧವಿಲ್ಲ. ಇನ್ನೊಂದು ವಾದದ ಪ್ರಕಾರ ಇದು ನಾಗರ ಬರೆವಣಿಗೆ ಅಥವಾ ಗುಜರಾತಿ ಬ್ರಾಹ್ಮಣರ ಬರೆವಣಿಗೆ ಎಂದು ಅರ್ಥವಿದೆ. ಇತ್ತೀಚೆಗೆ ಇದಕ್ಕೆ ನಗರದ ಅಥವಾ ಪಟ್ಟಣದ ಬರೆವಣಿಗೆ ಎಂದು ಅರ್ಥೈಸಿದ್ದಾರೆ. ದೇವನಾಗರಿ ಎಂದರೆ ಈಗ ದೇವತೆಗಳ ಲಿಪಿ ಎಂದು ಅರ್ಥೈಸಿದ್ದಾರೆ.

ಈ ಲಿಪಿಯ ಬರೆವಣಿಗೆಯು ಏಳು-ಎಂಟನೆಯ ಶತಮಾನದಲ್ಲಿಯೇ ಕಾಣಬರುತ್ತದೆ. ನಾಗರಿ ಲಿಪಿಯು ಉದ್ದುದ್ದ ಬರೆದು ಉದ್ದವಾದ ಬಾಲದಂತಹ ಗೆರೆಗಳನ್ನು ಹೊಂದಿದೆ.


ಮೇಲ್ಭಾಗದಲ್ಲಿ ಅಡ್ಡಗೆರೆಯನ್ನು ತಲೆಕಟ್ಟನ್ನಾಗಿ ಪಡೆದಿದೆ. ಬಾಗಿದ ದೀರ್ಘದ ಕಾಗುಣಿತಗಳ ಜಾಗದಲ್ಲಿ ನೇರವಾದ ಗೆರೆಗಳು ಕಾಣಿಸಿಕೊಂಡಿವೆ. ನಾಗರಿಲಿಪಿಯು ಬಹು ನಿಧಾನವಾಗಿ ಬೆಳವಣಿಗೆಯನ್ನು ಹೊಂದಿದೆ. ಸುಮಾರು ೧೧-೧೨ನೆಯ ಶತಮಾನದ ಹೊತ್ತಿಗೆ ಅನೇಕ ಕಡೆ ಇದು ಸ್ಥಿರತೆಯ ಕಡೆಗೆ ಸಾಗಿತ್ತು.

ಈಗ ದೇವನಾಗರಿ ಲಿಪಿಯು ೪೮ ಅಕ್ಷರಗಳನ್ನು ಹೊಂದಿದ್ದು, ಅವುಗಳಲ್ಲಿ ೧೪ ಸ್ವರಗಳು ಮತ್ತು ಯೋಗವಾಹಕಗಳನ್ನೂ, ೩೪ ವ್ಯಂಜನಗಳನ್ನೂ ಹೊಂದಿದೆ. ವ್ಯಂಜನಗಳು 'ಅ' ಸ್ವರಸಮೇತವಾಗಿ ಉಚ್ಚಾರವಾದರೂ ಪದಾಂತ್ಯದಲ್ಲಿ ವ್ಯಂಜನವಿದ್ದಲ್ಲಿ ಅದನ್ನು ಪೂರ್ಣ ವ್ಯಂಜನವಾಗಿಯೇ ಉಚ್ಚರಿಸಲಾಗುವುದು. ಆದರೆ ಬರೆವಣಿಗೆಯಲ್ಲಿ ಸ್ವರಸಮೇತದಂತೆಯೇ ಬರೆಯಲಾಗುವುದು ಮ್, ಮುಂತಾದವನ್ನು ತೋರಿಸಲು ಅಕ್ಷರದ ಕೆಳಗೆ ಓರೆಯಾಗಿ ಗೆರೆಯೊಂದನ್ನು ಎಳೆಯಲಾಗುವುದು. ಅನುಸ್ವಾರ ಮತ್ತು ಅನುನಾಸಿಕವನ್ನು ಪ್ರತ್ಯೇಕವಾಗಿ ತೋರಿಸಲು ಅನುನಾಸಿಕದ ಚುಕ್ಕೆಯ ಕೆಳಗೆ ಅರ್ಧಚಂದ್ರಾಕಾರದ ಗೆರೆಯನ್ನು ಎಳೆಯಲಾಗುವುದು. ಚಾಲುಕ್ಯ ಕೀರ್ತಿವರ್ಮನ ಶಾಸನದಲ್ಲಿಯೇ ಈ ಬಗೆಯ ಚಿಹ್ನೆಯಿದ್ದ ಉಲ್ಲೇಖವಿದೆ.

ನಾಗರಿಲಿಪಿಯನ್ನು ಸಂಸ್ಕೃತ ಭಾಷೆಯನ್ನು ಬರೆಯಲು ಉತ್ತರದಲ್ಲಿ ಹೆಚ್ಚಾಗಿ ಬಳಸುತ್ತಾ ಬಂದಿದ್ದಾರೆ. (ದಕ್ಷಿಣದಲ್ಲಿ ಸಂಸ್ಕೃತವನ್ನು ಬರೆಯಲು ಹೆಚ್ಚಾಗಿ ಪ್ರಾಂತೀಯ ಲಿಪಿಗಳನ್ನೇ ಬಳಸಲಾಗಿದೆ.) ಹಿಂದೂ ಧಾರ್ಮಿಕ ಗ್ರಂಥಗಳು ಇತ್ತೀಚೆಗೆ ಈ ಲಿಪಿಯಲ್ಲಿಯೇ ಮುದ್ರಿತವಾಗಿವೆ. ಹೀಗಾಗಿ ಜನರ ಧಾರ್ಮಿಕ ಲಿಪಿ ಇದಾಗಿದೆ. ಈ ಲಿಪಿಯನ್ನೇ ಜನರು ಉತ್ತರದ ಅನೇಕ ಲಿಪಿಗಳಿಗೆ ಬಳಸಿರುತ್ತಾರೆ. ಮುಖ್ಯವಾಗಿ ಹಿಂದೆ ಭಾಷೆಗೆ ಈ ಲಿಪಿಯೇ ಬಳಕೆಯಾಗಿದೆ.


ನಾಗರಿ ಅಥವಾ ದೇವನಾಗರಿಗೆ ಮೂಲ ಅಶೋಕನ ಧರ್ಮಶಾಸನಗಳ ಲಿಪಿಯೇ ಆಗಿದೆ. ಅದರ ಉತ್ತರದ ರೂಪಾಂತರದ ಒಂದು ಭಾಗವೇ ನಾಗರಿ ಅಥವಾ ದೇವನಾಗರಿ. ಅಶೋಕನ ಆಳ್ವಿಕೆಯಲ್ಲಿ ಭಾರತದ ಬಹುಭಾಗ ಒಂದೇ ಆಡಳಿತದಲ್ಲಿತ್ತು. ಹೀಗಾಗಿ ಆತ ತನ್ನ ಧರ್ಮಲಿಪಿಗಳನ್ನು ವಾಯುವ್ಯ ಭಾರತವನ್ನು ಬಿಟ್ಟು ಉಳಿದ ಕಡೆ ಒಂದೇ ಲಿಪಿಯಲ್ಲಿ (ಬ್ರಾಹ್ಮಿ ಎಂದು ಕರೆಯುವ ಲಿಪಿಯಲ್ಲಿ) ಬರೆಸಿದ. ಅವನ ನಂತರ ಭಾರತವು ಬೇರೆ ಬೇರೆ ಆಡಳಿತಕ್ಕೆ ಒಳಪಟ್ಟು ಸಣ್ಣಸಣ್ಣ ಪ್ರಾಂತ್ಯಗಳಾಗಿ ಒಡೆಯಿತು. ಈ ಪ್ರಾಂತ್ಯಗಳನ್ನಾಳಿದ ಅರಸರು ಅಶೋಕನ ಲಿಪಿಯನ್ನೇ ತಮ್ಮ ಶಾಸನ ಬರೆವಣಿಗೆಗೆ ಬಳಸಿರುತ್ತಾರೆ. ವಿದೇಶದಿಂದ ಬಂದ ಶಕ-ಕ್ಷತ್ರಪರಲ್ಲದೆ ಇತರರೂ ಇದೇ ಲಿಪಿಯನ್ನು ಬಳಸಿರುತ್ತಾರೆ. ಕ್ಷತ್ರಪ ಉಷವದತ್ತನ ನಾಸಿಕದ ಶಾಸನದಲ್ಲಿ ಅಕ್ಷರಗಳು ಗೆರೆಗಳ ಆಕಾರಕ್ಕೆ ತಿರುಗಿರುವುದನ್ನು ಕಾಣಬಹುದು. (EI.IX. p.78) ಅಕ್ಷರಗಳಲ್ಲಿ ತಲೆಕಟ್ಟುಗಳಿಲ್ಲ. ರುದ್ರಧಾಮನ ಶಾಸನದ ಲಿಪಿಗಳು ಗೆರೆಗೆರೆಯಂತೆ ಕಂಡರೂ ಬಾಗುಗೆರೆಗಳನ್ನು ಪ್ರಧಾನವಾಗಿ ಹೊಂದಿವೆ. ಇದೇ ಲಿಪಿಗಳ ಮುಂದುವರಿಕೆಯನ್ನು ನಾಗಾರ್ಜುನಕೊಂಡದ ಅನೇಕ ಶಾಸನಗಳಲ್ಲಿ ಕಾಣಬಹುದಾಗಿದೆ.

ಅಶೋಕನ ನಂತರ ಭಾರತವನ್ನಾಳಿದ ಅರಸರಲ್ಲಿ ಪ್ರಸಿದ್ಧ ವಂಶಗಳೆಂದರೆ ಕುಶಾನರು ಮತ್ತು ಗುಪ್ತರು. ಕುಶಾನರ ಬಹಳ ಶಾಸನಗಳು ಖರೋಷ್ಠಿ ಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿದ್ದರೆ, ಗುಪ್ತರ ಶಾಸನಗಳು ಅಶೋಕನ ಬ್ರಾಹ್ಮಿಯಿಂದ ನಿಷ್ಪನ್ನವಾದ ಬ್ರಾಹ್ಮಿಲಿಪಿ ಮತ್ತು ಸಂಸ್ಕೃತ ಭಾಷೆಯನ್ನು ಹೊಂದಿವೆ. ಒಂದು ರೀತಿಯಲ್ಲಿ ಉತ್ತರದ ಅನೇಕ ಲಿಪಿಗಳಿಗೆ ಈ ಗುಪ್ತಲಿಪಿ




EI. I.p. 391 ಮಥುರಾ ಶಾಸನ ದೇ.ಕೊ. ರೆಡ್ಡಿ

ಮೂಲವಾಗುತ್ತದೆ. ಈ ಗುಪ್ತಲಿಪಿಯು ಕುಶಾನರ ಕಾಲದ ಬ್ರಾಹ್ಮಿಲಿಪಿಯ ಮುಂದುವರಿದ ರೂಪವಾಗಿರುತ್ತದೆ. ಗುಪ್ತವಂಶದ ರಾಜರಲ್ಲಿ ಬಹುಪ್ರಮುಖ ಅರಸ ಸಮುದ್ರಗುಪ್ತ. ಈತ ಉತ್ತರ ಭಾರತವನ್ನಲ್ಲದೆ ದಕ್ಷಿಣ ಭಾರತಕ್ಕೂ ದಂಡೆತ್ತಿ ಬರುತ್ತಾನೆ. ಈ ಧಾಳಿಗಳಿಂದ ಆತ ತನ್ನ



ಸಮುದ್ರಗುಪ್ತನ ಅಲಹಾಬಾದ್ ಸ್ತಂಭಶಾಸನ ಎ. ಎಂ. ಅಣ್ಣಿಗೇರಿ



ನರವರ್ಮನ ಮಂದಸೋರ್ ಶಾಸನ


EI.XII. p. 318

ದೇ.ಕೊ. ರೆಡ್ಡಿ

ಸಾಮ್ರಾಜ್ಯದ ಅನೇಕ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಅವಶೇಷಗಳನ್ನು ಬಿಟ್ಟುಹೋಗಿದ್ದಾನೆ. ಅಲಹಾಬಾದ್ ಸ್ತಂಭಶಾಸನದಲ್ಲಿ ಅಕ್ಷರಗಳ ತಲೆಗಳ ಮೇಲೆ ಚಿಕ್ಕ ತಲೆಕಟ್ಟುಗಳು ಕಾಣಿಸಿದರೆ, ಇದೇ ರಾಜನ ಏರಾಣ್ ಶಾಸನದಲ್ಲಿ ಪೆಟ್ಟಿಗೆಯಾಕಾರದ ತಲೆಕಟ್ಟುಗಳು ಕಾಣಸಿಗುತ್ತವೆ. ಅ, ಕ, ರ ಅಕ್ಷರಗಳ ಕೆಳಗೆರೆಗಳು ನೇರವಾಗಿ ಕೆಳಕ್ಕೆ ಇಳಿದಿವೆ. ಪಕ್ಕಕ್ಕೆ ತಿರುಗಿಲ್ಲ. ಆದರೆ ಏರಾಣ್ ಶಾಸನದಲ್ಲಿ ಗೆರೆಯು ಕೆಳಕ್ಕೆ ಬಂದು ಪಕ್ಕಕ್ಕೆ ಸಮಾನಾಂತರವಾಗಿ ತಿರುಗಿದೆ. ಮುಂದೆ ಕುಮಾರಗುಪ್ತನ ಶಾಸನದಲ್ಲಿ ಇದೇ ಚೌಕಾಕಾರದ ತಲೆಕಟ್ಟುಗಳು ಚೌಕಾಕಾರವಾಗಿ ಅಡ್ಡವಾಗಿ ಬೆಳೆದಿವೆ. (ಬಿಲ್‌ಸಾಡ್‌ಸ್ಥಂಭ ಶಾಸನ) ಆದರೆ ಕೆಳಗಿನ ಇಳಿಗೆರೆಗಳು ಯಾವ ಕಡೆಗೂ ಬಾಗದೆ ನೇರವಾಗಿಯೇ ಇವೆ.

ಮಂದಸೋರ್‌ನ ನರವರ್ಮ, ತೋರಮಾನ ಮತ್ತು ಯಶೋವರ್ಮನ ಶಾಸನಗಳು ಗುಪ್ತರ ಕಾಲರ ಲಿಪಿಗಳ ಮುಂದುವರಿಕೆಯಾಗಿದ್ದು ಅಶೋಕನ ಬ್ರಾಹ್ಮಿಲಿಪಿಯ ಅನೇಕ ಅಕ್ಷರಗಳು ಗುರುತು ಸಿಗದಷ್ಟು ಮಾರ್ಪಾಟಾಗಿವೆ. ಸರಳರೇಖೆಗಳಿಗೆ ಇಳಿದ ಅಕ್ಷರದ ಗೆರೆಗಳು ತ್ರಿಕೋಣದ ಕಡೆ ಒಲವನ್ನು ತೋರಿಸಿವೆ. ಕಾಗುಣಿತಗಳನ್ನು ಎದ್ದು ಕಾಣುವಂತೆ ಬರೆಯಲಾಗಿದೆ. ಕೆಳಗೆ ಇಳಿದಿರುವ ಗೆರೆಗಳನ್ನು ಕೆಳತುದಿಯಲ್ಲಿ ದಟ್ಟವಾಗಿ ಬಿಡಿಸಲಾಗಿದೆ. ಅನುಸ್ವಾರ, ವಿಸರ್ಗಗಳು ಈ ಶಾಸನದಲ್ಲಿ ಚುಕ್ಕೆಯಿಂದ ಚಿಕ್ಕ ಬಿಂದುವಾಗಿ ಮಾರ್ಪಟ್ಟಿವೆ. ವರ್ಧನರ ರಾಜ್ಯಭಾರ ಕಾಲದಲ್ಲಿ ಇದೇ ಲಿಪಿಯ ತಲೆಕಟ್ಟಿನ ಗೆರೆಗಳು, ಕಾಗುಣಿತದ ಗೆರೆಗಳು ಹಾಗೂ ಯ, ರ ಕಾರದ ಒತ್ತಕ್ಷರಗಳು ಅಲಂಕಾರದ ಮೆರಗನ್ನು ಪಡೆದವು. ಅಕ್ಷರಗಳ ಒಟ್ಟು ಛಾಯೆ ತ್ರಿಕೋಣಾಕಾರದಲ್ಲಿರುವುದು ವಿಶೇಷ. ಈ ಶಾಸನಲಿಪಿಗಳು ಕನ್ನಡದ ಹೊಯ್ಸಳರ ಕಾಲದ ಅಲಂಕಾರಿಕ ಲಿಪಿಯನ್ನು ನೆನಪಿಸುತ್ತವೆ. ಕ ಕಾರವು ಅಶೋಕನ ಲಿಪಿಯ ರೂಪವನ್ನೇ ಉಳಿಸಿಕೊಂಡಿದೆ. ಇ ಕಾರದ ಕೆಳಚುಕ್ಕೆಯು ಅರ್ಧಚಂದ್ರಾಕಾರದ ಗೆರೆಯನ್ನು ಹೊಂದಿದೆ. ಇದೇ ವರ್ಧನರ ಶಾಸನಗಳು ಪೂರ್ವದ ಪ್ರಾಂತ್ಯಗಳಲ್ಲಿ ದೊರೆತಿದ್ದು, ಅಲ್ಲಿ ಹೆಚ್ಚಿನ ಅಲಂಕಾರಗಳು ಕಾಣುವುದಿಲ್ಲ. ಆದರೂ ಸರಳರೇಖೆಗಳು ಮತ್ತು ತ್ರಿಕೋಣಾಕಾರದ ಛಾಯೆ ಕಾಣುವುದು. ಇ ಕಾರವು ಸ್ವಲ್ಪ ಬೆಳವಣಿಗೆ ತೋರಿಸಿದೆ. ಮೇಲಿನ ಎರಡು ಚುಕ್ಕೆಗಳು ಚಿಕ್ಕ ಅರೆ ವೃತ್ತಾಕಾರದ ಗೆರೆಗಳಾಗಿವೆ. ಕೆಳಗಿನ ಚುಕ್ಕೆ ದೊಡ್ಡದಾಗಿ ಅರೆವೃತ್ತಾಕಾರವಾಗಿದೆ. ಭಮೋದರ ಶಾಸನದಲ್ಲಿ ಈ ಲಕ್ಷಣಗಳನ್ನು ಕಾಣಬಹುದು.

ಪ್ರತಿಹಾರ ಮಹೇಂದ್ರಪಾಲನ ಮಹೋದಯ (I.A.XV. p.105) ಶಾಸನದಲ್ಲಿನ ಲಿಪಿಗಳು ಹಿಂದಿನ ಲಿಪಿಗಳ ಮುಂದುವರಿಕೆಯಾಗಿದ್ದರೂ ಇ ಕಾರದ ಕಾಗುಣಿತವು ಕತ್ತಿಯಂತೆ ಬಾಗಿದೆ. ಅಕ್ಷರಗಳೂ ಸಹ ಸ್ವಲ್ಪ ಓರೆಯಾದ ಗೆರೆಗಳಿಂದ ಕೂಡಿವೆ. ಏ, ಓ ಕಾರದ ಕಾಗುಣಿತಗಳನ್ನು ಗೌಣವಾಗಿ ಬರೆಯಲಾಗಿದೆ. ರ ಕಾರವು ಇಂದಿನ ರೂಪಕ್ಕೆ ಹತ್ತಿರವಾಗಿದೆ. ತಲೆಕಟ್ಟುಗಳು ಚಿಕ್ಕದಾಗಿವೆ. ಅವು ಒಂದು ಅಕ್ಷರದಿಂದ ಇನ್ನೊಂದು ಅಕ್ಷರದ ಮಧ್ಯೆ ಸ್ಥಳವನ್ನು ಹೊಂದಿವೆ. ಕನ್ಯಾಕುಬ್ಜದ ಗಹಡವಾಲ ರಾಜನಾದ ಚಂದ್ರಾದಿತ್ಯದೇವನ (EI.XIV. p.197 ತಾಮ್ರಶಾಸನದಲ್ಲಿ ಅಕ್ಷರಗಳ ತಲೆಕಟ್ಟುಗಳು ಬಿಡಿಬಿಡಿಯಾಗಿರದೆ ಕಾಗುಣಿತಗಳಿಗೆ ತಾಗಿಕೊಂಡಿವೆ. ಒಂದು ಅಕ್ಷರದ ತಲೆಕಟ್ಟಿಗೂ ಇನ್ನೊಂದು ಅಕ್ಷರದ ತಲೆಕಟ್ಟಿಗೂ ಹೆಚ್ಚಿನ ಅಂತರವಿಲ್ಲ. ಅಕ್ಷರಗಳು ತ್ರಿಕೋಣಾಕಾರದ ರೂಪದಿಂದ ಕ್ರಮಕ್ರಮವಾಗಿ ಉದ್ದ ಉದ್ದದ ಗೆರೆಗಳ ಕಡೆಗೆ ವಾಲುತ್ತಿವೆ. ಇ ಕಾರವು ಮೇಲೆ ಅಡ್ಡಗೆರೆ ಹೊಂದಿದ್ದು ಅದರ ಕೆಳಗೆ ಎರಡು ಚಿಕ್ಕ ಸೊನ್ನೆಗಳನ್ನು



ಭಮೋಧರನ ಮಹೋತ ಶಾಸನ


ದೇ.ಕೊ. ರೆಡ್ಡಿ

EI.XVI.P. 16

ಹೊಂದಿದೆ. ಈ ಅಕ್ಷರಗಳನ್ನು ಗಮನಿಸಿದಾಗ ಎಲ್ಲಾ ಅಕ್ಷರಗಳಿಗೆ ಉದ್ದದ ತಲೆಕಟ್ಟು ಅತ್ಯಗತ್ಯವೆಂಬಂತೆ ಬರೆಯಲಾಗಿದೆ. ಅನುಸ್ವಾರ ವಿಸರ್ಗಗಳು ಚಿಕ್ಕ ಸೊನ್ನೆಯಂತೆ ಮಾರ್ಪಟ್ಟಿವೆ. ಅನೇಕ ಅಕ್ಷರಗಳು ಇಂದಿನ ರೂಪಕ್ಕೆ ಸಮೀಪವಾಗಿವೆ.

ದಕ್ಷಿಣದಲ್ಲಿ ಬಾದಾಮಿ ಚಲುಕ್ಯರ ಕಾಲದಿಂದಲೇ ನಾಗರಿಲಿಪಿಯ ಶಾಸನಗಳು ಕಾಣಬರುತ್ತವೆ. ಮುಂದೆ ದಕ್ಷಿಣ ಭಾರತದ ಅನೇಕ ರಾಜವಂಶಗಳು ಈ ಲಿಪಿಯನ್ನು ಬಳಸಿವೆ. ಇದಕ್ಕೆ ಚಾರಿತ್ರಿಕ ಕಾರಣವೂ ಇದೆ.

ಉತ್ತರದಲ್ಲಿ ಗುಪ್ತಸಾಮ್ರಾಜ್ಯವು ವಾಯುವ್ಯ ಭಾರತದ ಕಡೆಯಿಂದ ಬಂದ ವಿದೇಶಿ ಧಾಳಿಗಳಿಂದ ತತ್ತರಿಸಿದ್ದೇ ಅಲ್ಲದೆ ಅದು ಅಸ್ತಂಗತವೂ ಆಗುತ್ತದೆ. ಈ ಹಿನ್ನೆಲೆಯಲ್ಲಿ ಅವರ ಮತ್ತು ಅವರ ಆಶ್ರಿತರಾಜರ ಬಳಿ ಇದ್ದ ಅನೇಕ ಸಂಸ್ಕೃತ ಪಂಡಿತರು ಭಾರತದ ಬೇರೆಡೆ ಮತ್ತು ದಕ್ಷಿಣದತ್ತ ವಲಸೆ ಬರುತ್ತಾರೆ. ಹೀಗೆ ವಲಸೆ ಬಂದ ಪಂಡಿತರು ಚಲುಕ್ಯ ರಾಜ್ಯ, ಮತ್ತೆ ಅಲ್ಲಿಂದ ದಕ್ಷಿಣಕ್ಕೆ ಪಲ್ಲವ, ಪಾಂಡ್ಯ ರಾಜ್ಯಗಳಲ್ಲಿ ನೆಲೆಗೊಳ್ಳುತ್ತಾರೆ. ಹೀಗೆ ಬಂದವರಲ್ಲಿ ಭಾರವಿಯ ಸ್ನೇಹಿತ ದಾಮೋದರನು ಒಬ್ಬ. ಇವನು ದಕ್ಷಿಣಕ್ಕೆ ಬಂದಾಗ ಬಾದಾಮಿಯನ್ನು ಚಲುಕ್ಯರ ಜಯಸಿಂಹ ಮತ್ತು ಕಂಚಿಯಲ್ಲಿ ಪಲ್ಲವರ ಸಿಂಹವಿಷ್ಣು ರಾಜ್ಯಭಾರ ಮಾಡುತ್ತಿರುತ್ತಾರೆ. ಹೀಗೆ ದಕ್ಷಿಣಕ್ಕೆ ವಲಸೆ ಬಂದ ಕವಿಗಳು ಮತ್ತು ಪಂಡಿತರಿಂದ ಇಲ್ಲಿ ನಾಗರಿ ಲಿಪಿಗಳು ಬಳಕೆಯಾಗುತ್ತವೆ. ಹಾಗೆಂದಾಕ್ಷಣ ಎಲ್ಲಾ ಶಾಸನಗಳೂ ನಾಗರಿಯಲ್ಲಿ ಲಿಖಿತವಾದುವು ಎಂದಲ್ಲ, ಒಂದು ಹಂತದಲ್ಲಿ ಆರಂಭವಾಗುತ್ತವೆ. ಮುಂದೆ ಅವು ಸ್ಥಳೀಯ ಲಿಪಿಗಳ ಜೊತೆಯಲ್ಲಿ ಸಮಾನಾಂತರಗಳಲ್ಲಿ ಬೆಳೆಯುತ್ತಾ ಬಳಕೆಯಾಗುತ್ತವೆ. ಪಲ್ಲವ ಒಂದನೆಯ ಮಹೇಂದ್ರವರ್ಮನ ಶಾಸನಗಳಲ್ಲಿ ನಾಗರಿಲಿಪಿಯ ಶಾಸನಗಳೂ ಇವೆ. ಶಿವರಾಮಮೂರ್ತಿಯವರು ಸಾಳುವನ್ ಕುಪ್ಪಂ ಶಾಸನವನ್ನು ಹರ್ಷನ ಶಾಸನಗಳ ಲಿಪಿಗೆ ಹೋಲಿಸಿದ್ದಾರೆ. (EI.XII. p.12) ಅದರ ಅಲಂಕಾರಿಕ ರೇಖೆಗಳಿಂದ ಅವರು ಈ ಅಭಿಪ್ರಾಯಕ್ಕೆ ಬಂದಿರುತ್ತಾರೆ. ಬಾದಾಮಿ ಚಲುಕ್ಯರನ್ನು ಮೂಲೆಗೊತ್ತಿ ರಾಜ್ಯಭಾರ ಮಾಡಿದ ರಾಷ್ಟ್ರಕೂಟರು ತಾಮ್ರಶಾಸನಗಳಲ್ಲಿ ಹೆಚ್ಚಾಗಿ ನಾಗರಿ ಲಿಪಿಯನ್ನು ಬಳಸಿರುತ್ತಾರೆ. ಚಲುಕ್ಯ ಕೀರ್ತಿವರ್ಮನ ಪಟ್ಟದಕಲ್ಲು ಸ್ತಂಭಶಾಸನ ಹಾಗೂ ದಂತಿದುರ್ಗನ ಸಾಮನ್ತಗಡ ಶಾಸನಗಳು ನಾಗರಿಲಿಪಿಯ ಆರಂಭದವು. ಕೀರ್ತಿವರ್ಮನ ಪಟ್ಟದಕಲ್ಲು ಸ್ತಂಭ ಶಾಸನದಲ್ಲಿನ ಲಿಪಿಯು ಗುಪ್ತರ ಲಿಪಿಯಿಂದ ನಿಷ್ಪನ್ನವಾದ ಲಿಪಿಯೇ ಆಗಿದೆ. ವ್ಯತ್ಯಾಸವೆಂದರೆ ಅಕ್ಷರಗಳ ತಲೆಯ ಮೇಲೆ ತ್ರಿಕೋಣಾಕಾರದ ಮನೆಯ ತಲೆಕಟ್ಟುಗಳಿವೆ. ಅಕ್ಷರಗಳು ಮೇಲ್ನೋಟಕ್ಕೆ ಗೆರೆಗೆರೆಗಳಿಂತಿವೆಯಾದರೂ ಕೆಲವು ವೃತ್ತಾಕಾರದ ಅಕ್ಷರಗಳೂ ಇವೆ. ಆದರೆ ಅಕ್ಷರಗಳ ಕೆಳಭಾಗ ಸರಳರೇಖೆಗಳಿಂದ ಕೂಡಿರುವುದರಿಂದ ಗೆರೆಗಳಂತೆ ಕಾಣುತ್ತವೆ. 'ಓಂ' ಎಂಬ ಅಕ್ಷರ ಇಂದಿನ ರೂಪಕ್ಕೆ ಸಮೀಪವಾಗಿದೆ. ಅ ಕಾರಕ್ಕೆ ತಲೆಕಟ್ಟಿಲ್ಲ, ದಕ್ಷಿಣದಲ್ಲಿ ಅಕ್ಷರಗಳ ಕೆಳಗೆರೆಗಳು ಬೆಳೆದಂತೆ ಈ ಲಿಪಿಗಳಲ್ಲಿ ಬೆಳೆದಿಲ್ಲ, ಬೆಳೆದಿದ್ದರೂ ಬಹು ಚಿಕ್ಕದಾಗಿ ಬೆಳೆದು ಎಡಕ್ಕೆ ತಿರುಗಿರುತ್ತವೆ. ಕ ಕಾರ, ರ ಕಾರಗಳಲ್ಲಿ ಇದನ್ನು ಗಮನಿಸಬಹುದು. ಇ ಕಾರದ ಕಾಗುಣಿತವು ಅಕ್ಷರದ ಮೇಲೆ ಆರಂಭವಾಗಿ ಎಡಪಕ್ಕಕ್ಕೆ ತಿರುಗಿದ್ದರೆ, ಈ ಕಾರದ ಕಾಗುಣಿತವು ತಲೆಕಟ್ಟಿನಿಂದ ಆರಂಭವಾಗಿ ಬಲಭಾಗಕ್ಕೆ ತಿರುಗಿದೆ. ಉ ಕಾರದ ಕಾಗುಣಿತವು ಈ ಕಾಲಕ್ಕೆ ಕೆಳಗಡೆ ನೀಳವಾಗಿ ಬರಬೇಕಾಗಿತ್ತು.




ಸಾಲುವನ ಕುಪ್ಪಂ ಶಾಸನ,


ಸಿ.ಶಿ.ಮೂರ್ತಿ

ಆದರೆ ನಾಗರಿಯಲ್ಲಿ ಈ ತರಹದ ಬೆಳವಣಿಗೆಯಾಗಿರದೆ ಅಕ್ಷರದ ತಳಭಾಗದಲ್ಲಿ ಎಡಮುಖವಾಗಿ ತಿರುಗಿದೆ. ಋ ಕಾರದ ಕಾಗುಣಿತ ಉ ಕಾರದ ಕಾಗುಣಿತಕ್ಕೆ ತದ್ವಿರುದ್ಧವಾಗಿ ತಿರುಗಿದೆ. ಎ ಕಾರದ ಕಾಗುಣಿತವು ಅಕ್ಷರದ ಮೇಲೆ ಆರಂಭವಾಗಿ ೪೫ ಡಿಗ್ರಿ ನೇರಕ್ಕೆ ಎಡಗಡೆಗೆ ಬಂದಿದೆ. ಓ ಕಾರದ ತಲೆಕಟ್ಟಿನ ಬಲಪಕ್ಕದಲ್ಲಿ ಚಿಕ್ಕದಾಗಿ ಗೆರೆಯೊಂದು ಬಂದಿದ್ದು, ಅದರಿಂದ ಎ ಕಾರದಂತಹ ಗೆರೆ ಬಂದಿದೆ. ಔ ಕಾರದ ಕಾಗುಣಿತವು ಇದೇ ರೀತಿ ಬಂದಿದ್ದು ತಲೆಕಟ್ಟಿನಲ್ಲಿ ಎರಡು ಗೆರೆಗಳು ಬಂದಿರುತ್ತದೆ. ಅನುಸ್ವಾರವು ಅಕ್ಷರಗಳ ತಲೆಯ ಮೇಲೆ ಚಿಕ್ಕ ಚುಕ್ಕೆಯಂತೆ ಬಂದಿದೆ.

ಅಕ್ಷರಗಳಲ್ಲಿ ಪ, ಮ, ಯ, ಸ ಇವುಗಳ ರೂಪದಲ್ಲಿ ಇರುವ ವ್ಯತ್ಯಾಸ ಕಡಿಮೆ. ಜ ಕಾರದ ಮೇಲಿನ ಗೆರೆ ತ್ರಿಕೋಣಾಕಾರದ ತಲೆಕಟ್ಟಾಗಿದೆ. ಗ ಕಾರದ ಎಡೆಗೆರೆಯ ತುದಿಯಲ್ಲಿ ಸಣ್ಣ ವೃತ್ತ ಬಂದಿದೆ. ಇದೇ ರೀತಿಯ ಬೆಳವಣಿಗೆ ಶ ಕಾರದಲ್ಲಿಯೂ ಕಾಣಬಹುದು. ಒಟ್ಟಿನಲ್ಲಿ ದಕ್ಷಿಣದ ಲಿಪಿಗಳಿಗಿಂತ ಪೂರ್ಣ ಭಿನ್ನವಾದ ಬೆಳವಣಿಗೆಯ ಲಿಪಿ ಇದಾಗಿದ್ದು, ದಕ್ಷಿಣದ ನಾಗರಿಗೆ ನಾಂದಿ ಹಾಡುತ್ತದೆ. ಈ ಶಾಸನಗಳ ಲಿಪಿಗಳು ಬೋಧಗಯಾದ ಮಹಾನಾಮನ್ ಶಾಸನಗಳ ಮತ್ತು ಸಾಮನಗಡ ಶಾಸನಗಳ ಮಧ್ಯದ ಅವಸ್ಥೆಯೆಂದು ಫ್ಲೀಟ್ ಅವರು ಅಭಿಪ್ರಾಯ ಪಡುತ್ತಾರೆ. (EI.III. p.1) ಇದೇ ಅವಧಿಯಲ್ಲಿ ಉತ್ತರ ಭಾರತದಲ್ಲಿ ಅಲಂಕಾರಿಕ ಶಾಸನಗಳು ಅಲ್ಲಲ್ಲಿ ಕಾಣಬರುತ್ತವೆ. ಈ ಶಾಸನಗಳನ್ನು ಸಿದ್ಧಮಾತ್ರಿಕಾ ಅಥವಾ ಕುಟಿಲ ಎಂದು ಕರೆದಿರುತ್ತಾರೆ. ಈ ಅಕ್ಷರಗಳ ಮುಖ್ಯ ಲಕ್ಷಣಗಳೆಂದರೆ ಅಕ್ಷರಗಳ ಗೆರೆಗಳ ಸೇರು ಭಾಗಗಳು ತ್ರಿಕೋಣವನ್ನು ಸೃಷ್ಟಿಸಿರುವುದು. ಇದಲ್ಲದೆ ಇವುಗಳ ತಲೆಯ ಮೇಲೆ ಬಂದಿರುವ ಗುಣಿತಗಳು ಬಳ್ಳಿಗಳಂತೆ ಬಾಗಿ ಬಳುಕಿವೆ. ತುದಿಗಳು ಚೂಪಾಗಿವೆ. ನೋಡಲು ಅಲಂಕಾರವಾಗಿರುವ ಈ ಲಿಪಿ ಹರ್ಷನಕಾಲದಲ್ಲಿ ಬಳಕೆಯಲ್ಲಿತ್ತು. ರಾಷ್ಟ್ರಕೂಟರು ಬಳಸಿದ ನಾಗರಿಯು ಒಂದನೆಯ ಕೃಷ್ಣರಾಜನಿಂದ ಮೂರನೆಯ ಕೃಷ್ಣನ ವರೆಗೆ ಕೆಲವು ಬದಲಾವಣೆಗಳನ್ನು ಹೊಂದಿದೆ. ಅಂದರೆ ತಲೆಗಾಂ ಶಾಸನದಿಂದ ಬಗುಮ್ರಾ ಶಾಸನದವರೆಗೆ ಕೆಲವು ಬದಲಾವಣೆ ಕಾಣಿಸಿವೆ. ರಾಷ್ಟ್ರಕೂಟ ನಂದರಾಜ ಯುದ್ಧಾಸುರನ ಕ್ರಿ.ಶ.೭೦೮ರ ಮುಲ್ತಾಯ್ (ಮಧ್ಯಪ್ರದೇಶ) ಶಾಸನದಲ್ಲಿ ಕತ್ತಿಯಂತಹ ಗೆರೆಗಳ ಮತ್ತು ಬಲಗಡೆಗೆ ಎಳೆದ ಗೆರೆಗಳನ್ನು ಕಾಣಬಹುದು. ಕ್ರಿ.ಶ.೮೫೧ ಮತ್ತು ೮೭೭ರ ಕನ್ಹೇರಿ ಶಾಸನಗಳಲ್ಲಿ ನಾಗರಿಯನ್ನು ಬಳಸಿದ್ದಾರೆ. ಬೂಹ್ಲರನ ಪ್ರಕಾರ ಉತ್ತರ ಮತ್ತು ಮಧ್ಯ ಭಾರತದಲ್ಲಿ ಕ್ರಿ.ಶ.೯೩೧ರ ವಿನಾಯಕಪಾಲನ ಶಾಸನದಲ್ಲಿ ಕಾಣಿಸಿಕೊಂಡಿದೆ. ದಕ್ಷಿಣದಲ್ಲಿ ನಾಗರಿಯ ಪೂರ್ಣವಿಕಾಸದ ಲಿಪಿಗಳನ್ನು ಐದನೆಯ ವಿಕ್ರಮಾದಿತ್ಯ (ಕಲ್ಯಾಣ ಚಾಳುಕ್ಯ ರಾಜ)ನ ಕ್ರಿ.ಶ.೧೦೦೯ರ ಕೌತೇಮ್ ಶಾಸನದಲ್ಲಿ (ಮೀರಜ್ ಬಳಿ) ಕಾಣಬಹುದಾಗಿದೆ. ಇದರಲ್ಲಿ ಅಕ್ಷರದ ಮೇಲೆ ಅಡ್ಡಗೆರೆಯನ್ನು ಹಾಕಲಾಗಿದೆ. (Analecta Vol.II, p.272) ಬಗುಮ್ರಾ ಶಾಸನದಲ್ಲಿನ ನಾಗರಿ ಅಕ್ಷರಗಳು ಗೆರೆಗೆರೆಯಂತಿದ್ದರೂ ಅವುಗಳ ಕಾಗುಣಿತದ ಕಾಗುಣಿತದ ಗೆರೆಗಳು ಸ್ವಲ್ಪ ಡೊಂಕಾಗಿ ಬಾಗಿದಂತಿವೆ. (EI IX. P24) ಒಟ್ಟಾರೆ ಅಕ್ಷರಗಳು ಈ ಬಾಗುವ ಗೆರೆಗಳಿಂದ ಕೂಡಿರುವಂತಹ ಭಾವವನ್ನು ತೋರಿಸುತ್ತಿವೆ. ಅನೇಕ ಅಕ್ಷರಗಳು ಓರೆಯಾಗಿರುವುದನ್ನು ಬಿಟ್ಟರೆ ಉಳಿದಂತೆ ಈಗಿನ ಲಿಪಿಗಳ ಸ್ವರೂಪಕ್ಕೆ ಬಹು ಸಮೀಪವಾಗಿವೆ. ಆದರೂ ಚಾಳುಕ್ಯರ ಕಾಲದ ತ್ರಿಕೋಣಾಕಾರದ ಛಾಯೆ ಸ್ವಲ್ಪ ಮಟ್ಟಿಗೆ ಇನ್ನೂ ಉಳಿದಿವೆ. ಇ ಕಾರದ ಗುಡಿಸು, ಅಕ್ಷರದ ಎಡಗಡೆಗೆ ಗೆರೆಯ ರೂಪದಲ್ಲಿ ಕೆಳಕ್ಕೆ ಇಳಿದಿದೆ. ಎ ಕಾರದ ಗೆರೆಯೂ ಸಹ ತಲೆಕಟ್ಟಿನ ನೇರಕ್ಕೆ ಬೆಳೆದು ಅಕ್ಷರದ ಸಮಾನಾಂತರವಾಗಿ ಸಾಲಿಗೆ ಬಂದಿದೆ. ಐ ಕಾರದ ಕಾಗುಣಿತದ ಸಮಯದಲ್ಲಿ ಮಾತ್ರ ಅಕ್ಷರದ ತಲೆಯ ಮೇಲೆ ಒಂದು ಗೆರೆ ಬಂದಿದ್ದು, ಇನ್ನೊಂದು ಗೆರೆ ಎ ಕಾರವು ಅಕ್ಷರದ ಸಾಲಿನ ನೇರಕ್ಕೆ ಬಂದಿದೆ. ಓ **ಕಾರದ ಕಾ**ಗುಣಿತದ ಗೆರೆಯೂ ಸಹ ಅಕ್ಷರದ ಬಲಗಡೆ ಬಂದಿದ್ದು, ಸಾಲಿನ ನೇರಕ್ಕೆ ಇದ್ದು ಅದರ ಮೇಲೆ ತಲೆಕಟ್ಟಿನ ನೇರಕ್ಕೆ ಇನ್ನೊಂದು ಗೆರೆ ಬಂದು ಓ ಕಾರವನ್ನು ಸೂಚಿಸುತ್ತದೆ. ಅನುಸ್ವಾರ, ವಿಸರ್ಗಗಳು ಸಣ್ಣ ವೃತ್ತಾಕಾರಕ್ಕೆ ಬಂದಿವೆ. ಈ ಕಾಲಕ್ಕೆ ಪ, ಮ, ಯ, ಸ ಇವುಗಳ ರೂಪದಲ್ಲಿ ಸಾಮ್ಯತೆ ಕಡಿಮೆಯಾಗಿದೆ. ಆದರೂ ಪ ಮತ್ತು ಯ ಕಾರಗಳ ವ್ಯತ್ಯಾಸ ಕಡಿಮೆ. ಜ ಕಾರದ ಮೇಲಿನ ಗೆರೆ ಬಲಗಡೆಗೆ ಕೆಳಕ್ಕೆ ಇಳಿದಿದ್ದು ಹಿಂದಿನ ರೂಪಕ್ಕಿಂತ ವ್ಯತ್ಯಾಸ ಹೊಂದಿದೆ.




EI. XXVIII p. 124 ಮರಾಠಿ ಭಾಷಾ ಶಾಸನ, ದಿವೇ ಅಗರ್ ದೇ.ಕೊ. ರೆಡ್ಡಿ



EI. I p. 316 ಚಾಳುಕ್ಯ ಕನ್ನರದೇವನ ಶಾಸನ, ಸುನಕ್ ದೇ.ಕೊ. ರೆಡ್ಡಿ

ಗುಜರಾತಿನ ಚಾಲುಕ್ಯ ಕನ್ನರ ದೇವನ ಶಾಸನ ಮತ್ತು ಈ ಲಿಪಿಗಳ ಮುಂದುವರಿಕೆಯಾಗಿ ದಿವೇ ಅಗರ್‌ನ ಮಾರಾಠಿ ಭಾಷಾ ಶಾಸನ ಲಿಪಿಗಳು ಪ್ರಾದೇಶಿಕ ಭಿನ್ನತೆಯನ್ನು ತೋರಿಸುತ್ತದೆ.

ನಾಗರೀ ಲಿಪಿಯನ್ನು ಪಡೆದುಕೊಂಡು ಒರಿಸ್ಸಾದಲ್ಲಿ ಈ ಕಾಲಕ್ಕೆ ಶಾಸನಗಳ ಅಕ್ಷರಗಳು ನೀಳವಾಗಿ ಕೆಳಕ್ಕೆ ಇಳಿದು ಕೆಳತುದಿಯಲ್ಲಿ ಬಾಗಿದ ರೇಖೆಗಳನ್ನು ಹೊಂದಿದ್ದು ಲಿಪಿಯ ಮಧ್ಯಭಾಗವು ವೃತ್ತಾಕಾರಕ್ಕೆ ತಿರುಗಿರುವುದನ್ನು ಗಮನಿಸಬಹುದು. ಮುಂದೆ ಇದು ಅಲ್ಲಿನ ಲಿಪಿಗೆ ಮೂಲವಾಗುತ್ತದೆ.



ವಿಜಯರಾಜದೇವನ ಶಾಸನ ದೇ.ಕೊ. ರೆಡ್ಡಿ

EI.III p. 314

ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಚಾಳುಕ್ಯರು ತಮ್ಮ ಶಾಸನಗಳಲ್ಲಿ ಬಹುತೇಕ ಕನ್ನಡ ಲಿಪಿಯನ್ನೇ ಬಳಸಿದ್ದರೂ ರಾಷ್ಟ್ರಕೂಟರ ಪ್ರಭಾವದಿಂದ ಕೆಲವು ನಾಗರಿಲಿಪಿ ತಾಮ್ರಪಟಗಳೂ ರಚಿತವಾಗಿವೆ. ಆರನೆಯ ವಿಕ್ರಮಾದಿತ್ಯನ ನೀಲಗುಂದ ಶಾಸನವು ಇದಕ್ಕೆ ಉದಾಹರಣೆ. ಇವರ ಮಾಂಡಳೀಕರಾಗಿದ್ದ ಯಾದವರು ಮತ್ತು ಕಾಕತೀಯರು ಈ ಲಿಪಿಯನ್ನು ಮುಂದುವರಿಸುತ್ತಾರೆ.

ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದ ದೇವಗಿರಿಯ ಯಾದವರ ಸಿಂಘಣನ ಗಬ್ಬೂರು ಶಾಸನದಲ್ಲಿ ನಾಗರಿಲಿಪಿಯ ಮುಂದಿನ ಹಂತದ ಬೆಳವಣಿಗೆಯನ್ನು ಕಾಣಬಹುದು. ಅನುಸ್ವಾರ, ವಿಸರ್ಗದ ಬಿಂದುಗಳು ಸ್ವಲ್ಪ ದೊಡ್ಡ ಸೊನ್ನೆಗಳಾಗಿವೆ. ಚ, ಜ, ಡ, ಣ, ಥ, ಧ, ಭ, ರ, ಶ ಮತ್ತು ಏ ಕಾರ ಅಕ್ಷರಗಳು ಇನ್ನೂ ಬದಲಾಗಬೇಕಿವೆ. ಉಳಿದ ಅಕ್ಷರಗಳು ಬಹುತೇಕ ಇಂದಿನ ರೂಪಕ್ಕೆ ತಿರುಗಿವೆ. ಇ ಮತ್ತು ಈ ಕಾರದ ಕಾಗುಣಿತದ ಗೆರೆಗಳು ಸಾಲಿನ ನೇರಕ್ಕೆ ಬಂದಿದ್ದು ಮೇಲಿನ ಭಾಗ ತಲೆಕಟ್ಟಿನ ಮೇಲೆ ಬಾಗಿವೆ. ಉ, ಊ, ಋ ಕಾರದ ಕಾಗುಣಿತಗಳು ಬಿಟ್ಟು ಉಳಿದ ಕಾಗುಣಿತಗಳು ಸಾಲಿನ ನೇರಕ್ಕೆ ಬಂದಿದ್ದು ತಲೆಕಟ್ಟಿನಿಂದ ಮೇಲೆ ಹೋಗಿಲ್ಲ. ಅಕ್ಷರಗಳ ತಲೆಕಟ್ಟುಗಳು ಒಂದು ಇನ್ನೊಂದಕ್ಕೆ ತಾಕಿಲ್ಲ. ಐ ಕಾರ ಮತ್ತು ಔ ಕಾರದ ಕಾಗುಣಿತಗಳು ಏ ಕಾರ, ಓ ಕಾರದ ತಲೆಕಟ್ಟಿನ ಮೇಲೆ ಬಂದಿವೆ. ಒಟ್ಟಾರೆ ಅಕ್ಷರಗಳು ಗೆರೆ ಗೆರೆ ರೂಪದಲ್ಲಿದ್ದರೂ, ಕೆಲವು ಅರೆ ವೃತ್ತಾಕಾರದ ಅಕ್ಷರಗಳೂ ಇವೆ. ಆದರೆ ಒಟ್ಟು ಚೌಕಟ್ಟಿನಲ್ಲಿ ಎಲ್ಲಾ ಅಕ್ಷರಗಳೂ ಸರಳರೇಖಾ ಪ್ರಧಾನವಾದವುಗಳು. ಏ ಕಾರವು ತ್ರಿಕೋಣಾಕಾರದಲ್ಲಿದೆ.


ನಾಗರಿಯ ಇನ್ನೊಂದು ಪ್ರಭೇದವಾದ ನಂದಿನಾಗರಿಯು ವಿಜಯನಗರದ ಶಾಸನಗಳಲ್ಲಿ ಹಾಗೂ ಹಸ್ತಪ್ರತಿಗಳಲ್ಲಿ ಕಾಣಬರುತ್ತದೆ. ವಿಜಯನಗರದ ಬಹುತೇಕ ತಾಮ್ರಶಾಸನಗಳು ಈ ಲಿಪಿಯಲ್ಲಿವೆ. ಇದಕ್ಕೂ ಹಿಂದೆ ಸ್ಥಳೀಯ ಲಿಪಿಗಳಲ್ಲಿ ತಾಮ್ರಶಾಸನಗಳು ಹೆಚ್ಚಿಗೆ ಬರೆದಿದ್ದಾರೆ. ಮುಂದೆ ವಿಜಯನಗರದ ಸ್ಥಾಪನೆಯಾದ ಮೇಲೆ ನಾಗರಿಲಿಪಿಯನ್ನು ತಾಮ್ರಶಾಸನಗಳಲ್ಲಿ ಬಳಸಿದ್ದಾರೆ. ಹೀಗೆ ಬಳಸುವಾಗ ನಾಗರಿಲಿಪಿಯನ್ನು ಹಸ್ತಪ್ರತಿಗಳ ಮೇಲೆ ಬರೆಯುವಾಗ ಲಿಪಿಗಳಲ್ಲಿ ಅಲ್ಪಸ್ವಲ್ಪ

ಬದಲಾವಣೆ ಮಾಡಿಕೊಂಡಿರಬಹುದೆಂದು ಬರ್ನೆಲ್ ಯೋಚಿಸಿದ್ದಾರೆ. ಇದೇ ತಾಮ್ರಶಾಸನಗಳಲ್ಲಿಯೂ ಬಳಕೆಯಾಗಿದೆ.

ನಂದಿನಾಗರಿಯು ಉತ್ತರದ ನಾಗರಿ ಲಿಪಿಗಿಂತ ಭಿನ್ನವಾಗಿದೆ. ಈ ಬದಲಾವಣೆ ನಾಗರಿಯನ್ನು ತಾಳೆಗರಿಗಳ ಮೇಲೆ ಬರೆಯಲು ಬಳಸಿದುದರಿಂದ ಆಗಿರಬೇಕು. ೧೩ನೆಯ ಶತಮಾನದ ಅಂತ್ಯದಲ್ಲಿ ದಕ್ಷಿಣ ಭಾರತದ ಮೇಲೆ ನಡೆದ ಮುಸ್ಲಿಂ ಧಾಳಿಗಳಿಂದ ಹಿಂದಿನ ಸಾಮ್ರಾಜ್ಯಗಳು ನಾಶವಾದ ಮೇಲೆ ವಿಜಯನಗರ ಸಾಮ್ರಾಜ್ಯ ಉದಿಸಿತು. ಈ ಕಾಲದಲ್ಲಿ ಶಿಲಾಶಾಸನಗಳು ಬಹುತೇಕ ಕನ್ನಡ ಲಿಪಿಯಲ್ಲಿ ಅಥವಾ ಸ್ಥಳೀಯ ಲಿಪಿಯಲ್ಲಿದ್ದರೆ ತಾಮ್ರಶಾಸನಗಳು ನಂದಿನಾಗರಿಯಲ್ಲಿರುತ್ತಿದ್ದವು. ವಿಜಯನಗರ ಸಾಮ್ರಾಜ್ಯದ ಪತನಾನಂತರ ಮುಂದೆ ದಕ್ಷಿಣ ಭಾರತದ ಮೇಲೆ ಮರಾಠರ ಧಾಳಿಗಳು ನಡೆದವು. ಇವರ ಕಾಲದಲ್ಲಿ ಈಗಿನ ನಾಗರಿ ಲಿಪಿಯ ಬಳಕೆಯಾಯಿತು. ನಂದಿನಾಗರಿಯ ಬಳಕೆ ಈ ಕಾಲದಿಂದ ನಿಂತಿತು.

ನಾಗರಿಲಿಪಿಯನ್ನು ತಾಳೆಗರಿಯ ಮೇಲೆ ಬರೆಯುವಾಗ ಕೆಲವು ಸಣ್ಣ ಪುಟ್ಟ ಬದಲಾವಣೆಯನ್ನು ಮಾಡಿಕೊಳ್ಳಬೇಕಿತ್ತು. ನಾಗರಿಯ ನೇರರೇಖೆಗಳನ್ನು ಅಲ್ಲಲ್ಲಿ ವಕ್ರರೇಖೆಗಳಾಗಿ ಮಾಡಬೇಕಿತ್ತು. ಈ ಬದಲಾವಣೆಯನ್ನು ನಂದಿನಾಗರಿಯಲ್ಲಿ ಕಾಣುತ್ತೇವೆ.


ಹಂಪೆಯ ಶಾಸನವನ್ನು ಗಮನಿಸಿದಾಗ ನಾಗರಿಗೂ ನಂದಿನಾಗರಿಗೂ ಇದ್ದ ಬದಲಾವಣೆಯನ್ನು ಗಮನಿಸಬಹುದಾಗಿದೆ. ಕ್ರಿ.ಶ.೧೫೨೦ರ ಹಂಪೆಯ ವಿರೂಪಾಕ್ಷ ದೇವಾಲಯದ ನಾಗರಿಲಿಪಿಯ ಶಾಸನವನ್ನು ಗಮನಿಸಿದಲ್ಲಿ ಇದು ಯಾದವ, ಹೊಯ್ಸಳರ ಮುಂದುವರಿದ ಲಿಪಿಯಾಗಿದೆ. ತಲೆಕಟ್ಟುಗಳು ಪ್ರಧಾನವಾಗಿವೆ. ಅ ಕಾರವು ತಲೆಕಟ್ಟನ್ನು ಹೊಂದಿದ್ದು ಇಂದಿನ ರೂಪಕ್ಕೆ ಸಮೀಪವಾಗಿದೆ. ಇ ಕಾರವು ಇ ಕಾರದ ಕೆಳಭಾಗದಲ್ಲಿದ್ದ ಪ್ರತ್ಯೇಕವಾದ ದಂಡಸಂಹಿತವಾದ ವೃತ್ತವು ಇಲ್ಲಿ ಅಕ್ಷರದ ಭಾಗವಾಗಿ ವೃತ್ತವನ್ನು ಕಳೆದುಕೊಂಡಿದೆ. ಇ ಕಾರದ ಗುಡಿಸುಗಳು ಹಿಂದಿನಂತೆಯೇ ಮುಂದುವರಿದಿದ್ದು, ನೇರ ಸರಳರೇಖೆಗೆ ಬಂದಿದೆ. ಏ ಕಾರದ ಭಾಗವಾಗಿ ಸಾಲಿನ ನೇರಕ್ಕೆ ಬಂದಿದ್ದ ಗೆರೆ ಇಲ್ಲಿ ಕಾಣುವುದಿಲ್ಲ, ಅದಕ್ಕೆ ಬದಲಾಗಿ ಅಕ್ಷರದ ತಲೆಕಟ್ಟಿನ ಮೇಲೆ ಸುಮಾರು ೪೫ ಡಿಗ್ರಿ ಬಾಗಿದ ಗೆರೆ ಬಂದಿದೆ. ಆದರೂ ಕೆಲವೆಡೆ ಅಪರೂಪವೆಂಬಂತೆ ಗೆರೆ ಬಂದಿರುವುದೂವುಂಟು. ಐ ಕಾರದ ಕಾಗುಣಿತ ತೋರಿಸಲು ಏ ಕಾರದ ಸಮಾನಾಂತರವಾಗಿ ಇನ್ನೊಂದು ಗೆರೆ ಬಂದಿರುವುದುಂಟು. ಓ ಕಾರದ ಕಾಗುಣಿತ ಹಿಂದಿನಂತೆಯೇ ಮುಂದುವರಿದಿದೆ.



ಹಂಪೆಯ ನಾಗರಿ ಶಾಸನ ದೇ.ಕೊ. ರೆಡ್ಡಿ

ಕ.ಪಿ.ಶಾ III ಹಂಪೆ

ನಾಗರಿ ಲಿಪಿ ಬೆಳವಣಿಗೆಯ ಪಟ್ಟಿಕೆ






ದೇ.ಕೊ. ರೆಡ್ಡಿ

ಚ ಕಾರ ಮತ್ತು ವ ಕಾರಗಳಲ್ಲಿನ ವ್ಯತ್ಯಾಸವೆಂದರೆ ವ ಕಾರದಲ್ಲಿ ಗೆರೆಯ ಮಧ್ಯೆ ವೃತ್ತಾಕಾರದ ಹೊಟ್ಟೆ ಬಂದಿದ್ದರೆ ಚ ಕಾರದಲ್ಲಿ ಈ ವೃತ್ತವು ಮೂರು ಮೂಲೆಯದಾಗಿದೆ. ಶ ಮತ್ತು ಸ ಗಳಲ್ಲಿನ ವ್ಯತ್ಯಾಸವೆಂದರೆ ಸ ಕಾರದಲ್ಲಿ ಎರಡೂ ಕಡೆಯ ಗೆರೆಗಳನ್ನು ಕೂಡಿಸಲು ಒಳಗೆಡೆ ಗೆರೆಯೊಂದು ಬಂದಿದೆ. ಶ ಕಾರದಲ್ಲಿ ಅದು ಇಲ್ಲ. ಅನುಸ್ವಾರವು ವೃತ್ತಾಕಾರದಲ್ಲಿದೆ. ಹೀಗಾಗಿ ಈ ಲಿಪಿ ಹೊಯ್ಸಳರ ಲಿಪಿಯ ಮುಂದುವರಿದ ರೂಪವೇ ಆಗಿತ್ತು. ಇದು ನಾಗರಿ ಲಿಪಿಯು ತೀವ್ರ ಬೆಳವಣಿಗೆಯ ಹಂತವನ್ನು ತೋರಿಸಿದೆ. ನಾಗರಿ ಲಿಪಿಯು ತಮಿಳು ಲಿಪಿಯಂತೆ ನಿಧಾನ ಬೆಳವಣಿಗೆಯನ್ನು ತೋರಿಸಿದೆ. ವಿಜಯನಗರದ ಅರಸರು ಯಾದವ ಮತ್ತು ಕಾಕತೀಯರು ಬಳಸಿದ ಲಿಪಿಯನ್ನೇ ಬಳಸುವಾಗ ಈ ಬದಲಾವಣೆ ಮಾಡಿಕೊಂಡಿರುತ್ತಾರೆ.

ಮಧ್ಯಭಾರತದಲ್ಲಿ ಕ್ರಿ.ಶ.೪ನೆಯ ಶತಮಾನದಿಂದ ೭ನೆಯ ಶತಮಾನದ ವರೆಗೆ ಪೆಟ್ಟಿಗೆಯಾಕಾರದ ಲಿಪಿ ಬಳಕೆಯಲ್ಲಿತ್ತು. ಮುಖ್ಯವಾಗಿ ವಾಕಾಟಕರು ಈ ಲಿಪಿಯನ್ನು ಮುಖ್ಯವಾಗಿ ಬಳಸಿದ ರಾಜಮನೆತನಗಳಲ್ಲಿ ಪ್ರಮುಖರು. ಇವರ ಪ್ರಭಾವದಿಂದ ದಕ್ಷಿಣದಲ್ಲಿ ಕದಂಬರು, ಕಳಿಂಗವನ್ನಾಳಿದ ನಳರು ಮುಂತಾದವರು ಇದನ್ನು ಬಳಸಿದರು. ಮುಂದೆ ಬಹಳ ಕಾಲ ಈ ಲಿಪಿ ಬಳಕೆಯಲ್ಲಿ ಮುಂದುವರಿಯಲಿಲ್ಲ. ಕ್ರಿ.ಶ.೭ನೆಯ ಶತಮಾನಕ್ಕೆ ಕಾಣೆಯಾಯಿತು. ಕದಂಬರ ಶಾಸನಗಳ ತಲೆಕಟ್ಟುಗಳಲ್ಲಿ ಈ ಪೆಟ್ಟಿಗೆಯು ಪೂರ್ಣವಾಗಿ ಕೆತ್ತಿದ್ದರೆ, ವಾಕಾಟಕರಲ್ಲಿ ಇದನ್ನು




ನಂದಿನಾಗರಿ ವರ್ಣಮಾಲೆ ದೇ.ಕೊ. ರೆಡ್ಡಿ

ನಾಲ್ಕು ಗೆರೆಗಳಲ್ಲಿ ಕೆತ್ತಿರುತ್ತಾರೆ. ಕಳಿಂಗದ ಗಂಗರು ಮುಂತಾದವರಲ್ಲಿ ಇದೇ ಪೆಟ್ಟಿಗೆಯನ್ನು ಕದಂಬರ ಶಾಸನಗಳಂತೆ ಕೆತ್ತಿರುತ್ತಾರೆ. ಉಳಿದಂತೆ ಅಕ್ಷರಗಳು ಗೆರೆಯಾಗಿ, ಬಿಡಿಬಿಡಿಯಾಗಿ ಚೌಕಾಕಾರದ ಚೌಕಟ್ಟಿಗೆ ಒಳಪಟ್ಟಿರುತ್ತವೆ.

ಶಾರದಾ ಲಿಪಿ

ಈಗ ಶಾರದಾಲಿಪಿಯೆಂದು ಕರೆಯುವ ಲಿಪಿಯು ಕಾಶ್ಮೀರದಲ್ಲಿ ಬಳಕೆಯಲ್ಲಿದೆ. ಇದು ಪಶ್ಚಿಮ ಗುಪ್ತಲಿಪಿಯಿಂದ ನಿಷ್ಪನ್ನವಾಗಿದೆ. ಕಾಂಗ್ರಾಕಣಿವೆಯ ಕೀರಗ್ರಾಮದಲ್ಲಿ ದೊರೆತ ಬೈಜನಾಥ ಪ್ರಶಸ್ತಿಯೇ (ಕ್ರಿ.ಶ.೮೦೪) ಪ್ರಾಚೀನವಾದದ್ದು. ಕಾಶ್ಮೀರದ 'ವರ್ಮ' ಮನೆತನದ ನಾಣ್ಯಗಳಲ್ಲಿ ಈ ಲಿಪಿಯ ಪೂರ್ಣ ವಿಕಾಸವನ್ನು ಕಾಣಬಹುದಾಗಿದೆ. ಈ ಲಿಪಿಯ ಹಾಗೂ ಕಾಶ್ಮೀರಿ ಭಾಷೆಯ ಹಸ್ತಪ್ರತಿಗಳು ವಾರಾಣಸಿಯಲ್ಲಿ ದೊರೆತಿವೆ. ಈ ಲಿಪಿಯ ಸಾಮಾನ್ಯ ಲಕ್ಷಣವೆಂದರೆ ಎದ್ದು ಕಾಣುವ ನೇರವಾದ ತಲೆಕಟ್ಟುಗಳು.

ಈ ಲಿಪಿಯು ವಾಯುವ್ಯ ಭಾರತದ ಪ್ರದೇಶಗಳಾದ ಲಡಾಖ್, ಜಮ್ಮು ಹಿಮಾಚಲ ಪ್ರದೇಶ, ಪಂಜಾಬ್ ಮತ್ತು ದೆಹಲಿಗಳಲ್ಲಿ ಬಳಕೆಯಲ್ಲಿತ್ತು. ಪಾಕಿಸ್ತಾನದ ಅತ್ತೋಕ್ ಜಿಲ್ಲೆಯಲ್ಲಿನ ಹುಂದ್ ಎಂಬಲ್ಲಿ ಕ್ರಿ.ಶ.೭೭೪ರ ಪ್ರಾಚೀನ ಶಾಸನ ದೊರೆತಿದೆ. (E.I.XXII.p.97) ಕ್ರಿ.ಶ.೧೩ನೆಯ ಶತಮಾನದ ನಂತರ ಈ ಲಿಪಿಯ ಇನ್ನೊಂದು ರೂಪವಾದ 'ದೇವಶೇಷ' ಲಿಪಿಯನ್ನು ಹಿಮಾಚಲ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿ ಬಳಸಿರುತ್ತಾರೆ. ಇದೇ ಮುಂದೆ ಗುರ್ಮುಖಿ ಮತ್ತು ತಾಕರೀ ಲಿಪಿಗಳಿಗೆ ಮೂಲವಾಯಿತು. ಅಲ್ಬರೂನಿ ಪ್ರಕಾರ ಕಾಶ್ಮೀರದಲ್ಲಿ ಬಳಕೆಯಲ್ಲಿದ್ದ ಲಿಪಿ 'ಸಿದ್ಧಮಾತೃಕಾ'. ಕಾಶ್ಮೀರದ ಕವಿ ಕಲ್ಹಣನು ಶಾರದಾ ಲಿಪಿಯ ಬಗ್ಗೆ ಏನನ್ನೂ ಹೇಳುವುದಿಲ್ಲ. ದಾನಿಯವರ ಪ್ರಕಾರ ಗುಪ್ತರ ಲಿಪಿಯು ಕಾಶ್ಮೀರದಲ್ಲಿ ವಾಯುವ್ಯ ಗುಡ್ಡಗಾಡು ಪ್ರದೇಶದಲ್ಲಿ ಬಳಕೆಯಲ್ಲಿದ್ದು ಮುಂದೆ ಕಾಶ್ಮೀರ, ಚಂಬಾಪ್ರದೇಶಗಳಲ್ಲಿ ಹರಡಿ ಶಾರದಾ ಲಿಪಿಗೆ ಮೂಲವಾಯಿತೆಂದಿರುತ್ತಾರೆ. ಸಿದ್ಧಮಾತೃಕಾ ಮತ್ತು ನಾಗರೀಲಿಪಿಯ ಮಧ್ಯೆ ಅಲ್ಪ ವ್ಯತ್ಯಾಸಗಳಿವೆ.



EI. XXII. p. 98 ಶಾರದ ಲಿಪಿ ಶಾಸನ ದೇ.ಕೊ. ರೆಡ್ಡಿ

ನಾಗರೀ ಲಿಪಿಯು 'ವರ್ಣನಾಗ'ದಿಂದ ನಿಷ್ಪನ್ನವಾಗಿದೆ. (E.I.XXXi.p.28) ಈ ಬಗೆಯ ಬರೆವಣಿಗೆ ಮಾಳ್ವದಲ್ಲಿ ಬಳಕೆಯಲ್ಲಿತ್ತು. ಸಿದ್ಧಮಾತೃಕಾ ಲಿಪಿಗೆ 'ಕುಟಿಲ' ಎಂಬ ಹೆಸರೂ ಇತ್ತು. ಉತ್ತರದಲ್ಲಿ ಈ ಲಿಪಿಗಳ ಬದಲಾವಣೆಗೆ ಲೇಖಕರು ಬಳಸಿದ ಲೇಖನಿಯೇ ಮೂಲ ಕಾರಣವಾಗಿದೆ. ಕಾಶ್ಮೀರದಲ್ಲಿನ ಈ ಲಿಪಿಗೆ ಈ ಹೆಸರು ಬರಲು ಅದು ಶಾರದಾದೇವಿ ಕ್ಷೇತ್ರವಾಗಿರುವುದೂ ಕಾರಣ. ಹೀಗಾಗಿ ಈ ಲಿಪಿಗೆ ಶಾರದಾ ಲಿಪಿಯೆಂಬ ಹೆಸರು ಬಂದಿದೆ.

ಶಾರದಾ ಲಿಪಿಯು ಶಾಸನಗಳಲ್ಲಿ ಕ್ರಿ.ಶ.೮ನೆಯ ಶತಮಾನದಿಂದ ಬಳಕೆಯಾಗಿದ್ದರೂ ಈ ಲಿಪಿಯ ಪ್ರಾಚೀನ ಹಸ್ತಪ್ರತಿ ದೊರೆತಿರುವುದು ಕ್ರಿ.ಶ.ಸು.೧೨ನೆಯ ಶತಮಾನಕ್ಕೆ ಸೇರಿದ್ದು. ಪಾಕಿಸ್ತಾನದ ಪೆಶಾವರ್ ಜಿಲ್ಲೆಯ ಬಕ್ಷಾಲಿಯಲ್ಲಿ ದೊರೆತ ಗಣಿತಕ್ಕೆ ಸಂಬಂಧಿಸಿದ ಹಸ್ತಪ್ರತಿಯೇ ಪ್ರಾಚೀನವಾದದ್ದು. (Corpus of Sarada Inscriptions in Kashmir p.166)

ಭಾರತದಲ್ಲಿ ಬರೆವಣಿಗೆಯನ್ನು ಆರಂಭಿಸುವ ಮೊದಲು 'ಓಂ ನಮಃ ಸಿದ್ಧಮ್ ಓಂ' ಎಂದು ಬರೆಸುತ್ತಾರೆ. ಕಾಶ್ಮೀರದಲ್ಲಿ ಈ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆಯಿದೆ. 'ಓಂ ಸ್ವಸ್ತಿ ಏಕಮ್ ಸಿದ್ಧಮ್ ಓಂ' ಎಂದು ಬರೆಸುತ್ತಾರೆ. ಇಲ್ಲಿನ 'ಏಕಮ್' ಶಬ್ದವನ್ನು ವಿಶಿಷ್ಟವಾದ ಚಿಹ್ನೆಯನ್ನು ಬರೆದು ತೋರಿಸುತ್ತಾರೆ. ಉಳಿದ ಅಕ್ಷರಗಳನ್ನು ಶಾರದಾ ಲಿಪಿಯಲ್ಲಿ ಬರೆದಿರುತ್ತಾರೆ. ಕಾಶ್ಮೀರದ ಶೈವಧರ್ಮದ ಪ್ರಕಾರ ಪ್ರತಿ ಅಕ್ಷರವನ್ನು ಮಂತ್ರದಂತೆ ತಿಳಿಯಬೇಕಾಗಿದೆ. ಇವು ಬರಿಯ ಮಂತ್ರಗಳಲ್ಲದೆ, ಮಂತ್ರ ಚಕ್ರಗಳೂ ಆಗಿವೆ. ಪ್ರತಿ ಅಕ್ಷರವೂ ಯಾವುದೋ ಒಂದು ಗೂಡಾರ್ಥವನ್ನು ನೀಡುವ ಚಿಹ್ನೆಯಾಗಿದೆ. ಸ್ವರಗಳು ಬೇರೆ ಬೇರೆ ಶಕ್ತಿಯರನ್ನೂ, 'ಕ' ದಿಂದ 'ಮ' ವರೆಗಿನ ವ್ಯಂಜನಗಳು ಅಧೋತತ್ವಗಳನ್ನು, ಇತರ ಅಕ್ಷರಗಳು ಊರ್ಧ್ವ ತತ್ವಗಳನ್ನೂ, ಕ್ಷ ಕಾರವು ಪ್ರಾಣಬೀಜವನ್ನು ಪ್ರತಿನಿಧಿಸುತ್ತವೆ. ಇದರಂತೆ 'ಅ' ಕಾರವು ಜ್ಞಾನಶಕ್ತಿಯನ್ನೂ, ಇದು ಶಿವನ ಅನುತ್ತರ ಮತ್ತು ಅಕುಲವನ್ನು ಸೂಚಿಸುತ್ತದೆ.

ಈ ಹಿಂದೆ ಹೇಳಿದ 'ಏಕಮ್' ಎಂಬ ಚಿಹ್ನೆಯು ಮೂರು ಭಾಗಗಳಿಂದ ಕೂಡಿದೆ. ತಲೆಕಟ್ಟಿನ ಅಕಾರ ಚಿಹ್ನೆಯು ಶಿವನನ್ನೂ, ಮಧ್ಯದ ಎರಡು ಗೆರೆಗಳು ಇತರೆ ಸ್ವರಗಳನ್ನೂ ಮತ್ತು ಅವಕ್ಕೆ ಸಂಬಂಧಿಸಿದ ಶಕ್ತಿಗಳನ್ನೂ, ಎದುರು ಬದಿರಾಗಿ ಬಾಗಿರುವ ಎಂಬ ರೀತಿಯ

ಗೆರೆಗಳು ಹಲ ಎಂದರೆ ನೇಗಿಲನ್ನು ಸೂಚಿಸುತ್ತದೆ. ಹೀಗಾಗಿ ಇಡೀ ಚಿಹ್ನೆ ವರ್ಣಮಾಲೆಯ ಸ್ವರ ಮತ್ತು ವ್ಯಂಜನಗಳನ್ನು ಪ್ರತಿನಿಧಿಸುತ್ತದೆ. ಗೂಡಾರ್ಥದಲ್ಲಿ ಇದು ಶಿವ ಮತ್ತು ಶಿವೆಯರ ಶಿವ-ಶಕ್ತಿ ತತ್ವಗಳನ್ನು ಪ್ರತಿನಿಧಿಸುತ್ತದೆ.

ಆದರೆ ಸಂಸ್ಕೃತದ ಅಕ್ಷರಾಭ್ಯಾಸವನ್ನು ಅಕ್ಷರದ ಉಚ್ಚಾರದ ಜೊತೆಗೆ ಅದರಿಂದ ನಿಷ್ಪನ್ನವಾಗುವ ಪದವನ್ನು ಸೇರಿಸಿ ಉಚ್ಚರಿಸುತ್ತಿದ್ದಾರೆ. ಲಲಿತವಿಸ್ತರದಲ್ಲಿ ಬುದ್ಧನು ಅಕ್ಷರಗಳನ್ನು ಕಲಿಯುತ್ತಿದ್ದ ರೀತಿಯನ್ನು ವರ್ಣಿಸಿದೆ. ಒಂದು ವರ್ಣ ಅಥವಾ ಅಕ್ಷರವನ್ನು ಹೇಳಿ ಆ ಅಕ್ಷರದ ಮುಂದೆ ಬೇರೆ ಪದವನ್ನು ಹೇಳುತ್ತಿದ್ದಂತೆ ತಿಳಿಸಿದೆ. ಬಹುಶಃ ಸಂಸ್ಕೃತ ವರ್ಣಮಾಲೆಯನ್ನು ಕಲಿಯುವಾಗ ಈ ಪದ್ಧತಿ ಅನುಸರಿಸುತ್ತಿರಬಹುದು. " . . . . . . ಯದಾಂ ಅಕಾರಂ ಪರಿಕೀರ್ತಯತಿಸ್ಮ ತದಾ ಅನಿತ್ಯಃ ಸರ್ವಸಂಸಾರಶಬ್ದೋ ನಿಶ್ಚರತಿಸ್ಮ, ಆಕಾರೇ ಪರಿಕೀರ್ತ್ಯ ಮಾನೇ ಆತ್ಮಪರಹಿತಶಬ್ದೋ ನಿಶ್ಚರತಿಸ್ಮ, ಇಕಾರೇ ಇಂದಿರ್ಯವೈಕಲ್ಯ ಶಬ್ದಃ, ಈ ಕಾರೇ ಈತಿ ಬಹುಳಂ ಜಗದಿತಿ, ಉ ಕಾರೇ ಉಪದ್ರವ ಬಹುಳಂ ಜಗದಿತಿ, ಊಕಾರೇ ಊನಸತ್ವಂ ಜಗದಿತಿ. ಏಕಾರೇ ಏಷಣಾಸಮುತ್ಥಾನದೋಷ ಶಬ್ದಃ, ಐಕಾರೇ ಐದ್ಯಾಪಥ ಶ್ರೋಯಾನಿತಿ, ಓಕಾರಂ ಓಘೋತ್ತರ ಶಬ್ದಃ, ಔಕಾರೇ ಔಪಪಾದುಕಾಶಬ್ದಃ, ಅಂಕಾರೇ ಅಮೋಘೋತ್ಪತ್ತಿ ಶಬ್ದಃ . . . . . . ಹೀಗೆ ಮುಂದುವರಿಯುತ್ತಾರೆ. (ಮನಲಿಪಿ ಪುಟ್ಟು ಪೂರ್ವೋತ್ತರಾಲು ಪು.೧೮೧.) ಇಂದಿನ ಪಾಠದ ರೀತಿಯು ಹೀಗೆ ಇದೆ. ಅ = ಅಗಸ, ಇ = ಇಲಿ, ... ಕ = ಕಮಲ, ಗ = ಗದೆ, ಇತ್ಯಾದಿ. ಇದೇ ಪದ್ಧತಿಯು ಶಾರದಾ ಲಿಪಿಯ ಕಲಿಕೆಯಲ್ಲಿ ಮುಂದುವರಿದಿರಬಹುದು.

ಈಗ ಉತ್ತರ ಭಾರತದಲ್ಲಿ ಪಂಜಾಬನ್ನು ಬಿಟ್ಟು ಉಳಿದ ಕಡೆ 'ಅ' ಅಕ್ಷರವನ್ನು 'ಅ' ಕಾರವೆಂದೂ, 'ಕ' ಅಕ್ಷರವನ್ನು 'ಕ'ಕಾರವೆಂದೂ ಕರೆಯುತ್ತಾರೆ. ಗುರ್ಮುಖಿಯಲ್ಲಿ ಇದು ಬದಲಾಗುತ್ತದೆ. 'ಅ' ಕಾರವನ್ನು 'ಅಇರಾ' ಎಂದೂ, ದೀರ್ಘ ಆಕಾರವನ್ನು ಆ-ಕನ್ನಾ ಎಂದೂ, ಕ ಕಾರವನ್ನು ಎರಡು ಸಾರಿ ಉಚ್ಚರಿಸುವ ಮೂಲಕ 'ಕಕ್ಕಾ' ಎಂದೂ, 'ಖ' ಕಾರವನ್ನು ಖಖ್ಖಾ ಎಂದೂ ಉಚ್ಚರಿಸುತ್ತಾರೆ. ಪಂಜಾಬ್ ಮತ್ತು ಕಾಶ್ಮೀರದಲ್ಲಿ ಪ್ರತಿಸ್ವರ ಮತ್ತು ವ್ಯಂಜನಗಳು ತಮ್ಮದೇ ಆದ ಪ್ರತ್ಯೇಕ ಹೆಸರುಗಳನ್ನು ಹೊಂದಿವೆ. ಈ ಹೆಸರುಗಳಿಗೆ ಯಾವುದೇ ನಿರ್ದಿಷ್ಟವಾದ ಅರ್ಥವಿರುವುದಿಲ್ಲ.

ಉದಾ : ಓಂ = ಓಂಕಾರ ಓಂ

ಸ್ವಸ್ತಿ = ಸ್ವಯಂಸೋ

ಸ್ತಿ = ತ್ರಯಿಸ್ ತೇ

ಸಿದ್ಧಂ ಸಿ = ಸ್ಯಾದಿವ್ ಸೇ

ದ್ಧಂ = ದಮರ್ ದಂ

ಅ = ಅಪೌ ಅ

ಆ = ಐತವ್ ಆ

ಕ = ಕೋಇವ್ ಕ

ಗ = ಗಗರ್ ಗ ಹೀಗೆ ....,

ಕಾಶ್ಮೀರದ ಶೈವದ ಆಧ್ಯಾತ್ಮಯೋಗದ ಮತ್ತು (Mysticism) ಆಗಮಗಳ ಪ್ರಕಾರ ಪರಮೇಶ್ವರನು ಶಕ್ತಿಯ ಮೂಲಕ ಬಿಂದುವನ್ನು ಎಚ್ಚರಿಸುತ್ತಾನೆ (stirs). ಈ ಬಿಂದುವು ಜಡವಸ್ತುವಾಗಿದ್ದು (insentiment material) ಇದು ಎಚ್ಚರಗೊಂಡಾಗ ಮಂತ್ರ, ಪದ, ವರ್ಣ, ಭುವನ, ತತ್ವ ಮತ್ತು ಕಲಾ ಎಂಬ ಆರು ಆಧ್ವನಗಳು ಹುಟ್ಟುತ್ತವೆ. ಬಿಂದುವಿನಿಂದ ಪ್ರಣವವು ಗೋಚರಕ್ಕೆ ಬರುತ್ತದೆ. ಅನಂತರ ವರ್ಣಗಳು 'ವರ್ಣಾಧ್ವ'ವನ್ನು ಸೃಷ್ಟಿಸುತ್ತವೆ. ಇವುಗಳಲ್ಲಿ ವ್ಯಂಜನಗಳು ಜೀವವಿಲ್ಲದವು. ಸ್ವರಗಳು ಅವುಗಳ ಜೀವ. ವರ್ಣಗಳು, ಮಂತ್ರಗಳು ಮತ್ತು ಪದಗಳ ಸೇರುವಿಕೆಯಿಂದ ವೇದಗಳು ಮತ್ತು ಆಗಮಗಳು ಸೃಷ್ಟಿಯಾದವು.

ಕಾಶ್ಮೀರಿ ಲಿಪಿಯ ಸಾಮಾನ್ಯ ಲಕ್ಷಣವೆಂದರೆ ಎದ್ದು ಕಾಣುವ ನೇರವಾದ ತಲೆಕಟ್ಟುಗಳು ಮುಂದಿನ ಕಾಲದ ಈ ಲಿಪಿಗಳಲ್ಲಿ ಊ, ಏ,ಐ, ಓ, ಔ, ಜ, ಇ, ಭ, ರ ಅಕ್ಷರಗಳ ಮೇಲೆ ಉದ್ದವಾದ ಗೆರೆಗಳು ಬಂದಿದ್ದರೆ ಅ, ಆ ಮತ್ತು ಯ ಗಳಲ್ಲಿ ಅವು ಕಾಣೆಯಾಗಿವೆ.

ಬಂಗಾಳ ಲಿಪಿ


ಆರ್.ಡಿ.ಬ್ಯಾನರ್ಜಿಯವರು ಬಂಗಾಳ ಲಿಪಿಯ ಮೂಲವನ್ನು ಬಾದಲ್‌ಸ್ತಂಭ ಶಾಸನದಿಂದ ಗುರುತಿಸುತ್ತಾರೆ. ಇದು ನಾರಾಯಣಪಾಲನ ಕಾಲಕ್ಕೆ ಸೇರಿದ್ದು. ಇಲ್ಲಿ ಪಶ್ಚಿಮದ ಲಿಪಿಗಿಂತ ಭಿನ್ನಲಕ್ಷಣಗಳನ್ನು ಗುರುತಿಸಿದ್ದಾರೆ. ಆದರೆ ಮುಂದೆ ರಾಜಕೀಯ ಕಾರಣಗಳಿಂದ ಪಶ್ಚಿಮದ ಗುಪ್ತಲಿಪಿಯಿಂದ ನಿಷ್ಪನ್ನವಾದ ನಾಗರಲಿಪಿಯೇ ಮುಂದುವರಿದು ಪೂರ್ವದಲ್ಲಿ ಪ್ರಚಾರದಲ್ಲಿದ್ದ ಲಿಪಿ ಹಿನ್ನಡೆಯುತ್ತದೆ.

ಕ್ರಿ.ಶ.೧೦-೧೧ನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿನ ಪ್ರಮುಖ ರಾಜ್ಯಗಳು ಮೂಲೆಗುಂಪಾದವು. ಪಶ್ಚಿಮದಿಂದ ಗೂರ್ಜರ ಪ್ರತಿಹಾರರು ಮತ್ತು ಮಂಗೋಲಿಯಾದ ಜನರು ಬಂಗಾಳಕ್ಕೆ ಧಾಳಿ ಮಾಡುತ್ತಾರೆ.


ಕ್ರಿ.ಶ.೧೧ನೆಯ ಶತಮಾನದಿಂದಾಚೆಗೆ ಉತ್ತರ ಭಾರತದ ಪಶ್ಚಿಮದ ಲಿಪಿಗಳಿಗೂ ಪೂರ್ವಭಾಗದ ಲಿಪಿಗಳಿಗೂ ಸ್ಪಷ್ಟವಾದ ವ್ಯತ್ಯಾಸಗಳು ಕಾಣಬರುತ್ತವೆ. ವಾರಣಾಸಿಯ ಪ್ರದೇಶದಲ್ಲಿ ನಾಗರಿ ಬಳಕೆಯಲ್ಲಿದ್ದರೆ ಅದರ ಪೂರ್ವದ ಕಡೆಗೆ ಬಂಗಾಳಿ ಲಿಪಿಯಿರುತ್ತದೆ. ಕ್ರಿ.ಶ.೧೨ನೆಯ ಶತಮಾನದ ಹೊತ್ತಿಗೆ ಬಂಗಾಳಿ ಲಿಪಿಯು ವಿಕಾಸ ಹೊಂದಿರುತ್ತದೆ. ಖ, ಚ, ಥ, ಟ, ಣ, ಭ, ಶ ಮತ್ತು ಹ ಕಾರಗಳು ಮಾತ್ರ ಈ ಕಾಲಕ್ಕೆ ಹಿಂದಿನ ರೂಪದಲ್ಲಿಯೇ ಇರುತ್ತವೆ. ಮಂದಾ, ಕಮೌಲಿ ಮತ್ತು ಗದಾಧರ ದೇವಾಲಯ ಶಾಸನಗಳು ಬಂಗಾಳಿ ಲಿಪಿಯಲ್ಲಿವೆ. (Origin of the Bengali Script - R.D.Banerji-1919)

ಶಂಕು ಲಿಪಿ

ಶಂಕು ಲಿಪಿ ಶಾಸನಗಳನ್ನು ಕ್ರಿ.ಶ.೧೮೩೬ ರಲ್ಲಿಯೇ ಉತ್ತರಕಾಶಿ ಜಿಲ್ಲೆಯ ಭರಹಾತ್‌ನಲ್ಲಿ ದೊರೆತ ಹಿತ್ತಾಳೆಯ ತ್ರಿಶೂಲದ ಮೇಲೆ ಜೇಮ್ಸ್ ಪ್ರಿನ್ಸೆಪ್ ಗಮನಿಸಿದ್ದ. ಮುಂದೆ ಶಾಸನಗಳ ಶೋಧನೆ ನಡೆಯುತ್ತಿದ್ದಂತೆ ಈ ಲಿಪಿಯ ಶಾಸನಗಳು ಬರಾಬರ್ ಬೆಟ್ಟಗಳ ಸಾಲಿನ ನಾಗಾರ್ಜುನಿ



ರಾಂಜಿಂ ಶಾಸನ 'ಶ್ರೀ ಪೂರ್ಣಾದಿತ್ಯ' ಸಿ.ಶಿ.ಮೂರ್ತಿ



ದೇ.ಕೊ. ರೆಡ್ಡಿ

EI. XXII p.4

ಜಾವಾದ ಪೂರ್ಣವರ್ಮನ ಹೆಸರಿನ ಶಾಸನ

ಬೆಟ್ಟಗಳಲ್ಲಿ ಕಾಣಿಸಿದವು. ಈ ಶಾಸನಗಳನ್ನು ಪ್ರಿನ್ಸೆಪ್ illegible and rude ರೀತಿಯ ಬರೆವಣಿಗೆಯೆಂದು ಕರೆದ. ಮುಂದೆ ಈ ಶಾಸನಗಳನ್ನು ಓದುವ ಬಗ್ಗೆ ಯಾರೂ ಗಮನ ಕೊಡಲಿಲ್ಲ. ೧೯೬೩ರ ನಂತರ ಡಿ.ಸಿ. ಸರ್ಕಾರ್, ಶಿವರಾಮಮೂರ್ತಿ ಮುಂತಾದವರು ಗಮನ ಹರಿಸಿದರೂ ಓದಿರಲಿಲ್ಲ. ಈ ಬಗೆಯ ಶಾಸನಗಳು ಇಡೀ ಭಾರತದಲ್ಲಿ ಕಂಡುಬಂದಿವೆ. ಕರ್ನಾಟಕದಲ್ಲಿ ಚಂದ್ರವಳ್ಳಿ, ಸೊಂಡೂರು, ಬಾದಾಮಿ, ಮಾಗಡಿ ತಾಲೂಕಿನ ಬೆಟ್ಟಗಳಲ್ಲಿ ಈ ಲಿಪಿ ಕಂಡುಬಂದಿದೆ. ಆದರೆ ಇವೆಲ್ಲವೂ ಒಂದೆರಡು ಪದಗಳನ್ನು ಮಾತ್ರ ಪಡೆದಿರುವ ಶಾಸನಗಳಾಗಿವೆಯೇ ಹೊರತು ದೀರ್ಘ ಶಾಸನಗಳಾಗಿಲ್ಲ. ದಾನ ಶಾಸನಗಳಲ್ಲಾಗಲೀ, ದೀರ್ಘವಾದ ತಾಮ್ರಶಾಸನಗಳಲ್ಲಾಗಲೀ ಈ ಲಿಪಿ ಕಂಡುಬಂದಿಲ್ಲವೆಂದು ಈ ಲಿಪಿಗಳ ಬಗ್ಗೆ ಹೆಚ್ಚು ಅಧ್ಯಯನ ಮಾಡಿರುವ ರಿಚರ್ಡ್ ಸಾಲೋಮನ್ ತಿಳಿಸಿದ್ದಾರೆ. ಖರೋಷ್ಠಿ ಲಿಪಿಯಲ್ಲಿ ಈ ಶಂಕುಲಿಪಿಗಳು ಇಲ್ಲ. ಈ ಲಿಪಿಗಳು ದೊರೆತಿರುವ ಸ್ಥಳಗಳು ಹಿಂದೆ ಧಾರ್ಮಿಕ ಸ್ಥಳಗಳಾಗಿದ್ದವೆಂದೂ ತಿಳಿಯಬಹುದಾಗಿದೆ. ಇಂಡೋನೇಷಿಯಾದ ಜಾವಾದಲ್ಲಿಯೂ ಪೂರ್ಣವರ್ಮನ ಶಾಸನದ ಬಳಿ ಶಂಕು ಲಿಪಿ ಶಾಸನ ಕಂಡುಬಂದಿದೆ.

ಶಂಕು ಲಿಪಿಯ ಅಕ್ಷರಗಳು ಪೂರ್ಣವಾಗಿ ಅಲಂಕಾರಯುಕ್ತವಾಗಿದ್ದು, ಮೂಲ ಅಕ್ಷರವನ್ನು ಗುರುತಿಸುವುದು ಕಷ್ಟ. ಅಕ್ಷರದ ಗೆರೆಗಳು ಅರೆವೃತ್ತಾಕಾರವಾಗಿ ಬೆಳೆದು ಅಲಂಕಾರಕ್ಕೆ ತಕ್ಕಂತೆ

ಅವನ್ನು ಬಾಗಿಸಿ ಬಳುಕಿಸಿರುತ್ತಾರೆ. ಸಮುದ್ರಗುಪ್ತನ ಕಾಲದ ಕಲ್ಲಿನ ಕುದುರೆಯ ಮೇಲೆ ಶೂಲದ ಮೇಲೆ, ಕರ್ನಾಟಕದಲ್ಲಿ ಸಿಕ್ಕಿರುವ ಸ್ಥಳಗಳಲ್ಲಿ ರಾಳದ ಬಣ್ಣದಲ್ಲಿ ಇವನ್ನು ಬರೆದಿರುತ್ತಾರೆ. ಬಳಸಿರುವ ಸ್ಥಳವನ್ನು ಗಮನಕ್ಕೆ ತೆಗೆದುಕೊಂಡಲ್ಲಿ ಈ ಬರವಣಿಗೆಯು ಪವಿತ್ರ ಬರವಣಿಗೆಯಾಗಿತ್ತೆಂಬ ಅಂಶವನ್ನು ಮನಗಾಣಬಹುದು.

ಶಂಕುಲಿಪಿ ಶಾಸನಗಳಲ್ಲಿ ಬಹುತೇಕ ಸಂಸ್ಕೃತ ಭಾಷೆಯನ್ನು ಬಳಸಲಾಗಿದೆ. ಮಥುರಾದ ಬಳಿಯ ಕಂಕಾಲಿತಿಲಾದಲ್ಲಿ ದೊರೆತ ಶಾಸನದಲ್ಲಿ ಮಾತ್ರ ಪ್ರಾಕೃತ ಮತ್ತು ಸಂಸ್ಕೃತ ಭಾಷೆಯನ್ನು ಬಳಸಲಾಗಿದೆ. ಈ ಎಲ್ಲಾ ಶಾಸನಗಳಲ್ಲಿ ರಾಜನ ಹೆಸರು ಅಥವಾ ಬಿರುದನ್ನು ಬರೆಯಲು ಬಳಸಲಾಗಿದೆ. (The shell script - Amitabha Bhattacharya, Prachiprabha - p.59)

ಅಧ್ಯಾಯ - ೫

ದಕ್ಷಿಣ ಭಾರತದ ಲಿಪಿಗಳು

ಕನ್ನಡ ಲಿಪಿ

ಶಾತವಾಹನರ ಲಿಪಿ

ಮೌರ್ಯರ ಪತನಾನಂತರ ಭಾರತವು ಚಿಕ್ಕರಾಜ್ಯಗಳಾಗಿ ಒಡೆಯುತ್ತದೆ. ಪಶ್ಚಿಮ ಮತ್ತು ವಾಯುವ್ಯದಲ್ಲಿ ಶಕ-ಕ್ಷತ್ರಪರು ಮತ್ತು ಹೂಣರು; ಪೂರ್ವತೀರದಲ್ಲಿ ಖಾರವೇಲ ಹಾಗೆಯೇ ದಕ್ಷಿಣದಲ್ಲಿ ಶಾತವಾಹನರು ತಲೆ ಎತ್ತಿ ಪ್ರಬಲರಾಗುತ್ತಾರೆ. ಇವರಲ್ಲದೆ ಅನೇಕ ಸಣ್ಣ ಸಣ್ಣ ರಾಜರು ಸ್ಥಳೀಯವಾಗಿ ಪ್ರಬಲರಾಗಿ ಆಳ್ವಿಕೆ ನಡೆಸಿರುತ್ತಾರೆ. ಇವರಲ್ಲಿ ಬಹುತೇಕ ಮಂದಿ ಶಾಸನಗಳನ್ನು ಹಾಕಿಸಿರುತ್ತಾರೆ. ಹೀಗೆ ಶಾಸನಗಳನ್ನು ಹಾಕಿಸುವಾಗ ತಮ್ಮ ಕಾಲದಲ್ಲಿ ಪ್ರಚಲಿತವಿದ್ದ ಲಿಪಿಯನ್ನು ಬಳಸಿರುತ್ತಾರೆ. ಈ ಲಿಪಿ ಮೌರ್ಯರ ಅರಸ ಅಶೋಕನು ಬಳಸಿದ ಬ್ರಾಹ್ಮಿಲಿಪಿಯೇ ಆಗಿರುತ್ತದೆ. ಆದರೆ ಯಥ್ವತ್ತಾಗಿ ಅಶೋಕನ ಲಿಪಿಗಳಾಗಿರದೆ ಅಲ್ಪ ಸ್ವಲ್ಪ ಬದಲಾದ ಲಿಪಿಗಳಾಗಿರುತ್ತವೆ. ಇದಕ್ಕೆ ಕಾರಣ ಶಿಲಾಮಾಧ್ಯಮದ ಮೇಲೆ ಬರೆಯಲು ಬಳಸಿದ ಮಸಿ ಮತ್ತು ಕುಂಚ. ಇವುಗಳ ಬಳಕೆಯಿಂದ ಮೂಲ ಅಶೋಕನ ಬಳಕೆಯ ಲಿಪಿಯಲ್ಲಿ ನಿಧಾನವಾದ ಅಲ್ಪ ಸ್ವಲ್ಪ ಬದಲಾವಣೆಗಳು ಆಗಲಾರಂಭಿಸಿದವು. ಜೊತೆಗೆ ಲಿಪಿಕಾರರಲ್ಲಿಯೂ ಒಬ್ಬರ ಅಕ್ಷರವಿದ್ದಂತೆ ಇನ್ನೊಬ್ಬರದಿರುತ್ತಿರಲಿಲ್ಲ. ಬದಲಾವಣೆ ಕಾಣಿಸಿಕೊಳ್ಳಲು ಇದೂ ಒಂದು ಕಾರಣ.

ದಕ್ಷಿಣದಲ್ಲಿ ಇಂತಹ ಭಿನ್ನತೆಯ ಅಕ್ಷರಗಳುಳ್ಳ ಶಾಸನವನ್ನು ಭಟ್ಟಿಪ್ರೋಲು ಎಂಬಲ್ಲಿನ ಬೌದ್ಧ ಕರಂಡಕಗಳ ಮೇಲೆ ಕಾಣುತ್ತೇವೆ. ಈ ಶಾಸನ ಅಶೋಕನಿಗಿಂತ ಪೂರ್ವದ್ದೆಂದು ಕೆಲವರ ವಾದ. ಆದರೆ ಅಶೋಕನ ಲಿಪಿಯ ಮುಂದಿನ ಹಂತದ ಶಾಸನ ಇದಾಗಿದೆ. ಈ ಲಿಪಿಗಳ ಬೆಳವಣಿಗೆಯನ್ನು ಗುರುತಿಸುವಾಗ ಮೊದಲ ನೋಟದಲ್ಲಿ ಮೂರು ಅಕ್ಷರಗಳನ್ನು ಗಮನಿಸಬೇಕಾಗುತ್ತದೆ. ಅವುಗಳಲ್ಲಿ ಅ, ಕ, ರ ಅಕ್ಷರಗಳು ನೇರವಾದ ಗೆರೆಯನ್ನು ಹೊಂದಿರುತ್ತವೆ. ಇವು ಕಾಲದಿಂದ ಕಾಲಕ್ಕೆ ಇತರೆ ಅಕ್ಷರಗಳಿಗಿಂತ ಸ್ಪಷ್ಟವಾದ, ಗುರುತಿಸಬಹುದಾದ ಬೆಳವಣಿಗೆಯನ್ನು ತೋರಿಸುತ್ತಿವೆ. ಉಳಿದ ಅಕ್ಷರಗಳಲ್ಲಿ ಅವಕ್ಕೆ ಸೇರಿಸುವ ಗುಣಿತಾಕ್ಷರಗಳ ಗೆರೆಗಳು ಇಂತಹ ಬೆಳವಣಿಗೆಯನ್ನು ತೋರಿಸುತ್ತವೆ. ಮೇಲ್ಕಂಡ ಬೆಳವಣಿಗೆಯನ್ನು ಪಡೆದಿರುವ ಲಕಾರವೂ ಬೆಳವಣಿಗೆಯನ್ನು ನಿರ್ದಿಷ್ಟವಾಗಿ ತೋರಿಸುತ್ತದೆ.


ಅಶೋಕನ ಕಾಲದ ಅಕ್ಷರಗಳು ಗೆರೆಗಳನ್ನುಳ್ಳ, ಬಾಗಿದ ವೃತ್ತಾಕಾರದ, ಅರೆವೃತ್ತಾಕಾರದ ಅಕ್ಷರಗಳನ್ನು ಹೊಂದಿತ್ತು. ಆದರೆ ಮುಂದೆ ಬರೆವಣಿಗೆಯ ಬಳಕೆ ವಿಸ್ತಾರವಾದಂತೆ ಮತ್ತು

ಬರೆವಣಿಗೆಯ ಮಾಧ್ಯಮಗಳು ಬದಲಾದಂತೆ ಅಕ್ಷರಗಳು ತಮ್ಮ ಸ್ಥಿರರೂಪಗಳಿಂದ ಅಲ್ಪ ಸ್ವಲ್ಪ ಬದಲಾವಣೆ ತೋರಿಸುತ್ತವೆ. ಈ ಬಗೆಯ ಬದಲಾವಣೆ ಪ್ರಪಂಚದ ಎಲ್ಲಾ ಲಿಪಿಗಳಲ್ಲೂ ಕಾಣುತ್ತೇವೆ. ಈ ನಿರಂತರ ಬದಲಾವಣೆಗೆ ಮಂಗಳ ಹಾಡಿದ್ದು ಮುದ್ರಣದಲ್ಲಿ ಬಳಸುವ ಅಚ್ಚುಗಳು. ಇಲ್ಲಿಂದ ಮುಂದೆ ಎಲ್ಲರೂ ಬಳಸಬೇಕಾದ ಅಕ್ಷರಗಳ ಮಾದರಿ ಇದ್ದದ್ದರಿಂದ, ಇರುವುದರಿಂದ ಬೆಳವಣಿಗೆ ನಿಂತು ಸ್ಥಿರರೂಪ ಬಂತು.

ಬ್ರಾಹ್ಮಿಯನ್ನು ಮರಳಿನ ಮೇಲೆ ಬರೆದು ಅಳಿಸುತ್ತಿದ್ದುದರಿಂದ ಅಕ್ಷರಗಳನ್ನು ಹೇಗೆ ಬರೆದರೂ ನಡೆಯುತ್ತಿತ್ತು. ಮುಂದೆ ಅದು ಶಿಲಾ ಮಾಧ್ಯಮಕ್ಕೆ ಬಂದಾಗ ಆರಂಭದಲ್ಲಿ ಮರಳಿನ ಮೇಲೆ ಬರೆಯುತ್ತಿದ್ದ ಲಿಪಿಯನ್ನೇ ಅನುಸರಿಸಿದರು. ಒಮ್ಮೆ ಲಿಪಿ ಸಾರ್ವತ್ರಿಕವಾಗ ತೊಡಗಿದ ಮೇಲೆ, ಬಳಸುವವರ ಸಂಖ್ಯೆ ಹಾಗೂ ಬಳಸುವ ಮಾಧ್ಯಮಗಳು ಹೆಚ್ಚಾದವು. ಹೀಗಾಗಿ ಬರೆವಣಿಗೆಯ ಸಾಧನಗಳೂ ಬದಲಾಗುತ್ತಾ ಬಂದವು. ಹೀಗೆ ಬರೆವಣಿಗೆಯ ಮಾಧ್ಯಮದಲ್ಲಿ ಬಳಸಲಾದ ಬಹು ಮುಖ್ಯ ಸಾಧನಗಳಲ್ಲಿ ಕುಂಚ ಮತ್ತು ಮಸಿ. ಅಶೋಕನು ಶಾಸನಗಳನ್ನು ಬರೆಸುವಾಗ ಶಾಸನ ಶಿಲೆಗಳ, ಬಂಡೆಗಳ ಮೇಲ್ಮುಖವನ್ನು ನಯಮಾಡಿಕೊಂಡಿರಲಿಲ್ಲ. ಲಿಪಿಕಾರರು ಸಾಧ್ಯವಾದಷ್ಟೂ ಸಮತಟ್ಟಾದ ಸ್ಥಳಗಳನ್ನು ಆಯ್ದು ಅಲ್ಲಿ ಬರೆದಿರುತ್ತಾರೆ. ಆದರೆ ಮುಂದೆ ಕೊರೆದ ಗುಹೆಗಳಲ್ಲಿ, ಆಯ್ದ ಸ್ಥಳಗಳಲ್ಲಿ ಸಿದ್ದಪಡಿಸಿದ ಸ್ಥಳಗಳಲ್ಲಿ ಬರೆಸಿದರು. ಅಶೋಕನು ತನ್ನ ಶಾಸನಗಳನ್ನು ಆಳವಾಗಿ ಕೊರೆಸಿರುತ್ತಾನೆ. ಹೀಗಾಗಿ ಇಂದಿಗೂ ಇವು ಉಳಿದು ಬರಲು ಕಾರಣವಾಯಿತು. ಈ ಕಾರಣದಿಂದ ಎಷ್ಟೇ ಉಬ್ಬು ತಗ್ಗುಗಳಿದ್ದರೂ ಶಾಸನಗಳನ್ನು ಓದಲು ಏನೂ ತೊಂದರೆಯಾಗಿಲ್ಲ. ಅಕ್ಷರಗಳ ವಿನ್ಯಾಸವನ್ನು ಗುರುತಿಸಲು ಕಷ್ಟವಾಗಿಲ್ಲ. ಅಶೋಕನ ನಂತರದ ಕಾಲದಲ್ಲಿ ಬಂಡೆಗಳು, ಚಪ್ಪಡಿಗಲ್ಲುಗಳು, ನಯವಾದ ಅಮೃತಶಿಲೆ ಜಾತಿಯ ಕಲ್ಲುಗಳನ್ನು ಬರೆವಣಿಗೆಗೆ ಬಳಸಿ, ಅವುಗಳ ಮೇಲೆ ಬಣ್ಣದಲ್ಲಿ ಬರೆಯುವಾಗ ಬಣ್ಣವು ಇಳಿಯುತ್ತಿತ್ತು. ಬೀಳುವ ಬಣ್ಣವನ್ನು ಎಳೆದು ಮೇಲೆ ಇಡಬೇಕಾಗಿತ್ತು. ಹೀಗಾಗಿ ಅಕ್ಷರಗಳು ದಪ್ಪವಾಗುತ್ತಾ ಬಂದವು. ಕಾಲಕ್ರಮೇಣ ಕೆಳಮುಖದ ಗೆರೆಗಳು ಕೆಳಕ್ಕೆ ಇಳಿಯುತ್ತಾ ಬಂದವು.

ಭಟ್ಟಿಪ್ರೋಲು ಶಾಸನ ಲಿಪಿಗಳನ್ನು ಗಮನಿಸಿದಾಗ ಗ, ಚ, ಫ, ಭ, ಮ, ಲ, ಶ, ಷ, ಅಕ್ಷರಗಳಲ್ಲದೆ, ಅಕ್ಷರಗಳಿಗೆ ನೀಡಿರುವ ಗುಣಿತಗಳು ವ್ಯತ್ಯಾಸವಾಗಿವೆ. ಇದರೊಂದಿಗೆ ಕೆಲವು ಅಕ್ಷರಗಳ ತಲೆಯ ಮೇಲೆ ಚಿಕ್ಕ ತಲೆಕಟ್ಟು ಕಾಣಿಸಿಕೊಂಡಿದೆ. ಈ ಅಕ್ಷರಗಳನ್ನು ಅನುಸರಿಸಿ ಬೇರೆ ಶಾಸನಗಳು ಉದಿಸಿಲ್ಲ. ಹೀಗಾಗಿ ಇವು ಈ ಶಾಸನಕ್ಕಷ್ಟೇ ವಿಶಿಷ್ಟವಾದ ಲಿಪಿಗಳಾಗಿವೆ. ಲಿಪಿಗಳು ಶಾಸನದಲ್ಲಿ ಮಾತ್ರ ಈ ಆಕಾರ ಪಡೆಯಲು ಕಾರಣವನ್ನು ಹುಡುಕಬೇಕಾಗಿದೆ. ಬಹುಶಃ ಲಿಪಿಯನ್ನು ಕಲಿತ ಸ್ಥಳೀಯನೊಬ್ಬ ಇದನ್ನು ಬರೆದಿರುವುದರಿಂದಲೂ ಶಾಸನವು ವೃತ್ತಾಕಾರವಾಗಿರುವುದರಿಂದ ಒಂದೆಡೆ ಕುಳಿತು ಬರೆದಿರುವುದರಿಂದ ಲಿಪಿಗಳು ಈ ರೀತಿ ಮೂಡಲು ಕಾರಣವಾಗಿರಬೇಕು. ಹೀಗಾಗಿ ಕೆಲವು ಅಕ್ಷರಗಳಲ್ಲಿ ಭಿನ್ನತೆ ಕಂಡುಬಂದಿದೆ. ಶಿವರಾಮಮೂರ್ತಿಯವರಂತಹ ವಿದ್ವಾಂಸರು ಈ ಲಿಪಿ ಬೆಳವಣಿಗೆಯನ್ನು ಮುಂದೆ ತಮಿಳುನಾಡಿನಿಂದ ಆರಂಭಿಸುತ್ತಾರಾದರೂ ಇದರ ಮುಂದಿನ ಬೆಳವಣಿಗೆ ಸ್ಪಷ್ಟವಾಗಿ ಕಾಣುತ್ತಿಲ್ಲ.


ಭಟ್ಟಿಪ್ರೋಲು ಶಾಸನವಾದ ಮೇಲೆ ದಕ್ಷಿಣದಲ್ಲಿ ಮುಂದೆ ದೊರೆಯುವ ಶಾಸನಗಳೆಂದರೆ ಶಾತವಾಹನರವು. ಪಶ್ಚಿಮಘಟ್ಟಗಳಿಂದ ಪೂರ್ವದ ಕೃಷ್ಣಾ ಮುಖಜ ಭೂಮಿಯವರೆಗೆ ಇವರ ಶಾಸನಗಳು ದೊರೆಯುತ್ತವೆ. ಇವರ ಸಮಕಾಲೀನರಾಗಿ ಪಶ್ಚಿಮದ ಗುಜರಾತ್, ರಾಜಸ್ಥಾನ ಮತ್ತು ಮಧ್ಯಭಾರತದಲ್ಲಿ ಶಕ ಕ್ಷತ್ರಪರು ಆಳುತ್ತಿದ್ದರು. ಇವರಲ್ಲದೆ ಗಂಗಾನದಿ ಬಯಲಲ್ಲಿ ಬೇರೆ ಬೇರೆ ಅರಸರು ಆಳುತ್ತಿದ್ದರು. ಈ ಎಲ್ಲಾ ರಾಜರ ಲಿಪಿಗಳೂ ಅಶೋಕನ ಲಿಪಿಗಳಿಗಿಂತ ಮುಂದಿನ ಬೆಳವಣಿಗೆಯನ್ನು ತೋರಿಸುತ್ತಿವೆ.



ಕ್ಷತ್ರಪರ ಶಾಸನ ಕೃಪೆ : TAS. I

ನರ್ಮದೆಯ ದಕ್ಷಿಣಕ್ಕೆ ರಾಜ್ಯವಾಳಿದ ಶಾತವಾಹನರು ತಮ್ಮ ಶಾಸನಗಳನ್ನು ಕಾರ್ಲೆ, ನಾಸಿಕ್, ಕನ್ಹೇರಿ, ಬನವಾಸಿ ಮುಂತಾದ ಕಡೆಗಳಲ್ಲಿ ಬರೆಸಿರುತ್ತಾರೆ. ಕ್ರಿ.ಪೂ. ಒಂದನೆಯ ಶತಮಾನದಿಂದ ಕ್ರಿ.ಶ. ೩ನೆಯ ಶತಮಾನದವರೆಗೆ ಇವರು ರಾಜ್ಯಭಾರ ಮಾಡುತ್ತಾರೆ. ಶಾತವಾಹನರ ಅವಧಿಯಲ್ಲಿನ ಮುಖ್ಯ ಶಾಸನ ನಾಸಿಕದ ಗುಹಾಲಯದ ಶಾಸನ. ಇದು ಪ್ರಾಕೃತ ಭಾಷೆಯಲ್ಲಿದೆ. ಉತ್ತರ ಭಾರತದಲ್ಲಿ ಪ್ರಾಕೃತ ಮತ್ತು ಪಾಳಿ ಭಾಷೆಗಳು ಹಿಂದಕ್ಕೆ ಸರಿದು ಸಂಸ್ಕೃತವು ಶಾಸನಗಳ ಭಾಷೆಯಾಗುತ್ತಿದ್ದರೂ ಶಾತವಾಹನರು ಪ್ರಾಕೃತವನ್ನೇ ಬಳಸಿರುತ್ತಾರೆ. ಹೀಗಾಗಿ ಶಕ ಕ್ಷತ್ರಪರ ಶಾಸನಗಳಲ್ಲಿ ಕಾಣುವ ಅನೇಕ ಅಕ್ಷರಗಳು ಇವರ ಶಾಸನಗಳಲ್ಲಿ ಕಾಣುವುದಿಲ್ಲ. ಆದರೂ ಶಾಸನಗಳ ಲಕ್ಷಣದಲ್ಲಿ ಆ ಕಾಲದ ಸಮಾನತೆಯನ್ನು ಕಾಣುತ್ತೇವೆ. ಅಕ್ಷರಗಳು ಗೆರೆಗೆರೆಯಾಗಿರುವುದರ ಜೊತೆಗೆ ಕೆಲವು ಅಕ್ಷರಗಳು ನೀಳವಾಗಿವೆ. ಅಕ್ಷರಗಳ ತಲೆಗಟ್ಟುಗಳ ಮೇಲೆ ತ್ರಿಕೋಣಾಕಾರವನ್ನು ಹೋಲುವ ಮಂದವಾದ ತಲೆಕಟ್ಟಿದೆ. ಈ ತ್ರಿಕೋಣಾಕಾರದ ತಲೆಕಟ್ಟು, ತಲೆಕಟ್ಟಿಗೆ ಮಾತ್ರ ಸೀಮಿತವಾಗಿಲ್ಲ. ಅಕ್ಷರದ ಎರಡು ಗೆರೆಗಳು ಮೇಲೆ ಬಂದಿದ್ದಲ್ಲಿ ಆ ಎರಡು ಗೆರೆಗಳಿಗೂ ಈ ಬಗೆಯ ತಲೆಕಟ್ಟನ್ನು ನೀಡಿರುತ್ತಾರೆ. ಅ, ಘ, ಪ, ಮ, ಯ ಅಕ್ಷರಗಳಲ್ಲಿ ಇದನ್ನು ಕಾಣಬಹುದು. ಈ ತಲೆಕಟ್ಟಿನಿಂದ ಇ ಕಾರದ ಗುಣಿತವು ಬಂದಿದ್ದಲ್ಲಿ ತಲೆಕಟ್ಟಿಗೆ ಮಾತ್ರ ಇಂತಹ ತ್ರಿಕೋಣವನ್ನು ನೀಡಿದ್ದು ಉಳಿದ ಗೆರೆಗೆ ಮತ್ತು ಗುಣಿತಕ್ಕೆ ನೀಡಿರುವುದಿಲ್ಲ.

ಈ ಕಾಲದ ಅಕ್ಷರಗಳಲ್ಲಿ ಕೆಲವು ತ್ರಿಕೋಣಾಕಾರಕ್ಕೆ ತಿರುಗುತ್ತಿರುವುದನ್ನು ಗಮನಿಸಬಹುದಾಗಿದೆ. ವ,. ಮ ಗಳು ಕೆಲವು ಕಡೆ ಅರೆವೃತ್ತಾಕಾರವಾಗಿ ಇವೆ. ಕೆಲವೆಡೆ




ಕಾರ್ಲೆ ಶಾಸನ ದೇ.ಕೊ. ರೆಡ್ಡಿ

ತ್ರಿಕೋಣಾಕಾರದಲ್ಲಿವೆ. ೧೦ರ ಸಂಖ್ಯೆಯು ಇನ್ನೂ ವೃತ್ತಾಕಾರದಲ್ಲಿದೆ. ತ ಕಾರವೂ ಕೆಲವೆಡೆ ಅರೆವೃತ್ತಾಕಾರದಲ್ಲಿದೆ. ಕಾರ್ಲೆ ಶಾಸನದಲ್ಲಿಯೂ ತಲೆಕಟ್ಟುಗಳು ತ್ರಿಕೋಣಾಕಾರದಲ್ಲಿದ್ದು ಎಲ್ಲ ಅಕ್ಷರಗಳ ಮೇಲೂ ತ್ರಿಕೋಣವಿಲ್ಲ. (EI.VIII. p.326) ಕೆಲವೆಡೆ ಇದೆ; ಕೆಲವೆಡೆ ಇಲ್ಲ. ಇಲ್ಲಿಯೂ ಅಕ್ಷರಗಳು ಅರೆತ್ರಿಕೋಣಾಕಾರಕ್ಕೆ ತಿರುಗಿವೆ. ಗುಣಿತಗಳಲ್ಲಿ ಆ ಕಾರವು ಸಣ್ಣ ಗೆರೆಯಂತೆ ಅಕ್ಷರದ ಬಲಗಡೆಗೆ ಎಳೆಯಲಾಗಿದೆ. ಇ ಕಾರದ ಕಾಗುಣಿತವು ನೇರವಾಗಿದ್ದುದು ಬಲಗಡೆಗೆ ಬಾಗಿದೆ. ಈ ಕಾರದ ಕಾಗುಣಿತವು ಅಕ್ಷರದ ತಲೆಯ ಮೇಲೆ ಎರಡೂ ಕಡೆಗೆ ವಿರೋಧಿ ದಿಕ್ಕಿನಲ್ಲಿ ಬಾಗಿ ಅರೆ ವೃತ್ತಾಕಾರವನ್ನು ಸೃಷ್ಟಿಸಿವೆ. ಉ ಕಾರದ ಕಾಗುಣಿತವು ಅಕ್ಷರದ ಕೆಳಭಾಗದಲ್ಲಿ ಗೆರೆಯಾಗಿ ಇಳಿಬಿಟ್ಟಿದೆ. ಅ, ರ, ಕ ಕಾರದ ಬೆಳವಣಿಗೆಯನ್ನನುಸರಿಸಿ ಅದು ಬೆಳೆದಿದೆ. ಕ, ಖ, ಚ, ಭ, ರ, ಶ ಮುಂತಾದ ಅಕ್ಷರಗಳಲ್ಲಿ ಅಕ್ಷರದ ಬಲಗೆರೆಯ ಬಲಮುಖವಾಗಿ ಸಣ್ಣಗೆರೆ ಎಳೆಯಲಾಗಿದೆ. ಊ ಕಾರವು ಉ ಕಾರದ ಕಾಗುಣಿತ ಗೆರೆಯ ಪಕ್ಕದಲ್ಲಿ (ಎಡಕ್ಕೆ) ಚಿಕ್ಕ ಗೆರೆಯನ್ನು ಎಳೆಯಲಾಗಿದೆ. ಗುಣಿತವು ಅಡ್ಡಕ್ಕೆ ಬಂದಿರುವ ಕಡೆ ಎರಡು ಗೆರೆಗಳನ್ನು ಎಳೆಯಲಾಗಿದೆ. ಋ ಕಾರದ ಕಾಗುಣಿತವು ಶಾತವಾಹನರ ಶಾಸನಗಳಲ್ಲಿ ಕಾಣದಿದ್ದರೂ ಅವರ ಸಮಕಾಲೀನರಾದ ಕ್ಷತ್ರಪರ ಶಾಸನಗಳಲ್ಲಿ ಕಾಣಬರುತ್ತದೆ. ಅಕ್ಷರದ ಕೆಳಭಾಗದಲ್ಲಿ ಅಕ್ಷರಕ್ಕೆ ಹೊಂದಿಕೊಂಡಂತೆ ಎಡಮುಖಕ್ಕೆ ವಕ್ರವಾಗಿ ಬಾಗಿದ ಗೆರೆಯೊಂದನ್ನು ನೀಡಿರುತ್ತಾರೆ. ಏ ಕಾರದ ಕಾಗುಣಿತವನ್ನು ಅಕ್ಷರಗಳ ತಲೆಕಟ್ಟಿನ ಎಡಭಾಗದಲ್ಲಿ ಗೆರೆ ಎಳೆದಿರುತ್ತಾರೆ. ಣ ಕಾರದಂತಹ ಅಕ್ಷರದಲ್ಲಿ ಅಕ್ಷರದ ಮಧ್ಯೆ ಎಡಭಾಗದಲ್ಲಿ ಗೆರೆ ಎಳೆದಿರುತ್ತಾರೆ. ಬ, ಠ, ಥ ಅಕ್ಷರಗಳಲ್ಲಿ ಅಕ್ಷರಗಳ ಮಧ್ಯಭಾಗಕ್ಕೆ ಎಳೆದಿರುತ್ತಾರೆ. ಓ ಕಾರದ ಕಾಗುಣಿತವು ಅಕ್ಷರದ ತಲೆಕಟ್ಟಿನ ಮೇಲೆ ಎರಡೂ ಕಡೆಗೆ ಗೆರೆ ಎಳೆಯುವ ಮೂಲಕ ತೋರಿಸಿರುತ್ತಾರೆ. ಠ, ಥ, ಬ ಗಳಲ್ಲಿ ಈ ಗುಣಿತವು ಅಕ್ಷರದ ಮಧ್ಯೆ ಎರಡೂ ಕಡೆಗೆ ಎಳೆದಿರುತ್ತಾರೆ. ಮ ಕಾರದಲ್ಲಿ ಕೆಲವು ಕಡೆ ಅಕ್ಷರದ ಮೇಲಿನ ಗೆರೆಗಳ ಬುಡದಲ್ಲಿ ನೀಡಿರುತ್ತಾರೆ.


ಶಾಸನಗಳ ಭಾಷೆ ಪ್ರಾಕೃತವಾದ್ದರಿಂದ ಒತ್ತಕ್ಷರಗಳೂ ಕಡಿಮೆ. ಆದರೆ ಇದೇ ಕಾಲದ ಕ್ಷತ್ರಪರ ಶಾಸನಗಳಲ್ಲಿ ಅಕ್ಷರಗಳ ತಳಭಾಗದಲ್ಲಿ ಮೇಲಿನ ಅಕ್ಷರಗಳಿಗೆ ಹೊಂದಿಕೊಂಡಂತೆ ಅದೇ ತರಹದ ಅಕ್ಷರವನ್ನು ತಳಗಡೆ ಬರೆಯುತ್ತಿದ್ದರು. ಅರ್ಕಾವೊತ್ತು ಕೊಡುವಾಗ ಅಕ್ಷರದ ತಲೆಕಟ್ಟಿನ ಮೇಲೆ ನೇರವಾಗಿ ಮೇಲಕ್ಕೆ ಗೆರೆ ಎಳೆಯುತ್ತಿದ್ದರು. ಇಂತಹ ಅಕ್ಷರಕ್ಕೆ ದೀರ್ಘ ಅಥವಾ ಗುಣಿತಗಳನ್ನು ಕೊಡುವಾಗ ಅರ್ಕಾವೊತ್ತಿನ ಗೆರೆಗೆ ಸೇರಿಸಿ ಎಳೆಯುತ್ತಿದ್ದರು. ಒಟ್ಟಾರೆ ಈ ಕಾಲದ ಅಕ್ಷರಗಳು ನೇರವಾದ ಸಾಲುಗಳಿಗೆ ಹೊಂದಿಕೊಂಡಂತೆ ರಚಿತವಾಗಿವೆ. ಅಕ್ಷರಗಳಿಗಿಂತ ಕೆಳಗೆ ಮತ್ತು ಮೇಲೆ ಬೆಳೆದಿರುವ ಭಾಗಗಳನ್ನು ಗೆರೆ ಎಳೆಯುವ ಮೂಲಕ ತೋರಿಸಬಹುದಾಗಿದೆ.

ಈ ಶಾಸನದ ನಂತರದ ಬೆಳವಣಿಗೆಯನ್ನು ನಾಸಿಕದ ಪುಳುಮಾವಿ ಮತ್ತು ಗೌತಮಿಪುತ್ರ ಶಾತಕರ್ಣಿಯ ನಾಗಾರ್ಜುನಕೊಂಡ ಮತ್ತು ಬನವಾಸಿಯ ಸಿವಸಿರಿ ಪುಳುಮಾಯಿಯ ಶಾಸನಗಳಲ್ಲಿ ಕಾಣಬಹುದಾಗಿದೆ. ಇವು ಕ್ರಿ.ಶ. ೩ನೆಯ ಶತಮಾನಕ್ಕೆ ಸೇರಿದ ಶಾಸನಗಳಾಗಿದ್ದು ಇವುಗಳಲ್ಲಿ ಶಾತವಾಹನರ ಕಾಲದ ಲಿಪಿ ಲಕ್ಷಣಗಳು ಸ್ಪಷ್ಟವಾಗಿವೆ. ಅಕ್ಷರಗಳಲ್ಲಿ ಮ, ವ ಗಳು ತ್ರಿಕೋಣಾಕಾರಕ್ಕೆ ತಿರುಗಿವೆ. ಕ, ಇ, ರ ಅಕ್ಷರಗಳ ತಳಗೆರೆಗಳು ನೀಳವಾಗಿ ಕೆಳಕ್ಕೆ ಬೆಳೆದು ಎಡಕ್ಕೆ ಬಾಗಿವೆ. ತಲೆಕಟ್ಟುಗಳು ಸ್ಪಷ್ಟವಾಗಿ ತ್ರಿಕೋಣಾಕಾರದಲ್ಲಿವೆ. ಈ ತ್ರಿಕೋಣಗಳು ಕಡ್ಡಾಯವಾಗಿವೆ. ಣ, ತ




ಶಾತವಾಹನರ ವರ್ಣಮಾಲೆ ದೇ.ಕೊಂ.ರೆಡ್ಡಿ

ಮತ್ತು ನ ಗಳ ಕೆಳಭಾಗ ಎಡಕ್ಕೆ ತಿರುಗಿ ಸುರುಳಿಯಾಗಿ ಬಲಗಡೆಗೆ ಬಂದಿದೆ. ಖ ಕಾರದ ಕೆಳಭಾಗ ಸುರುಳಿಯನ್ನು ಸೃಷ್ಟಿಸಿದೆ. ಪ ಕಾರದ ಎಡಭಾಗದ ಗೆರೆ ಒಳಮುಖಕ್ಕೆ ಬಾಗಿದೆ. ಯ ಕಾರದ ಮೂರೂ ಗೆರೆಗಳು ಸಮಾನಾಂತರವಾಗಿ ಬೆಳೆದಿವೆ. ಆ ಕಾರದ ಕಾಗುಣಿತವು ಹೆಚ್ಚು ಉದ್ದಕ್ಕೆ ಬೆಳೆದಿಲ್ಲ. ಇ ಕಾರದ ಗುಣಿತವು ನೇರವಾಗಿ ಮೇಲಕ್ಕೆ ಹೋಗಿ ಎಡಮುಖಕ್ಕೆ ಕೆಳಕ್ಕೆ



ನಾಸಿಕ್‌ನ ಬಾಲಶ್ರೀ ಶಾಸನ ಕೃಪೆ : ಸಿ. ಶಿವರಾಮ ಮೂರ್ತಿ EI.VIII p.60

ಬಾಗಿದೆ. ಉ ಕಾರದ ಗುಣಿತವೂ ಸಹ ಅಕ್ಷರದ ಕೆಳಗೆ ಬೆಳೆದು ಎಡಕ್ಕೆ ಬಾಗುವ ಲಕ್ಷಣಗಳನ್ನು ಹೊಂದಿದೆ. ಈ ಅಕ್ಷರಗಳ ಮುಂದುವರೆದ ರೂಪವನ್ನು ಮುಂದೆ ನಾಗಾರ್ಜುನಕೊಂಡ ಹಾಗೂ ಅಮರಾವತಿಗಳಲ್ಲಿ ಕಾಣಬಹುದಾಗಿದೆ. ಇಕ್ಷ್ವಾಕುವಂಶದ ವೀರಪುರುಷದತ್ತನ ಶಾಸನದಲ್ಲಿ ಕಾಣಬಹುದಾಗಿದೆ. ಈ ಶಾಸನದ ಅಕ್ಷರಗಳಲ್ಲಿ ಮ ಮತ್ತು ವ ಗಳು ತ್ರಿಕೋಣಾಕಾರದಲ್ಲಿವೆ. ಉಳಿದವು ಗೆರೆಗಳಿಗೆ ಬಂದಿದ್ದರೂ ಸ್ವಲ್ಪ ಬಳುಕಿರುವುದನ್ನು ಕಾಣಬಹುದು. ಅ, ಕ, ರ ಗಳು ಮತ್ತು ಉ ಕಾರದ ಗೆರೆಗಳು ನೀಳವಾಗಿ ಅಕ್ಷರದ ಕೆಳಗೆ ಬೆಳೆದು ಎಡಗಡಗೆ ತಿರುಗಿವೆ. ಕೆಲವು ಮೇಲಕ್ಕೆ ತಿರುಗಿವೆ. ಹಾಗೆಯೇ ಇವಕ್ಕೆ ವಿರುದ್ಧವಾಗಿ ಇ ಕಾರದ ಗುಣಿಸು ಅಕ್ಷರದ ತಲೆಕಟ್ಟಿನ ಮೇಲೆ ಓರೆಯಾಗಿ ಮೇಲಕ್ಕೆ ಹೋಗಿ ಕೆಳಕ್ಕೆ ಬಾಗಿವೆ. ಈ ಕಾರದ ಕಾಗುಣಿತವು ಎರಡೂ ಕಡೆಯಿಂದ ಬಂದ ಗುಡಿಸುಗಳು ಮೇಲಕ್ಕೆ ಸಾಗಿ ಪ್ರತ್ಯೇಕ ಸುರುಳಿಗಳನ್ನು ಹೊಂದಿವೆ. ಲ ಕಾರದ ಗೆರೆಯು ಮೇಲ್ಮುಖವಾಗಿ ಬೆಳೆದು ಇ ಕಾರದ ಗುಡಿಸಿನಂತೆ ಕೆಳಕ್ಕೆ ಬಾಗಿದೆ. ಅಕ್ಷರಗಳ ತಲೆಕಟ್ಟುಗಳ ಮೇಲೆ ದಟ್ಟವಾದ ತ್ರಿಕೋಣದ ಗುರುತು ಇದೆ. ಆ ಕಾರ, ಎ ಕಾರ ಮತ್ತು ಓ ಕಾರದ ಗುಣಿತಗಳು ಇನ್ನೂ ಅಡ್ಡಗೆರೆಯ ರೂಪದಲ್ಲಿಯೇ ಇವೆ. ಮೂಲ ಅಕ್ಷರಗಳು ಚಿಕ್ಕದಾಗಿದ್ದರೂ ಅವುಗಳ ಗುಣಿತಗಳು, ಕೆಲವು ಅಕ್ಷರಗಳ ಬೆಳವಣಿಗೆಗಿಂತ ಉದ್ದಕ್ಕಿರುವಂತೆ ಕಾಣುತ್ತವೆ. ಹೀಗಾಗಿ ಶಾಸನ ಬರೆಯಲು ಹೆಚ್ಚಿನ ಸ್ಥಳಬೇಕಾಗುತ್ತಿತ್ತು.



ದೇ.ಕೊ. ರೆಡ್ಡಿ

ನಾಗಾರ್ಜುನ ಕೊಂಡದ ವೀರ ಪುರುಷದತ್ತನ ಶಾಸನ EI XX P.17


ಶಾತವಾಹನ ಲಿಪಿಗಳನ್ನು ಪೂರ್ವ ಸಮುದ್ರತೀರದಲ್ಲಿ ಇಕ್ಷ್ವಾಕುಗಳು, ಸಾಲಂಕಾಯನರು, ಪಲ್ಲವರು ಬಳಸಿದರೆ ಪಶ್ಚಿಮದಲ್ಲಿ ಕೇಕೇಯ, ಭೋಜ, ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಕದಂಬರು ಬಳಸುತ್ತಾರೆ. ಹೀಗಾಗಿ ದಕ್ಷಿಣದ ಕನ್ನಡ – ತೆಲುಗು ಮತ್ತು ತಮಿಳು – ಗ್ರಂಥ – ವಟ್ಟೆಳತ್ತು ಲಿಪಿಗಳಿಗೆ ಇದೇ ಕಾರಣವಾಯಿತು. ಮಳವಳ್ಳಿಯ ಸ್ತಂಭದಲ್ಲಿ ಶಾತವಾಹನ ರಾಜ

ಮತ್ತು ಕದಂಬ ರಾಜರಿಬ್ಬರ ಶಾಸನಗಳೂ ದೊರೆಯುತ್ತವೆ. ಈ ಎರಡೂ ಶಾಸನಗಳ ಲಿಪಿಗಳಲ್ಲಿ ಸಾಮ್ಯತೆ ಇದೆ. ಹೀಗಾಗಿ ಶಾತವಾಹನರ ಲಿಪಿಯನ್ನು ಕದಂಬರು ಮುಂದುವರಿಸಿದರು.

ಕದಂಬರ ಲಿಪಿ

ಸುಮಾರು ಕ್ರಿ.ಶ. ೩೫೦ರಲ್ಲಿ ಉತ್ತರ ಭಾರತದಿಂದ ಸಮುದ್ರಗುಪ್ತನು ದಕ್ಷಿಣ ಭಾರತಕ್ಕೆ ದಂಡಯಾತ್ರೆ ಬಂದು ಕಂಚಿಯ ಪಲ್ಲವ ರಾಜನನ್ನು ಸೋಲಿಸುತ್ತಾನೆ. ಸಮುದ್ರಗುಪ್ತನು ವಾಪಸ್ಸಾದ ಮೇಲೆ ಇಡೀ ದಕ್ಷಿಣ ಭಾರತ ಅರಾಜಕತ್ವದಿಂದ ಕೂಡಿರುತ್ತದೆ. ದಕ್ಷಿಣದಲ್ಲಿ ಆಗ ಪ್ರಬಲರಾಗಿದ್ದವರೆಂದರೆ ಪಲ್ಲವರೇ. ಇವರ ಹಿಡಿತದಿಂದ ತಪ್ಪಿಸಿಕೊಳ್ಳಲು ಅನೇಕ ಸಾಮಂತರು ಸಮಯ ಕಾಯುತ್ತಿದ್ದು ಈ ಅರಾಜಕತ್ವದ ಸನ್ನಿವೇಷದಲ್ಲಿ ಸ್ವಾತಂತ್ರ್ಯವನ್ನು ಘೋಷಿಸುತ್ತಾರೆ. ಕರ್ನಾಟಕದಲ್ಲಿ ಗಂಗರು ಮತ್ತು ಕದಂಬರು ಎಂಬ ಎರಡು ರಾಜವಂಶಗಳು ಇವುಗಳಲ್ಲಿ ಮುಖ್ಯವಾದವು.

ಹೀಗೆ ಪ್ರತ್ಯೇಕವಾದ ರಾಜ್ಯಗಳಲ್ಲಿ ದಕ್ಷಿಣದಲ್ಲಿ ಕಾವೇರಿಯ ಉತ್ತರಕ್ಕೆ ಗಂಗ ರಾಜ್ಯವೂ, ತುಂಗೆಯ ಪಶ್ಚಿಮಕ್ಕೆ ವರದಾ ನದಿ ತೀರದಲ್ಲಿದ್ದ ಪ್ರಾಚೀನ ವೈಜಯಂತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕದಂಬ ರಾಜ್ಯ ಉದಿಸಿತು. ಕದಂಬರು ಪೂರ್ವಕ್ಕೆ ಶ್ರೀಶೈಲ ಪರ್ವತದವರೆಗೆ ತಮ್ಮ ರಾಜ್ಯ ವಿಸ್ತರಿಸಿದರೆಂದು ಶಾಸನಗಳು ತಿಳಿಸುತ್ತವೆ. ಈ ಶ್ರೀಶೈಲ ಪರ್ವತವು ಚಿತ್ರದುರ್ಗದ ಬಳಿಯ ಈಗಿನ ಚಂದ್ರವಳ್ಳಿ ಪ್ರದೇಶವಿರಬೇಕು. ಇಲ್ಲಿ ದೊರೆಯುವ ಕದಂಬರ ಮೊದಲ ದೊರೆ ಮಯೂರವರ್ಮನ ಶಾಸನದಲ್ಲಿ ಶಾತವಾಹನರ ಲಿಪಿಯ ಮುಂದುವರಿಕೆಯನ್ನು ಕಾಣುತ್ತೇವೆ. ಅಕ್ಷರಗಳ ತಲೆಯ ಮೇಲೆ ತ್ರಿಕೋಣಾಕಾರದ ತಲೆಕಟ್ಟಿನ ಜೊತೆಗೆ ಪೆಟ್ಟಿಗೆಯಾಕಾರದ ತಲೆಕಟ್ಟುಗಳನ್ನು ನೀಡಿರುವುದನ್ನು ಕಾಣಬಹುದಾಗಿದೆ. ಆದರೆ ಪೆಟ್ಟಿಗೆಯಾಕಾರದ ತಲೆಕಟ್ಟುಗಳನ್ನೂ ಅಕ್ಷರಗಳ ಎಡಬದಿಗೆ ಸೂಚಿಸುವ ಬದಲು ಗೆರೆಯ ಮಧ್ಯಕ್ಕೆ ನೀಡಲಾಗಿದೆ. ಮ ಕಾರದ ಬಲಗಡೆಯ ಗೆರೆಗೂ ತಲೆಕಟ್ಟನ್ನು ನೀಡಲಾಗಿದೆ. ಕ ಮತ್ತು ರ ಕಾರದ ಗೆರೆಗಳು ಕೆಳಕ್ಕೆ ಉದ್ದಕ್ಕೆ ಬೆಳೆದು ಎಡಕ್ಕೆ ತಿರುಗಿವೆ. ಮ ಕಾರ ಮತ್ತು ವ ಕಾರಗಳು ತ್ರಿಕೋಣಾಕಾರದಲ್ಲಿಯೇ ಇವೆ. ಇವು ಬನವಾಸಿಯ ಪುಳುಮಾವಿ ಶಾಸನದ ಅಕ್ಷರಗಳಂತೆಯೇ ಇದೆ. ಯ ಕಾರಕ್ಕೆ ನೀಡಿರುವ ಊ




ಮಯೂರವರ್ಮನ ಶಾಸನ, ಚಂದ್ರವಳ್ಳಿ. ಕೃಪೆ : ಎಂ.ಎ.ಆರ್.

ಕಾರದ ದೀರ್ಘವು ಯ ಕಾರದ ಬಲಗಡೆ ಗೆರೆಯ ಕೆಳಗೆ ನೀಡುವ ಬದಲು ಅದೇ ಗೆರೆಯನ್ನು ಬಲಭಾಗಕ್ಕೆ ಬಾಗಿಸಿ ಕೆಳಕ್ಕೆ ಎಡಮುಖಕ್ಕೆ ಸ್ವಲ್ಪ ಬಾಗುವಂತೆ ಬಿಡಿಸಲಾಗಿದೆ. ಒಟ್ಟಿನಲ್ಲಿ ಶಾತವಾಹನರ ಲಿಪಿಯ ಲಕ್ಷಣಗಳನ್ನೂ ಸೇರಿಸಿಕೊಂಡು ಬದಲಾದ ಲಕ್ಷಣಗಳನ್ನೊಳಗೊಂಡಿರುವ ಅಕ್ಷರಗಳು ಇವಾಗಿವೆ.

ಈ ಶಾಸನದ ನಂತರ ನಮಗೆ ದೊರಕುವ ಕದಂಬರ ಶಾಸನವೆಂದರೆ ತಾಳಗುಂದ ಶಾಸನ ಮತ್ತು ಇದೇ ಕಾಲಕ್ಕೆ ಸೇರಿರಬಹುದಾದ ಬನವಾಸಿ ಮ್ಯೂಸಿಯಂನಲ್ಲಿನ ಶಾಸನದ ತುಣುಕುಗಳು. ಇವುಗಳ ಕಾಲ ಸು. ಕ್ರಿ.ಶ. ೪೫೦. ಮಯೂರವರ್ಮನ ಶಾಸನಕ್ಕಿಂತ ಹೆಚ್ಚಿನ ಬೆಳವಣಿಗೆಯನ್ನು ತೋರಿಸುವುದಲ್ಲದೆ ಬರೆವಣಿಗೆಯಲ್ಲಿ ಅಲಂಕಾರಿಕತೆಯನ್ನು ಹೊಂದಿವೆ. ಬರೆವಣಿಗೆಯ ಉದ್ದಕ್ಕೂ ತಲೆಕಟ್ಟುಗಳಲ್ಲಿ ಮತ್ತು ಕಾಗುಣಿತಗಳಲ್ಲಿ ಏಕತಾನತೆಯನ್ನು ಕಾಯ್ದುಕೊಂಡು ಬಂದಿವೆ. ಮಯೂರವರ್ಮನ ಶಾಸನದಲ್ಲಿ ಅ, ಕ, ರ ಕಾರಗಳಲ್ಲಿ ಕೆಳಕ್ಕೆ ಬಾಗಿದ್ದು ಎಡಕ್ಕೆ ತಿರುಗಿದ್ದ ಗೆರೆಗಳು ಈ ಶಾಸನದಲ್ಲಿ ಮೇಲಕ್ಕೆ ಅಕ್ಷರದ ಅರ್ಧದಷ್ಟು ಬೆಳೆದಿವೆ. ಇದು ಉ ಕಾರದ ಕಾಗುಣಿತಕ್ಕೂ ಅನ್ವಯಿಸುತ್ತದೆ. ಪ, ಮ, ಷ, ಸ ಗಳ ಎಡಭಾಗದ ಮೇಲುಗೆರೆಯ ಮೇಲೆ ಮಾತ್ರ ತಲೆಕಟ್ಟು ಬಂದಿದೆ. ಎರಡನೆಯ ಗೆರೆಗೆ ತಲೆಕಟ್ಟು ಇಲ್ಲ. ತ್ರಿಕೋಣಾಕಾರದ ಅಕ್ಷರಗಳು ಕಾಣೆಯಾಗಿ ಅಕ್ಷರಗಳು ಚೌಕಾಕಾರಕ್ಕೆ ಉದ್ದುದ್ದವಾಗಿ ತಿರುಗುತ್ತಿವೆ. ಕೆಳಕ್ಕೆ ಬಾಗಿದ ಒತ್ತಕ್ಷರವಾಗಿ ಬಂದಿರುವ ರ ಕಾರ ಮತ್ತು ಯ ಕಾರಗಳನ್ನು ಹೊರತುಪಡಿಸಿ ಉಳಿದಂತೆ ಕೆಳಕ್ಕೆ ಬಾಗಿರುವ ಗೆರೆಗಳೆಲ್ಲ ಚೌಕಾಕಾರವಾಗಿ ಮೇಲಕ್ಕೆ ತಿರುಗಿವೆ. ಥ, ದ ಅಕ್ಷರಗಳು ವೃತ್ತಾಕಾರ, ಅರ್ಧವೃತ್ತಾಕಾರವನ್ನು ಬಿಟ್ಟು ಚೌಕಾಕಾರಕ್ಕೆ ತಿರುಗಿವೆ. ಮ, ವ ಗಳು ತ್ರಿಕೋಣಾಕಾರವನ್ನು ಬಿಟ್ಟು ಚೌಕಾಕಾರಕ್ಕೆ ತಿರುಗಿವೆ. ಎ, ಚ, ವ ಗಳ ಸಾಮ್ಯದಲ್ಲಿ ವ್ಯತ್ಯಾಸ ಕಡಿಮೆ. ಪ, ಹ, ಷ ಗಳ ಎಡಗೆರೆ ಮೇಲಿನಿಂದ ಬಲಕ್ಕೆ ಎಡಕ್ಕೆ ತಿರುಗಿ ಮತ್ತೆ ಕೆಳಮುಖವಾಗಿದೆ. ಅಕ್ಷರಗಳ ಕೆಳಗಡೆ ಅಡ್ಡವಾಗಿ ಬಂದಿರುವ ರೇಖೆಗಳಲ್ಲಿ ಯಾವುದೇ ಬಾಗುಗಳಿಲ್ಲ. ಕರ್ನಾಟಕದಲ್ಲಿ ದೊರೆತ ಮೊದಲ ಪೂರ್ಣ ಸಂಸ್ಕೃತ ಶಾಸನ ಇದಾಗಿದ್ದು ಇದರಲ್ಲಿ ಅನುಸ್ವಾರ, ವಿಸರ್ಗ ಮತ್ತು ಅರ್ಧ ಮ ಕಾರಗಳ ಪ್ರಯೋಗವಿದೆ. ಅರ್ಧ ಮ ಕಾರವನ್ನು ತೋರಿಸಬೇಕಾದಲ್ಲಿ ಸಾಲಿನ ಕೆಳಭಾಗದಲ್ಲಿ ಅಶೋಕನ ಕಾಲದ ಮ ಕಾರವನ್ನು ಚಿಕ್ಕದಾಗಿ ಬರೆಯಲಾಗಿದೆ. ಣ ಮತ್ತು ನ ಕಾರಗಳ ಕೆಳಭಾಗದ ಅಡ್ಡಹೂವ ಗೆರೆ ಇಲ್ಲಿ ಮೇಲಿನಿಂದ ಇಳಿದ ಗೆರ ಎಡಕ್ಕೆ ತಿರುಗಿ ಒಂದು ಗಂಟನ್ನು ಸೃಷ್ಟಿಸಿ ಮತ್ತೆ ಬಲಕ್ಕೆ ತಿರುಗಿ ಸ್ವಲ್ಪ ಕೆಳಕ್ಕೆ ಬಾಗಿದೆ. ತಲೆಯ ಮೇಲೆ ಪೆಟ್ಟಿಗೆಯಾಕಾರದ ತಲೆಕಟ್ಟು ಬಂದಿದೆ. ಣ ಕಾರದ ಮೇಲಿನ ಅಡ್ಡಗೆರೆಯು ತಲೆಕಟ್ಟಿನಿಂದ ಎರಡೂ ಕಡೆ ಚಿಮ್ಮಿ ಹೊರಬಂದು ಎರಡೂ ಕಡೆ ಸ್ವಲ್ಪ ಬಾಗಿರುವಂತೆ ಬಿಡಿಸಿದೆ.

ಕಾಗುಣಿತಗಳು ಇಲ್ಲಿಂದಾಚೆಗೆ ಹೆಚ್ಚಿನ ಬೆಳವಣಿಗೆಯನ್ನು ತೋರಲಾರಂಭಿಸಿವೆ. ಆ ಕಾರದ ದೀರ್ಘವು ತಲೆಕಟ್ಟಿನ ಬಲಭಾಗದಿಂದ ಬೆಳೆದು ಸ್ವಲ್ಪ ಕೆಳಮುಖವಾಗಿ ಬಾಗಿದೆ. ಇ ಕಾರವು ಗ ಕಾರವನ್ನು ಅಕ್ಷರಗಳ ತಲೆಕಟ್ಟಿನ ಮೇಲೆ ಇಟ್ಟಂತೆ ಕಾಣುತ್ತವೆ. ಅಂದರೆ ಅರ್ಧ ಚಂದ್ರಾಕಾರವಾಗಿದ್ದ ಈ 'ಗುಡಿಸು' ಇಲ್ಲಿ ಕೆಳಕ್ಕೆ ಬಾಗಿದೆ. ಈ ಗುಡಿಸನ್ನು ಒಳಕ್ಕೆ ಬಾಗಿಸುವುದರ ಮೂಲಕ ತೋರಿಸಿದೆ. ಉ ಕಾರದ ಹಿಂದಿನ ನಿಯಮಗಳಲ್ಲಿ ಬದಲಾವಣೆ ಇಲ್ಲ. ಭ, ಚ, ಖ, ಇಂತಹ ಅಕ್ಷರಗಳನ್ನು ಬಿಟ್ಟಲ್ಲಿ ಉಳಿದಂತೆ ಕೆಳಬಂದ ಗೆರೆ ಎಡಕ್ಕೆ ತಿರುಗಿ ಮೇಲಕ್ಕೆ ಸಾಗಿದೆ.



ಕದಂಬ ಕಾಕುಸ್ಥವರ್ಮನ ಶಾಸನ ಕೃಪೆ : ಸಿ.ಶಿ.ಮೂರ್ತಿ

ದೀರ್ಘವನ್ನು ತೋರಿಸಲು ಈ ಗೆರೆಗೆ ಎಡಗಡೆಯಿಂದ ಒಂದು ಬಾಗು ಗೆರೆಯನ್ನು ಸೇರಿಸಲಾಗಿದೆ. ಋ ಕಾರ ಕಾಗುಣಿತವನ್ನು ತೋರಿಸಲು ಅಕ್ಷರಗಳ ಕೆಳಗೆ ಮೇಲ್ಮುಖಕ್ಕೆ ತಿರುಗಿದ ಬಾಗುರೇಖೆಯನ್ನು ಬಿಡಿಸಿದೆ. ಏ ಕಾರವನ್ನು ಅಕ್ಷರದ ತಲೆಕಟ್ಟಿನಿಂದ ಎಡಗಡೆಗೆ ಎಳೆದು ಕೆಳಕ್ಕೆ ಸ್ವಲ್ಪ ಬಾಗಿರುವಂತೆ ಬಿಡಿಸಿದೆ. ಐ ಕಾರವನ್ನು ಏ ಕಾರದ ಗೆರೆ ಎಳೆದ ಮೇಲೆ ಅಕ್ಷರದ ಕೆಳಗೆ ಎಡಗಡೆಯಿಂದ ಬಲಗಡೆಗೆ ಬಾಗಿದ ಒಂದು ಗೆರೆಯನ್ನು ಎಳೆದಿದೆ. ಣ ಕಾರದಲ್ಲಿ ಏ ಕಾರವನ್ನು ಅಕ್ಷರದ ಕೆಳಭಾಗದಲ್ಲಿ ತೋರಿಸಲಾಗಿದೆ. ಓ ಕಾರವು ಆ ಕಾರ ಮತ್ತು ಏ ಕಾರದ ಕಾಗುಣಿತವನ್ನು ಒಟ್ಟಿಗೆ ಬರೆಯುವುದರ ಮೂಲಕ ತೋರಿಸಿದೆ. ಔ ಕಾರವು ಅಕ್ಷರದ ತಲೆಕಟ್ಟಿನಿಂದ ಮೇಲ್ಗಡೆಗೆ ಚಿಕ್ಕಗೆರೆ ಎಳೆದು ಅದರಿಂದ ಬಲಗಡೆಗೆ ಆ ಕಾರದ ಕಾಗುಣಿತವನ್ನು ಬಿಡಿಸಲಾಗಿದೆ. ಐ ಕಾರದ ಕಾಗುಣಿತವನ್ನು ಕದಮ್ಬೈ ಎಂಬಲ್ಲಿ ಒತ್ತಕ್ಷರ ಬ ಕಾರಕ್ಕೆ ನೀಡಲಾಗಿದೆ.

ಹಲ್ಮಿಡಿ ಶಾಸನವು ಕದಂಬ ಕಾಕುಸ್ಥವರ್ಮನ ಕಾಲದ್ದೇ ಆಗಿದ್ದರೂ ಅದರಲ್ಲಿ ತಾಳಗುಂದ ಶಾಸನದ ಪ್ರಮಾಣದಲ್ಲಿ ಪೆಟ್ಟಿಗೆಯಾಕಾರದ ತಲೆಕಟ್ಟುಗಳಿಲ್ಲ. ಬಹುಮಟ್ಟಿಗೆ ಚೌಕಾಕಾರದ ಅಕ್ಷರಗಳ ರೀತಿಯಿಂದ ಅದು ಮುಕ್ತವಾಗಿದೆ. ಕೆಳಗೆ ಇಳಿಬಿದ್ದು ಮೇಲ್ಮುಖವಾಗಿ ತಿರುಗಿರುವ ಗೆರೆಗಳ ತಳಭಾಗದಲ್ಲಿ ಚೌಕಾಕಾರವನ್ನು ಹೊಂದುವುದಕ್ಕಿಂತ ಬಾಗುರೇಖೆಗಳನ್ನು ಹೊಂದಿವೆ. ಹಲ್ಮಿಡಿ ಶಾಸನವನ್ನು ಹಾಕಿಸಿದ ಪಶುಪತಿಯ ಎರಡು ಶಾಸನಗಳು ತಾಳಗುಂದದ ಪ್ರಣವೇಶ್ವರ ದೇವಾಲಯದ ಬಾಗಿಲ ಕಲ್ಲುಗಳಲ್ಲಿದ್ದು ಅವುಗಳಲ್ಲಿ ಒಂದು ಕಾಕುಸ್ಥನ ಕಾಲಕ್ಕೆ ಸೇರಿದ್ದರೆ ಇನ್ನೊಂದು ಅವನ ಮೊಮ್ಮಗ ಮೃಗೇಶನ ಕಾಲಕ್ಕೆ ಸೇರಿದುದಾಗಿದೆ. ಕಾಕುಸ್ಥವರ್ಮನ ಮಗಳಾದ ಲಕ್ಷ್ಮಿಯ ಶಾಸನದಲ್ಲಿ ಅಕ್ಷರಗಳು ಹಲ್ಮಿಡಿಯ ಅಕ್ಷರಗಳಂತೆ ಇದ್ದರೂ ಇವುಗಳಲ್ಲಿ ಪೆಟ್ಟಿಗೆಯ ತಲೆಕಟ್ಟುಗಳು ಸ್ಪಷ್ಟವಾಗಿವೆ. ಅ, ಕ, ರ, ಉ ಕಾರದ ಗುಣಿತಗಳ ಕೆಳ ರೇಖೆಗಳು ಕೆಳಕ್ಕೆ ಬೆಳೆದು ಮೇಲ್ಮುಖವಾಗಿ ತಿರುಗಿವೆ. ಈ ತಿರುಗುವಿಕೆ ಇಲ್ಲಿ ಚೌಕಾಕಾರವಾಗಿರದೆ ವಕ್ರವಾಗಿ ಬಾಗಿವೆ. ಅಕ್ಷರಗಳೂ ಉದ್ದುದ್ದವಾಗಿವೆ.

ಕಾಕುಸ್ಥವರ್ಮನ ಮಗನಾದ ಶಿವಮಾಂಧಾತೃವರ್ಮನ ಮುತ್ತೂರಿನ ಶಾಸನದಲ್ಲಿ ಅಕ್ಷರಗಳು ಉದ್ದುದ್ದಕ್ಕೆ ಇವೆ. ಕೆಳಮುಖವಾಗಿ ಬಾಗಿದ ರೇಖೆಗಳು ಹಲ್ಮಿಡಿ ಶಾಸನದಂತೆ ಬಾಗುರೇಖೆಗಳನ್ನು ಹೊಂದಿವೆ. ಅಕ್ಷರಗಳ ತಲೆಯ ಮೇಲೆ ಪೆಟ್ಟಿಗೆಗಳನ್ನು ಎದ್ದುಕಾಣುವಂತೆ ಉಳಿಸಿಕೊಂಡಿವೆ. ಈ ಶಾಸನಗಳಲ್ಲಿ ಅಕ್ಷರದ ತಳಭಾಗದಲ್ಲಿನ ಅಡ್ಡರೇಖೆಗಳು ಅಂದರೆ ಚ, ಜ, ಡ, ದ, ಧ, ಪ, ಫ, ಬ, ಮ, ಲ, ವ, ಷ, ಹ ಅಕ್ಷರಗಳ ಕೆಳಭಾಗವು ಮಧ್ಯಭಾಗದಲ್ಲಿ ಸ್ವಲ್ಪ ಒಳಕ್ಕೆ ಬಾಗುವ ಲಕ್ಷಣವನ್ನು ಪಡೆದಿವೆ. ಆದರೆ ಶಿವಮೊಗ್ಗದಲ್ಲಿ ದೊರೆತಿರುವ ಶಾಸನಾಕ್ಷರಗಳು ಇದೇ ರಾಜನ ಮುತ್ತೂರಿನ ಶಾಸನದ ಅಕ್ಷರಗಳಿಗಿಂತ ಭಿನ್ನವಾಗಿವೆ. ಪೆಟ್ಟಿಗೆಯ ತಲೆಕಟ್ಟುಗಳ ಸ್ಥಳದಲ್ಲಿ ಚಿಕ್ಕ ಗೆರೆಗಳಿವೆ. ಅಕ್ಷರಗಳ ಉದ್ದವೂ ಕಡಿಮೆಯಿದ್ದು ಚಿಕ್ಕದಾಗಿವೆ. ಕೆಲವು ಅಗಲವಾಗಿವೆ. ಇ ಕಾರದ ಕಾಗುಣಿತದ ಗುಡಿಸು ಅಕ್ಷರದ ತಲೆಮೇಲೆ ವೃತ್ತಾಕಾರವಾಗಿದೆ. ಳ ಮತ್ತು ಱ ಕಾರ ಪ್ರಯೋಗವಿದೆ. ಅ ಕಾರದ ಕೆಳಗಿನ ಗೆರೆ ಕೆಳಕ್ಕೆ ಬಂದು ಬಾಗಿ ಮೇಲಕ್ಕೆ ಬಂದಿದೆ. ನೀಳವಾಗಿಲ್ಲ. ಆ ಕಾರದ ದೀರ್ಘದ ಕಾಗುಣಿತ ಬಲಗಡೆಗೆ ಬಂದು ಸ್ವಲ್ಪ ಕೆಳಕ್ಕೆ ಬಾಗಿದೆ.

ಮೃಗೇಶವರ್ಮನ ಕಾಲದ ತಾಳಗುಂದದ ಬಾಗಿಲವಾಡ ಶಾಸನದಲ್ಲಿ ಕೆಲವು ಅಕ್ಷರಗಳ ಮೇಲೆ ಪೆಟ್ಟಿಗೆಯಾಕಾರದ ತಲೆಕಟ್ಟಿದ್ದು ಅದು ಅಕ್ಷರದ ಗೆರೆಯ ಎಡಭಾಗಕ್ಕಿರದೆ ಗೆರೆಯ ಮೇಲೆ ಮಧ್ಯಕ್ಕಿದೆ. ಕೆಲವು ಅಕ್ಷರಗಳ ತಲೆ ಮೇಲೆ ಪೆಟ್ಟಿಗೆಯಾಕಾರದ ತಲೆಕಟ್ಟಿಗೆ ಬದಲಾಗಿ ದಟ್ಟವಾದ ತಲೆಕಟ್ಟಿನಂತಹ ಚುಕ್ಕೆ ಇದೆ. ಅಕ್ಷರಗಳ ನೀಳತೆ ಕಡಿಮೆಯಾಗಿದೆ. ರ ಕಾರ, ಕ ಕಾರಗಳ ಕೆಳಗೆರೆಯೂ ಚಿಕ್ಕದಾಗಿದೆ. ಆದರೆ ಕೆಲವು ತಾಮ್ರಶಾಸನಗಳಲ್ಲಿ ಪೆಟ್ಟಿಗೆಯ ಅಕ್ಷರಗಳು ಮುಂದುವರಿದಿವೆ. ಹಿಟ್ಟಣಹೆಬ್ಬಾಗಿಲ ಶಾಸನ, ಹಲಸಿ ಶಾಸನಗಳಲ್ಲಿ ಈ ತಲೆಕಟ್ಟುಗಳು ಪೆಟ್ಟಿಗೆಯಾಕಾರದಲ್ಲಿದ್ದು ಇವು ತಾಳಗುಂದದ ಕಾಕುಸ್ಥವರ್ಮನ ಸ್ತಂಭಶಾಸನದ ಮುಂದುವರಿದ ಲಿಪಿಗಳಾಗಿವೆ. ಱ ಕಾರ ಬಳಕೆ ಆಗಿದೆ. ಆದರೆ ಇದು ಸಂಸ್ಕೃತದ ಉಪಧ್ಮಾನೀಯದಲ್ಲಿ ಪ್ರಯೋಗವಾಗಿದೆ. ಶಾಸನದಲ್ಲಿ ಅಕ್ಷರಗಳು ಒತ್ತಾಗಿರದೆ ಬಿಡಿಬಿಡಿಯಾಗಿವೆ. ಹಾಗೂ ಸ್ವಲ್ಪ ಚಿಕ್ಕದಾಗಿವೆ. ಗ, ಧ, ಶ ಅಕ್ಷರಗಳ ಮೇಲೆ ಚೌಕಾಕಾರದ ತಲೆಕಟ್ಟು ಬಂದಿದೆ. ಇ ಕಾರದ ಕಾಗುಣಿತದ ಗುಡಿಸು ವೃತ್ತಾಕಾರವಾಗಿದೆ. ಈ ದೀರ್ಘದ ಕಾಗುಣಿತವು ವೃತ್ತಾಕಾರದೊಳಗೆ ಚಿಕ್ಕ ವೃತ್ತವೊಂದು ತಲೆಕಟ್ಟಿಗೆ ಅಂಟಿಕೊಂಡು ಬಂದಿದೆ. ಅರ್ಕಾವತ್ತು ಅಕ್ಷರಗಳ ಮೇಲೆ ನೇರವಾಗಿ ಮೇಲ್ಮುಖವಾಗಿ ಗೆರೆ ಎಳೆಯುವ ಮೂಲಕ ತೋರಿಸಲಾಗಿದೆ. ಛ ಕಾರವನ್ನು ಬಳಸಲಾಗಿದೆ. ಇದು ಇಂದಿನ ಕನ್ನಡದ ಹ ಕಾರವನ್ನು ಹೋಲುತ್ತದೆ.


ಈ ಅರಸರಾದ ಮೇಲೆ ಇವರದೇ ಒಂದು ಶಾಖೆಯಾದ ಕೃಷ್ಣವರ್ಮ ಹಾಗೂ ಅವನ ಮಗ ಸಿಂಹವರ್ಮನ ಶಾಸನಗಳು ದೊರೆಯುತ್ತವೆ. ಶಿವಳ್ಳಿಯಲ್ಲಿ ದೊರೆತ ಎರಡು ಶಾಸನಗಳು ಸು. ಕ್ರಿ.ಶ. ೫೩೦ರ ಕಾಲಕ್ಕೆ ಸೇರಿದ್ದು ಇವುಗಳಲ್ಲಿ ಒಂದಾದ ಏಳನೆಯ ವರ್ಷದ ಶಾಸನದಲ್ಲಿ ತಲೆಕಟ್ಟುಗಳಿವೆ. ಆದರೆ ಪೆಟ್ಟಿಗೆಯಾಕಾರದಲ್ಲಿಲ್ಲ, ತ್ರಿಕೋಣಾಕಾರದಲ್ಲಿವೆ. ಈ ಹಂತವು ಪೆಟ್ಟಿಗೆಯ ತಲೆಕಟ್ಟಿನ ಅವನತಿ ಕಾಲವಾಗಿದೆ. ಅಕ್ಷರಗಳು ಶಿವಮೊಗ್ಗದ ಮಂಧಾತೃವರ್ಮನ ಶಾಸನದ ಅಕ್ಷರಗಳನ್ನು ನೆನಪಿಗೆ ತರುತ್ತವೆ. ಅಕ್ಷರಗಳು ಚಿಕ್ಕದಾಗಿ ಅಗಲವಾಗಿರುವುದರ ಜೊತೆಗೆ ಕೆಳಮುಖವಾಗಿ ಇಳಿಬಿದ್ದ ಗೆರೆಗಳು ಉದ್ದಕ್ಕೆ ಬೆಳೆಯಲಿಲ್ಲ. ಅ ಕಾರವು ಕೆಳಗೆ ಇಳಿದ ಗೆರೆ ಅರ್ಧವೃತ್ತಾಕಾರವಾಗಿ ತಿರುಗಿದೆ. ಶ್ರೀ ಯಲ್ಲಿ ರ ಕಾರವೂ ಸಹ ಅದೇ ರೀತಿ ಅರ್ಧವೃತ್ತಾಕಾರದಲ್ಲಿದೆ. ತ ಕಾರ ಮತ್ತು ನ ಕಾರಗಳಿಗೆ ಇರುವ ವ್ಯತ್ಯಾಸ ಕಡಿಮೆ. 'ಱ' ದ ಪ್ರಯೋಗವಿದೆ.

ಇದೇ ರಾಜನ ೨೨ನೆಯ ವರ್ಷದ ಶಾಸನದಲ್ಲಿ ಕದಂಬರ ಪಾರಂಪರಿಕ ಅಕ್ಷರಗಳನ್ನು ಅನುಕರಿಸಲು ಪ್ರಯತ್ನಿಸಲಾಗಿದೆ. ಅಕ್ಷರಗಳು ಉದ್ದುದ್ದಕ್ಕೆ ಇರುವಂತೆ ಕೆತ್ತಲು ಪ್ರಯತ್ನಿಸಿದ್ದರೂ ಅಕ್ಷರಗಳ ಅಗಲವನ್ನು ಕಡಿಮೆ ಮಾಡಲಾಗಲಿಲ್ಲ. ತಲೆಕಟ್ಟುಗಳು ಪೆಟ್ಟಿಗೆಯಾಕಾರದಲ್ಲಿಲ್ಲದಿದ್ದರೂ ಸ್ವಲ್ಪಮಟ್ಟಿಗೆ ತ್ರಿಕೋಣಾಕಾರದಲ್ಲಿ ಬಿಡಿಸಿದ್ದು ಮುಂದಿನ ಕಾಲದ ತಲೆಕಟ್ಟುಗಳ ಬೆಳವಣಿಗೆಗೆ ಕಾರಣವಾಗಿದೆ.


ಕದಂಬರ ಅಂತ್ಯದ ಈ ಶಾಸನಗಳಲ್ಲಿ ಕ, ರ ಕಾರದ ಕೆಳಗೆ ಎಡಕ್ಕೆ ಬಾಗಿದ ರೇಖೆಗಳು ಮೇಲಕ್ಕೆ ಬಂದಿದ್ದರೂ ಕ ಕಾರದ ಅಡ್ಡಗೆರೆಯನ್ನು ತಲುಪಿಲ್ಲ. ಒಂದೆರಡು ಕಡೆ ಮುಟ್ಟಿದ್ದರೂ ಅದು ಆಕಸ್ಮಿಕ. ಅ ಕಾರವು ತನ್ನ ಉದ್ದವಾದ ರೂಪವನ್ನು ಬಿಟ್ಟು ಅದರ ಕೆಳಭಾಗದ ಬಾಗು ಗೆರೆ ಅರ್ಧಚಂದ್ರಾಕಾರವಾಗಿದೆ. ತಳಭಾಗದಲ್ಲಿ ಅಡ್ಡಗೆರೆ ಹೊಂದಿರುವ ಅಕ್ಷರಗಳಾದ ಚ, ಜ, ದ, ಧ, ಪ, ಫ, ಬ, ಮ, ಲ, ವ, ಷ, ಹ ಮುಂತಾದವುಗಳಲ್ಲಿ ಗೆರೆಯ ಒಳಕ್ಕೆ ಇನ್ನೂ ಸ್ವಲ್ಪ ಹೆಚ್ಚಿಗೆ ಒಳ ಬಾಗಿವೆ. ಹಾಗೂ ಈ ಅಕ್ಷರಗಳು ಹಿಂದಿನ ಕಾಲದ ಅಕ್ಷರಗಳಿಗಿಂತ ಅಗಲವಾಗಿವೆ. ಒಟ್ಟಿನಲ್ಲಿ ಕದಂಬರ ಅಂತ್ಯದ ಶಾಸನಗಳು ಬರುಬರುತ್ತಾ ಸ್ಥಳೀಯ ಲಿಪಿಗಳ ಪ್ರಭಾವದಿಂದ ಆರಂಭದ ಕದಂಬರ ಅರಸರ ಆಮದು ಲಿಪಿಗಳಿಂದ ಮುಕ್ತಿ ಹೊಂದುತ್ತಿರುವುದನ್ನು ಕಾಣಬಹುದಾಗಿದೆ.

ಡಾ। ಎ.ವಿ. ನರಸಿಂಹಮೂರ್ತಿಯವರು 'ಕನ್ನಡ ಲಿಪಿಯ ಬೆಳವಣಿಗೆಯಲ್ಲಿ ಕದಂಬರ ಲಿಪಿಯ ಪಾತ್ರ ಅತಿ ಮಹತ್ವವಾದದ್ದು ಎಂದು ಹೇಳಬಹುದು' ಎಂದಿರುತ್ತಾರೆ. ಕನ್ನಡ ಲಿಪಿಯ ಬೆಳವಣಿಗೆಯಲ್ಲಿ ವಾಸ್ತವವಾಗಿ ಕದಂಬರ ಲಿಪಿಯ ಪಾತ್ರ ಗೌಣ. ಕದಂಬರ ಈ ಪೆಟ್ಟಿಗೆಯಾಕಾರದ ಲಿಪಿಯು ರಾಜಶಾಸನ ಮತ್ತು ಬನವಾಸಿಯಲ್ಲಿ ಹುಟ್ಟಿದ ಶಾಸನಗಳಿಗಷ್ಟೇ ಸೀಮಿತವಾಗಿದೆ. ಈ ಲಿಪಿಯು ಗುಪ್ತ-ವಾಕಟಕ ಲಿಪಿಯ ಒಂದು ಪ್ರಬೇಧವೆಂದು ನಾವು ಸ್ವೀಕರಿಸಬೇಕಾಗಿದೆ. ಆದರೆ ಗುಪ್ತರ ಲಿಪಿಗಳಲ್ಲಿ ಚೌಕಾಕಾರದ ತಲೆಕಟ್ಟು ಕಾಣುವುದಿಲ್ಲ. ಈ ಲಿಪಿಗಳಲ್ಲಿ ದಟ್ಟವಾದ ತಲೆಕಟ್ಟು ಕಾಣಿಸಿಕೊಂಡಿದೆ. ಮುಂದೆ ವಾಕಟಕರು ಈ ಲಿಪಿಯನ್ನು ಸ್ವೀಕರಿಸಿದಾಗ ಪೆಟ್ಟಿಗೆಯ ತಲೆಕಟ್ಟುಗಳು ಕಾಣಿಸಿಕೊಂಡವು. ಕದಂಬರು ತಮ್ಮ ಮದುವೆಯ ಸಂಬಂಧಗಳನ್ನು ಗುಪ್ತ ಮತ್ತು ವಾಕಟಕರೊಡನೆ ಬೆಳೆಸಿದ್ದರು. ಹೀಗಾಗಿ ಅವರ ಭಾಷೆ, ಸಂಸ್ಕೃತಿಯ ಪ್ರಭಾವ ಕದಂಬರ ಮೇಲಾಗಿದೆ. ಕುಬ್ಜನೆಂಬ ಕವಿ ವಾಕಾಟಕರ ಪ್ರದೇಶದವನೇ ಇರಬೇಕು. ಮಯೂರವರ್ಮನ ಕಾಲದಲ್ಲಿ ಉತ್ತರದ ಅಹಿಚ್ಛತ್ರದಿಂದ ಅನೇಕ ಬ್ರಾಹ್ಮಣರು ದಕ್ಷಿಣಕ್ಕೆ ಬಂದರೆಂಬ ಸಂಗತಿಯನ್ನು ಕದಂಬರ ಮುಂದಿನ ಶಾಸನಗಳು ತಿಳಿಸುತ್ತವೆ. ಇದು ನಿಜವಾದಲ್ಲಿ ಬ್ರಾಹ್ಮಣ ವಂಶದ ಈ ಅರಸು ಮನೆತನದ ಆಶ್ರಯಕ್ಕೆ ಉತ್ತರದಿಂದ ವಿದ್ವಾಂಸರು ಬಂದಿರಬೇಕು. ಏಕೆಂದರೆ ಮಳವಳ್ಳಿಯ ಶಾಸನವು ಶಾತವಾಹನರ ಕೊನೆಯ ಮತ್ತು ಕದಂಬರ ಆರಂಭಕಾಲದ ಶಾಸನಗಳನ್ನೊಳಗೊಂಡಿದ್ದು, ಕ್ರಮವಾಗಿ ಪ್ರಾಕೃತ ಮತ್ತು ಪ್ರಾಕೃತಛಾಯೆಯ ಸಂಸ್ಕೃತ ಭಾಷೆಯಲ್ಲಿದೆ. ಮುಂದಿನ ತಾಳಗುಂದ ಶಾಸನ ಪೂರ್ಣವಾಗಿ ಸಂಸ್ಕೃತದಲ್ಲಿದ್ದು ಇಲ್ಲಿಂದ ಮುಂದೆ ಪ್ರಾಕೃತ ಶಾಸನಗಳು ಕರ್ನಾಟಕದಲ್ಲಿ ದೊರೆಯುವುದಿಲ್ಲ. ಹೀಗಾಗಿ ಕದಂಬರ ಈ ಪೆಟ್ಟಿಗೆಯಾಕಾರದ ಲಿಪಿ ಮತ್ತು ಸಂಸ್ಕೃತ ಭಾಷೆ ಉತ್ತರದ ಕೊಡುಗೆಯೆಂಬುದರಲ್ಲಿ ಸಂಶಯವೇ ಇಲ್ಲ. ಪೆಟ್ಟಿಗೆಯಾಕಾರದ ತಲೆಕಟ್ಟುಳ್ಳ ಲಿಪಿ ಪೂರ್ವದ

ಶಾತವಾಹನ - ಕದಂಬ ಲಿಪಿಪಟ್ಟಿಕೆ



1. ನಾಸಿಕ್, 2. ನಾಸಿಕ್, 3. ಸನ್ನತಿ, 4. ಬನವಾಸಿ, 5. ನಾಗರ್ಜುನಕೊಂಡ, 6. ಅಮರಾವತಿ 7. ದುಡಿಯ ೮. ತಾಳಗುಂದ, 9. ಮೃಗೇಶ, 10. ಹಲ್ಮಿಡಿ, 11.ರವಿವರ್ಮ 12. ಕೃಷ್ಣವರ್ಮ



ದೇ.ಕೊ. ರೆಡ್ಡಿ

ಗೋದಾವರಿ ಮತ್ತು ಕೃಷ್ಣಾನದಿಯ ಮುಖಜ ಭೂಮಿಯಲ್ಲಿ ಕಾಣಬರುವುದಿಲ್ಲ. ಅವರು ಇದರಿಂದ ಪ್ರಭಾವಿತರಾಗಿಲ್ಲದಿರುವುದು ಇದಕ್ಕೆ ಕಾರಣ. ಪೆಟ್ಟಿಗೆಯಾಕಾರದ ತಲೆಕಟ್ಟಿನ ಲಿಪಿಗಳನ್ನು ಕದಂಬರಲ್ಲಿ ರಾಜವಂಶೀಯ ಶಾಸನಗಳಿಗೆ ಮಾತ್ರ ಬಳಸಿರುತ್ತಾರೆ. ಸಾಮಾನ್ಯರು ಬರೆಸಿರುವ ಶಾಸನಗಳಲ್ಲಿ ಈ ಲಿಪಿಯ ಮಿಶ್ರ ರೂಪವನ್ನು ಕಾಣುತ್ತೇವೆ. ಪೂರ್ಣ ಪ್ರಮಾಣದ ಲಕ್ಷಣಗಳನ್ನು ಕಾಣುವುದಿಲ್ಲ. ಕದಂಬರ ಸಮಕಾಲೀನರಾಗಿದ್ದ ಭೋಜರು ಈ ಲಿಪಿಯನ್ನು ಬಳಸಿರುವುದನ್ನು ಅವರ ತಾಮ್ರಶಾಸನಗಳಿಂದ ತಿಳಿಯಬಹುದಾಗಿದೆ.

ಕದಂಬರ ಲಿಪಿಯನ್ನು ಬರೆಯಲು ಕಲಾವಂತಿಕೆ ಬೇಕಿತ್ತು. ಈ ಲಿಪಿಯ ಜೊತೆಗೆ ಸ್ಥಳೀಯವಾಗಿ ಈ ಲಕ್ಷಣಗಳನ್ನು ಹೊರತುಪಡಿಸಿದ ಲಿಪಿಯೊಂದು ಬಳಕೆಯಲ್ಲಿತ್ತು. ಕದಂಬರ ಆಳ್ವಿಕೆಯಲ್ಲಿಯೇ ಈ ಎರಡೂ ರೀತಿಯ ಲಿಪಿಯನ್ನು ಕಾಣುತ್ತೇವೆ. ಕದಂಬರ ರಾಜ್ಯವು ಚಿಕ್ಕ ರಾಜ್ಯವಾಗಿದ್ದು, ಇತರೆ ರಾಜ್ಯಗಳ ಮೇಲೆ ಪ್ರಭಾವವನ್ನು ಬೀರುವಂತಹದಾಗಿರಲಿಲ್ಲ. ಹೀಗಾಗಿ ಈ ರಾಜ್ಯವು ಅವನತಿಯಾದ ಕೂಡಲೇ ಸ್ಥಳೀಯ ಲಿಪಿಯೇ ಮತ್ತೆ ಮೇಲುಗೈ ಪಡೆಯಿತು. ಮುಂದೆ ಆಳ್ವಿಕೆಗೆ ಬಂದ ಬಾದಾಮಿಯ ಚಲುಕ್ಯರು ಸ್ಥಳೀಯ ಲಿಪಿಯನ್ನು ಮುಂದುವರಿಸಿದರು.


ಕದಂಬರು ಬಳಸಿದ ಈ ಪೆಟ್ಟಿಗೆಯಾಕಾರದ ಲಿಪಿ ಬಹು ಸುಂದರವಾದ ಜೋಡಣೆಯ ಲಿಪಿಯಾಗಿದೆ. ಕ್ರಮಬದ್ಧವಾದ ಇ ಕಾರ, ಉ ಕಾರದ ಕಾಗುಣಿತಗಳು ಅಕ್ಷರಗಳ ಕೆಳಗೆ ಬರುವ ಒತ್ತಕ್ಷರಗಳು, ಶಾಸನದಲ್ಲಿ ಬಳ್ಳಿಯಂತೆ ತಿರುಗಿ ಮೇಲೆ ಬಂದಿರುವ ಯ ಕಾರದ ಒತ್ತಕ್ಷರ ಈ ಲಿಪಿಯ ಚೆಲುವನ್ನು ಹೆಚ್ಚಿಸಿದೆ. ವೈದಿಕ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರಿಂದ ತಾಳಗುಂದ ಶಾಸನದಂತಹ ಅಪರೂಪದ ಸಂಸ್ಕೃತ ಛಂದಸ್ಸಿನ ಶಾಸನದ ರಚನೆಯಾಗಿದೆ. ಕುಬ್ಜನಂತಹ ಶಾಸನ ಕವಿಯಲ್ಲದೆ, ಕಾಳಿದಾಸನಂತಹ ಕವಿ ದಕ್ಷಿಣದಲ್ಲಿ ಕಾವ್ಯ ರಚಿಸಲು ಕಾರಣವಾಯಿತು.

ಗಂಗರ ಲಿಪಿ


ಕರ್ನಾಟಕದಲ್ಲಿನ ಕನ್ನಡ ಲಿಪಿಯ ಬೆಳವಣಿಗೆಯಲ್ಲಿ ಗಂಗರ ಪಾತ್ರ ಬಹು ಮುಖ್ಯವಾದದ್ದು. ಕ್ರಿ.ಶ.ಸು.೩೫೦ರಲ್ಲಿ ಗಂಗರಾಜ್ಯ ಸ್ಥಾಪನೆಯಾಗಿ ಕ್ರಿ.ಶ.೧೦೦೪ರಲ್ಲಿ ಇದು ಅವಸಾನವಾಯಿತು. ಸು.೬೫೦ ವರ್ಷಗಳ ಕಾಲ ಒಂದು ಸ್ಥಿರರಾಜ್ಯವನ್ನು ರೂಪಿಸಿದ ಪ್ರಬಲ ಸ್ವತಂತ್ರ ಹಾಗೂ ಮಾಂಡಲೀಕರು. ಇದೇ ಕಾರಣಕ್ಕೇ ಇರಬೇಕು ಇವರ ಅನೇಕ ಶಾಸನಗಳು ಕೂಟ ಶಾಸನಗಳಾಗಲು ಕಾರಣವಾಯಿತು. ಈ ಶಾಸನಗಳು ಗಂಗರ ಆಳ್ವಿಕೆಯ ಕಾಲದಲ್ಲಿಯೇ ಕೂಟಗಳಾಗಿವೆ. ಇವನ್ನು ಕೂಟವೆಂದು ಕರೆಯುವುದಕ್ಕಿಂತ ನಕಲು ಮಾಡಿಕೊಂಡಿರಬಹುದು. ಆದರೆ ಹಸ್ತಪ್ರತಿಗಳಲ್ಲಿ ದೊರೆಯುವಂತೆ ಒಂದೇ ಶಾಸನದ ಅನೇಕ ಪ್ರತಿಗಳು ದೊರೆತಿಲ್ಲ. ಅನೇಕ ವೇಳೆ ಲಿಪಿಕಾರನ ಭಿನ್ನರೀತಿಯ ಕೈ ಬರೆಹವೂ ಲಿಪಿಗಳು ಬೇರೆಯ ರೀತಿ ಕಾಣಲು ಕಾರಣವಾಗಿರಬಹುದು. ಅನೇಕ ತಾಮ್ರಶಾಸನಗಳಲ್ಲಿ ಎರಡು ರೀತಿಯ ಬರೆಹವಿರುವುದೂ ಉಂಟು (ಶೃಂಗೇರಿ, ಚಲುವನಹಳ್ಳಿ). ಇದಲ್ಲದೆ ಇವರ ಕಾಲದ ಶಿಲಾ ಶಾಸನಗಳು ದೊರೆಯುವುದು ಕ್ರಿ.ಶ.ಸು.೬೦೦ ರಿಂದೀಚೆಗೆ ಶ್ರೀನಿವಾಸಪುರ ತಾಲೂಕಿನ ಕಲ್ಲೂರು ಮತ್ತು ತುಮಕೂರು ಜಿಲ್ಲೆಯ ಜಲಗಾರದಿಬ್ಬದ ಶಾಸನಗಳಲ್ಲಿ. ಇಲ್ಲಿಂದ ಮುಂದೆ ಅಲ್ಲಲ್ಲಿ ಶಿಲಾಶಾಸನಗಳು ದೊರೆತರೂ ಕ್ರಿ.ಶ.೭೨೫ರಿಂದ ರಾಜ್ಯಭಾರ

ವಹಿಸಿಕೊಂಡ ಶ್ರೀಪುರುಷನ ಕಾಲದಿಂದ ಹೆಚ್ಚಿಗೆ ದೊರೆಯುತ್ತವೆ. ತಮಿಳಿನಲ್ಲಿಯೂ ಕೆಲವು ದಾನಶಾಸನಗಳು, ವೀರಗಲ್ಲುಗಳು ದೊರೆತಿವೆ.

ಗಂಗರ ಪ್ರಾಚೀನ ಅಥವಾ ಆರಂಭದ ಶಾಸನಗಳನ್ನು ಗುರುತಿಸಲು ಮೊದಲೇ ತಿಳಿಸಿದಂತೆ ಆರಂಭದಲ್ಲಿ ಶಿಲಾಶಾಸನಗಳು ದೊರೆತಿಲ್ಲ. ಹಾಗೂ ಕದಂಬರ ಲಿಪಿಯಲ್ಲಿಯಂತೆ ಅಕ್ಷರಗಳ ಮೇಲೆ ಪೆಟ್ಟಿಗೆಯಾಕಾರದ ತಲೆಕಟ್ಟುಗಳಂತಹ ಲಕ್ಷಣವುಳ್ಳ ಲಿಪಿ ದೊರೆತಿಲ್ಲ. ಹೀಗಾಗಿ ಗಂಗರ ಲಿಪಿಯನ್ನು ಬೇರೆ ದೃಷ್ಟಿಯಿಂದಲೇ ಅಭ್ಯಾಸ ಮಾಡಬೇಕಾಗಿದೆ. ದೊರೆತಿರುವ ತಾಮ್ರಶಾಸನಗಳಲ್ಲಿ ಶಾಸನಕೋಟ ಶಾಸನವು ಒಂದನೆಯ ಮಾಧವವರ್ಮನ ಕಾಲದ್ದು. ಇವನು ಗಂಗರಾಜ್ಯ ಸ್ಥಾಪಕನಾದ ಕೊಂಗುಣಿವರ್ಮನ ಮಗ. ಆದರೆ ಈ ಶಾಸನ ಕ್ರಿ.ಶ.೬ನೆಯ ಶತಮಾನದಲ್ಲಿ ನಕಲಾಗಿದೆ. ಹೀಗಾಗಿ ಈ ಲಿಪಿಯನ್ನು ನಾವು ಅಧಿಕೃತವಾಗಿ ಪಡೆಯಲು ಸಾಧ್ಯವಿಲ್ಲ. ಬೆಂಡಿಗಾನಹಳ್ಳಿಯ ವಿಜಯಕೃಷ್ಣವರ್ಮನ ಶಾಸನದಲ್ಲಿ ಗಂಗರ ಲಿಪಿಯ ಪ್ರಾಚೀನ ಲಕ್ಷಣಗಳಿವೆ. ಅಕ್ಷರಗಳ ತಲೆಯ ಮೇಲೆ ತಲೆಕಟ್ಟುಗಳಿಲ್ಲ. ಕೆಲವು ಅಕ್ಷರಗಳ ಮೇಲೆ ಮಾತ್ರ ಸ್ವಲ್ಪ ದಪ್ಪವಾದ ಚುಕ್ಕೆಗಳಿವೆ. ಕ, ರ, ಮುಂತಾದುವುಗಳ ಮೇಲೆ ತಲೆಕಟ್ಟು ಇಲ್ಲವೇ ಇಲ್ಲವೆನ್ನಬಹುದು. ಗ ಕಾರದ ಮೇಲ್ಭಾಗ ತ್ರಿಕೋಣಾಕಾರದಂತೆ ಇವೆ. ಕ, ರ ಗಳ ಕೆಳಗೆ ಬಂದ ಗೆರೆಗಳು ಅರೆ ಚೌಕಾಕಾರವಾಗಿ ಬಾಗಿ ಮೇಲಕ್ಕೆ ಹೋಗಿವೆ. ಅಕ್ಷರಗಳು ಉದ್ದವಾಗಿವೆ. ಉಳಿದ ಬಹಳಷ್ಟು ಅಕ್ಷರಗಳು ಚೌಕಾಕಾರದಲ್ಲಿವೆ. ಅಕ್ಷರಗಳ ಮೇಲೆ ಪಲ್ಲವರ ತಾಮ್ರಶಾಸನದ ಲಿಪಿಗಳ ಪ್ರಭಾವ ಕಾಣುತ್ತವೆ. ಎ ಕಾರದ ಕಾಗುಣಿತವು ಎಡಕ್ಕೆ ಸಾಗಿ ಕೆಳಕ್ಕೆ ಬಾಗಿದ್ದು ಒಳಮುಖ ಬಾಗುವಿಕೆಯನ್ನು ತೋರಿಸುತ್ತಿದೆ. ರ ಕಾರದ ಒತ್ತನ್ನು ಅಗಲವಾಗಿ ತೋರಿಸಲಾಗಿದೆ. ಅಕ್ಷರಗಳ ತಳಭಾಗ ಸಮವಾಗಿದ್ದು ಅಪರೂಪಕ್ಕೆ ಕೆಲವು ಅಕ್ಷರಗಳಲ್ಲಿ ಬಾಗುವಿಕೆಯನ್ನು ತೋರಿಸುತ್ತಿದೆ. ಇ ಕಾರದ ಕಾಗುಣಿತವು ವೃತ್ತಾಕಾರವಾಗಿಲ್ಲ. ಯ ಕಾರದ ಬೆಳವಣಿಗೆ ಕದಂಬರ ಅಕ್ಷರದಂತಿರದೆ ಮಧ್ಯದ ಗೆರೆಯು ಕೆಳಕ್ಕೆ ಬಂದು ಬಲಕ್ಕೆ ತಿರುಗಿ ಅರೆವೃತ್ತಾಕಾರದ ಅಕ್ಷರಕ್ಕೆ ಸೇರಿಕೊಂಡಿದೆ. ಅರೆವೃತ್ತಾಕಾರದ ಭಾಗವು ಈ ಕಾಲಕ್ಕೆ ಚೌಕಾಕಾರವಾಗಿದೆ. ಯ ಕಾರದ ಎರಡು ರೂಪಗಳನ್ನು ಕಾಣುತ್ತೇವೆ. ನ ಕಾರ ಮತ್ತು ತ ಕಾರಗಳ ವ್ಯತ್ಯಾಸವೆಂದರೆ ನ ಕಾರದ ಕೆಳಭಾಗದಲ್ಲಿ ಚಿಕ್ಕ ವೃತ್ತ ಬಂದಿದ್ದರೆ ತ ಕಾರದ ವೃತ್ತವು ದೊಡ್ಡದಾಗಿದ್ದು ಬಲಕ್ಕೆ ಸಾಗಿದ ಗೆರೆ ಕೆಳಕ್ಕೆ ಇಳಿದಿದೆ. ಗ ಕಾರ ಮತ್ತು ಶ ಕಾರ ಒಂದೇ ರೀತಿಯಲ್ಲಿದ್ದು ಶ ಕಾರದ ಬಲಗೆರೆ ಒಳಗೆ ಒಂದು ಸುರುಳಿ ಬಂದಿದೆ. ಪ, ಫ, ಷ, ಹ ಗಳು ಒಂದೇ ರೀತಿಯಲ್ಲಿದ್ದು ಫ ಕಾರದ ಬಲಗಡೆ ಗೆರೆ ಒಳಕ್ಕೆ ಬಾಗಿದ್ದರೆ ಷ ಕಾರದ ಬಲಗೆರೆಯ ಒಳಭಾಗದಲ್ಲಿ ಒಂದು ಸುರುಳಿ ಬಂದಿದೆ. ಹ ಕಾರದ ಬಲಗೆರೆ ಹೊರಕ್ಕೆ ಬಾಗಿದೆ. ಳ ಕಾರದ ಬಳಕೆಯಿದ್ದು ಇದು ಹಿಂದಿನ ಡ ಕಾರದ ಬೆಳವಣಿಗೆಯಂತಿದೆ. ಡ ಕಾರದ ಕೆಳ ಗೆರೆ ಬಲಕ್ಕೆ ಕೆಳಮುಖವಾಗಿ ಬಾಗಿದೆ. ಱ ಕಾರದ ಪ್ರಯೋಗವೂ ಉಪಧ್ಮಾನೀಯವಾಗಿ ಪ್ರಯೋಗವಾಗಿದೆ. ೞ ಕಾರದ ಪ್ರಯೋಗ ಈ ಶಾಸನದಲ್ಲಿ ಇಲ್ಲ. ಈ ಅಕ್ಷರಗಳೇ ಅಲ್ಲದೆ ಸ್ವತಂತ್ರ ಸ್ವರಗಳಾದ ಇ, ಈ, ಋ, ಐ, ಓ, ಔ ಗಳ ಪ್ರಯೋಗವೂ ಇಲ್ಲ. ಹಾಗೆಯೇ ಝ, ಠ, ಢ, ಥ ಗಳ ಪ್ರಯೋಗಗಳಿಲ್ಲ ಹಾಗೆಂದಾಗ ಈ ಕಾಲದಲ್ಲಿ ಆ ಅಕ್ಷರಗಳಿರಲಿಲ್ಲವೆಂದಲ್ಲ. ಅವುಗಳ ಪ್ರಯೋಗಗಳಿಲ್ಲ. ಕಾಗುಣಿತಗಳು ಮುಂದಕ್ಕೆ ಬೆಳೆದು ಕೆಳಕ್ಕೆ ಬಾಗಿ ಒಳಗಡೆಗೆ ತಿರುಗುತ್ತಿರುವ ಲಕ್ಷಣವನ್ನು ತೋರಿಸುತ್ತಿರುವುದು, ಕದಂಬರ ಪ್ರದೇಶ ಬಿಟ್ಟು ಉಳಿದ ಪ್ರದೇಶವೆಲ್ಲಾ (ಪಲ್ಲವರ ಪ್ರಾಂತ್ಯವೂ ಸೇರಿ) ಈ ಲಿಪಿಯೇ ಬಳಕೆಯಿತ್ತೆಂಬುದನ್ನು ಸೂಚಿಸುತ್ತದೆ.



ಬೆಂಡಿಗಾನ ಹಳ್ಳಿ ಶಾಸನ



ಚೂಕಟ್ಟೂರು ಶಾಸನ IWG


ಇದೇ ಅರಸನ ಎರಡನೆಯ ಶಾಸನವಾದ ಕುದಿಟಿಯಂ ಶಾಸನದಲ್ಲಿ ಅಕ್ಷರಗಳು ಇದೇ ಆಕಾರವನ್ನು ಪಡೆದಿವೆ. ಎರಡೂ ಶಾಸನದ ವಿವರಗಳು ಪರುವಿ, ಪೆರೂರು ವಿಷಯಗಳನ್ನು ತಿಳಿಸುವುದರಿಂದ ಈ ಶಾಸನಗಳು ಸಹಜವಾಗಿ ಈ ಪ್ರದೇಶವನ್ನಾಳುತ್ತಿದ್ದ ಪಲ್ಲವರ ಶಾಸನ ಲಿಪಿಗಳನ್ನು ಹೋಲುತ್ತಿರುವುದು ಸರಿಯಾಗಿದೆ.

ಒಂದನೆಯ ಕೃಷ್ಣವರ್ಮನ ಮಗ ಸಿಂಹವರ್ಮ. ಇವನು ಗಂಗರ ವಂಶದವನೇ ಆಗಿರುತ್ತಾನೆ. ಚೂಕುಟ್ಟೂರು, ಪೇರೂರು, ಚಲುವನಹಳ್ಳಿ ಶಾಸನಗಳು ಇವನ ಕಾಲದ್ದಾಗಿವೆ. ಇವನ ಕಾಲದ ಶಾಸನಗಳು ಗಂಗರ ಮುಂದಿನ ತಾಮ್ರಶಾಸನಗಳಿಗೆ ಮಾದರಿಯಾದವೆಂದೇ ಹೇಳಬೇಕಾಗಿದೆ. ಗುಂಡಾದ ಅಕ್ಷರಗಳು, ನೀಟಾದ ಸಾಲುಗಳು, ಅಕ್ಷರಗಳ ಮೇಲ್ಭಾಗ ಹಾಗೂ ಕೆಳಭಾಗದ ಲೆಕ್ಕಾಚಾರ ಬೆಳವಣಿಗೆಯನ್ನು ಹೊಂದಿದೆ. ಕಲಾವಿದನೊಬ್ಬನ ಕೈ ಬರೆವಣಿಗೆಯಾಗಿದೆ. ಅಕ್ಷರದ ರೇಖೆಗಳು ದಪ್ಪವಾಗಿದ್ದು ತಲೆಗಳ ಮೇಲೆ ತ್ರಿಕೋಣದಂತೆ ಕಾಣಬಹುದಾದ ತಲೆಕಟ್ಟಿದೆ. ಅಕ್ಷರಗಳು ಚಿಕ್ಕದಾಗಿದ್ದು ಜ, ಣ, ಪ, ಭ, ಲ, ಸ ಮೊದಲಾದ ಅಕ್ಷರಗಳು ಅಗಲವಾಗಿವೆ. ಕೆಳಕ್ಕೆ ಇಳಿದಿರುವ ಗೆರೆಗಳಾದ ಕ, ರ ಮತ್ತು ಉ ಕಾರದ ಕಾಗುಣಿತವು ಮೇಲ್ಮುಖವಾಗಿ ಬಾಗಿ ಅಕ್ಷರದ ಅರ್ಧ ಭಾಗಕ್ಕಿಂತ ಕೆಳಗಿನವರೆಗೂ ಬೆಳೆದಿದೆ. ಅಕ್ಷರಗಳು ಅಂಕುಡೊಂಕಾಗಿದ್ದು ನೋಡಲು ಅಂದವಾಗಿದೆ. ಈ ಶಾಸನದ ಕಾಲವು ಕ್ರಿ.ಶ.ಸು. ೫ನೆಯ ಶತಮಾನಕ್ಕೆ ಸೇರಿದುದಾಗಿದೆ.

ಈ ಅಕ್ಷರಗಳಲ್ಲಿ ಕಾಣಬರುವ ವಿಶೇಷವೆಂದರೆ ಅತ್ತ ಪೂರ್ಣವಾಗಿ ಕದಂಬರವೂ ಅಲ್ಲ, ಪೂರ್ಣ ಪಲ್ಲವರ ಪ್ರಭಾವಿತ ಅಕ್ಷರಗಳೂ ಅಲ್ಲ. ಅ ಕಾರದ ಮೇಲಿನ ಗೆರೆಗಳ ಮೇಲೆ ದಟ್ಟವಾದ ಗೆರೆಗಳಿವೆ. ಈ ದಟ್ಟವಾದ ಗೆರೆಗಳು ಗ, ಧ, ಶ ಕಾರಗಳ ತಲೆಗಳ ಮೇಲೂ ಇವೆ. ಅ ಕಾರವು ಕೃಷ್ಣವರ್ಮನ ಶಾಸನದಲ್ಲಿನ ಅಕ್ಷರದಂತೆ ಇದ್ದರೂ ಕೆಳ ಗೆರೆ ಸ್ವಲ್ಪ ಮೇಲಕ್ಕೆ


ಬೆಳೆದಿದೆ, ಹಾಗೂ ಕೆಳಬಾಗಿ ಮೇಲ್ಮುಖವಾಗಿರುವ ಗೆರೆಗಳು ಚೌಕಾಕಾರವನ್ನು ನಿರ್ಮಿಸಿಲ್ಲ. ಕ, ರ ಮುಂತಾದ ಅಕ್ಷರಗಳು ಉಳಿದ ಅಕ್ಷರಗಳಿಗಿಂತ ಉದ್ದವಾಗಿವೆ. ಗ, ಧ, ಶ ಗಳ ಮೇಲೆ ಗೆರೆ ಬಂದಿರುವುದನ್ನು ಬಿಟ್ಟರೆ ಹಿಂದಿನ ಶಾಸನದ ಅಕ್ಷರಗಳಂತೆಯೇ ಇವೆ. ಯ ಕಾರದ ಮಧ್ಯದ ಗೆರೆಯು ಉಂಟುಮಾಡಿದ್ದ ಅರ್ಧವೃತ್ತವು ಇದರಲ್ಲಿ ಪೂರ್ಣವೃತ್ತವಾಗಿದ್ದು ಮಧ್ಯದ ಗೆರೆಯಿಂದ ಬೇರೆಯಾಗಿದೆ. ಕೆಲವೆಡೆ ಹಿಂದಿನ ಶಾಸನದ ಅಕ್ಷರದ ಛಾಯೆ ಇದೆ. ಯ, ನ ಮತ್ತು ತ ಗಳಿಗೆ ಈ ಶಾಸನದಲ್ಲಿ ವ್ಯತ್ಯಾಸವಿದೆ. ನ ಕಾರದ ಕೆಳಗೆ ಬಾಗಿದ ಗೆರೆ ಬಂದಿದ್ದರೆ ತ ಕಾರದಲ್ಲಿ ಮೇಲಿನಿಂದ ಕೆಳಕ್ಕೆ ಬೆಳೆದು ಸುರುಳಿಯನ್ನು ಸೃಷ್ಟಿಸಿ ಬಲಕ್ಕೆ ಬಂದಿದೆ. ಕೆಲವು ಕಡೆ ನ ಕಾರದಲ್ಲಿಯೂ ಚಿಕ್ಕದಾಗಿ ವೃತ್ತ ಕಾಣಿಸಿಕೊಂಡಿದೆ. ಕಾಗುಣಿತಗಳಲ್ಲಿ ಆ ದೀರ್ಘವು ಅಕ್ಷರದ ತಲೆಕಟ್ಟಿನ ಬಲಬದಿಗೆ ಬೆಳೆದು ಕೆಳಕ್ಕೆ ಬಾಗಿದೆ. ಕೆಲವೆಡೆ ಈ ದೀರ್ಘವು ಅಕ್ಷರದ ಅರ್ಧ ಬೆಳೆದಿದ್ದರೆ ಕೆಲವೆಡೆ ಅಕ್ಷರದ ಉದ್ದಕ್ಕೂ ಬೆಳೆದಿದೆ. ಇ ಕಾರದ ಕಾಗುಣಿತವು ಇನ್ನೂ ವೃತ್ತಾಕಾರವಾಗಿಲ್ಲ, ಎಡಗಡೆ ಬಾಯಿಬಿಟ್ಟುಕೊಂಡಿದೆ. ಈ ಕಾರವು ಇ ಕಾರದ ವೃತ್ತದೊಳಗೆ ಇನ್ನೂ ಚಿಕ್ಕ ಅರ್ಧವೃತ್ತವನ್ನು ಬಿಡಿಸಿದೆ. ಉ ಕಾರವು ಗ, ಶ, ಭ ಅಕ್ಷರಗಳಲ್ಲಿ ಕೆಳಗೆ ಅಕ್ಷರಕ್ಕೆ ಅಂಟಿಕೊಂಡಂತೆ ಅರ್ಧಚಂದ್ರಾಕಾರದ ರೇಖೆಯನ್ನು ಬಿಡಿಸಿದೆ. ಈ ಶಾಸನದಲ್ಲಿ ಚ ಕಾರದಲ್ಲಿ ಉ ಕಾರದ ಗೆರೆ ಕೆಳಕ್ಕೆ ಬಾಗಿ ಎಡಕ್ಕೆ ತಿರುಗಿ ಮೇಲೆ ಬಂದಿದೆ. ಉಳಿದಂತೆ ಅಕ್ಷರಗಳಲ್ಲಿ (ಕ, ರ ಕಾರವನ್ನು ಬಿಟ್ಟು) ಉ ಕಾರವು ಕೆಳಕ್ಕೆ ಗೆರೆಯಾಗಿ ಸೇರಿ ಅದು ಬೆಳೆದು ಎಡಕ್ಕೆ ತಿರುಗಿ ಮೇಲಕ್ಕೆ ತಿರುಗಿದೆ. ರ ಮತ್ತು ಕ ಕಾರದಲ್ಲಿ ಮಾತ್ರ ಈ ಉ ಕಾರವು ಅಕ್ಷರದ ಕೆಳಗೆ ಕೆಳಮುಖವಾಗಿ ಒಂದು ಸಣ್ಣ ಗೆರೆಯಂತೆ ಮೂಡಿದೆ. ಋ ಕಾರದ ಒತ್ತಕ್ಷರವು ಮೇಲ್ಮುಖವಾಗಿ ಬಾಗಿದ ಗೆರೆಯೊಂದನ್ನು ಬಿಡಿಸಿದೆ. ಎ ಕಾರವು ಅಕ್ಷರದ ಎಡಭಾಗದಿಂದ ಹೊರಟು ಕೆಳಕ್ಕೆ ಬಾಗಿದೆ. ಹೀಗೆ ಬಾಗಿದ ಈ ಗೆರೆಯು ಕೆಲವು ಕಡೆ ಒಳಮುಖಕ್ಕೆ ಸ್ವಲ್ಪ ಬಾಗಿದೆ. ಕೆಲವೆಡೆ ಬಾಗಿಲ್ಲ, ಅಕ್ಷರದ ಕೆಳಭಾಗದವರೆಗೆ ಬೆಳೆದಿದೆ. ಐ ಕಾರವು ಅಕ್ಷರದ ಎ ಕಾರದ ಕಾಗುಣಿತದ ಕೆಳಗೆ ಅದಕ್ಕೆ ಸಮಾನಾಂತರವಾಗಿ ಇನ್ನೊಂದು ಗೆರೆಯನ್ನು ಎಳೆಯಲಾಗಿದೆ. ಣ ಕಾರದಲ್ಲಿ ಅಕ್ಷರದ ಕೆಳಗೆ ಬಲಮುಖಕ್ಕೆ ತಿರುಗಿದ ಗೆರೆಯನ್ನು ಬಿಡಿಸಿದೆ. ಓ ಕಾರವು ಆ ಕಾರ ಮತ್ತು ಎ ಕಾರದ ಎರಡು ಗೆರೆಗಳು ಸೇರಿದ್ದರಿಂದಾಗಿದೆ. ಔ ಕಾರವು ಆ ಕಾರದ ಗೆರೆಯನ್ನು ಸ್ವಲ್ಪ ದೂರ ಎಳೆದು ಮೇಲಕ್ಕೆ ಬಾಗಿಸಿ ಅನಂತರ ಕೆಳಕ್ಕೆ ಬಾಗಿಸಿರುತ್ತಾರೆ. ಒತ್ತಕ್ಷರಗಳಲ್ಲಿ ಎದ್ದು ಕಾಣುವ ಅಕ್ಷರಗಳೆಂದರೆ ಯ ಮತ್ತು ರ ಕಾರದ ಒತ್ತುಗಳು. ಯ ಕಾರದ ಒತ್ತು, ಅಕ್ಷರದ ಕೆಳಗೆ ಬೆಳೆದು ಬಳ್ಳಿಯಂತೆ ಮೇಲಕ್ಕೆ ತಿರುಗಿ ಮತ್ತೆ ಅದೇ ಗೆರೆಗೆ ಸಮಾನಾಂತರವಾಗಿ ಗೆರೆಯ ಹೊರಗೆ ಬೆಳೆದು ಅಕ್ಷರದ ತಲೆಕಟ್ಟಿನವರೆಗೆ ಬೆಳೆದಿದೆ. ಇದಾದ ಮೇಲೆ ರ ಕಾರದ ಒತ್ತು, ಅಕ್ಷರದ ಕೆಳಗೆ ಇಳಿದು ಅರ್ಧಚಂದ್ರಾಕಾರವಾಗಿ ಮೇಲಕ್ಕೆ ಬಂದಿದೆ.

ಮುಂದೆ ಇದೇ ಅರಸನ ಕಾಲದ ಪೆನಗೊಂಡೆ ತಾಮ್ರ ಶಾಸನವು ಚೂಕಟ್ಟೂರು ಶಾಸನದ ಲಿಪಿಗಳನ್ನೇ ಮುಂದುವರಿಸಿದೆ. ಈ ಶಾಸನವನ್ನು ಫ್ಲೀಟರು ನೈಜಶಾಸನವೆಂದು ಒಪ್ಪಿಕೊಂಡಿದ್ದರು. ಆದರೆ ಹಿಂದೆ ಹೇಳಿದ ಬೆಂಡಿಗಾನಹಳ್ಳಿ ಮತ್ತು ಚೂಕಟ್ಟೂರು ಶಾಸನಗಳೂ ಸಹ ನೈಜಶಾಸನಗಳೇ ಆಗಿವೆ. ಪೆನಗೊಂಡೆ ಶಾಸನವು ಚೂಕಟ್ಟೂರು ಶಾಸನಕ್ಕಿಂತ ಅಗಲ



ಚಿಲುವನಹಳ್ಳಿ ಶಾಸನ

IWG. 156



ಗಂಗ ಮಾಧವನ ಪೆನಗೊಂಡೆ ಶಾಸನ ದೇ.ಕೊ. ರೆಡ್ಡಿ


ಮತ್ತು ಉದ್ದವಾಗಿರುವುದರಿಂದ ಅಕ್ಷರಗಳನ್ನು ಬಿಡಿಬಿಡಿಯಾಗಿ ಬರೆಯಲಾಗಿದೆ. ಲಕ್ಷಣಗಳನ್ನು ಚಿಕ್ಕದಾಗಿ ಕೊರೆಯಲಾಗಿದೆ. ಈ ಶಾಸನದಲ್ಲಿ ಅಕ್ಷರಗಳು ಸ್ವಲ್ಪ ಬೆಳವಣಿಗೆಯನ್ನು ತೋರಿಸಿವೆ. ಈ ಬೆಳವಣಿಗೆಗೆಳು ಕಾಗುಣಿತದ ಗೆರೆಗಳಲ್ಲಿ ಕಾಣಿಸುತ್ತದೆ. ಆ ಮತ್ತು ಏ, ಓ ಕಾರದ ಗೆರೆಗಳು ಕೆಳಕ್ಕೆ ಅಕ್ಷರದ ಕೆಳಮಟ್ಟದವರೆಗೂ ಬೆಳೆದಿದೆ. ಕೆಲವೊಮ್ಮೆ ಈ ಗೆರೆ ಅಕ್ಷರದ ಕಡೆಗೆ ಬಾಗಿರುವುದೂವುಂಟು. ಣ ಕಾರದ ಬಲಭಾಗದ ಗೆರೆಯು ಣ ಅಕ್ಷರದ ಕೆಳಕ್ಕೆ ಬಂದು ಎಡಕ್ಕೆ ಸ್ವಲ್ಪ ಬಾಗಿದೆ. ಕ ಕಾರದ ಕೆಳ ಗೆರೆ ಮೇಲಕ್ಕೆ ಬೆಳೆಯುತ್ತಾ ಬಂದಿದೆ. ಅಡ್ಡಗೆರೆಯು ಉದ್ದಗೆರೆಯನ್ನು ಛೇದಿಸಿ ಎರಡೂ ಕಡೆ ಕೆಳಕ್ಕೆ ಕಲಾತ್ಮಕವಾಗಿ ಬಾಗಿವೆ. ರ ಕಾರದ ಕೆಳಗೆರೆ ಕ ಕಾರದಂತೆ ಮೇಲಕ್ಕೆ ಬಂದಿದೆ. ತ ಮತ್ತು ನ ಕಾರಗಳಲ್ಲಿ ಹಿಂದಿನ ಶಾಸನಗಳಂತೆ ವ್ಯತ್ಯಾಸವನ್ನು ಮುಂದುವರಿಸಿದೆ. ಹಲವು ಕಡೆ ಅಕ್ಷರಗಳ ಮೇಲೆ ತಲೆಕಟ್ಟನ್ನು ಕಾಣುವಂತೆ ದಟ್ಟವಾಗಿ ಚಿಕ್ಕದಾಗಿ ಕೊರೆದಿದೆ. ಅನೇಕ ಕಡೆ ಏ ಕಾರದ ಕಾಗುಣಿತವನ್ನು ಎಡಕ್ಕೆ ಎಳೆದು ಕೆಳಕ್ಕೆ ಬಾಗಿಸಿ ಮತ್ತೆ ಅದನ್ನು ಅಕ್ಷರದ ಒಳಮುಖದ ಕಡೆಗೆ ಬಾಗಿಸಲಾಗಿದೆ. ಐ ಕಾರದ ಕಾಗುಣಿತವು ಏ ಕಾರವು ಅಕ್ಷರದ ತಲೆಕಟ್ಟಿನಲ್ಲಿದ್ದರೆ ಐ ಕಾರದ ತಲೆಕಟ್ಟನ್ನು ಅಕ್ಷರದ ಮಧ್ಯೆ ಅಥವಾ ಅಕ್ಷರದ ಸ್ವಲ್ಪ ಕೆಳಭಾಗದಿಂದ ಕೆಳಕ್ಕೆ ಎಳೆದಿರುತ್ತಾರೆ. ಒತ್ತಕ್ಷರಗಳಲ್ಲಿ ಯ ಕಾರದ ಒತ್ತಕ್ಷರವು ಕೆಳಭಾಗದಲ್ಲಿ ಡೊಂಕನ್ನು ತೋರಿಸಿದೆ. ಯ ಕಾರವು ಇಲ್ಲಿ ಸ್ವಲ್ಪ ಭಿನ್ನವಾದ ಬೆಳವಣಿಗೆಯನ್ನು ಹೊಂದಿದೆ. ಮಧ್ಯದ ಗೆರೆಯು ಕೆಳಗೆ ಎಡಗಡೆಗೆ ತಿರುಗಿ ಯ ಕಾರದ ಎಡಗೆರೆಯನ್ನು ಸೇರಿ ಕೆಳಕ್ಕೆ ಬಾಗಿ ಬಲಕ್ಕೆ ತಿರುಗಿ ಮುಂದೆ ಸಾಗಿ ನಂತರ ಮೇಲಕ್ಕೆ ಸಾಗಿದೆ. ಒಂದೇ ಶಾಸನದಲ್ಲಿ ಒಂದೇ ಅಕ್ಷರದ ಮೂರು–ನಾಲ್ಕು ರೀತಿಗಳನ್ನು ಕಾಣುತ್ತೇವೆ.

ಮುಂದೆ ಸು.ಕ್ರಿ.ಶ.೫೭೬೦ರ ಅವಿನೀತನ ಶೃಂಗೇರಿ ಶಾಸನದಲ್ಲಿ ಎರಡು ತರಹದ ಲಿಪಿಗಳು ಕಾಣಬರುತ್ತವೆ. ೫ನೆಯ ಹಲಗೆ ವರೆಗೆ ಸ್ಥಳೀಯ ಲಿಪಿಕಾರನ ಲಿಪಿಯೂ ಅದೇ ಹಲಗೆಯಲ್ಲಿ ಪಾಠವನ್ನು ಮುಂದುವರಿಸಿದಂತೆ ಕಾಣುವ ನುರಿತ ಲಿಪಿಕಾರನ ಲಿಪಿಗಳನ್ನು


ಕಾಣುತ್ತೇವೆ. ಹೀಗಾಗಿ ಒಂದೇ ಕಾಲದಲ್ಲಿ ಲಿಪಿಕಾರರ ಕೈಬರಹದ ವ್ಯತ್ಯಾಸದಿಂದ ಬೇರೆ ಬೇರೆ ತರಹದ ಲಿಪಿಗಳನ್ನು ಕಾಣುತ್ತೇವೆ. ಎರಡೂ ತರಹದ ಲಿಪಿಗಳಲ್ಲಿ ಚಿಕ್ಕ ತಲೆಕಟ್ಟು ಕಾಣಬರುತ್ತದೆ. ಇ ಕಾರದ ಕಾಗುಣಿತ ವೃತ್ತಾಕಾರವಾಗಿದೆ. ಈ ಕಾರದ ದೀರ್ಘವು (ಕಾಗುಣಿತ) ಒಳಗಿದ್ದು ಎರಡನೆಯ ಗೆರೆ ಹೊರ ಗೆರೆಗೆ ಸೇರಿಕೊಂಡು ಅಕ್ಷರದಿಂದ ಮೇಲೆ ಸುರುಳಿಯಾಕಾರದಲ್ಲಿ ಬೆಳೆದಿದೆ. ಅಕ್ಷರಗಳ ತಳಭಾಗಗಳು ಅಕ್ಷರದ ಒಳಮುಖಕ್ಕೆ ಸ್ವಲ್ಪ ಬಾಗಿವೆ. ಗ, ಶ ಅಕ್ಷರಗಳ ಎಡಗೆರೆಗಳ ಕೆಳತುದಿಗಳು ಅಕ್ಷರದ ಒಳಕ್ಕೆ ಸ್ವಲ್ಪ ಬಾಗಿವೆ. ರ ಮತ್ತು ಕ ಅಕ್ಷರಗಳ ಉದ್ದ ಸ್ವಲ್ಪ ಕಡಿಮೆಯಾಗಿವೆ. ಇದೇ ಅರಸನ ಹೊಸಕೋಟೆ ಶಾಸನದಲ್ಲಿ ಈ ಕಾಲದ ಲಿಪಿ ಲಕ್ಷಣಗಳು ಚೆನ್ನಾಗಿ ಮೂಡಿವೆ. ಈ ಶಾಸನದ ಲಿಪಿಗಳ ಮೇಲೆ ತಲೆಕಟ್ಟುಗಳು ಉದ್ದದಲ್ಲಿ ಚಿಕ್ಕವಾಗಿದ್ದರೂ ಕಡ್ಡಾಯವಾಗಿವೆ. ಈ ತಲೆಕಟ್ಟುಗಳು ಅಕ್ಷರದ ಬಲಗಡೆಗೆ ಬೆಳೆದಿವೆ. ಕ ಮತ್ತು ರ ಕಾರದ ಗೆರೆಗಳು ಮೇಲಕ್ಕೆ ಬೆಳೆದಿದ್ದು ಕ ಕಾರದ ಅಡ್ಡಗೆರೆ ವರೆಗೆ ಬೆಳೆದು ಕೆಲವು ಅಕ್ಷರಗಳಲ್ಲಿ ಅಡ್ಡಗೆರೆಯನ್ನು ಮುಟ್ಟಿವೆ, ಕೆಲವು ಅಕ್ಷರಗಳಲ್ಲಿ ಮುಟ್ಟಲು ಪ್ರಯತ್ನಿಸುವಷ್ಟು ಹತ್ತಿರ ಸರಿದಿದೆ. ಕ ಕಾರದ ಅಡ್ಡಗೆರೆ ಚಿಕ್ಕದಾಗಿದೆ. ರ ಕಾರದ ಗೆರೆಯ ರ ಕಾರದ ಮೂಲಗೆರೆಯ ಮಟ್ಟಕ್ಕೆ ಹೋಗಿದ್ದು ಎರಡು ಗೆರೆಗಳೂ ತಲೆಕಟ್ಟು ಇಲ್ಲದಿರುವುದರಿಂದ ಸೇರಲಿಲ್ಲ. ಜ ಕಾರದ ಮೇಲಿನ ಅಡ್ಡಗೆರೆ ಒಳಕ್ಕೆ ಸ್ವಲ್ಪ ಬಾಗಿದೆ. ಯ ಕಾರವು ಈಗಿನ ಕೈ ಬರವಣಿಗೆಯ ಮ ಕಾರದ ರೂಪ ಪಡೆದಿದೆ. ಶ್ರೀ ಕಾರದ ರ ಒತ್ತಕ್ಷರವು ಮೇಲಕ್ಕೆ ಹೋಗಿ ಅಕ್ಷರದ ನೆತ್ತಿಯನ್ನು ಮುಟ್ಟುವಂತಿದೆ. ಅ ಕಾರದ ಕಾಗುಣಿತದಲ್ಲಿ ಹಿಂದಿನ ಶಾಸನಗಳಂತೆಯೇ ಇದ್ದು, ಬದಲಾವಣೆ ಇಲ್ಲ. ಏ ಕಾರದ ಕಾಗುಣಿತವೂ ಸ, ಹ ಅಕ್ಷರದ ಕಡೆಗೆ ಒಳಕ್ಕೆ ಬಾಗಿದೆ. ಒಟ್ಟಾರೆ ಅಕ್ಷರಗಳು ಹಿಂದಿನ ಮುದ್ದಾದ ಅಕ್ಷರಗಳ ಶಾಸನ ಲಿಪಿಗಳ ಲಕ್ಷಣಗಳನ್ನೇ ಪಡೆದಿವೆ. ಧ ಮತ್ತು ಥ ಗಳು ಚೌಕಾಕಾರವಾಗಿದ್ದು ಥ ಒಳಗೆ ಚುಕ್ಕೆ ಇದೆ. ಏ ಕಾರದ ಮೇಲೆ ತಲೆಕಟ್ಟಿಲ್ಲ. ನ ಮತ್ತು ತ ಮಧ್ಯೆ ವ್ಯತ್ಯಾಸಗಳು ಹಾಗೇ ಮುಂದುವರೆದಿವೆ. ಯ ಕಾರದ ಒತ್ತಕ್ಷರವು ಸಾದಾ ಗೆರೆಗಳಂತೆ ಸುತ್ತಿ ಮೇಲಕ್ಕೆ ಹೋಗಿವೆ. ಕೋಡುಂಜೆರವು ಶಾಸನದಲ್ಲಿ ರ ಮತ್ತು ಕ ಗಳ ಕೆಳ ಗೆರೆಯು ಮೇಲಿನ ಗೆರೆಗೆ ತಾಗಿಕೊಂಡಿವೆ.

ಆದರೆ ಮಲ್ಲೋಹಳ್ಳಿ ತಾಮ್ರಶಾಸನಗಳಲ್ಲಿ ಅಕ್ಷರಗಳು ಇನ್ನೂ ಬೆಳವಣಿಗೆಯ ಹಂತದಲ್ಲಿವೆ. ರ ಮತ್ತು ಕ ಗಳ ಕೆಳ ಗೆರೆ ಮೇಲ್ಮುಖವಾಗಿ ಪೂರ್ಣ ಬೆಳೆದಿಲ್ಲ. ಗ ಕಾರದಲ್ಲಿ ಕೆಲವು ಕಡೆ ಅದರ ಎಡಗೆರೆ ಒಳಬಾಗಿದೆ. ಕೆಲವೆಡೆ ಇಲ್ಲ. ಜ ಕಾರ ಬೆಂಡಿಗಾನಹಳ್ಳಿ ಶಾಸನದಂತೆ ಇದೆ. ಣ ಕಾರ ಮತ್ತು ನ ಕಾರ ಇವುಗಳಲ್ಲಿ ಕೆಳಗೆ ಗಂಟು ಇಲ್ಲ. ತ ಕಾರವೂ ಸಹ ಇಲ್ಲಿ ಭಿನ್ನವಾಗಿದೆ. ತಳಗಡೆಯ ಗೆರೆಯ ಎಡತುದಿ ಒಳಕ್ಕೆ ತಿರುಗಿದೆ ಬಲರೇಖೆ ಕೆಳಕ್ಕೆ ಬಂದಿದೆ. ಎಲ್ಲಾ ಅಕ್ಷರಗಳ ತಲೆಕಟ್ಟುಗಳು ಅಕ್ಷರಗಳ ತಲೆಯ ಮೇಲೆ ದಟ್ಟವಾದ ಗೆರೆಗಳನ್ನು ಹೊಂದಿವೆ.

ಅವಿನೀತನ ಮಗ ದುರ್ವಿನೀತ. ಇವನ ಕಾಲದ ಸುಂದರ ಅಕ್ಷರಗಳುಳ್ಳ ಪೆಣ್ಣನೂರು, ಉತ್ತನೂರು, ದಿವೇ ಆಗರ್, ಶಾಲಿಗ್ರಾಮ, ಗುಮ್ಮರೆಡ್ಡಿಪುರ, ನಲ್ಲಾಲಮ್ ಶಾಸನಗಳು ಮುಖ್ಯವಾದವು. ಈ ಶಾಸನಗಳಲ್ಲಿನ ಅಕ್ಷರಗಳಲ್ಲಿ ಕ ಮತ್ತು ರ ಅಕ್ಷರಗಳು ಆರಂಭದ ಶಾಸನಗಳಲ್ಲಿ ಎಡಗಡೆಯ ಗೆರೆಯ ಮೇಲಿನ ತಲೆಕಟ್ಟಿಗೆ ಸೇರಿಕೊಳ್ಳುವುದರ ಬಗ್ಗೆ ಇದ್ದ ಅನಿಶ್ಚತೆಯನ್ನು ಕೊನೆಗಾಣಿಸಿದೆ. ಕ ಕಾರದ ಅಡ್ಡಗೆರೆಗೆ ಈ ಗೆರೆ ಸೇರಿದ್ದರೆ ರ ಕಾರದಲ್ಲಿ ತಲೆಕಟ್ಟು ಅಕ್ಷರದ ಮಧ್ಯೆ ಬಂದು ಎರಡೂ



ದಿವೇ ಆಗರ್ ಶಾಸನ



ಗುಮ್ಮರೆಡ್ಡಿಪುರ ಶಾಸನ

ದೇ.ಕೊಂ.ರೆಡ್ಡಿ


ಗೆರೆಗಳನ್ನು ಸೇರಿಸಿ ಪೂರ್ಣ ಮಾಡಿದೆ. ತಲೆಕಟ್ಟುಗಳು ಪ್ರಧಾನವಾಗಿ ಗೆರೆಗಳ ರೂಪದಲ್ಲಿ ಕಾಣಲಾರಂಭಿಸಿವೆ. ಅ ಕಾರವು ಹಿಂದಿನ ರೂಪವನ್ನು ಉಳಿಸಿಕೊಂಡಿದ್ದರೂ ಕೆಳಗೆ ಇಳಿಬಿದ್ದ ಗೆರೆ ಅರ್ಧಚಂದ್ರಾಕಾರವಾಗಿ ಕೊಕ್ಕೆಯಾಕಾರದ ಚಿಹ್ನೆಯನ್ನು ಸೇರಿಸಿದೆ. ಏ ಕಾರವು ಚ ಕಾರದಂತಿದ್ದರೂ ತಲೆಕಟ್ಟಿಲ್ಲ. ಉಳಿದ ಅಕ್ಷರಗಳ ಕೆಳ ಗೆರೆಗಳು ಅಕ್ಷರದ ಒಳಕ್ಕೆ ಬಾಗುವಿಕೆಯ ಪ್ರಕ್ರಿಯೆಯನ್ನು ತೋರಿಸಿವೆ. ಗ ಕಾರದ ಎಡಗೆರೆಯು ಅಕ್ಷರದ ಒಳಭಾಗಕ್ಕೆ ಸ್ವಲ್ಪ ಬಾಗಿದೆ. ಖ ಕಾರವು ಮೇಲ್ಗಡೆಯಿಂದ ಅರ್ಧಚಂದ್ರಾಕೃತಿಯಲ್ಲಿ ಬಾಗಿ ಬಲಗಡೆಯಿಂದ ಕೆಳಕ್ಕೆ ಬಂದು ಎಡಕ್ಕೆ ತಿರುಗಿ ತುದಿಯಲ್ಲಿ ಒಂದು ಸಣ್ಣ ವೃತ್ತವನ್ನು ಸೃಷ್ಟಿಸಿದೆ. ಚ ಕಾರದ ತಲೆಕಟ್ಟಿನ ಭಾಗ ಕಿರಿದಾಗಿದೆ. ಜ ಕಾರದ ಮೇಲಿನ ಮತ್ತು ಮಧ್ಯದ ಗೆರೆಗಳೆರಡೂ ಒಳಕ್ಕೆ ಬಾಗಿವೆ ಮತ್ತು ಮಧ್ಯೆ ಒಂದು ಸರಳರೇಖೆ ಬಂದಿದ್ದು ಅದರಿಂದ ಮಧ್ಯದ ಗೆರೆ ಹೊರಕ್ಕೆ ನೇರವಾಗಿ ಬಂದಿದೆ. ಟ ಕಾರದ ಕೆಳಭಾಗವೂ ಸ್ವಲ್ಪ ಡೊಂಕನ್ನು ತೋರಿಸಿದೆ. ಡ ಕಾರವು ದ ಕಾರದಂತಿದ್ದರೂ ಕೆಳಗಡೆಯ ಗೆರೆಯು ಬಲಗಡೆಗೆ ಸ್ವಲ್ಪ ಮೇಲಕ್ಕೆ ಮಡಚಿದೆ. ಣ ಕಾರವು ನ ಕಾರದ ತಲೆಯ ಮೇಲೆ ಎಡ ಮತ್ತು ಬಲಕ್ಕೆ ಗೆರೆಗಳನ್ನು ಹೊಂದಿದ್ದು ಎಡಗೆರೆಯು ಅಕ್ಷರದ ಒಳಮುಖಕ್ಕೆ ಬಾಗಿದೆ. ಬಲ ಗೆರೆ ಕೆಳಕ್ಕೆ ನೇರವಾಗಿ ಇಳಿದಿದೆ. ತ ಕಾರದ ಕೆಳಭಾಗದಲ್ಲಿ ವೃತ್ತಾಕಾರವು ಬಂದು ಅದರಿಂದ ಬಲಕ್ಕೆ ಗೆರೆ ಬಂದು ಆ ಗೆರೆಯು ಕೆಳಕ್ಕೆ ಬಾಗಿದೆ. ಥ ಕಾರಕ್ಕೆ ಕೆಲವು ಕಡೆ ಮಧ್ಯೆ ಚುಕ್ಕೆ ನೀಡಿದ್ದರೂ ಕೆಲವು ಕಡೆ ಆ ಚುಕ್ಕೆ ಚಿಕ್ಕ ಸೊನ್ನೆಯಂತೆ ಬರೆದಿರುವುದೂವುಂಟು. ದ ಕಾರವು ಡ ಕಾರದಂತಿದ್ದು ಅಡ್ಡಗೆರ ತುದಿ ಬಾಗಿಲ್ಲ. ಧ ಕಾರವು ಚೌಕಾಕಾರಕ್ಕೆ ಬಂದಿದ್ದು ತಲೆಕಟ್ಟಿರುವುದಿಲ್ಲ. ನ ಕಾರವು ಹಿಂದಿನ ರೂಪವನ್ನೇ ಉಳಿಸಿಕೊಂಡಿದ್ದರೂ ತಳಗಡೆಯ ಅಡ್ಡಗೆರೆ ಇಲ್ಲಿ ಮೇಲ್ಮುಖವಾಗಿ ಅರ್ಧ ಚೌಕಾಕಾರವಾಗಿದೆ. ಇದರ ಬಲಗೆರೆಯಿಂದ ನೇರ ಗೆರೆ ಬಂದಿದೆ. ತಲೆಯ ಮೇಲೆ ತಲೆಕಟ್ಟಿದೆ. ಪ ಕಾರದ ಕೆಳ ಗೆರೆಯು ಹೆಚ್ಚಿಗೆ ಒಳ ಬಾಗಿದೆ.

ತಲೆಕಟ್ಟು ಅಕ್ಷರದ ಗೆರೆಗೆ ಮಧ್ಯೆ ಇದೆ. ಫ ಕಾರವು ಹಿಂದಿನ ಅಕ್ಷರದಂತೆಯೇ ಇದೆ. ಬ ಕಾರವು ಮೇಲೆ, ಕೆಳಗೆ ಮತ್ತು ಎಡಗಡೆಗೆ ಒಳಮುಖವಾಗಿ ಬಾಗಿದೆ. ಭ ಕಾರವು ನ ಕಾರದಂತೆ ಇದ್ದರೂ ಇಲ್ಲಿ ಬಲಗಡೆಯ ಗೆರೆಯ ಕೆಳಭಾಗವು ಒಳಕ್ಕೆ ಬಾಗಿದೆ. ತಲೆಕಟ್ಟು ಗೆರೆ ಚಿಕ್ಕದಾಗಿದೆ. ಮ ಕಾರದ ಹಿಂದಿನ ತಲೆಕಟ್ಟಿನ ಗೆರೆಗಳು ಒಂದೆ ಸಮನಾಗಿವೆ. ಇದಲ್ಲದೆ ಎರಡೂ ಗೆರೆಗಳ ಮೇಲೆ ತಲೆಕಟ್ಟುಗಳು ಇವೆ. ಅವರ್ಗೀಯ ವ್ಯಂಜನಗಳಲ್ಲಿ ಯ ಕಾರವು ಈ ಕಾಲದಿಂದಲೇ ಸ್ಥಿರತೆಯನ್ನು ಪಡೆಯುತ್ತಾ ಬಂದಿದೆ. ಯ ಕಾರದ ಮುಂದಿನ ವೃತ್ತ ಮಾತ್ರ ಚಿಕ್ಕದಾಗಿದೆ. ರ ಕಾರವು ಇನ್ನೂ ಕ ಕಾರದಂತೆ ಉದ್ದವಾಗಿದೆ. ವ ಕಾರವು ಚ ಕಾರದಂತಿದ್ದು ಅದರ ಗಾತ್ರ ಚಿಕ್ಕದಾಗಿದೆ. ತಲೆಕಟ್ಟು ಗೆರೆ ಉದ್ದವಾಗಿದೆ. ಲ ಕಾರವು ಹಳೆಯ ರೂಪದಲ್ಲಿಯೇ ಇದೆ. ಆದರೆ ಮೇಲ್ಮುಖವಾದ ಗೆರೆ ಎಡಗಡೆಗೆ ಬಾಗಿ ಅಕ್ಷರದ ಕೆಳಮಟ್ಟದವರೆಗೆ ಬಂದಿದೆ. ಶ ಕಾರವು ಹಿಂದಿನ ಶಾಸನಗಳಿಗಿಂತ ಹೆಚ್ಚಿನ ಬೆಳವಣಿಗೆಯನ್ನು ಪಡೆದಿದೆ. ಎಡಗಡೆ ಗೆರೆಯ ತುದಿಯು ಒಳಕ್ಕೆ ಬಾಗಿ ಒಳಗಿನ ಅಡ್ಡಗೆರೆಗೆ ಸೇರಿಕೊಂಡಿದೆ. ಷ ಕಾರವು ಪ ಕಾರದ ಬೆಳವಣಿಗೆಯನ್ನು ಅನುಸರಿಸಿದೆ. ಮಧ್ಯೆ ಗೆರೆಯು ಎರಡೂ ಕಡೆಗಳನ್ನು ಸೇರಿಸಿದೆ. ಹ ಕಾರವೂ ಸಹ ಪ ಕಾರದ ಬೆಳವಣಿಗೆಯನ್ನು ಅನುಸರಿಸಿದ್ದರೂ ಅದರ ಬಲ ಪಕ್ಕದಲ್ಲಿ ಕೆಳ ಬಾಗಿದ ಗೆರೆಯು ಅಕ್ಷರದ ಕೆಳಕ್ಕೆ ಬಾಗಿ ಎಡಗಡೆಗೆ ತಿರುಗಿದೆ. ಳ ಕಾರವು ಡ ಕಾರದಂತೆ ಇದ್ದು ಅದರ ಕೆಳ ತುದಿಯ ಗೆರೆಯು ಎರಡು ಸೀಳಾಗಿದೆ. ಐ ಕಾರವು ದುರ್ವಿನೀತನ ಆರಂಭದ ಕಾಲದ ಶಾಸನವಾದ ಪೆಣ್ಣಾವೂರ ಶಾಸನದಲ್ಲಿ ಅಡ್ಡಡ್ಡವಾಗಿದ್ದು ಒಳಗೆ ಅದನ್ನು ಛೇದಿಸುವ ಛೇದಕ ಗೆರೆಗಳಿವೆ. ಮುಂದೆ ಇದೇ ಅರಸನ ಕಾಲದ ಇತರೆ ಶಾಸನಗಳಲ್ಲಿ ಇದು ಉದ್ದದ ಛೇದಕ ಗೆರೆಯನ್ನು ಅನುಸರಿಸಿ ಅಕ್ಷರವು ಒಳಮುಖವಾಗಿ ಬಾಗಿದೆ. ಱ ದ ಪ್ರಯೋಗಗಳು ಈ ಶಾಸನಗಳಲ್ಲಿ ದೊರೆಯುವುದಿಲ್ಲ. ದುರ್ವಿನೀತ (ನಿರ್ವಿನೀತ)ನ ಕಾಲದ ಶಿಲಾಶಾಸನವೊಂದು ಚಿಕ್ಕಮಗಳೂರು ಜಿಲ್ಲೆಯ ಶಿರಗುಂಡದಲ್ಲಿ ದೊರೆತಿದೆ. ಮುಂದೆ ಶ್ರೀವಿಕ್ರಮನ ಕಾಲದಲ್ಲಿ ದೊರೆತ ಕಲ್ಲೂರಿನ ಶಿಲಾಶಾಸನದಲ್ಲಿನ ಅಕ್ಷರಗಳು ದುರ್ವಿನೀತನ ತಾಮ್ರಶಾಸನಗಳ ಪ್ರತಿರೂಪವೇ ಆಗಿವೆ. ಅಕ್ಷರಗಳ ತಲೆಕಟ್ಟುಗಳು ಸ್ಪಷ್ಟವಾಗಿವೆ. ಕ ಕಾರದ ತಲೆಕಟ್ಟಿನ ಕೆಳಗಿನ ಗೆರೆ ನೇರವಾಗಿರುವ ಬದಲು ಬಲದಿಂದ ಎಡಕ್ಕೆ ಬಾಗಿದೆ. ಕನ್ನಡ ಭಾಷೆಯ ಶಾಸನವಾದ್ದರಿಂದ ಱ ದ ಪ್ರಯೋಗ ಬಂದಿದೆ. ಎರಡು ವೃತ್ತಗಳ ಸೇರುವಿಕೆಯಿಂದ ಈ ಅಕ್ಷರವಾಗಿದೆ. ಅ ಕಾರದ ಮಧ್ಯದ ಗೆರೆಯು ತಲೆಕಟ್ಟು ಗೆರೆಯನ್ನು ಕಳೆದುಕೊಂಡಿದೆ.

ಮುಂದೆ ರಾಜ್ಯವಾಳಿದ ಮುಷ್ಕರನ ಕಿರುಮೊರೆಕೋಳಿ ಶಾಸನದಲ್ಲಿ ಈ ಲಿಪಿಗಳ ಮುಂದುವರಿಕೆಯನ್ನು ಕಾಣಬಹುದಾಗಿದೆ. ಅಕ್ಷರಗಳ ಉದ್ದ ಈ ಶಾಸನದಲ್ಲಿ ಸ್ವಲ್ಪ ಕಡಿಮೆ ಇದೆ.

ಗಂಗರ ಲಿಪಿಯ ಮುಂದುವರಿಕೆಯನ್ನು ಒಂದನೆಯ ಶಿವಮಾರನ ಮತ್ತು ಈ ವಂಶದಲ್ಲಿ ಪ್ರಸಿದ್ಧನಾದ ಹಾಗೂ ಪರಾಕ್ರಮಿಯಾದ ಶ್ರೀಪುರುಷನ ಶಾಸನಗಳಿಂದ ಕಾಣಬಹುದು. ಅಲ್ಲದೆ ಇಲ್ಲಿಂದ ಮುಂದೆ ಬಹುತೇಕ ತಾಮ್ರಶಾಸನಗಳು ದೀರ್ಘವಾದ ಪಾಠಗಳನ್ನೊಳಗೊಂಡಿವೆ.

ಶಿವಮಾರನ ಹಳ್ಳಗೆರೆ ಶಾಸನದ ಲಿಪಿಗಳು ದುರ್ವಿನೀತನ ಶಾಸನದ ಲಿಪಿಗಳ ಮುಂದುವರಿಕೆಯಾಗಿವೆ. ಆದರೆ ಶಿಲಾಶಾಸನಗಳ ಅಕ್ಷರಗಳು ಕಾಗುಣಿತ ಮುಂತಾದವುಗಳಲ್ಲಿ ಸ್ವಲ್ಪ ಭಿನ್ನತೆಯನ್ನು ತೋರಿಸುತ್ತದೆ. ಇದಕ್ಕೆ ಕಾರಣ ಅಕ್ಷರ ಕಲಿತ ಕಲಾಕಾರನಾದ




IWG - 158 ಕಿರುಮೊರ ಕೋಳಿ ಶಾಸನ ವೇ.ಕೊಂ.ರೆಡ್ಡಿ


ವಿಶ್ವಕರ್ಮಾಚಾರ್ಯನು ತಾಮ್ರಶಾಸನಗಳನ್ನು ಕೆತ್ತಿದ್ದರೆ, ಶಿಲಾಶಾಸನಗಳನ್ನು ಸಾಮಾನ್ಯರು ಕೆತ್ತಿರುವುದು. ಒಂದನೆಯ ಶಿವಮಾರನ ಶಾಸನದಲ್ಲಿ ಅ ಕಾರವು ತನ್ನ ಉದ್ದವನ್ನು ಕಡಿಮೆ ಮಾಡಿಕೊಂಡು ಅಗಲವಾಗಿದೆ. ಆ ಕಾರವನ್ನು ತೋರಿಸಲು ಅ ಕಾರಕ್ಕೆ ಬಲಗಡೆ ಮೇಲಿನ ಗೆರೆಯಿಂದ ಕೆಳಮುಖವಾಗಿ ಬಾಗಿದ ಗೆರೆಯೊಂದನ್ನು ಬಿಡಿಸಿವೆ.

ಕ ಮತ್ತು ರ ಕಾರವು ಮೊದಲ ಉದ್ದಕ್ಕಿಂತ ಚಿಕ್ಕದಾಗಿದ್ದು ಕ ಕ್ಕೆ ರ ಒತ್ತಕ್ಷರ ನೀಡುವಾಗ ಮೊದಲು ಒಂದೇ ಗೆರೆಯನ್ನೇ ಅರ್ಧಚಂದ್ರಾಕಾರವಾಗಿ ಬರೆಯುತ್ತಿದ್ದರು. ಈ ಕಾಲಕ್ಕೆ ಕ ವನ್ನು ಪೂರ್ಣವಾಗಿ ಬರೆದು ಅನಂತರ ರ ಒತ್ತಕ್ಷರವನ್ನು ನೀಡಿರುತ್ತಾರೆ. ರ ಕಾರದ ಒತ್ತಕ್ಷರವು ಅ ಕಾರದ ಗೆರೆಯಂತೆ ಮೂಲ ಅಕ್ಷರದ ನೆತ್ತಿಯವರಿಗೂ ಬೆಳೆದಿದೆ. ಒತ್ತಕ್ಷರಗಳು ಚಿಕ್ಕದಾಗಿವೆ. ತಲೆಯ ಮೇಲೆ ಇದ್ದ ಇ ಕಾರವು ಚಿಕ್ಕದಾಗಿದೆ. ಖ ಕಾರದ ಕಾಗುಣಿತವು ಅಕ್ಷರದ ಕೆಳಭಾಗಕ್ಕೆ ಅರೆವೃತ್ತಾಕಾರವಾಗಿ ಬಂದಿದೆ. ಶ್ರೀಪುರುಷನ ತಲಕಾಡು ಶಿಲಾಶಾಸನದಲ್ಲಿ ತಲೆಕಟ್ಟುಗಳು ನಿಶ್ಚಿತವಾಗಿವೆ. ಗ ಕಾರದ ಮೇಲೂ ತಲೆಯ ಎರಡೂ ಕಡೆ ಚಿಕ್ಕದಾಗಿ ತಲೆಕಟ್ಟು ಕಾಣಿಸಿಕೊಂಡಿದೆ. ಕಾಗುಣಿತ ಚಿಹ್ನೆಗಳು ಹಿಂದಿನ ಶಾಸನಗಳಂತೆ ಉದ್ದವಾಗಿರದೆ ಚಿಕ್ಕದಾಗಿವೆ. ಏ ಕಾರದ ಗುಣಿತವನ್ನು ಜ, ಟ ಮುಂತಾದ ಅಕ್ಷರಗಳಿಗೆ ಅಕ್ಷರದ ಎಡಭಾಗದ ಕೆಳಭಾಗದಲ್ಲಿ ನೀಡಲಾಗಿದೆ.

ಶ್ರೀಪುರುಷನ ಅಂತ್ಯಕಾಲಕ್ಕೆ (ಕ್ರಿ.ಶ.ಸು.೭೭೦) ಬಹುಶಃ ಲಿಪಿಯು ಅತಿ ಬಳಕೆಯ ಕಾರಣದಿಂದ ಬದಲಾವಣೆಗಳು ಕಾಣಿಸಿಕೊಂಡಿವೆ. ಶಾಸನದಲ್ಲಿ ಬರೆಯಬೇಕಾದ ವಿವರಗಳು ಹೆಚ್ಚಿಗೆ ಇದ್ದದ್ದರಿಂದ ಅಕ್ಷರಗಳನ್ನು ಚಿಕ್ಕದಾಗಿ ಬರೆಯಲಾಗಿದೆ. ಹೀಗಾಗಿ ಅಕ್ಷರಗಳು ಸಾಲುಗಳಿಗೆ ಸಮಾನಾಂತರವಾಗಲು ಪ್ರಯತ್ನಿಸಿವೆ. ಅಕ್ಷರಗಳು ಉದ್ದವಾಗುವ ಬದಲಾಗಿ ಬಹಳ ಕಡೆ ಅಗಲವಾಗಿದೆ. ಕೆಳಗೆ ನೀಡುವ ಉ ಕಾರದ ಕಾಗುಣಿತವು ಚಿಕ್ಕದಾಗಿವೆ. ಖ ಕಾರವು ಮೇಲಿನ ಅರೆವೃತ್ತಾಕಾರದಿಂದ ಕೆಳಕ್ಕೆ ಬಂದ ಗೆರೆ ಬಲಕ್ಕೆ ತಿರುಗಿ ಅದಕ್ಕೆ ಸಮಾನಾಂತರವಾಗಿ ವಾಪಸ್ಸಾಗಿ ಮೇಲಕ್ಕೆ ಬಂದಿದೆ. ಮೊದಲಿದ್ದ ಸೊನ್ನೆ ಕಾಣುತ್ತಿಲ್ಲ. ಒಂದು ಶಾಸನದಲ್ಲಿ ಈಗಿನ ವರ್ಣಮಾಲೆಯ ಖ ಅಕ್ಷರವನ್ನು ಹೋಲುವಂತೆ ಇದೆ. ಘ ಕಾರದಲ್ಲಿ ಕೊನೆಯ ಗೆರೆಯು ಸ್ವಲ್ಪ ಬಾಗಿ ಮೇಲಕ್ಕೆ ಬಂದಿದೆ. ಜ ಕಾರದಲ್ಲಿ ಸ್ವಲ್ಪ ಬೆಳವಣಿಗೆ ಇದೆ. ಅದೆಂದರೆ ಜ ಕಾರದ ಮಧ್ಯದ ಗೆರೆಯಲ್ಲಿ ಆರಂಭದಲ್ಲಿ ಒಂದು ಚುಕ್ಕೆಯನ್ನು ಇಡಲಾಗಿದೆ. ಈ ಚುಕ್ಕೆ ಸ್ವಲ್ಪ ಉದ್ದವಾಗಿದೆ. ಣ ಕಾರದ ತಳಗಡೆಯ ಭಾಗ ಬದಲಾಗಿಲ್ಲ. ಆದರೆ ಎಡಕ್ಕೆ ಬಾಗಿದ ಗೆರೆಯ ತಳಗಡೆ ಬಾಗಿದ ಗೆರೆಗೆ




ಹಲ್ಮಿಡಿ ಶಾಸನ




ನಾಗಮಂಗಲ

ದೇ.ಕೊಂ.ಶ್ರೀ

ಅಂಟಿಕೊಂಡಿದೆ. ಇದೇ ಅರಸನ ಇನ್ನೊಂದು ಶಾಸನದಲ್ಲಿ ಕೆಳಗಿನ ಬಾಗುವಿಕೆಯು ಮಧ್ಯದ ಉದ್ದವಾದ ದಂಡದಿಂದ ಬೇರ್ಪಟ್ಟಿದೆ. ತ ಕಾರದ ಉದ್ದದ ದಂಡವು ಚಿಕ್ಕದಾಗಿದ್ದು ಅದರ ಕೆಳಭಾಗ ಅರೆವೃತ್ತಾಕಾರವಾಗಿದೆ. ಧ ಕಾರವು ಈಗಿನ ಹೊಕ್ಕುಳಿಲ್ಲದ ದ ಕಾರದ ಒತ್ತಕ್ಷರದಂತೆ ಇದೆ. ನ ಕಾರದ ಬಲಗಡೆಯ ದಂಡವು ಕಾಣುವುದಿಲ್ಲ, ಅದಕ್ಕೆ ಬದಲಾಗಿ ತಳಗಡೆಯ ಅರ್ಧ ಚಂದ್ರಾಕಾರದ ಭಾಗ ಅದರಿಂದ ಮೇಲೆ ಹೊರಟ ತಲೆಕಟ್ಟು ಗೆರೆ ಇದೆ. ಪ, ಫ, ಷ, ಹ ಇವುಗಳ ಬೆಳವಣಿಗೆ ಒಂದೇ ತೆರನಾಗಿವೆ. ತಲೆಕಟ್ಟಿನ ಕೆಳಗಿದ್ದ ಗೆರೆಯು ಚಿಕ್ಕದಾಗಿದೆ. ತಲೆಕಟ್ಟು ಮೇಲೆ ಹೇಳಿದ ಅಕ್ಷರದ ಮೂಲಭಾಗಕ್ಕೆ ಹತ್ತಿರವಾಗಿದೆ. ಬ ಕಾರವು ಮುಂಭಾಗದಲ್ಲಿ ಸ್ವಲ್ಪ ಬಾಯಿ ಬಿಡುತ್ತಿರುವ, ಬಿಟ್ಟಿರುವ ಸೂಚನೆಗಳಿವೆ. ಲ ಕಾರವು ಈ ಕಾಲಕ್ಕೆ ಹೆಚ್ಚಿನ ಬದಲಾವಣೆ ಹೊಂದಿದೆ. ತನ್ನ ಹಿಂದಿನ ಬಳುಕುವ ಸೌಂದರ್ಯ್ಯವನ್ನು ಕಳೆದುಕೊಂಡು ವೃತ್ತಾಕಾರಕ್ಕೆ ತಿರುಗುತ್ತಿದೆ. ಮೂಲ ಅಕ್ಷರಕ್ಕಿಂತ ಬಾಲವೇ ಪ್ರಧಾನವಾಯಿತು. ಮೂಲರೂಪದ ಲ ಅಕ್ಷರವು ಒತ್ತಿದಂತಾಗಿ ಹೊರ ಬಂದಿದ್ದ ವೃತ್ತಾಕಾರದ ಬಾಲದ ಮಧ್ಯೆ ಗೌಣವಾಗಿದೆ.







IWG 48 ಶ್ರೀಪುರುಷನ ಹೊಸೂರು ಶಾಸನ ದೇ.ಕೊ. ರೆಡ್ಡಿ

ಮುಂದೆ ಶ್ರೀಪುರುಷನ ಮಗ ಇಮ್ಮಡಿ ಶಿವಮಾರನ ಶಾಸನದಲ್ಲಿ ಹೆಚ್ಚಿನ ಬದಲಾವಣೆಗಳಿಲ್ಲದಿದ್ದರೂ ಕೆಲವು ಅಕ್ಷರಗಳು ಬದಲಾಗಿವೆ. ತಲೆಕಟ್ಟುಗಳು ಪ್ರಧಾನವಾಗಿವೆ ಮತ್ತು ಕಡ್ಡಾಯವಾಗಿವೆ. ಹಿಂದಿನ ಶಾಸನಗಳಿಗಿಂತ ಉದ್ದವಾಗಿವೆ. ತ, ನ ಗಳು ಇಂದಿನ ರೂಪಕ್ಕೆ ಸಮೀಪವಾಗಿವೆ. ಅಕ್ಷರಗಳಿಗೂ ತಲೆಕಟ್ಟಿಗೂ ಮಧ್ಯೆ ಇದ್ದ ಸಣ್ಣ ಗೆರೆ ಈ ಕಾಲಕ್ಕೆ ಇನ್ನು ಗೌಣವಾಗಿದೆ. ಹೀಗಾಗಿ ಅಕ್ಷರಗಳ ಉದ್ದವೂ ಕಡಿಮೆಯಾಗಿ ಅಗಲವಾಗಿವೆ. ಲ ಕಾರದ ಬಾಲವು ಪೂರ್ಣವಾಗಿ ಒಂದು ಸುತ್ತು ಬಂದಿದೆ. ಶಿವಮಾರನ ನಂತರ ಆಳಿದ ಯುವರಾಜ ಮಾರಸಿಂಹನ ಶಾಸನಗಳು ಗಂಗರ ಸ್ವತಂತ್ರ ಆಳ್ವಿಕೆಯ ಶಾಸನಗಳಲ್ಲಿ ಕೊನೆಯವು. ಮುಂದೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಗಂಗರು ರಾಷ್ಟ್ರಕೂಟರ ಪ್ರಭಾವಕ್ಕೆ ಒಳಗಾಗಿದ್ದುದಲ್ಲದೆ, ಮಾಂಡಳೀಕರೂ ಆಗುತ್ತಾರೆ.

ಗಂಗರ ಶಾಸನ ಲಿಪಿ ಪಟ್ಟಿಕೆ






ದೇ.ಕೊಂ.ರೆಡ್ಡಿ

ಹೀಗಾಗಿ ಶಿವಮಾರನ ಕಾಲದಲ್ಲೇ ಯುವರಾಜನಾಗಿ ಆಳಿದ ಮಾರಸಿಂಹನ ಶಾಸನದಲ್ಲಿ ಅ ಕಾರವು ಪೂರ್ಣವಾಗಿ ಒಂದು ವೃತ್ತಾಕಾರವಾಗಿ ಬಂದಿದೆ. ಕೆಳಗೆ ಬೆಳೆದ ಗೆರೆ ಎಡಕ್ಕೆ ತಿರುಗಿ ಮೇಲಕ್ಕೆ ಬೆಳೆದು ಅಕ್ಷರದ ಮೇಲಿನ ಭಾಗವನ್ನು ಸೇರಿಕೊಂಡಿದೆ. ಇಲ್ಲಿಯೂ ಲ ಕಾರದಂತೆ ಅ ಕಾರದ ಸುತ್ತು ಗೆರೆ ಪ್ರಧಾನವಾಯಿತು. ಒಳಗಿನ ರೇಖೆಗಳು ಗೌಣವಾದವು. ಆ ಎಂಬುದಕ್ಕೆ ಅ ಕಾರದ ಬಲಗಡೆ ಸಣ್ಣ ಕೊಕ್ಕೆಯನ್ನು ಸೇರಿಸಿದೆ. ಈ ಕಾಲದಲ್ಲಿ ರ ಕಾರದ ಒತ್ತಕ್ಷರವನ್ನುಳ್ಳ ಅಕ್ಷರಗಳೆಲ್ಲಾ ಅ ಕಾರದ ಬರವಣಿಗೆಯಂತೆ ಗೆರೆ ಮೇಲೆ ಬಂದಿದೆ. ಕ ಮತ್ತು ರ ಕಾರಗಳು ಅಗಲವಾಗುವ ಸೂಚನೆಯನ್ನು ನೀಡಿವೆ. ಟ ಮತ್ತು ಡ ಕಾರಕ್ಕೆ ವ್ಯತ್ಯಾಸವಿಲ್ಲ. ಶಿವಮಾರನ ತಾಮ್ರಶಾಸನದ ಅಕ್ಷರಗಳು ವಿಜಯಾಪುರ ಶಿಲಾಶಾಸನದಲ್ಲಿಯೂ ಕಾಣಿಸಿಕೊಂಡಿವೆ. ಎ ಕಾರದ ಗುಣಿತವು ಅಕ್ಷರದ ಕೆಳಗಿನವರೆಗೂ ಬಂದಿವೆ. ಲ ಕಾರವು ತಾಮ್ರಶಾಸನಗಳಲ್ಲಿರುವಂತೆಯೇ ಇದೆ. ಆದರೆ ಇವು ಹೆಚ್ಚಿನ ಪ್ರಗತಿ ತೋರಿಸಿಲ್ಲ. ವಳ್ಳಿಮಲೈನ ಒಂದನೆಯ ರಾಚಮಲ್ಲನ ಶಾಸನದಲ್ಲಿನ ಕ ಮತ್ತು ರ ಕಾರಗಳು ಕನ್ನಡ ಅಕ್ಷರಗಳಂತೆಯೇ ಇವೆ.

ಬಾದಾಮಿ ಚಲುಕ್ಯರ ಲಿಪಿ

ಬಾದಾಮಿಯನ್ನು ರಾಜಧಾನಿಯನ್ನಾಗಿ ಆಳಿದ ಚಲುಕ್ಯರು ಕ್ರಿ.ಶ.ಸು.೫೩೦ರಲ್ಲಿ ಬನವಾಸಿಯ ಕದಂಬರನ್ನು ಮೂಲೆಗೆ ತಳ್ಳಿ ರಾಜ್ಯಭಾರಕ್ಕೆ ಬಂದರು. ಮುಂದೆ ಕರ್ನಾಟಕವನ್ನು ಹಾಗೂ ಆಂಧ್ರದ ಬಹುಭಾಗವನ್ನು ಪಲ್ಲವರ ಪ್ರಭಾವದಿಂದ ತಪ್ಪಿಸಿ ಸ್ಥಿರರಾಜ್ಯವನ್ನು ಸ್ಥಾಪಿಸಿದರು. ಉತ್ತರದಲ್ಲಿ ನರ್ಮದಾನದಿ, ದಕ್ಷಿಣದಲ್ಲಿ ಕಾವೇರಿಯನ್ನು ಗಡಿಯನ್ನಾಗಿ ಹೊಂದಿದ್ದರು. ಕ್ರಿ.ಶ.ಸುಮಾರು ೫೩೦ರಿಂದ ಕ್ರಿ.ಶ.೭೫೦ವರೆಗೆ ಇವರು ರಾಜ್ಯಭಾರ ಮಾಡಿದರು.

ಇವರ ಮೊದಲ ಶಾಸನ ಬಾದಾಮಿಯಲ್ಲಿ ದೊರೆತಿರುವ ಚಲ್ಕ್ಯವಲ್ಲಭೇಶ್ವರನದಾಗಿದೆ. ಇತ್ತೀಚಿಗೆ ಇದರ ಮೂಲ ಶಾಸನಪ್ರತಿಯನ್ನು ಡಾ। ಕೆ.ವಿ. ರಮೇಶ್ ಅವರ ಗುರುತಿಸಿದ್ದು ಪಲ್ಲವರು ವಾತಾಪಿಯ ಮೇಲೆ ಮಾಡಿದ ಧಾಳಿಯಲ್ಲಿ ಶಾಸನದ ಬಹುಭಾಗವನ್ನು ನಾಶ ಮಾಡಿ ಆ ಜಾಗದಲ್ಲಿ ಪಲ್ಲವ ನರಸಿಂಹವರ್ಮನು ತನ್ನ ಶಾಸನವನ್ನು ಬರೆಸಿರುವುದನ್ನು ಗುರುತಿಸಿದ್ದಾರೆ. ಪಲ್ಲವ ನರಸಿಂಹವರ್ಮನ ಶಾಸನದ ಬಳಿ ಇರುವ ಶಾಸನದ ಅಕ್ಷರಗಳ ಮೇಲೆ ಕದಂಬರ ಶಾಸನ ಲಿಪಿಗಳ ಛಾಯೆ ಕಂಡುಬರುತ್ತದೆ. ಅಕ್ಷರಗಳ ತಲೆಗಳ ಮೇಲೆ ಪೆಟ್ಟಿಗೆಯಂತ ತಲೆಕಟ್ಟುಗಳು ಕಾಣಬರುತ್ತವೆ. ಅಲ್ಲದೆ ಅಕ್ಷರಗಳು ನೀಳವಾಗಿರುತ್ತವೆ. ಅದೇ ಪಾಠದ ಇನ್ನೊಂದು ಶಾಸನದಲ್ಲಿನ ಅಕ್ಷರಗಳಲ್ಲಿ ಅ, ಕ, ರ ಗಳು ನೀಳವಾಗಿದ್ದರೂ ಉಳಿದ ಅಕ್ಷರಗಳಿಗೆ ಹೋಲಿಸಿದಾಗ ಇವುಗಳ ಉದ್ದ ಕಡಿಮೆ. ಎಲ್ಲ ಅಕ್ಷರಗಳೂ ಸಾಕಷ್ಟು ನೀಳವಾಗಿರುವುದರ ಜೊತೆಗೆ ಸ್ವಲ್ಪ ಅಗಲವಾಗಿಯೂ ಇರುವುದು ಕಾಣಬರುತ್ತದೆ. ಕ ಕಾರದ ಕೆಳಗೆರೆ ಎಡಕ್ಕೆ ಬಾಗಿ ಮೇಲ್ಮುಖವಾಗಿ ಅಕ್ಷರದ ಅರ್ಧದಷ್ಟು ಬೆಳೆದಿದೆ. ರ ಕಾರವೂ ಅಷ್ಟೆ. ಸ್ವಲ್ಪ ವ್ಯತ್ಯಾಸವಿರುವುದು ಅ ಕಾರದಲ್ಲಿ ಈ ಅಕ್ಷರದ ಮೂಲಭಾಗ ಚಿಕ್ಕದಿದ್ದು ಕೆಳಕ್ಕೆ ಬೆಳೆದ ಗೆರೆಯು ಎಡಕ್ಕೆ ತಿರುಗಿ ಮೇಲಕ್ಕೆ ತಿರುಗಿದೆ. ತಿರುಗಿರುವ ಈ ಗೆರೆ ಅಗಲವಾಗಿದೆ. ಕ ಕಾರ ರ ಕಾರಗಳಂತೆ ಚಿಕ್ಕದಾಗಿಲ್ಲ. ಅಕ್ಷರದ ತಳಭಾಗಗಳು ಅಕ್ಷರದ ಒಳಮುಖಕ್ಕೆ ಬಾಗಿವೆ. ತಲೆಗಳ ಮೇಲೆ ತಲೆಕಟ್ಟಿನ ಗೆರೆಗಳು ಎದ್ದು ಕಾಣುತ್ತವೆ. ಈ ತಲೆಕಟ್ಟುಗಳು ಅಕ್ಷರದ ಗೆರೆಯ ಎರಡೂ ಕಡೆಗೆ ಸಮತೋಲನವಾಗಿ ಬಂದಿದೆ. ಗ ಕಾರದ




KI Vol II

ಒಂದನೆಯ ಪುಲಕೇಶಿಯ ಬಾದಾಮಿ ಶಾಸನ ಪಾಠ ದೇ.ಕೊಂ.ರೆಡ್ಡಿ

ಎಡಗೆರೆಯು ಒಳಮುಖಕ್ಕೆ ಬಾಗಿದೆ. ಚ ಮತ್ತು ವ ಗಳಲ್ಲಿನ ವ್ಯತ್ಯಾಸ ಕಡಿಮೆ. ತ ಕಾರದ ಬಲಗೆರೆಯು ಕೆಳಕ್ಕೆ ಬೆಳೆದು ಎಡಕ್ಕೆ ತಿರುಗಿದೆ. ಎಡಗಡೆಯ ಗೆರೆ ಅಡ್ಡಡ್ಡವಾಗಿದೆ. ನ ಕಾರದ ಕೆಳಭಾಗ ಚಿಕ್ಕದಾಗಿದೆ. ಧ ಕಾರವು ಈಗಿನ ರೂಪಕ್ಕೆ ತಿರುಗುತ್ತಿದೆ. ದ ಕಾರ ಮಾತ್ರ ಕದಂಬರ ಕಾಲದ ಅಕ್ಷರವೇ ಮುಂದುವರಿದಿದೆ. ಪ ಕಾರವು ಬಲಗಡೆ ಗೆರೆ ಕೆಳಕ್ಕೆ ಇಳಿದು ಎಡಕ್ಕೆ ತಿರುಗಿ ಮತ್ತೆ ಬಲಕ್ಕೆ ಬಾಗಿದೆ. ಬಲಗಡೆ ಗೆರೆ ಮೇಲೆ ಮಾತ್ರ ತಲೆಕಟ್ಟಿದೆ. ಇದನ್ನು ಅನುಸರಿಸಿ ಷ, ಹ ಗಳು ಬೆಳೆದಿವೆ. ಮ ಕಾರದ ಮೇಲಿನ ಗೆರೆಗಳಲ್ಲಿ ಎಡಗಡೆಯ ಗೆರೆಯ ಮೇಲೆ ತಲೆಕಟ್ಟಿದೆ. ಬಲಗಡೆ ಗೆರೆ ತಳಭಾಗ ಡೊಂಕಾಗಿ ಮೇಲಕ್ಕೆ ಸಾಗಿದೆ. ಯ ಕಾರದ ಬಲ ಮತ್ತು ಮಧ್ಯದ ಗೆರೆಗಳು ಸಮನಾಗಿ ಬೆಳೆದಿದ್ದು ಎಡಗಡೆಯ ಗೆರೆಯು ಮೇಲಕ್ಕೆ ತಿರುಗಿ ಅಕ್ಷರದ ಒಳಮುಖಕ್ಕೆ ಬಾಗಿದೆ. ಲ ಕಾರದ ಬಲಗೆರೆ ಮೇಲೆಕ್ಕೆ ಬೆಳೆದು ಅರೆವೃತ್ತಾಕಾರವನ್ನುಂಟು ಮಾಡಿ ಅಕ್ಷರದ ತಲೆಭಾಗಕ್ಕೆ ಬಾಗಿದೆ. ಶ ಕಾರವು ಗ ಕಾರದ ಬೆಳವಣಿಗೆಯನ್ನು ಅನುಸರಿಸಿದೆ. ಸಕಾರದ ಎರಡೂ ಗೆರೆಗಳು ಸಮನಾಗಿ ಎಡಗೆರೆಯ ತಲೆಯ ಮೇಲೆ ತಲೆಕಟ್ಟು ಬಂದಿದೆ. ಳ ಕಾರದ ಪ್ರಯೋಗ ಈ ಶಾಸನದಲ್ಲಿಲ್ಲ.

ಗುಣಿತದಲ್ಲಿ ಆ ಕಾರದ ದೀರ್ಘವು ಅಕ್ಷರದ ಬಲಗಡೆಗೆ ಸ್ವಲ್ಪ ಮಾತ್ರ ಬೆಳೆದು ಕೆಳಕ್ಕೆ ಇಳಿದಿದೆ. ಇ ಕಾರದ ಗುಡಿಸು ಅಕ್ಷರಗಳ ತಲೆಯ ಮೇಲೆ ವೃತ್ತಾಕಾರವನ್ನು ಸೃಷ್ಟಿಸಿವೆ. ಈ ಕಾರವು ವೃತ್ತಾಕಾರದೊಳಗೆ ಒಂದು ಸುರುಳಿ ಸುತ್ತಿದೆ. ಉ ಕಾರವು ಹಿಂದಿನ ನಿಯಮಗಳಂತೆ ಊ ಕಾರದ ಗುಣಿತಕ್ಕೆ ಹೆಚ್ಚುವರಿ ಬಾಗುಗೆರೆಯಾಗಿ ಬಂದಿದೆ. ಏ ಕಾರದ ಗುಣಿತವು ಅಕ್ಷರಗಳ ತಲೆಯ ಎಡಭಾಗಕ್ಕೆ ಬೆಳೆದು ಕೆಳಕ್ಕೆ ಬಾಗಿದೆ. ಓ ಕಾರದ ಗುಣಿತವು ಅಕ್ಷರದ ತಲೆಕಟ್ಟಿನ

ಎರಡೂ ಕಡೆಗೆ ಆ ಕಾರ, ಏ ಕಾರದ ಗುಣಿತ ನೀಡುವ ಮೂಲಕ ತೋರಿಸಲಾಗಿದೆ. ಔ ಕಾರದ ಕಾಗುಣಿತವು ಏ ಕಾರ ಮತ್ತು ಓ ಕಾರದ ತಲೆಕಟ್ಟು ನೀಡುವಾಗ ಓ ಕಾರದ ತಲೆಕಟ್ಟನ್ನು ಮೇಲಕ್ಕೆ ಎತ್ತಿ ಕೆಳಕ್ಕೆ ಬಾಗಿಸಿರುತ್ತಾರೆ. ಅರ್ಕಾವೊತ್ತನ್ನು ಅಕ್ಷರಗಳ ತಲೆಯ ಮೇಲೆ ನೇರವಾದ ಗೆರೆ ಎಳೆಯುವ ಮೂಲಕ ತೋರಿಸಿದೆ. ಒತ್ತಕ್ಷರಗಳು ಮೂಲ ಅಕ್ಷರಕ್ಕೆ ಅಂಟಿಕೊಂಡೇ ಇವೆ ಹಾಗೂ ಮೂಲ ಅಕ್ಷರಗಳ ರೀತಿಯಲ್ಲಿಯೇ ಇವೆ. ಅಕ್ಷರಗಳ ಸಾಲುಗಳ ಮಧ್ಯೆ ನೇರ ಗೆರೆಯ ಮೇಲೆ ತಲೆಕಟ್ಟಿಲ್ಲದೆ ಚಿಕ್ಕದಾಗಿ ಬಿಡಿಸಿದಲ್ಲಿ ಅದು ಸ್ವರರಹಿತ ವ್ಯಂಜನವಾಗಿ ಉಚ್ಚಾರವಾಗುತ್ತಿತ್ತು.




ಗೊಡಚಿ ತಾಂಮ್ರ ಶಾಸನ ದೇ.ಕೊಂ.ರೆಡ್ಡಿ

EI XXVIII. p. 62

ಇದರ ನಂತರ ಕತ್ತಿ ಅರಸನ ಗೊಡಚಿ ತಾಮ್ರಶಾಸನದಲ್ಲಿ ಅ, ಕ, ರ ಗಳು ಹೆಚ್ಚಿನ ಬೆಳವಣಿಗೆಯನ್ನು ತೋರಿಸಿದ್ದು, ಅವುಗಳ ಪ್ರಮುಖ ಬೆಳವಣಿಗೆ ಎಂದರೆ ಉದ್ದ ಕಡಿಮೆಯಾಗಿ ಎಲ್ಲಾ ಅಕ್ಷರಗಳ ಸಮಾನಕ್ಕೆ ಬೆಳೆದಿರುವುದು. ಈ ಅಕ್ಷರಗಳ ಕೆಳಗೆರೆ ಮೇಲಕ್ಕೆ ಬೆಳೆದು ಕ ಕಾರದ ಅಡ್ಡಗೆರೆಯ ವರೆಗೂ ರ ಕಾರದಲ್ಲಿ ಅಕ್ಷರದ ಮುಕ್ಕಾಲು ಭಾಗದ ವರೆಗೂ ಬೆಳೆದಿದೆ. ಅ ಕಾರದ ಮೇಲಿನ ಅಡ್ಡಗೆರೆಯ ವರೆಗೆ ಬೆಳೆದಿದೆ ಮತ್ತು ಹಿಂದಿನ ಅಕ್ಷರದಂತೆ ತಳಭಾಗದ ಗೆರೆ ಅಗಲವಾಗಿದೆ. ದ ಮತ್ತು ಥ ಗಳು ಚೌಕಾಕಾರಕ್ಕೆ ಬಂದಿದ್ದು ಅಕ್ಷರದ ಕೆಳಭಾಗ ಒಳಕ್ಕೆ ಬಾಗಿದೆ. ಟ ಕಾರವು ವೃತ್ತಾಕಾರವನ್ನು ಕಳೆದುಕೊಂಡು ಬಲಮುಖದಿಂದ ಎಡಮುಖಕ್ಕೆ ಗೆರೆ ಬೆಳೆದು ಅನಂತರ ಕೆಳಕ್ಕೆ ಇಳಿದು ಮುಂದೆ ಬಲಕ್ಕೆ ಸಾಗಿದೆ. ತ ಕಾರದಲ್ಲಿ ಕೆಲವೆಡೆ ತಳಭಾಗದಲ್ಲಿ ಸುರುಳಿ ಇದೆ. ಕೆಲವಡೆ ಸುರುಳಿ ಇಲ್ಲದೆ ವಕ್ರಗೆರೆಯೇ ಕೆಳಕ್ಕೆ ಬಂದಿದೆ. ಣ ಮತ್ತು ನ ಅಕ್ಷರಗಳ ತಳಭಾಗದ ಅಡ್ಡಗೆರೆಯು ಉದ್ದಗೆರೆಯ ಮೇಲ್ಗಡೆಯಿಂದ ಎಡಕ್ಕೆ ರೇಖೆಯೊಂದು ಬಾಗಿದೆ. ಬಲಗಡೆಗೆ ಬಂದಿರುವ ಗೆರೆಯು ಕೆಳಕ್ಕೆ ಬಾಗಿ ಅಕ್ಷರಕ್ಕಿಂತ ಕೆಳಗೆ ಇಳಿದಿದೆ. ಪ, ಫ, ಷ ಮತ್ತು ಹ ಗಳ ಬೆಳವಣಿಗೆ ಒಂದೇ ರೀತಿಯವಾಗಿವೆ. ಹ ಕಾರದ ಬಲಗೆರೆಯು ಅಕ್ಷರಕ್ಕಿಂತ ಕೆಳಕ್ಕೆ ಇಳಿದಿವೆ. ಯ ಕಾರದ ಎಡಗಡೆಯ ಭಾಗವು ಅನೇಕ ಕಡೆ ಸಣ್ಣ ಸುರುಳಿಯನ್ನು ಸೃಷ್ಟಿಸಿದೆ. ಲ ಕಾರದ ಮೇಲಿನ ಗೆರೆ ಕೆಳಕ್ಕೆ ಬಾಗಿ ಅಕ್ಷರದ ಅರ್ಧಕ್ಕೆ ಇಳಿದಿದೆ. ಱ ಮತ್ತು ೞ ಗಳ ಪ್ರಯೋಗವಿದ್ದು ಎರಡು ವೃತ್ತಗಳನ್ನು ಒಂದರ ಪಕ್ಕದಲ್ಲಿ ಒಂದು ಸೇರಿಸಿದಂತೆ ಇಟ್ಟಾಗ ವಾಗಿದ್ದರೆ, ಇವರೆಡನ್ನು ಅಡ್ಡವಾಗಿ ಛೇದಿಸಿ ಗೆರೆಯೊಂದು ಬಂದು ಱ ಕಾರವಾಗಿದೆ.


ಅಕ್ಷರಗಳ ಮೇಲಿನ ತಲೆಕಟ್ಟುಗಳು ಬಾದಾಮಿಯ ಶಾಸನದಂತೆ ಇದ್ದು, ದೀರ್ಘಗಳು ಹಿಂದಿನ ಶಾಸನದಂತೆಯೇ ಇದೆ. ಣ ಕಾರಕ್ಕೆ ಏ ಕಾರದ ಗುಣಿತ ಕೊಡುವಾಗ ಅಕ್ಷರದ ಕೆಳಗೆ ಕೊಡಲಾಗಿದೆ. ಟಿ, ಜಿ ಕಾರಗಳಿಗೆ ದೀರ್ಘಗಳನ್ನು ಕೊಡುವಾಗ ಅಕ್ಷರದ ಬಲಮಧ್ಯ ಅಥವಾ ಎಡಮಧ್ಯ ಭಾಗದಿಂದ ನೀಡಲಾಗಿದೆ. ರ ಕಾರದ ಒತ್ತಕ್ಷರ ಮತ್ತು ಉ ಕಾರದ ಕಾಗುಣಿತದ ವ್ಯತ್ಯಾಸವನ್ನು ತೋರಿಸಲು ರ ಕಾರದ ಒತ್ತನ್ನು ಅಗಲವಾಗಿ ನೀಡಲಾಗಿದೆ.

ಮಂಗಲೀಶನ ಬಾದಾಮಿ ವೈಷ್ಣವ ಗುಹಾಲಯದ ಶಾಸನದಲ್ಲಿ ಇದೇ ಲಿಪಿಯ ಮುಂದುವರಿಕೆಯನ್ನು ಕಾಣುತ್ತೇವೆ. ಅ, ಕ, ರ ಗಳು ಪೂರ್ಣವಾಗಿ ಸಾಲಿನ ಅಳತೆಗೆ ಬಂದಿವೆ. ತಲೆಕಟ್ಟುಗಳು ಗೆರೆಗಳ ರೂಪಕ್ಕೆ ಬಂದಿವೆ. (ಕ್ರಿ.ಶ.೫೭೮) ಅ ಕಾರದಲ್ಲಿ ಎರಡು ರೀತಿಯವು ದೊರೆಯುತ್ತವೆ. ಕೆಳಗೆ ಬಂದ ಗೆರೆ ಕೆಳಕ್ಕೆ ಬೆಳೆದು, ಮೇಲಕ್ಕೆ ಕಡಿಮೆ ಅಂತರದಲ್ಲಿ ಬೆಳೆದಿರುವುದು. ಇನ್ನೊಂದು ರೀತಿಯೆಂದರೆ ಇದೇ ಭಾಗ ಅಗಲವಾಗಿರುವುದು. ಗ ಮತ್ತು ಶ ಗಳ ಒಳಗಿನ ಬಾಗುವಿಕೆ ಇಲ್ಲಿ ಇನ್ನೂ ಸ್ಪಷ್ಟವಾಗಿದೆ. ಜ ಕಾರದ ಮಧ್ಯದ ಗೆರೆಯಲ್ಲಿ ಅದನ್ನು ಕತ್ತರಿಸಿದ ಚಿಕ್ಕಗೆರೆಯೊಂದು ಕಾಣಬರುತ್ತದೆ. ಯ ಕಾರವು ಹಿಂದಿನ ಶಾಸನದಂತೆ ಎರಡು ರೂಪಗಳನ್ನು ಹೊಂದಿದೆ. ಊ ಕಾರದ ದೀರ್ಘ ಗುಣಿತವು ಬಳ್ಳಿಯಂತೆ ಮೇಲೆಕ್ಕೆ ತಿರುಗಿ ಮತ್ತೆ ಕೆಳಕ್ಕೆ ಬಾಗಿದೆ. ಋ ಕಾರದ ಗುಣಿತವು ಅಕ್ಷರದ ಕೆಳಗೆ ಎಡಗಡೆಯಿಂದ ಬಲಗಡೆಗೆ ಅಗಲವಾಗಿ ಬಂದಿದೆ. ಲ ಕಾರದ ತಳಭಾಗ ಅರೆವೃತ್ತಾಕಾರವಾಗಿ, ಮೇಲಕ್ಕೆ ಸಾಗಿದ ಗೆರೆಯ ಅಕ್ಷರದ ಹಣೆಯ ಮುಂಭಾಗಕ್ಕೆ ಇಳಿಬಿದ್ದಿದೆ. ಒಟ್ಟಿನಲ್ಲಿ ಅಕ್ಷರಗಳು ಉದ್ದಕ್ಕೆ ಬೆಳೆಯುವ ಬದಲು ಅಗಲವಾಗುವತ್ತ ಸಾಗಿವೆ. ತಮಟುಕಲ್ಲಿನ ಶಾಸನದಲ್ಲಿನ ಅಕ್ಷರಗಳು ಇದೇ ಲಕ್ಷಣವನ್ನು ಹೊಂದಿದ್ದು ಅಕ್ಷರಗಳ ಉದ್ದ ಕಡಿಮೆಯಾಗಿದೆ.




ತಮಟುಕಲ್ಲು ಶಾಸನ ದೇ.ಕೊ. ರೆಡ್ಡಿ

ಮಂಗಳೀಶನ ನಂತರದ ರಾಜ್ಯವಾಳಿದ ಇಮ್ಮಡಿ ಪುಲಕೇಶಿಯ ಐಹೊಳೆ, ಯೆಕ್ಕೇರಿಯ ಶಿಲಾಶಾಸನಗಳು ಮತ್ತು ಕೊಪ್ಪರಂ ತಾಮ್ರಶಾಸನಗಳಲ್ಲಿ ಲಿಪಿಗಳು ಸಾಮಾನಾಂತರೆಯನ್ನು ಪಡೆದಿವೆ. ಅಂದರೆ ಎಲ್ಲಾ ಅಕ್ಷರಗಳೂ ಗುಣಿತಗಳನ್ನು, ಒತ್ತಕ್ಷರಗಳನ್ನು ಬಿಟ್ಟು ಹೆಚ್ಚು ಕಡಿಮೆಯೆನ್ನದೆ ಒಂದು ಸಮಾನತೆಯನ್ನು ಕಾಯ್ದುಕೊಂಡಿವೆ. ಅ ಕಾರ ಮಾತ್ರ ತಳಗಡೆಯ ಗೆರೆಯನ್ನು ಸಾಲಿನಿಂದ ಕೆಳಕ್ಕೆ ಉಳಿಸಿಕೊಂಡಿದೆ. ಅದರ ಗೆರೆಯು ಅಕ್ಷರದ ತಲೆಕಟ್ಟಿನವರೆಗೆ ಬೆಳೆದಿದೆ. ಕ ಕಾರದ ತಳಗಡೆ ಗೆರೆ ಅದರ ಅಡ್ಡಗೆರೆಗೆ ತಾಕಿದೆ. ರ ಕಾರದ ಗೆರೆ ತಲೆಕಟ್ಟಿನೊಂದಿಗೆ ಸೇರಿಕೊಂಡಿದೆ. ಗ ಮತ್ತು ಶ ಗಳ ಒಳಗೆರೆ ಒಳಕ್ಕೆ ಬಾಗಿವೆ. ಶ ಕಾರದಲ್ಲಿ ಈ ಗೆರೆಯು ಒಳಗಿನ ಅಡ್ಡಗೆರೆಗೆ ತಾಗಿದೆ. ತ ಕಾರದ ತಳಭಾಗವು ಅರ್ಧವೃತ್ತಾಕಾರವಾಗಿ ಎಡಮುಖಕ್ಕೆ ತಿರುಗಿದೆ. ಕೆಲವೆಡೆ ಕೆಳಗಿನ ಗೆರೆ ಮೇಲಕ್ಕೆ ತಿರುಗಿರುವುದೂವುಂಟು. (ಐಹೊಳೆಯ ಶಾಸನ) ಥ ಕಾರವು ಚೌಕಾಕಾರವಾಗಿದ್ದು ಅಕ್ಷರದ ಒಳಗೆ ಬಲಗಡೆಯ ಗೆರೆಯಿಂದ ಚಿಕ್ಕ ಗೆರೆಯೊಂದು ಒಳಕ್ಕೆ ಬಂದಿದೆ. ಪ, ಫ, ಷ ಮತ್ತು ಪ ಗಳು ಹಿಂದಿನ ಶಾಸನಗಳಿಗಿಂತ ಹೆಚ್ಚಿನ ಬೆಳವಣಿಗೆಯನ್ನೇನೂ ತೋರಿಸುತ್ತಿಲ್ಲವಾದರೂ



ಕೊಪ್ಪರಂ ಪುಲಕೇಶಿ

EI XVIII p. 56




ಅದೇ p 74 ಭೋಜ ಅಶಂಕಿತನ ಹಿರೇಗುತ್ತಿ ಶಾಸನ ದೇ.ಕೊ. ರೆಡ್ಡಿ


ಹ ಕಾರದ ಬಾಗಿದ ಗೆರೆ ಅಕ್ಷರದ ಕೆಳಗಡೆ ವರೆಗೂ ಬಂದಿದೆ. ಬ ಕಾರದ ಎಡಭಾಗದ ಮೇಲ್ಭಾಗದ ಗೆರೆ ಸ್ವಲ್ಪ ಹೆಚ್ಚಿಗೆ ಒಳಕ್ಕೆ ಬಾಗಿದೆ. ಕೆಲವೆಡೆ ಒಳಗಡೆ ಎರಡು ಅರೆ ಸುರಳಿಗಳನ್ನು ಸೃಷ್ಟಿಸಿದೆ. ಯ ಕಾರದ ಮುಂಭಾಗವು ಈ ಶಾಸನಗಳಲ್ಲಿ ಅರೆ ಸುರುಳಿಯಾಕಾರದಲ್ಲಿದೆ. ಲ ಕಾರದ ಗೆರೆ ಮೇಲಕ್ಕೆ ಬೆಳೆದು ಕೆಳಮುಖವಾಗಿ ಅಕ್ಷರದ ತಳದ ಸಮಕ್ಕೆ ಬಂದಿದೆ. ಳ ಕಾರವು ಡ ಕಾರದಂತಿದ್ದು ಗೆರೆಯ ಅಂತ್ಯದಲ್ಲಿ ಸೀಳು ಬಂದಿದೆ. ಐ ಕಾರವು ಸರಿಸುಮಾರು ಚೌಕಾಕಾರಕ್ಕೆ ತಿರುಗಿದ್ದು ಒಳಗಡೆ ಅಡ್ಡ ಮತ್ತು ಉದ್ದ ಗೆರೆಗಳು ಅದನ್ನು ಕತ್ತರಿಸಿವೆ. ಪುಲಕೇಶಿಯ ಕಾಲದಲ್ಲಿಯೇ ವಾತಾಪಿಯು ಪಲ್ಲವ ನರಸಿಂಹವರ್ಮನಿಂದ ಸೂರೆಗೊಂಡಿತು. ಪುಲಕೇಶಿಯ ನಂತರ ಅಂದರೆ ಕ್ರಿ.ಶ.ಸು.೬೪೦ರಿಂದ ೬೫೫ರ ವರೆಗೆ ಸುಮಾರು ೧೫ ವರ್ಷಗಳು ಚಲುಕ್ಯರಾಜ್ಯ ಅಜ್ಞಾತವಾಸವನ್ನೂ ಅನುಭವಿಸಿತು. ಕ್ರಿ.ಶ.೬೫೫ರಲ್ಲಿ ಮತ್ತೆ ಈ ಸಾಮ್ರಾಜ್ಯವು ವಾತಾಪಿಯಿಂದ ರಾಜ್ಯಭಾರವನ್ನು ಪ್ರಾರಂಭಿಸಿತು. ಚಲುಕ್ಯ ಒಂದನೆಯ ವಿಕ್ರಮಾದಿತ್ಯನ ತಾಮ್ರಶಾಸನಗಳಲ್ಲದೆ ಲಕ್ಷ್ಮೇಶ್ವರ, ಚಿಕ್ಕನಂದಿಹಳ್ಳಿ ಮುಂತಾದ ಕಡೆ ಶಿಲಾಶಾಸನಗಳೂ ದೊರೆತಿವೆ. ಈ ಶಾಸನಗಳಲ್ಲಿ ಶಿಲಾಶಾಸನಗಳ ಅಕ್ಷರಗಳಿಗೂ ತಾಮ್ರಶಾಸನಗಳ ಅಕ್ಷರಗಳಿಗೂ ವ್ಯತ್ಯಾಸಗಳಿವೆ. ಶಿಲಾಶಾಸನಗಳ ಅಕ್ಷರಗಳು ನೋಡಲು ಅಂದವಾಗಿದ್ದರೆ ತಾಮ್ರಶಾಸನಗಳ ಅಕ್ಷರಗಳು ಗೆರೆಗೆರೆ ರೀತಿಗಳಲ್ಲಿವೆ. ಲಕ್ಷ್ಮೇಶ್ವರದ ಲಿಪಿಗಳು ಗುಂಡಗಿದ್ದು ಅಕ್ಷರಗಳಲ್ಲಿ ಕೆಲವು ಸ್ವಲ್ಪ ಹಿಂದಿನ ಲಕ್ಷಣವನ್ನು ತೋರಿಸುತ್ತವೆ. ಕ ಕಾರವು ಕೆಲವು ಕಡೆ ಅಡ್ಡಗೆರೆಗೆ ಸೇರಿದ್ದರೆ ಕೆಲವು ಅಕ್ಷರಗಳು ಇನ್ನು ಸೇರಿಲ್ಲ, ರ ಕಾರದ ಗೆರೆಯು ತಲೆಕಟ್ಟಿನ ವರೆಗೆ ಬೆಳೆದಿವೆ. ಆದರೆ ಸೇರಿಲ್ಲ, ಕೆಲವು ಅಕ್ಷರಗಳು ತಲೆಕಟ್ಟಿಗೆ ಸೇರಿವೆ. ಅ ಕಾರವು ಬಹುತೇಕವಾಗಿ ಬೆಳೆದು ಅಕ್ಷರದ ಮೇಲ್ಭಾಗಕ್ಕೆ ತಿರುಗಿದೆ. ಲ ಕಾರದ ತಳಭಾಗ ಅರೆ ವೃತ್ತಾಕಾರವಾಗಿರುವುದರ ಬದಲು ಚಪ್ಪಟೆಯಾಗಿದೆ. ಥ ಕಾರವು ಒಂದೆಡೆ ಚೌಕಾಕಾರವಾಗಿದ್ದರೆ ಇನ್ನೊಂದೆಡೆ ತ್ರಿಕೋಣದ ರೀತಿಯಂತಾಗಿ ತಲೆಯ ಮೇಲೆ ತಲೆಕಟ್ಟಿನಂತಹ ಮಂದವಾದ

ಗೆರೆಯನ್ನು ಪಡೆದಿದೆ. ಚಿಕ್ಕನಂದಿಹಳ್ಳಿಯ ಇದೇ ರಾಜನ ಶಾಸನದಲ್ಲಿ ಕ ಮತ್ತು ರ ಗಳು ಅಡ್ಡಗೆರೆಯನ್ನು ಅಥವಾ ತಲೆಕಟ್ಟನ್ನು ಸೇರಿಸುವ ಸೇರದಿರುವ ಎರಡೂ ಉದಾಹರಣೆಗಳು ದೊರೆಯುತ್ತವೆ. ದ, ಡ ಗಳ ವ್ಯತ್ಯಾಸ ಅತ್ಯಲ್ಪ. ಳ ಕಾರವು ಡ ಕಾರದ ರೂಪದಲ್ಲಿ ಮುಂದುವರಿದು ಅಂತ್ಯದಲ್ಲಿ ಎರಡು ಸೀಳುಗಳನ್ನು ಹೊಂದಿದೆ. ಐ ಕಾರವು ಸರಿಸುಮಾರು ವೃತ್ತಾಕಾರಕ್ಕೆ ತಿರುಗಿದ್ದು ಅದನ್ನು ಸಮಭಾಗವಾಗಿ ಉದ್ದ ಮತ್ತು ಅಡ್ಡಗೆರೆಗಳು ಛೇದಿಸಿವೆ.

ಇದೇ ರಾಜನ ಆಮುದಲಪಾಡು, ಸವಣೂರು ಮುಂತಾದ ಕಡೆ ದೊರೆತಿರುವ ತಾಮ್ರಶಾಸನಗಳು ಆ ಕಾಲದ ಸ್ಪಷ್ಟವಾದ ಲಿಪಿಲಕ್ಷಣಗಳನ್ನು ಹೊಂದಿವೆ. ನೋಡಲು ಅಂದವಾಗಿಲ್ಲವೆಂಬ ವಿಷಯವನ್ನು ಬಿಟ್ಟಲ್ಲಿ ಉಳಿದೆಲ್ಲಾ ವಿವರಗಳಲ್ಲಿ ಮೇಲೆ ಹೇಳಿದ ಶಿಲಾಶಾಸನ ಲಿಪಿಗಳ ಲಕ್ಷಣಗಳನ್ನೇ ಹೊಂದಿವೆ. ತಲೆಕಟ್ಟುಗಳು ಸ್ಪಷ್ಟವಾಗಿವೆ. ಗುಣಿತಗಳೂ ಆ ಕಾಲದ ಲಕ್ಷಣಗಳನ್ನೇ ಹೊಂದಿವೆ. ಬಹುಶಃ ಧಾಳಿಯಲ್ಲಿ ರಾಜಧಾನಿಯಲ್ಲಿದ್ದ ಲಿಪಿಕಾರರು ಬೇರೆಡೆ ಹೋಗಿರಬಹುದು. ಶಾಸನಗಳ ಅಕ್ಷರಗಳಿಂದ ಅಸ್ಥಿರ ರಾಜ್ಯದ ಅವಸ್ಥೆಯನ್ನು ಗಮನಿಸಬಹುದು. ಪಳದೀಪುರ ತಾಮ್ರ ಶಾಸನದಲ್ಲಿ ಮತ್ತೆ ಸ್ಥಳೀಯ ಲಿಪಿಯ ಸುಧಾರಣೆ ಕಂಡುಬಂದಿದ್ದು ಇದು ಸ್ಥಿರ ರಾಜ್ಯವನ್ನು ಸೂಚಿಸುತ್ತದೆ. ಅಕ್ಷರಗಳು ವೃತ್ತಾಕಾರಕ್ಕೆ ತಿರುಗಿವೆ.



EI XXX II p. 182 **೧ನೇ ವಿಕ್ರಮಾದಿತ್ಯನ ಆಮುದಲಪಾಡು ಶಾಸನ** ದೇ.ಕೊ. ರೆಡ್ಡಿ




EI. XXI. p. 178 ಪಳದೀಪುರ ಪಲ್ಲವಗೋಪಾಲದೇವನ ಶಾಸನ ದೇ.ಕೊ. ರೆಡ್ಡಿ

ಕ್ರಿ.ಶ.೬೯೯ರ ವಿಜಯಾದಿತ್ಯನ ಬಾದಾಮಿ ಶಾಸನ, ಕ್ರಿ.ಶ.೭೦೮ರ ಶಿಗ್ಗಾವ್ ತಾಮ್ರಶಾಸನಗಳಲ್ಲಿನ ಲಿಪಿಗಳಲ್ಲಿ ಅ, ಕ ಮತ್ತು ರ ಗಳಲ್ಲಿ ಅ ಕಾರದ ಹೊರ ಗೆರೆ ಅಕ್ಷರದ ಮೂಲ ತಲೆಕಟ್ಟನ್ನು ತಲುಪಿದೆ; ಮತ್ತು ಒಳಭಾಗದ ಗೆರೆಗಳು ಗೌಣವಾಗತೊಡಗಿವೆ. ಆ ಕಾರದ ದೀರ್ಘವು ಅಕ್ಷರದ ಮಧ್ಯದ ಗೆರೆಯ ಮೇಲಿನಿಂದ ಕೆಳಮುಖವಾಗಿ ಇಳಿಬಿದ್ದಿದೆ. ಕ ಮತ್ತು ರ ಕಾರಗಳ ಕೆಳಭಾಗ ಅಗಲವಾಗಿವೆ. ಗ ಕಾರದ ಒಳಗೆ ತಿರುಗಿದ್ದ ಸುರುಳಿ ಕಾಣೆಯಾಗಿದೆ. ಲ ಕಾರದ ಗೆರೆ ತಳಮಟ್ಟಕ್ಕಿಂತ ಕೆಳಗೆ ಬಂದು ಬಲಕ್ಕೆ ತಿರುಗಿದೆ. ಒಳಗಡೆಯ ಮೂಲ ಅಕ್ಷರದ ಭಾಗ ಗೌಣವಾಗತೊಡಗಿದೆ. ಧ ಈಗಿನ ರೂಪಕ್ಕೆ ಹತ್ತಿರವಾಗಿದೆ. ಭ ಕಾರದ ಕೆಳಭಾಗದ ಎರಡೂ ಅಂಚುಗಳು ಅಕ್ಷರದ ಒಳಕ್ಕೆ ಬಾಗಿವೆ. ಅಕ್ಷರದ ಎರಡೂ ಗೆರೆ ಸೇರುವ ಭಾಗವು ತ್ರಿಕೋಣದಂತಹ ರೂಪವನ್ನು ಸೃಷ್ಟಿಸಿದೆ. ಕಾಗುಣಿತ ಅಕ್ಷರಗಳಲ್ಲಿ ಆ ಕಾರದ ದೀರ್ಘದ ಬಾಗುವಿಕೆ ಹಿಂದಿನ ಶಾಸನಗಳಿಗಿಂತ ಸ್ವಲ್ಪ ಉದ್ದವಾಗಿದೆ. ಇ ಕಾರದ ಗುಣಿತದ ವೃತ್ತಾಕಾರವು ಗಾತ್ರದಲ್ಲಿ ಚಿಕ್ಕದಾಗಿದೆ. ಈ ಕಾರದ ಗುಣಿತವು ತಲೆಯಿಂದ ಮೇಲೆ ಎದ್ದು ವೃತ್ತಾಕಾರದ ಸುರುಳಿಯನ್ನು ಸೃಷ್ಟಿಸಿದೆ. ಉ ಕಾರದ ಗುಣಿತ ಕ ಕಾರದಲ್ಲಿ ಇನ್ನೂ ಅಕ್ಷರದ ಬಲಗಡೆ ಕೆಳಮುಖ ಮಾಡಿದ ಗುಡಿಸು ಇದೆ. ಗ, ಭ, ಚ, ಶ ಮುಂತಾದವುಗಳಿಗೆ ಬಲಮುಖ ಮಾಡಿ ಮೇಲೆ ಬಂದ ಗೆರೆ ಅಕ್ಷರದ ಸಮಕ್ಕೆ ಬೆಳೆದಿವೆ. ಉಳಿದ ಅಕ್ಷರಗಳಲ್ಲಿ ಕೆಳಕ್ಕೆ ಬೆಳೆದು ಎಡಕ್ಕೆ ಬಾಗಿ ಮೇಲಕ್ಕೆ ಬೆಳೆದು ಅಕ್ಷರದ ಹತ್ತಿರಕ್ಕೆ ಬಂದಿದೆ. ಉಳಿದ ಗುಣಿತಗಳು ಹಿಂದಿನ ನಿಯಮಗಳನ್ನೇ ಪಾಲಿಸಿವೆ. ಒತ್ತಕ್ಷರಗಳಲ್ಲಿ ಯ ಮತ್ತು ರ ಗಳು ಎದ್ದು ಕಾಣುತ್ತವೆ. ಉಳಿದವುಗಳಲ್ಲಿ ಲ ಕಾರದ ಒತ್ತು ತನ್ನ ಮೂಲರೂಪವನ್ನು ಕಳೆದುಕೊಂಡು ಅಂಕುಡೊಂಕಾಗಿರುವ ಅಡ್ಡಗೆರೆಯಂತೆ ಇದೆ. ಮ ಕಾರದ ಒತ್ತು ಕೂಡ ಮೂಲಾಕ್ಷರದ ರೂಪವನ್ನು ಕಳೆದುಕೊಂಡು ವೃತ್ತಾಕಾರದ ಮೇಲೆ ಎಡಗಡೆಗೆ ಚಾಚಿದ ಗೆರೆಯನ್ನು, ಇನ್ನೊಂದು ಗೆರೆ ಅಕ್ಷರವನ್ನು ತಾಗಿಕೊಂಡು ಇದೆ.

ಚಲುಕ್ಯರ ಕೊನೆಯ ರಾಜ ಇಮ್ಮಡಿ ಕೀರ್ತಿವರ್ಮ (ಕ್ರಿ.ಶ.೭೪೫-೭೫೭) ಇವನ ಕಾಲದ ಸುಂದರವಾದ ಲಿಪಿಗಳನ್ನುಳ್ಳ ಶಿಲಾಶಾಸನಗಳು ಆಡೂರು, ಅಣ್ಣಿಗೇರಿ ಮುಂತಾದಡೆಯಲ್ಲಿ ದೊರೆತಿವೆ. ಹಾಗೆಯೇ ಕೆಂದೂರು ತಾಮ್ರಶಾಸನವೂ ದೊರೆತಿದೆ. ಶಿಲಾಶಾಸನಗಳಲ್ಲಿ ಕ, ರ ಅಕ್ಷರಗಳು ಸಾಲಿಗಿಂತ ಸ್ವಲ್ಪ ಉದ್ದವಾಗಿವೆ. ಅ ಕಾರವು ಚಿಕ್ಕದಾಗಿ ಸಾಲಿನ ನೇರಕ್ಕಿದೆ. ಮ ಕಾರದ ಒತ್ತಕ್ಷರಗಳು ಹಿಂದಿನ ಶಾಸನಗಳಿಗಿಂತ ಬೆಳೆದ ರೂಪವನ್ನು ತೋರಿಸುತ್ತಿವೆ. ಇ ಕಾರದ ಗುಣಿತಗಳು ಚಿಕ್ಕದಾಗಿವೆ. ಉ ಕಾರದ ಗುಣಿತವು ಇನ್ನೂ ಅಕ್ಷರದ ಕೆಳಭಾಗವನ್ನು ಮುಟ್ಟಿಲ್ಲ. ಐ ಕಾರವು ಈ ಶಾಸನಗಳಲ್ಲಿ ಎರಡು ರೂಪಗಳಲ್ಲಿ ದೊರೆಯುತ್ತವೆ. ವೃತ್ತ-ಚೌಕಾಕಾರದ ಒಂದು ರೂಪವಾದರೆ ಅಡ್ಡಡ್ಡಕ್ಕೆ ಬೆಳೆದಿರುವುದು ಇನ್ನೊಂದು. ಯ ಕಾರದ ಒತ್ತು ಅಕ್ಷರದ ಎಡಕ್ಕೆ ಉದ್ದಕ್ಕೆ ಬಂದು ಮತ್ತೆ ಬಲಕ್ಕೆ ತಿರುಗಿ ಅಕ್ಷರದ ಮೇಲ್ಮಟ್ಟಕ್ಕೆ ಹೋಗಿದೆ.

ಈ ಕಾಲಕ್ಕೆ ಅ, ರ, ಸ ಅಕ್ಷರಗಳು ಇಂದಿನ ರೂಪದ ಸಮೀಪಕ್ಕೆ ಬಂದಿವೆ. ಫ ಕಾರದ ಬಲಗೆರೆಯ ಒಳಸುರುಳಿ ಒಳಕ್ಕೆ ಬಂದು ಹೊರಕ್ಕೆ ಬಂದು ಮೇಲಕ್ಕೆ ಎದ್ದಿವೆ. ಒ ಕಾರದ ಎಡಗೆರೆಯು ಒಳಕ್ಕೆ ತಿರುಗಿದ್ದು ಒಳಗೆ ಗೆರೆ ಬಂದು ಗೆರೆಯ ಅಂತ್ಯದಲ್ಲಿ ಅಡ್ಡಗೆರೆ ಬಂದಿವೆ. ಎಲ್ಲಾ ಅಕ್ಷರಗಳ ಮೇಲೆ, ಗ, ಧ, ಶ ಗಳನ್ನು ಸೇರಿಸಿದಂತೆ ತಲೆಕಟ್ಟುಗಳು ಸ್ಪಷ್ಟವಾಗಿವೆ. ಖ

ಚಲುಕ್ಯರ ಲಿಪಿ ಪಟ್ಟಿಕೆ



1. ಬಾದಾಮಿ, 2. ಗೊಡಚಿ, 3. ಹಿರೇಗುತ್ತಿ, 4. ಬಾದಾಮಿ, 5. ಕೊಪ್ಪರಂ, 6. ಐಹೊಳೆ, 7. ಅಮುದಲಪಾಡು, 8. ಚಿಕ್ಕನಂದಿಹಳ್ಳಿ 9. ಶಿಗಾವಿ, 10. ಕಿಂದೂರು



ದೇ.ಕೊ. ರೆಡ್ಡಿ


ಕಾರವು ಇಂದಿನ ಇಂಗ್ಲೀಷಿನ (ಅರಬ್ಬೀ) ಎರಡು ಅಂಕೆಯಂತೆ ಇದೆ. ಲ ಕಾರವು ಕೆಂದೂರು ಶಾಸನದಲ್ಲಿ ಎಡಗಡೆಯಿಂದ ಅಡ್ಡಗೆರೆ ಬಂದು ಬಲಗಡೆಗೆ ಮೇಲಕ್ಕೆ ಬಂದಂತಿದೆ. ಈ ಗೆರೆಯ ಮೇಲೆ ತಲೆಕಟ್ಟಿದೆ.

ಪಲ್ಲವರ ಲಿಪಿ

ಶಾತವಾಹನರ ನಂತರ ಕರ್ನಾಟಕ ಮತ್ತು ಆಂಧ್ರದ ದಕ್ಷಿಣಭಾಗವನ್ನು ಪಲ್ಲವರು ಆಳಿದರು. ಅವರ ಆಳ್ವಿಕೆಯ ಕುರುಹಾಗಿ ಕರ್ನಾಟಕದಲ್ಲಿ ಹಿರೇಹಡಗಲಿ, ಅಣಜಿ, ಆಂಧ್ರದಲ್ಲಿ ಮಯಿದವೋಲು, ಉರುವಪಲ್ಲಿ, ರೇಯೂರು ಮುಂತಾದ ಕಡೆಗಳಲ್ಲಿ ಶಾಸನಗಳು ದೊರೆತಿವೆ. ಬೂಹ್ಲರ್ ಅವರು ಈ ಶಾಸನಗಳ ಅಕ್ಷರಗಳು ಇಕ್ಷ್ವಾಕುಗಳ ಅಕ್ಷರಗಳಿಂದ ಬಂದಿದ್ದು ಆ ಅಕ್ಷರಗಳ ಹೆಚ್ಚಿನ ಬಾಗುವ ರೀತಿಯಿಂದ ಬಂದಿವೆಯೆಂಬ ಅಭಿಪ್ರಾಯ ಪಡುತ್ತಾರೆ. ಜಗ್ಗಯ್ಯಪೇಟ, ಅಮರಾವತಿ, ನಾಗಾರ್ಜುನಕೊಂಡ ಮುಂತಾದೆಡೆಯಲ್ಲಿ ದೊರೆಯುವ ಶಾಸನಲಿಪಿಗಳಿಗೆ ಇವನ್ನು ಹೋಲಿಸಿ ನೋಡಿದಾಗ ಇವರ ಹೇಳಿಕೆ ಸರಿಯೆನಿಸುತ್ತದೆ.

ಈ ಮೇಲಿನ ಶಾಸನ ಅಕ್ಷರಗಳು ಸಹಜ ರೀತಿಯಲ್ಲಿಲ್ಲದೆ ಅಲಂಕಾರಿಕ ರೀತಿಯಲ್ಲಿದೆ. ಶಾತವಾಹನರಲ್ಲಿ ಕಾಣುವ ತ್ರಿಕೋಣಾಕಾರದ ಅಕ್ಷರಗಳ ಅಂಚುಗಳು ಸ್ವಲ್ಪ ವೃತ್ತಾಕಾರಕ್ಕೆ ತಿರುಗಿವೆ. ಸ ಕಾರವು ಶಾಸನದ ಆರಂಭದಲ್ಲಿನ ಸಿದ್ಧಂನಲ್ಲಿನ ಸ ಅಕ್ಷರವು ಪ ಕಾರದಂತೆ ಇದೆ. ಅಂದರೆ ತಲೆಕಟ್ಟಿನ ಗೆರೆಯಿಂದ ಕೆಳಕ್ಕೆ ಬಾಗಿದ ಗೆರೆಯು ಮತ್ತೆ ಬಾಗಿ ಬಲಕ್ಕೆ ಸಾಗಿ ಮೇಲ್ಮುಖವಾಗಿದೆ. ಆದರೆ ಶಾಸನದಲ್ಲಿ ಇದೇ ಸ ಕಾರವನ್ನು ಇತರೆ ಶಾಸನಗಳಲ್ಲಿರುವಂತೆ ಸಹಜವಾಗಿ ಬರೆಯಲಾಗಿದೆ. ಅ, ರ, ಈ ಕಾರಗಳ ಕೆಳಭಾಗದ ಗೆರೆಗಳು ನೇರವಾಗಿ ನೀಳವಾಗಿ ಕೆಳಕ್ಕೆ ಬಂದು ತಳಭಾಗದಲ್ಲಿ ಅರೆಸುರಳಿಯನ್ನು ಸೃಷ್ಟಿಸಿವೆ. ಇ ಕಾರದ ಮೂರು ಚುಕ್ಕೆಗಳು ಕನ್ನಡದಲ್ಲಿ ಈ ಕಾಲಕ್ಕೆ ಚುಕ್ಕೆಗಳ ರೀತಿಯಲ್ಲಿದ್ದರೆ ಈ ಪ್ರದೇಶಗಳಲ್ಲಿ ಚಿಕ್ಕದಾಗಿ ಬಾಗಿದ ಮೂರು ಗೆರೆಗಳನ್ನು ತೋರಿಸಲಾಗಿದೆ. ಇ ಕಾರದ ಗುಣಿತವೂ ಸಹ ಅಕ್ಷರದ ಮೇಲೆ ನೇರವಾದ ಗೆರೆಯನ್ನು ಹೊಂದಿದ್ದು ಅದು ಮೇಲೆ ಅರೆಸುರುಳಿಯನ್ನು ಹೊಂದಿದೆ. ಇ ಕಾರದ ಗುಣಿತ, ರ, ಕ, ಅ ಅಕ್ಷರಗಳ ಗೆರೆಗಳು ಜೊತೆಗೆ ಉ ಕಾರದ ಗುಣಿತಗಳು ಸೇರಿ ಈ ಬಗೆಯ ಶಾಸನ ಬರೆಯಲು ಹೆಚ್ಚಿನ ಸ್ಥಳಾವಕಾಶ ಬೇಕಾಗುತ್ತಿತ್ತು.

ಮಯಿದವೋಲು ಶಾಸನದಲ್ಲಿ ಅಕ್ಷರಗಳು ವಿಶಿಷ್ಟವಾಗಿದ್ದು ಶಾಸನದ ಭಾಷೆ ಪ್ರಾಕೃತವಾಗಿದೆ. ಇಕ್ಷ್ವಾಕುಗಳ ಶಾಸನಗಳ ಲಿಪಿಯನ್ನು ಅನುಸರಿಸಿ ಬರೆದಿರುವುದರಿಂದ ಅಕ್ಷರಗಳಲ್ಲಿ ಅ, ರ, ಕ ಗಳ ಕೆಳಗೆರೆಗಳು ಕೆಳಕ್ಕೆ ಬಂದು ಸ್ವಲ್ಪ ಮಾತ್ರ ಬಾಗುವಿಕೆಯನ್ನು ತೋರಿಸಿವೆ. ಕೆಲವು ಅಕ್ಷರಗಳನ್ನು ಬೇಗ ಬರೆಯುವ ಪ್ರಕ್ರಿಯೆಯಿಂದಲೋ ಏನೋ ವ್ಯತ್ಯಾಸವಾಗಿ ಕಾಣುತ್ತವೆ. ಎ, ಜ, ಣ, ತ, ನ, ಮ, ಲ, ಸ, ಹ ಗಳನ್ನು ತಕ್ಷಣವೇ ಗುರುತಿಸುವುದು ಕಷ್ಟ. ಈ ಅಕ್ಷರಗಳು ಶಾತವಾಹನ, ಇಕ್ಷ್ವಾಕುಗಳ ಅಕ್ಷರಗಳಿಂದಲೇ ಬಂದಿದ್ದರೂ ರೂಪಗಳು ಬದಲಾಗಿವೆ. ಇದಕ್ಕೆ ಹಿಂದೆ ಹೇಳಿದಂತೆ ವೇಗವಾಗಿ ಬರೆದಿರುವ ಬರೆವಣಿಗೆಯೇ ಆಧಾರವೆನ್ನಬಹುದು. ಹೆಚ್ಚಿನ ವ್ಯತ್ಯಾಸವಿರುವುದು ನ, ಮ ಮತ್ತು ಸ ಗಳಲ್ಲಿ, ನ ಕಾರದ ಮೇಲಿನ ಗೆರೆಯನ್ನು ಎಳೆದು ಅದೇ ಗೆರೆಯನ್ನು ಎಡಕ್ಕೆ ಬಾಗಿಸಿ ಮತ್ತೆ ಬಲಕ್ಕೆ ಬಾಗಿಸಿರುತ್ತಾರೆ. ಮ ಕಾರದ ಮೇಲಿನ ಎರಡೂ ಗೆರೆಗಳನ್ನು ಅಕ್ಷರದ




ಮಯಿದವೋಳಲು ಶಾಸನ ದೇ.ಕೊ. ರೆಡ್ಡಿ

ಮೇಲೆ ಅರ್ಧಚಂದ್ರಾಕಾರವಾಗಿ ಮೇಲ್ಮುಖವಾಗಿ ಬಲಕ್ಕೆ ಸಾಗಿ ಮತ್ತೆ ಕೆಳಕ್ಕೆ ಬಾಗಿಸಿ ಎಡಗಡೆಯಿಂದ ಬಲಗಡೆಗೆ ಬರುವಂತೆ ಉದ್ದವಾದ ಸುರುಳಿಯನ್ನು ಸೃಷ್ಟಿಸಿದೆ. ಸ ಕಾರವೂ ಸಹ ಮೇಲೆ ಎಡಗಡೆಯಿಂದ ಬಲಗಡೆಗೆ ವೃತ್ತಾಕಾರವನ್ನು ಸೃಷ್ಟಿಸಿ ಗೆರೆಯೊಂದು ಸ್ವಲ್ಪ ಮೇಲಕ್ಕೆ ಬಂದಿದೆ. ಆ ಗೆರೆಯ ಮೇಲೆ ಒಂದು ಸಣ್ಣ ಗೆರೆಯೊಂದು ಬಂದಿದೆ. ಅದರ ಕೆಳಗೆ ಅದೇ ತರಹದ ಗೆರೆಯೊಂದು ಬಂದಿದೆ. ಇದರ ರೂಪವನ್ನು ಲಿಪಿಕಾರ ಎರಡು ಭಾಗ ಮಾಡಿದ್ದಾನೆ. ಮೊದಲು ಹೇಳಿದ ಗೆರೆಯು ಸ ಕಾರದ ಮೇಲ್ಮುಖದ ಎರಡು ಗೆರೆಗಳು. ಉಳಿದ ಕೆಳಭಾಗ ಆ ಎರಡು ಗೆರೆಗಳ ಎಡಭಾಗದಿಂದ ಕೆಳಕ್ಕೆ ಬಾಗಿದ್ದ ಸಣ್ಣ ಕೊಕ್ಕೆ. ಇಲ್ಲಿ ಕೊಕ್ಕೆಯು ಕೆಳಕ್ಕೆ ಬಾಗಿ ಮತ್ತೆ ಬಲಗಡೆಗೆ ಮೇಲಕ್ಕೆ ಬಂದಿದೆ. ಸ ಕಾರವನ್ನು ಇಲ್ಲಿ ಎರಡು ಪ್ರತ್ಯೇಕ ಭಾಗಗಳನ್ನಾಗಿ ಮಾಡಲಾಗಿದೆ. ಅಕ್ಷರಗಳನ್ನು ಬರೆಯುತ್ತಿದ್ದ ದಿಕ್ಕನ್ನೂ ಈ ಬರವಣಿಗೆಯಿಂದ ತಿಳಿಯಬಹುದಾಗಿದೆ. ಭಾಗಗಳಾಗಿ ಬರೆಯುತ್ತಿದ್ದ ಅಕ್ಷರಗಳನ್ನು ಒಂದೇ ಸಮನೆ ಬರೆದಿರುವುದರಿಂದ ಈ ರೂಪಗಳು ಸೃಷ್ಟಿಯಾಗಿವೆ. ಶಾತವಾಹನರ ಕಾಲದ ತ್ರಿಕೋಣಾಕಾರದ ತಲೆಕಟ್ಟುಗಳು ಇಲ್ಲಿ ಇಲ್ಲ. ಉಳಿದಂತೆ ಗುಣಿತಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಅಕ್ಷರಗಳನ್ನು ಸ್ವಲ್ಪ ದಪ್ಪವಾಗಿ ಸ್ವಲ್ಪ ಆಳಕ್ಕೆ ಕೆತ್ತಿದ್ದಾರೆ. ಪ್ರತಿ ತಾಮ್ರಪತ್ರದಲ್ಲಿ ಎರಡು ಸಾಲಿನಂತೆ ಕೆತ್ತಿರುವುದರಿಂದ ಅಕ್ಷರದ ಉದ್ದ ಅಗಲಗಳಿಗೆ ಯಾವುದೇ ಬಾಧೆ ಬಂದಿಲ್ಲ.

ಹಿರೇಹಡಗಲಿಯ ಶಾಸನದ ಅಕ್ಷರಗಳ ವಿವರಕ್ಕೆ ಬರುವ ಮೊದಲು ಮಯಿದವೋಲು ಶಾಸನದ ಅಕ್ಷರಗಳನ್ನು ಬೃಹತ್‌ಪಾಲಾಯನ ವಂಶದ ಜಯವರ್ಮನ ಶಾಸನದ ಅಕ್ಷರಗಳು ಅನುಸರಿಸಿವೆ. ಅ, ಕ, ರ ಅಕ್ಷರಗಳ ಕೆಳರೇಖೆಗಳು ಎಡಕ್ಕೆ ವಕ್ರವಾಗಿ ಬಾಗಿವೆ. ಹಾಗೆಯೇ ಅ ಕಾರದ ನೇರಗೆರೆಯಿಂದ ಎಡಕ್ಕೆ ಬಂದಿರುವ ಗೆರೆಗಳು ಕೆಳಮುಖ ಬಾಗಿದೆ. ಹಾಗೂ ಅದರಿಂದ ಮೇಲಕ್ಕೆ ಹೋಗಿರುವ ಗೆರೆಯೂ ಸ್ವಲ್ಪ ಒಳಮುಖಕ್ಕೆ ಬಾಗಿದೆ. ಈ ಕಾರವು ಮೇಲೆ ಕೆಳಗೆ ಎರಡು ಚಿಕ್ಕಗೆರೆಗಳನ್ನು ಹೊಂದಿದ್ದು ಮಧ್ಯೆ ಒಂದು ದೊಡ್ಡ ಅಡ್ಡ ಗೆರೆ ಇದೆ. ಎ ಕಾರದ ತ್ರಿಕೋಣವು ಹೋಗಿ ಖ ಅಕ್ಷರದಂತೆ ಕಾಣುತ್ತಿದೆ. ಓ ಕಾರವು ಮೇಲೆ ಕೆಳಗೆ ಬಾಗಿದ ಕೊಂಡಿಯಂತೆ ಇದೆ. ಗ ಕಾರವು ಸ್ವಲ್ಪ ತ್ರಿಕೋಣದ ರೀತಿಯಲ್ಲಿದ್ದರೂ ಜ ಕಾರ ಮೂರು ರೀತಿಯಲ್ಲಿದೆ. ಒಟ್ಟಿನಲ್ಲಿ ಮಯಿದವೋಲು ಅಕ್ಷರದ ಮುಂದಿನ ಬೆಳವಣಿಗೆಯನ್ನು ಇಲ್ಲಿ ಕಾಣಬಹುದು. ಇಲ್ಲಿಯೂ ಅಕ್ಷರಗಳ ಮೇಲೆ ಚಿಕ್ಕ ತಲೆಕಟ್ಟು ಬಂದಿದೆ.


ಹಿರೇಹಡಗಲಿ ಶಾಸನವು ಮಯಿದವೋಲು ಶಾಸನದಂತೆ ಪಲ್ಲವ ಶಿವಸ್ಕಂಧವರ್ಮನ ಕಾಲದ್ದೇ ಆಗಿದ್ದರೂ ಇದರ ಮೇಲೆ ಸ್ಥಳೀಯ ಶಾತವಾಹನ ಅರಸರ ಲಿಪಿಗಳ ಪ್ರಭಾವ ಬಿದ್ದಿದೆ.



ಕಪಿಶಾ I.p. 374 ಹಿರೇಹಡಗಲಿ ಶಾಸನ ದೇ.ಕೊ. ರೆಡ್ಡಿ

ಈ ಶಾಸನದಲ್ಲಿಯೂ ಅಕ್ಷರಗಳ ಬಳಕೆಯಲ್ಲಿ ಏಕತಾನತೆಯಿಲ್ಲ. ಒಂದೇ ಅಕ್ಷರವನ್ನು ಮಯಿದವೋಲು ಶಾಸನದಲ್ಲಿನ ಅಕ್ಷರಗಳಿಗಿಂತ ಇವು ಸ್ವಲ್ಪ ಭಿನ್ನವಾಗಿದೆ. ಮಯಿದವೋಲು ಮತ್ತು ಕೊರಡಮುಡಿ ಶಾಸನಗಳಲ್ಲಿ ಮ ಮತ್ತು ಸ ಅಕ್ಷರಗಳು ಒಂದೇ ತೆರನಾಗಿದ್ದರೆ ಇದರಲ್ಲಿನ ಸ ಕಾರವು ಶಾತವಾಹನರ ಅಕ್ಷರದ ಮುಂದುವರಿಕೆಯಾಗಿದೆ. ಮ ಕಾರವೂ ಹಾಗೆಯೇ ಇದೆ. ಅ, ಕ, ರ ಅಕ್ಷರಗಳ ಕೆಳ ಭಾಗದ ಗೆರೆಯು ಎಡಮುಖಕ್ಕೆ ಬಾಗಿದ್ದು, ಸ್ವಲ್ಪ ಮೇಲಕ್ಕೆ ತಿರುಗಿವೆ. ಅಕ್ಷರಗಳ ತಲೆಗಳ ಮೇಲಿನ ತಲೆಕಟ್ಟುಗಳು ಸ್ವಲ್ಪ ಗಾಢವಾದ ಚುಕ್ಕೆಯಂತೆ ಕಾಣುತ್ತವೆ. ಅಕ್ಷರಗಳು ಗೆರೆಗೆರೆಗಳಲ್ಲಿವೆ. ಈ ಶಾಸನದ ಲಿಪಿಗಳಲ್ಲಿ ಣ ಕಾರವು ಭಿನ್ನವಾಗಿದೆ. ತಳಗಡೆಯ ಅಡ್ಡದ ಬಾಗು ಗೆರೆಯ ಎರಡೂ ಕಡೆಗೆ ಮೇಲಕ್ಕೆ ಬಂದಿರುವ ಗೆರೆಗಳು ಕ್ರಮವಾಗಿ ಬಲ ಮತ್ತು ಎಡಕ್ಕೆ ಬಾಗಿವೆ. ಈ ಬಗೆಯ ಬರೆವಣಿಗೆಗೆ ಪಲ್ಲವ ಅರಸರು ತಮ್ಮ ಶಾಸನಗಳಲ್ಲಿ ಬಳಸಿದ ಪ್ರಾಕೃತ ಮತ್ತು ಅರೆಸಂಸ್ಕೃತ ಭಾಷೆಯ ಮಿಶ್ರಣವೇ ಕಾರಣವೆನ್ನಬಹುದು. ಈ ಲಿಪಿಗಳ ಮುಂದಿನ ಬೆಳವಣಿಗೆಯನ್ನು ಕಾನುಕೊಲ್ಲಿನಲ್ಲಿ ದೊರೆತ ಸಾಲಂಕಾಯನ ದೊರೆ ಒಂದನೆಯ ನಂದಿವರ್ಮನ ಶಾಸನದಲ್ಲಿ ಕಾಣಬಹುದಾಗಿದೆ. ಆಂಧ್ರದ ವೆಂಗಿಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಈ ಅರಸನ ೧೪ನೆಯ ವರ್ಷದ ಶಾಸನದಲ್ಲಿ (EI.XXXI. p.4) ಅ, ಕ, ರ ಗಳ ಕೆಳ ಇಳಿಗೆರೆಗಳು ಮೇಲ್ಮುಖವಾಗಿ ತಿರುಗಿ ಸ್ವಲ್ಪ ಮೇಲಕ್ಕೆ ಅಂದರೆ ಅಕ್ಷರದ ಉದ್ದದ ನಾಲ್ಕನೇ ಒಂದು ಭಾಗದ ವರೆಗೆ ಬೆಳೆದಿದೆ. ಅ ಕಾರದ ಮೇಲ್ಮುಖದ ಎರಡೂ ಗೆರೆಗಳು, ಮ ಕಾರದ ಎರಡು ಗೆರೆಗಳ ಮೇಲೆ ತಲೆಕಟ್ಟನ್ನು ಸೂಚಿಸುವ ಸಣ್ಣ ಗೆರೆಗಳಿವೆ. ಯ ಕಾರದ ಮೂರೂ ಗೆರೆಗಳು ಮೇಲೆ ಸಮಾನ ಎತ್ತರದಲ್ಲಿದ್ದು ಮಧ್ಯದ ಗೆರೆಯ ಮೇಲೆ ಮಾತ್ರ ತಲೆಕಟ್ಟಿದೆ. ಎಡಭಾಗದ ಗೆರೆಯು ಅಕ್ಷರದ ಒಳಕ್ಕೆ ಸ್ವಲ್ಪ ಬಾಗಿದೆ. ಹಾಗೂ ಅಕ್ಷರ ಅಗಲವಾಗಿದೆ. ಗ ಕಾರದ ಮೇಲ್ಭಾಗ ತ್ರಿಕೋಣಾಕಾರವನ್ನು ಕಳೆದುಕೊಂಡಿದೆ. ಈ ಅಕ್ಷರದ ಎಡಭಾಗದ ಗೆರೆಯು ಒಳಕ್ಕೆ ಬಾಗಿದೆ. ತ ಮತ್ತು ನ ಗಳ ವ್ಯತ್ಯಾಸ ಬಹು ಕಡಿಮೆ. ತ ಕಾರದ ಕೆಳಗೆರೆಯು ಕೆಳಮುಖವಾಗಿ ಅರ್ಧಚಂದ್ರಾಕಾರವಾಗಿ ಬಾಗಿದೆ. ಅದರ ಮೇಲೆ ತಲೆಕಟ್ಟು ಗೆರೆ ಬಂದಿದೆ. ನ ಕಾರದಲ್ಲಿ ಕೆಳ ಗೆರೆ ಹೆಚ್ಚಾಗಿ ಬಾಗಿಲ್ಲ. ಮ ಮತ್ತು ಸ ಅಕ್ಷರಗಳು ಹಿರೇಹಡಗಲಿ ಶಾಸನದ ಅಕ್ಷರಗಳನ್ನು ಹೋಲುತ್ತವೆ. ವ ಕಾರದ ಒತ್ತಕ್ಷರವು ಮೈದವೋಲು ಮತ್ತು ಕೊರಡಮುಡಿ ಶಾಸನಗಳಲ್ಲಿನ ಮ ಕಾರವನ್ನು ನೆನಪಿಸುತ್ತದೆ. ಕಾಗುಣಿತಗಳಲ್ಲಿ ಆ ಕಾರದ ಕಾಗುಣಿತವು

ಅಕ್ಷರದಿಂದ ಬಲಭಾಗಕ್ಕೆ ಬೆಳೆದು ಕೆಳಕ್ಕೆ ಬಾಗಿದೆ. ಎ ಕಾರದ ಒತ್ತು ಅದಕ್ಕೆ ವಿರುದ್ಧವಾಗಿ ಬೆಳೆದು ಕೆಲವಡೆ ಒಳಮುಖವಾಗಿ ಬಾಗಿದೆ. ಇ ಕಾರದ ಕಾಗುಣಿತವು ಅರೆವೃತ್ತವನ್ನು ಸೃಷ್ಟಿಸಿದೆ ಹಾಗೂ ಗೆರೆಯು ಅಕ್ಷರದ ಎಡಕ್ಕೆ ಸ್ವಲ್ಪ ಇಳಿದಿದೆ.




EI. XXXI. p.4

ಸಾಲಂಕಾಯನಶಾಸನ

ದೇ.ಕೊ. ರೆಡ್ಡಿ

ದಾಮೋದರವರ್ಮನ ಮಟ್ಟೆಪಾಡು ಶಾಸನದಲ್ಲಿ ಮುಂದಿನ ಬೆಳವಣಿಗೆಯ ಅಕ್ಷರಗಳನ್ನು ಕಾಣುತ್ತೇವೆ. ಅ, ಕ, ರ ಗಳ ಕೆಳಮುಖ ಬೆಳೆದ ಗೆರೆ ಹಾಗೂ ಉ ಕಾರದ ಕಾಗುಣಿತವು ಅಕ್ಷರದ ಕಾಲುಭಾಗದವರೆಗೆ ಬೆಳೆದಿದೆ. ಗ ಕಾರವು ಒಳಭಾಗದಲ್ಲಿ ಇನ್ನು ಮೂಲೆಯನ್ನು ತೋರಿಸುತ್ತಿದೆ. ತ ಕಾರದ ತಳಭಾಗವು ಹಾಗೆಯೇ ಇದೆ. ಬ ಕಾರದ ಎಡಗೆರೆಯು ಒಳಕ್ಕೆ ಚೆನ್ನಾಗಿ ಬಾಗಿದೆ. ಯ ಕಾರದ ಎಡಗೆರೆಯ ಒಳಭಾಗಕ್ಕೆ ಬಾಗಿದೆ. ಮಧ್ಯಗೆರೆ ಹಾಗೂ ಬಲ ಗೆರೆಗಳು ಸಮನಾಗಿವೆ. ಲ ಕಾರದ ಮೇಲ್ಮುಖ ಬಾಗು ಗೆರೆಯು ಕೆಳಕ್ಕೆ ಬಾಗಿ ಅಕ್ಷರದ ಅರ್ಧಕ್ಕೆ ಬಂದಿದೆ.




EI. XVII.p 328

ಮಟ್ಟೆಪಾಡು ದಾಮೋದರ ವರ್ಮನ ಶಾಸನ


ಇಲ್ಲಿಂದ ಮುಂದೆ ಕ್ರಿ.ಶ.೫ನೆಯ ಶತಮಾನದ ಉರುವಪಲ್ಲಿಯ ಪಲ್ಲವ ವಿಷ್ಣುಗೋಪವರ್ಮನ ಶಾಸನದ ಅಕ್ಷರಗಳಲ್ಲಿ ಪೆಟ್ಟಿಗೆಗಳು ಕಾಣಬರುತ್ತವೆ. ಅಲ್ಲದೆ, ಅ, ಕ, ರ ಗಳ ಕೆಳಭಾಗವು ಕೆಳಕ್ಕೆ ಬೆಳೆದು ಬಲಕ್ಕೆ ಬಾಗಿ ಮತ್ತೆ ಮೇಲಕ್ಕೆ ಬಂದಿದೆ. ಹೀಗೆ ಬಾಗಿರುವ ಭಾಗದಲ್ಲಿ ಕದಂಬರ ಕಾಲದ ಲಕ್ಷಣಗಳಂತೆ ಚೌಕಾಕಾರವಾಗಿದೆ. ಆದರೆ ಕದಂಬರ ಕಾಲದ ಅಕ್ಷರಗಳಂತೆ ನೀಳವಾಗಿಲ್ಲ. ಅಗಲವಾಗಿವೆ. ಉ ಕಾರದ ತಲೆಯ ಮೇಲೆ ಸಣ್ಣ ತಲೆಕಟ್ಟಿದೆ. ಣ ಕಾರದ ಮೇಲಿನ ಎಡಗೆರೆಯು ಅಕ್ಷರದ ಒಳಭಾಗಕ್ಕೆ ಬಾಗಿದೆ. ಥ ಮತ್ತು ಧ ಗಳು ಒಂದೇ ತೆರನಾಗಿದ್ದರೂ ಥ ಕಾರದ ಒಳಗೆ ಬಲಗೆರೆಗೆ ತಾಕಿದಂತೆ ಸಣ್ಣ ಗೆರೆ ಬಂದಿದೆ. ಣ ಅಕ್ಷರದ

ತಳಭಾಗ ಅಗಲವಾಗಿದೆ. ಲ ಕಾರದ ಗೆರೆ ಅಕ್ಷರದ ಸಮಕ್ಕೆ ಕೆಳಕ್ಕೆ ಬಂದಿದೆ. ಶ ಕಾರದ ಒಳಗೆರೆಯು ಎರಡೂ ಗೆರೆಗಳನ್ನು ಸೇರಿಸಿಲ್ಲ. ಅದಕ್ಕೆ ಬದಲಾಗಿ ಒಳಗೆರೆಯು ಕೆಳಮುಖವಾಗಿ ಇಲ್ಲವೇ ಮೇಲ್ಮುಖವಾಗಿ ಬಾಗಿದೆ. ಷ ಕಾರದಲ್ಲಿಯೂ ಅಕ್ಷರದ ಒಳಭಾಗದ ಗೆರೆಯು ಬಲಗೆರೆಗೆ ತಾಗಿದಂತೆ ಕೆಳಕ್ಕೆ ಬಾಗಿದೆ. ಉಳಿದಂತೆ ಪ, ಹ, ಷ ಗಳ ಬೆಳವಣಿಗೆಗೆ ಹಾಗೆಯೇ ಇದೆ. ಇದೇ ವಂಶದ ಸಿಂಹವರ್ಮನ ಶಾಸನಗಳಲ್ಲಿ ಈ ಲಿಪಿಯ ಲಕ್ಷಣಗಳು ಅಲ್ಪ ಸ್ವಲ್ಪ ಮುಂದುವರಿದರೂ ಪೆಟ್ಟಿಗೆಯ ತಲೆಕಟ್ಟುಗಳಿಲ್ಲ ಹಾಗೂ ಚೌಕಾಕಾರದ ರೂಪಗಳೂ ಇಲ್ಲ.



EI. XXIV. p.51


ಸಿರಿಪುರಂ ಅನಂತವರ್ಮನ ಶಾಸನ




EI. III p.128 **ಅಚುತಾಪುರಂ ಇಂದ್ರವರ್ಮನ ಶಾಸನ** ದೇ.ಕೊ. ರೆಡ್ಡಿ

ಇದೇ ಪಲ್ಲವರ ಲಿಪಿಯನ್ನು ಕ್ರಿ.ಶ.೫–೬ನೆಯ ಶತಮಾನದಲ್ಲಿ ಕಲಿಂಗದ ಅರಸರು ಬಳಸಿದರು. ಸಿರಿಪುರಂನ ಕಲಿಂಗದ ಅರಸ ಅನಂತವರ್ಮನ ಶಾಸನದಲ್ಲಿ ಕ ಮತ್ತು ರ ಗಳಲ್ಲಿ ಕೆಳಬಾಗಿದ ರೇಖೆಗಳಲ್ಲಿ ಚೌಕಾಕಾರದ ಛಾಯೆ ಕಂಡುಬರುತ್ತದೆ. ಹಾಗು ತಲೆಕಟ್ಟುಗಳ ಮೇಲೆ ದಟ್ಟವಾದ ತಲೆಕಟ್ಟಿದೆ. ದ, ಪ, ಮ, ವ, ಷ, ಹ ಮುಂತಾದ ಅಕ್ಷರಗಳ ತಳಭಾಗವು ಒಳಕ್ಕೆ ಬಾಗಿದೆ. ಕಾಗುಣಿತಗಳ ಗೆರೆಗಳು ದೀರ್ಘವಾಗಿದ್ದು ಕೆಳಕ್ಕೆ ಉದ್ದವಾಗಿ ಬಾಗಿವೆ. ಇ ಕಾರವು ಸುರುಳಿಯಾಗಿದೆ. ಈ ಕಾರದ ದೀರ್ಘವು ಸುರುಳಿಯಲ್ಲಿ ಮತ್ತೊಂದು ಸುರುಳಿ ಸುತ್ತಿದೆ. ಉಳಿದ ಅಕ್ಷರಗಳ ಕಾಗುಣಿತವು ಹಿಂದಿನ ನಿಯಮಗಳಂತೆ ಮುಂದುವರಿದಿದೆ. ಈ ಶಾಸನದಲ್ಲಿ ಶಕಟರೇಫದ ಪ್ರಯೋಗವಿದ್ದು ಅದು ಉಪಧ್ಮಾನೀಯವಾಗಿ ಬಳಕೆಯಾಗಿದೆ. ಅಚ್ಯುತಾಪುರಂನ ಶಾಸನದಲ್ಲಿ ಈ ಲಿಪಿಯ ಮುಂದುವರಿಕೆಯನ್ನು ಕಾಣಬಹುದು ಹಾಗೂ ಶಾಸನ ಲಿಪಿ ಚೌಕಾರಕ್ಕೆ ತಿರುಗುತ್ತಿರುವುದನ್ನು ಗಮನಿಸಬಹುದು.

ವಿಷ್ಣುಕುಂಡಿ ಅರಸನಾದ ಇಂದ್ರವರ್ಮನ ರಾಮತೀರ್ಥದ ಶಾಸನದಲ್ಲಿ ಪಲ್ಲವರು ಬಳಸಿದ ದಕ್ಷಿಣದ ಲಿಪಿಯ ಛಾಯೆ ಸ್ಪಷ್ಟವಾಗಿದೆ. ತಲಕಾಡಿನ ಗಂಗರ ತಾಮ್ರಶಾಸನಗಳ ಲಿಪಿಯನ್ನು ಬಹುಮಟ್ಟಿಗೆ ಇದು ಹೋಲುತ್ತದೆ. ಅ, ಕ, ರ ಗಳು ಉದ್ದವಾಗಿಲ್ಲ, ಅಕ್ಷರಗಳ ಸಮಕ್ಕೆ ಇವೆ. ಗ ಮತ್ತು ಶ ಗಳ ಎಡಗೆರೆಗಳ ತುದಿ ಒಳಕ್ಕೆ ಬಾಗಿವೆ. ಗೆರೆಗಳಂತಹ ತಲೆಕಟ್ಟುಗಳು ಎದ್ದು ಕಾಣುವಂತಹ ಗೆರೆಗಳನ್ನು ಹೊಂದಿವೆ. ಹಿಂದೆ ಹೇಳಿದಂತೆ ತಲಕಾಡಿನ ಗಂಗರ ಅಕ್ಷರಗಳ ರೂಪವನ್ನು ಬಹುತೇಕವಾಗಿ ಹೊಂದಿವೆ. ಪಲ್ಲವ ನರಸಿಂಹವರ್ಮನ ರೇಯೂರು ಶಾಸನದಲ್ಲಿ ಪಲ್ಲವರ ಕನ್ನಡ-ತೆಲುಗು ಲಿಪಿಯ ಮುಂದುವರಿದ ರೂಪವನ್ನು ಕಾಣಬಹುದಾಗಿದೆ. ಅ ಕಾರವು ಪೂರ್ಣವೃತ್ತಾಕಾರಕ್ಕೆ ಬಂದಿದೆ. ಕ ಮತ್ತು ರ ಗಳು ವಿಕಾಸವಾಗಿ ಕೆಳಮುಖವಾಗಿ ಬೆಳೆದ ಗೆರೆಗಳು ಅಡ್ಡಗೆರೆಯನ್ನು ಅಥವಾ ತಲೆಕಟ್ಟನ್ನು ಸೇರಿವೆ. ಅಕ್ಷರಗಳು ಆಕರ್ಷಕ ರೂಪಗಳನ್ನು ಪಡೆದಿವೆ. ಧ, ಥ ಇವು ಒಂದು ಪ್ರಮುಖ ಹಂತಕ್ಕೆ ಬಂದಿವೆ. ಯ ಕಾರವು ಆರಂಭದಲ್ಲಿ ಸಣ್ಣ ವೃತ್ತವನ್ನು ಹೊಂದಿದೆ. ಏ, ಚ, ಮ, ವ ಗಳು ಇನ್ನು ಬಾಯಿ ಬಿಟ್ಟಿಲ್ಲ, ತಲೆಕಟ್ಟುಗಳು ಬೇಕೆ ಬೇಕೆನ್ನುವಷ್ಟು ಮಟ್ಟಿಗೆ ಬಳಕೆಯಾಗಿವೆ. ಗ ಮತ್ತು ಶ ಕಾರಗಳ ಎಡಗೆರೆಗಳ ತುದಿಯಲ್ಲಿ ವೃತ್ತಾಕಾರ ಬಂದಿದೆ. ಕಾಗುಣಿತಗಳಲ್ಲಿ ಆ ಮತ್ತು ಏ ಗಳಲ್ಲಿ ಒಂದೇ ಸಾಮ್ಯತೆ ಇದೆ. ಇ ಕಾರ ವೃತ್ತಾಕಾರವಾಗಿದೆ. ಈ ಕಾರದ ಗುಣಿತದ ವೃತ್ತಾಕಾರದೊಳಗೆ ಚಿಕ್ಕ ಸುರುಳಿ ಇದೆ. ಉಳಿದವು ಹಿಂದಿನ ನಿಯಮದಂತೆಯೇ ಮುಂದುವರಿದಿವೆ. ಸಂಸ್ಕೃತ ಭಾಷಾ ಶಾಸನವಾದ್ದರಿಂದ ಅರೆ 'ಮ' ಮತ್ತು ರ ಕಾರದ ಪ್ರಯೋಗವಿದೆ.



EI. XII. p. 134 ವಿಷ್ಣುಕುಂಡಿ ಅರಸನ ರಾಮತೀರ್ಥಂ ಶಾಸನ ದೇ.ಕೊ. ರೆಡ್ಡಿ



EI.XXIX p. 96 ರೇಯೂರು ಶಾಸನ ದೇ.ಕೊ. ರೆಡ್ಡಿ

ಗಂಗ-ರಾಷ್ಟ್ರಕೂಟ ಲಿಪಿ

ಕ್ರಿ.ಶ.೭೫೭ರಲ್ಲಿ ಬಾದಾಮಿ ಚಲುಕ್ಯರನ್ನು ಮೂಲೆಗೆ ತಳ್ಳಿ ಅವರ ಮಾಂಡಲೀಕರಾಗಿದ್ದ ರಾಷ್ಟ್ರಕೂಟರು ತಾವೇ ಅಧಿಕಾರಕ್ಕೆ ಬಂದರು. ದಕ್ಷಿಣದಲ್ಲಿ ಚಲುಕ್ಯರ ಮಾಂಡಲೀಕರಾಗಿದ್ದ ತಲಕಾಡಿನ ಗಂಗರು ಚಲುಕ್ಯರನ್ನು ಮೂಲೆಗೆ ತಳ್ಳಿದ ರಾಷ್ಟ್ರಕೂಟರನ್ನು ವಿರೋಧಿಸಿದರು. ಆಗ ತಲಕಾಡಿನ ಗಂಗರ ರಾಜನಾಗಿದ್ದವನು ಶ್ರೀಪುರುಷ. ಇವನು, ಇವನ ಮಕ್ಕಳು ಸೇರಿ ಅನೇಕ ಕಡೆಗಳಲ್ಲಿ ರಾಷ್ಟ್ರಕೂಟರನ್ನು ಎದುರಿಸುತ್ತಾರೆ. ಈ ಯುದ್ಧದಲ್ಲಿ ಭಾಗವಹಿಸಿದ ಗಂಗರ ದಂಡನ್ನು 'ಪನ್ನಿರ್ವರ ದಂಡು' ಎಂದು ಕರೆದಿರುತ್ತಾರೆ. ಈ ಯುದ್ಧವು ಎರಡೂ ರಾಜಮನೆತನಗಳ ಕಡೆ ಸೋಲು ಗೆಲುವುಗಳ ನಡುವೆ ಸಾಗುತ್ತದೆ. ಮುಂದೆ ರಾಷ್ಟ್ರಕೂಟರಲ್ಲಿ ಒಂದನೆಯ ಅಮೋಘವರ್ಷನು ಪಟ್ಟಕ್ಕೆ ಬಂದ ಮೇಲೆ ಗಂಗರಾಜ ಒಂದನೆಯ ಬೂತುಗನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಸಂಬಂಧವನ್ನು ಏರ್ಪಡಿಸುವ ಮೂಲಕ ಘರ್ಷಣೆಯನ್ನು ಕೊನೆಗಾಣಿಸುತ್ತಾನೆ. ಇಲ್ಲಿಂದ ಮುಂದೆ ಗಂಗರು ರಾಷ್ಟ್ರಕೂಟರ ನಿಷ್ಠಾವಂತರು ಹಾಗೂ ಸಂಬಂಧಿಗಳೂ ಆಗುತ್ತಾರೆ. ಗಂಗರ ಹೆಣ್ಣನ್ನು ರಾಷ್ಟ್ರಕೂಟರೂ, ರಾಷ್ಟ್ರಕೂಟರ ಹೆಣ್ಣುಮಕ್ಕಳನ್ನು ಗಂಗರೂ ಮದುವೆಯಾಗುತ್ತಾರೆ. ಈ ಸಂಬಂಧಗಳು ಗಂಗರ ಮತ್ತು ರಾಷ್ಟ್ರಕೂಟರ ರಾಜ್ಯಾಡಳಿತ ಅಸ್ತಂಗತವಾಗುವವರೆಗೆ ನಡೆಯುತ್ತವೆ.

ಗಂಗರು ಬಲಿಷ್ಠ ಮಾಂಡಲೀಕರಾದ್ದರಿಂದ ರಾಷ್ಟ್ರಕೂಟರು ರಾಜ್ಯದ ದಕ್ಷಿಣದ ಗಡಿಗಳ ಬಗ್ಗೆ ನಿಶ್ಚಿಂತೆಯಿಂದಿರುತ್ತಾರೆ. ಎರಡೂ ರಾಜ್ಯಗಳ ಆಳ್ವಿಕೆಯಲ್ಲಿ ಕೆಲವು ಯುದ್ಧಗಳನ್ನು ಬಿಟ್ಟರೆ ಶಾಂತಿ–ನೆಮ್ಮದಿಯಿರುತ್ತದೆ. ಹೀಗಾಗಿ ಬೃಹತ್ ವಾಸ್ತುರಚನೆಗಳು ಇವರ ಕಾಲದಲ್ಲಿ ನಡೆದಿವೆ. ಧರ್ಮಗಳೂ ಸಹ ಅನ್ಯೋನ್ಯತೆಯಿಂದ ಇದ್ದವು. ದಕ್ಷಿಣದಲ್ಲಿ ಪಲ್ಲವರು, ಉತ್ತರದಲ್ಲಿ ನರ್ಮದಾ ನದಿ ಇವರ ಸ್ಥಿರ ಎಲ್ಲೆಗಳಾಗಿರುತ್ತವೆ. ಅನೇಕ ವೇಳೆ ನರ್ಮದೆಯನ್ನು ದಾಟಿ ಇನ್ನೂ ಮುಂದೆ ಹೋಗಿರುವುದುಂಟು. ಒಂದನೆಯ ಕೃಷ್ಣ, ಒಂದನೆಯ ಅಮೋಘವರ್ಷ, ಮೂರನೆಯ ಗೋವಿಂದ, ಮೂರನೆಯ ಕೃಷ್ಣ ಇವರು ರಾಷ್ಟ್ರಕೂಟ ಅರಸರಲ್ಲಿ ಬಹು ಪ್ರಮುಖರು. ಗಂಗರಲ್ಲಿ ರಾಷ್ಟ್ರಕೂಟರ ಆಳ್ವಿಕೆ ಕಾಲದಲ್ಲಿ ಇಮ್ಮಡಿ ರಾಚಮಲ್ಲ, ಎರಡನೆಯ ನೀತಿಮಾರ್ಗ, ಇಮ್ಮಡಿ ಬೂತುಗ ಮತ್ತು ಇಮ್ಮಡಿ ಮಾರಸಿಂಹರು ಗಮನಾರ್ಹ ಅರಸರು. ಇಮ್ಮಡಿ ಬೂತುಗನ ಕಾಲದಲ್ಲಿ ಇವರ ರಾಜ್ಯ ತುಂಗಭದ್ರೆಯನ್ನು ದಾಟಿ ಬೆಳ್ವೊಲದವರೆಗೆ ಹರಡುತ್ತದೆ. ಅಂದರೆ ಕರ್ನಾಟಕದ ನಾಲ್ಕನೇ ಮೂರು ಭಾಗ ಇವರ ವಶದಲ್ಲಿತ್ತು. ತಮಿಳುನಾಡಿನ ಕೊಂಗುನಾಡಿನಿಂದ ಬೆಳ್ವೊಲದವರೆಗೆ ಗಂಗರ ಶಾಸನಗಳು ದೊರೆತಿವೆ.


ರಾಷ್ಟ್ರಕೂಟರು ತಾವು ಆಳುತ್ತಿದ್ದ ಪ್ರದೇಶದಲ್ಲಿ ಶಾಸನಗಳನ್ನು ಬರೆಸಿರುತ್ತಾರೆ. ಇವರ ಬಹಳಷ್ಟು ತಾಮ್ರಶಾಸನಗಳು ಆ ಕಾಲದ ನಾಗರಿ ಲಿಪಿಯಲ್ಲಿವೆ. ಹಾಗೂ ಸಂಸ್ಕೃತ ಭಾಷೆಯಲ್ಲಿವೆ. ಮೂರನೆಯ ಗೋವಿಂದನ ತಾಮ್ರಪಟ, ಕಡಬದ ಶಾಸನ ಮುಂತಾದವು ಕನ್ನಡ ಲಿಪಿ ಕನ್ನಡ ಭಾಷೆಯಲ್ಲಿವೆ. ಆದರೆ ಶಿಲಾಶಾಸನಗಳು ಇದಕ್ಕೆ ವಿರುದ್ಧವಾಗಿ ಕನ್ನಡ ಲಿಪಿಯಲ್ಲಿವೆ. ಗಂಗರ ತಾಮ್ರಶಾಸನಗಳು ಕನ್ನಡ ಲಿಪಿಯಲ್ಲಿದ್ದು ಅರ್ಧದವರೆಗೆ ಸಂಸ್ಕೃತ ಭಾಷೆಯಲ್ಲೂ, ಅನಂತರ ಕನ್ನಡದಲ್ಲಿಯೂ ಇವೆ. ಕೆಲವು ಪೂರ್ಣವಾಗಿ ಕನ್ನಡ ಲಿಪಿ, ಕನ್ನಡ ಭಾಷೆಯಲ್ಲಿಯೇ ಇವೆ. ಅನೇಕ ಶಿಲಾಶಾಸನಗಳಲ್ಲಿನ ಭಾಷೆ ಗ್ರಾಮ್ಯವಾಗಿದ್ದು ಇಂದಿಗೂ ಕೆಲವು ಪದಗಳಿಗೆ ಅರ್ಥವೇ

ತಿಳಿದಿಲ್ಲ. ಎರಡೂ ವಂಶಗಳ ವೀರಗಲ್ಲು ಶಾಸನಗಳು ಕರ್ನಾಟಕದ ಈ ಪರಂಪರೆಯ ಶಿಲ್ಪಗಳಲ್ಲಿ ಸಾಟಿಯಿಲ್ಲದಂತಿವೆ. ಬೆಟಗೇರಿ, ಮಾವಳಿ, ಬೇಗೂರು ವೀರಗಲ್ಲುಗಳು ಈ ಸಾಲಿಗೆ ಸೇರುತ್ತವೆ.

ಎರಡೂ ವಂಶಗಳು ಅನ್ಯೋನ್ಯವಾಗಿದ್ದುದರಿಂದ ಈ ಉಪ ಅಧ್ಯಾಯದಲ್ಲಿ ಇವರ ಕಾಲದ ಲಿಪಿಗಳನ್ನು ಗಂಗ-ರಾಷ್ಟ್ರಕೂಟ ಲಿಪಿ ಎಂದೇ ಹೆಸರಿಸಲಾಗಿದೆ. ರಾಷ್ಟ್ರಕೂಟರ ಮನೆ ಮಾತು ಕನ್ನಡವಾಗಿತ್ತೆಂಬುದಕ್ಕೆ ಧ್ರುವನ ಶಾಸನವು ನಾಗರಿ ಲಿಪಿಯಲ್ಲಿದ್ದು ಇವನ ಸಹಿ ಕನ್ನಡದಲ್ಲಿಯೇ ಇದೆ. ಮೂರನೆಯ ಕೃಷ್ಣನು ಮಧ್ಯಪ್ರದೇಶದಲ್ಲಿ ಕನ್ನಡ ಶಾಸನ ಬರೆಸಿರುತ್ತಾನೆ.

ಕ್ರಿ.ಶ.೭೫೬ರಿಂದ ೭೭೪ರ ವರೆಗೆ ರಾಜ್ಯಭಾರ ಮಾಡಿದ ಒಂದನೆಯ ಕೃಷ್ಣನ ಕಾಲದ ಹತ್ತಿಮತ್ತೂರು ಶಾಸನದಲ್ಲಿ ಲಿಪಿಗಳಲ್ಲಿ ಅ, ಕ, ರ ಅಕ್ಷರಗಳು ಒಂದು ಹಂತದ ಬೆಳವಣಿಗೆಯನ್ನು ಹೊಂದಿವೆ. ಅ ಕಾರವು ವೃತ್ತಾಕಾರವಾಗಿ ಕಂಡುಬಂದರೆ ಕ ಮತ್ತು ರ ಗಳು ಹಾಗೂ ತಲೆಕಟ್ಟಿಗೆ ಸೇರಿಕೊಂಡಿವೆ. ಊ ಕಾರವು ಟ ಕಾರದ ಮಧ್ಯೆ ಗೆರೆಯೊಂದು ಹೊರಬಂದಂತೆ ಬಿಡಿಸಿದೆ. ಶ್ರೀ ಎಂಬ ಶಬ್ದದಲ್ಲಿ ರ ಕಾರದ ಒತ್ತು, ಅಕ್ಷರದ ಅರ್ಧಕ್ಕೆ ಬೆಳೆದಿದೆ. ಥ ಕಾರದ ಒಳಗೆ ಬಲ ಗೆರೆಗೆ ಅಂಟಿಕೊಂಡಂತೆ ಒಳಗಡೆ ಬಾಗಿದ ಗೆರೆ ಬಂದಿದೆ. ಯ ಕಾರದ ಎಡಭಾಗದ ಒಳಗಡೆಗೆ ಬಾಗಿದೆ. ಲ ಕಾರದ ಮೇಲ್ಮುಖವಾಗಿ ಬೆಳೆದ ಗೆರೆಯು ಕೆಳಕ್ಕೆ ಬಾಗಿ ಅಕ್ಷರದ ಕೆಳಕ್ಕೆ ಬಂದಿದೆ. ಇ ಕಾರದ ಮೇಲ್ಭಾಗವು ಬಳ್ಳಿಯಂತೆ ಅರ್ಧವೃತ್ತಾಕಾರವಾಗಿ ಬಾಗಿದೆ. ಎರಡೂ ಗೆರೆಗಳ ಅಂತ್ಯವು ಒಳಕ್ಕೆ ಬಾಗಿವೆ. ಕೆಳಗಡೆ ಎರಡು ಚುಕ್ಕೆಗಳು ಇವೆ. ಶಕಟರೇಫವು ವೃತ್ತಾಕಾರದೊಳಗೆ ಅಡ್ಡ-ಉದ್ದಗೆರೆಗಳನ್ನು ಹೊಂದಿದೆ. ಅಕ್ಷರದ ಮೇಲ್ಭಾಗ ಮತ್ತು ಕೆಳಭಾಗವು ಒಳಕ್ಕೆ ಬಾಗಿದೆ. ೞ ದ ಪ್ರಯೋಗ ಈ ಶಾಸನದಲ್ಲಿ ಬಂದಿದೆ. ಎರಡು ವೃತ್ತಗಳು ಒಂದನ್ನೊಂದು ತಾಕಿದಂತೆ ಇದೆ. ಆ ಕಾರದ ಕಾಗುಣಿತವು ಅಕ್ಷರದ ಬಲಬದಿಗೆ ಬಂದು ಅಕ್ಷರದ ಸರಿಸುಮಾರು ಅರ್ಧದವರೆಗೆ ಬಾಗಿದೆ. ಇ ಕಾರದ ಗುಣಿತವು ವೃತ್ತಾಕಾರವಾಗಿದೆ. ಈ ಕಾರದ ಗುಣಿತದ ವೃತ್ತಾಕಾರದೊಳಗೆ ಒಳಕ್ಕೆ ಬಾಗಿದ ಚಿಕ್ಕ ಗೆರೆ ಇದೆ.

ಮುಂದೆ ಕ್ರಿ.ಶ.೮೦೪ರ ಮುಮ್ಮಡಿ ಗೋವಿಂದನ ತಾಮ್ರಶಾಸನ ಗಮನಾರ್ಹವಾದುದು. ಪೂರ್ಣ ಕನ್ನಡ ಭಾಷೆಯಲ್ಲಿದ್ದು ಶಾಪಾಶಯ ಮತ್ತು ಲಿಪಿಕಾರನ ಹೆಸರು ಸಂಸ್ಕೃತ ಭಾಷೆಯಲ್ಲಿವೆ. ಶಾಸನದಲ್ಲಿನ ಶ್ರೀ ಅಕ್ಷರವು ಅಲಂಕಾರಯುಕ್ತವಾಗಿದೆ. ಅ, ಕ, ರ ಅಕ್ಷರಗಳ ಕೆಳಭಾಗವು ಉದ್ದವಾಗಿದೆ. ಅ ಕಾರದ ಮೇಲಕ್ಕೆ ಸಾಗಿದ ಗೆರೆ ಅ ಕಾರದ ತಲೆಗಿಂತ ಸ್ವಲ್ಪ ಮುಂದೆ ಸಾಗಿದೆ. ಕ ಮತ್ತು ರ ಗಳಲ್ಲಿ ಕ ಕಾರವು ಮಧ್ಯದ ಗೆರೆಗೆ ತಾಗಿದೆ. ರ ಕಾರವು ಮೇಲಿನ ತಲೆಕಟ್ಟಿಗೆ ಸೇರಿದೆ. ಶ್ರೀ ಕಾರದ ರ ಕಾರವು ಶ ಕಾರದ ಹಣೆಗೆ ಸಮೀಪ ಬಂದಿದೆ. ಇ ಕಾರದ ಕೆಳಭಾಗ ಚುಕ್ಕೆಗಳು ಚಿಕ್ಕ ಸೊನ್ನೆಗಳಾಗಿವೆ. ಎ ಕಾರದ ಮೇಲಿನ ಗೆರೆ ಸ್ವಲ್ಪ ಬಲಕ್ಕೆ ಬಾಗಿದೆ. ಕೆಳಗಡೆಯ ಹೊಟ್ಟೆಯು ಸ್ವಲ್ಪ ದೀರ್ಘವಾಗಿದೆ. ಚ ಕಾರವು ವ ಕಾರದಂತೆ ಇದ್ದರೂ ವ ಕಾರಕ್ಕಿಂತ ದೊಡ್ಡದಾಗಿದೆ. ಜ ಕಾರದ ಕೆಳಭಾಗದ ಗೆರೆಯು ಸ್ವಲ್ಪ ಬಾಗಿದೆ. ಈ ಕಾರದ ಕೆಳ ಬಾಗಿದ ಗೆರೆ ಮೇಲಕ್ಕೆ ಸಾಗಿದ್ದು ಅದರ ಉದ್ದ ಕಡಿಮೆಯಾಗಿ ಶಾಸನದ ಸಾಲಿನ ನೇರಕ್ಕೆ ಬಂದಿದೆ. ಣ ಕಾರವು ನ ಕಾರದ ತಲೆಕಟ್ಟಿನಿಂದ ಎಡಕ್ಕೆ ಬೆಳೆದ ಗೆರೆಯು ಕೆಳಕ್ಕೆ ಬಾಗಿ ಒಳಕ್ಕೆ ತಿರುಗಿದೆ. ಬಲಕ್ಕೆ ಬೆಳೆದ ಗೆರೆಯು ಕೆಳಮುಖವಾಗಿ ಬೆಳೆದು ಅಕ್ಷರದ ಸಮಕ್ಕೆ ಬೆಳೆದಿದೆ. ತ ಕಾರದ




ಮುಮ್ಮಡಿ ಗೋವಿಂದನ ತಾಮ್ರಪಟ ದೇ.ಕೊ. ರೆಡ್ಡಿ

ಕೆಳಗೆರೆಯು ಎಡಮುಖದಲ್ಲಿ ಅಕ್ಷರದ ಒಳಕ್ಕೆ ಬಾಗಿದ್ದು, ಬಲಗಡೆಯ ಅಂಚು ಅಕ್ಷರದ ಕೆಳಗೆ ಸುತ್ತಿ ಮುಕ್ಕಾಲು ಸುತ್ತು ಬಂದಿದೆ. ಧ ಕಾರವು ಈಗಿನ ರೂಪಕ್ಕೆ ಸಮೀಪ ಬಂದಿದ್ದು ಸಣ್ಣ ತಲೆಕಟ್ಟು ದೊರೆತಿದೆ. ಪ ಕಾರದ ತಳಭಾಗ ಅಥವಾ ಇಂತಹ ಅಕ್ಷರಗಳ ತಳಭಾಗವು ಸ್ವಲ್ಪ ಮಾತ್ರ ಬಾಗಿದೆ. ಬ ಕಾರದ ಎಡಭಾಗದ ಬಾಗುವಿಕೆ ಇಲ್ಲಿ ಮುಂದುವರಿದು ಬಾಗುವಿಕೆಯ ಸ್ಥಳದಿಂದ ಒಂದು ಸಣ್ಣ ಗೆರೆ ಮೇಲ್ಮುಖವಾಗಿ ಒಳ ಬಂದಿದೆ ಲ ಕಾರವು ಎರಡು ರೀತಿಯಲ್ಲಿ ಪ್ರಯೋಗವಾಗಿದೆ. ಒಂದು ಕಡೆ ಇದು ಪ್ರಯೋಗದಲ್ಲಿ ಇನ್ನೂ ಪ್ರಾಚೀನರೂಪವನ್ನು ಉಳಿಸಿಕೊಂಡಿದೆ. ಇದೇ ಅರಸನ ಲಕ್ಷ್ಮೇಶ್ವರ ಶಾಸನದಲ್ಲಿ ಅಕ್ಷರಗಳು ವಕ್ರವಕ್ರವಾಗಿದ್ದರೂ ವಿಶಾಲಾರ್ಥದಲ್ಲಿ ಇವು ಆ ಕಾಲದ ಲಕ್ಷಣಗಳನ್ನು ಉಳಿಸಿಕೊಂಡಿವೆ.

ಇದೇ ಅರಸನ ಸಮಕಾಲೀನನಾದ ಗಂಗ ಯುವರಾಜ ಮಾರಸಿಂಹನ ಕ್ರಿ.ಶ.೭೯೮ರ ಕೊಟ್ಟಿಂಬಾ ಶಾಸನದಲ್ಲಿ, ಮೂರನೆಯ ಗೋವಿಂದನ ತಾಮ್ರಪಟಗಳ ಲಿಪಿಯನ್ನೇ ಹೋಲುತ್ತವೆಯಾದರೂ ಅ ಕಾರದ ಉದ್ದ ಕಡಿಮೆಯಾಗಿ ಅಗಲ ಜಾಸ್ತಿಯಾಗಿದೆ. ಮತ್ತು ರ ಕಾರದ ಒತ್ತುಗಳನ್ನು ಹೊಂದಿರುವ ಎಲ್ಲಾ ಅಕ್ಷರಗಳಲ್ಲಿ ಅಂದರೆ ಗ, ತ, ಪ, ಶ್ರೀ ಮುಂತಾದವುಗಳಲ್ಲಿ ರ ಕಾರದ ಒತ್ತು ಅ ಕಾರದ ಗೆರೆಯ ಬೆಳವಣಿಗೆಯನ್ನು ಅನುಸರಿಸಿದೆ. ಈ ಗೆರೆಯು ಮೇಲಕ್ಕೆ ಸಾಗಿ ಅಕ್ಷರದ ನೇರಕ್ಕೆ ಬಂದು ಅಲ್ಲಿ ಅಕ್ಷರವನ್ನು ಸುತ್ತುವ ಬದಲಿಗೆ ಅಕ್ಷರದ ಒಳಕ್ಕೆ (ಬಲಗಡೆಗೆ) ಬಾಗಿ ಸುರುಳಿಯನ್ನು ಸೃಷ್ಟಿಸಿದೆ. ಬಹುಶಃ ಅ ಕಾರದ ಆರಂಭದ ಸುರುಳಿಗೆ ಇದು


ಚಿ.ಸಂ. ೭೩



ಗಂಗ ಯುವರಾಜ ಮಾರಸಿಂಹನ ಶಾಸನ

ಮೂಲವಾಗಿರಬೇಕು. ತಲೆಕಟ್ಟುಗಳು ಒಂದು ನಿರ್ದಿಷ್ಟಸ್ಥಾನಕ್ಕೆ ಬಂದಿವೆ. ಕ ಮತ್ತು ರ ಗಳು ಉದ್ದವ ಸ್ವಲ್ಪ ಭಾಗವನ್ನು ಕಾಪಾಡಿಕೊಂಡಿವೆ. ಖ ಕಾರವು ಇಂದಿನ ರೂಪಕ್ಕೆ ಸಮೀಪವಾಗಿದೆ. ಯ ಕಾರದ ಒತ್ತಕ್ಷರವು ಅಕ್ಷರದ ಕೆಳಭಾಗದಲ್ಲಿ ಅಕ್ಷರಕ್ಕಿಂತಲೂ ಮುಂದೆ ಬಂದು ಸಮಾನಾಂತರ ರೇಖೆಯೊಂದಿಗೆ ಅಕ್ಷರದ ಹಿಂಬದಿಗೆ ವಾಪಸ್ಸಾಗಿ ಅಕ್ಷರದ ಎತ್ತರಕ್ಕೆ ಬಂದಿದೆ. ಯ ಕಾರದ ಒತ್ತು ಬಂದಿರುವ ಕಡೆ ಆ ಕಾರದ ಕಾಗುಣಿತ ನೀಡುವಾಗ ಒತ್ತಕ್ಷರವನ್ನು ಗೆರೆಯ ಕೊನೆಯಲ್ಲಿ ಬಲಕ್ಕೆ ಬಾಗಿಸಿರುತ್ತಾರೆ. ಅನುಸ್ವಾರ ವಿಸರ್ಗಗಳು ಕೆಲವೆಡೆ ಚುಕ್ಕೆಗಳಾಗಿದ್ದರೆ ಕೆಲವೆಡೆ ಚಿಕ್ಕ ವೃತ್ತಗಳಾಗಿವೆ. ಒಟ್ಟಿನಲ್ಲಿ ಕರ್ನಾಟಕದ ಉತ್ತರ ಮತ್ತು ದಕ್ಷಿಣಗಳಲ್ಲಿ ಏಕರೀತಿಯ ಲಿಪಿಯ ಬಳಕೆಯಿದ್ದದ್ದು ತಿಳಿಯಬಹುದಾಗಿದೆ. ಇದೇ ಅವಧಿಯ ಇಮ್ಮಡಿ ಶಿವಮಾರನ ವಿಜಯಾಪುರ ಶಾಸನದಲ್ಲಿ ಕ ಮತ್ತು ರ ಗಳು ನೀಳವಾಗಿವೆ. ಉಳಿದ ಲಕ್ಷಣಗಳು ಮೇಲೆ ಉಲ್ಲೇಖಿಸಿದ ರೀತಿಯಲ್ಲಿವೆ.


ರಾಚಮಲ್ಲನ ಕ್ರಿ.ಶ.೮೧೯ರ ಪೆರ್ಜರಂಗಿ ಶಾಸನದಲ್ಲಿ ಅ, ಚ, ಭ ಗಳ ಬದಲಾವಣೆಯನ್ನು ಗಮನಿಸಿಬಹುದು. ಆ ಕಾರದ ಕೆಳಮುಖದ ಗೆರೆಯು ಮೇಲಕ್ಕೆ ಹೋಗಿ ಅಕ್ಷರದ ಸಮಕ್ಕೆ ಬಂದಂತೆ ಬಲಮುಖದ ಗೆರೆ ಅಂಟಿಕೊಂಡಿರುವ ಮೂಲ ಗೆರೆಗಳು ಗೌಣವಾಗಿ ಎರಡು ಗೆರೆಗಳೂ ಸೇರಿ ಒಂದು ಗೆರೆಯಾಗಿ ಕೆಳಮುಖಕ್ಕೆ ಬಾಗಿದ ಗರೆಯಾಗಿದೆ. ಚ ಕಾರದ ತಲೆಕಟ್ಟು ಗೆರೆ ಚಿಕ್ಕದಾಗಿ ಅದರ ಹೊಟ್ಟೆಯು ಅಡ್ಡಡ್ಡಕ್ಕೆ ಬೆಳೆದಿದೆ. ಭ ಕಾರವೂ ಸಹ ಅದರ



ಗಂಗ ಒಂದೆಯ ರಾಚಮಲ್ಲನ ಶಾಸನ ದೇ.ಕೊ. ರೆಡ್ಡಿ

ಅಗಲ ಜಾಸ್ತಿ ಮಾಡಿಕೊಂಡಿದೆ. ಲ ಕಾರದ ಗೆರೆಯು ಲ ಕಾರಕ್ಕೆ ಆ ಕಾರದ ಕಾಗುಣಿತ ನೀಡುವಾಗ ಪೂರ್ಣವಾಗಿ ಒಂದು ಸುತ್ತು ಬಂದು ಬಲಕ್ಕೆ ಬಾಗಿರುತ್ತದೆ. ಒತ್ತಕ್ಷರ ಬಂದಾಗಲೂ ಈ ಹಂತಕ್ಕೆ ಲ ಕಾರದ ಗೆರೆ ಬಂದಿರುತ್ತದೆ. ಶ್ರೀ ಕಾರದ ಗೆರೆಯ ಬೆಳವಣಿಗೆಗೆ ಒಂದು ಅಂತ್ಯ ಬಂದಿದೆ. ಒಂದನೆಯ ಅಮೋಘವರ್ಷನ ಕ್ರಿ.ಶ.೮೬೬ರ ಶಾಸನದಲ್ಲಿ (ನೀಲಗುಂದ) ಅ, ಕ, ರ, ಲ ಗಳು ಕ್ರಿ.ಶ.೮೦೦ ರಲ್ಲಿನ ಶಾಸನದ ಅಕ್ಷರಗಳ ಲಕ್ಷಣಗಳನ್ನು ಹೊಂದಿವೆ. ಬಹುಶಃ ಕಲಾಕಾರನಾದ ಲಿಪಿಕಾರನ ಕಾರಣದಿಂದ ಈ ಬರವಣಿಗೆ ರಚಿತವಾಗಿರಬೇಕು. ಈ ಶಾಸನದಲ್ಲಿ ಭ ಕಾರವು ಬದಲಾವಣೆಯನ್ನು ತೋರಿಸಿದೆ. ಇದಕ್ಕೆ ತಲೆಕಟ್ಟಿನ ಗೆರೆ ಇದ್ದು ಅದರ ಕೆಳಗಿನ ಗೆರೆ ಇಲ್ಲ, ನೇರವಾಗಿ ಅಕ್ಷರದ ಗೆರೆಗಳು ತಲೆಕಟ್ಟಿನಿಂದ ಆರಂಭವಾಗಿವೆ. ಎಡಭಾಗದ ಗೆರೆಯು ಮುಂದಕ್ಕೆ ಬೆಳೆದು ಕೆಳಕ್ಕೆ ಬಾಗಿ ಮತ್ತೆ ಬಲಗಡೆಗೆ ತಿರುಗಿದೆ. ಹಾಗೆಯೇ ಬಲಗಡೆಯ ಗೆರೆಯ ಕೆಳಭಾಗವು ಒಳಮುಖಕ್ಕೆ ತಿರುಗಿ ಮೇಲಕ್ಕೆ ತಿರುಗಿದೆ. ಯ ಕಾರದ ಆರಂಭದ ಸೊನ್ನೆ ದೊಡ್ಡದಾಗಿದೆ ಹಾಗೂ ಬೆಳವಣಿಗೆಯ ಒಂದು ಹಂತ ತಲುಪಿದೆ. ಳ ಕಾರದ ಕೆಳಭಾಗದಲ್ಲಿ


ಇಳಿದಿರುವ ಗೆರೆಯು ಈ ಶಾಸನದಲ್ಲಿ ಉದ್ದವಾಗಿದೆ. ಗ ಕಾರದ ಒಳಗಡೆ ಬಾಗಿದ್ದು ಎರಡೂ ಕಡೆಯ ಗೆರೆಗಳು ಇಲ್ಲಿಂದ ಮುಂದೆ ಕಾಣುತ್ತಿಲ್ಲ. ಗೆರೆಗಳು ನೇರವಾಗಿವೆ. ಕ್ರಿ.ಶ.ಸುಮಾರು. ೮೯೦ರ ಹೇಮಾವತಿಯ ನೊಳಂಬ ಮಹೇಂದ್ರನ ಶಾಸನದಲ್ಲಿನ ಅಕ್ಷರಗಳು ರಾಚಮಲ್ಲನ ಪರ್ಜರಂಗಿ ಶಾಸನದ ಅಕ್ಷರಗಳಂತೆಯೇ ಇದೆ. ಇವರು ಆರಂಭದಲ್ಲಿ ಗಂಗರ ಸಾಮಂತರಾಗಿದ್ದರು.



ಹೇಮಾವತಿಯ ಮಹೇಂದ್ರನ ಶಾಸನ

ದೇ.ಕೊ. ರೆಡ್ಡಿ

ಗಂಗ ಇಮ್ಮಡಿ ನೀತಿಮಾರ್ಗನ ಕ್ರಿ.ಶ.೯೦೪ರ ಗಟ್ಟವಾಡಿ ಶಾಸನದಲ್ಲಿ ಅ ಕಾರದ ಪ್ರಯೋಗವು ಒಂದೆರಡು ಕಡೆ ಇಂದಿನ ಅಕ್ಷರಕ್ಕೆ ಸಮೀಪವಾಗಿದೆ. ಜ ಕಾರವು ಹಿಂದಿನ ಅಖಂಡತೆಯನ್ನು ಛೇದಿಸಿಕೊಂಡು ಮೇಲ್ಭಾಗ ಮತ್ತು ಕೆಳಭಾಗವೆಂಬ ಎರಡು ಭಾಗಗಳಾಗಿವೆ. ಮಧ್ಯದ ಗೆರೆ ಯಾವ ಗೆರೆಗೂ ಸೋಕದೆ ಹಾಗೆಯೇ ಇದೆ. ಐ ಕಾರವೂ ಸಹ ಇದೇ ರೀತಿಯ ಬೆಳವಣಿಗೆಯನ್ನು ಹೊಂದಿದೆ. ಚ ಕಾರದ ಗೆರೆಗಳು ತಲೆಕಟ್ಟಿನಿಂದಲೇ ಆರಂಭವಾಗಿದ್ದು ಅಕ್ಷರವು ಅಗಲವಾಗಿರುವುದರ ಜೊತೆಗೆ ದಪ್ಪಗಿದೆ. ಭ ಕಾರವೂ ಇದೇ ರೀತಿಯ ಬೆಳವಣಿಗೆಯನ್ನು ಹೊಂದಿವೆ. ಣ ಕಾರದ ಎಡ ಬಾಗಿದ ಗೆರೆಯು ಮಧ್ಯದ ಗೆರೆಗೆ ಬಾಗಿ ಅಂಟಿಕೊಂಡಿದೆ. ಕೆಳಗಿನ ಗೆರೆಗೆ ಇದು ಅಂಟಿಕೊಂಡಿಲ್ಲ. ಪ, ಷ, ಹ ಗಳು ಒಂದೇ ರೀತಿ ಬೆಳವಣಿಗೆ ಹೊಂದಿದ್ದರೂ ಷ ಕಾರವು ಪ ಕಾರದ ಮಧ್ಯೆ ಅಡ್ಡಗೆರೆಯೊಂದು ಬಂದಿದ್ದು ಅದರ ಮೇಲೆ ತಲೆಕಟ್ಟಿನ ಗೆರೆ ಬಂದಿದೆ. ಬ ಕಾರದ ಬಾಗಿದ ಎಡಬದಿಯು ಬಾಯಿ ಬಿಟ್ಟಿದೆ. ಭ ಕಾರವನ್ನು ಕೆಲವೆಡೆ ತಲೆಕಟ್ಟಿಗೆ ಅಂಟದಂತೆ ಬೇರೆ ಬೇರೆ ಗೆರೆಗಳಲ್ಲಿ ಬರೆಯಲಾಗಿದೆ. ಜಿ ಮತ್ತು ಟಿ ಗಳು ತಮ್ಮ ಅಂತಿಮರೂಪದ ಬಹು ಸಮೀಪಕ್ಕೆ ಬೆಳೆದಿವೆ. ಈ ಕಾಲದ ಶಾಸನಗಳಲ್ಲಿನ ತಲೆಕಟ್ಟುಗಳು ಸ್ವಲ್ಪ ಉದ್ದವಾಗಿವೆ. ಕೋತೂರು ಶಾಸನದಲ್ಲಿ ತಲೆಕಟ್ಟಿನ ಬಲಭಾಗವು ಸ್ವಲ್ಪ ಮೇಲಕ್ಕೆ ಹೋಗಿದೆ. ಈ ಶಾಸನದಲ್ಲಿ ಶ್ರೀ ಕಾರವು ಎರಡು ಕಡೆ ಬಂದಿದ್ದು ಎರಡೂ ಕಡೆ ಭಿನ್ನವಾಗಿವೆ. ಇದೇ ಅರಸನ ಕೆರೆಗೋಡು




IWG. 199 ನೀತಿಮಾರ್ಗ-೨ ನ ಗಟ್ಟವಾಡಿ ಶಾಸನ ದೇ.ಕೊಂ.ರೆಡ್ಡಿ

ರಂಗಾಪುರದ ಶಾಸನದ ಅಕ್ಷರಗಳು ಅಲಂಕಾರವಾಗಿದ್ದು ಕ, ರ, ಉ ಕಾರದ ಕಾಗುಣಿತ, ಯ ಕಾರದ ಒತ್ತು, ರ ಕಾರದ ಒತ್ತನ್ನು ಅಲಂಕಾರಿಕವಾಗಿ ಬರೆಯಲಾಗಿದೆ. ವಿಶ್ವಕರ್ಮಾಚಾರ್ಯ ಬರೆದಿರುವುದರಿಂದ ಅಲಂಕಾರಿಕ ಲಿಪಿ ಉದಿಸಿದೆ. ಆದರೆ ಈ ಅಲಂಕಾರಿಕ ಲಿಪಿಯಿಂದ ಲಿಪಿಲಕ್ಷಣವನ್ನು ಗುರುತಿಸುವುದು ಕಷ್ಟಸಾಧ್ಯ. ಇಲ್ಲಿಂದ ಮುಂದೆ ತಾಮ್ರಶಾಸನಗಳನ್ನು ಅಲಂಕಾರವಾಗಿ ಬರೆಯುವ ಪದ್ಧತಿ ಮುಂದುವರಿಯುತ್ತದೆ. ಎರಡನೆಯ ನೀತಿಮಾರ್ಗನ ಕೆರೆಹಳ್ಳಿ ಶಾಸನ. ಮಾರಸಿಂಹನ ಕೂಡಲೂರು ಶಾಸನ, ಇದೇ ರಾಜನ ಕಾಡಲೂರು ತಾಮ್ರಶಾಸನ ಉಲ್ಲೇಖಿಸಬಹುದಾದ ಶಾಸನಗಳಾಗಿವೆ. ಈ ಶಾಸನಗಳ ಉಂಗುರಗಳಿಗೆ ಬಳಸಿರುವ ಮುದ್ರೆಗಳೂ ಸಹ ಸುಂದರವಾಗಿವೆ. ಹೀಗಾಗಿ ಬಳಕೆಯಲ್ಲಿದ್ದ ಲಿಪಿಯನ್ನು ಸುಂದರಗೊಳಿಸುವ ಪ್ರಕ್ರಿಯೆ ಈ ನೆಮ್ಮದಿಯ ಕಾಲದಲ್ಲಿ ನಡೆಯಿತು.

ಕ್ರಿ.ಶ. ೯೦೨ ಮುಳುಗುಂದ ಶಾಸನದಲ್ಲಿ ದಕ್ಷಿಣದ ಲಿಪಿಗಳಿಗಿಂತ ಭಿನ್ನವಾದ ಅಂದರೆ, ಅಕ್ಷರಗಳ ಕೆಳಮುಖ ಬೆಳವಣಿಗೆಯು ಚಿಕ್ಕದಾಗಿದ್ದು ಅಕ್ಷರಗಳ ಬೆಳವಣಿಗೆ ಅಡ್ಡಡ್ಡವಾಗಿವೆ. ತಲೆಕಟ್ಟುಗಳು ಚಿಕ್ಕದಾಗಿದ್ದು ಅಕ್ಷರಗಳಿಗೆ ಅಂಟಿಕೊಂಡಿವೆ. ಕ,ತ, ರ ಕಾರಗಳು ವೃತ್ತಾಕಾರಕ್ಕೆ ತಿರುಗಿವೆ ಈ ವ್ಯತ್ಯಾಸಕ್ಕೆ ಕಾರಣ ತಾಮ್ರ ಶಾಸನಗಳಲ್ಲಿ ನುರಿತ ಶಿಲ್ಪಿ ಕೆತ್ತಿದ್ದರೆ ಶಿಲಾಶಾಸನಗಳನ್ನು ಸಾಮಾನ್ಯ ವ್ಯಕ್ತಿ ಕೆತ್ತಿರುವುದು. ಈ ಕಾಲದ ರಾಷ್ಟ್ರಕೂಟರ ಶಾಸನಗಳಲ್ಲಿ ಈ ಲಿಪಿಗಳನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ.

ಕ್ರಿ.ಶ.ಸು.೯೪೮ರ ಮೂರನೆಯ ಕೃಷ್ಣನ ತಿರುಮಲೈಚ್ಚೇರಿ ಶಾಸನದ ಲಿಪಿಗಳಲ್ಲಿ ಕ, ರ ಗಳು ಇನ್ನೂ ಪೂರ್ಣ ವೃತ್ತಾಕಾರಕ್ಕೆ ತಿರುಗಿಲ್ಲ. ನ ಕಾರಕ್ಕೆ ನೀಡಿರುವ ಉ ಕಾರದ ಕಾಗುಣಿತವು ಅಕ್ಷರದ ಬಲಕ್ಕೆ ಬಂದಿದೆ. ಆ ಕಾರವು ಒಂದು ನಿಶ್ಚಿತರೂಪಕ್ಕೆ ಬಂದಿದೆ. ಉ ಕಾರದ ಕಾಗುಣಿತಗಳು ಅನೇಕ ಅಕ್ಷರಗಳಲ್ಲಿ ಇನ್ನೂ ಹಿಂದಿನ ರೀತಿಯಂತೆಯೇ ಇದೆ. ಎ ಕಾರದ ಕಾಗುಣಿತವು ಅಕ್ಷರದ ತಲೆಕಟ್ಟಿನ ಎಡಗಡೆಯಿಂದ ಆರಂಭವಾಗಿ ಗೆರೆಯೊಂದು ಬಲಕ್ಕೆ ತಿರುಗಿ ಕೆಳಕ್ಕೆ ಬಾಗಿ ಮತ್ತೆ ಮೇಲಕ್ಕೆ ಎದ್ದಿದೆ. ಇದೇ ಗೆರೆ ಮುಂದುವರಿದು ಮತ್ತೆ ಕೆಳಗೆ ಬಾಗಿ ಒ ಕಾರದ ಕಾಗುಣಿತದ ರೂಪ ಪಡೆದಿದೆ.

EI XIII P. 192




ಇಮ್ಮಡಿ ಕೃಷ್ಣನ ಮುಳಗುಂದ ಶಾಸನ

ಕ್ರಿ.ಶ.೧೦ನೆಯ ಶತಮಾನದ ಆರಂಭದಲ್ಲಿ ಬರೆದ ಈ ಲಿಪಿಗಳಲ್ಲಿ ಎದ್ದು ಕಾಣುವ ಭಾಗವೆಂದರೆ ತಲೆಕಟ್ಟುಗಳು ಮತ್ತು ಒತ್ತಕ್ಷರಗಳು. ಉಳಿದಂತೆ ಅಕ್ಷರಗಳ ಮುಖ್ಯಭಾಗವು ಚಿಕ್ಕದಾಗಿವೆ. ಕ, ರ ಗಳೂ ಸಹ ಚಿಕ್ಕದಾಗುತ್ತಾ ಬಂದಿವೆ. ತ ಕಾರದ ತಳಭಾಗ ಅರ್ಧ ಚಂದ್ರಾಕಾರವಾಗಿ ವೃತ್ತಾಕಾರವನ್ನು ಹೊಂದಿದೆ. ಶ್ರೀ ಕಾರದ ಬೆಳವಣಿಗೆಯೂ ಆಗಿದೆ. ರಾಚಮಲ್ಲನ ಕೋತೂರು ಶಿಲಾಶಾಸನದ ಶ್ರೀ ಕಾರವೇ ಮುಂದುವರಿದಿದೆ. ಶ್ರೀ ಕಾರದ ಒತ್ತಕ್ಷರದ ರ ಕಾರವು ಈ ಶಾಸನದಲ್ಲಿ ಬೆಳೆದು ಅದರ ತಲೆಯ ಮೇಲಕ್ಕೆ ಬಂದು ಬಲಕ್ಕೆ ತಿರುಗಿದೆ.

ಕ್ರಿ.ಶ.೯೬೨ರ ಮೂರನೆಯ ಕೃಷ್ಣನ ದೇವಿಹೊಸೂರು ಶಾಸನ ಹಾಗೂ ಇಮ್ಮಡಿ ಮಾರಸಿಂಹನ ಅದೇ ವರ್ಷದ (ಕ್ರಿ.ಶ.೯೬೨) ಕಾಡಲೂರು ಶಾಸನಗಳಲ್ಲಿನ ಲಿಪಿಗಳಲ್ಲಿ ತಲೆಕಟ್ಟುಗಳು ಒಂದೇ ತೆರನಾಗಿವೆ. ಮ, ವ, ಚ ಗಳು ಇನ್ನೂ ಬಾಯಿ ಬಿಟ್ಟಿಲ್ಲ, ಆದರೆ ವ ಕಾರಕ್ಕೂ ಮತ್ತು ಚ ಕಾರಕ್ಕೂ ಎದ್ದುಕಾಣುವಂತಹ ವ್ಯತ್ಯಾಸಗಳಿವೆ. ಲಿಪಿಗಳು ಸಾಧ್ಯವಾದಷ್ಟೂ ವೃತ್ತಾಕಾರಕ್ಕೆ ತಿರುಗಲು ಪ್ರಯತ್ನಿಸಿವೆ. ಇಮ್ಮಡಿ ಮಾರಸಿಂಹನ ಕಾಡಲೂರು ತಾಮ್ರಶಾಸನದ ಪ್ರತಿ ಪಟ್ಟಿಕೆಯ ಅಂತಿಮ ಸಾಲುಗಳಲ್ಲಿನ ಒತ್ತಕ್ಷರಗಳನ್ನು ಅಲಂಕಾರಿಕಗೊಳಿಸಿದೆ. ಈ ಬಗೆಯ ಅಲಂಕಾರ ತರುವ ಪ್ರಯತ್ನವು ನೀತಿಮಾರ್ಗನ ಕ್ರಿ.ಶ.೯೦೫ರ ಕೆರೆಹಳ್ಳಿ ಶಾಸನದಲ್ಲಿಯೇ ಗಮನಿಸಬಹುದಾಗಿದೆ. ಕ, ರ ಗಳ ಕೆಳಭಾಗವು ಪೂರ್ಣವೃತ್ತಾಕಾರವಾಗಿದೆ. ನ, ಣ, ಬ ಅಕ್ಷರಗಳು ಇಂದಿನ ರೂಪಕ್ಕೆ ತೀರಾ ಸಮೀಪವಾಗಿದೆ. ಅನೇಕ ಅಕ್ಷರಗಳಲ್ಲಿ ಅಕ್ಷರಗಳ ಕೆಳಗೆ ಬಂದಿರುವ ಉ ಕಾರವು, ಅದರ ಬಲಭಾಗಕ್ಕೆ ತಿರುಗಿದೆ. ಇದಕ್ಕೆ ಮೊದಲು ಇದು ಇದರ ವಿರುದ್ಧ ದಿಕ್ಕಿಗಿತ್ತು. ಅನೇಕ ಒತ್ತಕ್ಷರಗಳು ಅವುಗಳ ಮೂಲರೂಪವನ್ನು ಕಳೆದುಕೊಂಡಿವೆ. ಎ ಕಾರದ ಕಾಗುಣಿತವು ಈ ಹಂತದಲ್ಲಿ ಅಕ್ಷರದ ಎಡಗಡೆ ತಿರುಗಿ ಕೆಳಕ್ಕೆ ಬಾಗಿದ್ದ ಗೆರೆಯು ಈ ಹಂತದಲ್ಲಿ ಕೆಳಕ್ಕೆ ಬಾಗದೆ ಮೇಲಕ್ಕೆ ತಿರುಗಿ ಅಕ್ಷರದ ಬಲಕ್ಕೆ ಸಾಗಿ, ಸ್ವಲ್ಪ ಕೆಳಕ್ಕೆ ಬಾಗಿ ಮತ್ತೆ ಮೇಲಕ್ಕೆ ಎದ್ದಿದೆ. ಒ ಕಾರದ ಕಾಗುಣಿತವು ಎ ಕಾರದಂತೆ ಬೆಳೆದು ಮೇಲೆದ್ದ ಅಂತಿಮ ಭಾಗವು ಮತ್ತೆ ಮುಂದುವರಿದು ಅಕ್ಷರದ ಬಲಭಾಗಕ್ಕೆ ಕೆಳಕ್ಕೆ ತಿರುಗಿದೆ. ಇದೇ ಮಾರಸಿಂಹನ ಕ್ರಿ.ಶ.೯೬೮ರ ಕುಕನೂರು ಶಾಸನದಲ್ಲಿ ಹಿಂದಿನ ಶಾಸನಲಿಪಿಗಳ ಲಕ್ಷಣಗಳೇ ಇದ್ದರೂ ಲಿಪಿಕಾರನು ಬೇರೆ. ಆದ್ದರಿಂದ ಅಷ್ಟು ಅಲಂಕಾರಗಳು ಕಾಣಬರುವುದಿಲ್ಲ. ಜ, ಯ ಕಾರಗಳು ನಿಶ್ಚಿತರೂಪ ಪಡೆದಿವೆ.

ಕ್ರಿ.ಶ.ಸು.೯೭೩ರಲ್ಲಿ ಕಲ್ಯಾಣದ ಚಾಳುಕ್ಯರ ಇಮ್ಮಡಿ ತೈಲಪನು ರಾಷ್ಟ್ರಕೂಟರನ್ನು ಸೋಲಿಸಿ ಚಾಳುಕ್ಯರಾಜ್ಯವನ್ನು ಪುನಃ ಪ್ರತಿಷ್ಠಾಪಿಸುತ್ತಾನೆ. ಇವನು ರಾಷ್ಟ್ರಕೂಟರ ಅಧೀನದಲ್ಲಿ ಮೊದಲು ಇದ್ದದ್ದರಿಂದ ಅವರ ಕಾಲದ ಅಕ್ಷರಗಳೇ ಇವನ ಬರವಣಿಗೆಯಲ್ಲಿ ಮುಂದುವರಿಯುತ್ತದೆ. ರಕ್ತರಹಿತ ಕ್ರಾಂತಿಯಾದ್ದರಿಂದ ಇದು ಸಾಧ್ಯವಾಯಿತು. ಅದೇ ಲಿಪಿಕಾರರು ಹಾಗೂ ಕವಿಗಳು ಎರಡೂ ಆಡಳಿತಗಳಲ್ಲಿ ಮುಂದುವರಿಯುತ್ತಾರೆ. ಹೀಗಾಗಿ ರಾಷ್ಟ್ರಕೂಟ ಲಿಪಿಯು ಚಾಳುಕ್ಯರಾಜ ಇಮ್ಮಡಿ ಜಯಸಿಂಹನವರೆಗೂ ಮುಂದುವರಿಯುತ್ತದೆ. ಮುಂದೆ ಚಾಳುಕ್ಯ ಒಂದನೆಯ ಸೋಮೇಶ್ವರ, ಅವನ ಮಕ್ಕಳಾದ ಸೋಮೇಶ್ವರ, ಭುವನೈಕಮಲ್ಲ, ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಆರಂಭದವರೆಗೆ ಹಿಂದಿನ ಲಕ್ಷಣಗಳು ಅಲ್ಪಸ್ವಲ್ಪ ಉಳಿದಿರುತ್ತದೆ.

ಕೊಪ್ಪಳದ ಕ್ರಿ.ಶ.೯೮೮ರ ಶಾಸನದಲ್ಲಿ ಎಲ್ಲ ಅಕ್ಷರಗಳೂ ಒಂದೇ ಅಳತೆಗೆ ಬಂದಿವೆ. ದೀರ್ಘಗಳಲ್ಲಿ ಆ ಕಾರದ ಕಾಗುಣಿತವು ಅಕ್ಷರದ ಬಲಪಕ್ಕಕ್ಕೆ ಸ್ವಲ್ಪ ಮಾತ್ರ ಬೆಳೆದಿದೆ. ಚ ಕಾರ




ಇಮ್ಮಡಿ ಮಾರಸಿಂಹನ ಕಾಡಲೂರು ಶಾಸನ


ದೇ.ಕೊಂ.ರೆಡ್ಡಿ

IWG 139


ಗಂಗ-ರಾಷ್ಟ್ರಕೂಟ ಲಿಪಿ ಪಟ್ಟಿಕೆ



ದೇ.ಕೊ. ರೆಡ್ಡಿ



ದೇ.ಕೊ. ರೆಡ್ಡಿ



ಕಪಿಶಾ. II ಪು.84 : Gale ಕೊಪ್ಪಳದ ನಿಷಿಧಿ ಶಾಸನ ದೇ.ಕೊಂ.ರಡ್ಡಿ

ಮತ್ತು ವ ಕಾರಗಳು ಒಂದೆರಡು ಕಡೆ ಮೂಲ ಗೆರೆಯಿಂದ ಬಿಡಿಸಿಕೊಂಡಿವೆ. ಮ ಕಾರದ ಬಲಗಡೆಯ ಗೆರೆ ಅಕ್ಷರದ ಮಧ್ಯಭಾಗಕ್ಕೆ ಬಂದಿದೆ. ಇ ಕಾರವು ಈಗಿನ ರೂಪಕ್ಕೆ ಸಮೀಪವಾಗಿದೆ. ಕ ಮತ್ತು ರ ಗಳು ವೃತ್ತಾಕಾರವಾಗಿದೆ. ಅನುಸ್ವಾರ ವಿಸರ್ಗಗಳು ಮಧ್ಯಮ ಗಾತ್ರದ ಸೊನ್ನೆಗಳಾಗಿವೆ. ಅನುಸ್ವಾರವು ತಲೆಯ ಮೇಲಿನಿಂದ ಕೆಳಕ್ಕೆ ಇಳಿದಿಲ್ಲ. ಕೊಪ್ಪಳದ ಇದೇ ಕಾಲದ ಇನ್ನೊಂದು ಶಾಸನದಲ್ಲಿ (೯೮೪ ಕ್ರಿ.ಶ.) ಶ್ರೀ ಕಾರವು ಸ್ವಲ್ಪ ಬದಲಾವಣೆಯನ್ನು ತೋರಿಸಿದೆ. ಒಳಗಿನ ವೃತ್ತಾಕಾರವು ಈಗ ಎರಡು ಭಾಗಗಳಾಗಿದೆ. ಉಳಿದ ರೂಪವು ಹಾಗೆಯೇ ಇದೆ. ಇದರಲ್ಲಿನ ಈ ಕಾರದ ದೀರ್ಘವು ವೃತ್ತಾಕಾರವಾಗಿ ಅದರಿಂದ ಸಣ್ಣ ಗೆರೆ ಹೊರಬಂದಿದೆ. ಚ ಕಾರದ ಎಡ ಗೆರೆ ತಲೆಕಟ್ಟಿನಿಂದ ಬಿಡಿಸಿಕೊಳ್ಳುತ್ತಿದೆ. ಭ ಕಾರವೂ ಸಹ ತಲೆಕಟ್ಟಿನ ಬಳಿ ಅಗಲವಾಗುತ್ತಿದೆ. ತಲೆಕಟ್ಟುಗಳು ಹಿಂದಿನಂತೆಯೇ ಮುಂದುವರಿದಿವೆ. ಆ ಕಾರವು ಇಂದಿನ ರೂಪಕ್ಕೆ ಸಮೀಪವಾಗಿದೆ. ಳ ಕಾರದ ಕೆಳಗೆ ವೃತ್ತಾಕಾರ ಬಂದಿದೆ. ಒತ್ತಕ್ಷರಗಳಲ್ಲಿ ನ ಕಾರದ ಒತ್ತಕ್ಷರ ಇಂದಿನ ರೂಪಕ್ಕೆ ಸಮೀಪವಾಗಿದೆ. ಎ ಕಾರದ ಕಾಗುಣಿತವನ್ನು ಕೆಲವೆಡೆ ಅಕ್ಷರದ ಕೆಳಭಾಗದಲ್ಲಿ ಬರುವಂತೆ ನೀಡಲಾಗಿದೆ. ರ ಕಾರದ ಒತ್ತಕ್ಷರವು ಅಕ್ಷರದ ತಲೆಯನ್ನೂ ದಾಟಿದೆ. ಕ್ರಿ.ಶ.೧೦೧೯ರ ಶಾಸನದಲ್ಲಿ ಶ್ರೀ ಕಾರವು ಹಿಂದಿನ ರೂಪಗಳಿಗಿಂತ ಭಿನ್ನವಾಗಿದೆ. ಮ ಕಾರದ ಎಡ ಗೆರೆ ಕೆಲವೆಡೆ ಬಿಡುಗಡೆ ಪಡೆದಿದೆ. ಭ ಕಾರವು ಎರಡು ಭಾಗವಾಗಲು ಆರಂಭವಾಗಿದೆ. ಸುಮಾರು ಇದೇ ಕಾಲದ ಬಾಗಳಿ ಶಾಸನದಲ್ಲಿ ಮ ಕಾರವು ಇನ್ನೊಂದು ರೂಪವನ್ನು ಹೊಂದಿದೆ. ವೃತ್ತಾಕಾರದ ಮೇಲೆ

ಗೆರೆಯೊಂದು ಬಂದಿದ್ದು ಅದು ಬಲಗಡೆಗೆ ತಿರುಗಿ ಕೆಳಕ್ಕೆ ಬಾಗಿ ಮತ್ತೆ ಮೇಲಕ್ಕೆ ಹೋಗಿ ಕೆಳಕ್ಕೆ ಬಾಗಿದೆ. ಮುಂದಿನ ಶಾಸನಗಳಲ್ಲಿ ವ ಕಾರವೂ ಹೀಗೆಯೇ ಕಾಣಬರುತ್ತದೆ. ಕ್ರಿ.ಶ.೧೦೩೨ (ಕವಿ.ಶಾಸಂ.॥೧೨೦) ಶಾಸನದಲ್ಲಿ ಚ, ಭ, ಮ ಗಳು ಪೂರ್ಣವಾಗಿ ಗೆರೆಯಿಂದ ಬಿಡುಗಡೆ ಹೊಂದಿಲ್ಲ. ಕೆಲವು ಕಡೆ ಈ ಅಕ್ಷರಗಳು ಬಾಯಿ ಬಿಟ್ಟಿದ್ದರೆ ಕೆಲವು ಕಡೆ ಸೇರಿಕೊಂಡಿವೆ. ಆದರೂ ಅ, ಕ, ಖ, ಗ ಜ, ಣ, ತ, ಧ, ನ, ಬ, ಯ, ರ, ಲ ಅಕ್ಷರಗಳು ಒಂದು ಸ್ಥಿರರೂಪವನ್ನು ಪಡೆದಿವೆ. ಕಾಗುಣಿತಗಳೂ ಸಹ ಹಿಂದಿನ ಶಾಸನಗಳಲ್ಲಿರುವಂತಹ ರೂಪವೇ ಮುಂದುವರಿದಿವೆ. ಉ ಕಾರದ ಕಾಗುಣಿತ ಈಗ ಅಕ್ಷರದ ಪಕ್ಕಕ್ಕೆ ಬಂದಿದೆ. ಋ ಕಾರದ ಕಾಗುಣಿತವು ಅಕ್ಷರದ ಕೆಳಗೆ ಎಡಮುಖದಿಂದ ಪ್ರಾರಂಭವಾಗಿ ಬಲಕ್ಕೆ ಬಂದಿದೆ.


ಒಟ್ಟಿನಲ್ಲಿ ಸು.೧೦೫೦ರ ವರೆಗೆ ರಾಷ್ಟ್ರಕೂಟರ ಅಂತ್ಯಕಾಲದಲ್ಲಿ ಬಳಕೆಯಲ್ಲಿದ್ದ ಲಿಪಿಗಳೇ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಮುಂದುವರಿದಿರುವುದನ್ನು ಗಮನಿಸಬಹುದಾಗಿದೆ.


ಕಲ್ಯಾಣ ಚಾಲುಕ್ಯ - ಹೊಯ್ಸಳ - ಸೇಉಣ - ಕಾಕತೀಯ

ಕಲ್ಯಾಣದ ಚಾಳುಕ್ಯರ ರಾಜ್ಯಭಾರವು ಕ್ರಿ.ಶ.ಸು.೯೭೩ರಲ್ಲಿ ಆರಂಭವಾದರೂ ಲಿಪಿಯ ದೃಷ್ಟಿಯಿಂದ ಅವರ ಪ್ರಬೇಧವು ಆರಂಭವಾದದ್ದು ಕ್ರಿ.ಶ.ಸು.೧೦೫೦ರಿಂದಾಚೆಗೆ. ಈ ಕಾಲಕ್ಕೆ ದಕ್ಷಿಣದಲ್ಲಿ ರಾಷ್ಟ್ರಕೂಟರ ಸಂಬಂಧಿಗಳೂ ಹಾಗೂ ಸಾಮಂತರಾಗಿದ್ದ ಗಂಗ ಸಾಮ್ರಾಜ್ಯ ಅಂತ್ಯವಾಗಿ, ಅವರು ಸಣ್ಣ ಮಾಂಡಳೀಕರಾಗಿ ಅಲ್ಲಲ್ಲಿ ಆಳುತ್ತಿರುತ್ತಾರೆ. ನೊಳಂಬ ವಂಶವೂ ಸಹ ಕ್ರಿ.ಶ.೧೦೫೦ರ ನಂತರ ಕಾಣೆಯಾಗುತ್ತದೆ. ದೇವಾಲಯ ರಚನೆ ಹಾಗೂ ಶಿಲಾಶಾಸನಗಳ ಮಾಧ್ಯಮವಾದ ಶಿಲೆಯೂ ಬದಲಾಗುತ್ತದೆ. ಚಪ್ಪಡಿಗಲ್ಲನ್ನು ಬಳಸುತ್ತಿದ್ದ ಕಡೆ ಮೃದುವಾದ ಬಳಪದ ಕಲ್ಲು ಬಳಕೆಗೆ ಬರುತ್ತದೆ. ಅಕ್ಷರಗಳ ಗಾತ್ರವೂ ಚಿಕ್ಕದಾಗಿ ನಯವಾದ ಕಲ್ಲಿನ ಮೇಲೆ ಅಲಂಕಾರಿಕವಾಗಿ ಕೆತ್ತಲಾಗಿರುತ್ತದೆ. ಹಿಂದೆ ಬಳಸುತ್ತಿದ್ದ ಗಟ್ಟಿ ಚಪ್ಪಡಿಕಲ್ಲುಗಳು, ಪ್ರಾಕಾರ ಅಥವಾ ಪ್ರವೇಶಗೋಪುರಗಳಂತಹ ಒರಟು ಕೆಲಸಗಳಿಗೆ ಮಾತ್ರ ಸೀಮಿತವಾಗುತ್ತವೆ. ಚಾಳುಕ್ಯ ಆರನೆಯ ವಿಕ್ರಮಾದಿತ್ಯನು ಪಟ್ಟಕ್ಕೆ ಬಂದ ಮೇಲೆ ಇಂತಹ ರಚನೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆತು ಅನೇಕ ಹೆಸರಾಂತ ಶಿಲ್ಪಿಗಳು ಇವನ ರಾಜ್ಯದಲ್ಲಿ ನೆಲೆಸಿರುತ್ತಾರೆ. ಗದಗ ಇಂತಹ ಕೇಂದ್ರಗಳಲ್ಲಿ ಒಂದು. ಶಿಲಾಮಾಧ್ಯಮ ಬದಲಾದ್ದರಿಂದ ಶಿಲ್ಪಿಗಳ ಕಾರ್ಯ ವೈಖರಿಯಲ್ಲಿಯೂ ಬದಲಾವಣೆಯಾಗುತ್ತದೆ. ಬಳಸುತ್ತಿದ್ದ ಉಪಕರಣಗಳಲ್ಲಿಯೂ ಬದಲಾಗಿ ಸೂಕ್ಷ್ಮವಾದ ಉಪಕರಣಗಳು ಬಳಕೆಗೆ ಬರುತ್ತವೆ. ಈ ಕಾರಣಗಳಿಂದ ಕಡಿಮೆ ಸ್ಥಳದಲ್ಲಿ ಹೆಚ್ಚಿನ ಬರೆವಣಿಗೆ ಬರೆಯಲು ಸಾಧ್ಯವಾಗುತ್ತವೆ.

ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಈ ಅವಧಿಯಲ್ಲಿ ತಾಮ್ರ ಶಾಸನಗಳ ಸಂಖ್ಯೆ ಕಡಿಮೆಯಾಗಿರುವುದು. ಶಿಲಾಶಾಸನ ಪಾಠಗಳು ದೀರ್ಘವಾದದ್ದರಿಂದ ಇವು ಕಡಿಮೆಯಾಗಿರಬಹುದು. ಶಿಲಾಶಾಸನಗಳ ರಚನೆಯೂ ಕೂಡ ಹಿಂದಿನ ಕಾಲಕ್ಕಿಂತ ಹೆಚ್ಚಾಗಿರುತ್ತದೆ. ಇದಕ್ಕೆ ವಿದ್ಯಾಪ್ರಸಾರವು ಹೆಚ್ಚಾಗಿದ್ದು ಅನೇಕ ಕವಿಗಳೂ ಶಾಸನ ರಚನೆಯಂತಹ ಕ್ಷೇತ್ರಕ್ಕೆ ಕಾಲಿಟ್ಟದ್ದು ಇವು ಹೆಚ್ಚಾಗಲು ಕಾರಣವಾಗಿರಬೇಕು.

ಒಟ್ಟಿನಲ್ಲಿ ಆರನೆಯ ವಿಕ್ರಮಾದಿತ್ಯನ ಕಾಲದಿಂದ ಕರ್ನಾಟಕದ ಜನಜೀವನದಲ್ಲಿ ಅನೇಕ ಬದಲಾವಣೆಗಳು ಆಗುತ್ತವೆ. ಅನೇಕ ನೀರಾವರಿ ಕೆಲಸಗಳು ನಡೆದು ವ್ಯವಸಾಯ





ಕವಿಶಾ: II ಪು.149 ಆರನೆಯ ವಿಕ್ರಮಾದಿತ್ಯನ ಹುಲುಗಿ ಶಾಸನ ದೇ.ಕೊ. ರೆಡ್ಡಿ

ಚಟುವಟಿಕೆಗಳು ಹಿಂದಿಗಿಂತ ಹೆಚ್ಚಾಗುತ್ತದೆ. ದೇವಾಲಯಗಳು ಹಾಗೂ ಅವುಗಳ ಜೊತೆಯಲ್ಲಿ ಬೆಳೆದ ಮಠಗಳು ಸಾರ್ವತ್ರಿಕ ವಿದ್ಯಾಕೇಂದ್ರಗಳಾಗುತ್ತವೆ. ಎರಡನೆಯ ಜಯಸಿಂಹ ಮತ್ತು ಆರನೆಯ ವಿಕ್ರಮಾದಿತ್ಯರ ದೀರ್ಘ ಕಾಲದ ಆಡಳಿತ ಅವಧಿಯಲ್ಲಿ ಯುದ್ಧಗಳಿದ್ದರೂ ಸಾಮಾನ್ಯ ಮಟ್ಟದಲ್ಲಿ ಶಾಂತಿಯೂ ನೆಲೆಗೊಂಡಿರುತ್ತದೆ. ಕಾಶ್ಮೀರದ ಬಿಲ್ಹಣನಂತಹವನೂ ವಿಕ್ರಮಾದಿತ್ಯನ ಆಶ್ರಯಕ್ಕೆ ಬಂದಿರುತ್ತಾನೆ. ಹೆಂಗಸರೂ ಅಕ್ಷರವಂತರಾಗಿದ್ದರೆಂಬುದಕ್ಕೆ ಜಲಗಾವ್, ಗದಗ್, ಕಾಳಗಿಯಲ್ಲಿನ ಸ್ತ್ರೀವಿಗ್ರಹಗಳು ಲೇಖನಿ ಹಿಡಿದು ಬರೆಯುತ್ತಿರುವಂತಿರುವ ಶಾಸನಗಳೇ ಸಾಕ್ಷಿ. ಈ ವಂಶದ ಅನೇಕ ರಾಣಿಯರೂ ಸ್ಥಳೀಯ ಅಧಿಕಾರಿಗಳಾಗಿ ಅಧಿಕಾರವನ್ನು ನಡೆಸುತ್ತಿದ್ದರು. ಹೀಗಾಗಿ ಮಹಿಳಾ ಶಿಕ್ಷಣಕ್ಕೂ ಪ್ರೋತ್ಸಾಹವಿತ್ತು.

ಸರಿಸುಮಾರು ಕಲ್ಯಾಣ ಚಾಳುಕ್ಯರ ರಾಜ್ಯಸ್ಥಾಪನೆ ಕಾಲಕ್ಕೆ ಉದಿಸಿದ ರಾಜವಂಶಗಳಲ್ಲಿ ಹೊಯ್ಸಳರದ್ದೂ ಒಂದು. ಗಂಗರ ಸಾಮಂತರಾಗಿ ಗಂಗರಿಗೂ-ಚೋಳರಿಗೂ ತಲಕಾಡಿನಲ್ಲಿ ನಡೆದ ಯುದ್ಧದಲ್ಲಿ ಪ್ರಮುಖವಾಗಿ ಹೋರಾಡಿದವರು. ಗಂಗರ ಅಸ್ತಂಗತದೊಡನೆ ಬೆಟ್ಟಗಳ ಪ್ರದೇಶದಲ್ಲಿ (ಮಲೆನಾಡು) ನಿಂತು ರಾಜ್ಯವನ್ನು ಸ್ಥಾಪಿಸುತ್ತಾರೆ. ಚೋಳರೊಂದಿಗೆ, ಸ್ಥಳೀಯರೊಂದಿಗೆ ಹಾಗೂ ತನ್ನ ಅಧಿರಾಜರಾದ ಚಾಳುಕ್ಯರೊಂದಿಗೇ ಯುದ್ಧವನ್ನು ಮಾಡುತ್ತಾರೆ. ಆದರೆ ಆರನೆಯ ವಿಕ್ರಮಾದಿತ್ಯನು ಬದುಕಿರುವವರೆಗೆ ಚಾಳುಕ್ಯರ ಸಾಮಂತರಾಗಿರುತ್ತಾರೆ. ಚೋಳರ ಆಳ್ವಿಕೆಯಲ್ಲಿ ತೊಂದರೆಗೀಡಾದ ಜೈನಧರ್ಮಕ್ಕೆ ಹಾಗೂ ತಮ್ಮ ಧರ್ಮವಾದ ವೈದಿಕಧರ್ಮಕ್ಕೂ ಪೋಷಕರಾಗಿ

ಅನೇಕ ದೇವಾಲಯ ಹಾಗೂ ಬಸದಿಗಳನ್ನೂ ನಿರ್ಮಿಸುತ್ತಾರೆ. ಇವರಲ್ಲಿ ಪ್ರಮುಖರಾದ ರಾಜರೆಂದರೆ ವಿಷ್ಣುವರ್ಧನ ಮತ್ತು ಇಮ್ಮಡಿ ಬಲ್ಲಾಳರು. ವಿಷ್ಣುವರ್ಧನನು ಚೋಳರನ್ನು ಸೋಲಿಸಿ ತಲಕಾಡನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಪೂರ್ವದಲ್ಲಿ ಕೋಲಾರದ ನಂಗಲಿಯವರೆಗೆ ತನ್ನ ರಾಜ್ಯ ವಿಸ್ತರಿಸುತ್ತಾನೆ. ಇಮ್ಮಡಿ ಬಲ್ಲಾಳನು ಪಟ್ಟಕ್ಕೆ ಬರುವ ವೇಳೆಗೆ ಚಾಳುಕ್ಯ ಸಾಮ್ರಾಜ್ಯ ಅಸ್ತಿತ್ವ ಕಳೆದುಕೊಂಡು, ಕಾಕತೀಯ, ಸೇಉಣ ಮತ್ತು ಹೊಯ್ಸಳರ ಮಧ್ಯೆ ಹಂಚಿ ಹೋಗಿರುತ್ತದೆ. ಸೇಉಣ ಮತ್ತು ಹೊಯ್ಸಳರ ನಡುವೆ ಅನೇಕ ಯುದ್ಧಗಳಾಗುತ್ತವೆ. ಕ್ರಿ.ಶ.೧೩೪೬ರ ವರೆಗೆ ಹೊಯ್ಸಳ ಸಾಮ್ರಾಜ್ಯ ಅಸ್ತಿತ್ವದಲ್ಲಿರುತ್ತದೆ.

ಸೇಉಣರು ಚಾಳುಕ್ಯರ ಪತನದ ನಂತರ ದೇವಗಿರಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಇವರು ತಮ್ಮ ಪ್ರಮುಖ ವೈರಿಗಳಾದ ಪೂರ್ವಭಾಗದಲ್ಲಿನ ಕಾಕತೀಯರು, ದಕ್ಷಿಣದಲ್ಲಿನ ಹೊಯ್ಸಳರ ಮೇಲೆ ಯುದ್ಧಗಳನ್ನು ಮಾಡುತ್ತಿರುತ್ತಾರೆ.


ಚಾಳುಕ್ಯರ ಸಾಮಂತರಾಗಿದ್ದ ಕಾಕತೀಯರು ಚಾಳುಕ್ಯರ ಪತನಾನಂತರ ಸ್ವತಂತ್ರರಾಗುತ್ತಾರೆ. ಪಶ್ಚಿಮದಲ್ಲಿ ಸೇಉಣರು, ಉತ್ತರದಲ್ಲಿ ಮಾಳವರು, ದಕ್ಷಿಣದಲ್ಲಿ ಯಾದವರ ಮೇಲೆ ಯುದ್ಧಗಳನ್ನು ಮಾಡುತ್ತಾರೆ. ಈ ಹೊಯ್ಸಳ, ಸೇಉಣ ಮತ್ತು ಕಾಕತೀಯ ಸಾಮ್ರಾಜ್ಯಗಳು ದಕ್ಷಿಣಕ್ಕೆ ಮೊದಲ ಸಾರಿಗೆ ಬಂದ ಮುಸ್ಲಿಂ ಧಾಳಿಗಳಿಗೆ ತತ್ತರಿಸಿ ಮುಂದೆ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ.

ಈ ಸಾಮ್ರಾಜ್ಯಗಳ ಆಳ್ವಿಕೆಯಲ್ಲಿ ಕನ್ನಡ ಭಾಷೆ ಮತ್ತು ಲಿಪಿಗಳು ಸರ್ವತ್ರ ಅಭಿವೃದ್ಧಿ ಹೊಂದಿವೆ. ಕಲ್ಯಾಣ ಚಾಲುಕ್ಯರು ಕನ್ನಡ ಭಾಷೆ ಮತ್ತು ಲಿಪಿಗೆ ಹೆಚ್ಚಿನ ಪ್ರೋತ್ಸಾಹ ನೀಡಿರುತ್ತಾರೆ. ಹೊಯ್ಸಳರು ಕನ್ನಡ ಭಾಷೆ ಲಿಪಿಯ ಜೊತೆಗೆ ತಮಿಳುನಾಡಿನ ಅಧಿಕಾರಿಗಳ ಸಂಪರ್ಕದಿಂದ ತಮಿಳು ಭಾಷೆ ಮತ್ತು ಲಿಪಿಯನ್ನು ತಮ್ಮ ಶಾಸನಗಳಲ್ಲಿ ಬಳಸಿರುತ್ತಾರೆ. ಸೇಉಣರು ಕನ್ನಡ ಭಾಷೆ ಲಿಪಿಯ ಜೊತೆಗೆ ಮರಾಠಿ, ಸಂಸ್ಕೃತ ಭಾಷೆಯನ್ನು ಬಳಸಿರುತ್ತಾರೆ. ಕಾಕತೀಯರು ಆಂಧ್ರಪ್ರದೇಶದ ಭಾಗಗಳನ್ನು ಪ್ರಧಾನವಾಗಿ ಆಳುತ್ತಿದ್ದುದರಿಂದ ಕನ್ನಡ ಭಾಷೆ-ಲಿಪಿಯ ಜೊತೆಗೆ ತೆಲುಗು ಭಾಷೆ-ಲಿಪಿಯ ಶಾಸನಗಳನ್ನು ಬರೆಸಿರುತ್ತಾರೆ. ಕಲ್ಯಾಣದ ಚಾಲುಕ್ಯರ ಪ್ರಭಾವದಿಂದ ಅವರ ಸಾಮಂತರೂ ತಮ್ಮ ದೇವಾಲಯ ರಚನೆಗಳಲ್ಲಿ ಹಾಗೂ ಶಾಸನ ರಚನೆಗಳಲ್ಲಿ ಮೊದಲಿದ್ದ ಪಾರಂಪರಿಕ ಶಿಲಾ ಮಾಧ್ಯಮವನ್ನು ಬಿಟ್ಟು ಮೃದುವಾದ ಕಲ್ಲನ್ನು ಬಳಸಿರುತ್ತಾರೆ. ಹೀಗೆ ಬಳಸುವಾಗ ಆ ಸ್ಥಳದಲ್ಲಿ ದೊರಕುವ ಹಸುರುಗಲ್ಲು ಅಥವಾ ಬಳಪದ ಕಲ್ಲನ್ನು ಬಳಸಿರುತ್ತಾರೆ. ಹೀಗಾಗಿ ಇಡೀ ಸಾಮ್ರಾಜ್ಯದಲ್ಲಿ ಬರೆವಣಿಗೆಯ ರೀತಿ ಒಂದೇ ರೀತಿಯದಾಗುತ್ತದೆ. ಹೀಗಾಗಿ ಮಹಾರಾಷ್ಟ್ರದ ಖಿದ್ರಾಪುರದ ದೇವಾಲಯವನ್ನು ನೋಡಿದವರು ಅದನ್ನು ಹೊಯ್ಸಳರದೆಂಬ ಭ್ರಾಂತಿಪಡುತ್ತಾರೆ. ಈ ಸಂಗತಿ ಶಿಲ್ಪಿಗಳು ಇಡೀ ಸಾಮ್ರಾಜ್ಯದಲ್ಲಿ ಯಾವ ಅಡೆ ತಡೆ ಇಲ್ಲದೆ ಓಡಾಡುತ್ತಿದ್ದುದಕ್ಕೆ ಕಾರಣವಾಗಿದೆ.

ಕಲ್ಯಾಣ ಚಾಳುಕ್ಯರ ಶಾಸನಗಳಲ್ಲಿ, ಹಿಂದಿನ ಶಾಸನಗಳಲ್ಲಿ ಅಪರೂಪಕ್ಕೆ ಕಾಣಬರುತ್ತಿದ್ದ ಕೆಲವು ಅಂಶಗಳು ಇಲ್ಲಿಂದ ನಿತ್ಯವಾಗಿವೆ. (ಹುಲಿಗಿ, ಕೊಪ್ಪ.೧೪೮) ಅವುಗಳಲ್ಲಿ ಮುಖ್ಯವಾಗಿ ಎ, ಚ, ಭ, ಮ, ವ, ಶ ಕಾರ ಮತ್ತು ರ ಕಾರದ ಒತ್ತಕ್ಷರಗಳು. ಎ ಕಾರವು ಮೂಲಗೆರೆಯಿಂದ ಎಡ ಅಡ್ಡಗೆರೆಯು ಸ್ವಲ್ಪ ಬಿಡಿಸಿಕೊಂಡಿದೆ. ಬಲಗಡೆಯ ಉದ್ದವಾದ ಗೆರೆ ಬಲಕ್ಕೆ ಬಾಗಿದೆ. ಚ

ಕಾರವೂ ಸಹ ತಲೆಕಟ್ಟಿನಿಂದ ಬಿಡಿಸಿಕೊಂಡು ಹೊರಬಂದಿದೆ. ತಲೆಕಟ್ಟಿನ ಬಳಿ ಒಂದು ಬಳುಕು ಗೆರೆಯನ್ನು ಹೊಂದಿದೆ ಭ ಕಾರವೂ ಸಹ ಚ ಕಾರದಂತೆ ಬಿಡಿಸಿಕೊಂಡು ಎರಡು ಪ್ರತ್ಯೇಕ ಭಾಗಗಳಾಗಿ ಬೆಳೆದಿದೆ. ಮ ಮತ್ತು ವ ಕಾರಗಳು ಒಂದೇ ತೆರನಾಗಿ ಮೂಲಗೆರೆಯಿಂದ ಬಿಡಿಸಿಕೊಂಡಿವೆ. ಆರಂಭದಲ್ಲಿ ಸುರುಳಿ ಇಲ್ಲ, ಮ ಕಾರದ ಬಲಗಡೆಯ ಗೆರೆಯು ಅಕ್ಷರದ ಮಧ್ಯಭಾಗಕ್ಕೆ ಇಳಿದಿದೆ. ಶ ಕಾರವು ಇಂದಿನ ರೂಪಕ್ಕೆ ಸಮೀಪವಾಗಿದೆ. ರ ಕಾರದ ಒತ್ತಕ್ಷರವು ಅಕ್ಷರದ ಕೆಳಭಾಗದಿಂದ ಆರಂಭವಾಗಿ ಮೇಲಕ್ಕೆ ಹೋಗಿ ತಲೆಯ ಮೇಲಿಂದ ಬಲಕ್ಕೆ ಬೆಳೆದಿದೆ. ಅನುಸ್ವಾರದ ಸೊನ್ನೆಯು ಚಿಕ್ಕದಾಗಿದ್ದು, ಅಕ್ಷರದ ತಲೆಯ ಮೇಲೆ ಬಲಬದಿಗೆ ಸರಿದಿದೆ. ಶ್ರೀ ಅಕ್ಷರವು ಇನ್ನೂ ಹೆಚ್ಚಿನ ಬೆಳವಣಿಗೆಯನ್ನು ಈ ಕಾಲಕ್ಕೆ ತೋರಿಸಿದೆ. ಉ, ಊ, ಕಾಗುಣಿತಗಳು ಅಕ್ಷರದ ಕೆಳಗೆ ಇದ್ದವು. ಈ ಕಾಲಕ್ಕೆ ಸಾಲಿನ ಸಮಕ್ಕೆ ಅಂದರೆ ಅಕ್ಷರದ ಪಕ್ಕಕ್ಕೆ ಬಂದಿವೆ. ಅ ಮತ್ತು ಆ ಕಾರದ ಒಳಗೆ ಒಂದು ಅಡ್ಡಗೆರೆ ಬಂದಿದೆ. ಆ ಕಾರದ ಮೇಲೆದ್ದ ಗೆರೆಯು ಪಕ್ಕಕ್ಕೆ ಬಾಗಿದೆ. ಇ ಕಾರದ ಕೆಳಗಿನ ಎರಡು ಚುಕ್ಕೆಗಳು ಈ ಹಂತದಲ್ಲಿ ಕಾಣದೆ ಎರಡೂ ಸೇರಿ ಒಂದು ಸುತ್ತು ಆಗಿ ಮೇಲಿನ ಭಾಗವು ಈ ಸುತ್ತಿಗೆ ಸೇರಿದೆ. ಈ ಸುತ್ತಿನ ಪಕ್ಕ ಸಣ್ಣಗೆರೆಯೊಂದು ಹೊರಬಂದಿದೆ. ಕ ಮತ್ತು ರ ಗಳು ವೃತ್ತಾಕಾರವಾಗಿವೆ. ಕ ಕಾರದ ಮೇಲೆ ಒಂದು ಅಡ್ಡಗೆರೆ ಬಂದಿದ್ದು, ಅದರ ಮೇಲೆ ತಲೆಕಟ್ಟು ಬಂದಿದೆ. ರ ಕಾರಕ್ಕೆ ಅಡ್ಡಗೆರೆ ಇಲ್ಲ, ವೃತ್ತದ ಮೇಲೆ ತಲೆಕಟ್ಟು ಬಂದಿರುತ್ತದೆ. ಈ ಕಾಲದ ಶಾಸನಗಳಲ್ಲಿ ತಲೆಕಟ್ಟುಗಳಲ್ಲಿ ಎಡಭಾಗದ ಗೆರೆಯು ಕೆಲವು ಅಕ್ಷರಗಳಲ್ಲಿ ಅಡ್ಡವಾಗಿದ್ದು ಬಲಭಾಗದ ಗೆರೆಯು ಮೇಲಕ್ಕೆ ಬಂದಿರುತ್ತದೆ. ಮ, ಯ ಕಾರ ಮುಂತಾದವುಗಳಲ್ಲಿ ಊ ಕಾರದ ಕಾಗುಣಿತ ನೀಡಬೇಕಾದಲ್ಲಿ ಉ ಕಾರದ ಗೆರೆಯನ್ನು ಮುಂದಕ್ಕೆ ಬೆಳಸಿ ಅದನ್ನು ಕೆಳಕ್ಕೆ ಬಾಗಿಸುವ ಮೂಲಕ ತೋರಿಸಿರುತ್ತಾರೆ. ಓ ಕಾರ ತೋರಿಸಬೇಕಾದಲ್ಲಿ ಎ ಕಾರವನ್ನು ನೀಡಿ ಪಕ್ಕದ ಕೊಂಬಿನ ಗೆರೆಯನ್ನು ಪಕ್ಕಕ್ಕೆ ಬಾಗಿಸುವ ಮೂಲಕ ತೋರಿಸಿರುತ್ತಾರೆ. ಎ ಮತ್ತು ಏ ಕಾರದ ರೂಪಗಳಲ್ಲಿ ವ್ಯತ್ಯಾಸವಿಲ್ಲ, ಎರಡಕ್ಕೂ ಒಂದೇ ಅಕ್ಷರ ಬಳಸಿರುತ್ತಾರೆ. ತ್ರಿಭುವನಮಲ್ಲನ ಕಾಲದ ಅಕ್ಕಲಕೋಟೆ ಶಾಸನದಲ್ಲಿ ಅನುಸ್ವಾರವು ಸಾಲಿನಲ್ಲಿ ಅಕ್ಷರದ ಪಕ್ಕದಲ್ಲಿಯೇ ಬಂದಿವೆ. (ಕ್ರಿ.ಶ.೧೦೯೩) ಈ ಅನುಸ್ವಾರವು ಕೆಲವಡೆ ಚಿಕ್ಕದಾಗಿದ್ದರೂ ಕೆಲವಡೆ ದೊಡ್ಡದಾಗಿವೆ. (ಕ್ರಿ.ಶ.೧೧೭೨) ಈ ಬೆಳವಣಿಗೆಗಳು ಇಮ್ಮಡಿ ಸೋಮೇಶ್ವರ ಗಾವರವಾಡ ಶಾಸನದಲ್ಲಿಯೇ ಕಾಣಬರುತ್ತವೆ. ಆದರೆ ಕ್ರಿ.ಶ.೧೧೨೫ರ ಆರನೆಯ ವಿಕ್ರಮಾದಿತ್ಯನ ತೇರದಾಳ ಶಾಸನದಲ್ಲಿ ಅನುಸ್ವಾರಗಳು ಅಕ್ಷರಗಳ ಮೇಲೆಯೇ ಉಳಿದಿವೆ. ಕ್ರಿ.ಶ.೧೧೩೬ರ ಇಮ್ಮಡಿ ಜಗದೇಕಮಲ್ಲನ ಕೊಲ್ಲಾಪುರದ ಶಾಸನದಲ್ಲಿಯೂ ಅನುಸ್ವಾರವು ಅಕ್ಷರಗಳ ಮೇಲೆಯೇ ಉಳಿದಿವೆ. ಇದಕ್ಕೆ ಕಾರಣ ಆಯಾ ಸ್ಥಳೀಯ ಲಿಪಿಕಾರರು ಅಕ್ಷರ ಕಲಿತಿದ್ದ ರೀತಿ ಮತ್ತು ಪ್ರಭಾವ.

ಕ್ರಿ.ಶ.೧೧೭೩ರ ಕುರುಗೋಡು ಮತ್ತು ೧೧೯೯ರ ಹಂಪೆಯಲ್ಲಿನ ಕುರುಗೋಡು ಸಿಂಧರ ಶಾಸನದಲ್ಲಿ ಅನುಸ್ವಾರಗಳನ್ನು ಅಕ್ಷರಗಳ ಮೇಲೆ ಹಾಗೂ ಅಕ್ಷರಗಳ ಪಕ್ಕದಲ್ಲಿ ಎರಡೂ ರೀತಿ ಬರೆದಿರುವುದನ್ನು ಕಾಣುತ್ತೇವೆ. ಬಹುಶಃ ಲಿಪಿಕಾರರ ಗೊಂದಲ ಅಥವಾ ಅನೇಕ ವೇಳೆ ಬರೆಯುವಾಗಿನ ಗೊಂದಲದಿಂದ ಹೀಗಾಗಿರಬಹುದು. ಹಂಪೆಯ ಶಾಸನದಲ್ಲಿ ಅಕ್ಷರಗಳ ಮೇಲಿರುವ ಅನುಸ್ವಾರಗಳು ಅಕ್ಷರದ ಒಂದು ಪಕ್ಕಕ್ಕೆ ಬಂದಿವೆ. ಉಳಿದಂತೆ ಅಕ್ಷರದ ಪಕ್ಕದಲ್ಲಿ ಬರೆಯುವಾಗ ಅನುಸ್ವಾರವನ್ನು ಕೆಲವೆಡೆ ಚಿಕ್ಕದಾಗಿ ಬರೆದಿರುತ್ತಾರೆ. ಕೆಲವೆಡೆ ಅಕ್ಷರದ ಗಾತ್ರದಷ್ಟು ದೊಡ್ಡದಾಗಿ



ಕವಿಶಾ II ಹಂಪೆ: ಕುರುಗೋಡು ಸಿಂಧರ ಶಾಸನ ದೇ.ಕೊಂ.ರೆಡ್ಡಿ

ಬರೆದಿರುತ್ತಾರೆ. ಭ, ಮ, ವ, ಶ ಗಳು ಇನ್ನೂ ಹೆಚ್ಚಿನ ಬೆಳವಣಿಗೆಯನ್ನು ತೋರಿಸಿವೆ. ಶ್ರೀ ಕಾರದ ರ ಕಾರವು ಪೂರ್ಣವಾಗಿ ಒಂದು ಸುತ್ತು ಬಂದಿದ್ದು ಅದರೊಳಗೆ ಶಿ ಕಾರವು ಅಂತರ್ಗತವಾಗಿದೆ. ಚ ಕಾರವು ತಲೆಕಟ್ಟಿನಿಂದ ಇನ್ನೂ ಸ್ವಲ್ಪ ಮುಂದಕ್ಕೆ ಬಂದಿದೆ. ಆದರೆ ಆರಂಭದ ಭಾಗ ಇನ್ನೂ ಸುರುಳಿ ಸುತ್ತಿಲ್ಲ. ಭ ಕಾರದ ತಳಭಾಗವು ಒಂದಕ್ಕೊಂದು ಸೇರದಿದ್ದರೂ ಸಮಾನಾಂತರವಾಗಿವೆ. ಮ, ವ ಗಳ ಬಾಯಿಬಿಟ್ಟ ಗೆರೆಯು ಅಕ್ಷರದ ಒಳಮುಖಕ್ಕೆ ತಿರುಗುವ ಸೂಚನೆಗಳನ್ನು ತೋರಿಸುತ್ತಿದೆ. ಕ, ಖ, ಗ, ಙ, ಛ, ಜ, ಣ, ತ, ಧ, ನ, ಬ, ಮ, ಯ, ರ, ಲ, ವ, ಸ ಅಕ್ಷರಗಳು ಬೆಳವಣಿಗೆಯ ಒಂದು ಹಂತವನ್ನು ತಲುಪಿವೆ. ಇಂದಿನ ವರ್ಣಮಾಲೆಗೆ ಹತ್ತಿರವಾಗಿವೆ. ಫ ಕಾರದ ಹೊಕ್ಕಳಿನಿಂದ ಬಾಗುಗೆರೆಯೊಂದು ಬಂದು ಅಕ್ಷರದ ಗೆರೆಯನ್ನು ಭೇದಿಸಿಕೊಂಡು ಕೆಳಕ್ಕೆ ಬಂದಿದೆ. ದ, ಡ ಗಳನ್ನು ವ್ಯತ್ಯಾಸ ಸೂಚಿಸಲು ಡ ಕಾರದ ಕೆಳಗೆರೆಯನ್ನು ಒಳಕ್ಕೆ ಮಡಚಲಾಗಿದೆ. ಮ ಕಾರ ಮತ್ತು ವ ಕಾರವನ್ನು ಈ ಶಾಸನಗಳಲ್ಲಿ ಅಲ್ಲಲ್ಲಿ ವೃತ್ತಾಕಾರದಂತೆ ಸೂಚಿಸಲಾಗಿದೆ.

ಈ ಕಾಲದ ಬಹಳಷ್ಟು ಶಾಸನಗಳಲ್ಲಿ ಅದರಲ್ಲೂ ರಾಜಶಾಸನಗಳು, ಪ್ರತಿಷ್ಠಿತ ಅಧಿಕಾರಿಗಳು ಹೊರಡಿಸಿರುವ ಶಾಸನಗಳಲ್ಲಿ ಶಾಸನಗಳ ಮೇಲ್ಭಾಗ ಮತ್ತು ಅಂತ್ಯಭಾಗಗಳಲ್ಲಿ ಬರುವ ತಲೆಕಟ್ಟುಗಳು ಹಾಗೂ ಒತ್ತಕ್ಷರಗಳ ಗೆರೆಗಳನ್ನು ಅತಿ ಅಲಂಕೃತಗೊಳಿಸಲಾಗಿದೆ. ಇಂತಹ ಅಲಂಕಾರಗಳನ್ನು ಶ್ರವಣಬೆಳಗೊಳದ ಅಕ್ಕನ ಬಸದಿ ಶಾಸನ, ಶಾಂತಲೆಯ ಸಂಬಂಧಿಕರ ನಿಸಿದಿ ಶಾಸನಗಳು, ಪಾರ್ಶ್ವನಾಥ ಬಸದಿಯ ನಿಸಿದಿ ಶಾಸನ, ಬೇಲೂರು ಶಾಸನ, ಹಂಪೆಯ ಶಾಸನಗಳಲ್ಲಿ ಕಾಣಬಹುದಾಗಿದೆ. ಇವೆಲ್ಲಾ ರಾಜರು, ರಾಜಸಂಬಂಧಿಗಳು, ಪ್ರತಿಷ್ಠಿತರು ಹೊರಡಿಸಿದ ಶಾಸನಗಳಾಗಿವೆ. ಅನೇಕ ಶಾಸನಗಳ ಆರಂಭದ ಶ್ರೀ ಕಾರವಂತೂ ಕಲಾಮಾಧ್ಯಮವಾಗಿದೆ. ಶಾಸನ ಆರಂಭದ ಭಾಗದಲ್ಲಿ ಮತ್ತು ಅಂತ್ಯದಲ್ಲಿ ಅನೇಕ ಬಗೆಯ ಡಿಸೈನ್‌ಗಳನ್ನು ಕಾಣಬಹುದು.


ಕಲ್ಯಾಣ ಚಾಳುಕ್ಯರ ಹಾಗೂ ಕಲಚುರಿಗಳ ಅಂತ್ಯದೊಂದಿಗೆ ಬೃಹತ್ ಸಾಮ್ರಾಜ್ಯ ಒಡೆದು ಮೂರು ಭಾಗವಾಗುತ್ತದೆ. ಈ ಭಾಗಗಳಿಗೆ ದ್ವಾರಸಮುದ್ರದ ಹೊಯ್ಸಳರು, ದೇವಗಿರಿಯ ಸೇವುಣರು, ಹನ್ಮಕೊಂಡೆ ಮತ್ತು ಓರಂಗಲ್ಲಿನ ಕಾಕತೀಯರು ವಾರಸುದಾರರಾಗುತ್ತಾರೆ. ಕಲ್ಯಾಣದ ಚಾಳುಕ್ಯರ ಆಶ್ರಯದಲ್ಲಿದ್ದು ಕಲಾಕಾರರು ಈ ಅರಸರ ಆಶ್ರಯವನ್ನು ಪಡೆಯುತ್ತಾರೆ. ಹೀಗಾಗಿ ಹಿಂದಿನ ಬರವಣಿಗೆಯ ರೀತಿಯೇ ಮುಂದುವರಿಯುತ್ತವೆ. ಶಿಲಾಮಾಧ್ಯಮವೂ ಸಹ ಅದೇ ಆಗಿರುತ್ತವೆ.

ಬೇಲೂರಿನ ವೀರಬಲ್ಲಾಳನ ಕಾಲದ ಶಾಸನದಲ್ಲಿನ ಅಕ್ಷರಗಳು ಸು.ಕ್ರಿ.ಶ.೧೨೦೦ರ ಕಾಲಕ್ಕೆ ಸೇರಿದ್ದು, ನರಸಿಂಹನ ನಾರಿಹಳ್ಳ ಶಾಸನವು ಕ್ರಿ.ಶ.೧೨೨೮ಕ್ಕೆ ಸೇರಿದವಾಗಿವೆ. ಬಹುಶಃ ಹೊಯ್ಸಳರ ಉಚ್ಛ್ರಾಯ ಕಾಲವೂ ಇದಾಗಿತ್ತು. ಇಲ್ಲಿಂದ ಮುಂದೆ ಇವರು ತಮಿಳುನಾಡಿನ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದ್ದು, ಉತ್ತರದಲ್ಲಿ ಕಾಕತೀಯ, ಸೇಉಣ ಮತ್ತು ಹೊಸಮಲೆ ದುರ್ಗದ ಅರಸರೊಡನೆ ಯುದ್ಧಗಳಲ್ಲಿ ನಿರತರಾದ್ದರಿಂದ ಕಲಾಪ್ರೋತ್ಸಾಹವು ಕ್ಷೀಣವಾಗತೊಡಗುತ್ತದೆ.

ಈ ಶಾಸನಗಳಲ್ಲಿ ಶ್ರೀ ಕಾರವು ಇನ್ನೂ ಬದಲಾಗಿದೆ. ರ ಕಾರದ ಒತ್ತಕ್ಷರವು ಇದರಲ್ಲಿ ಒಂದು ಸುತ್ತು ಬಂದಿದ್ದರೂ ಆ ಗೆರೆ ಹಿಂದಿನ ಗೆರೆ ಸೇರಿ ವೃತ್ತಾಕಾರವನ್ನು ಸೃಷ್ಟಿಸಿಲ್ಲ. ಕ ಮತ್ತು ರ ಕಾರಕ್ಕಿರುವ ವ್ಯತ್ಯಾಸ ಅತ್ಯಲ್ಪ. ರ ಕಾರದ ವೃತ್ತಕ್ಕೂ ತಲೆಕಟ್ಟಿಗೂ ಮಧ್ಯೆ ಅಡ್ಡಗೆರೆ ಬಂದಲ್ಲಿ ಅದು ಕ ಕಾರವಾಗುತ್ತದೆ. ಅ ಮತ್ತು ಆ ಕಾರಕ್ಕೂ ವ್ಯತ್ಯಾಸ ಕಡಿಮೆ. ಆ ಕಾರದ ಒಳಗಿನ ಗೆರೆಯಿಂದ ಅದನ್ನು ಗುರುತಿಸಬೇಕು. ಈ ಕಾಲದ ಶಾಸನಗಳಲ್ಲಿಯೂ ಅನುಸ್ವಾರವನ್ನು ಎಲ್ಲಿ ಬಳಸಬೇಕೆಂಬ ಸ್ಪಷ್ಟನೆ ಇಲ್ಲ. ಸಾಲಿನ ಮೇಲೆ, ಸಾಲಿನ ಮಧ್ಯೆ ಎರಡೂ ರೀತಿಗಳಲ್ಲಿ ಬಳಸಿರುತ್ತಾರೆ.


ಈ ಕಾಲಕ್ಕೆ ಅರ್ಧಾಕ್ಷರ (ಪೂರ್ಣ ವ್ಯಂಜನ)ವನ್ನು ಉಳಿದ ಅಕ್ಷರಗಳ ಸಮಕ್ಕೆ ಬರೆದು ತಲೆಕಟ್ಟನ್ನು ಮೇಲಕ್ಕೆ ಬರೆಯಬೇಕಿತ್ತು. ಎ ಮತ್ತು ಏ ಕಾರದ ಕಾಗುಣಿತವನ್ನು ಸೂಚಿಸಲು ಎ ಕಾರದ ಕಾಗುಣಿತವನ್ನು ಹಿಂದಕ್ಕೆ ಸುರುಳಿಯಂತೆ ಮಡಚಿರುವುದು ಕಾಣುತ್ತದೆ. ಅರ್ಧ ರ ಕಾರವು (ೞ) ಅಕ್ಷರಗಳ ತಲೆಗಳ ಮೇಲೆ ಪಕ್ಕಕ್ಕೆ ಬರುವಂತೆ ಕೆತ್ತಿರುತ್ತಾರೆ. ಡ ಮತ್ತು ಢ ಕಾರಗಳಿಗೆ ವ್ಯತ್ಯಾಸ ತೋರಿಸಲು ಢ ಕಾರದ ಕೆಳಗೆ ಚಿಕ್ಕಗೆರೆ ಕೆಳಕ್ಕೆ ಬಂದಿರುತ್ತದೆ. ಶ ಕಾರದ ಮೇಲ್ಭಾಗದ ವೃತ್ತವು ಸಣ್ಣ ಸುರುಳಿಯಾಗಿದೆ. ಥ ಕಾರವು ಈಗಿನ ರೂಪಕ್ಕೆ ಬಂದಿದ್ದು ಮಧ್ಯೆ ಚುಕ್ಕೆ ಕೆಲವೆಡೆ ಚಿಕ್ಕ ಸೊನ್ನೆಯನ್ನು ಹೊಂದಿದೆ. ಹೊಕ್ಕಳು ಸೀಳಿಲ್ಲ. ಯ ಕಾರದ ಒತ್ತಕ್ಷರವು ಈ ಮೊದಲು ನೇರವಾಗಿ ಅಕ್ಷರದಿಂದ ಪ್ರಾರಂಭವಾಗಿ ಗೆರೆಯು ಮುಂದಕ್ಕೆ ಬಂದು ಬಾಗಿ ಸಮಾನಾಂತರವಾಗಿ ಬೆಳೆದು ಮೇಲಕ್ಕೆ ಬಂದಿತ್ತು. ಈ ಹಂತದಲ್ಲಿ ಇದು ಅಕ್ಷರದಿಂದಲೇ ಪ್ರಾರಂಭವಾಗಿ ಒಂದು ಸಣ್ಣಗೆರೆ ನೇರವಾಗಿ ಇಳಿದು ಎಡಕ್ಕೆ ತಿರುಗಿ ಅರೆ ವೃತ್ತವನ್ನು ಸೃಷ್ಟಿಸಿ ನೇರವಾಗಿ ಮೇಲಕ್ಕೆ ಹೋಗಿದೆ. ಐ ಕಾರದ ಕಾಗುಣಿತವು ಅಕ್ಷರದ ಕೆಳಭಾಗದಿಂದ ಬಂದು ಅರ್ಧವೃತ್ತಾಕಾರವಾಗಿ ಮತ್ತೆ ಮೇಲಕ್ಕೆ ಹೋಗಿದೆ. ಋ ಕಾರದ ಕಾಗುಣಿತವು ಅಕ್ಷರದ ಕೆಳಗೆ ಎಡಭಾಗದಲ್ಲಿ ಆರಂಭವಾಗಿ ಸಾಲಿಗೆ ಸಮಾನಾಂತರವಾಗಿ ಮುಂದುವರಿದು ಅಕ್ಷರಕ್ಕೆ ತಾಗಿದೆ.

ಕ್ರಿ.ಶ.ಸು.೧೨೦೦ರ ನಂತರ ಹೊಯ್ಸಳರು ತಮ್ಮ ಗಮನವನ್ನು ದಕ್ಷಿಣ ಕರ್ನಾಟಕದ ಜೊತೆಗೆ ತಮಿಳುನಾಡಿನ ರಾಜಕೀಯದ ಕಡೆಗೂ ಹರಿಸಿದರು. ಹೀಗಾಗಿ ಇವರ ಕಾಲದಲ್ಲಿ ದಕ್ಷಿಣ ಕರ್ನಾಟಕವೂ ಸೇರಿದಂತೆ ತಮಿಳುನಾಡಿನಲ್ಲಿ ತಮಿಳು ಲಿಪಿ-ಭಾಷೆಯ ಶಾಸನಗಳು ರಚಿತವಾದವು. ತಮಿಳುನಾಡಿನ ಅನೇಕ ಅಧಿಕಾರಿಗಳು ದಕ್ಷಿಣ ಕರ್ನಾಟಕದ ಅನೇಕ ಕಡೆ ನೆಲಸಿದ್ದರು. ಹೀಗಾಗಿ ದಕ್ಷಿಣ ಕರ್ನಾಟಕದ ಉತ್ತರ ಭಾಗದಲ್ಲಿ ಇವರು ಕನ್ನಡ ಶಾಸನಗಳನ್ನು ಬರೆಸಿರುತ್ತಾರೆ. ದಕ್ಷಿಣದಲ್ಲಿ ಅಪರೂಪವಾಗಿ ಕನ್ನಡದಲ್ಲಿ ಬರೆಸಿರುತ್ತಾರೆ. ಉತ್ತರದಲ್ಲಿ ಸೇಉಣರು ಕರ್ನಾಟಕದ ಭಾಗಗಳಲ್ಲಿ (ಕನ್ನಡ ಮಾತನಾಡುವ) ಕನ್ನಡ ಲಿಪಿ-ಭಾಷೆಯಲ್ಲಿ ಶಾಸನಗಳನ್ನು ಹಾಕಿಸಿರುತ್ತಾರೆ. ಉಳಿದ ಕಡೆ ನಾಗರಿ ಲಿಪಿ-ಮರಾಠಿ ಭಾಷೆಯನ್ನು ಬಳಸಿರುತ್ತಾರೆ.




ಎ.ಕ. IX ಬೇ.168 ಬೇಲೂರ ವೀರಬಲ್ಲಾಳನ ತಾಮ್ರ ಶಾಸನ ದೇ.ಕೊಂ.ರೆಡ್ಡಿ

ಕಲ್ಯಾಣ ಚಾಳುಕ್ಯ-ಹೊಯ್ಸಳ-ಯಾದವ-ಇತರೆ ಲಿಪಿಪಟ್ಟಿಕೆ



ದೇ.ಕೊ. ರೆಡ್ಡಿ



ದೇ.ಕೊಂ.ರೆಡ್ಡಿ

ಕ್ರಿ.ಶ.೧೨೮೮ರ ಸೇಉಣ ರಾಮಚಂದ್ರನ ಡಂಬಳದ ಶಾಸನದಲ್ಲಿ ಅಕ್ಷರದ ಬೆಳವಣಿಗೆಯು ಮುಂದುವರಿಕೆಯನ್ನು ಕಾಣಬಹುದಾಗಿದೆ. ಅ ಕಾರದ ಒಳ ಗೆರೆ ಈಗ ಪಕ್ಕದ ಗೆರೆಗೆ ಅಂಟಿಕೊಂಡಿದೆ. ಆ ಕಾರದ ಪಕ್ಕದ ಸುರುಳಿ ಒಳಗಿನ ಗೆರೆಗೆ ಸೇರಿಕೊಂಡು ಇಂದಿನ ಅಕ್ಷರದ ರೂಪವನ್ನು ಬಹುಮಟ್ಟಿಗೆ ಪಡೆದಿದೆ. ಕ ಕಾರದ ಮೇಲ್ಭಾಗದ ತಲೆಕಟ್ಟಿನ ಭಾಗ ಅಕ್ಷರಕ್ಕೆ ಅಂಟಿಕೊಂಡಿಲ್ಲ. ರ ಕಾರವೂ ಸಹ ಕೆಲವೆಡೆ ತಲೆಕಟ್ಟನ್ನು ಬೇರೆ ಮಾಡಿಕೊಂಡಿದೆ. ಉಳಿದ ಡ, ತ, ದ, ಧ, ಪ, ಫ, ಷ, ಸ, ಹ, ಳ ಕಾರಗಳಲ್ಲಿಯೂ ತಲೆಕಟ್ಟು ಅಕ್ಷರದಿಂದ ಬೇರೆಯಾಗಿದೆ. ಇದು ಅಕ್ಷರಗಳ ಮುಂದಿನ ಬೆಳವಣಿಗೆಯಲ್ಲಿ ಪ್ರಮುಖವಾದ ಘಟ್ಟ, ಈ ತಲೆಕಟ್ಟು ಅಕ್ಷರದಿಂದ ಬಹು ಕಡಿಮೆ ಅಂತರದಲ್ಲಿ ಬೇರೆಯಾಗಿವೆ. ಈ ಬೆಳವಣಿಗೆಗೆ ಕಾರಣ ಅಕ್ಷರದ ಕೆಳಭಾಗವನ್ನು ಮೊದಲು ಬರೆದು ನಂತರ ತಲೆಕಟ್ಟು ಬರೆಯಲು ತೊಡಗಿದ್ದು. ಶ್ರೀ ಕಾರವು ಸ್ವಲ್ಪ ಬೆಳವಣಿಗೆಯನ್ನು ತೋರಿಸಿದೆ. ರ ಕಾರದ ಗೆರೆಯು ವೃತ್ತಾಕಾರವಾಗಿ ಅಕ್ಷರದ ಸುತ್ತ ಬಂದಿದ್ದು, ಅಂತ್ಯದಲ್ಲಿ ಗೆರೆಯು ಚಿಕ್ಕ ವೃತ್ತವನ್ನು ಸೃಷ್ಟಿಸಿದೆ. ಮ ಮತ್ತು ವ ಗಳು ಕೆಲವೆಡೆ ವೃತ್ತಾಕಾರದಲ್ಲಿ ರಚಿತವಾಗಿವೆ. ಎಲ್ಲ ಅಕ್ಷರಗಳ ಮೇಲೆ ತಲೆಕಟ್ಟುಗಳು ಇರಲೇಬೇಕೆಂಬ ರೀತಿಯಲ್ಲಿ ಬರೆದಿರುತ್ತಾರೆ. (ಜ ಕಾರದಂತಹ ಅಕ್ಷರಗಳನ್ನು ಬಿಟ್ಟು) ರಾಮಚಂದ್ರನಿಗಿಂತ ಹಿಂದೆ ಆಳಿದ ಸೇಉಣ ಮಾದೇವನ ಕಲ್ಕೆರೆ ಶಾಸನದಲ್ಲಿಯೇ ಈ ಲಕ್ಷಣಗಳು ಕಂಡುಬರುತ್ತವೆ. ಆದರೆ ಕೆಲವು ಅಕ್ಷರಗಳಲ್ಲಿ ಮಾತ್ರ ತಲೆಕಟ್ಟುಗಳು ಬಿಡುಗಡೆ ಪಡೆದಿದ್ದುದನ್ನು ಕಾಣಬಹುದು. ಚ ಕಾರದ ಮುಂಬದಿ ಕೆಳಕ್ಕೆ ಬಾಗಿದೆ. ಶ್ರೀ ಕಾರವೂ ಗಮನಾರ್ಹ. ಅಂತಿಮ ಗೆರೆ ಸುರುಳಿಸುತ್ತತ್ತಾ ಹೊರಕ್ಕೆ ಬಂದಿದೆ.

ಕ್ರಿ.ಶ.೧೩೧೫ರ ಕುಮ್ಮಟದುರ್ಗದ ಶಾಸನದಲ್ಲಿ ತಲೆಕಟ್ಟುಗಳು ಮತ್ತೆ ಕೆಲವು ಅಕ್ಷರಗಳ ತಲೆಗೆ ಬಂದು ಅಂಟಿಕೊಂಡಿವೆ. ಚ ಕಾರದ ಮುಂಭಾಗವು ವೃತ್ತಾಕಾರಕ್ಕೆ ತಿರುಗಿದೆ. ದ ಕಾರವು ಕೆಲವು ಕಡೆ ಪೂರ್ಣವಾಗಿ ಸೇರಿದೆ. ತ ಕಾರವು ವೃತ್ತಾಕಾರವಾಗಿದ್ದು ಅಕ್ಷರದ ಒಂದು ಭಾಗವು ಒಳಕ್ಕೆ ತಿರುಗಿದೆ. ಳ ಕಾರದ ಕೆಳಭಾಗವು ತನ್ನ ಪಾರಂಪರಿಕ ಬಳುಕನ್ನು ಬಿಟ್ಟು ನೀಳವಾಗಿದೆ. ಶ್ರೀ ಕಾರವು ಒಳಗೆ ಶ ಕಾರದ ರೂಪವನ್ನು ಕಳೆದುಕೊಂಡು ಸಾಂಕೇತಿಕವಾಗಿದೆ. ಆ ಕಾರದ ಕಾಗುಣಿತವು ಅಕ್ಷರದಿಂದ ಬಂದ ಗೆರೆ ಕೆಳಕ್ಕೆ ಬಾಗಿ ಮತ್ತೆ ಪಕ್ಕಕ್ಕೆ ತಿರುಗಿದೆ. ರ ಕಾರದ ವೃತ್ತಾಕಾರವು ಹೋಗಿ ಕ ಬರೆಯುವ ರೀತಿಯಲ್ಲಿ ಬರೆಯಲಾಗಿದೆ.

ಈ ಶಾಸನದೊಂದಿಗೆ ಈ ಯುಗದ ಅಕ್ಷರಗಳ ಅಂತ್ಯ ಕಾಣುತ್ತೇವೆ.

ವಿಜಯನಗರ ಲಿಪಿ

ಕ್ರಿ.ಶ.೧೩೦೦ರ ನಂತರ ನಡೆದ ಮುಸ್ಲಿಮರ ಧಾಳಿಗಳಿಂದ ಹೊಯ್ಸಳ, ಸೇಉಣ ಮತ್ತು ಕಾಕತೀಯ ಸಾಮ್ರಾಜ್ಯಗಳು ಅಲುಗಾಡತೊಡಗಿದವು. ಎರಡನೆಯ ಬಾರಿ ಮತ್ತೊಮ್ಮೆ ಧಾಳಿಗಳಾದಾಗ ಈ ಸಾಮ್ರಾಜ್ಯಗಳು ಮಣ್ಣುಗೂಡಿದವು. ಇದರೊಂದಿಗೆ ಇವರ ಆಶ್ರಯದಲ್ಲಿದ್ದ ಕಲಾಕಾರರು ಆಶ್ರಯವಿಲ್ಲದೆ ಬೇರೆ ಕೆಲಸಗಳನ್ನು ಕೈಗೊಂಡರು. ಇಲ್ಲವೇ ಬದಲಾದ ಪರಿಸ್ಥಿತಿಗೆ ಬದಲಾದರು. ಈ ಕಲಾಕಾರರ ನಿರ್ಮಾಣದ ದೇವಾಲಯಗಳು ಧಾಳಿಕಾರರಿಗೆ ತುತ್ತಾಗಿ ನಾಶವಾದವು. ಮುಂದೆ ಈ ದೇವಾಲಯಗಳನ್ನು ಧಾಳಿಗಳು ನಿಂತ ಮೇಲೂ ಸರಿಮಾಡಬಹುದಾದ ಕಲಾಕಾರರು ಉಳಿದಿರಲಿಲ್ಲ. ಹೀಗಾಗಿ ಈ ಬಗೆಯ ರಚನೆಗಳು ಹಾಗೂ ರಚನೆಗೆ ಪ್ರೋತ್ಸಾಹ ನೀಡಬಹುದಾದ

ರಾಜರಾಗಲೀ, ಸಾಮಂತರಾಗಲೀ, ಶ್ರೀಮಂತರಾಗಲೀ ಉಳಿದಿರಲಿಲ್ಲ. ಹೀಗಾಗಿ ಈ ಮೂರೂ ಸಾಮ್ರಾಜ್ಯಗಳ ಕಲಾ ಶ್ರೀಮಂತಿಕೆ ಅಂತ್ಯ ಕಂಡಿತು.

ಕ್ರಿ.ಶ.ಸು.೧೩೩೬ರಲ್ಲಿ ವಿಜಯನಗರವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಹೊಸ ರಾಜ್ಯವೊಂದು ಉದಿಸಿತು. ಇದರ ನೇತೃತ್ವವನ್ನು ಯಾದವ ವಂಶಕ್ಕೆ ಸೇರಿದ ಸಂಗಮನ ಮಕ್ಕಳಾದ ಹರಿಹರ–ಬುಕ್ಕರೆಂಬ ಐದು ಜನ ಸೋದರರು ವಹಿಸಿದರು. ಇವರು ಹರಿಹರದ ಸುತ್ತಮುತ್ತಿನವರಾದ್ದರಿಂದ ಹೊಯ್ಸಳರ ಸಂಬಂಧವನ್ನು ಹೊಂದಿದ್ದುದರಿಂದ ಬಹುಬೇಗನೆ ಹೊಯ್ಸಳರ ನಂತರ ಯಾವುದೇ ಅಡೆತಡೆ ಇಲ್ಲದೆ ಇಡೀ ಹೊಯ್ಸಳ ಸಾಮ್ರಾಜ್ಯ ಹಾಗೂ ಕಾಕತೀಯರ ರಾಜ್ಯದ ದಕ್ಷಿಣದ ಭಾಗಕ್ಕೆ ವಾರಸುದಾರರಾಗುತ್ತಾರೆ. ಇವರ ಮೊದಲ ಗುರಿ ಸಾಮ್ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡಿ ಭೀತರಾದ ಜನರಿಗೆ ಧೈರ್ಯ ನೀಡುವುದಾಗಿತ್ತು. ನಾಶವಾದ ದೇಗುಲಗಳಲ್ಲಿ ಅಥವಾ ಪೂಜೆ ನಿಂತ ದೇವಾಲಯಗಳಲ್ಲಿ ಪೂಜೆಗೆ ಏರ್ಪಾಟು ಮಾಡುವುದಾಗಿತ್ತು.

ಕೃಷ್ಣಾನದಿಯ ಆಚೆಗಿರುವ ಬಿಜಾಪುರದಲ್ಲಿ ಷಾಹಿಗಳ ರಾಜ್ಯ ಇದೇ ಕಾಲಕ್ಕೆ ಆರಂಭವಾಗುತ್ತದೆ. ಕೆಲವು ವೇಳೆ ವಿಜಯನಗರ ಮತ್ತು ಈ ರಾಜ್ಯಗಳ ಮಧ್ಯೆ ಯುದ್ಧಗಳೂ ನಡೆಯುತ್ತಿರುತ್ತವೆ. ಹೀಗಾಗಿ ಕರ್ನಾಟಕದ ಉತ್ತರ ಭಾಗ ಮಹಾರಾಷ್ಟ್ರದ ದಕ್ಷಿಣ ಭಾಗಗಳು (ಪಾರಂಪರಿಕ ಕನ್ನಡದ ನೆಲ) ಷಾಹಿಗಳ ಅಧೀನದಲ್ಲಿರುತ್ತದೆ. ಪೂರ್ವದಲ್ಲಿ ಕಾಕತೀಯ ಸಾಮ್ರಾಜ್ಯವೂ ಇವರಿಗೆ ಸೇರಿರುತ್ತದೆ. ಹೀಗಾಗಿ ಈ ಪ್ರದೇಶಗಳಲ್ಲಿ ಕನ್ನಡ ಲಿಪಿಯ ಬಳಕೆ ಕಡಿಮೆಯಾಗುತ್ತದೆ. ಈ ಶಾಸನಗಳ ಸ್ಥಾನವನ್ನು ಅರಬ್ಬೀ–ಪರ್ಶಿಯನ್ ಶಾಸನಗಳು ಆಕ್ರಮಿಸುತ್ತವೆ. ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿ ನಿಧಾನವಾಗಿ ಜನರಲ್ಲಿ ಸಮಾಧಾನತೆ ಬರುತ್ತಿದ್ದಂತೆ ಮತ್ತೆ ದೇವಾಲಯ ನಿರ್ಮಾಣ, ಜೀರ್ಣೋದ್ಧಾರ ಕಾರ್ಯಗಳನ್ನು ಮಾಡಿಸಿದ ಬಗ್ಗೆ ಶಾಸನಗಳು ರಚನೆಯಾಗಲಾರಂಭಿಸುತ್ತವೆ. ಆದರೆ ಹಿಂದಿನ ರೀತಿಯಲ್ಲಲ್ಲ. ದಕ್ಷಿಣದ ಮೂರೂ ಸಾಮ್ರಾಜ್ಯಗಳ ಅಸ್ತಂಗತದೊಂದಿಗೆ ಅವುಗಳ ಆಶ್ರಯದಲ್ಲಿದ್ದು ಶಿಲ್ಪಿಗಳು ಆಶ್ರಯದಾತರಿಲ್ಲದೆ ತಮ್ಮ ಕಸುಬನ್ನು ಬಿಟ್ಟರೆಂದು ಹಿಂದೆ ಹೇಳಿದ್ದೇನಷ್ಟೆ. ಈಗ ಈ ಸ್ಥಾನವನ್ನು ತುಂಬಿದವರು ಚಪ್ಪಡಿಗಲ್ಲಿನಲ್ಲಿ ಒರಟು ಕೆಲಸ ಮಾಡುತ್ತಿದ್ದ ಒಡ್ಡರು. ಇವರು ಬೃಹತ್ ಕೋಟೆಗಳನ್ನು, ದೇವಾಲಯಗಳನ್ನು ನಿರ್ಮಿಸುವುದರೊಂದಿಗೆ ಶಿಲಾಶಾಸನಗಳನ್ನೂ ಬರೆದಿದ್ದಾರೆ. ಈ ಕಾಲಕ್ಕೆ ಶಾಸನ ರಚನೆಗೆ ಮಾಧ್ಯಮವಾದ ಶಿಲೆ ಗಟ್ಟಿಯಾದ ಚಪ್ಪಡಿಗಲ್ಲು. ಇದರಲ್ಲಿ ಶಾಸನ ಕೆತ್ತಬೇಕಾದಲ್ಲಿ ಹೆಚ್ಚಿನ ಬಲ ಬೇಕಾಗಿತ್ತು. ಹೀಗಾಗಿ ಬಳಪದಕಲ್ಲಿನ ಕೆತ್ತನೆಗೆ ಬೇಕಾಗಿದ್ದ ಸೂಕ್ಷ್ಮವಾದ ಆಯುಧಗಳು ನಿರುಪಯೋಗವಾದವು. ಹೀಗೆಂದ ಮಾತ್ರಕ್ಕೆ ಬಳಪದ ಕಲ್ಲನ್ನು ಬಳಸಲೇ ಇಲ್ಲವೆಂದು ಅರ್ಥವಲ್ಲ. ಅಲ್ಲಲ್ಲಿ ಬಳಸಿದ್ದಾರೆ. ಆದರೆ ಸಾಮಾನ್ಯವಾಗಿ ಚಪ್ಪಡಿಗಲ್ಲನ್ನೇ ಬಳಸಿರುತ್ತಾರೆ. ಈ ಶಿಲ್ಪಿಗಳು ಮುಖ್ಯವಾಗಿ ಕರ್ನಾಟಕದ ಪೂರ್ವ ಭಾಗಗಳಿಂದ ಬಂದವರು. ಶಿಲ್ಪಕಲಾ ಮಾಧ್ಯಮಗಳು ಬದಲಾದುದರಿಂದ ಬಂದವರು. ಹೀಗಾಗಿ ಕೆಲವು ಬದಲಾವಣೆಗಳು ಶಾಸನಗಳ ಮೇಲೆ ಆದವು.

೧. ಶಾಸನಗಳ ಅಲಂಕಾರ ಕಡಿಮೆ ಆಯಿತು.

೨. ಚಿಕ್ಕ ಅಕ್ಷರಗಳ ಶಾಸನಗಳು ಗಣನೀಯವಾಗಿ ಕಡಿಮೆಯಾದವು.


೩. ಅಕ್ಷರಗಳ ಗಾತ್ರ ದೊಡ್ಡದಾದ್ದರಿಂದ ದೀರ್ಘವಾದ ಕಾವ್ಯಮಯವಾದ ಶಾಸನಗಳು ಕಡಿಮೆಯಾದವು.

೪. ರಾಜರು ವೈದಿಕಧರ್ಮದ ಯತಿಗಳಿಂದ ಪ್ರಭಾವಿತರಾದುದರಿಂದ ತಾಮ್ರಶಾಸನಗಳು ನಾಗರಿಲಿಪಿಯಲ್ಲಿ ಹೆಚ್ಚಿಗೆ ರಚನೆಯಾಗಿವೆ.

೫. ಶಾಸನಗಳ ಮೇಲ್ಮೈಯ್ಯನ್ನು ಅಲಂಕರಿಸುವುದು ಕಡಿಮೆಯಾಗಿ ಹುಟ್ಟುಗುಂಡುಗಳ ಮೇಲೆ, ಕೋಟೆ ಗೋಡೆಗಳ ಮೇಲೆ ಎಲ್ಲೆಂದರಲ್ಲಿ ಶಾಸನಗಳನ್ನು ಬರೆಸಿದ್ದು.

೬. ಸ್ಥಳೀಯ ಅಕ್ಷರಸ್ಥ ಶಿಲ್ಪಿಗಳು ಬರೆದಿರುವ ಶಾಸನಗಳ ಭಾಷೆಯು ಸ್ಥಳೀಯ ಬಳಕೆಯ ಭಾಷೆಯೇ ಆಗಿರುತ್ತದೆ.


ಕ್ರಿ.ಶ.೧೩೬೮ನೆಯ ಬುಕ್ಕರಾಯನ ಶ್ರವಣಬೆಳಗೊಳದ ಶಾಸನದಲ್ಲಿ ಹೊಯ್ಸಳರ ಅಕ್ಷರಗಳ ಮುಂದುವರಿದ ಛಾಯೆಯನ್ನು ಕಾಣಬಹುದು. ಶಾಸನದ ಆರಂಭದಲ್ಲಿಯಾಗಲೀ, ಅಂತ್ಯದಲ್ಲಿಯಾಗಲಿ ಯಾವುದೇ ಅಲಂಕಾರಗಳಿಲ್ಲದೆ. ನೇರವಾಗಿ ಆರಂಭವಾಗಿರುವ ಈ ಶಾಸನದಲ್ಲಿ ಅಕ್ಷರಗಳನ್ನು ದಪ್ಪದಾಗಿ ಬರೆಯಲಾಗಿದೆ. ಈ ಶಾಸನಕ್ಕೆ ಬಳಸಿರುವ ಕಲ್ಲು ಬಳಪದ ಕಲ್ಲು. ಸು.೫ ಅಡಿ ಎತ್ತರವಿರುವ ಈ ಶಾಸನದಲ್ಲಿ ಹೊಯ್ಸಳರ ಕಾಲದಲ್ಲಾಗಿದ್ದರೆ ಸು.೧೦೦ ಸಾಲುಗಳನ್ನಾದರೂ ರಚಿಸುತ್ತಿದ್ದರು. ಆದರೆ ಇಲ್ಲಿ ೩೫ ಸಾಲುಗಳನ್ನು ಬರೆಯಲಾಗಿದೆ. ಇದು ಸೂಕ್ಷ್ಮ ಕುಸುರಿ ಮಾಡುವ ಶಿಲ್ಪಿಗಳ ಅಭಾವವಾಗಿದ್ದುದ್ದನ್ನು ತೋರಿಸುತ್ತದೆ.



ಶ್ರವಣ ಬೆಳಗೊಳದ ಬುಕ್ಕರಾಯನ ಶಾಸನ ದೇ.ಕೊಂ.ರೆಡ್ಡಿ

ಅನೇಕ ಅಕ್ಷರಗಳು ಇಂದಿನ ಬರೆವಣಿಗೆಯ ಅಕ್ಷರಗಳಿಗೆ ಸಮೀಪವಾಗಿವೆ. ಗ, ದ, ಪ, ರ, ಷ, ಹ ಗಳಲ್ಲಿನ ತಲೆಕಟ್ಟು ಕೆಲವೆಡೆ ಅಕ್ಷರದಿಂದ ಬೇರೆಯಾಗಿದೆ. ಕೆಲವೆಡೆ ಇದು ಅಕ್ಷರಕ್ಕೆ ಅಂಟಿಕೊಂಡಿದೆ. ಚ ಕಾರದ ಮುಂಭಾಗವು ವೃತ್ತಾಕಾರವಾಗಿದೆ. ಅ ಕಾರದ ಒಳಗೆರೆಯು ಒಂದು ಗೆರೆಗೆ ಮಾತ್ರ ಅಂಟಿಕೊಂಡಿದೆ ಹಾಗೂ ಮೇಲ್ಭಾಗದ ಗೆರೆಯು ಸ್ವಲ್ಪ ಪಕ್ಕಕ್ಕೆ ಬಾಗಿದೆ. ಷ ಕಾರದ ಒಳ ಗೆರೆ ಅಡ್ಡವಾಗಿ ನೇರವಾಗಿದ್ದುದು ಈಗ ಮೇಲಿನಿಂದ ಕೆಳಕ್ಕೆ ಬಾಗಿದೆ. ಳ ಕಾರದ ಕೆಳಗಿನ ಗೆರೆಯು ಈ ಹಂತದಲ್ಲಿ ಎಡಕ್ಕೆ ಸುರುಳಿಯಂತೆ ತಿರುಗಿದೆ. ದ ಕಾರವು ಇಲ್ಲಿ ಪೂರ್ಣರೂಪವನ್ನು ಪಡೆದಿದೆ. ಭ ಕಾರದ ಎರಡು ಭಾಗಗಳು ಈ ಕಾಲಕ್ಕೆ ಒಂದಾಗಿವೆ. ಟ ಕಾರವು ಹಿಂದಿನ ರೂಪಕ್ಕಿಂತ ಸ್ವಲ್ಪ ಬೆಳವಣಿಗೆಯನ್ನು ತೋರಿಸುತ್ತಿದೆ. ಟ ಕಾರದ ಮೇಲ್ಭಾಗವು ಅಡ್ಡವಾದ ಗೆರೆಯನ್ನು ಹೊಂದಿದ್ದು ಅದರ ಕೆಳಗಿನ ಭಾಗವು ಅದಕ್ಕೆ ಸಮಾನಾಂತರವಾಗಿ ಬಂದಿದ್ದು ಗೆರೆಯ ಮಧ್ಯ ಭಾಗವು ಒಳಕ್ಕೆ ಬಾಗಿದೆ. ಶ್ರೀ ಕಾರವು ಹಿಂದಿಗಿಂತ ಸ್ವಲ್ಪ ಹೆಚ್ಚಿನ ಬೆಳವಣಿಗೆಯನ್ನು ತೋರಿಸುತ್ತಿದೆ. ರ ಕಾರದ ಒತ್ತಕ್ಷರವು ಒಂದು ಪೂರ್ಣ ವೃತ್ತವಾಗಿ ಸುತ್ತಿ

ಬಂದು ಅಂತ್ಯದಲ್ಲಿ ಒಳಮುಖಕ್ಕೆ ಸುರುಳಿಯಾಗಿ ಆ ಸುರುಳಿಯಿಂದ ಸ್ವಲ್ಪ ಉದ್ದವಾಗಿ ಗೆರೆ ಬಂದಿದೆ. ಕಾಗುಣಿತಗಳಲ್ಲಿ ಅ ಕಾರವು ಕೆಳಕ್ಕೆ ಇಳಿದು ಸ್ವಲ್ಪ ಒಳಕ್ಕೆ ಬಾಗಿದೆ. ಇ ಕಾರವು ಅಕ್ಷರಗಳ ತಲೆಯ ಮೇಲೆ ಬಾಲಚಂದ್ರನ ಗೆರೆಯಂತೆ ಚಿಕ್ಕದಾಗಿದೆ. ಈ ಕಾರವು ಅದೇ ಗೆರೆಯ ತುದಿಯಲ್ಲಿ ಚಿಕ್ಕ ಸುರುಳಿಯನ್ನು ಹೊಂದಿದೆ. ಉ ಕಾರವು ಎಲ್ಲ ಅಕ್ಷರಗಳಲ್ಲಿ ಪಕ್ಕಕ್ಕೆ ಬಂದಿದೆ. ಊ ಕಾರದಿಂದ ಮುಂದುವರಿದ ಗೆರೆಯು ಮತ್ತೆ ಕೆಳಕ್ಕೆ ಬಾಗಿ ಮತ್ತೆ ಒಳಕ್ಕೆ ಬಾಗಿದೆ. ಎ ಮತ್ತು ಏ ಕಾರಗಳ ಕಾಗುಣಿತ ವ್ಯತ್ಯಾಸ ಹೆಚ್ಚಿಲ್ಲ. ಅಕ್ಷರದ ಎಡಭಾಗದಿಂದ ಬಂದ ಗೆರೆಯು ಮೇಲ್ಗಡೆ ಒಂದು ಸುರುಳಿಯನ್ನು ಸೃಷ್ಟಿಸಿದೆ. ಒ ಕಾರ, ಓ ಕಾರ ಎರಡರಲ್ಲೂ ವ್ಯತ್ಯಾಸವಿಲ್ಲ. ಅಕ್ಷರಕ್ಕೆ ಎ ಕಾರವನ್ನು ನೀಡಿ ನಂತರ ಅಕ್ಷರದ ಪಕ್ಕದಲ್ಲಿ ಉ ಕಾರದ ಕಾಗುಣಿತ ಚಿಹ್ನೆಯನ್ನು ನೀಡಲಾಗಿದೆ. ಒತ್ತಕ್ಷರಗಳೂ ಚಿಕ್ಕವಾಗಿವೆ. ಹಿಂದಿನ ಶಾಸನಗಳಂತೆ ದೊಡ್ಡದಾಗಿಲ್ಲ. ಒತ್ತಕ್ಷರಗಳಿರುವುದೇ ಕಾಣದಷ್ಟು ಚಿಕ್ಕದಾಗಿವೆ. ತ ಕಾರದ ಒತ್ತಕ್ಷರವು ಹಿಂದಿನ ಶಾಸನಗಳಲ್ಲಿರುವಂತೆಯೇ ಅಡ್ಡಗೆರೆಯಂತೆ ಬರೆಯಲಾಗಿತ್ತು. ಇಲ್ಲಿಯೂ ಅದು ಮುಂದುವರಿದಿದೆ. ಕ್ರಿ.ಶ.೧೪೩೦ರ ಒಂದನೆಯ ದೇವರಾಯನ ಕಾಲದ ಕಟ್ಟಿಗೆ ಅಹಮದ್‌ಖಾನನ ಹಂಪೆಯ ಶಾಸನದಲ್ಲಿ ವಿಜಯನಗರದ ಮುಂದುವರಿದ



ಕಟ್ಟಿಗೆ ಅಹಮದಖಾನನ ಶಾಸನ, ಹಂಪೆ ದೇ.ಕೊ. ರೆಡ್ಡಿ

ಲಿಪಿಯ ಬೆಳವಣಿಗೆಯನ್ನು ಕಾಣಬಹುದಾಗಿದೆ. ಅನೇಕ ಅಕ್ಷರಗಳ ತಲೆಯ ಮೇಲೆ ಇರುವ ತಲೆಕಟ್ಟು ಅಕ್ಷರದೊಂದಿಗೆ ಒಂದು ಸರಳರೇಖೆಯ ಮೂಲಕ ಸಂಪರ್ಕವನ್ನು ಹೊಂದಿದೆ. ಒತ್ತಕ್ಷರಗಳು ಅತೀ ಚಿಕ್ಕದಾಗಿವೆ. ರ ಕಾರದ ಒತ್ತಕ್ಷರವು ಹಿಂದಿನಂತೆ ಅಕ್ಷರದ ಮೇಲಕ್ಕೆ ಹೋಗಿಲ್ಲ. ಅಕ್ಷರದ ಕೆಳಭಾಗದಲ್ಲಿಯೇ ಇದೆ. ಅ ಕಾರ ಬಳಸುವ ಕಡೆ ಆ ಕಾರವನ್ನೇ ಬಳಸಿದ್ದಾನೆ. ಕ ಕಾರವನ್ನು ಎರಡು ರೀತಿಯಲ್ಲಿ ಬರೆಸಲಾಗಿದೆ. ಒಂದೆರಡು ಕಡೆ ಕೆಳಗಿನ ವೃತ್ತವನ್ನು ಒಂದು ಕಡೆ ತೆರೆದಂತೆ ಬರೆಯಲಾಗಿದೆ. ಇನ್ನೊಂದು ಕಡೆ ತಳಗಡೆಯ ವೃತ್ತದ ತಲೆ ಮೇಲೆ ಅಡ್ಡಗೆರೆ ತಂದು ಅದರ ಮೇಲೆ ಇನ್ನೊಂದು ಅಡ್ಡಗೆರೆ ತರಲಾಗಿದೆ. ಗ ಕಾರದ ತಲೆಯ ಮೇಲೆ ಅದಕ್ಕೆ ತಗಲದಂತೆ ತಲೆಕಟ್ಟು ಬಂದಿದೆ. ಚ ಕಾರದ ಬೆಳವಣಿಗೆ ಕುತೂಹಲಕಾರಿ. ಒಂದು ಪ್ರಯೋಗದಲ್ಲಿ ಚ ಕಾರದ ತಲೆಕಟ್ಟಿನ ಕೆಳಗೆ ಒಂದು ಬಳುಕು ಬಂದಿದೆ. ಉಳಿದ ಕಡೆಗಳಲ್ಲಿ ಹಿಂದಿನ ಪ್ರಯೋಗವೇ ಇದೆ. ಟ ಕಾರವು ಹಿಂದಿನ ರೂಪಕ್ಕಿಂತ ಹೆಚ್ಚಿನ ಬೆಳವಣಿಗೆಯನ್ನು ತೋರಿಸಿದೆ. ಮೇಲ್ಗಡೆಯ ಅಡ್ಡವಾದ ಗೆರೆಯು ಒಳಕ್ಕೆ ಬಾಗಿದೆ. ಹಾಗಿಯೇ ಕೆಳಗಿನ ಗೆರೆಯು ಮೇಲೆ ನೇರಕ್ಕೆ ಹೋಗಿದೆ. ಡ ಕಾರದ ಮೇಲ್ಭಾಗದ ಗೆರೆಯು ತಳಗಡೆಯ ಸುರುಳಿ ಮೇಲೆ ಬಂದಿದೆ. ಣ ಕಾರದ ತಳಭಾಗದ ಗೆರೆಯು ಹಾವಿನಹೆಡೆಯಂತೆ ಬಾಗಿ ಮೇಲಕ್ಕೆ ಹೋಗಿ ಪಕ್ಕಕ್ಕೆ ಬೆಳೆದು ಮತ್ತೆ ಅದು ಕೆಳಕ್ಕೆ ಬಂದು ಒಳಮುಖಕ್ಕೆ ಬಾಗಿದೆ. ತ ಕಾರದ ತಳಗಡೆಯ ವೃತ್ತಾಕಾರದ ಒಂದು ಭಾಗವು ಮೇಲ್ಗಡೆ ಸಣ್ಣವೃತ್ತವನ್ನು ಸೃಷ್ಟಿಸಿದೆ. ಅದರಿಂದ ಮುಂದೆ ಗೆರೆ

ಮೇಲಕ್ಕೆ ಬಂದು ತಲೆಕಟ್ಟಿಗೆ ಸೇರಿದೆ. ದ ಮತ್ತು ಧ ಗಳಿಗೆ ಈ ಹಂತದಲ್ಲಿ ವ್ಯತ್ಯಾಸಗಳೇ ಇಲ್ಲ. ಪ ಕಾರವು ಪಾರಂಪರಿಕ ರೂಪವನ್ನು ಈ ಹಂತದಲ್ಲಿ ಬಿಡುವ ಸೂಚನೆ ನೀಡಿದೆ. ಪ ಕಾರದ ತಲೆಕಟ್ಟಿನ ಕೆಳಗೆ ಪ ಕಾರದ ಗೆರೆಯು ಸ್ವಲ್ಪ ಮುಂದೆ ಬಂದಿದೆ. ಭ ಕಾರವು ಈಗಿನ ಖ ಕಾರದ ರೂಪಕ್ಕೆ ಸಮೀಪವಾಗಿದೆ. ಶ ಕಾರವು ಹಿಂದಿನ ರೂಪಕ್ಕಿಂತ ಭಿನ್ನವಾಗಿ ಇಂದಿನ ರೂಪಕ್ಕೆ ಸಮೀಪವಾಗಿದೆ. ಸ ಕಾರದ ಮುಂಭಾಗದಿಂದ ಮೇಲಕ್ಕೆ ಗೆರೆ ಬಂದಿದ್ದು ಅದಕ್ಕೆ ತಲೆಕಟ್ಟು ನೀಡಲಾಗಿದೆ. ಱ ಕಾರವು ಹಿಂದಿನ ಶಾಸನ ಲಿಪಿಗಳಂತೆಯೇ ಇದೆ. ಅರ್ಕ್ಕವೊತ್ತು ಕೆಲವೆಡೆ ಅಕ್ಷರಗಳಿಂದ ಬೇರ್ಪಟ್ಟು ಅಕ್ಷರಗಳ ಮಧ್ಯ ಭಾಗದ ಮೇಲೆ ಪ್ರಯೋಗವಾಗಿದೆ. ಶ್ರೀ ಕಾರದಲ್ಲಿ ಈ ಹಂತದಲ್ಲಿ ಅಕ್ಷರದ ಒಳಗಿನ ಶ ಕಾರವು ಗೌಣವಾಗಿ ಶ್ರೀ ಎಂಬುದೇ ಒಂದು ಅಕ್ಷರ ಘಟಕವೆಂಬಂತೆ ಬರೆಯಲಾಗಿದೆ. ರ ಕಾರದ ಒತ್ತಕ್ಷರದ ಬಾಲವೇ ಬೆಳೆಯುತ್ತಾಹೋಗಿದೆ. ಕ್ರಿ.ಶ.೧೪೪೬ರ ಇಮ್ಮಡಿ ದೇವರಾಯನ ಕಾಲದ ಮುಂಡ್ಕೂರು ಶಾಸನದಲ್ಲಿ ಶಾಸನಗಳ ಆರಂಭದಲ್ಲಿ ವೃತ್ತ (ಸೊನ್ನೆ)ಗಳನ್ನು ಬರೆಯುವ ಪದ್ಧತಿಯು ಕಾಣಬರುತ್ತದೆ. ಎ ಕಾರದ ಕಾಗುಣಿತವು ಇಂದಿನ ರೀತಿಗೆ ಸಮೀಪವಾಗಿದೆ. ಇದು ಕರಾವಳಿ ಕಡೆಯ ಶಾಸನವಾದ್ದರಿಂದ ಟ ಕಾರವು ಇನ್ನೂ ಹಿಂದಿನ ರೂಪದಲ್ಲಿಯೇ ಇದೆ. ಶ್ರೀ ಕಾರವು ಬೆಳವಣಿಗೆಯನ್ನು ತೋರಿಸಿದೆ.

ಕ್ರಿ.ಶ.೧೪೮೨ ತಡಮಾಲಂಗಿಯ ವಿಜಯನಗರದ ರಾಜ ವಿರೂಪಾಕ್ಷನ ಶಾಸನದಲ್ಲಿ ಕೆಲವು ಅಕ್ಷರಗಳಲ್ಲಿ ಬದಲಾವಣೆಗಳು ಕಾಣಿಸಿಕೊಂಡಿವೆ. ಅ, ಆ ಗಳು ಮೇಲ್ನೋಟಕ್ಕೆ ಒಂದೇ ರೀತಿಯಿದ್ದರೂ ಸ್ವಲ್ಪ ವ್ಯತ್ಯಾಸವನ್ನು ತೋರಿಸಿವೆ. ಆ ಕಾರವು ಇಂದಿನ ಆ ಕಾರದಂತಿದ್ದರೆ ಅದೇ ಅಕ್ಷರದ ಮೇಲೆ ಸುರುಳಿಯ ಬಳಿ ಮೇಲಕ್ಕೆ ಒಂದು ಗೆರೆಯನ್ನು ಎಳೆಯುವ ಮೂಲಕ ಅ ಕಾರವನ್ನು ಸೂಚಿಸಲಾಗಿದೆ. ಕ ಕಾರದ ಮೇಲಿನ ತಲೆಕಟ್ಟು ಗೆರೆಯ ಕೆಳಗೆ ಕ ಕಾರದ ಕೆಳಗಿನ ಭಾಗವನ್ನು ಹೋಲುವಂತಹ ಸಣ್ಣ ಸೊನ್ನೆ ಬಂದಿದೆ. ತ ಕಾರದ ರೂಪವು ಹಿಂದಿನದಕ್ಕಿಂತ ಹೆಚ್ಚಿನ ಬೆಳವಣಿಗೆಯನ್ನು ತೋರಿಸುತ್ತಿದೆ. ತಳಗಡೆಯ ಭಾಗವು ಮಧ್ಯೆ ಒಂದು ಸುರುಳಿಯನ್ನು ಸೃಷ್ಟಿಸಿ ಮತ್ತೆ ಮೇಲಕ್ಕೆ ಸಾಗಿ ತಲೆಕಟ್ಟಿಗೆ ಸೇರಿಕೊಂಡಿದೆ. ಠ ಕಾರವು ಈಗಿನಂತೆ ಇದ್ದು ಒಳಗೆ ಚುಕ್ಕೆಯೂ ಬಂದಿದೆ. ಪ ಕಾರದ ತಲೆಕಟ್ಟು ಕೆಲವೆಡೆ ಅಕ್ಷರದಿಂದ ಬೇರೆಯಾಗಿದೆ. ಷ ಕಾರದ ಒಳಗೆರೆಯು ಉದ್ದ ಗೆರೆಯನ್ನು ಸೀಳಿ ಹೊರಬಂದಿದೆ. ತಲೆಕಟ್ಟು ಗೆರೆ ಬೇರೆಯಾಗಿದೆ. ಹ ಕಾರದ ತಲೆಕಟ್ಟು ಕೆಲವೆಡೆ ಪ್ರತ್ಯೇಕವಾಗಿದೆ. ಅದರ ಪಕ್ಕದ ಇಳಿದ ಗೆರೆಯು ಒಳಕ್ಕೆ ತಿರುಗಿದೆ. ಳ ಕಾರದ ಕೆಳಗಿನ ಗೆರೆಯಿಂದ ಮೇಲಕ್ಕೆ ಗೆರೆಯೊಂದು ಬಂದಿದ್ದು ತಲೆಕಟ್ಟು ಆ ಗೆರೆಗೆ ತಾಗಿದೆ.


ಕಾಗುಣಿತಗಳಲ್ಲಿ ಆ ಕಾರದ ದೀರ್ಘದ ತಳಭಾಗವು ಸ್ವಲ್ಪ ಒಳಕ್ಕೆ ತಿರುಗಿದೆ. ಎ ಕಾರದ ಕಾಗುಣಿತವು ಅಕ್ಷರದ ತಲೆ ಮೇಲೆ ಅಕ್ಷರಕ್ಕೆ ಬಲಗಡೆಯಿಂದ ಎಡಕ್ಕೆ ತಿರುಗಿರುವಂತೆ ಅರೆ ಸುರುಳಿ ಸೃಷ್ಟಿಸಲಾಗಿದೆ. ಇದನ್ನು ಏ ಕಾರದ ಕಾಗುಣಿತವಾಗಿಯೂ ಉಚ್ಚರಿಸಬೇಕು. ಶಾಸನದಲ್ಲಿ ಶ್ರೀ ಕಾರದ ಬಗ್ಗೆ ಹೇಳಬೇಕಾಗಿದೆ. ಮುಂದುವರಿದ ರ ಕಾರದ ಗೆರೆಯು ಸುರುಳಿಯಿಂದ ಮೇಲಕ್ಕೆ ಹೋಗಿದೆ.

ಮುಂದೆ ಪ್ರಮುಖ ಅರಸ ಕೃಷ್ಣದೇವಾರಾಯನ ಕಾಲ. ವಿಜಯನಗರವನ್ನು ಆಳಿದ ತುಳುವ ಅರಸರಲ್ಲಿ ಪ್ರಮುಖ. ಇಡೀ ದಕ್ಷಿಣ ಭಾರತವೇ ಅಲ್ಲದೆ ವಿಶ್ವದಾದ್ಯಂತ ಹೆಸರಾಂತ ರಾಜ. ಕನ್ನಡ, ಸಂಸ್ಕೃತ, ತೆಲುಗು, ತಮಿಳು ಭಾಷೆಗಳಲ್ಲಿ ಈತನ ಶಾಸನಗಳು ದೊರೆತಿವೆ.

ಕೃಷ್ಣದೇವರಾಯನ ಕಾಲದಲ್ಲಿ ಹಂಪೆ ಮುಂತಾದ ಕಡೆಗಳಲ್ಲಿ ಬೃಹತ್ ಕಟ್ಟಡ ರಚನೆಗಳು ನಡೆದವು. ಇವುಗಳಿಗೆ ಬಳಸಿದ ಶಿಲೆ ಸಂಪೂರ್ಣವಾಗಿ ಚಪ್ಪಡಿಗಲ್ಲು. ಹೀಗಾಗಿ ಶಾಸನಗಳಿಗೆ ಬಳಸಿದ ಶಿಲೆಯೂ ಇದೇ ಆಗಿರುತ್ತದೆ. ಈ ಶಿಲೆಯು ಕಪ್ಪುಕಲ್ಲಿಗಿಂತ ಮೃದುವಾದರೂ ಕೆತ್ತುವುದರಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಕೆತ್ತುವ ಭಾಗದಲ್ಲಿ ಚಕ್ಕೆ ಏಳುತ್ತದೆ. ಹೀಗಾಗಿ ಈ ಶಿಲೆಯಲ್ಲಿ ಅಕ್ಷರ ಕೆತ್ತುವಾಗ ಅಕ್ಷರಗಳ ಸ್ವರೂಪ ಬದಲಾಯಿತು. ಸೂಕ್ಷ್ಮವಾದ ಗೆರೆಗಳು ದಪ್ಪವಾದವು. ಅಕ್ಷರಗಳೂ ದಪ್ಪವಾದವು ಜೊತೆಗೆ ಮೇಲ್ಮುಖವಾಗಿ ಉದ್ದವಾದವು. ವೃತ್ತಗಳೂ ದೊಡ್ಡವಾದವು. ತಲೆಕಟ್ಟುಗಳೂ ಉದ್ದವಾದವು. ಶಾಸನದ ಅಕ್ಷರಗಳು ದೊಡ್ಡವಾದ್ದರಿಂದ ಶಾಸನ ಪಾಠವು ಚಿಕ್ಕದಾಯಿತು. ಕೆಲವು ಕಡೆ ಅಧಿಷ್ಠಾನ ಮುಂತಾದ ಕಡೆ ಅಧಿಷ್ಠಾನದುದ್ದಕ್ಕೂ ಸಾಲುಗಳನ್ನು ಬರೆದಿರುವುದುಂಟು. ಈ ಪ್ರಭಾವ ತಮಿಳುನಾಡಿನ ದೇವಾಲಯ ಶಾಸನಗಳಿಂದ ಪಡೆದಿದ್ದು. ಒಂದೇ ಶಾಸನದ ವಿವರವು ಬೇರೆ ಬೇರೆ ಕಡೆಗಳಲ್ಲಿ, ಬೇರೆ ಬೇರೆ ಭಾಷೆಗಳಲ್ಲಿ ಬರೆಸಿರುವುದೂ ಉಂಟು.

ಕ್ರಿ.ಶ.೧೫೧೯ರ ಕೃಷ್ಣದೇವರಾಯನ ಮಾದಾಪುರದ ಶಾಸನದಲ್ಲಿ ಅಕ್ಷರಗಳ ಮೇಲಿನ ತಲೆಕಟ್ಟುಗಳು ಹಿಂದೆ ತಿಳಿಸಿದ ಉದಾಹರಣೆಗಿಂತ ಉದ್ದವಾಗಿವೆ. ಮ ಮತ್ತು ವ ಕಾರಗಳ ಆರಂಭದ ಭಾಗವು ಕೆಲವೆಡೆ ಸುರುಳಿಗೆ ತಿರುಗಿದೆ. ಶ ಕಾರದ ಮೇಲಿನ ಭಾಗವು ಚಿಕ್ಕದಾಗಿ ಕೆಳಗಿನ ಭಾಗದ ಸುರುಳಿಯು ಗೆರೆಯನ್ನು ಛೇದಿಸಿ ಮೇಲೆ ಹೋಗಿದೆ. ಈ ಗೆರೆಯ ತಲೆಯ ಮೇಲಿನಿಂದ ತಲೆಕಟ್ಟು ಆರಂಭವಾಗಿದೆ. ಅ ಕಾರವು ಇಂದಿನ ಆ ಕಾರದಂತೆಯೇ ಇದೆ. ಹಿಂದಿನ ಶಾಸನಗಳಲ್ಲಿ ತೋರಿಸುತ್ತಿದ್ದ ವ್ಯತ್ಯಾಸ ಗೆರೆ ಈ ಶಾಸನದಲ್ಲಿ ಇಲ್ಲ. ಪಾ ಮತ್ತು ಸಾ ಅಕ್ಷರಗಳನ್ನು ಬರೆಯುವಾಗ ಆ ಅಕ್ಷರಗಳ ಗೆರೆಯನ್ನು ಸೀಳಿ ಬರುತ್ತಿತ್ತು. ಈ ಕಾಲಕ್ಕೆ ಈ ಗೆರೆಯು ಚಿಕ್ಕದಾಗಿದ್ದು ದೀರ್ಘ ಗೆರೆಯ ಸಮಕ್ಕೆ ಕೆತ್ತಲಾಗಿದೆ. ಥ, ಧ ಗಳ ಕೆಳಗೆ ಹೊಕ್ಕಳನ್ನು ಸೀಳಲಾಗಿದೆ. ಭ ಕಾರದ ಮುಂಭಾಗದ ಗೆರೆಯ ಕೆಳಭಾಗವು ಕೆಳಕ್ಕೆ ಗೆರೆಯಂತೆ ಬಂದಿದೆ. ಉ ಕಾರವು ಆರಂಭದ ಸುರುಳಿಯೊಂದನ್ನು ಬಿಟ್ಟು ಉಳಿದಂತೆ ಈಗಿನ ರೂಪಕ್ಕೆ ಬಂದಿದೆ. ಶ್ರೀ ಕಾರವು ಈ ಶಾಸನದಲ್ಲಿ ಹಿಂದಿನ ಶಾಸನಕ್ಕಿಂತ ಸ್ವಲ್ಪ ಮುಂದುವರಿದಿದೆ. ಒಳಗಿನ ಶ ಕಾರವು ಕೇವಲ ಗೆರೆ ರೂಪಕ್ಕೆ ಬಂದಿದೆ ಹಾಗೂ ಗೌಣವಾಗಿದೆ. ರ ಕಾರದ ಒತ್ತಕ್ಷರವೇ ಪ್ರಧಾನವಾಗಿ ಎರಡು ಸುತ್ತುಗಳಲ್ಲಿ ಸುತ್ತಿ ಮತ್ತೆ ಗೆರೆಯು ಅಡ್ಡಕ್ಕೆ ನಿಂತಿದೆ.

ಕ್ರಿ.ಶ.೧೫೫೯ರ ಬಯಕಾರ ರಾಮಪ್ಪಯ್ಯನ ಶಾಸನಗಳಲ್ಲಿ (ಕ.ವಿ.ವಿ.ಶಾಸನ ಸಂಪುಟ –೧ ಕೂಡ್ಲಗಿ–೧) ವಿಜಯನಗರದ ಅಕ್ಷರಗಳ ಮುಂದಿನ ಬೆಳವಣಿಗೆಯನ್ನು ಕಾಣಬಹುದಾಗಿದೆ. ಅಕ್ಷರಗಳ ಗಾತ್ರ ಹಿಂದಿನ ಶಾಸನಗಳಿಗಿಂತ ದೊಡ್ಡದಾಗಿವೆ. ಅಲ್ಲದೆ ಅಕ್ಷರಗಳು ಗುಂಡಾಕಾರವಿರುವುದಕ್ಕಿಂತ ಕೋಲಾಕಾರದಲ್ಲಿವೆ. ಅಂದರೆ ಅಡ್ಡವಾಗಿರದೆ ಉದ್ದುದ್ದಕ್ಕೆ ಬೆಳೆದಿವೆ. ಅಕ್ಷರಗಳ ಗಾತ್ರಕ್ಕೆ ತಕ್ಕಂತೆ ತಲೆಕಟ್ಟುಗಳೂ ಬೆಳೆದಿವೆ. ಅ ಕಾರವು ಹಿಂದಿನ ಆ ಕಾರದಂತಿರದೆ ಈಗಿನ ಅ ಕಾರಕ್ಕೆ ಹತ್ತಿರವಾಗಿದೆ. ಕ ಕಾರವು ತಳಗಡೆಯ ಭಾಗವು ವೃತ್ತಾಕಾರವಾಗಿ ಮೇಲೆ ಅಡ್ಡಗೆರೆಯನ್ನು ಹೊಂದಿದ್ದು ಅದರ ಮೇಲೆ ಗೆರೆಯೊಂದು ಹೊರಟು ಅದಕ್ಕೆ ತಲೆಕಟ್ಟು ನೀಡಲಾಗಿದೆ. ಟ ಕಾರದ ಪಕ್ಕದ ಗೆರೆಯು ಮೇಲಕ್ಕೆ ಬೆಳೆದು ಒಳಕ್ಕೆ ಬಾಗಿ ಮತ್ತೆ ಮೇಲಕ್ಕೆ ಸಾಗಿದೆ. ತ ಕಾರದ ಕೆಳಭಾಗವು ಸುರುಳಿ ಹೊಂದಿದ್ದು ಪಕ್ಕಕ್ಕೆ ಬೆಳೆದು ಚಿಕ್ಕ ಸುರುಳಿ ಸೃಷ್ಟಿಸಿ ಅದರ ಮೇಲೆ



ಕಪಿಶಾ: I P. 192 ಬಯಕಾರ ರಾಮಪ್ಪಯ್ಯನ ಶಾಸನ ದೇ.ಕೊಂ.ರೆಡ್ಡಿ

ತಲೆಕಟ್ಟು ಬಂದಿದೆ. ಭ ಕಾರದ ರೂಪವು ಈ ಹಂತದಲ್ಲಿ ಚ ಕಾರದಂತೆ ಬೆಳೆದು ತಳಭಾಗದಲ್ಲಿ ಹೊಕ್ಕಳು ಸೀಳಿದೆ. ರ, ಕ, ಲ ಅಕ್ಷರಗಳು ಮೊದಲು ಹೇಳಿದಂತೆ ಉದ್ದುದ್ದವಾಗಿವೆ. ಶ ಕಾರವು ಈಗಿನ ನಿಶ್ಚಿತರೂಪಕ್ಕೆ ಹತ್ತಿರವಾಗಿದೆ. ಷ ಕಾರವು ಪ ಕಾರದಂತೆ ಬೆಳವಣಿಗೆ ಹೊಂದಿದ್ದರೂ ಅದರ ಪಕ್ಕದ ಗೆರೆಯನ್ನು ಸೀಳಿಕೊಂಡು ಕೆಳಮುಖ ಇಳಿದ ಗೆರೆಯೊಂದು ಬಂದಿದೆ. ಹ ಕಾರದ ಕೆಳಭಾಗವು ಮತ್ತೆ ಪ ಕಾರದಂತೆ ಬೆಳವಣಿಗೆಯನ್ನು ತೋರಿಸಿದೆ. ತಲೆಕಟ್ಟು ಗೆರೆ ಪ್ರತ್ಯೇಕವಾಗಿದೆ. ಳ ಕಾರವು ಮೇಲೆ ಒಂದು ಸುರುಳಿ, ಅದರ ವಿರುದ್ಧ ದಿಕ್ಕಿನಲ್ಲಿ ಕೆಳಭಾಗದಲ್ಲಿ ಇನ್ನೊಂದು ಸುರುಳಿ ಹೊಂದಿದೆ. ಮೇಲಿನ ಸುರುಳಿಗೆ ತಾಕಿದಂತೆ ತಲೆಕಟ್ಟು ಬಂದಿದೆ. ಱ ಕಾರದ ಸ್ಥಳದಲ್ಲಿ ಈ ಕಾಲಕ್ಕೆ ರ ಕಾರವನ್ನು ಬಳಸಿರುವುದೂ ಕಂಡುಬರುತ್ತದೆ. ದ ಕಾರದಂತೆ ಕೆಳಭಾಗವನ್ನು ಬರೆದು ಮೇಲೆ ಎರಡೂ ಕಡೆ ಗೆರೆಗಳನ್ನು ಒಳಕ್ಕೆ ಬಾಗಿಸಿರುತ್ತಾರೆ. ಮಧ್ಯೆ ಅಡ್ಡಗೆರೆ ಬಂದಿದೆ.

ಇ ಕಾರ ಮತ್ತು ಈ ಕಾರ, ಎ ಕಾರ ಮತ್ತು ಏ ಕಾರಕ್ಕೆ, ಒ ಕಾರ ಮತ್ತು ಓ ಕಾರದ ಚಿಹ್ನೆಗಳಲ್ಲಿ ಬರುವ ಹ್ರಸ್ವ ಮತ್ತು ದೀರ್ಘ ಕಾಗುಣಿತಗಳಲ್ಲಿ ವ್ಯತ್ಯಾಸವಿಲ್ಲ. ದೀರ್ಘವನ್ನು ಸೂಚಿಸುವ ಚಿಹ್ನೆ ಬಳಸಿಲ್ಲ. ಒತ್ತಕ್ಷರಗಳು ಬಹು ಚಿಕ್ಕದಾಗಿವೆ. ಶ್ರೀ ಕಾರದ ಎರಡು ಸುರುಳಿಗಳನ್ನು ಒಂದಕ್ಕೊಂದು ಸ್ವಲ್ಪ ಸ್ಥಳ ಬಿಟ್ಟು ಬರೆಯಲಾಗಿದೆ.

ವಿಜಯನಗರೋತ್ತರ ಲಿಪಿ

ಕ್ರಿ.ಶ.೧೫೬೫ರಲ್ಲಿ ರಕ್ಕಸಗಿ ಮತ್ತು ತಂಗಡಗಿಯ ಬಳಿ ನಡೆದ ಆದಿಲ್‌ಷಾಹಿ ಸಂಯುಕ್ತ ಸೈನ್ಯ ಮತ್ತು ವಿಜಯನಗರದ ಸೈನ್ಯದ ಮಧ್ಯೆ ನಡೆದ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಸೋಲುಂಟಾಯಿತು. ಈ ಸೋಲು ನಿರ್ಣಾಯಕ ಸೋಲಾಗಿದ್ದು ದಕ್ಷಿಣ ಭಾರತದ ರಾಜಕೀಯವೇ ಇದರಿಂದ ಅಸ್ಥಿರವಾಗುತ್ತದೆ. ರಾಜಧಾನಿಯು ಹಂಪೆಯಿಂದ ಪೆನಗೊಂಡೆಗೆ ಬದಲಾಗುತ್ತದೆ. ಕೇಂದ್ರ ರಾಜ್ಯವು ದುರ್ಬಲವಾಗುತ್ತದೆ. ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿದ್ದ

ಸಣ್ಣ ಪುಟ್ಟ ಮಾಂಡಲೀಕರು ತಾವು ಸಾಮ್ರಾಜ್ಯರಕ್ಷಕರೆಂಬ ಬಿರುದನ್ನು ಧರಿಸಿ ಪಾಳೆಯಗಾರರೆಂಬ ಹೊಸ ಹೆಸರನ್ನು ತಾಳಿ ಸ್ವತಂತ್ರ ರಾಜರಂತೆ ಮೆರೆಯುತ್ತಾರೆ. ತಮ್ಮ ಅಧೀನದಲ್ಲಿದ್ದ ಪ್ರದೇಶಗಳನ್ನು ಸ್ವತಂತ್ರರೆಂಬುವಂತೆ ಆಳುವುದರ ಜೊತೆಗೆ ಅಕ್ಕಪಕ್ಕದ ಪಾಳೆಯಪಟ್ಟುಗಳ ಮೇಲೆ ಗಡಿಗಳನ್ನು ಒತ್ತುವರಿ ಮಾಡುವ ಮೂಲಕ ಯುದ್ಧಗಳನ್ನು ನಡೆಸುತ್ತಾರೆ.

ಕರ್ನಾಟಕದ ಉತ್ತರ ಭಾಗವು ಈ ಮೊದಲೇ ಷಾಹಿರಾಜ್ಯಗಳ ಅಧೀನದಲ್ಲಿತ್ತು. ಇದನ್ನು ವಶವಡಿಸಿಕೊಂಡ ಮೊಗಲ್ ಸಾಮ್ರಾಟ ಔರಂಗಜೇಬ ತನ್ನ ರಾಜ್ಯವನ್ನು ತುಂಗೆಯ ದಕ್ಷಿಣಕ್ಕೂ ವಿಸ್ತರಿಸಿದ್ದ. ಸಿರಾಸುಬೆ ಮತ್ತು ಅದಕ್ಕೆ ಸೇರಿದ್ದ ಬೆಂಗಳೂರು ಇವನ ವಶದಲ್ಲಿತ್ತು. ಇವನ ಆಳ್ವಿಕೆಯನ್ನು ವಿರೋಧಿಸಿ ಅವನೊಡನೆ ಸೆಣಸುತ್ತಾ, ಮಹಾರಾಷ್ಟ್ರ ಮತ್ತು ಕರ್ನಾಟಕದ ಉತ್ತರ ಭಾಗಗಳಲ್ಲಿ ಶಿವಾಜಿ ಮರಾಠ ಸಾಮ್ರಾಜ್ಯವನ್ನು ಸ್ಥಾಪಿಸಿದ. ಇವನೂ ಸಹ ಕರ್ನಾಟಕದ ಅನೇಕ ಪ್ರದೇಶಗಳನ್ನು ತನ್ನ ವಶದಲ್ಲಿರಿಸಿಕೊಂಡ. ಇವನ ನಂತರ ಮರಾಠ ಪೇಶ್ವಾಯಿಗಳು ಕರ್ನಾಟಕದ ಮೇಲೆ ಪದೇ ಪದೇ ದಂಡೆತ್ತಿ ಬಂದರು.

ಹೈದರಾಬಾದನ್ನು ಕೇಂದ್ರವಾಗಿಟ್ಟುಕೊಂಡು ಆಳಿದ ಹೈದರಾಬಾದಿನ ನಿಜಾಮ ಕೂಡ ಕರ್ನಾಟಕದ ಈಶಾನ್ಯ ಪ್ರದೇಶದ ಮೇಲೆ ತನ್ನ ಆದಿಪತ್ಯ ಸ್ಥಾಪಿಸಿದ್ದ.


ಈ ಕಾರಣಗಳಿಂದ ಸ್ಥಿರರಾಜ್ಯವೆಂಬುದು ಇರದೆ ವಿಜಯನಗರದ ಅಧೀನದಲ್ಲಿದ್ದ ಕಲಾವಿದರು, ಕಲಾವಂಶಸ್ಥರು ಸರಿಯಾದ ಆಶ್ರಯವಿಲ್ಲದೆ ಅತ್ತಿಂದಿತ್ತ ಅಲೆದಾಡುತ್ತಾರೆ. ಈ ಕಲಾವಿದರು ವಿಜಯನಗರದ ಮಾಂಡಳೀಕರಾಗಿದ್ದ ಆವತಿ, ಕೆಳದಿ, ಸೋಂದೆ, ಹರತಿ, ನಿಡುಗಲ್ಲು ಪಾಳೆಯಗಾರರು, ಮುಂದೆ ಮೈಸೂರರಸರ ಆಶ್ರಯಕ್ಕೆ ಬರುತ್ತಾರೆ. ಹೀಗಾಗಿ ಒಂದೆಡೆಯಿದ್ದ ಕಲೆ ಚದುರಿ ಬೇರೆ ಬೇರೆ ಸ್ಥಳಗಳನ್ನು ಸೇರುತ್ತದೆ.

ಈ ಹಿನ್ನೆಲೆಯಲ್ಲಿ ಈ ಕಾಲದ ಬರೆವಣಿಗೆಯನ್ನು ಪರೀಶೀಲಿಸಿದಾಗ ಕನ್ನಡ ಶಾಸನಗಳ ರಚನೆ ಕಡಿಮೆಯಿರುತ್ತದೆ. ಇದಕ್ಕೆ ಕಾರಣ ಹೆಚ್ಚಿದ ಇತರ ಮೂಲಗಳ ಬರೆವಣಿಗೆ. ಮುಸಲ್ಮಾನರ ಮತ್ತು ಪೋರ್ಚುಗೀಸರ ಪ್ರಭಾವದಿಂದ ಕಾಗದ ಮತ್ತು ಮಸಿ ಬಳಕೆ ಒಂದೆಡೆಯಾದರೆ ಇನ್ನೊಂದೆಡೆ ಪಾರಂಪರಿಕ ತಾಳೆಗರಿ ಮತ್ತು ಕಂಠದ ಬಳಕೆ. ಈ ಮಧ್ಯೆ ಶಿಲಾ ಮತ್ತು ತಾಮ್ರಶಾಸನಗಳು ಕಡಿಮೆ ಪ್ರಮಾಣದಲ್ಲಿ ರಚಿತವಾಗಿದೆ. ಆಡಳಿತದಲ್ಲಿ ಸ್ಥಿರತೆಯಿಲ್ಲದ್ದರಿಂದ ಕನ್ನಡ ಭಾಷೆ ಮತ್ತು ಅಕ್ಷರಗಳಲ್ಲೂ ಸ್ಥಿರತೆಯಿರದೆ ಸ್ಥಳದಿಂದ ಸ್ಥಳಕ್ಕೆ ಬದಲಾವಣೆ ಹೊಂದಿದವು. ಕನ್ನಡ ಲಿಪಿಯಲ್ಲೇ ಮರಾಠಿ ಕಾರಕೂನರ ಪ್ರಭಾವದಿಂದ 'ಮೋಡಿ ಕನ್ನಡ ಬರವಣಿಗೆ' ಬಳಕೆಗೆ ಬಂತು. ಮುಸಲ್ಮಾನರ ಪ್ರಭಾವದಿಂದ ಕೈಫಿಯತ್ತು, ಫರ್ಮಾನು ಮುಂತಾದವುಗಳ ಬರೆವಣಿಗೆ ಕಾಗದದ ಮೇಲೆ ರಚಿತವಾಯಿತು. ಕಾಗದದ ಅತಿ ಬಳಕೆಯಿಂದ ಶಾಸನಗಳ ರಚನೆ ಕಡಿಮೆಯಾಯಿತು. ಪಾರಂಪರಿಕ ಕನ್ನಡ ಲಿಪಿ ಮತ್ತು ಭಾಷೆ ಪ್ರಮುಖವಾಗಿ ಧಾರ್ಮಿಕ ಗ್ರಂಥಗಳಲ್ಲಿ ಮಾತ್ರ ಉಳಿಯಿತು.

ಪಾಳೆಯಗಾರರ ಅಥವಾ ಅರಸರ ಕಾಲದ ಕನ್ನಡ ಲಿಪಿಯ ಬಗ್ಗೆ ಬರೆಯುವಾಗ ಇಲ್ಲಿ ಕೆಳದಿ, ಮೈಸೂರು, ಚಿತ್ರದುರ್ಗ ಮತ್ತು ಕೊಡಗು ಅರಸರ ಕಾಲದ ಶಾಸನಗಳನ್ನು


ಆಧಾರವಾಗಿ ತೆಗೆದುಕೊಳ್ಳಲಾಗಿದೆ. ಈ ಶಾಸನಗಳು ಕ್ರಿ.ಶ.೧೬೩೨ ರಿಂದ ೧೮೩೨ರ ಕಾಲಕ್ಕೆ ಸೇರಿವೆ. ಮೋಡಿಲಿಪಿಯನ್ನು ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ.

ಕೆಳದಿ ಅರಸರ ಶಾಸನವೊಂದು ಕೆಳದಿ ವಸ್ತುಸಂಗ್ರಹಾಲಯದಲ್ಲಿದ್ದು, ಇದರಲ್ಲಿನ ಅ ಕಾರವು ಎಡಭಾಗದಲ್ಲಿ ಅರೆವೃತ್ತಾಕಾರ ಹೊಂದಿದ್ದು ಅಲ್ಲಿಂದ ಹೊರಟ ಗೆರೆಯು ಬಲಗಡೆಗೆ ಬಂದು ಮೇಲಕ್ಕೆ ಹೋಗಿ ಮತ್ತೆ ಕೆಳಕ್ಕೆ ಬಾಗಿ ಎಡಗಡೆಯ ಸುರುಳಿಯೊಳಗೆ ಸೇರಿದೆ. ಆ ಕಾರವು ಅ ಕಾರಕ್ಕೆ ಬಲಗಡೆ ಮೇಲಿನಿಂದ ಕೆಳಕ್ಕೆ ಬಾಗಿದ ಲಂಬರೇಖೆಯನ್ನು ಹೊಂದಿದೆ. ಅದೇ ವರ್ಷದ ಇನ್ನೊಂದು ಶಾಸನದಲ್ಲಿ ಇದೇ ಅ ಕಾರ ಮತ್ತು ಆ ಕಾರವನ್ನು ವೃತ್ತಾಕಾರವಾಗಿ ಬಿಡಿಸಿದ್ದು, ಬಲಗಡೆ ಮೇಲಕ್ಕೆ ಹೋಗಿರುವ ಗೆರೆಯಿಲ್ಲ. ಇ, ಈ ಕಾರಗಳು ಶಾಸನದಲ್ಲಿ ಬಳಕೆಯಾಗಿಲ್ಲ. ಇದಕ್ಕೆ ಕಾರಣ ಈ ಎರಡಕ್ಕೂ ಯ ಕಾರವನ್ನು ಬಳಸಿರುವುದು. ಉ ಕಾರವು ಮುಂಭಾಗದಲ್ಲಿ ಸೊನ್ನೆಯನ್ನು ಹೊಂದಿದ್ದು, ಅದರಿಂದ ಬಾಗುರೇಖೆಯೊಂದು ಮೇಲಕ್ಕೆ ಬೆಳೆದು ಬಲಕ್ಕೆ ಬಾಗಿ ಮತ್ತೆ ಮೇಲಕ್ಕೆ ಎದ್ದಿದೆ. ಊ ಕಾರದ ಪ್ರಯೋಗ ಕಾಣುವುದಿಲ್ಲ. ಎ ಕಾರದ ಆರಂಭದಲ್ಲಿ ಸುರುಳಿಯು ಒಳಕ್ಕೆ ಮಡಚಿದ್ದು, ಅದರಿಂದ ಬಲಕ್ಕೆ ಹೊರಟ ಗೆರೆಯು ಮಧ್ಯೆ ಸ್ವಲ್ಪ ಒಳಕ್ಕೆ ಬಾಗಿ ಏ ಕಾರವಾಗಿಯೂ ಉಚ್ಚಾರವಾಗುತ್ತದೆ. ಒ, ಓ ಕಾರದ ರೂಪಗಳು ಈ ಶಾಸನದಲ್ಲಿ ಕಾಣುವುದಿಲ್ಲ.



ಕೆಳದಿ ವಸ್ತುಸಂಗ್ರಹಾಲಯದ ಶಾಸನ

ವ್ಯಂಜನಗಳಲ್ಲಿ ಕ ಕಾರವು ತಳಗಡೆ ವೃತ್ತವನ್ನು ಹೊಂದಿದ್ದು, ಅದರ ಮೇಲೆ ಅಡ್ಡಗೆರೆ ಬಂದು ಅದರ ಬಲ ಅಂಚಿನಿಂದ ಎಡಗಡೆಗೆ ಬಾಗಿದ ಗೆರೆಯಿದ್ದು, ಅದರಿಂದ ತಲೆಕಟ್ಟು ಬಂದಿದೆ. ಖ ಕಾರವು ವಿಜಯನಗರ ಕಾಲದ ಲಿಪಿಯಂತೆಯೇ ಇದೆ. ಗ, ಚ, ಜ, ತ, ಥ, ದ, ಧ, ನ, ಬ, ಮ, ಯ, ರ, ವ, ಶ, ಷ, ಸ, ಹ, ಳ ಗಳು ಇಂದಿನ ರೂಪದಲ್ಲಿಯೇ ಇವೆ. ಟ ಕಾರದ ಕೆಳಭಾಗವು ಎ ಕಾರದಂತೆ ಇದ್ದು ಮುಂಭಾಗದ ಸುರುಳಿಯ ಮೇಲೆ ಮೇಲ್ಮುಖ ಗೆರೆಯೊಂದು ಬಂದಿದೆ. ಡ ಕಾರದ ತಳಭಾಗವನ್ನು ಎರಡು ಕಡೆ ಬಾಗಿಸಿದಂತೆ ಬರೆಯಲಾಗಿದೆ. ಣ ಕಾರದ ತಳಭಾಗವು ಕವಲಂತೆ ಎರಡು ಭಾಗವಾಗಿ ಅದರಿಂದ ಮೇಲಕ್ಕೆ ಬಂದ ಗೆರೆಯು ಬಲಕ್ಕೆ ಬಾಗಿ ಮತ್ತೆ ಒಳಕ್ಕೆ ಬಾಗಿ ಮತ್ತೆ ಮುಂದುವರಿದು ಬಲಕ್ಕೆ ಇಳಿದು ಅಂತ್ಯದಲ್ಲಿ ಒಳಕ್ಕೆ ತಿರುಗಿದೆ. ಭ ಕಾರದ ಆರಂಭ ಭಾಗವು ಇಂದಿನ ಖ ಕಾರದಂತೆ ಇದ್ದು ತಲೆಕಟ್ಟು ಇಲ್ಲ. ಲ ಕಾರಕ್ಕೆ ಆರಂಭದಲ್ಲಿ ಕೆಲವೆಡೆ ಸುರುಳಿ ಇಲ್ಲ ಕೆಲವೆಡೆ ಇವೆ. ಪ, ಸ, ಹ ಇವುಗಳ ತಲೆಕಟ್ಟಿನ ಮತ್ತು ಅಕ್ಷರದ ಮಧ್ಯೆ ಬರುವ ಸೇರು ಕೊಂಡಿಯ ಗೆರೆಯು ನೇರವಾಗಿ ಇರುವ ಬದಲು ಬಲದಿಂದ ಎಡಕ್ಕೆ ಮೇಲಕ್ಕೆ ಬಂದು ತಲೆಕಟ್ಟು ಗೆರೆಯನ್ನು ಸೇರಿದೆ. ತಲೆಕಟ್ಟುಗಳು ಹಿಂದಿನ ಶಾಸನಗಳಂತೆ ಅಡ್ಡವಾಗಿ ಸರಳರೇಖೆಯಲ್ಲಿರದೆ ಎಡದಿಂದ ಬಲಕ್ಕೆ ಮೇಲಕ್ಕೆ ಏರಿವೆ. ಶ್ರೀಕಾರವು ಒಳಗೆ ಅರ್ಧವೃತ್ತಾಕಾರದ ಗೆರೆಯಿಂದ, ಅದರಿಂದ ಬಂದ ಗೆರೆ ಕೆಳಮುಖವಾಗಿ ಮತ್ತೆ ಎಡಕ್ಕೆ ತಿರುಗಿ ಮೇಲಕ್ಕೆ ಬಂದು ಅಕ್ಷರದ ಮೇಲಿನಿಂದ ಬಲಕ್ಕೆ ಬೆಳೆದು ಮತ್ತೆ ಒಂದು ಸುರುಳಿ ಬಂದು ಗೆರೆಯ ಮೇಲಕ್ಕೆ ಬೆಳೆದಿದೆ. ಆ ಕಾರದ ದೀರ್ಘವು 90^0 ಯಂತೆ ತಲೆಕಟ್ಟಿನಿಂದ ಗೆರೆ ಕೆಳಕ್ಕೆ ಇಳಿದಿದೆ. ಇ ಕಾರ, ಈ ಕಾರ ಕಾಗುಣಿತದಲ್ಲಿ ವ್ಯತ್ಯಾಸ ಕಡಿಮೆ.



ಬೆಳ್ಳಾವೆ ತಾಮ್ರ ಪತ್ರ ದೇ.ಕೊಂ.ರೆಡ್ಡಿ


ಎ, ಏ ಕಾರದ ಕಾಗುಣಿತಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಎರಡೂ ಒಂದೇ ರೀತಿಯಲ್ಲಿವೆ. ಹಾಗೆಯೇ ಒ ಮತ್ತು ಓ ಕಾರದ ಕಾಗುಣಿತದಲ್ಲಿ ವ್ಯತ್ಯಾಸವಿಲ್ಲ. ಒಂದೇ ರೀತಿಯಲ್ಲಿವೆ. ಹ ಕಾರಕ್ಕೆ ಮಾತ್ರ ಓ ಕಾರವನ್ನು ನೀಡುವಾಗ ಎ ಕಾರದ ಕಾಗುಣಿತವನ್ನು ಅಕ್ಷರದ ತಲೆಕಟ್ಟಿನಲ್ಲಿ ಬರೆದು ಅಕ್ಷರದ ಪಕ್ಕದಲ್ಲಿ ಆ ಕಾರದ ಗೆರೆಯನ್ನು ಎಳೆದಿರುತ್ತಾರೆ. ಅನುಸ್ವಾರವು ಅಕ್ಷರದ ಪಕ್ಕಕ್ಕೆ ಅಕ್ಷರಕ್ಕಿಂತ ಸ್ವಲ್ಪ ಚಿಕ್ಕದಾಗಿದೆ. ವಿಸರ್ಗವು ಸಣ್ಣ ಸೊನ್ನೆಗಳನ್ನು ಒಂದರ ಮೇಲೆ ಒಂದರಂತೆ ನಿಲ್ಲಿಸಿರುತ್ತಾರೆ.


ನೀರ್ಥಡಿ ಶಾಸನದಲ್ಲಿ ಅ ಕಾರವು ಅರ್ಧ ಚಂದ್ರಾಕಾರವಾಗಿದ್ದು ಅಕ್ಷರದ ಎರಡೂ ತುದಿಗಳು ಒಳಕ್ಕೆ ಬಾಗಿವೆ. ಆ ಕಾರವನ್ನು ಸೂಚಿಸಲು ಅ ಕಾರದ ಬಲಗಡೆ ಒಂದು ಗೆರೆ ಎಳೆದು ಅದರಿಂದ ಕೆಳಮುಖಕ್ಕೆ ಕೋನಾಕಾರವಾಗಿ ಗೆರೆ ಎಳೆಯಲಾಗಿದೆ. ಕ ಕಾರವು ಕೆಳದಿ

ಶಾಸನಕ್ಕಿಂತ ಸ್ವಲ್ಪ ಮುಂದುವರೆದ ಕೈ ಬರಹದ ಬರೆವಣಿಗೆಯಂತಿದೆ. ಮಧ್ಯದ ಗೆರೆ ಹೆಚ್ಚು ಬಾಗಿಲ್ಲ. ಇಡೀ ಶಾಸನದ ಅಕ್ಷರಗಳು ಪಾರಂಪರಿಕ ಶಿಲಾಲಿಪಿಗಳ ಮುಂದುವರಿಕೆಯಂತಿರದೆ ಕೈ ಬರಹದಂತೆ ಇದೆ. ಶ್ರೀ ಎಂಬ ಅಕ್ಷರ ಎರಡು ಕಡೆ ಉಲ್ಲೇಖವಿದ್ದು ಎರಡು ರೀತಿಯಲ್ಲಿವೆ. ಡ ಕಾರವನ್ನು ಎರಡು ರೀತಿಯಲ್ಲಿ ಬರೆಯಲಾಗಿದೆ. ರಿ ಎಂಬ ಅಕ್ಷರ ಬರೆದಿರುವ ಕಡೆ ರಿ ಗೆ ಸಜಾತಿ ಒತ್ತಕ್ಷರ ನೀಡಿ ರ್ರಿ ಎಂದು ಬರೆಯಲಾಗಿದೆ. ಇದು ಱ ಕಾರವನ್ನು ಆರಂಭದಲ್ಲಿ ಸೂಚಿಸುತ್ತಿದ್ದು, ಮುಂದೆ ರಿ ಎಂದು ಬರೆಯುವ ಕಡೆಯಲ್ಲೆಲ್ಲಾ ಈ ಒತ್ತಕ್ಷರ ಬಳಕೆಯಾಗಿದೆ.

ಕುಮಾರ ಮೆದಕೇರಿನಾಯಕನ ಕಾಲದ ಕ್ರಿ.ಶ.೧೬೭೩ರ ಪೊಂಬೊಳಲು ಶಿಲಾಶಾಸನ ಮತ್ತು ಚಿಕ್ಕದೇವರಾಜ ಒಡೆಯನ ಕ್ರಿ.ಶ.೧೬೭೪ರ ದೇವನಗರ ಅಗ್ರಹಾರದ ತಾಮ್ರಶಾಸನ ಲಿಪಿಗಳನ್ನು ಗಮನಿಸಿದಾಗ ಈ ಕಾರವನ್ನು ಬರೆಯಬೇಕಾದಲ್ಲಿ ರ ಕಾರದ ಮಧ್ಯೆ ಭೇದಿಸಿದ ಅಡ್ಡಗೆರೆಯನ್ನು ಎಳೆದು ಆ ಗೆರೆಯ ಬಲಕ್ಕೆ ಮೇಲ್ಮುಖವಾಗಿ ಬಾಗಿದ ಗೆರೆ ನೀಡಲಾಗಿದೆ. ಫ, ಟ, ಪ, ಸ, ಹ ಅಕ್ಷರಗಳ ತಲೆಕಟ್ಟುಗಳ ತಲೆಕಟ್ಟುಗಳಲ್ಲಿ ಈ ಬಾಗುವಿಕೆಯಿಲ್ಲ. ಟ ಕಾರವು ಎರಡು–ಮೂರು ರೀತಿಗಳಲ್ಲಿ ಬಳಕೆಯಾಗಿದೆ. ಯೊ, ಮೊ ಅಕ್ಷರಗಳಲ್ಲಿ ಓ ಕಾರದ ಕಾಗುಣಿತವು ಇಂದಿನ ರೀತಿಯಲ್ಲಿದ್ದರೆ ಉಳಿದವುಗಳಲ್ಲಿ ಅಕ್ಷರದ ಬಲಕ್ಕೆ ಬಾಗಿದ ಗೆರೆಯೇ ಮತ್ತೊಮ್ಮೆ ಬಾಗಿ ಈ ಕಾಗುಣಿತವನ್ನು ತೋರಿಸಿದೆ. ಣ, ಭ, ಳ ಗಳು ವಿಜಯನಗರ ಕಾಲದ ರೂಪಗಳನ್ನೇ ಹೊಂದಿದೆ. ಟ ಕಾರದ ಬಲಭಾಗದ ಗೆರೆಯ ಮಧ್ಯೆ ಒಂದು ಡೊಂಕು ಬಂದಿದ್ದು ಕೆಲವೆಡೆ ಈ ಡೊಂಕು ಉದ್ದ ಗೆರೆಯನ್ನು ಅಡ್ಡಕ್ಕೆ ಕತ್ತರಿಸಿದಂತೆ ಬಂದಿದೆ. ಒಟ್ಟಾರೆ ಅಕ್ಷರಗಳು ವಿಜಯನಗರದ ಅಕ್ಷರಗಳಲ್ಲಿದ್ದ ಸುಂದರತೆಯನ್ನು ಕಳೆದುಕೊಂಡಿವೆ.

ಕ್ರಿ.ಶ.೧೭೨೫ರ ಮೇಲುಕೋಟೆ ತಾಮ್ರಶಾಸನವು ದೊಡ್ಡ ಕೃಷ್ಣರಾಜ ಒಡೆಯರ ಕಾಲಕ್ಕೆ ಸೇರಿದ್ದು ಇದನ್ನು ಆಸ್ಥಾನಕವಿ ತಿರುಮಲಾರ್ಯ ಬರೆದಿದ್ದಾನೆ. ಈ ಶಾಸನದಲ್ಲಿನ ಅಕ್ಷರಗಳಲ್ಲಿನ ಫ, ಪ, ಷ, ಸ, ಹ ಗಳಲ್ಲಿ ತಲೆಕಟ್ಟುಗಳು ಮೇಲೆ ವಿವರಿಸಿದಂತೆ ಇದ್ದರೂ ಅವುಗಳ ಆರಂಭದ ಬಾಗುವಿಕೆ ಚಿಕ್ಕದಾಗಿದೆ. ಉಳಿದ ಅಕ್ಷರಗಳ ತಲೆಕಟ್ಟುಗಳು ಅಲಂಕಾರಿಕವಾಗಿ ಎಳೆದಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಬಹುಶಃ ಸ್ಥಿರರಾಜ್ಯದ ಲಕ್ಷಣಗಳು ಈ ಅಕ್ಷರಗಳಲ್ಲಿ ಕಾಣುತ್ತಿದೆ. ಕವಿಗಳು, ಶಿಲ್ಪಿಗಳು ಇಲ್ಲಿ ಬಂದು ನೆಲೆ ನಿಂತದನ್ನು ಇದರಿಂದ ಅರಿಯಬಹುದಾಗಿದೆ. ಆದರೆ ಈ ಲಕ್ಷಣಗಳನ್ನು ಕ್ರಿ.ಶ.೧೭೩೪ರ ಕಾಲದ ಕಲ್ಲಂಬಾಳು ಶಾಸನದಲ್ಲಿ ಕಾಣುವುದಿಲ್ಲ. ಇಲ್ಲಿ ಪ, ಶ, ಸ, ಹ ಗಳ ತಲೆಕಟ್ಟು ಗೆರೆಗಳ ಆರಂಭದ ತಳಭಾಗದಲ್ಲಿ ಚಿಕ್ಕಗೆರೆಯೊಂದು ಕೆಳಕ್ಕೆ ಇಳಿದಿದೆ ಮತ್ತು ಈ ಶಾಸನದಲ್ಲಿ ಏ ಕಾರದ ಕಾಗುಣಿತವನ್ನು ತೋರಿಸಲು ಪ್ರತ್ಯೇಕವಾಗಿ ಇಳಿ ಚಿಹ್ನೆಯನ್ನು ಅಕ್ಷರದ ಪಕ್ಕದಲ್ಲಿ ನೀಡಲಾಗಿದೆ. ಏ ಕಾರದ ಕಾಗುಣಿತವನ್ನು ಹೊಂದಿರುವ ಎಲ್ಲ ಅಕ್ಷರಗಳಲ್ಲಿ ಇದು ಕಾಣುವುದಿಲ್ಲ. ಕೇವಲ ದೇ ಅಕ್ಷರದಲ್ಲಿ ಮಾತ್ರ ಕಾಣಸಿಗುತ್ತದೆ. ಈ ಅವಧಿಯ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ರ ಕಾರದ ಬರೆವಣಿಗೆ. ಶಕಟರೇಫದ ಬಳಕೆ ಕಡಿಮೆಯಾಗುತ್ತಾ ಬಂದದ್ದರಿಂದ ಉಚ್ಚಾರದಲ್ಲಿ ಒಂದೇ ಅಕ್ಷರವನ್ನು ಬೇರೆ ಬೇರೆ ರೀತಿಯಲ್ಲಿ ಉಚ್ಚರಿಸಬೇಕಾಗಿ ಬಂತು. ಈ ಕಾರಣದಿಂದ ಶಕಟರೇಫ ಬರಬೇಕಾಗಿದಗಿದ್ದ ಕಡೆ ರ ಕಾರ ಬಳಸಿದಾಗ ಅದನ್ನು ಒತ್ತಿ ಉಚ್ಚರಿಸಬೇಕೆಂದು ಹೇಳುವುದಕ್ಕಾಗಿ ರ ಕಾರಕ್ಕೆ ಸಜಾತಿದ್ವಿತ್ವವನ್ನು ತೋರಿಸಿರುತ್ತಾರೆ. ಈ ಲಕ್ಷಣವನ್ನು ಕ್ರಿ.ಶ.೧೮೯೪ರ ನೀರ್ಥಡಿ ಶಾಸನದಲ್ಲಿ (EC.XI. Dg.164) ಗಮನಿಸಬಹುದು. ಮೆದಕೆಱಿ ಎನ್ನುವ ಕಡೆ ಮೆದಕೆರ್ರಿ ಎಂದು ಬರೆಯಲಾಗಿದೆ. ಮುಂದೆ ಎಲ್ಲಾ


ವಿಜಯನಗರ
ವಿಜಯನಗರೋತ್ತರ
1 2 3 4 5 6
7 8 9 10 11
ಅ
ಆ
ಇ
ಈ
ಉ
ಊ
ಋ
ಎ
ಏ
ಒ
ಔ
ಕ
ಖ
ಗ
ಘ
ಙ
ಚ
ಛ
ಜ
ಝ
ಞ
ಟ
ಠ
ಡ




ಪಿ.ವಿ.ಕೃಷ್ಣಮೂರ್ತಿ

ಬಳಕೆದಾರರು (ಬರೆಹಗಾರರು) ನಿಯಮವೆಂಬಂತೆ ಎಲ್ಲೆಲ್ಲಿ ರ ಕಾರ ಬರುತ್ತದೆಯೋ ಅದು ರೇಫವಾಗಿರಲಿ ಶಕಟರೇಫವಾಗಿರಲಿ ಅಲ್ಲೆಲ್ಲಾ ಸಜಾತಿದ್ವಿತ್ವವನ್ನು ತೋರಿಸಿರುತ್ತಾರೆ.


ದಕ್ಷಿಣ ಕರ್ನಾಟಕದಲ್ಲಿ ಮೈಸೂರು ಒಡೆಯರನ್ನು ಮೂಲೆಗೆ ತಳ್ಳಿ ಹೈದರಾಲಿ-ಟೀಪೂಸುಲ್ತಾನರು ರಾಜ್ಯಭಾರವನ್ನು ಕೈಗೆ ತೆಗೆದುಕೊಳ್ಳುತ್ತಾರೆ. ಇವರ ಕಾಲದಲ್ಲಿ ದಿವಾನನಾಗಿದ್ದ ಪೂರ್ಣಯ್ಯನ ಪ್ರಭಾವದಿಂದ ಮರಾಠ ಕಾರಕೂನರು ಮತ್ತು ಹೈದರಾಲಿ-ಟೀಪೂ ಪ್ರಭಾವದಿಂದ ಉರ್ದು ಭಾಷಿಕರು ಆಸ್ಥಾನದಲ್ಲಿ ಪ್ರಭಾವಿತರಾಗುತ್ತಾರೆ. ಕನ್ನಡದ ಬರೆವಣಿಗೆ ಹಿನ್ನಡೆಯುತ್ತದೆ. ಕಡತಗಳ ಹಿಡಿತ ಸಾಧಿಸಲು ಮರಾಠಿ ಕಾರಕೂನರು ಕನ್ನಡ ಮೋಡಿಯನ್ನು ಬಳಸುತ್ತಾರೆ. ಕ್ರಿ.ಶ.೧೭೯೦ರ ವೇಳೆಗೆ ಕರ್ನಾಟಕದ ಧಾರವಾಡವೂ ಸೇರಿದಂತೆ ಆಂಧ್ರದ ಆದವಾನಿಯವರೆಗೆ ದಕ್ಷಿಣದಲ್ಲಿ ದಿಂಡುಗಲ್ಲಿನವರೆಗೆ ರಾಜ್ಯವನ್ನು ವಿಸ್ತರಿಸಿ ಪಾರಂಪರಿಕವಾಗಿ ಬಂದಿದ್ದ ವಿಜಯನಗರ ಸಾಮ್ರಾಜ್ಯದ ಸಾಮಂತ ಮನೆತನಗಳನ್ನು ಮೂಲೆಗೆ ತಳ್ಳಿ ತನ್ನವರನ್ನು ಅಲ್ಲಿ ಟೀಪೂ ಆಡಳಿತಕ್ಕೆ ನೇಮಿಸುತ್ತಾನೆ. ಮುಂದೆ ೧೭೯೯ರ ಶ್ರೀರಂಗಪಟ್ಟಣ ಯುದ್ಧದಲ್ಲಿ ಬ್ರಿಟೀಷ್ ಮತ್ತು ಪದಚ್ಯುತ ಸಾಮಂತರ ಸಂಯುಕ್ತ ದಂಡಿನ ಬಲದಿಂದ ಟೀಪೂವನ್ನು ಕೊಂದು ಮೈಸೂರು ಸಂಸ್ಥಾನವನ್ನು ತಮ್ಮ ವಶಕ್ಕೆ ಪಡೆದು ಮೈಸೂರು ಅರಸೊತ್ತಿಗೆಗೆ ಪುನಃ ಒಪ್ಪಿಸುತ್ತಾರೆ. ಆದರೆ ದಿವಾನನಾಗಿ ಕೆಲವು ಕಾಲ ಪೂರ್ಣಯ್ಯನೇ ಮುಂದುವರಿಯುತ್ತಾನೆ. ಈ ಕಾರಣದಿಂದ ಟೀಪೂ ಆಶ್ರಯದಲ್ಲಿದ್ದ ಮರಾಠಾ ಕಾರಕೂನರು ತಮ್ಮ ಮೋಡಿ ಬರೆವಣಿಗೆಯನ್ನು ಮುಂದುವರಿಸುತ್ತಾರೆ. ಮುಮ್ಮಡಿ ಕೃಷ್ಣರಾಜ ಒಡೆಯನು ವಯಸ್ಕನಾಗಿ ಪ್ರಭಾವಯುತನಾದ ಮೇಲೆ ಕನ್ನಡದ ಕಡೆಗೆ ಗಮನ ನೀಡುತ್ತಾನೆ. ಈ ಕಾಲಕ್ಕೆ ಉರ್ದು ಮತ್ತು ಮೋಡಿ ಲಿಪಿ ಪ್ರಭಾವದಿಂದ ಕನ್ನಡ ಲಿಪಿ ತನ್ನ ಹಿಂದಿನ ಅಂದವನ್ನು ಕಳೆದುಕೊಂಡಿರುತ್ತದೆ. ಗುರುಮನೆಗಳಲ್ಲಿ ಉಸಿರಾಡುತ್ತಿದ್ದ ಕನ್ನಡ ಮತ್ತೆ ಬೀದಿಗೆ ಬರುತ್ತದೆ. ಮೈಸೂರಿನಲ್ಲಿ ಸ್ಥಿರರಾಜ್ಯ ಆರಂಭವಾದ ಕೂಡಲೇ ಆಸ್ಥಾನಕ್ಕೆ ಮತ್ತೆ ವಿದ್ವಾಂಸರು, ಸಂಗೀತಗಾರರು, ಕಲಾಕಾರರು ಸೇರತೊಡಗುತ್ತಾರೆ. ಶಿಲಾ ಶಾಸನಗಳ ಸಂಖ್ಯೆ ಗಣನೀಯವಾಗಿ ತಗ್ಗುತ್ತದೆ. ಕಾಗದದ ಬಳಕೆ ಹೆಚ್ಚುತ್ತಾ ಹೋಗುತ್ತದೆ. ಧಾರ್ಮಿಕ ಕೃತಿಗಳು ಕಾಗದ ಮತ್ತು ತಾಳೆಗರಿಗಳೆರಡರ ಮೇಲೂ ರಚಿತವಾಗುತ್ತವೆ.

ಕ್ರಿ.ಶ.೧೮೦೭ರ ಕೊಡಗಿನ ವೀರರಾಜೇಂದ್ರನ ಕಾಲದ ಶಾಸನಗಳನ್ನು ಗಮನಿಸಿದರೆ ಇವು ಇಂದಿನ ಅಕ್ಷರಗಳಿಗೆ ಸಮೀಪ ಬೆಳವಣಿಗೆಯನ್ನು ಹೊಂದಿವೆ. ಫ, ಪ, ಸ ಗಳ ತಲೆಕಟ್ಟುಗಳ ಕೆಳಗೆ ಸೊನ್ನೆ ಬಂದಿದ್ದು, ಬರೆವಣಿಗೆಯಲ್ಲಿ ಇದು ಇಂದಿಗೂ ಮುಂದುವರಿದಿದೆ. ಮುದ್ರಣದ ಮೇಲೂ ಈ ಅಕ್ಷರಗಳು ಪ್ರಭಾವ ಬೀರಿವೆ. ಟ ಕಾರ ಮಾತ್ರ ಬರೆಯಲು ತೊಡಕಾದಂತೆ ಕಂಡುಬಂದಿದ್ದು, ಕಷ್ಟಪಟ್ಟು ಬರೆದಂತೆ ಕಾಣುತ್ತದೆ. ಆ ಕಾರವನ್ನು ಬರೆಯಲು ಅ ಪಕ್ಕದಲ್ಲಿ ಆ ಕಾರದ ಕಾಗುಣಿತದ ದೀರ್ಘವನ್ನು ಬಳಸಿದೆ. ದೇ ಎಂದು ಬರೆಯಬೇಕಾದ ಕಡೆ ಒಂದೆಡೆ ದೀರ್ಘವನ್ನು ನೀಡಿಲ್ಲ, ಒಂದೆಡೆ ನೀಡಲಾಗಿದೆ. ಇದೇ ಅರಸನ ೧೮೧೦ರ ಶಾಸನದಲ್ಲಿ ಹ ಕಾರದ ಎರಡು ರೂಪಗಳನ್ನು ಬಳಸಿದೆ. ಇದೇ ಅರಸನ ಮಡಿಕೇರಿ ಕೋಟೆಯ ಶಾಸನದಲ್ಲಿ ಕನ್ನಡ ಅಕ್ಷರವನ್ನು ಕಾಗದದ ಮೇಲೆ ಬರೆದಂತೆ ಬರೆಯಲಾಗಿದೆ. ಅಂದರೆ ಈ ಕಾಲಕ್ಕೆ ಕಾಗದದ ಹಸ್ತಪ್ರತಿಗಳು ಶಿಲಾಶಾಸನಗಳ ಮೇಲೆ ಪ್ರಭಾವವನ್ನು ಬೀರುವಂತಹವಾಗಿದ್ದವು. ಅಕ್ಷರಗಳ ತಲೆಕಟ್ಟುಗಳನ್ನು ಮೇಲಕ್ಕೆ ಎಳೆಯಲಾಗಿದೆ. ಈ ಬಗೆಯ ಬರೆವಣಿಗೆಯನ್ನುಳ್ಳ ಬೆಳ್ಳಾವೆ

ಮತ್ತು ಸಿರುಗುಪ್ಪಾ ಶಾಸನಗಳ ಅಕ್ಷರಗಳು ಕನ್ನಡ ಲಿಪಿಯ ಅಲಂಕಾರಿಕೆಯ ಮತ್ತು ಏಕರೂಪವಲ್ಲದ ಬರೆವಣಿಗೆಗೆ ಉದಾಹರಣೆಯಾಗಿವೆ.



ಕ.ವಿ.ಶಾ. I p. 95 ಕೊಟ್ಟೂರು ಮಠದ ಶಾಸನ, ಸಿರುಗುಪ್ಪ ದೇ.ಕೊಂ.ರೆಡ್ಡಿ



ಬೆಳ್ಳಾವೆ ಶಾಸನ ದೇ.ಕೊಂ.ರೆಡ್ಡಿ

ಇಲ್ಲಿಂದ ಮುಂದೆ ಕನ್ನಡ ಶಾಸನಗಳು ಪೂರ್ಣವಾಗಿ ಮರೆಯಾಗಿ ಅವುಗಳ ಸ್ಥಳದಲ್ಲಿ ಇಂಗ್ಲೀಷ್ ಕೆಲವೆಡೆ ಉರ್ದು ಶಾಸನಗಳು ಬಳಕೆಗೆ ಬರುತ್ತವೆ. ಕನ್ನಡ ಭಾಷಾ ಶಾಸನಗಳ ಅವಸಾನ ಇಲ್ಲಿಂದ ಆರಂಭವಾಯಿತು.

ತಮಿಳುನಾಡಿನ ಲಿಪಿಗಳು

ತಮಿಳುನಾಡಿನಲ್ಲಿ ಈಗ ಒಂದೇ ಬಗೆಯ ಲಿಪಿ ಬಳಕೆಯಿದ್ದರೂ ಹಿಂದೆ ಮೂರು ಬಗೆಯ ಲಿಪಿಗಳು ಬಳಕೆಯಲ್ಲಿದ್ದವು. ಅವು ೧. ವಟ್ಟೆಳತ್ತು, ೨. ಗ್ರಂಥಲಿಪಿ ಮತ್ತು ೩. ತಮಿಳುಲಿಪಿ. ಈಗ ತಮಿಳು ಲಿಪಿಯೇ ಹೆಚ್ಚಾಗಿ ಬಳಕೆಯಲ್ಲಿದೆ.

ತಮಿಳು ಬ್ರಾಹ್ಮಿ ವರ್ಣಮಾಲೆಯಲ್ಲಿ

೧. ವರ್ಗ ಪ್ರಥಮಾಕ್ಷರಗಳು ಮಾತ್ರ ಬಳಕೆಯಾಗಿವೆ.

೨. ವರ್ಗ ಪ್ರಥಮಾಕ್ಷರಗಳ ಜೊತೆಗೆ ವರ್ಗದ ಅನುನಾಸಿಕಾಕ್ಷರಗಳು ಉಳಿದಿವೆ.


೩. ವ್ಯಂಜನಗಳಲ್ಲಿ ಕೆಲವೊಮ್ಮೆ ಠ, ಧ ವನ್ನು ಬಳಸಿರುತ್ತಾರೆ.

ಸಿ. ಶಿವರಾಮಮೂರ್ತಿಯಂತಹ ವಿದ್ವಾಂಸರು ಭಟ್ಟಿಪ್ರೋಲು ಶಾಸನದ ಲಿಪಿಗಳು ತಮಿಳುನಾಡಿನ ಲಿಪಿಗೆ ಮೂಲವೆಂಬ ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಭಟ್ಟಿಪ್ರೋಲು ಶಾಸನ ವಿಶಿಷ್ಟ ಶಾಸನ. ಅದರಿಂದ ತಮಿಳು ಲಿಪಿ ಉದಿಸಿಲ್ಲ, ಬ್ರಾಹ್ಮಿಯನ್ನು ಬಲ್ಲ ಜೈನ ಪಂಡಿತರು


ಕ್ರಿ.ಪೂ.೨-೧ನೇ ಶತಮಾನದಲ್ಲಿ ದಕ್ಷಿಣಕ್ಕೆ ಬಂದಾಗ, ಎರಡನೆಯ ಹಂತದಲ್ಲಿ ಬ್ರಾಹ್ಮಿಲಿಪಿಯನ್ನು ದಕ್ಷಿಣಕ್ಕೆ ತಂದರು. ಹಾಗೆಯೇ ಇದನ್ನು ತಮ್ಮ ವಾಸಸ್ಥಳಗಳಾದ ಕಲ್ಲುಹಾಸಿಗೆಗಳ ಬಳಿ, ಗವಿಗಳಲ್ಲಿ ಬರೆಸಿದರು. ಈ ಬರೆವಣಿಗೆ ಕ್ರಿ.ಶ.೩ನೆಯ ಶತಮಾನದ ವರೆಗೂ ಮುಂದುವರಿಯಿತು. ನಾಗಸ್ವಾಮಿಯಂತಹವರು ತಮಿಳು ಗುಹಾಬ್ರಾಹ್ಮಿಲಿಪಿಯು ಸಿಂಧೂಲಿಪಿಯಿಂದ ನಿಷ್ಪನ್ನವಾಗಿದೆಯೆಂದು ಅಭಿಪ್ರಾಯಪಡುತ್ತಾರೆ. ಸುಬ್ರಹ್ಮಣ್ಯಂ ಮಲಯಾಂಡಿ ಎಂಬುವವರು ಚೋಳ, ಪಾಂಡ್ಯರು ಅಲ್ಲಿ ಆಳುತ್ತಿದ್ದರೆಂಬ ಆಧಾರ ರಹಿತ ಊಹೆಯನ್ನು ಮಾಡಿರುತ್ತಾರೆ. ಕಣ್ಣಯ್ಯನ್‌ನ ಪ್ರಕಾರ ಭಾರತದಲ್ಲಿ ದೊರೆತಿರುವ ಲಿಪಿಗಳಲ್ಲಿ ತಮಿಳು ಗುಹಾ ಬರೆವಣಿಗೆಯು ಬ್ರಾಹ್ಮಿ ಲಿಪಿಗಿಂತ ಹಳೆಯದೆಂದೂ ಅಶೋಕನು ದಕ್ಷಿಣದಿಂದ ಬ್ರಾಹ್ಮಿಲಿಪಿಯನ್ನು ಪಡೆದನೆಂದು ಅಭಿಪ್ರಾಯ ಪಡುತ್ತಾರೆ. (Scripts in arround India) ಬಿ.ಆರ್. ಗೋಯಲ್ ಅವರು ಜೈನರು ಮತ್ತು ವ್ಯಾಪಾರಿಗಳು ಈ ಲಿಪಿಯನ್ನು ದಕ್ಷಿಣಕ್ಕೆ ಹರಡಲು ಕಾರಣರಾದರೆಂದು ಅಭಿಪ್ರಾಯ ಪಡುತ್ತಾರೆ. ಕೆ.ವಿ.ಸುಬ್ರಮಣಿ ಅಯ್ಯರ್ ಅವರು ದೊರೆತಿರುವ ಶಾಸನಗಳು ಅಶೋಕನಿಗಿಂತ ಹಿಂದಿನ ಲಿಪಿಗಳೆಂಬ ಅಭಿಪ್ರಾಯ ಪಡುತ್ತಾರೆ. ಅರಿಕಮೇಡು ಮತ್ತು ಸಿತ್ತಿನವಾಸಲ್‌ಗಳಲ್ಲಿ ದೊರೆತ ಮಡಕೆಗಳನ್ನೂ ಅಂಳಗೆ ಒಳಪಡಿಸಿ ಈ ಅಭಿಪ್ರಾಯ ಪಡುತ್ತಾರೆ. ಆದರೆ ದಾನಿಯವರು ಈ ಎಲ್ಲಾ ಶಾಸನಗಳನ್ನು ಕ್ರಿ.ಶ.ಮೊದಲ ಶತಮಾನಕ್ಕೆ ಸೇರಿಸುತ್ತಾರೆ. ಟಿ.ವಿ. ಮಹಾಲಿಂಗಂ ಅವರು ಕ್ರಿ.ಪೂ.೩ ರಿಂದ ಕ್ರಿ.ಶ.೩-೪ನೆಯ ಶತಮಾನ; ಇರಾವತಂ ಮಹದೇವನ್ ಕ್ರಿ.ಪೂ.೩ನೆಯ ಶತಮಾನದಿಂದ ಕ್ರಿ.ಶ.೬ನೆಯ ಶತಮಾನವೆಂದಿದ್ದು, ತಮಿಳು ಬ್ರಾಹ್ಮಿಶಾಸನಗಳನ್ನು ಅರಿಕಮೇಡಿನ ಕಾಲ, ಅರಿಕಮೇಡಿನ ನಂತರದ ಕಾಲವೆಂದು ವಿಂಗಡಿಸುತ್ತಾರೆ. ಕೆ.ಷಣ್ಮುಗಂ ಎಂಬುವವರು ಕೊರ್ಕೈಲ್ ಉತ್ಖನನದಲ್ಲಿ ದೊರೆತ ತಮಿಳು ಲಿಪಿಯುಳ್ಳ ಮಡಕೆ ಚೂರುಗಳನ್ನು ಅಂಳಗೆ ಅಳವಡಿಸಿ ಕ್ರಿ.ಪೂ.೮ನೆಯ ಶತಮಾನವೆಂದಿರುತ್ತಾರೆ. ಆದರೆ ನಾಗಾಸ್ವಾಮಿ ಈ ಕಾಲಕ್ಕೆ ಬರೆವಣಿಗೆ ಬಳಕೆಯಲ್ಲಿದ್ದದ್ದನ್ನು ನಿರಾಕರಿಸುತ್ತಾರೆ.

ಪ್ರಾಚೀನ ತಮಿಳು ಶಾಸನಗಳು

ತಮಿಳುನಾಡಿನಲ್ಲಿ ಬರೆವಣಿಗೆಯನ್ನು ಬರೆದವರು ಮೊದಲು ಜೈನರು ಇಲ್ಲವೇ ಬೌದ್ಧರು. ತಾವು ನೆಲೆ ನಿಂತ ಸ್ಥಳಗಳಲ್ಲಿ ಅಥವಾ ತಮ್ಮ ಗುರುಗಳು ಮುಡಿಪಿದ ಸ್ಥಳಗಳಲ್ಲಿ ಚಿಕ್ಕ ಚಿಕ್ಕ ಶಾಸನಗಳನ್ನು ಕೆತ್ತಿರುತ್ತಾರೆ. ಈ ಶಾಸನಗಳು ಕ್ರಿ.ಪೂ.೩ನೆಯ ಶತಮಾನದಿಂದ ಆರಂಭವಾಗಿ ಕ್ರಿ.ಶ.೫ನೆಯ ಶತಮಾನದ ವರೆಗೆ ದೊರೆಯುತ್ತವೆ. ಕೆಲವರು ಅಭಿಮಾನದಿಂದ ಈ ಶಾಸನಗಳನ್ನು ಅಶೋಕನಿಗಿಂತಲೂ ಪ್ರಾಚೀನವೆಂದಿದ್ದರೂ ಇವುಗಳಲ್ಲಿ ಬಳಸಿರುವ ಲಿಪಿಯು ಲಕ್ಷಣದಲ್ಲಿ ಅಶೋಕನ ಲಿಪಿಯ ಮಾದರಿಯನ್ನೇ ಮೂಲವಾಗಿ ಹೊಂದಿರುವುದರಿಂದ ಅಶೋಕನ ಬ್ರಾಹ್ಮಿಯೇ ಈ ಲಿಪಿಗಳಿಗೂ ಮೂಲವಾಗಿದೆ. ಒಂದು ಹಂತದಲ್ಲಿ ಈ ಶಾಸನಗಳ ಭಾಷೆಯನ್ನು ವಿದ್ವಾಂಸರು ಪ್ರಾಕೃತವೆಂದು ಸಾಧಿಸಿದ್ದೂವುಂಟು. ಮುಂದೆ ಅನೇಕ ತಮಿಳು ವಿದ್ವಾಂಸರು ಇವನ್ನು ಓದಿ ಇವುಗಳ ಭಾಷೆ ತಮಿಳೆಂದು ಸಾಧಿಸಿರುತ್ತಾರೆ. ಡಾ। ಕೆ.ವಿ. ರಮೇಶ್ ಅವರು ಅಭಿಪ್ರಾಯಪಡುವಂತೆ ಜೈನಸನ್ಯಾಸಿಗಳು ತಮಿಳುನಾಡಿಗೆ ಹೋದಾಗ ರೇಖೆಯಾಕಾರದ ಲಿಪಿ ಅಲ್ಲಿ ಆಗಲೇ ಬಳಕೆ ಇತ್ತು. ಅದನ್ನು ಅವರು ಬಳಸಿದರು. ಇದೇ ದಮಿಳಿ ಮತ್ತು ಪೊಲಿಂದಿ. ಸಿಂಹಳದಲ್ಲೂ (ಅನುರಾಧಪುರ) ಈ ಲಿಪಿಗಳು ದೊರೆತಿದ್ದು ಇವೆಲ್ಲಾ ಅಶೋಕನಿಗಿಂತ ಹಿಂದಿನವೆಂದೂ



ದೇ.ಕೊಂ.ರೆಡ್ಡಿ



ಪರಿಯಾನ್ ಪಟ್ಟು ಶಾಸನ EI XLII p. 176 ತಿರುನಾಥ ಕುನ್ರು ಶಾಸನ TAS.I

ಲಿಪಿಗಳು ಮುಂದೆ ಭಟ್ಟಿಪ್ರೋಲು ಅಲ್ಲಿಂದ ಮಹಾಸ್ತಾನ್ ಮುಂದೆ ಪಿಪ್ರಾಹ್ವಕ್ಕೆ ಹೋಯಿತೆಂದೂ, ಇದನ್ನೇ ಅಶೋಕ ಬಳಸಿದನೆಂದಿದ್ದಾರೆ. ಆದರೆ ಜೈನರು ದಕ್ಷಿಣಕ್ಕೆ ಬಂದದ್ದು ಅಶೋಕನ ಮೊಮ್ಮಗನ ಕಾಲದಲ್ಲಿ, ಈ ಕಾಲಕ್ಕಾಗಲೇ ಉತ್ತರದಲ್ಲಿ ಮತ್ತು ಕರ್ನಾಟಕದಲ್ಲಿ ಅಶೋಕ ತನ್ನ ಲಿಪಿಗಳನ್ನು ಬರೆಸಿದ್ದ. (ಕರ್ನಾಟಕ ವಿ.ವಿ.ದಲ್ಲಿ ೮.೬.೨೦೦೧ರಂದು ನೀಡಿದ ಉಪನ್ಯಾಸ)

ಈ ಶಾಸನಗಳ ಲಿಪಿಯ ಬಗ್ಗೆ ಹೇಳುವಾಗ ಇವು ಒಂದೇ ಕಾಲದ ಲಿಪಿಯಲ್ಲೂ ಏಕತಾನತೆಯನ್ನು ಕಾಯ್ದುಕೊಂಡಿಲ್ಲ. ಕಾರಣ ಇದನ್ನು ಬೇರೆ ಬೇರೆಯವರು ತಮಗೆ ಸರಿಕಂಡಂತೆ ಬರೆದಿರುವುದು. ಸ್ಥಳೀಯ ವಸ್ತುಗಳಿಂದ, ನುರಿತವರಲ್ಲದವರು ಬರೆದಿರುವ ಶಾಸನಗಳು ಇವಾಗಿವೆ. ಈ ಕಾರಣದಿಂದ ಅಶೋಕನ ಲಿಪಿಯ ಬೆಳವಣಿಗೆಗಿಂತ ಸ್ವಲ್ಪ ವಿಭಿನ್ನ ಬೆಳವಣಿಗೆಯನ್ನು ತೋರಿಸಿವೆ. ಈ ಅಕ್ಷರಗಳಲ್ಲಿ ಕೆಲವು ಭಟ್ಟಿಪ್ರೋಲು ಲಿಪಿಯಲ್ಲಿ ಕಾಣಬರುವುದರಿಂದ ಭಟ್ಟಿಪ್ರೋಲು ಲಿಪಿಯಿಂದ ಉದಿಸಿವೆಯೆಂಬುದು ಕೆಲವರ ವಾದ. ಭಟ್ಟಿಪ್ರೋಲುವಿನಲ್ಲಿ ಬರೆದಿರುವ ಬರೆವಣಿಗೆಯು ಕರಂಡಕದ ಮೇಲೆ ಎಂಬುದನ್ನು ನೆನಪಿಡಬೇಕು. ಇಲ್ಲಿ ಅಕ್ಷರಗಳ ಕೆತ್ತುವಿಕೆಗಿಂತ ಕೊರೆದಿರುವುದು. ಇಂತಹ ಸನ್ನಿವೇಶಗಳಲ್ಲಿ ಅಕ್ಷರಗಳನ್ನು ಮೂಲದಂತೆ ಅನುಸರಿಸುವುದು ಕಷ್ಟ. ಹೀಗಾಗಿ ಉದ್ದ ಉದ್ದವಾಗಿ ಅಕ್ಷರಗಳು ಮೂಡಿವೆ. ಒಂದೇ ಶಾಸನದಲ್ಲಿ ಒಂದೇ ಅಕ್ಷರ ಎರಡು-ಮೂರು ರೀತಿಯಲ್ಲಿ ಬರೆದಿರುವುದು ಈ ಕಾರಣದಿಂದಲೇ.

ತಮಿಳುನಾಡಿನ ಪ್ರಾಚೀನ ಶಾಸನಗಳು ಹಿಂದೆ ಹೇಳಿದಂತೆ ಚಿಕ್ಕ ಶಾಸನಗಳು ಸ್ವಲ್ಪ ಮಟ್ಟಿಗೆ ಅಕ್ಷರ ಕಲಿತ ವ್ಯಕ್ತಿ ಬರೆದಿರುವ ಶಾಸನಗಳು. ಹೀಗಾಗಿ ಅಕ್ಷರಗಳಲ್ಲಿ ಮೇಲೆ ಹೇಳಿದ ದೋಷಗಳು ತುಂಬಿವೆ. ಉರೈಯೂರು ಮತ್ತು ಅಲಗಿರಿಯಲ್ಲಿ ದೊರೆತ ಮಡಕೆಯ ಶಾಸನಲಿಪಿಗಳೂ ಇಂತಹವೇ ಆಗಿವೆ. ದಾನಿಯವರು ಈ ಶಾಸನಗಳ ರಚನೆಯಲ್ಲಿ ಅನನುಭವ (crude) ಕಾಣುತ್ತದೆ ಎಂದಿದ್ದಾರೆ. ಹಾಗೂ ಶಾಸನಗಳ ಕಾಲವನ್ನು ಕ್ರಿ.ಶ.೧ನೆಯ ಶತಮಾನಕ್ಕೆ ಸೇರಿಸುತ್ತಾರೆ.

ಈ ಶಾಸನಗಳ ವಿಶೇಷತೆಯೆಂದರೆ, ಸಾಮಾನ್ಯವಾಗಿ ಬ್ರಾಹ್ಮಿಲಿಪಿಯಲ್ಲಿನ ಪ್ರಾಚೀನ ಶಾಸನಗಳು ಪ್ರಾಕೃತದಲ್ಲಿವೆ, ಸ್ಥಳೀಯ ಭಾಷೆಯಲ್ಲಿಲ್ಲ, ಆದರೆ ತಮಿಳುನಾಡಿನ ಈ ಶಾಸನಗಳು ಬ್ರಾಹ್ಮಿಲಿಪಿ ಬಳಸಿದ್ದರೂ ಸ್ಥಳೀಯ ತಮಿಳು ಭಾಷೆಯಲ್ಲಿವೆ. ಶಾಸನಗಳಲ್ಲಿ ವರ್ಗ ಪ್ರಥಮಾಕ್ಷರಗಳಲ್ಲಿ ಮಾತ್ರ ಬಳಸಿರುತ್ತಾರೆ. ವರ್ಗ ತೃತೀಯಾಗಳೂ ಕಾಣುತ್ತಿಲ್ಲ, ಮಹಾಪ್ರಾಣಾಕ್ಷರಗಳಲ್ಲಿ ಥ ಕಾರ,


ಧ ಕಾರವನ್ನು ಮಾತ್ರ ಬಳಸಲಾಗಿದೆ. ಉಳಿದವುಗಳ ಬಳಕೆ ಕಾಣುತ್ತಿಲ್ಲ. ಶ, ಷ ಗಳ ಬಳಕೆ ಕಾಣುತ್ತಿಲ್ಲ. ಸ ಕಾರವನ್ನು ಅಪರೂಪಕ್ಕೆ ಬಳಸಲಾಗಿದೆ. ಋ ಕಾರ, ಲೃ, ಔ ಕಾರಗಳ ಬಳಕೆ ಇಲ್ಲ. ಈ ಮೇಲಿನ ಶಾಸನಗಳನ್ನು ಬಿಟ್ಟರೆ, ಮುಂದಿನ ಕಾಲದಲ್ಲಿ ರಚಿತವಾದ ಪಲ್ಲವರ ಶಾಸನಗಳು ತಮಿಳುನಾಡಿನಲ್ಲಿ ದೊರೆತರೂ ಅವು ಸಂಸ್ಕೃತದಲ್ಲಿರುತ್ತವೆ. ಹೀಗಾಗಿ ಕ್ರಿ.ಶ.೭ನೆಯ ಶತಮಾನಕ್ಕೆ ಸೇರಿದ ಶಾಸನವೇ ತಮಿಳಿನ ಪ್ರಾಚೀನ ಶಾಸನ. ಜಿಂಜಿ ತಾಲೂಕಿನ ತಿರುನಾಥರ್‌ಕುನ್ರು ಎಂಬಲ್ಲಿ ದೊರೆತಿರುವ ಶಾಸನವು ನಾಲ್ಕು ಸಾಲುಗಳು ೨೯ ಅಕ್ಷರಗಳನ್ನುಳ್ಳ ಚಿಕ್ಕ ಶಾಸನವಾಗಿದೆ. ಇದೂ ಜೈನ ಶಾಸನ. ಚಂದ್ರನಂದಿ ಆಚಾರ್ಯರ ನಿಸಿಧಿಯನ್ನು ಹೇಳುತ್ತದೆ. (SII.XVII.No.262 and plate) ಗೋಪೀನಾಥರಾಯರು ಈ ಶಾಸನಲಿಪಿಯನ್ನು ವಟ್ಟೆಳಿತ್ತಿನಂತಿದೆಯೆಂದು ಹೇಳಿರುತ್ತಾರೆ. ಮಹಾಲಿಂಗಂ ಅವರು ಇದನ್ನು ಕ್ರಿ.ಶ.೪ನೆಯ ಶತಮಾನಕ್ಕೆ ಸೇರಿದುದೆಂದು ಹೇಳಿರುತ್ತಾರೆ. ಇತ್ತೀಚೆಗೆ ದೊರೆತಿರುವ ಪರಿಯನ್‌ಪಟ್ಟಿ ಶಾಸನವು ಇದಕ್ಕಿಂತ ಪ್ರಾಚೀನವೆಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸಿರುತ್ತಾರೆ. ಇಲ್ಲಿಂದ ಮುಂದೆ ವೇಲ್ವಕುಡಿ, ತಿರುಪ್ಪರಕುನ್ರಂ ಶಾಸನಗಳು ಪಾಂಡ್ಯರಾಜ ಪರಾಂತಕ ನೆಡುಂಜಡೈಯನ ಕಾಲದವು (ಕ್ರಿ.ಶ.೮ನೆಯ ಶತಮಾನ). ಅನೇಕ ಚಿಕ್ಕ ಶಾಸನಗಳು ಹೆಸರನ್ನು ಹೊಂದಿದ್ದು, ಇವುಗಳ ಭಾಷೆಯ ಬಗ್ಗೆ ಹೇಳುವುದು ಕಷ್ಟ. ಅನೇಕ ಹೆಸರುಗಳು ಸಂಸ್ಕೃತದ ತದ್ಭವಗಳಾಗಿದೆ. ಇವನ್ನು ಅಕ್ಷರಗಳ ಆಧಾರದಿಂದ ಕ್ರಿ.ಶ.೭ನೆಯ ಶತಮಾನಕ್ಕೆ ಸೇರಿಸಬಹುದಾಗಿದೆ.

ಒಟ್ಟಿನಲ್ಲಿ ಗ್ರಂಥಲಿಪಿಯು ಕ್ರಿ.ಶ.೬ ನೆಯ ಶತಮಾನದಿಂದ ತಿರುಚಿರಪಳ್ಳಿಯಲ್ಲಿ ಕಾಣಬರುತ್ತದೆ. ತಮಿಳು ಲಿಪಿಯೂ ಸಹ ತಿರುಚಿರಪಳ್ಳಿಯಲ್ಲಿ ಬೇರೆ ಬೇರೆ ಕಡೆ ದೊರೆತಿದ್ದು, ಇವನ್ನು ಕ್ರಿ.ಶ.೬ನೆಯ ಶತಮಾನಕ್ಕೆ ಸೇರಿಸಬಹುದು. ವಟ್ಟೆಳತ್ತು ಕ್ರಿ.ಶ.೪ನೆಯ ಶತಮಾನದಲ್ಲಿ ದೊರೆತು (ತಿರುನಾಥರ್‌ಕುನ್ರು) ಮುಂದೆ ೭ನೆಯ ಶತಮಾನದಲ್ಲಿ ತಿರುಚಿರಪಳ್ಳಿಯಲ್ಲಿ ದೊರೆತಿವೆ. ತಿರುನಾಥಕುನ್ರು ಶಾಸನದಲ್ಲಿ ಐ ಕಾರವನ್ನು ಬಳಸಲಾಗಿದೆ. ಪ ಕಾರವು ಆಯತಾಕಾರಕ್ಕೆ ತಿರುಗಿದೆ. ತ ಕಾರದ ತಳಭಾಗವು ಪೂರ್ಣವಾಗಿ ಅರ್ಧವೃತ್ತಾಕಾರವನ್ನು ಹೊಂದಿದೆ. ಟ ಕಾರವು ಇಂದಿನ ತಮಿಳು ಟ ಕಾರದ ರೂಪಕ್ಕೆ ಹತ್ತಿರವಾಗಿದೆ. ಚ ಕಾರದ ಮುಂಭಾಗವು ತ್ರಿಕೋನಾಕಾರದಲ್ಲಿದೆ. ನ ಕಾರವು ಮಾತ್ರ ಬೇರೆ ರೀತಿಯ ಬೆಳವಣಿಗೆ ಪಡೆದಿದೆ. ಙ ಕಾರವು ಮೇಲಿನಿಂದ ಬಂದ ಗೆರೆಯು ಎಡಕ್ಕೆ ಅರೆವೃತ್ತಾಕಾರವಾಗಿ ತಿರುಗಿದೆ. 'ಕ, ರ, ಅ' ಗಳ ಗೆರೆಗಳು ಕೆಳಕ್ಕೆ ಬೆಳೆದಿವೆ. ಆದರೆ ಬಾಗಿಲ್ಲ.

ವಟ್ಟೆಳುತ್ತು

ಈ ಲಿಪಿಯನ್ನು ತೆಕ್ಕನ್ ಮಲೆಯಾಳಂ ಮತ್ತು ನಾನಾಮೋನ ಎಂದು ಕರೆಯುತ್ತಾರೆ. ಇದನ್ನು ಪಾಂಡ್ಯದೇಶ, ಕೊಂಗುದೇಶದ ಕೆಲವು ಭಾಗಗಳು, ಕೇರಳದ ಕೆಲವು ಭಾಗಗಳಲ್ಲಿ ಬಳಸಿರುತ್ತಾರೆ. ಇತರೆಡೆಗಳಲ್ಲಿಯೂ ಅಪರೂಪಕ್ಕೆ ಬಳಸಿರುತ್ತಾರೆ.

ವಟ್ಟೆಳುತ್ತಿನ ಮೂಲವನ್ನು ಹರಪ್ರಸಾದ ಶಾಸ್ತ್ರಿಯವರು ಖರೋಷ್ಠಿಯಿಂದಲೂ, ಬರ್ನೆಲ್ ಅವರು ಫೊನೇಷಿಯಾದಿಂದಲೂ, ಬೂಹ್ಲರ್ ಬ್ರಾಹ್ಮಿಯಿಂದ ನಿಷ್ಪನ್ನವಾಗಿರಬೇಕೆಂದು ಅಭಿಪ್ರಾಯಪಡುತ್ತಾರೆ. ಆದರೆ ಬೂಹ್ಲರ್ ಅವರನ್ನು ಬಿಟ್ಟರೆ ಉಳಿದಿಬ್ಬರು ಸ್ಪಷ್ಟವಾದ ಆಧಾರ ನೀಡುವುದಿಲ್ಲ. ಬೂಹ್ಲರ್ ಅವರು ಇದು ಮೋಡಿಯ ರೀತಿಯ ಬರವಣಿಗೆಯೆಂದೂ ತಮಿಳಿನೊಂದಿಗೆ




ವಟ್ಟೆಳುತ್ತು ವರ್ಣಮಾಲೆ ದೇ.ಕೊ. ರೆಡ್ಡಿ

ಸಂಬಂಧ ಹೊಂದಿದ್ದರೂ ಕಾರಕೂನರು, ವ್ಯಾಪಾರಿಗಳು ಬಳಸುತ್ತಿರಬೇಕು ಎಂದಿರುತ್ತಾರೆ. ಶಿವರಾಮಮೂರ್ತಿಯವರು 'ಬ್ರಾಹ್ಮಿಯ ಅಂಕುಡೊಂಕು ರೂಪಗಳೇ ವಟ್ಟೆಳುತ್ತು' ಎಂದಿರುತ್ತಾರೆ. ಕಾಲ್ಡ್‌ವೆಲ್ ಬ್ರಾಹ್ಮಿಯಿಂದ ಉದಿಸಿರುವುದೆಂಬ ಅಭಿಪ್ರಾಯಪಡುತ್ತಾರೆ. ಈ ಲಿಪಿಗೆ ವಟ್ಟೆಳತ್ತು ಎಂದು ಹೆಸರು ಬರಲು ಈ ಅಕ್ಷರಗಳು ವೃತ್ತಾಕಾರವಾಗಿರುವುದು ಕಾರಣವಿರಬಹುದು. ಇದಕ್ಕೆ ವಟ್ಟೆಳುತ್ತು ಅಥವಾ 'ವಟ್ಟಂ' ಎಂಬ ಹೆಸರಿನ ಉಲ್ಲೇಖ ಪರಾಕ್ರಮಪಾಂಡ್ಯನ ಕಾಲದ ಕುಟ್ರಾಲಂ (ಕುಟ್ರಾಲಂ)ನ ಕುಟ್ರಾಲನಾಥಸ್ವಾಮಿ ದೇವಾಲಯದ ಶಾಸನದಲ್ಲಿ ಉಲ್ಲೇಖವಾಗಿದೆ. ದೇವಾಲಯವನ್ನು ಜೀರ್ಣೋದ್ಧಾರ ಮಾಡುವಾಗ ದೇವಾಲಯದ ಗೋಡೆಗಳಲ್ಲಿನ ಶಾಸನಗಳನ್ನು ಹಾಗೆಯೇ ಪ್ರತಿಮಾಡಬೇಕೆಂದು ಚೋಳರಾಜನು ತಿಳಿಸಿದನಂತೆ. 'ಶಾಸನಗಳು ವಟ್ಟಂನಲ್ಲಿದ್ದು ತಮಿಳು ಲಿಪಿಗೆ ಪ್ರತಿ ಮಾಡಲಾಗಿದೆ' ಎಂದಿದೆ.

ಎಂ.ಜೆ.ನಾರಾಯಣನ್‌ರವರ ಪ್ರಕಾರ ಈ ವಟ್ಟೆಳುತ್ತು ಎಂಬ ಪದವು ವಡಮುಳಿ ಎಂದರೆ ವಡುಗ = ಉತ್ತರ – ವಡಎಳುತ್ತು (ವಟ್ಟೆಳುತ್ತು) ಉತ್ತರದ ಲಿಪಿ ಅಂದರೆ ಅಶೋಕನ ಬ್ರಾಹ್ಮಿಲಿಪಿಯಿಂದ ನಿಷ್ಪನ್ನವಾಗಿದೆ. ವಟ್ಟೆಳುತ್ತು ಶಾಸನಗಳ ಮಧ್ಯೆ ಸಂಸ್ಕೃತ ಪದಗಳು ಬಂದಾಗ ಮತ್ತು ರಾಜನ ಹೆಸರುಗಳನ್ನು ಬರೆಯುವಾಗ ಗ್ರಂಥಲಿಪಿಯನ್ನು ಬಳಸಲಾಗಿದೆ. ಚೇರ ದೇಶದ ಭಾಷೆಯಲ್ಲಿ ಸಂಸ್ಕೃತ ಪದಗಳು ಹೆಚ್ಚಾದಂತೆ ಈ ಲಿಪಿಯ ಬಳಕೆ ಕಡಿಮೆಯಾಗುತ್ತಾ ಬಂದಾಗ ವಟ್ಟೆಳುತ್ತು ಲಿಪಿಯನ್ನು ಕೈಬಿಡುತ್ತಾ ಬಂದರು. ಅದರ ಸ್ಥಾನದಲ್ಲಿ ಗ್ರಂಥಲಿಪಿಯನ್ನು ಬಳಸಿದರು. ಆದರೆ ಸಂಸ್ಕೃತ ಪದಗಳು ಕಡಿಮೆ ಇರುವ ಸಿರಿಯನ್ ಕ್ರೈಸ್ತರು, ಮಾಪ್ಲ ಮುಸಲ್ಮಾನರು, ಇತರರು ೧೯ನೆಯ ಶತಮಾನದ ವರೆಗೆ ಇದನ್ನೇ ಬಳಸಿರುತ್ತಾರೆ. (ಆ.ಓ.೨೦೦೧ರ ಉಪನ್ಯಾಸ)

ವಟ್ಟೆಳುತ್ತು ತಮಿಳಿಗಿಂತ ಭಿನ್ನವಾಗಿದ್ದು ಎರಡೂ ಲಿಪಿಗಳು ಬ್ರಾಹ್ಮಿಯಿಂದ ಪ್ರತ್ಯೇಕವಾಗಿ ವಿಕಸನಹೊಂದಿವೆ. ಮಲೆನಾಡಿನಲ್ಲಿ ಇದರ ಬಳಕೆ ಹೆಚ್ಚಿದ್ದುದರಿಂದ ಇದರ ವಿಕಸನ ಅಲ್ಲಿಯೇ ಆಗಿರಬೇಕೆಂಬ ಅಭಿಪ್ರಾಯ ಪಡುತ್ತಾರೆ. (South Indian Temple Inscriptions). ವಟ್ಟೆಳುತ್ತಿನ




ವಟ್ಟೆಳುತ್ತು ಶಾಸನ ಸಿ. ಪಿ.ಮೂರ್ತಿ

ಲಿಪಿಗೂ ಗ್ರಂಥಲಿಪಿಗೂ ಕೆಲವು ವ್ಯತ್ಯಾಸಗಳಿವೆ. ವಟ್ಟೆಳತ್ತು ಲಿಪಿಯನ್ನು ಓದುವಾಗ ಕೆಲವು ತೊಡಕುಗಳಿವೆ. ವಟ್ಟೆಳುತ್ತು ಶಾಸನಗಳಲ್ಲಿ ತೇದಿಯನ್ನೊಳಗೊಂಡ ಶಾಸನಗಳು ಕಡಿಮೆ. ಕಾಗುಣಿತಗಳನ್ನು ಬಳಸುವಲ್ಲಿ ಹಾಗೂ ಹೊಸ ಚಿಹ್ನೆಗಳನ್ನು ಸೇರ್ಪಡಿಸುವಲ್ಲಿ ವಿಭಿನ್ನ ರೀತಿಗಳನ್ನು ಬಳಸಿರುತ್ತಾರೆ. ಏಕತಾನತೆ ಇಲ್ಲ. ಈ ಲಿಪಿಯು ಹೆಚ್ಚಾಗಿ ಪಾಂಡ್ಯದೇಶದಲ್ಲಿತ್ತು. ಪಾಂಡ್ಯದೇಶವನ್ನು ಚೋಳರು ಗೆದ್ದ ಮೇಲೆ ಈ ವಟ್ಟೆಳುತ್ತು ಲಿಪಿಯ ಬಳಕೆ ಕಡಿಮೆಯಾಯಿತು. ಇದರ ಸ್ಥಾನದಲ್ಲಿ ಗ್ರಂಥಲಿಪಿಯ ತಮಿಳು ಲಿಪಿಯನ್ನು ಬಳಸಲಾಯಿತು. ಒಂದೇ ಪ್ರಾಂತ್ಯದಲ್ಲಿ ಎರಡೂ ಲಿಪಿಗಳನ್ನು ಬಳಸಿರುವುದುಂಟು. ತಮಿಳು ಭಾಷೆಯನ್ನು ಬರೆಯಲು ಈ ಎರಡೂ ಲಿಪಿಗಳನ್ನು ಬಳಸಿರುತ್ತಾರೆ. ಆದರೂ ಒಂದೇ ಭಾಷೆಗೆ ಎರಡು ಲಿಪಿಗಳ ಅವಶ್ಯಕತೆ ಏಕೆಂಬುದು ವಿದ್ವಾಂಸರ ಅಭಿಪ್ರಾಯ. ಕರ್ನಾಟಕದಲ್ಲಿ ಚಿತ್ರದುರ್ಗ ಜಿಲ್ಲೆಯ ತಮಟಕಲ್ಲಿನಲ್ಲಿ ಕ್ರಿ.ಶ.೬ನೆಯ ಶತಮಾನಕ್ಕೆ ಸೇರಬಹುದಾದ ವಟ್ಟಳುತ್ತಿನ ಶಾಸನ ದೊರೆತಿದೆ. ಈಗ ಈ ಲಿಪಿಯು ಬಳಕೆಯಲ್ಲಿಲ್ಲ. ಈ ವಟ್ಟೆಳುತ್ತನ್ನು ಕೇರಳದಲ್ಲಿ ಮಲೆಯಾಳಂಗೆ ಕೆಲವು ಕಾಲ ಬಳಸಿದರೂ, ಮುಂದೆ 'ಆರ್ಯ ಎಳುತ್ತು' ಅಥವಾ ಗ್ರಂಥಲಿಪಿಯು ಇದನ್ನು ಬದಲಿಸಿತು.

ಗ್ರಂಥಲಿಪಿ

ದಕ್ಷಿಣ ಭಾರತದ ಬ್ರಾಹ್ಮಣರೊಂದಿಗೆ ಈ ಲಿಪಿಯು ನಿಕಟ ಸಂಬಂಧವನ್ನು ಹೊಂದಿದೆಯೆಂಬ ಅಭಿಪ್ರಾಯವನ್ನು ವೇಲುಪಿಳ್ಳೆಯವರು ವ್ಯಕ್ತಪಡಿಸಿದ್ದಾರೆ. ಕ್ರಿ.ಶ.ಏಳನೆಯ ಶತಮಾನದಲ್ಲಿ ಸಂಸ್ಕೃತದ ಹೆಸರನ್ನು ಹೊಂದಿದ್ದ ಹೆಸರುಳ್ಳ ಬ್ರಾಹ್ಮಣರು ತಮಿಳುನಾಡಿನ ಅನೇಕ ಕಡೆ ನೆಲೆಸಿದ್ದರು. ಇವರು ಪ್ರಾಚೀನ ತಮಿಳು ಪ್ರಾಂತ್ಯದಲ್ಲಿ ವಟ್ಟಂಲಿಪಿಯನ್ನು ಮತ್ತು ಗ್ರಂಥಲಿಪಿಯನ್ನು ಬರೆಯಲು ಬಳಸಿರಬೇಕು. ಇದೇ ಗ್ರಂಥ–ತಮಿಳು ಲಿಪಿಗೆ ಮೂಲವಾಗಿರಬೇಕು ಎಂದು ಅಭಿಪ್ರಾಯ ಪಡುತ್ತಾರೆ (Velupille p.19). ಆದರೆ ಕ್ರಿ.ಶ.ಏಳನೆಯ ಶತಮಾನದಿಂದ ಸಂಸ್ಕೃತ ಶಾಸನಗಳಿಗೆ ಪಲ್ಲವರ ಆಳ್ವಿಕೆಯ ಪ್ರದೇಶದಲ್ಲಿ ಬಳಸಿದ ಲಿಪಿಯೇ ಗ್ರಂಥಲಿಪಿ. ಪಲ್ಲವರ ಆರಂಭದ ಶಾಸನಗಳು ಸಂಸ್ಕೃತದಲ್ಲಿದ್ದುದರಿಂದ ಇದೇ ಲಿಪಿ ಅವರ ಕಾಲದ ಲಿಪಿಯಾಯಿತು. ಇದು ಅಶೋಕನ ಬ್ರಾಹ್ಮಿಯಿಂದಲೇ ನಿಷ್ಪನ್ನವಾದ ಲಿಪಿ. ಮೌರ್ಯ –> ಶಾತವಾಹನ –> ಇಕ್ಷ್ವಾಕು –> ಕರ್ನಾಟಕದ ಗಂಗಮನೆತನಗಳ ಮೂಲಕ ಪಲ್ಲವರಿಗೆ ಬಂದ ಲಿಪಿ. ಪಲ್ಲವರು ಆಂಧ್ರ, ಕರ್ನಾಟಕದ ಪ್ರದೇಶಗಳನ್ನು ಬಿಟ್ಟು ಕಂಚಿಯಲ್ಲಿ ಗಟ್ಟಿಯಾಗಿ ನಿಂತ ಮೇಲೆ ಗಂಗ ಮತ್ತು ಇಕ್ಷ್ವಾಕುಗಳ ಲಿಪಿಯನ್ನು ಮುಂದುವರಿಸುತ್ತಾರೆ. ವಿಳವತ್ತಿ ಶಾಸನದಲ್ಲಿ ಈ ಮಾದರಿ ಲಿಪಿಗಳನ್ನು ಕಾಣಬಹುದು.




ವಿಳವತ್ತಿ ತಾಮ್ರಪಟ EPIGRAPHIA INDIA

ಕ್ರಿ.ಶ.ಏಳನೆಯ ಶತಮಾನದ ಪಲ್ಲವರ ಲಿಪಿಯು ಕನ್ನಡ ಲಿಪಿಗೆ ಲಕ್ಷಣಗಳಲ್ಲಿ ಹತ್ತಿರವಾಗಿದೆ. ಇದೇ ಮಾದರಿಯ ಲಿಪಿಗಳು ವೆಂಗಿಪ್ರದೇಶದಲ್ಲಿಯೂ ದೊರೆಯುತ್ತವೆ.


ಗ್ರಂಥಲಿಪಿಯ ಬೆಳವಣಿಗೆಯನ್ನು ಪ್ರಾಚೀನ, ಚೋಳರ ಕಾಲ, ಮತ್ತು ನಂತರದ ಕಾಲದ್ದೆಂಬ ಮೂರು ಹಂತಗಳಲ್ಲಿ ಗುರುತಿಸುತ್ತಾರೆ.

ಪಲ್ಲವರ ಲಿಪಿಗಳು ಇದ್ದಕ್ಕಿದ್ದಂತೆ ಸುಂದರವಾಗಲು ಉತ್ತರದವರ ಕೊಡುಗೆ ಕಾರಣವಿರಬಹುದು. ಇದಕ್ಕೆ ಕಾರಣ ಕದಂಬರ ಪೆಟ್ಟಿಗೆಯಾಕಾರದ ಲಿಪಿಗೆ ವಾಕಟಕರ ಒಡನಾಟ ಕಾರಣವಿದ್ದಂತೆ, ಪಲ್ಲವ ಗ್ರಂಥಲಿಪಿಗೂ ಉತ್ತರದವರ ಒಡನಾಟ ಕಾರಣವಾಗಿದೆ. ಇದಕ್ಕೆ ಆಧಾರವಾಗಿ ಸಾಲುವನಕುಪ್ಪಂ ಶಾಸನವು ಅಲಂಕೃತವಾದ ಉತ್ತರ ಲಿಪಿಯಲ್ಲಿರುವುದು. ಈ ಕಾಲಕ್ಕೆ ಕಂಚಿಗೆ (ಸಿಂಹವಿಷ್ಣುವಿನ ಕಾಲಕ್ಕೆ) ಚಲುಕ್ಯ ವಿಷ್ಣುವರ್ಧನನ ಆಸ್ಥಾನದಿಂದ ಭಾರವಿಯ ಗೆಳೆಯ ದಾಮೋದರನು ದಕ್ಷಿಣದ ತೀರ್ಥಯಾತ್ರೆಗೆಂದು ಬಂದಿದ್ದ. ಸಹಜವಾಗಿ ಜೊತೆಯಲ್ಲಿ ಇನ್ನೂ ಕೆಲವರು ಉತ್ತರದಿಂದ ಬಂದಿರಬೇಕು. ಹೀಗಾಗಿ ಮಹೇಂದ್ರವರ್ಮನ ಕಾಲದ ರಾಜಶಾಸನಗಳಲ್ಲಿ ಈ ಲಿಪಿ ಕಾಣಬರುತ್ತದೆ. ಮುಂದೆ ಎಲ್ಲಾ ಕಡೆಗೂ ಈ ಲಿಪಿ ಹಬ್ಬುತ್ತದೆ. ಸಾಮಾನ್ಯರ ಲಿಪಿಯನ್ನು ಮೂಲೆಗೆ ತಳ್ಳುತ್ತದೆ. ದಾನಿಯವರು ಪಲ್ಲವರ ಈ ಲಿಪಿಗೆ ಕನ್ನಡ ಲಿಪಿ ಮೂಲವೆಂದಿರುತ್ತಾರೆ (ಪು.೨೦೨). ಪಲ್ಲವ ಸಿಂಹವಿಷ್ಣುವಿನ ತಾಯಿ ಅವನೀತನ ಸೋದರಿ. ಹೀಗಾಗಿ ವಿವಾಹ ಸಂಬಂಧ ಮುಂತಾದವುಗಳ ಮೂಲಕ ಪಲ್ಲವರಿಗೂ, ಗಂಗರಿಗೂ ನಿಕಟ ಸಂಬಂಧವಿತ್ತು. ಆದ್ದರಿಂದ ದಾನಿಯವರ ಹೇಳಿಕೆಯನ್ನು ಈ ಕಾರಣದಿಂದ ಒಪ್ಪಬಹುದಾಗಿದೆ.



EI XVII p.12 ಮಹೇಂದ್ರ ವರ್ಮನ ಮಂದಗಪಟ್ಟು ಶಾಸನ ದೇ.ಕೊಂ.ರೆಡ್ಡಿ


ಪ್ರಾಚೀನ ಲಿಪಿಗಳು ಅಲಂಕೃತವಾದ ಶಾಸನಗಳಲ್ಲಿ ಬಳಕೆಯಾಗಿದೆ. ಮಹೇಂದ್ರವರ್ಮನ ಕಾಲದ ಮಂದಗಪಟ್ಟು ಶಾಸನದಲ್ಲಿ ಸಾಮಾನ್ಯ (E.I.XVIII) ಬಳಕೆಯಾಗಿದ್ದರೆ, ತಿರುಚಿರಪಳ್ಳಿ (SII Vol.I and II Plate) ಮತ್ತು ಧರ್ಮರಾಜರಥಗಳಲ್ಲಿ ಬಳುಕು ರೇಖೆಗಳ ಸುಂದರ ಲಿಪಿಗಳನ್ನು ಕಾಣಬಹುದು. ಮೇಲ್ನೋಟಕ್ಕೆ ಕನ್ನಡ ಅಕ್ಷರಗಳಂತೆ ಇದ್ದರೂ ಕೆಲವು ವೈಶಿಷ್ಟ್ಯಗಳನ್ನು ಹೊಂದಿವೆ. ಠ ಕಾರದ ಒಳಗಿನ ಚುಕ್ಕೆಯು ಗ್ರಂಥಲಿಪಿಯಲ್ಲಿ ಬಾಗುರೇಖೆ ರೂಪದಲ್ಲಿವೆ.




EI X p.12 ಮಹಾಬಲಿಪುರಂ ಶಾಸನ ದೇ.ಕೊಂ.ರೆಡ್ಡಿ

ರಾಜಸಿಂಹನ ಕಾಲದ ಶಾಸನಗಳಲ್ಲಿ ಈ ಅಲಂಕಾರಿಕ ಲಿಪಿಯು ಕಾಣಬರುವುದಿಲ್ಲ. ಅಡ್ಡಗೆರೆಗಳುಳ್ಳ ಅ, ಆ, ಕ, ರ ಮತ್ತು ಉ ಅಕ್ಷರಗಳ ಗೆರೆಗಳು ಹೆಚ್ಚಿದವು. ತಳಗಡೆಯ ಸುರಳಿಗೆರೆ ಎಡಕ್ಕೆ ತಿರುಗಿ ಮೇಲೆ ಹೋಗಿದೆ. ಎ ಮತ್ತು ಥ ಗಳು ಸ್ವಲ್ಪ ಬಾಯಿ ಬಿಟ್ಟಿವೆ. ಆ, ಐ, ಓ, ಔ ಕಾಗುಣಿತಗಳು ವ್ಯಂಜನಗಳಿಂತ ಪ್ರತ್ಯೇಕವಾಗಿದೆ. 'ಆ' ಸ್ವರದ ಕಾಗುಣಿತ ಬಲಗಡೆ ವಕ್ರವಾಗಿ ತಿರುಗಿ ಇಳಿದಿದೆ. 'ಈ' ಕಾಗುಣಿತ ಅರ್ಧವೃತ್ತಾಕಾರಕ್ಕೆ ತಿರುಗಿ ಎಡತುದಿಯಲ್ಲಿ ಸುರುಳಿಯಾಕಾರವನ್ನು ಪಡೆದಿದೆ. ಕ್ರಿ.ಶ.೧೦ನೆಯ ಶತಮಾನಕ್ಕೆ ಅಂದರೆ ಪಲ್ಲವರ ಅಂತ್ಯಕಾಲಕ್ಕೆ ಅಂದರೆ ಈ ಲಿಪಿ ಒಂದು ನಿಶ್ಚಿತ ಹಂತ ತಲುಪಿತ್ತು.


ಕ್ರಿ.ಶ.೧೧ನೆಯ ಶತಮಾನದಲ್ಲಿ ಗ್ರಂಥ, ತಮಿಳು ಮತ್ತು ವಟ್ಟಂಲಿಪಿಗಳು ಒಂದರೊಡನೊಂದು ಸಂಬಂಧ ಹೊಂದಿದ್ದವು. ಪಲ್ಲವ, ಚೋಳ ಮತ್ತು ಚೇರರ ಮಧ್ಯೆ ಯುದ್ಧಗಳು ನಡೆಯುತ್ತಿದ್ದು, ರಾಜಕೀಯ ಪ್ರಾಂತ್ಯಗಳ ಗಡಿಗಳು ವ್ಯತ್ಯಾಸವಾಗುತ್ತಿದ್ದವು. ಇಂತಹ




ಪರಮೇಶ್ವರವರ್ಮನ ಶಾಸನ TAS I




ನಂದಿವರ್ಮ ಪಲ್ಲವಮಲ್ಲನ ಶಾಸನ EI XVII p. 56



ಒಂದನೆ ರಾಜರಾಜ ಚೋಳ, ತಂಜಾವೂರು TAS I




ಜಟಾವರ್ಮ ಸುಂದರಪಾಂಡ್ಯ, ಶ್ರೀರಂಗ TAS I




ಅಲಂಪೂಂಡಿ ಶಾಸನ EI III p. 228

ಗ್ರಂಥ ಲಿಪಿ ಪಟ್ಟಿಕೆ



1. ಮಂಡಗಪಟ್ಟು ಇತರೆ, 2.ತಿರುಚಿನಪಳ್ಳಿ, 3. ಮಹಾಬಲಿಪುರ, 4. ಕಂಚಿ, 5. ಕೂರಂ, 6. ಕಾಸಕ್ಕುಡಿ 7. ತಂಡಂತ್ತೋಟ್ಟಂ 8. ವೆಳ್ಳಿಕ್ಕುಡಿ, 8. ಮದ್ರಾಸ್ ಮ್ಯೂಸಿಯಂ, 10 ಅನ್ಬಿಲ್, 11. ಸಿನ್ನಮನೂರ್, 12. ಕಂಚಿ 13 ತಿರುವಳಂ ಗೋಡು 14. ಸೆಲ್ಲಿಮೇಡು 15 ಶ್ರೀರಂಗ 16 ದಳವಾಯಿ ಅಗ್ರಹಾರ



ಕೃಪೆ : ಸುಬ್ರಮಣ್ಯಂ

ಸಂದರ್ಭದಲ್ಲಿ ಎರಡೂ ಲಿಪಿಗಳು ಬಳಕೆಯಾಗುತ್ತಿದ್ದವು. ಕ್ರಿ.ಶ.೧೧ನೆಯ ಶತಮಾನದ ಹೊತ್ತಿಗೆ ಚೋಳರು ಇಡೀ ತಮಿಳುನಾಡನ್ನು ತಮ್ಮ ವಶಕ್ಕೆ ಪಡೆಯುತ್ತಾರೆ. ಬಹುಕಾಲ ಇವರು ಪಲ್ಲವರ ಮಾಂಡಳೀಕರಾಗಿದ್ದುದರಿಂದ ಪಲ್ಲವರು ಬಳಸುತ್ತಿದ್ದ ಲಿಪಿಯನ್ನೇ ತಾವೂ ಬಳಸುತ್ತಾರೆ. ಹೀಗಾಗಿ ಚೋಳರ ಪ್ರಭಾವದಿಂದ ಗ್ರಂಥ–ತಮಿಳು ಲಿಪಿಯು ಅವರ ಆಳ್ವಿಕೆಯ ಪ್ರದೇಶದಲ್ಲೆಲ್ಲಾ ಹರಡಿತು. ಚೋಳರು ವಟ್ಟಂಲಿಪಿಯ ಬಳಕೆಯನ್ನು ನಿಲ್ಲಿಸಿ ಅದರ ಸ್ಥಾನದಲ್ಲಿ ತಮ್ಮ ಪ್ರಾಂತ್ಯದಲ್ಲಿ ಬಳಸುತ್ತಿದ್ದ ಗ್ರಂಥ–ತಮಿಳು ಲಿಪಿಯನ್ನೇ ಬಳಸುತ್ತಾರೆ. ತಮಿಳುನಾಡಿನ ಗಡಿಯಾದ ಕೇರಳದಲ್ಲಿ ಪ್ರಾಕೃತಿಕ ಸನ್ನಿವೇಶದ ಕಾರಣವಾಗಿ ವಟ್ಟಂಲಿಪಿ ಅಲ್ಲಿ ಮುಂದುವರಿಯುತ್ತದೆ. ತಮಿಳು ಲಿಪಿಯ ವಿಕಾಸವು ತಮಿಳು ಭಾಷೆಯ ವಿಕಾಸದಂತೆ ಬಹು ನಿಧಾನವಾಗಿ ಬೆಳೆದಿದೆಯೆಂದು ವೇಲುಪಿಳ್ಳೈಯವರು ಅಭಿಪ್ರಾಯ ಪಡುತ್ತಾರೆ.

ಮುಂದೆ ಈ ಗ್ರಂಥಲಿಪಿಯ ಕೆಲವು ಶಾಸನಗಳು ಚೋಳರ ವಶವಾದ ಶ್ರೀಲಂಕಾ, ಕರ್ನಾಟಕ ಮತ್ತು ಆಂಧ್ರದಲ್ಲಿ ಕಾಣಿಸಿಕೊಂಡಿವೆ. ಬರ್ಮಾದಲ್ಲಿ ಗ್ರಂಥ ಅಕ್ಷರಗಳನ್ನು ಬಳಸಿದ ಎರಡು ಶಾಸನಗಳು ದೊರೆಯುತ್ತವೆ.

ಗ್ರಂಥ ಲಿಪಿಯ ಅವನತಿ

ಚೋಳರ ನಂತರ ತಮಿಳುನಾಡನ್ನಾಳಿದ ಹೊಯ್ಸಳರು ಗ್ರಂಥಲಿಪಿಯನ್ನು ಶಾಸನಗಳಲ್ಲಿ ಬಳಸಿರುತ್ತಾರೆ. ಮುಂದೆ ವಿಜಯನಗರದ ಅರಸರ ಕಾಲದಲ್ಲಿ ತಾಮ್ರಶಾಸನಗಳನ್ನು ನಾಗರಿಲಿಪಿಯಲ್ಲಿ ಬರೆಯತೊಡಗುತ್ತಾರೆ. ವಿಜಯನಗರ ಪತನಾನಂತರ ಬಂದ ಪಾಳೆಯಗಾರರು, ಮರಾಠರು ತಾಮ್ರಶಾಸನಗಳನ್ನು ನಾಗರಿಲಿಪಿಯಲ್ಲಿಯೇ ಬರೆದರು. ಹೀಗಾಗಿ ಶಾಸನಗಳಲ್ಲಿ ಗ್ರಂಥಲಿಪಿಯ ಬಳಕೆ ಕಡಿಮೆಯಾಯಿತು. ಕೇವಲ ಹಸ್ತಪ್ರತಿಗಳಿಗೆ ಮಾತ್ರ ಈ ಲಿಪಿ ಸೀಮಿತವಾಯಿತು. ಹಸ್ತಪ್ರತಿಗಳಲ್ಲಿ ರಾಮಾಯಣ, ಮಹಾಭಾರತದಂತಹ ಕೃತಿಗಳಿಗಷ್ಟೇ ಸೀಮಿತವಾಯಿತು. ಮುಂದೆ ಕ್ರಮಕ್ರಮವಾಗಿ ಶಾಸನಗಳು ಹಾಗೂ ಹಸ್ತಪ್ರತಿಗಳಲ್ಲಿ ತಮಿಳುಲಿಪಿ ತನ್ನ ಸ್ಥಾನವನ್ನು ಭದ್ರಪಡಿಸುತ್ತಾ ಬಂತು.

ತಮಿಳು ಲಿಪಿ

ಬೌದ್ಧಗ್ರಂಥದಲ್ಲಿ ಉಲ್ಲೇಖವಾಗಿರುವ ಲಿಪಿಗಳ ಪಟ್ಟಿಯಲ್ಲಿ 'ದಮಿಳಿ'ಯ ಉಲ್ಲೇಖವಿದ್ದರೂ, ತಮಿಳು ಲಿಪಿಯು ಬ್ರಾಹ್ಮಿಯಿಂದ ನಿಷ್ಪನ್ನವಾಗಿ ಬಳಕೆಯಾಗಿರುವುದು ಕ್ರಿ.ಶ.ಏಳನೆಯ ಶತಮಾನದಿಂದೀಚೆಗೆ. ಗವಿಗಳಲ್ಲಿ, ಬೆಟ್ಟಗಳ ಇಳಿಜಾರಿನಲ್ಲಿ ದೊರೆತಿರುವ ಕ್ರಿ.ಪೂ.೧ನೆಯ ಶತಮಾನದ ಅಕ್ಷರಗಳಿಂದ ಮತ್ತು ಪಲ್ಲವರ ಗ್ರಂಥಲಿಪಿಯಿಂದ ಇದು ಉದಿಸಿದೆ. ಇದನ್ನು ಗ್ರಂಥ-ತಮಿಳು ಎಂಬಂತೆಯೂ ಗುರುತಿಸುತ್ತಾರೆ. ಈ ಲಿಪಿಯ ಬೆಳವಣಿಗೆಯನ್ನು ವಿದ್ವಾಂಸರು ಮೂರು ಗುಂಪುಗಳಾಗಿ ವಿಂಗಡಿಸುತ್ತಾರೆ.

೧. ಪ್ರಾಚೀನ ಲಿಪಿ : ಕ್ರಿ.ಶ.೯೦೦ರ ವರೆಗೆ ತಮಿಳಿನ ಪ್ರಾಚೀನ ರೂಪ


೨. ಮಧ್ಯಕಾಲೀನ ಲಿಪಿ (ಚೋಳರ ಕಾಲ) : ಕ್ರಿ.ಶ.೯೦೦ರಿಂದ ೧೨೫೦

೩. ಆಧುನಿಕ : ಕ್ರಿ.ಶ.೧೨೫೦ರಿಂದೀಚೆಗೆ


ತಮಿಳಿನ ವಿಶೇಷತೆಯಾದ ವ್ಯಂಜನಗಳನ್ನು ಗುರುತಿಸಲು ಬಳಸುವ ಚುಕ್ಕೆಯು (ಪುಳ್ಳಿ) ಮಧ್ಯಯುಗದಲ್ಲಿ ಕಾಣಿಸಿಕೊಳ್ಳುತ್ತದೆ.

ಮಧ್ಯಕಾಲೀನ ಲಿಪಿಯಲ್ಲಿ 'ಇ' ಮತ್ತು 'ಈ' ಕಾರದ ಕಾಗುಣಿತ ಚಿಹ್ನೆಯಲ್ಲಿ ವ್ಯತ್ಯಾಸವಿಲ್ಲ. ಣ ಮತ್ತು ನ ಕಾರದ ಅಡ್ಡಗೆರೆಗಳು ಉದ್ದವಾಗಿವೆ. ಇಕಾರದ ಒಳಗೆ ಸುರುಳಿ ಬಂದಿದೆ. ಊಕಾರದ ಚಿಹ್ನೆ ಬೇರೆಯಾಗಿದೆ. ರ ಕಾರ ಮತ್ತು 'ಆ' ಕಾರದ ಕಾಗುಣಿತಕ್ಕೆ ವ್ಯತ್ಯಾಸವಿಲ್ಲ. ತಮಿಳಿನಲ್ಲಿ ಅ, ಆ ಕಾರದ ಮಧ್ಯೆ ಗೆರೆ ನೆಟ್ಟಗಿದೆ. ವಟ್ಟಂಲಿಪಿಯಲ್ಲಿ ಅದು ಅರ್ಧರ್ಧ ವೃತ್ತಾಕಾರವಾಗಿದೆ. ಸಂಸ್ಕೃತದಲ್ಲಿ ಹ್ರಸ್ವಸ್ವರಗಳಾದ ಎ, ಒ ಗಳಿಲ್ಲ. ಇವನ್ನು ತೋರಿಸಲು ಹಾಗೂ ಪೂರ್ಣವಾಗಿ ವ್ಯಂಜನಗಳನ್ನು ತೋರಿಸಲು ಅಕ್ಷರದ ಮೇಲೆ ಚುಕ್ಕೆ ತೋರಿಸಿರುತ್ತಾರೆ. ಬೆಸ್ಚಿ (Beschi) ಎಂಬ ಪಾಶ್ಚಿಮಾತ್ಯ ಮಿಶಿನರಿ ತಮಿಳು ಭಾಷೆ ಕಲಿತು ಈ ಮೇಲಿನ ಬದಲಾವಣೆ ಮಾಡಿದನೆಂದು ವೇಲುಪಿಳ್ಳೆಯವರು ಹೇಳುತ್ತಾರೆ. ಗೋಪಿನಾಥರಾಯರು ಈ ಬದಲಾವಣೆ ಬೆಸ್ಚಿಗಿಂತ ಮೊದಲೇ ಇತ್ತೆಂದು ಹೇಳಿರುತ್ತಾರಾದರೂ ಆಧಾರ ನೀಡುವುದಿಲ್ಲ.


ಹೀಗೆ ಬಳಸಿರುವ ಚುಕ್ಕೆಯನ್ನು 'ಪುಳ್ಳಿ' ಎಂದು ಕರೆದಿರುತ್ತಾರೆ. ಐ.ಮಹಾದೇವನ್ ಅವರು ಅರಿಕಮೇಡಿನಲ್ಲಿ ದೊರೆತ ಕ್ರಿ.ಶ.೨೦೦ರ ಶಾಸನದಲ್ಲಿ ಹಾಗೂ ವಾಸಿಷ್ಠೀಪುತ್ರ ಪುಳಮಾಯಿಯ




ಪಲ್ಲವರ ಆರಂಭಕಾಲದ ಶಾಸನ ಕ್ರಿ. ಶ. ಸು. ೬೫೦ TAS I



ನಂದಿವರ್ಮ ಪಲ್ಲವಮಲ್ಲ ಸುಮಾರು ಕ್ರಿ.ಶ. ಸು. ೭೬೦ TAS I




ನಂದಿ ವಿಕ್ರಮವರ್ಮ ಕ್ರಿ.ಶ. ಸು. ೯ ಶಕ TAS I




ರಾಜರಾಜಚೋಳ I ಕ್ರಿ.ಶ. ೧೦೦೦ TAS I

ತಮಿಳು ಲಿಪಿಯ ವಿಕಾಸ



1. ವಲ್ಲಂ, 2.ಕೂರಂ, 3. ತಿರುವಡಿಗ್ಗೈ, 4. ಕಾಸಕ್ಕುಡಿ, 5. ತಿರುವಲ್ಲಂ, 6. ಸೆಂದಲೈ, 7. ಲಾಲ್ಗುಡಿ, 8. ತಂಜಾವೂರು, 9. ಮೇಲ್ಪಾಡಿ, 10. ತಿರುವಳಂಗೋಡು 11. ತಿರುಕ್ಕಳುಕುನ್ರಂ, 12. ತಿರುಕ್ಕಳರ್, 13. ಕುನ್ನತ್ತೂರ್, 14. ಶ್ರೀರಂಗಂ



ಕೃಪೆ : ಸುಬ್ರಮಣಿಯಂ

ಸೀಸದ ನಾಣ್ಯದಲ್ಲಿ ಈ ಪುಳ್ಳಿ (ಚುಕ್ಕೆ)ಯನ್ನು ಬಳಸಲಾಗಿದೆ ಎಂದಿರುತ್ತಾರೆ. (Tamil-Brahmi Inscriptions, 1970) ಆದರೆ ಮಧ್ಯಕಾಲದಲ್ಲಿ ಈ ಪದ್ಧತಿ ಏಕೆ ಮುಂದುವರಿದಿಲ್ಲವೆಂಬ ಪ್ರಶ್ನೆ ಉದ್ಭವಿಸುತ್ತದೆ.

ಬ್ರಾಹ್ಮಿ ಲಿಪಿಯಿಂದ ತಮಿಳು ಲಿಪಿಗೆ ಅಕ್ಷರಗಳನ್ನು ಪಡೆಯುವಾಗ ಭಾಷೆಗೆ ಹೊಂದಿಕೊಳ್ಳುವಂತೆ ಕೆಲವು ಲಿಪಿಗಳನ್ನು ಬಿಟ್ಟು ಕೆಲವು ಹೊಸ ಲಿಪಿಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಅರೆ ಸ್ವರಗಳಾದ ಋ, ಲೃ ಗಳನ್ನೂ, ಅನುಸ್ವಾರ, ವಿಸರ್ಗ ಸ, ಶ, ಷ ಇವನ್ನು ಬಿಡಲಾಗಿದೆ. ೞ, ಳ, ಱ ಮತ್ತು ನ ಅಕ್ಷರಗಳನ್ನು ಹೊಸದಾಗಿ ಸೇರಿಸಲಾಗಿದೆ. ಸ್ವರಗಳು. ಅ, ಆ, ಇ, ಈ, ಉ, ಊ, ಎ, ಐ, ಒ, ಔ ವ್ಯಂಜನಗಳು – ಕ, ಙ, ಚ, ಞ, ಟ, ಣ, ತ, ನ, ಪ, ಮ, ಯ, ರ, ಲ, ವ, ೞ, ಳ, ಱ, ನ.

ೞ ಮತ್ತು ಱ ಇವು ಬ್ರಾಹ್ಮಿಯಲ್ಲಿ ಇಲ್ಲವೆಂದು ಮಹಾದೇವನ್ ಅವರು ಹೇಳಿದ್ದರೂ ಕ್ರಿ.ಶ.೧ನೆಯ ಶತಮಾನದ ಉತ್ತರ ಭಾರತದ ಸಂಸ್ಕೃತ ಶಾಸನಗಳಲ್ಲಿ ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯಗಳ ಬಳಕೆಯಾಗಿ ಅಲ್ಲಿ ೞ ಮತ್ತು ಱ ಗಳು ಬಳಕೆಯಾಗಿವೆ. ಕರ್ನಾಟಕದ ಕದಂಬರ ಮತ್ತು ಬಾದಾಮಿ ಚಲುಕ್ಯರ ಸಂಸ್ಕೃತ ಶಾಸನಗಳಲ್ಲಿಯೂ ಈ ಲಿಪಿಗಳು ಮೇಲೆ ಹೇಳಿದ ರೀತಿಯಲ್ಲಿ ಬಳಕೆಯಾಗಿವೆ. ಕನ್ನಡ ಶಾಸನಗಳಲ್ಲಿ ಮುಂದೆ ಪ್ರತ್ಯೇಕ ವ್ಯಂಜನಗಳಾಗಿ ಬಳಕೆಯಾಗಿವೆ.

ಮಲೆಯಾಳಂ ಲಿಪಿ


ಆರಂಭದಲ್ಲಿ ವಟ್ಟಂಲಿಪಿ ಮಲೆಯಾಳಂ ದೇಶದಲ್ಲಿ ಬಳಕೆಯಲ್ಲಿತ್ತು. ತಮಿಳುನಾಡಿನಲ್ಲಿ ವಟ್ಟಂಲಿಪಿಯನ್ನು ಕೈಬಿಟ್ಟ ಮೇಲೆ ಬೆಟ್ಟಗುಡ್ಡಗಳಿಂದ ಆವೃತವಾಗಿದ್ದ ಕೇರಳದಲ್ಲಿ ಅದು ಬಹಳ ಕಾಲ ಬಳಕೆಯಲ್ಲಿತ್ತು. ಮಲೆಯಾಳರಿಗೆ ಮತ್ತು ತಮಿಳರಿಗೆ ವ್ಯತ್ಯಾಸ ಬರೀ ಲಿಪಿಯಲ್ಲಿ ಮಾತ್ರ ಉಳಿಯದೆ ಸಂಸ್ಕೃತಿ ಮತ್ತು ಭಾಷೆಯಲ್ಲಿಯೂ ಕಾಣಿಸಿಕೊಂಡಿತು. ಮಲೆಯಾಳಂನಲ್ಲಿ ಮುಂದೆ ಸಂಸ್ಕೃತ ಪದಗಳು ಹೆಚ್ಚಾದವು. ಆಗ ವಟ್ಟಂಲಿಪಿಯಲ್ಲಿ ಪೂರ್ಣವಾಗಿ ಸಂಸ್ಕೃತ ಶಾಸನಗಳನ್ನು

ಬರೆಯಲು ಆಗುತ್ತಿರಲಿಲ್ಲ. ಹೀಗಾಗಿ ಮುಂದೆ ವಟ್ಟೆಳುತ್ತು ಲಿಪಿಗೆ ಬದಲಾಗಿ ಗ್ರಂಥಲಿಪಿಯನ್ನು ಅಳವಡಿಸಿಕೊಂಡಿದ್ದಾರೆ. ಇದನ್ನು ಕೇರಳದಲ್ಲಿ ಆರ್ಯಎಳತ್ತು ಎಂದು ಕರೆಯುತ್ತಿದ್ದರು. ಕ್ರಿ.ಶ.೧೭ ನೆಯ ಶತಮಾನದಲ್ಲಿ ತುನ್ಚಟ್ಟು ಎಟುತ್ತಚ್ಚನ್ ಎಂಬುವವನು ಆರ್ಯಎಳುತ್ತನ್ನು ಮಲೆಯಾಳಂ ಲಿಪಿಗೆ ಬಳಸಿ ವಟ್ಟೆಳುತ್ತು ಮತ್ತು ಕೋಲೆಳುತ್ತನ್ನು ಸ್ಥಳಾಂತರಿಸಿದ. ತಾಳೆಗರಿಗಳ ಮೇಲೆ ಹೆಚ್ಚು ಬಾಗುಗಳನ್ನು, ಸುರುಳಿಗಳನ್ನು ಬಳಸಿದ. ಇದೇ ಮುಂದೆ ೧೮೩೬ರಲ್ಲಿ ಮುದ್ರಣ ಬಳಕೆಗೆ ಬಂದಾಗ ಕೇರಳದಲ್ಲಿ ಬಳಕೆಯಾಯಿತು.

ಕೇರಳದಲ್ಲಿ ಪಂಡಿತರು, ಸಂಸ್ಕೃತ ಬಲ್ಲವರು ಆರ್ಯಎಳುತ್ತನ್ನು ಬಳಸಿದಾಗ ಸಾಮಾನ್ಯರು ವಟ್ಟೆಳುತ್ತಿನ ಒಂದು ರೂಪವಾದ ಕೋಲೆಳುತ್ತನ್ನು ಬಳಸುತ್ತಿದ್ದರು. ಇವರ ಭಾಷೆಯಲ್ಲಿ ಸಂಸ್ಕೃತ ಪದಗಳು ಕಡಿಮೆಯಿರುತ್ತಿದ್ದವು. ಮಲಬಾರಿನ ಮಾಪ್ಲಗಳೂ ಇದನ್ನು ಬಳಸಿರುತ್ತಾರೆ. (Palaeography of Malayalam script : S.J.Mangalam)

ತುಳು ಲಿಪಿ

ಕರ್ನಾಟಕದ ಪಶ್ಚಿಮ ಕರಾವಳಿಯ ದಕ್ಷಿಣಕನ್ನಡ ಜಿಲ್ಲೆ ಮತ್ತು ಕೇರಳದ ಕಾಸರಗೋಡಿನ ವರೆಗೆ ಇರುವ ಪ್ರದೇಶದಲ್ಲಿ ತುಳುವರು ವಾಸಿಸುತ್ತಾರೆ. ತುಳು ಭಾಷೆಯ ಪ್ರಥಮ ಉಪಲಬ್ದ



ದೇ.ಕೊ. ರೆಡ್ಡಿ

ತುಳು ವರ್ಣಮಾಲೆ

ಕೃತಿಯು ಕ್ರಿ.ಶ.ಸು.೧೬೩೦ರಲ್ಲಿ ಬರೆದ 'ಶ್ರೀ ಭಾಗವತೋ' ಗ್ರಂಥವಾಗಿದೆ. ಇದನ್ನು ಬರೆದವನು ವಿಷ್ಣುತುಂಗ ಎಂಬುವವನು. ಸಾಮಾನ್ಯವಾಗಿ ಈ ಪ್ರದೇಶದಲ್ಲಿ ರಚಿತವಾಗಿರುವ ಕೃತಿಗಳ ಭಾಷೆ ಯಾವುದಾದರೂ ಲಿಪಿ ಸಾಮಾನ್ಯವಾಗಿ ಕನ್ನಡ ಅಥವಾ ತಿಗಳಾರಿ ಬಳಕೆಯಾಗಿದೆ. ಆದರೆ ವಿಷ್ಣುತುಂಗನು ಬರೆದಿರುವ ಭಾಗವತದ ಹಸ್ತಪ್ರತಿ ತುಳು ಭಾಷೆ ಮತ್ತು ಲಿಪಿಯಲ್ಲಿದೆಯೆಂದು ಹಾಗೂ ಈ ಕೃತಿಯನ್ನು ಪ್ರತಿ ಮಾಡಿದ ಕಾಲ ಕ್ರಿ.ಶ.೧೮೭೦ ಇರಬಹುದೆಂದು ಕೃತಿಯ ಸಂಪಾದಕರು ಊಹಿಸಿರುತ್ತಾರೆ. ಲೇಖಕರು ಈ ಲಿಪಿಯನ್ನು ತುಳು ಲಿಪಿ ಎಂದು ಕರೆದಿದ್ದರೂ ಈ ಲಿಪಿಯು ತಮಿಳುನಾಡಿನಲ್ಲಿ ಬಳಕೆಯಲ್ಲಿದ್ದ ಗ್ರಂಥಲಿಪಿಯ ಇನ್ನೊಂದು ರೂಪವಾದ 'ಆರ್ಯಎಳುತ್ತು' ಲಿಪಿಯು ಅಲ್ಪ ಸ್ವಲ್ಪ ಬದಲಾವಣೆಯೇ ಆಗಿದೆ. ಕ್ರಿ.ಶ.೧೩೪೯ರಲ್ಲಿ ಬರೆದ 'ದೂತವಾಕ್ಯ'ವೇ ಆರ್ಯಎಳುತ್ತಿನ ಪ್ರಾಚೀನ ತಾಳೆಗರಿ ಗ್ರಂಥ. ಮುಂದೆ ಕ್ರಿ.ಶ.೧೬೭೮ ರಿಂದ ೧೭೦೩ರ ಮಧ್ಯೆ ಹಾಲೆಂಡ್‌ನಲ್ಲಿ ಆರ್ಯ ಎತ್ತಿನಲ್ಲಿ ಪುಸ್ತಕವನ್ನು ಮುದ್ರಿಸಲಾಯಿತು. ಮುಂದೆ ಕೇರಳದಲ್ಲಿ ೧೯ನೆಯ ಶತಮಾನದಲ್ಲಿ ಸಾರ್ವತ್ರಿಕವಾಗಿ ಈ ಲಿಪಿಯ ಬಳಕೆಯಾಗಿ ಉಳಿದ ಲಿಪಿಗಳನ್ನು ಬಿಡಲಾಯಿತು.


ಕೇರಳದ ಸತತ ಸಂಪರ್ಕ ಹೊಂದಿದ ತುಳು ಜನರು ತಮ್ಮ ಭಾಷೆಗೆ ಈ ಆರ್ಯಎಳುತ್ತನ್ನು ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಸ್ವೀಕರಿಸಿದರು. ಬರ್ನೆಲ್ಲನ ಪ್ರಕಾರ ಮಲೆಯಾಳ ಮತ್ತು ತುಳು ಲಿಪಿಗಳು ಒಂದೇ ತರಹ ಇದ್ದರೂ ಕೈ ಬರೆವಣಿಗೆಯಿಂದ ಭಿನ್ನವೆಂಬಂತೆ ಕಾಣುತ್ತವೆ.

ಆದರೆ ಸರಿಯಾಗಿ ಗಮನಿಸಿದಾಗ ತಿಗಳಾರಿಯ ಅಲ್ಪ ಬೇಧದಿಂದ ಈ ತುಳು ಲಿಪಿ ಉದಿಸಿದೆ. ಏಕೆಂದರೆ ಈ ಪ್ರದೇಶದಲ್ಲಿ ತಿಗಳಾರಿ ಲಿಪಿಯು ವ್ಯಾಪಕ ಪ್ರಚಾರದಲ್ಲಿತ್ತು.

ತಿಗಳಾರಿ ಲಿಪಿ

ಈ ಲಿಪಿಯು ಬಹು ಹಿಂದಿನಿಂದಲೂ ಕರ್ನಾಟಕದಲ್ಲಿ ಬಳಕೆಯಲ್ಲಿದೆ. ತಡಮಾಲಂಗಿ ಶಾಸನದಲ್ಲಿ 'ತಿಗುಳಾರ್ಯ' ಲಿಪಿಯನ್ನು ಬಾಲಬೋಧನೆಯಲ್ಲಿ ಕಲಿಸುತ್ತಿದ್ದ ಸಂಗತಿ ಇದೆ. ಬಹುಶಃ ಇದು ಗ್ರಂಥಲಿಪಿಯಿರಬಹುದು. ತಿಗುಳ ಎಂದರೆ ತಮಿಳರು ಎಂದರ್ಥ. ಈ ಭಾಷೆಯ ಬ್ರಾಹ್ಮಣರು ಬಳಸುವುದೇ ತಿಗುಳಾರ್ಯ, (ಆರ್ಯ=ಬ್ರಾಹ್ಮಣ) ಇದೇ ತಿಗುಳಾರಿ ಎಂದು ನಾಮಕರಣಗೊಂಡಿದೆ. ಮಲಬಾರಿನಲ್ಲಿ ಆರ್ಯಎಳುತ್ತು ಬಳಕೆಯಲ್ಲಿತ್ತು. ಆರ್ಯಎಳುತ್ತು ಎಂದರೆ ಸಂಸ್ಕೃತ ಗ್ರಂಥಗಳಿಗೆ ಬಳಸುವ ಗ್ರಂಥಲಿಪಿ (ಅರ್ಥಾತ್ ತಮಿಳುನಾಡಿನ ಲಿಪಿ). ಕರ್ನಾಟಕದ ಮಲೆನಾಡಿನ ಪ್ರದೇಶದಲ್ಲಿ ಇದರ ಬಳಕೆ ಹೆಚ್ಚಾಗಿತ್ತು. ಇದೇ ಮುಂದೆ ಬಳಕೆ ಹೆಚ್ಚಾಗಿ ತಿಗುಳಾರಿ, ಮಲೆಯಾಳ ಮತ್ತು ತುಳು ಲಿಪಿಗೆ ಮೂಲವಾಯಿತು.

ತುಳು ಲಿಪಿಗೂ ತಿಗಳಾರಿಗೂ ಇರುವ ವ್ಯತ್ಯಾಸ ತೀರಾ ಕಡಿಮೆ. ತಿಗಳಾರಿಯು ತುಳು ಲಿಪಿಗಿಂತ ಸ್ವಲ್ಪ ವೃತ್ತಾತ್ಮಕಾರವಾಗಿದೆ. ತುಳು ಲಿಪಿಯನ್ನು ಬಲ್ಲವನು ತಿಗಳಾರಿಯನ್ನೂ, ತಿಗಳಾರಿಯನ್ನು ಬಲ್ಲವನು ತುಳುಲಿಪಿಯನ್ನೂ ಸರಾಗವಾಗಿ ಓದಬಲ್ಲ. ತಿಗಳಾರಿ ಲಿಪಿ ಮಧ್ಯೆ ಬಳಸಿರುವ ಅಂಕೆಗಳು ಕನ್ನಡದಿಂದ ಪಡೆದವು. ಒಟ್ಟಿನಲ್ಲಿ ಈ ಲಿಪಿಯು ಕನ್ನಡದ ಪ್ರಭಾವಕ್ಕೆ ಸಿಕ್ಕಿ ಅಕ್ಷರಗಳನ್ನು ಗುಂಡಾಗಿಸಿಕೊಂಡಿರಬೇಕು. ಈ ಲಿಪಿಯನ್ನು ಮುಖ್ಯವಾಗಿ ಸಂಸ್ಕೃತ ಗ್ರಂಥಗಳನ್ನು



ಕೃಪೆ : ಕೆಳದಿಗುಂಡಾಜೋಯಿಸ್

ತಿಗಳಾರಿ ವರ್ಣಮಾಲೆ

ಬರೆಸಬೇಕೆಂಬ ಉದ್ದೇಶದಿಂದ ಬಳಸಿರುವುದು. ಹೀಗಾಗಿ ಸಂಸ್ಕೃತ ವರ್ಣಮಾಲೆಯಲ್ಲಿರುವ ಅಕ್ಷರಗಳೆಲ್ಲಾ ಇವರಲ್ಲಿವೆ.


ಸ್ವರಗಳು	೧೨
ಅನುಸ್ವಾರ, ವಿಸರ್ಗ	೨
ವರ್ಗೀಯ ವ್ಯಂಜನ	೨೫
ಅವರ್ಗೀಯ ವ್ಯಂಜನ	೧೧
ಒಟ್ಟು	೫೦ ಅಕ್ಷರಗಳು

ಅವರ್ಗೀಯದಲ್ಲಿ ಕ್ಷ ಮತ್ತು ಜ್ಞ ಸೇರಿವೆ.

ಕ್ರಿ.ಶ.೧೮೦೭ರಲ್ಲಿ ಮುಂಬಯಿಯಲ್ಲಿ ತಿಗುಳಾರಿಯಲ್ಲಿ ಪುಸ್ತಕವೊಂದು ಮುದ್ರಿತವಾಗಿದೆ. ಇದು ತಿಗಳಾರಿ ವ್ಯಾಪಕ ಪ್ರಚಾರದಲ್ಲಿತ್ತೆಂಬುದನ್ನು ತಿಳಿಸುತ್ತದೆ. ತಿಗಳಾರಿ ಲಿಪಿಯಲ್ಲಿ ಧಾರ್ಮಿಕ ಗ್ರಂಥಗಳೇ ಅಲ್ಲದೆ ಅನೇಕ ನಿರೂಪಗಳನ್ನು ಬರೆಯಲಾಗಿದೆ. ಇತ್ತೀಚೆಗೆ ಈ ಲಿಪಿಯನ್ನು ಓದುವವರ ಸಂಖ್ಯೆ ಬೆರಳೆಣಿಕೆಯಷ್ಟಾಗಿದೆ.

ಅಮರಗನ್ನಡ ಲಿಪಿ

ಈ ಲಿಪಿಯನ್ನು ಕೊಡೇಕಲ್ ಬಸವಣ್ಣ ತನ್ನ ಸಾಹಿತ್ಯಕ್ಕೆ ಬಳಸಿದನೆಂದು ಪ್ರತೀತಿ. ಈ ಲಿಪಿಯನ್ನು ಕೊಡೇಕಲ್‌ನ ಶರಣರು ಅಮರಗನ್ನಡ ಲಿಪಿಯೆಂದು ಕರೆದಿದ್ದಾರೆ. ಕೊಡೇಕಲ್ ಬಸವಣ್ಣ ಸಾಹಿತ್ಯವನ್ನು ಬರೆಯುವಲ್ಲಿ ಹನ್ನೊಂದು ರೀತಿಯ ಸಾಂಕೇತಿಕ ಲಿಪಿಯನ್ನು ಬಳಸಿದ್ದನೆಂಬುದು ಪ್ರತೀತಿ. ದಕ್ಷಿಣ ಭಾರತಕ್ಕೆ ಮುಸಲ್ಮಾನರ ಧಾಳಿಗಳು ಮತ್ತು ಅವರ ಆಳ್ವಿಕೆಯ ಕಾರಣದಿಂದ ಧಾರ್ಮಿಕ ಗ್ರಂಥಗಳನ್ನು ಉಳಿಸಿಕೊಳ್ಳುವುದು ಇವರ ಉದ್ದೇಶವಾಗಿತ್ತು. ಹೀಗಾಗಿ ಈ ಹೊಸ ರೀತಿಯ ಗುಪ್ತ ಅಕ್ಷರಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಈ ಲಿಪಿ ಸಾರ್ವತ್ರಿಕ



ಅಮರ ಗನ್ನಡ ಲಿಪಿಯ ನಾಲ್ಕು ಕೈಯಿಗಳ ಮಾದರಿ

ಬಳಕೆಯಲ್ಲಿರಲಿಲ್ಲ, ಕೊಡೇಕಲ್ ಬಸವಣ್ಣ ಮತ್ತು ಅವನ ಪೀಳಿಗೆಯವರಿಗೆ ಮಾತ್ರ ತಿಳಿಯುವ ಲಿಪಿಯಾಗಿತ್ತು. ಈ ರಹಸ್ಯಲಿಪಿಯನ್ನು ಹಾಗೆಯೇ ಕಾಯ್ದುಕೊಂಡು ಬಂದಿದ್ದರು.

ಇದಕ್ಕೆ ಅಮರಗನ್ನಡ ಲಿಪಿ ಎಂಬ ಹೆಸರು ಬರಲು ಕಾರಣ ಕೊಡೇಕಲ್ ಸಂಪ್ರದಾಯದಲ್ಲಿ ಕಲ್ಯಾಣವು ಅಮರಕಲ್ಯಾಣ, ಅವನ ಶರಣರು ಅಮರಗಣಂಗಳು. ಹಾಗೆಯೇ ಅವರು ಬಳಸಿದ ಭಾಷೆ ಮತ್ತು ಲಿಪಿ ಅಮರಗನ್ನಡ ಭಾಷೆ ಮತ್ತು ಲಿಪಿಯಾಯಿತು. ಕೊಡೇಕಲ್ ಬಸವನಿಗೆ (ಸು.ಕ್ರಿ.ಶ.೧೫ನೇ ಶತಮಾನದ ಉತ್ತರಾರ್ಧ) ಈ ಲಿಪಿಯನ್ನು (ಏಕಾದಶಿ ಲಿಪಿಪತ್ರ) ಆತನು ವಿಜಯನಗರದಲ್ಲಿದಾಗ ಆರೂಢ ಸಂಗಮೇಶ್ವರ ಎಂಬುವನು ನೀಡಿದನೆಂದು ಕೊಡೇಕಲ್ ಸಾಹಿತ್ಯದಲ್ಲಿ ಉಲ್ಲೇಖವಿದೆ. ಈ ಆರೂಢ ಸಂಗಮೇಶ್ವರನು ಈ ಲಿಪಿಯನ್ನು ಎಲ್ಲಿ ಕಲಿತ ಅಥವಾ ಯಾರು ಈ ಲಿಪಿ ಬಳಸುತ್ತಿದ್ದರೆಂಬ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಗುರುಬೋಧೆಯಲ್ಲಿ ಇದರ ಬಗ್ಗೆ –

> ಹನ್ನೊಂದಮರಗನ್ನಡ ಲಿಪಿ
> ಉನ್ನತುತ್ತರ ಉಭಯ ಕಾಲದಿ
> ನಮ್ಮನರಿತವರಿಲ್ಲವಯ್ಯ ಬಸವ ಕೇಳೆಂದ॥ (ಗುರುಬೋಧೆ ಪು.೧೦)

ಎಂದು ಹೇಳಿದೆ.


ಅಮರಗನ್ನಡ ಲಿಪಿಗಳು ಹನ್ನೊಂದೆಂದಿದ್ದರೂ ಇವು ನಾಲ್ಕರ ಮೂಲದಿಂದ ಬಂದವೆಂದು ಕೊಡೇಕಲ್ ಸಾಹಿತ್ಯದಲ್ಲಿ ಉಲ್ಲೇಖವಿದೆ. ನಾಲ್ಕು ಬಗೆಯ ಲಿಪಿಯ ಆಧಾರದಿಂದ ಹನ್ನೊಂದು ರೀತಿಯ ಅಕ್ಷರಗಳನ್ನು ಬೆಳೆಸಿಕೊಂಡಿದ್ದಾರೆ. ಹತ್ತು ಬಗೆಯ ಲಿಪಿಗಳು ದೊರೆತಿದ್ದು ಹನ್ನೊಂದನೆಯದು ಬಳಕೆಯಲ್ಲಿದ್ದ ಕನ್ನಡ ಲಿಪಿಯೇ ಆಗಿರುತ್ತದೆ. ಕೊಡೇಕಲ್ ಬಸವನ ಹಿರಿಯ ಮಗ ರಾಚಪ್ಪಯ್ಯ (ಕ್ರಿ.ಶ.೧೬ನೆಯ ಶತಮಾನ) ತನ್ನ ಕೃತಿ ಮಾಯಾ ಸಾಂಗತ್ಯದಲ್ಲಿ 'ವಿರಚಿಸುವೆನಮರಗನ್ನಡದಲ್ಲಿ ...' ಎಂದು ಹೇಳಿ, ಈ ಲಿಪಿಗೆ ಭಾಷೆಗೆ ಅಮರಕನ್ನಡ ಎಂದು ಕರೆದು ಅದರ ಪ್ರಾಚೀನತೆಯನ್ನು ಅಷ್ಟು ಹಿಂದಕ್ಕೆ ಒಯ್ದಿದ್ದಾನೆ.

ಅಮರಗನ್ನಡ ಲಿಪಿಗೆ ಯಾವುದೇ ಲಿಪಿ ಮೂಲವಲ್ಲ, ಈ ಲಿಪಿಯು ಕೆಲವು ಕಡೆ ಉರ್ದು ಅಥವಾ ಫಾರಸಿ ಲಿಪಿಯಂತೆ ಕಂಡರೂ ಏ ಕಾರದ ಮತ್ತು ಉ ಕಾರದ ಕಾಗುಣಿತಗಳಿಗೆ ದೇವನಾಗರಿ ರೀತಿಯಲ್ಲಿ ಗೆರೆ ಕೊಂಬುಗಳನ್ನು ನೀಡಲಾಗಿದೆ. ಕೆಲವು ಮಾದರಿಗಳಲ್ಲಿ ಕನ್ನಡ ರೀತಿಯ ಕಾಗುಣಿತವನ್ನು ನೀಡಿರುವುದೂ ಉಂಟು.


ಸ್ವರಗಳಲ್ಲಿ ಅ ಕಾರ ಮಾತ್ರ ಇದೆ. ಇ ಕಾರ, ಉ ಕಾರ, ಎ ಕಾರ, ಒ ಕಾರಗಳಿಗೆ ಯ ಕಾರ ಮತ್ತು ವ ಕಾರವನ್ನು ಬಳಸಲಾಗಿದೆ.

ಅ, ಆ, ಯಿ, ಯೀ, ವು, ವೂ, ಯೆ, ಯೇ, ವೊ, ವೋ ... ಋ ಕಾರಕ್ಕೆ ರ ಕಾರವನ್ನು ಬಳಸಲಾಗಿದೆ. ಅನುಸ್ವಾರ ಮತ್ತು ವಿಸರ್ಗದ ರೂಪಗಳನ್ನು ಹಾಗೆಯೇ ಬಳಸಿಕೊಳ್ಳಲಾಗಿದೆ. ಅ ಕಾರದ ಮೇಲೆ ಗೆರೆ ಎಳೆದರೆ ಆ ಆಗುತ್ತದೆ. ಅ ಕೆಲವೊಮ್ಮೆ ಗೆರೆಗೆ ಬದಲು ೯ ಎಂಬ ದೀರ್ಘ ಚಿಹ್ನೆಯನ್ನೇ ಬಳಸಿರುವುದೂವುಂಟು. ಐ ಮತ್ತು ಔ ಗಳನ್ನು ಸೂಚಿಸಲು ಅಯ, ಅವ ಎಂದು ಬರೆಯಲಾಗಿದೆ. ಇದಕ್ಕೆ ಕಾರಣ ಪೂರ್ಣ ವ್ಯಂಜನ ತೋರಿಸುವ '್' ಎಂಬ ಚಿಹ್ನೆ ಈ ಲಿಪಿಯಲ್ಲಿಲ್ಲ, ಕೆಲವೊಮ್ಮೆ ಕನ್ನಡ ಲಿಪಿಯ ಐ ಕಾರದ ಕಾಗುಣಿತ ಚಿಹ್ನೆಯನ್ನು ಯೆ

ಅಮರಗನ್ನಡದ ಕೈಗಳು



ವೇ.ಕೊಂ.ರೆಡ್ಡಿ



ಕೃಪೆ: ಈರಸಂಗಯ್ಯ ಗ.ಕೊಡೆಕಲ್‌ಮಠ


ಕಾರಕ್ಕೆ ನೀಡುವ ಮೂಲಕ ಹಾಗೂ 'ವೌ' ವನ್ನು ಅಮರಗನ್ನಡ ಔ ಕಾರವನ್ನು ಸೃಷ್ಟಿಸಿಕೊಂಡಿರುತ್ತಾರೆ. ಹೀಗಾಗಿ ಅಮರಗನ್ನಡ ಲಿಪಿಮಾಲೆಯಲ್ಲಿ ವ್ಯಂಜನಾಕ್ಷರಗಳೇ ಪ್ರಾಧಾನ್ಯ. ವರ್ಗೀಯ ಅವರ್ಗೀಯ ಲಿಪಿಗಳನ್ನು ಹೇಳಿದ್ದರೂ ಅವುಗಳಲ್ಲಿ ಙ ಮತ್ತು ಞ ಅಕ್ಷರಗಳನ್ನು ಬಳಸಿಲ್ಲ, ವ್ಯಂಜನಗಳಲ್ಲಿ ಅಲ್ಪಪ್ರಾಣ ಅಕ್ಷರಗಳನ್ನು ಮಾತ್ರ ಬಳಸಿದ್ದು ಮಹಾಪ್ರಾಣಾಕ್ಷರಗಳು ಬೇಕಾದಲ್ಲಿ, ಅಲ್ಪಪ್ರಾಣಗಳ ಮೇಲೆ ಚುಕ್ಕೆ ಅಥವಾ ಗೆರೆಗಳನ್ನು ಎಳೆದು ಸೂಚಿಸಿರುತ್ತಾರೆ. ಒತ್ತಕ್ಷರಗಳನ್ನು ಸೂಚಿಸಬೇಕಾದಲ್ಲಿ ಆಯಾ ವರ್ಣಗಳನ್ನು ಅಕ್ಷರಗಳ ಕೆಳಗೆ ಬರೆದು ಸೂಚಿಸುತ್ತಾರೆ.

ಒಟ್ಟಿನಲ್ಲಿ ಈ ಅಮರಗನ್ನಡ ಗೂಢಲಿಪಿಯ ಸೃಷ್ಟಿಯಲ್ಲಿ ಕನ್ನಡ ಮತ್ತು ನಾಗರಿ ಲಿಪಿಗಳು ಪ್ರಭಾವವನ್ನು ಬೀರಿರುವಂತೆ ಕಾಣಬರುತ್ತವೆ.

ಆಧಾರ : ಕೊಡೇಕಲ್ಲ ಬಸವಣ್ಣ – ಒಂದು ಅಧ್ಯಯನ : ಡಾ।। ಬಸವಲಿಂಗ ಸೊಪ್ಪಿಮಠ.
ರಾಚಪ್ಪಯ್ಯ ಮತ್ತು ಪ್ರಭುಚರಿತ್ರೆ (ಅಪ್ರಕಟಿತ ಸಂಶೋಧನ ಪ್ರಬಂಧ) – ಇರಸಂಗಯ್ಯ ಗ. ಕೊಡೇಕಲ್‌ಮಠ.

ತೆಲುಗು ಲಿಪಿ

ಬಹು ಹಿಂದಿನಿಂದ ಕರ್ನಾಟಕ ಮತ್ತು ಆಂಧ್ರದ ಬಹುತೇಕ ಪ್ರದೇಶಗಳು ಒಂದೇ ಆಡಳಿತದಲ್ಲಿ ಮುಂದುವರಿದುದರಿಂದ ಇಲ್ಲಿ ಲಿಪಿ ಬೆಳವಣಿಗೆ ಒಂದೇ ತೆರನಾಗಿದೆ. ಶಾಸನತಜ್ಞರು ಶಾಸನಗಳ ಲಿಪಿಯ ಬಗ್ಗೆ ಟಿಪ್ಪಣಿ ಬರೆಯುವಾಗ ಕನ್ನಡ–ತೆಲುಗು ಲಿಪಿಯೆಂದು ಬರೆಯುವಷ್ಟರ ಮಟ್ಟಿಗೆ ಒಂದೇ ತೆರನಾಗಿವೆ. ಹೀಗಾಗಿ ಆಯಾ ಭಾಷೆಯ ಶಾಸನಗಳು ದೊರೆತಾಗ ಆ ಭಾಷೆಯ ಶಾಸನವೆಂದು ಗುರುತಿಸಬಹುದೇ ಹೊರತು ಉಳಿದಂತೆ, ಇಂತಹ ಲಿಪಿಯೆಂದು ಸ್ಪಷ್ಟವಾಗಿ ಹೇಳಲು ಬರುತ್ತಿರಲಿಲ್ಲ. ಇದು ಕ್ರಿ.ಶ.೧೦ನೆಯ ಶತಮಾನದಲ್ಲಿ ರಾಷ್ಟ್ರಕೂಟರ ಪತನದವರೆಗೆ ಹೀಗೆಯೇ ಇತ್ತು.



EI V. p. 128 ವೆಂಗಿ ಚಾಳುಕ್ಯ ಮುಮ್ಮಡಿ ವಿಜಯಾದಿತ್ಯನ ಶಾಸನ ವೇ.ಕೊಂ.ರೆಡ್ಡಿ

ಹೀಗೆಂದಾಕ್ಷಣ ಬದಲಾವಣೆಯೇ ಇರಲಿಲ್ಲವೆಂದಲ್ಲ. ಆಂಧ್ರ–ಒರಿಸ್ಸಾ ಗಡಿಯಲ್ಲಿ ಅಂದರೆ ಕಳಿಂಗಪ್ರಾಂತ್ಯದಲ್ಲಿನ ಲಿಪಿ ಸ್ವಲ್ಪ ಬದಲಾವಣೆ ತೋರಿಸಿದೆ. ಆದರೆ ಅದು ತಾತ್ಕಾಲಿಕ ಮಾತ್ರ. ಕ್ರಿ. ಶ. ೮೪೪ರ ವೆಂಗಿ ಚಾಳುಕ್ಯ ಮುಮ್ಮಡಿ ವಿಜಯಾದಿತ್ಯನ ಶಾಸನದಲ್ಲಿ ಕನ್ನಡ ಅಕ್ಷರಗಳಲ್ಲಿ ಸ್ವಲ್ಪ ಭಿನ್ನತೆ ಕಂಡುಬಂದಿದೆ. ಆದರೂ ಒಟ್ಟಾರೆ ಗಮನಿಸಿದಾಗ ಕನ್ನಡ ಶಾಸನ ಲಿಪಿಗೂ ಈ ಶಾಸನದ ಲಿಪಿಗೂ ಇರುವ ವ್ಯತ್ಯಾಸ ಸ್ವಲ್ಪ ಮಾತ್ರ.

ಆಂಧ್ರದಲ್ಲಿ ದೊರೆತ ಪ್ರಾಚೀನ ತೆಲುಗು ಭಾಷೆಯ ಶಾಸನವೆಂದರೆ ಕಡಪಾ ಜಿಲ್ಲೆಯ ಎರ್ರಗುಡಿಪಾಡು ಪ್ರಾಚೀನವಾದದ್ದು. ಇದಾದ ಮೇಲೆ ಅದೇ ಜಿಲ್ಲೆಯ ಕಲಮಲ್ಲದಲ್ಲಿ ದೊರೆತ ಎರಿಕಲ್ಲು ಮುತ್ತುರಾಜನ ಕಾಲದ ಶಾಸನ. ಮುಂದೆ ಬೆಜವಾಡ ಗುಹೆಗಳಲ್ಲಿ, ಕಡಪಾ ಜಿಲ್ಲೆಯ ಮಾಲೆಪಾಡು, ಇಂದಕೂರು ಮುಂತಾದ ಕಡೆ ಶಾಸನಗಳು ದೊರೆತಿವೆ. ಪ್ರಾಚೀನ ಶಾಸನಗಳನ್ನು ವಿದ್ವಾಂಸರು ಕ್ರಿ.ಶ.೫೭೫-೬೦೦ ಎಂದಿದ್ದರೂ ಎರಿಕಲ್ ಮುತ್ತುರಾಜನ ಶಾಸನಗಳನ್ನು ಕ್ರಿ.ಶ.೭ನೆಯ ಶತಮಾನಕ್ಕೆ ಸೇರಿಸಬಹುದಾಗಿದೆ. ಹೀಗಾಗಿ ತೆಲುಗು ಭಾಷೆಯ ಶಾಸನಗಳು ಕ್ರಿ.ಶ.೭ನೆಯ ಶತಮಾನದಿಂದ ಆರಂಭವಾಗುತ್ತವೆ.

ಕ್ರಿ.ಶ.೧೧೦೦ರವರೆಗೆ ತೆಲುಗು ಭಾಷೆಯಲ್ಲಿ ಸ್ವರಗಳು ೧೦, ವ್ಯಂಜನಗಳು ೨೩ ಮಾತ್ರ ಬಳಕೆಯಾಗಿವೆ.

ಅ ಆ ಇ ಈ ಉ ಊ ಎ ಏ ಒ ಓ

ಕ ಗ ಙ ಚ ಜ ಟ ಡ ಣ ತ ದ ನ ಪ ಬ ಮ

ಯ ರ ಱ ಲ ಳ ವ ಸ ಹ ೞ

ಐ ಗೆ ಬದಲಾಗಿ ಆಯ್ ಎಂದೂ ಔ ಗೆ ಬದಲಾಗಿ ಅವ್ ಎಂದೂ ಬಳಕೆಯಾಗಿದೆ. ಅನುನಾಸಿಕ ಞ ಕ್ಕೆ ಬದಲಾಗಿ ನ ಕಾರ ಬಳಸಲಾಗಿದೆ. ಪಞ್ಚಿನ=ಪನ್ಚಿನ (ಇಂತಹ ಪ್ರಯೋಗ ಕನ್ನಡ ಭಾಷೆಯಲ್ಲಿಯೂ ಅಲ್ಲಲ್ಲಿ ಬಳಕೆಯಾಗಿದೆ). ಹೀಗೆ, ಸಂಸ್ಕೃತ-ಪ್ರಾಕೃತ ಪದಗಳ ಮುಖಾಂತರ ಬಂದು ಸೇರಿದ ಅಕ್ಷರಗಳೆಂದರೆ ಖ, ಘ, ಛ, ಝ, ಠ, ಥ, ಧ, ಫ, ಭ, ಶ, ಷ. ಋ ಌ ೡ ಗಳಿಗೆ ಪ್ರಯೋಗಗಳಿಲ್ಲ. ಋ ಕಾರಕ್ಕೆ ಬದಲಾಗಿ ರಿ ಬಳಸಿದೆ. ಈ ಭಾಷೆಯ ಪದಾದಿಯಲ್ಲಿ ಙ, ಞ, ಟ, ಣ, ಳ, ಬರುವುದಿಲ್ಲ. ರೇಫದಿಂದ ಕೂಡಿದ ಕ, ತ, ದ, ಪ, ಬ, ಮ, ವ ಗಳು ಪದಾದಿಯಲ್ಲಿ ಕಾಣಸಿಗುತ್ತವೆ. ಕ್ರೊಚ್ಚೆ, ಪ್ರಾಲನು, ತ್ರಾಗು, ಮ್ರಾನು, ಪ್ರಚ್ಚಿನ, ಇತ್ಯಾದಿ. ಱ ಕಾರದಿಂದ ಕೂಡಿದ ಕ, ಪ ಗಳು ಮಾತ್ರ ಪದಾದಿಯ ಪ್ರಯೋಗದಲ್ಲಿ ಕಾಣಬರುತ್ತವೆ. ಕ್ಱೊಚ್ಚೆ, ಪ್ಱೋಲನಾಣ್ಬು ......


'ಕ' ಕಾರವು 'ಚ' ಕಾರವಾಗಿ ಕ್ರಿ.ಶ.೫ನೆಯ ಶತಮಾನದಲ್ಲಿ ಬದಲಾವಣೆಯಾಗುತ್ತದೆ.

ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಸು.ಕ್ರಿ.ಶ.೧೧೫೦ರ ನಂತರ ಕರ್ನಾಟಕ ಸಾಮ್ರಾಜ್ಯವು ಪರೋಕ್ಷವಾಗಿ ಮೂರು ಭಾಗಗಳಾಗಿ ವಿಂಗಡಿತವಾಗಿತ್ತು. ಕಲ್ಯಾಣ ಚಾಳುಕ್ಯರ ಸಾಮ್ರಾಜ್ಯದ ದಕ್ಷಿಣ ಭಾಗದಲ್ಲಿ ಹೊಯ್ಸಳರೂ, ಉತ್ತರದಲ್ಲಿ ದೇವಗಿರಿಯ ಯಾದವರೂ, ಪೂರ್ವಕ್ಕೆ ಕಾಕತೀಯರೂ ತಲೆ ಎತ್ತಿದರು. ಮೂವರೂ ಮೂರು ಭಾಷೆಗಳನ್ನು ಮಾತಾಡುತ್ತಿದ್ದ ಪ್ರದೇಶವನ್ನು ಪ್ರತಿನಿಧಿಸುತ್ತಿದ್ದರು. ಇವರ ಆಳ್ವಿಕೆಗಳಲ್ಲಿ ಕನ್ನಡ ಲಿಪಿಯಲ್ಲಿ ಪ್ರಾದೇಶಿಕ ಭಿನ್ನತೆ ಕಾಣತೊಡಗಿತು. ಕನ್ನಡ-ತೆಲುಗು ಲಿಪಿಯಲ್ಲಿ ಪ್ರಭೇದಗಳು ಕಾಣತೊಡಗಿದವು. ಸುಮಾರು ಕ್ರಿ.ಶ.೧೩೦೦ರ ವರೆಗೆ ರಾಜ್ಯಭಾರ ಮಾಡಿದ ಈ ರಾಜ್ಯಗಳು ಮುಂದೆ ಮುಸ್ಲಿಂ ಅರಸರ ಧಾಳಿಗೆ ಒಳಗಾಗಿ ಛಿದ್ರ ಛಿದ್ರವಾದವು. ಆಂಧ್ರದ ರಾಚಕೊಂಡ-ದೇವರಕೊಂಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಪದ್ಮನಾಯಕರೂ, ಕೊರುಕೊಂಡ ನಾಯಕರೂ, ಕೊಂಡವೀಡು – ರಾಜಮಹೇಂದ್ರಿಯನ್ನು

ಕೇಂದ್ರವಾಗಿರಿಸಿಕೊಂಡು ರೆಡ್ಡಿರಾಜರೂ ಆಳ್ವಿಕೆ ನಡೆಸಿದರು. ಕ್ರಿ.ಶ.೧೫ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ಆಂಧ್ರದ ಕೆಲವು ಪ್ರದೇಶಗಳನ್ನು ಗೆದ್ದು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡಿತು. ಮುಂದೆ ೧೬ನೆಯ ಶತಮಾನದಲ್ಲಿ ಇದೂ ಅಸ್ತಂಗತವಾಯಿತು.

ಪ್ರಾಚೀನ ಆಂಧ್ರದಲ್ಲಿ ಬಳಕೆಯಾಗಿರುವ ಕನ್ನಡ ಅಥವಾ ತೆಲುಗು ಶಾಸನಗಳ ಲಿಪಿಗಳು ಒಂದೇ ರೀತಿ ಇವೆಯೆಂದು ಮೇಲ್ನೋಟಕ್ಕೆ ಅನ್ನಿಸಿದರೂ ಅಲ್ಪ ಸ್ವಲ್ಪ ಬದಲಾವಣೆಗೆ ಕಾಣಬರುತ್ತವೆ. ಇವನ್ನು ಪ್ರಾದೇಶಿಕ ಅಥವಾ ಲಿಪಿಕಾರನಿಂದ ಆದ ಬದಲಾವಣೆಗಳೆನ್ನಬಹುದು. ಪೂರ್ವ ಚಾಳುಕ್ಯ ಇಮ್ಮಡಿ ಭೀಮನ ಮತ್ತು ಇಮ್ಮಡಿ ಅಮ್ಮನ ಶಾಸನಗಳಲ್ಲಿನ ಅಕ್ಷರಗಳು ಆ ಕಾಲದ ಹೆಚ್ಚಿನ ಬಾಗುಗೆರೆಗಳಿಂದ ಕೂಡಿದ್ದು ಅವುಗಳಿಗೆ ನೀಡಿರುವ ತಲೆಕಟ್ಟುಗಳೂ ಸಹ ಹಾಗೆಯೇ ಬಾಗುರೇಖೆಗಳಿಂದ ಕೂಡಿವೆ. ಇದಕ್ಕೆ ಅನುಗುಣವಾಗಿ ಅಕ್ಷರಗಳು ಉದ್ದ ಅಥವಾ ಅಗಲವಾಗಿವೆ. ೧೦ನೆಯ ಶತಮಾನದ ಈ ಲಿಪಿಗಳಲ್ಲಿ ತಲೆಕಟ್ಟುಗಳು ಚಿಕ್ಕದಾಗಿ ಗೆರೆಯ ಎರಡೂ ಕಡೆಗೆ ಬಂದಿವೆ. ಕ ಕಾರವನ್ನು ಒಮ್ಮೆಗೇ ಬರೆಯದೆ ಎರಡು ಹಂತಗಳಲ್ಲಿ ಬರೆಯಲಾಗಿದೆ. ಗ ಕಾರದ ತಲೆಕಟ್ಟು ಗ ಕಾರದ ಮೇಲೆ ಸಣ್ಣಗೆರೆ ಬಂದಿದ್ದು ಅದರ ಮೇಲೆ ಇರಿಸಿದೆ. ತ ಕಾರದ ತಳಭಾಗವು ವೃತ್ತಾಕಾರಕ್ಕೆ ತಿರುಗಿದ್ದು ಬಲಭಾಗದಲ್ಲಿ ಒಳಗೆ ಸುರುಳಿ ಸೃಷ್ಟಿಸಿದೆ. ಭ ಮತ್ತು ಚ ಗಳಿಗೆ ಇರುವ ವ್ಯತ್ಯಾಸ ಅಲ್ಪ. ಯ ಕಾರದ ಮುಂಭಾಗದ ಸುರುಳಿ ಚಿಕ್ಕದಾಗಿದ್ದು ಮೇಲಕ್ಕೆ ತಲೆ ಎತ್ತಿಕೊಂಡಂತೆ ಇದೆ. ಶ ಕಾರವು ಗ ಕಾರವನ್ನು ಅನುಸರಿಸಿದೆ. ಸ ಕಾರಕ್ಕೆ ನೀಡಿರುವ ಆ ಕಾರದ ದೀರ್ಘವು ಅದರ ತಲೆಕಟ್ಟಿನಿಂದ ಬಂದಿರದೆ ಅದರ ಪಕ್ಕದ ಗೆರೆಯಿಂದ ಕೆಳಕ್ಕೆ ಇಳಿದಿದೆ.


೧೧ನೆಯ ಶತಮಾನದ ಪೂರ್ವ ಚಾಳುಕ್ಯ ರಾಜ ರಾಜರಾಜನ ಕೋರುಮೆಳ್ಳಿ ಶಾಸನದಲ್ಲಿನ ಅಕ್ಷರಗಳ ಮೇಲಿನ ತಲೆಕಟ್ಟುಗಳು ಗಮನಾರ್ಹವಾದವು. ತಲೆಕಟ್ಟಿನ ಎರಡೂ ಕಡೆಯ ಗೆರೆಗಳು ಮೇಲಕ್ಕೆ ಎತ್ತಿಕೊಂಡಿವೆ. ಅಕ್ಷರಗಳು ಅಡ್ಡಡ್ಡವಾಗಿವೆ. ಕ ಕಾರವು ಸೊನ್ನೆಯ ಮೇಲೆ ಅಡ್ಡ ಗೆರೆ ಬಂದಿದ್ದು, ಅದರ ಮೇಲೆ ತಲೆಕಟ್ಟು ಬಂದಿದೆ. ಇ ಕಾರವೂ ಕೆಳಗಿನ ಸೊನ್ನೆಗಳನ್ನು ಸೇರಿಸಿಕೊಂಡು ಸುರಳಿಯಾಗಿದೆ. ಗ, ಶ ಇವೆರಡೂ ಒಂದೇ ತರಹದ ಬೆಳವಣಿಗೆಯನ್ನು



EI IV p. 356 ದೊನೆಪೂಂಡಿ ಶಾಸನ ದೇ.ಕೊಂ.೭೩

ಹೊಂದಿವೆ. ತ ಕಾರದಲ್ಲಿ ಸುರುಳಿ ಬಿಡಿಸಿಕೊಂಡಿದೆ. ಯ ಕಾರದ ಮುಂಭಾಗದ ಸೊನ್ನೆಯು ಹಿಂದಿನ ಶಾಸನಕ್ಕಿಂತ ಸ್ವಲ್ಪ ದೊಡ್ಡದಾಗಿದೆ. ಣ ಕಾರದ ಎಡಭಾಗದ ಕೆಳಗೆರೆಯು ಮೇಲ್ಭಾಗದಿಂದ ಬಿಡುಗಡೆಯಾಗಿ ಬಳ್ಳಿಯಂತೆ ಕೆಳಕ್ಕೆ ಬಾಗಿದೆ. ಅ, ಆ ಗಳು ಇಲ್ಲಿ ಇನ್ನೊಂದು ರೀತಿಯಲ್ಲಿ ಬಳಕೆಯಾಗಿವೆ. ಐ ಕಾರವು ಎರಡು ವೃತ್ತಗಳನ್ನು ಭೇದಿಸಿದ ಅಡ್ಡಗೆರೆಯನ್ನು ಹೊಂದಿದೆ. ಚ ಕಾರವು ತಲೆಕಟ್ಟಿನಿಂದ ಪ್ರತ್ಯೇಕವಾಗಿದೆ.

ಕ್ರಿ.ಶ.೧೨೧೩ರ ಕಾಕತೀಯರ ಚೇಬ್ರೋಲು ಶಾಸನದಲ್ಲಿ ಕ ಕಾರವೇನೂ ಬದಲಾಗಿಲ್ಲ. ಉ ಕಾರವು ಮಾತ್ರ ಹಿಂದಿನ ರೂಪಕ್ಕಿಂತ ಬೆಳವಣಿಗೆಯನ್ನು ತೋರಿಸಿದ್ದು, ಕೆಳಭಾಗದ ರೇಖೆಯು ಮಧ್ಯದಲ್ಲಿ ಸ್ವಲ್ಪ ಒಳಮುಖಕ್ಕೆ ಬಾಗಿದೆ. ಅಕ್ಷರದ ತಲೆಕಟ್ಟುಗಳು ಬಾಲಚಂದ್ರಾಕೃತಿಗೆ ಬಂದಿವೆ. ಕ ಕಾರದ ರೂಪದಲ್ಲಿ ವ್ಯತ್ಯಾಸವಿಲ್ಲ. ಆದರೆ ಕ್ರಿ.ಶ.೧೩೩೭ರ ನಾಮಯನಾಯಕ ದೊಸೆಪೂಂಡಿ ಶಾಸನದಲ್ಲಿ ತೆಲುಗು ಲಿಪಿಯ ಕೆಲವು ಗಮನಾರ್ಹ ಬದಲಾವಣೆಗಳನ್ನು ತೋರಿಸಿದೆ. ಮುಖ್ಯವಾಗಿ ಕ ಕಾರದಲ್ಲಿ ಈ ಬದಲಾವಣೆ ಕಾಣುತ್ತಿದೆ. ಕೆಳಗಿನ ವೃತ್ತಾಕಾರದಿಂದ ಮುಂದುವರಿದ ಗೆರೆ ಮೇಲಕ್ಕೆ ಬಂದು ಅಡ್ಡಗೆರೆಯ ಎಡಭಾಗವನ್ನು ಸೇರಿಕೊಂಡಿದೆ. ತಲೆಕಟ್ಟು ಅಕ್ಷರದ ಮೇಲೆ ಬಾಲಚಂದ್ರನಂತೆ ಇದೆ. ಅ, ಆ, ಉ ಕಾರಗಳು ಸ್ಥಿರತೆಯತ್ತ ಸಾಗಿವೆ. ತ ಕಾರದ ಕೆಳ ವೃತ್ತಾಕಾರದ ರೇಖೆಗಳು ಒಳಕ್ಕೆ ಸುರುಳಿಯಾಗಿ ಬಾಗಿವೆ. ಅನುಸ್ವಾರಗಳು ಪೂರ್ಣವಾಗಿ ವೃತ್ತಾಕಾರವಾಗಿ ಸಾಲಿನ ಮಧ್ಯೆ ಅಕ್ಷರಗಳಿಗೆ ಸಮನಾಗಿ ಬಂದಿದೆ. ವಿಸರ್ಗಗಳು ಚಿಕ್ಕ ವೃತ್ತಾಕಾರಗಳಾಗಿವೆ. ಡ ಕಾರದ ಒಳಗಿನ ಚುಕ್ಕೆ ಚಿಕ್ಕ ವೃತ್ತಾಕಾರವಾಗಿದೆ. ಪ ಕಾರದ ತಲೆಕಟ್ಟು ಸಹ ಅಕ್ಷರದ ಮೇಲೆ ಪ್ರತ್ಯೇಕವಾಗಿ ಅರ್ಧಚಂದ್ರಾಕಾರವಾಗಿ ಬಂದಿದೆ. ಆದರೆ ಈ ಲಕ್ಷಣಗಳು ಕ್ರಿ.ಶ.೧೩೫೮ರ ಮುಮ್ಮಡಿ ನಾಯಕನ ಶ್ರೀರಂಗಂ ಶಾಸನದಲ್ಲಿ ಕಾಣಬರುವುದಿಲ್ಲ. ಹೀಗಾಗಿ ಈ ಅವಧಿಯು ಸಂಧಿಯ ಅವಧಿಯಾಗಿದೆಯೆನ್ನಬಹುದು.



ಪೆದಕೋಮಟಿವೇಮನ ಫಿರಂಗಿಪುರಂ ಶಾಸನ

ಪೆದಕೋಮಟಿವೇಮನ ಫಿರಂಗಿಪುರಂ ಶಾಸನವು ಈ ದೃಷ್ಟಿಯಿಂದ ಗಮನಾರ್ಹ ಶಾಸನ. ಈ ಶಾಸನದಲ್ಲಿ ತೆಲುಗುಲಿಪಿಯು ವಿಕಾಸವಾಗಿರುವುದನ್ನು ಕಾಣಬಹುದಾಗಿದೆ. ಮುಖ್ಯವಾಗಿ ಕ ಕಾರ ಹಾಗೂ ತಲೆಕಟ್ಟುಗಳು ತೆಲುಗು ಲಿಪಿಯ

ಛಾಯೆಯನ್ನು ತೋರಿಸುತ್ತವೆ. ಕ ಕಾರವು ಇಂದಿನ ರೂಪಕ್ಕೆ ತೀರಾ ಹತ್ತಿರವಾಗಿದೆ. ಎ ಕಾರದ ತಲೆಕಟ್ಟು ಸಹ ಎಡಗಡೆಗೆ ತಿರುಗಿದೆ. ಇಲ್ಲಿಂದ ಮುಂದೆ ತೆಲುಗಿನ ಅನೇಕ ಅಕ್ಷರಗಳು ಬೆಳವಣಿಗೆಯಲ್ಲಿ ಸ್ಥಿರವಾಗುತ್ತಾ ಬಂದವು.

ವಿಜಯನಗರ ಕಾಲದ ಅನೇಕ ತೆಲುಗು ಶಾಸನಗಳಲ್ಲಿ ಕನ್ನಡದ ಛಾಯೆ ಹೆಚ್ಚಿಗೆ ಬಿದ್ದಿದ್ದು, ತೆಲುಗಿನ ಅನೇಕ ಲಕ್ಷಣಗಳು ಕಾಣುವುದಿಲ್ಲ. ಮುಂದೆ ವಿಜಯನಗರವು ಪೆನಗೊಂಡೆಗೆ ಬದಲಾದ ಮೇಲೆ ಮತ್ತೆ ತೆಲುಗು ಲಿಪಿ ಪೂರ್ಣವಿಕಾಸದೊಂದಿಗೆ ಬಳಕೆಯಾಯಿತು. ಇಂದಿಗೂ ಕನ್ನಡ-ತೆಲುಗು ಲಿಪಿಗಳಲ್ಲಿ ವ್ಯತ್ಯಾಸ ಕಡಿಮೆ. ತಲೆಕಟ್ಟು, ಕೆಲವು ಕಾಗುಣಿತಗಳಲ್ಲಿ ಮತ್ತು ಉ ಕಾರ, ಕ ಕಾರಗಳಲ್ಲಿ ಪ್ರಧಾನವಾಗಿ ವ್ಯತ್ಯಾಸ ಕಾಣಬರುತ್ತದೆ.

ಚ, ಠ, ಥ, ಧ ಗಳಿಗೆ ತಲೆಕಟ್ಟು ಬಂದಿರುವುದು, 'ಪ' ಕಾರವು ತಲೆಕಟ್ಟಿನಿಂದ ಬಿಡಿಸಿ ಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ೧೨೧೩-೧೪ ರ ಗಣಪತಿದೇವನ ಕಾಲದ ಚೇಬ್ರೋಲು ಶಾಸನದಲ್ಲಿ ಅಕ್ಷರಗಳ ತಲೆಕಟ್ಟುಗಳು ಮೇಲ್ಮುಖವಾಗಿರುವುದನ್ನು ಗಮನಿಸಬಹುದು. ಹಾಗೆಯೇ ಅಕ್ಷರಗಳು ವೃತ್ತಾಕಾರಕ್ಕೆ ತಿರುಗಿವೆ. ಗ ಕಾರ, ಚ, ಛ ಗಳು ಬದಲಾಗಿವೆ. 'ಕ' ಕಾರ ಬದಲಾಗಿಲ್ಲ. 'ಱ' ಕಾರದ ಬಳಕೆ ಇಲ್ಲ. ಕ್ರಿ.ಶ.೧೪೧೦ರಲ್ಲಿ ಆಂಧ್ರದ ಪ್ರಸಿದ್ಧ ಕವಿ ಶ್ರೀನಾಥನು ಬರೆದ ಪೆದಕೋಮಟಿವೇಮ ಭೂಪಾಲನ ಶಾಸನದಲ್ಲಿ ಕ, ಡ, ತ, ಸ, ಪ, ಫ ಮುಂತಾದವು ಬದಲಾಗಿವೆ. ಅಂದರೆ ಇಂದಿನ ತೆಲುಗು ಲಿಪಿಗೆ ಸಮೀಪವಾಗಿವೆ. ತಲೆಕಟ್ಟುಗಳು ಅರ್ಧವೃತ್ತಾಕಾರವಾಗಿ ಅಕ್ಷರಗಳ ಮೇಲೆ ಇವೆ.

ಹೀಗೆ ರೆಡ್ಡಿರಾಜರ ಕಾಲದಲ್ಲಿ ಆರಂಭವಾದ ಬದಲಾವಣೆ ವಿಜಯನಗರ ಕಾಲದಲ್ಲಿ ಮುಂದುವರಿಯುತ್ತದೆ. ಶ್ರೀ ತಿರುಮಲರಾಮಚಂದ್ರ ಅವರು ಕರ್ನಾಟಕ, ಆಂಧ್ರ, ತಮಿಳುನಾಡಿನಲ್ಲಿ ವಿಜಯನಗರ ಅರಸರು ಹಾಕಿಸಿರುವ ಶಾಸನಗಳೆಲ್ಲಾ ಯಾವುದೇ ಭಾಷೆಯಲ್ಲಿರಲಿ ತೆಲುಗು ಲಿಪಿ ಬಳಸಿದ್ದಾರೆಂದು ಹೇಳಿದ್ದಾರೆ. (ಮನಲಿಪಿ ಪುಟ್ಟು ಪೂರ್ವೋತ್ತರಾಲು. ಪು.೧೪೨) ಆದರೆ ಕರ್ನಾಟಕದಲ್ಲಿ ಕನ್ನಡ ಶಾಸನಗಳನ್ನು ಕನ್ನಡ ಲಿಪಿಯಲ್ಲೇ ಹಾಕಿಸಿರುವುದು ಸ್ಪಷ್ಟವಾಗಿದೆ. ಅಷ್ಟೇ ಅಲ್ಲ ವಿಜಯನಗರ ಆಳ್ವಿಕೆಯಲ್ಲಿ ತೆಲುಗು ಶಾಸನಗಳಿಗೂ ಕನ್ನಡಲಿಪಿ ಬಳಸಲಾಗಿದೆ. ವಾಸ್ತವವಾಗಿ ಆಂಧ್ರದಲ್ಲಿ ಕ್ರಿ.ಶ.೧೨ನೆಯ ಶತಮಾನದವರೆಗೆ ರಚಿತವಾಗಿರುವ ಶಾಸನಗಳ ಅಕ್ಷರಗಳು ಕನ್ನಡ ಲಿಪಿಯೇ ಆಗಿದೆ. ತೆಲುಗು ಲಿಪಿ ಕನ್ನಡ ಲಿಪಿಯ ವಿಕಾಸವೆಂದರೆ ಅತಿಶಯೋಕ್ತಿಯಲ್ಲ.

ತೆಲುಗಿನಲ್ಲಿ ಹೆಚ್ಚುವರಿಯಾಗಿ ಎರಡು ಅಕ್ಷರಗಳಿವೆ. ಅವು ತ್ಸ ಮತ್ತು ಜ್ಜ ಎಂಬುವು ಇವನ್ನು ಸೂಚಿಸಲು ತೆಲುಗಿನಲ್ಲಿ ಚ ಮತ್ತು ಜ ಮೇಲೆ '೨' ಈ ಗುರುತನ್ನು ಮುದ್ರಣದಲ್ಲಿ ಹಾಕುತ್ತಾರೆ. ಕರ್ನಾಟಕದಲ್ಲಿ ಸಿರಗುಪ್ಪ ತಾಲೂಕಿನ ತ್ಸಲ್ಲ ಕೂಡಲೂರು ಎಂಬ ಗ್ರಾಮವಿದ್ದು, ಇದನ್ನು ಚಲ್ಲ ಕೂಡಲೂರು ಎಂದು ಉಚ್ಚರಿಸುತ್ತಾರೆ. ಹಾಗೆಯೇ ತ್ಸಾಕಲವಾಡು ಎಂಬುದನ್ನು ಈ ಚಾಕಲವಾಡು ಎಂದು ಉತ್ತರಿಸುತ್ತಾರೆ. ೧೭ನೆಯ ಶತಮಾನದಲ್ಲಿದ್ದ ಕಾಕಸೂರಿ ಅಪ್ಪ ಕವಿ 'ದಂತ್ಯ ಚಜ ಗುರುರಲಲಕು ದಸರು ಬೊಟ್ಲು' ಅಂದರೆ ದಂತ್ಯ ಚ = ತ್ಸ ಮತ್ತು ಜ = ಜ್ಜ ಬಂಡಿ ರ = ಱ, ದೊಡ್ಡ ಳ = ೞ ಇವುಗಳಿಗೆ ಚುಕ್ಕೆ ಇಡಬೇಕೆಂದು ಹೇಳಿದ್ದಾನೆ. ತೆಲುಗು ವಿದ್ವಾಂಸರು ಅಪ್ಪಕವಿಯೇ ಇದರ ಸೃಷ್ಟಿಕರ್ತನೆಂದು ಊಹಿಸುತ್ತಾರೆ. ಇಂತಹ ಅಕ್ಷರಗಳೇ

ಇಲ್ಲವೆಂದ್ದಿದ್ದರೂ, ಶಾಸನಗಳಲ್ಲಿ ಇದಕ್ಕೆ ಉದಾಹರಣೆ ದೊರಕದಿದ್ದರೂ ಅಪ್ಪಕವಿ ಬಹುಶಃ ಪರ್ಶಿಯಾ ಮತ್ತು ಅರೇಬಿಯಾ ಶಾಸನಗಳ ಅಕ್ಷರಗಳಲ್ಲಿ ಬಳಸುವ ಚುಕ್ಕೆ, ಗೆರೆಗಳನ್ನು ಗಮನಿಸಿ ಹೀಗೆ ಹೇಳಿರಬೇಕು ಮತ್ತು ಈ ಪದಗಳು ಅಪರೂಪಕ್ಕೆ ಬಳಕೆಯಾಗುವಂತಹವು. ಮುದ್ರಿತ ಪುಸ್ತಕಗಳಲ್ಲೂ ಚಾರ್ಲ್ಸ್ ಫಿಲಿಪ್ ಬ್ರೌನ್ ಇದನ್ನು ಗುರುತಿಸುತ್ತಾನೆ. ಹಾಗೆಯೇ ೧೮೩೬ರಲ್ಲಿ ರಾವಿಪಾಟಿ ಗುರುಮೂರ್ತಿಶಾಸ್ತ್ರಿ ಬರೆದ ತೆಲುಗು ವ್ಯಾಕರಣ ಪುಸ್ತಕದಲ್ಲಿ ಈ ಅಕ್ಷರಗಳನ್ನು ಗುರುತಿಸಿರುತ್ತಾನೆ. ಇದರಲ್ಲಿ ಚ^೧ ಚ^೨ ಜ^೧ ಜ^೨ ಎಂದು ಗುರುತಿಸಿ ಎರಡು ಅಂಕೆ ಅಕ್ಷರದ ಮೇಲಿರುವ ಲಿಪಿಯನ್ನು ಕ್ರಮವಾಗಿ ತ್ಸ, ಜ್ಜ ಎಂದು ತಿಳಿಯಬೇಕಾಗುತ್ತದೆ. ಈಗ ಈ ಲಿಪಿಗಳು ಬಳಕೆಯಲ್ಲಿಲ್ಲ.

ಕನ್ನಡ ಮತ್ತು ತೆಲುಗು ಲಿಪಿಗಳಲ್ಲಿ ಈಗ ವ್ಯತ್ಯಾಸವನ್ನು ಕಾಣುವವರು ಕ, ಚ, ಛ, ಹ ಅಕ್ಷರಗಳಲ್ಲಿ ಮತ್ತು ತಲೆಕಟ್ಟುಗಳಲ್ಲಿ ಮಾತ್ರ ವ್ಯತ್ಯಾಸವಿದೆಯೆಂದು ತಿಳಿದಿರುತ್ತಾರೆ. ಆದರೆ ಕಾಗುಣಿತಗಳಲ್ಲಿಯೂ ವ್ಯತ್ಯಾಸವಿದೆ. ತೆಲುಗಿನಲ್ಲಿ ಈ ಕಾರದ ಗುಣಿಸು ಶಾಸನಗಳಲ್ಲಿರುವಂತೆ ಅಕ್ಷರದ ತಲೆಕಟ್ಟಿನ ಮೇಲೆಯೇ ಇದೆ. ಎ ಕಾರ ಮತ್ತು ಐ ಕಾರಗಳು ಸಹ ಶಾಸನ ರೀತಿಯ ಆರಂಭಿಕ ರೀತಿಯನ್ನು ನೆನಪಿಸುತ್ತವೆ. ಕನ್ನಡದಲ್ಲಿ ಇದು ವ್ಯತ್ಯಾಸವಾಗಿದೆ. ಏ ಕಾರ ಮತ್ತು ಓ ಕಾರದ ಚಿಹ್ನೆಗಳು ತಲೆಕಟ್ಟಿನ ಮೇಲೆಯೇ ಬರುತ್ತವೆ.

ಅರ್ಧ ಸೊನ್ನೆಯ ಬಳಕೆಯೂ ಇದೆ. ಪದವನ್ನು ತೇಲಿಸಿ ಉಚ್ಚಾರ ಮಾಡುವಲ್ಲಿ ಈ ಚಿಹ್ನೆ ತೋರಿಸಿರುತ್ತಾರೆ. ವಾಂಡು ವಾ<ಡು ನಾಂಟಿ>ನಾ<ಟಿ ಇತ್ಯಾದಿ. ಹೀಗೆ ಬರೆಯುವಾಗ ವಾಅಡು, ನಾಅಟಿ ಎಂದು ಬರೆಯುತ್ತಾರೆ. ಶಿಥಿಲದಿತ್ವ ತೋರಿಸಲು ಇದನ್ನೂ ತೋರಿಸುತ್ತಾರೆ. ಈ ರೀತಿಯ ಚಿಹ್ನೆಯ ಬಳಕೆ ಶಾಸನಗಳಲ್ಲಿ ಕಾಣುವುದಿಲ್ಲ ಆದರೆ ಪೂರ್ಣ ಸೊನ್ನೆಯನ್ನು (ಅನುಸ್ವಾರ) ಬಳಸಿದ್ದಾರೆ. ಉದಾ.ಕ್ರಿಶ.೧೧೩೦ರ ಶಾಸನದಲ್ಲಿನ ಕಂದಪದ್ಯದ ಸಾಲನ್ನು ಗಮನಿಸಿದಾಗ '... ಚಾರು ಚತುದ್ವಾನ್ವಯಾಬ್ದಿ ಚಂದ್ರುಣ್ಡುಗುಲನಿ' ಈ ಸಾಲಿನಲ್ಲಿ ಚಂದ್ರುಣ್ಡು ಎಂಬ ಶಬ್ದದಲ್ಲಿನ ಡ ಕಾರದ ಒತ್ತಕ್ಷರವನ್ನು ಶಿಥಿಲವಾಗಿ ಪರಿಗಣಿಸಿದಲ್ಲಿ ಮಾತ್ರ ಛಂದಸ್ಸು ಸರಿಹೊಂದುತ್ತದೆ. ಇಂತಹ ಅನೇಕ ಉದಾಹರಣೆಗಳನ್ನು ತೆಲುಗು ಶಾಸನ ಮತ್ತು ತೆಲುಗು ಸಾಹಿತ್ಯದಲ್ಲಿ ಗಮನಿಸಬಹುದು. ಇದು ಅರ್ಧ ಸೊನ್ನೆಯಾದದ್ದು ಮಾತ್ರ ತಿರುಮಲ ರಾಮಚಂದ್ರ ಅವರ

అ ఆ ఇ ఈ ఉ ఊ ఋ ఏ ఐ ఓ ఔ
క ఖ గ ఘ ఙ చ ఛ జ ఝ ఞ
ట ఠ డ ఢ ణ త థ ద ధ న
ప ఫ బ భ మ
య ర ల వ శ ష స హ ళ

ತೆಲುಗು ವರ್ಣಮಾಲೆ

ಪ್ರಕಾರ ಹಿಂದೂಸ್ತಾನಿ ಮತ್ತು ಮರಾಠಿ ಲಿಪಿಗಳಲ್ಲಿನ ತೇಲಿಸಿ ಉಚ್ಚರಿಸುವ ಅರ್ಧಚಂದ್ರಾಕಾರದ ಚಿಹ್ನೆಯ ಪ್ರಭಾವದಿಂದ ಬಂದಿದೆಯೆಂದಿರುತ್ತಾರೆ. ಉದಾ. 'ಮೇಂ ಜಾತಾ' ಎಂಬುದನ್ನು ಉಚ್ಚರಿಸುವಾಗ 'ಮೇ ಜಾತಾ' ಎಂದು ಹೇಳುವಂತೆ. (ಮನಲಿಪಿ ಪುಟ್ಟು ಪೂರ್ವೋತ್ತರಾಲು. ಪು.೧೬೮-೧೭೧) ದಿನಿತ್ಯದ ಬಳಕೆಯಲ್ಲಿ ಇದುಬಳಕೆ ಇಲ್ಲ.

ಈಗಿನ ತೆಲುಗು ವರ್ಣಮಾಲೆಯಲ್ಲಿ ೫೩ ಅಕ್ಷರಗಳಿವೆ. ಸ್ವರಗಳು ೧೫ – ಅ ಆ ಇ ಈ ಉ ಊ ಋ ೠ ಌ ಎ ಏ ಐ ಒ ಓ ಔ, ಯೋಗವಾಹಕಗಳು ೨ – ಅಂ, ಅಃ. ವ್ಯಂಜನ ೨೫. ಕ ಖ ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ ಯ ರ ಲ ವ ಶ ಷ ಸ ಹ ಳ ಕ್ಷ ಱ. ಱ ಕಾರದ ಬಳಕೆ ಕಡಿಮೆಯಾಗಿದೆ. ಸಾಮಾನ್ಯ ಬರವಣಿಗೆಯಲ್ಲಿ ಇಲ್ಲವೆನ್ನಬಹುದು. ಕ್ರಿ.ಶ.೧೮೩೬ರಲ್ಲಿ ಪ್ರಕಟವಾದ ರಾವಿಪಾಟಿ ಗುರುಮೂರ್ತಿಶಾಸ್ತ್ರಿ ಬರೆದ ತೆಲುಗು ವ್ಯಾಕರಣ ಗ್ರಂಥದ ಅಕ್ಷರ ಪ್ರಕರಣದಲ್ಲಿ ತೆಲುಗಿನಲ್ಲಿ ೫೬ ಅಕ್ಷರಗಳನ್ನು ಹೆಸರಿಸಿದೆ.


ಭಾರತದಲ್ಲಿ ಪರ್ಷಿಯಾ ಮತ್ತು ಅರಾಬಿಯಾ ಮತ್ತು ಉರ್ದು ಶಾಸನಗಳು

ಕ್ರಿ.ಶ-೫೧೨ರಲ್ಲಿ ಜಬಾದ್ ಎಂಬಲ್ಲಿ ದೊರೆತ ದ್ವಿಭಾಷಾ ಶಾಸನವೇ ಅರಬ್ಬೀ ಲಿಪಿಯ ಪ್ರಾಚೀನ ಶಾಸನವಾಗಿದೆ. ಆದರೆ ಭಾರತದಲ್ಲಿ ಇದು ಬಳಕೆಗೆ ಬಂದದ್ದು ಮುಸ್ಲಿಂ ಅರಸರು ಭಾರತದ ಮೇಲೆ ಧಾಳಿ ಮಾಡಿದ ನಂತರ. ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಕುರಾನನ್ನು ಹಿಡಿದುಕೊಂಡು ಬಂದ ಈ ಧಾಳಿಕಾರರು ಧರ್ಮದ ಜೊತೆಗೆ ಅರಬ್ಬೀ, ಪರ್ಷಿಯಾ ಶಾಸನಗಳನ್ನು ಇಲ್ಲಿ ಬರೆಸಿದರು. ಇವನ್ನು ವಿದೇಶಿ ಮೂಲದ ಲಿಪಿಕಾರರು ಬರೆದಿರುವುದರಿಂದ ಸಹಜವಾಗಿ ಅವುಗಳಲ್ಲಿ ಇದ್ದಿರಬಹುದಾದ ಎಲ್ಲಾ ರೀತಿಯ ಅಕ್ಷರ ವಿನ್ಯಾಸಗಳನ್ನು ಇಲ್ಲಿ ಬಳಸಲಾಗಿದೆ. ಅರಬ್ಬೀಲಿಪಿ ಮುಂದೆ ನಸ್ಖ್ ಮತ್ತು ಕುಫಿಕ್ ಎಂಬ ಎರಡು ವಿಭಾಗಗಳನ್ನು ಏಕಕಾಲದಲ್ಲಿ ಪಡೆಯಿತು.

ನಸ್ಖ್ ಎಂಬುದು ಮೆಕ್ಕಾ-ಮದೀನದಲ್ಲಿ ಬಳಸುತ್ತಿದ್ದ ಮುಖ್ಯ ರೀತಿ. ಆರಂಭದಲ್ಲಿ ಇದನ್ನು ಪಪ್ಯೆರಸ್ ಎಲೆಗಳ ಮೇಲೆ ಬರೆಯಲಾಗುತ್ತಿತ್ತು. ಅಲ್ಲದೆ ಇದನ್ನು ಮುಸ್ಲಿಂ ಸುಲ್ತಾನರು ತಮ್ಮ ಆಡಳಿತದಲ್ಲಿ ಬಳಸಿದರಿಂದ ಇದು ಇಂದಿನ ಅರಾಬಿಯಾ ಲಿಪಿಗೆ ಮೂಲವಾಗಿದೆ. ಇದರಲ್ಲಿ ಬಾಗುರೇಖೆಗಳು ಜಾಸ್ತಿ ಅಲ್ಲದೆ ಗೆರೆಗಳನ್ನು ಕಾಣಬಹುದು. ಇದರಿಂದ ತಲಿಖ್, ರಿಕ್ವಾ, ದಿವಾನಿ, ಥುಲುತ್, ಸ್ಯಕತ್ ಮುಂತಾದ ಲಿಪಿಗಳು ಹುಟ್ಟಿವೆ.

ಕುಫಿಕ್ ಲಿಪಿ ಎಂಬುದು ಮೆಸಪೊಟೋಮಿಯಾದ ಕುಫ ಎಂಬಲ್ಲಿ ರೂಪಗೊಂಡ ಲಿಪಿ. ಅರೇಬಿಯಾ ಲಿಪಿಯನ್ನು ಕ್ರಿ.ಶ ೭ನೆಯ ಶತಮಾನದಲ್ಲಿ ಕುಫ ಮತ್ತು ಬಸ್ರಾ ಎಂಬಲ್ಲಿ ಅಲಂಕಾರಿಕವಾಗಿ ಬಳಸಲಾಗಿದೆ. ಈ ಲಿಪಿಗಳನ್ನು ಶಿಲೆಗಳ ಮೇಲೆ ಲೋಹಗಳ ಮೇಲೆ, ಬಣ್ಣದಲ್ಲಿ ಅಲಂಕಾರಿಕವಾಗಿ ಬರೆಯಲಾಗಿದೆ. ಮಸೀದಿಗಳ ಮತ್ತು ಇತರೆ ವಸ್ತುಗಳ ಮೇಲೆ, ಕುರಾನಿನ ಶ್ಲೋಕಗಳಲ್ಲಿ, ನಾಣ್ಯಗಳ ಮೇಲೆ ಮುಖ್ಯವಾಗಿ ಈ ಬರವಣಿಗೆ ಕಾಣುತ್ತದೆ. ಇದರ ಅಕ್ಷರದ ಗೆರೆಗಳು ದಪ್ಪವಾಗಿದ್ದು ನೇರವಾದ ಮೇಲಕ್ಕೆದ್ದ ಗೆರೆಗಳನ್ನು ಹೊಂದಿದೆ.

ಭಾರತದಲ್ಲಿ ಬಳಕೆಯಲ್ಲಿರುವ ಉರ್ದು ಲಿಪಿಯು ಅರಾಬಿಯ ಲಿಪಿಯಿಂದ ಉದಿಸಿದ್ದು ಇದರಲ್ಲಿ ಪ, ಚ, ಜ್ಞ ಮತ್ತು ಗ ಅಕ್ಷರಗಳನ್ನು ಹೆಚ್ಚುವರಿಯಾಗಿ ತೆಗೆದುಕೊಳ್ಳಲಾಗಿದೆ.




ಅಮೀನ್‌ದರ್ಗಾ ಶಾಸನ ಬಿಜಾಪುರ
EMi XIX p. 87

ಈ ಲಿಪಿಗಳಲ್ಲದೆ ಇನ್ನೆರಡು ರೀತಿಯ ಬರೆವಣಿಗೆಗಳೂ ಪ್ರಚಲಿತದಲ್ಲಿವೆ. ಈ ಹೆಸರುಗಳು ಬರೆವಣಿಗೆಯನ್ನು ಬರೆದಿರುವ ಮಾಧ್ಯಮಗಳಿಂದ ಬಂದಿದೆ. ಈ ಹೆಸರುಗಳೆಂದರೆ ತುಲ್ಥ್ ಮತ್ತು ತೊಗ್ರ ಎಂಬುದು. ಚಿತ್ರದ ಒಳಗೆ ಬರೆವಣಿಗೆ ಬರೆದಿದ್ದರೆ ಅದನ್ನು ತುಲ್ಥ್ ಎಂದು ಕರೆಯಲಾಗುತ್ತದೆ. ಬಿಜಾಪುರದ ಅಮೀನ್ ದರ್ಗಾದ ಶಾಸನವನ್ನು ಇದಕ್ಕೆ ಇಲ್ಲಿ ಉದಾಹರಣೆಯಾಗಿ ನೀಡಲಾಗಿದೆ. ಪೂಜಾಸ್ಥಳಗಳಲ್ಲಿ ಮಾನವ ಚಿತ್ರಗಳನ್ನು ಬರೆಯಲು ನಿಷೇಧ ಇರುವುದರಿಂದ ಈ ರೀತಿಯ ಬರೆವಣಿಗೆ ಬೆಳೆಯಿತು. ಇದು ಚಿತ್ರದಲ್ಲಿ ದೊರೆಯುವ ಸ್ಥಳವನ್ನು ಅನುಸರಿಸಿ ಬರೆಯಬೇಕಾಗುತ್ತದೆ.

ಕಲಾತ್ಮಕ ಬರೆವಣಿಗೆ (ಕ್ಯಾಲಿಗ್ರಫಿ)


ಲೇಖನಿಯನ್ನು ಬಳಸಿ ಅಥವಾ ಕುಂಚದಿಂದ ಗುಂಡಾಗಿ ಅಕ್ಷರಗಳನ್ನು ಬರೆಯುವ ಕಲೆಯನ್ನು ಆಂಗ್ಲ ಭಾಷೆಯಲ್ಲಿ 'ಕ್ಯಾಲಿಗ್ರಫಿ' ಎಂದು ಕರೆಯುತ್ತಾರೆ. ಈ ಬಗೆಯ ಕಲೆಯು ಏಷಿಯಾದ ಪೂರ್ವರಾಷ್ಟ್ರಗಳಾದ ಚೀನಾ, ಜಪಾನ್, ಕೊರಿಯಾ, ಭಾರತ ಮತ್ತು ಅರಾಬಿಯಾ ಲಿಪಿಯ ಬಳಕೆಯ ಪ್ರದೇಶಗಳಲ್ಲಿ ಹಿಂದಿನಿಂದಲೂ ಕಾಣಬರುತ್ತದೆ. ಈ ಬಗೆಯ ಬರೆವಣಿಗೆಯನ್ನು ಬರೆಯುವಲ್ಲಿ ಉತ್ತಮವಾದ ಬರೆವಣಿಗೆಯ ಸಾಧನಗಳು ಅತ್ಯವಶ್ಯಕ. ಅರಾಬಿಯಾ ಲಿಪಿಯಲ್ಲಿ ಕುಫಿಕ್ ಲಿಪಿಯು ಈ ಬಗೆಯದು. ಶಿಲೆಗಳ ಮೇಲೆ ಮೂಡಿರುವ ಈ ಅಕ್ಷರಗಳು ಕಲಾಕಾರನ ಕಲಾವಂತಿಕೆಗೆ ಸಾಕ್ಷಿ. ಹಾಗೆಯೇ ಭಾರತದಲ್ಲಿ ಕುಟಿಲ ಮಾದರಿ ಶಾಸನಗಳು, ಕರ್ನಾಟಕದಲ್ಲಿ ಹೊಯ್ಸಳರ, ಕಲ್ಯಾಣ ಚಾಳುಕ್ಯರ ಅನೇಕ ಶಿಲಾಶಾಸನಗಳಲ್ಲಿ, ರಾಷ್ಟ್ರಕೂಟರ ಕಾಲದ ಅನೇಕ ತಾಮ್ರಶಾಸನಗಳಲ್ಲಿ ಅಲಂಕಾರಿಕ ಲಿಪಿಯನ್ನು ಕಾಣಬಹುದಾಗಿದೆ. ಯೂರೋಪ್ ದೇಶಗಳಲ್ಲಿಯೂ ಈ ಬಗೆಯ ಬರೆವಣಿಗೆಯು ೧೬ನೆಯ ಶತಮಾನದಿಂದ ಬಳಕೆಗೆ ಹೆಚ್ಚಾಗಿ ಬಂತು. ಕರ್ನಾಟಕದಲ್ಲಿ ಹೊಯ್ಸಳರ ಕಾಲದ ನಂತರ ಕನ್ನಡ ಲಿಪಿಯ ಸುಂದರ ಬರೆವಣಿಗೆ ಕಾಣೆಯಾಯಿತು. ಮೋಡಿ ಬಳಕೆಗೆ ಬಂದ ಮೇಲಂತೂ ಈ ಬಗೆಯ ಬರೆವಣಿಗೆ ಪೂರ್ಣವಾಗಿ ಅವಸಾನಗೊಂಡಿತು.



ಸಿ. ಶಿ.ಮೂರ್ತಿ

EI IV. p. 208

ಕುಟಿಲಲಿಪಿಯ ಶಾಸನ



ಕೃಪೆ: ಬಿ.ಆರ್. ಭಾರತಿ.

ಶ್ರವಣಬೆಳಗೊಳದ ಹೊಯ್ಸಳರ ಕಾಲದ ಅಲಂಕಾರಿಕ ಶಾಸನಗಳು

ಮೋಡಿ ಲಿಪಿ

ಮೋಡಿ ಬರೆವಣಿಗೆಯ ಹರವು ದೆಹಲಿಯಿಂದ ತಂಜಾವೂರಿನ ವರೆಗೆ ಇತ್ತು. ಕ್ರಿ.ಶ.೧೫೯೦ರ ಬಿಜಾಪುರ ಸುಲ್ತಾನನ ಕಾಲದಲ್ಲಿ ಈ ಲಿಪಿ ಬಳಕೆಯಾಗಿದೆ. ಮರಾಠ ಅರಸರ ಕಾಲದಲ್ಲಿ ಇದು ಹೆಚ್ಚಾಗಿ ಬಳಕೆಯಾಯಿತು. ಭಾರತಕ್ಕೆ ಬಂದ ಮಿಷಿನರಿಗಳೂ ಈ ಲಿಪಿಯನ್ನು ಕಲಿತಿದ್ದರು. ಮೋಡಿ ಲಿಪಿಯು ವಕ್ರರೇಖೆಯನ್ನು ಹೊಂದಿದೆ. ವಾಕ್ಯ ಪೂರ್ಣವಾದ ಬಗ್ಗೆ ಯಾವ ಸೂಚನೆಯೂ ಇಲ್ಲ. ಅನೇಕ ವೇಳೆ ಪದಗಳು ಪುನರಾವರ್ತನೆಯಾದಲ್ಲಿ ಆ ಪದಗಳ ಸಂಕ್ಷಿಪ್ತರೂಪವನ್ನು ಬಳಸಿದ್ದಾರೆ. ಶಿವಾಜಿ ಕಾಲದ ಮೋಡಿ ಓದಲು ಕಷ್ಟ. ಇದಕ್ಕೆ ಕಾರಣ ಪರ್ಷಿಯಾ ಪದಗಳು ಹೆಚ್ಚಿಗೆ ಇರುವುದು. ಬರೆವಣಿಗೆ ಶೀಘ್ರವಾಗಿ ಬರೆಯಲು ಈ ರೀತಿ ಬರೆದರು. ಕನ್ನಡದ ಮೋಡಿ ಲಿಪಿ ಈ ಪೇಶ್ವಾಯಿಗಳಿಂದಲೇ ಬಂದದ್ದು. ಮೈಸೂರು ರಾಜ್ಯವನ್ನು ಹೈದರಾಲಿ ವಶಪಡಿಸಿಕೊಂಡ ಮೇಲೆ ಪೂರ್ಣಯ್ಯ ದಿವಾನನಾದ. ಇವನು ಮರಾಠಿ ಬ್ರಾಹ್ಮಣ. ಇವನ ಜೊತೆಯಲ್ಲಿ ಅನೇಕ ಮರಾಠಿ ಕಾರಕೂನರು ಮೈಸೂರು ಆಸ್ಥಾನ ಸೇರಿದರು. ಈ ಅವಧಿಯಲ್ಲಿ ಇಲ್ಲಿ ಕನ್ನಡ ಮೋಡಿ ಹೆಚ್ಚಿಗೆ ಬಳಕೆಯಾಯಿತು. ಟೀಪು ಸತ್ತ ಮೇಲೆಯೂ ಈ ಮರಾಠಿ ಕಾರಕೂನರು ಮೈಸೂರು ಆಸ್ಥಾನದಲ್ಲೇ ಇದ್ದು ಕನ್ನಡ ಲಿಪಿಗೆ ಈ ಲಿಪಿಯನ್ನು ಬಳಸಿರುತ್ತಾರೆ. ಮರಾಠಿ ಮೋಡಿಯು ನಾಗರೀ ಲಿಪಿಯ ಹರಡುವಿಕೆಯಿಂದ ಅವಸಾನ ಹೊಂದಿತು. ಕನ್ನಡ ಮೋಡಿಯು ಮುದ್ರಣ ಜನಪ್ರಿಯವಾದಮೇಲೆ ಅವಸಾನ ಹೊಂದಿತು.

ಅಧ್ಯಾಯ - ೬

ಅಂಕೆಗಳು

ಮಾನವ ತನಗೆ ಬುದ್ಧಿ ಬಂದು ವ್ಯವಹಾರಕ್ಕೆ ಇಳಿದಾಗ ಲೆಕ್ಕದ ಆರಂಭವಾಯ್ತು. ನೆನಪು ಸ್ವಲ್ಪ ಕಾಲ ಮಾತ್ರ ಇರುವುದರಿಂದ ಲೆಕ್ಕವನ್ನು ಕಾಯ್ದಿಡಲು ಏನಾದರೂ ಒಂದು ಮಾಧ್ಯಮ ಬೇಕಾಗಿತ್ತು. ಅನಕ್ಷರಸ್ತ ಇದಕ್ಕಾಗಿ ಕಂಡುಕೊಂಡ ಸಂಜ್ಞೆಗಳೇ ಗೆರೆಗಳು. ಭಾರತದಲ್ಲಿ ಅನಕ್ಷರಸ್ತ ಮಹಿಳೆಯರು ಹಾಲಿನ ಲೆಕ್ಕ, ಇನ್ನಿತರ ಲೆಕ್ಕಗಳನ್ನು ಗೋಡೆಯ ಮೇಲೆ ಅಥವಾ ಅನುಕೂಲವಾದ ಸ್ಥಳದಲ್ಲಿ ಮಸಿಯಿಂದ ಅಥವಾ ಸುಣ್ಣದಿಂದ ಬೆರಳಿನಲ್ಲಿ ಅದ್ದಿ ಸುಮಾರು ಎರಡು ಸೆಂಟಿಮೀಟರ್ ಉದ್ದದ ಗೆರೆಗಳನ್ನು ಎಳೆದಿರುವುದನ್ನು ಅಥವಾ ಎಳೆಯುತ್ತಿದ್ದುದನ್ನು ಕಂಡಿರಬಹುದು. ಶಿಲ್ಪಿಗಳು ತಾವು ಕಟ್ಟಡಗಳನ್ನು ಕಟ್ಟುವಾಗ ತಾವು ಕೆಲಸ ಮಾಡಿದ ದಿನಗಳನ್ನು ದೇವಾಲಯದ ಬಳಿಯ ಕಲ್ಲಿನ ಮೇಲೆ ನೇರವಾದ, ಉದ್ದಕ್ಕೆ ಸಾಲು ಸಾಲು ಗೆರೆಗಳನ್ನು ಕೆತ್ತಿರುವುದನ್ನು ಶ್ರವಣಬೆಳಗೊಳ, ಹಂಪೆ, ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಾಲಯ ಮುಂತಾದ ಕಡೆಗಳಲ್ಲಿ ಕಾಣಬಹುದು. ಇನ್ನು ಕೆಲವು ಕಡೆ ಹುಣಸೆ ಬೀಜಗಳನ್ನು ಅಥವಾ ಸಣ್ಣ ಕಲ್ಲುಗಳನ್ನು ಒಂದೊಂದನ್ನೇ ಸೇರಿಸುತ್ತಾ ನಿರ್ದಿಷ್ಟ ದಿನದಂದು ಅಥವಾ ನಿರ್ದಿಷ್ಟ ಸಂಖ್ಯೆ ಮುಗಿದಿದೆ ಎಂದ ಕೂಡಲೇ ನಿರ್ದಿಷ್ಟ ಲೆಕ್ಕವನ್ನು ಪಡೆಯುತ್ತಾರೆ. ಈ ಎಲ್ಲಾ ಉದಾಹರಣೆಗಳು ಅನಕ್ಷರಸ್ಥವಾಗಿವೆ. ಕೆಲವೊಮ್ಮೆ ಈ ಎಣಿಕೆಯನ್ನು ಅಕ್ಷರಸ್ಥರೂ ಬಳಸುವುದುಂಟು. ಅಕ್ಷರದ ವಿಕಾಸವಾಗಿ ಅಂಕೆಗಳು ಬೆಳೆದ ಮೇಲೂ ಇವರು ಹಿಡಿದಿರುವ ಈ ಮಾಧ್ಯಮವು ಹಿಂದಿನಿಂದಲೂ ಇದ್ದಿರಬಹುದಾದ ಲೆಕ್ಕಚಾರದ ಬಗೆಯನ್ನು ನೆನಪಿಸುತ್ತದೆ. ಜಪಸರ, ಗಳಿಗೆಬಟ್ಟಲುಗಳು ಇಂತಹವೇ.

ಈಗ ಎಲ್ಲಾ ಲಿಪಿಗಳಲ್ಲೂ ಅಂಕೆಗಳು ಬಳಕೆಯಾಗುತ್ತಿವೆ. ಈ ಅಂಕೆಗಳು ಹೇಗೆ ಉದಿಸಿದವು ಎಂಬುದು ಮುಂದಿರುವ ಪ್ರಶ್ನೆ. ಆದಿ ಮಾನವ ಶಿಲಾಯುಗದ ಅವಧಿಯಲ್ಲಿಯೇ ಗುಹೆಗಳಲ್ಲಿ ಚಿತ್ರಗಳನ್ನು ಬರೆದಿರುವುದು ಅನೇಕ ಕಡೆ ಬೆಳಕಿಗೆ ಬಂದಿದೆ. ಆ ಚಿತ್ರಗಳಲ್ಲಿ ಅಂಕೆಗಳೆಂದು ನೇರವಾಗಿ ಗುರುತಿಸಬಹುದಾದ ಚಿಹ್ನೆಗಳಲ್ಲದಿದ್ದರೂ ಕೈಹಿಡಿದಿರುವ ೪-೫ ಜನರನ್ನು ಬಿಡಿಸುವ ಮೂಲಕ ಬೇಟೆಯಲ್ಲಿ ಪಾಲ್ಗೊಂಡ ಜನರ ಸಂಖ್ಯೆಯನ್ನು ತಿಳಿಸುವ ಮೂಲಕ ಅವರ ಸಂಖ್ಯೆಯನ್ನು ತೋರಿಸುತ್ತಿರಬೇಕು. ಕೆಲವು ಅರ್ಥೈಸಲಾಗದ ಚಿಹ್ನೆಗಳು ಇದ್ದು ಇವು ಅಂಕೆಗಳಾಗಿರಬಹುದು.


ಎಲ್ಲ ನಾಗರೀಕತೆಗಳ ಬರೆವಣಿಗೆಯಲ್ಲಿ ಆರಂಭಿಕ ಅಂಕೆಗಳನ್ನು ತೋರಿಸುವಲ್ಲಿ ಗೆರೆಗಳನ್ನು ಪ್ರಧಾನವಾಗಿ ಬಳಸಲಾಗಿದೆ. ಆ ಗೆರೆಗಳು ಉದ್ದುದ್ದವಾಗಿ ಅಥವಾ ಅಡ್ಡಡ್ಡವಾಗಿರಬಹುದು.

ಉದಾಹರಣೆಗೆ ಒಂದು ಎಂಬ ಅಂಕೆಯನ್ನು ಎಲ್ಲ ನಾಗರೀಕತೆಗಳಲ್ಲಿ ಪ್ರಪಂಚದಾದ್ಯಂತ ಉದ್ದವಾದ ಗೆರೆಯನ್ನು ಎಳೆಯುವ ಮೂಲಕ ತೋರಿಸಿರುತ್ತಾರೆ.

ಈಜಿಪ್ಷಿಯನ್ನರು ಚಿತ್ರಗಳ ಚಿಹ್ನೆಗಳನ್ನು ಅಂಕೆಗಳಿಗೆ ಬಳಸುತ್ತಿದ್ದು, ಅವು ದಶಾಂಶ ಪದ್ಧತಿಯಲ್ಲಿದ್ದವು. ಒಂದರಿಂದ ಒಂಬತ್ತರವರೆಗೆ ಗೆರೆಗಳನ್ನು ಎಳೆಯುವುದರ ಮೂಲಕ ಅಂಕೆಗಳನ್ನು ತೋರಿಸಿರುತ್ತಾರೆ. ಅಲ್ಲಿಂದ ಮುಂದೆ ೧೦ನ್ನು ಹೇಳಲು ಹಿಮ್ಮಡಿ ಚಿತ್ರವನ್ನೂ, ೨೦ಕ್ಕೆ ಎರಡು ಹಿಮ್ಮಡಿ ಚಿತ್ರವನ್ನು, ೬೦ಕ್ಕೆ ಸುರುಳಿಯನ್ನೂ, ೧೦೦ನ್ನು ಹೇಳಲು ಸುತ್ತಿದ ಹಗ್ಗವನ್ನೂ, ೧೦೦೦೦ವನ್ನು ಹೇಳಲು ಕಮಲದ ಹೂವನ್ನೂ ತೋರಿಸಿರುತ್ತಾರೆ. ಬೀಜಗಣಿತದ ಚಿಹ್ನೆಗಳಾದ ೧೦^{೪}ನ್ನು ಸೂಚಿಸಲು ಸೂಚಿಬೆರಳನ್ನೂ ೧೦^{೫}ನ್ನು ಸೂಚಿಸಲು ತಾಡಪಾಲನ್ನೂ ೧೦^{೬}ನ್ನು ಸೂಚಿಸಲು ಭೂಮಿಯನ್ನು ಹೊತ್ತ ದೇವರ ಚಿತ್ರವನ್ನೂ ಚಿತ್ರಿಸಿರುತ್ತಾರೆ. ತಮಗೆ ಬೇಕಾದ ಅಂಕಗಳನ್ನು ಪಡೆಯಲು ಬೇರೆ ಬೇರೆ ಚಿಹ್ನೆಗಳನ್ನು ಸೇರಿಸುವ ತಂತ್ರವನ್ನು ಅರಿತಿದ್ದರು. ಉದಾ. ೧೨೫೪೩ ಎಂಬ ಅಂಕೆಯನ್ನು ಬರೆಯಲು ೧೦,೦೦೦+೨೦೦೦+೫೦೦+೪೦+೩ ಎಂದು ಬಿಡಿ ಬಿಡಿಯಾಗಿ ಬರೆದು ಸೇರಿಸುತ್ತಿದ್ದರು. ಚಿಹ್ನೆಯ(ಗೆ) ಸ್ಥಾನ ಮುಖ್ಯವಿರಲಿಲ್ಲ, ಬರೆಯುವ ದಿಕ್ಕು ಬಲದಿಂದ ಎಡಕ್ಕೆ, ಕೆಲವೊಮ್ಮೆ ಮೇಲಿನಿಂದ ಕೆಳಕ್ಕೆ ಬರೆದಿರುವುದೂ ಉಂಟು.

ಮಧ್ಯಪ್ರಾಚ್ಯ ದೇಶಗಳಲ್ಲಿ ಆರಂಭದಲ್ಲಿ ಸುಮೇರಿಯರು ದಶಾಂಶ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ೧೦ನ್ನು ಮೂಲವಾಗಿ ಹೊಂದಿದ್ದರು. ಮುಂದೆ ಕ್ರಿ.ಪೂ.೩೦೦೦ ದಿಂದ ೨೦೦೦ದ ಮಧ್ಯೆ ೬೦ನ್ನು (sexogonal) ಮೂಲವಾಗುಳ್ಳ ಸಂಖ್ಯೆಗಳನ್ನು ಬಳಸತೊಡಗಿದರು. ಹೆಚ್ಚಿನ ಸಂಖ್ಯೆಗಳು ಬೇಕೆಂದಾಗ ಸರಳ ಗುಂಪುಗಳನ್ನು ೬೦ಕ್ಕೆ ಸೇರಿಸುವುದರ ಮೂಲಕ ಪಡೆಯುತ್ತಿದ್ದರು. ಮೆಸಪೊಟೋಮಿಯಾದಲ್ಲಿ ಅಂಕೆಗಳು ಮೊಳೆಯಾಕಾರದ ಅಂಕೆಗಳಂತೆಯೇ ಇದ್ದು, ಮೂರರವರೆಗೆ ಒಂದರಿಂದ ಮೂರು ಗೆರೆಗಳೂ, ನಾಲ್ಕರಿಂದ ತ್ರಿಕೋಣಾಕಾರದ ಮೇಲೆ ಮೂರು ಚಿಕ್ಕ ತ್ರಿಕೋಣಗಳೂ, ಹೀಗೆ ಹೆಚ್ಚುತ್ತಾ ಹೋಗಿವೆ. ಈಜಿಪ್ಷಿನಂತೆ ಬಿಡಿ ಬಿಡಿಯಾಗಿ ಅಂಕೆಗಳನ್ನು ಸೇರಿಸುವ ಮೂಲಕ ಪಡೆಯುತ್ತಿದ್ದರು. ಉದಾ. ೪೩೩೨ ಎಂದು ಬರೆಯಬೇಕಾದಲ್ಲಿ ೪+೧೦೦೦, ೩+೧೦೦, ೧೦+೧೦+೧೦+೨ ಎಂದು ಬರೆಯಬೇಕಾಗಿತ್ತು.

ಸಿಂಧೂ ನಾಗರೀಕತೆಯ ಮುದ್ರೆಗಳಲ್ಲಿ ಕೆಲವು ಒಂದು ಬಗೆಯ ಬಳಪದ ಕಲ್ಲಿನವಾಗಿದ್ದು, ಕೆಲವು ತಾಮ್ರದ, ದಂತದ ಮತ್ತು ಮಣ್ಣಿನ ಮುದ್ರಿಕೆಗಳಾಗಿವೆ. ಚಿತ್ರವನ್ನು ಕೊರೆದು ಅನಂತರ ಲಿಪಿಗಳನ್ನು ಬರೆಯುತ್ತಿದ್ದರು. ಬಿ.ವಿ.ಸುಬ್ಬರಾಯಪ್ಪನವರ ಪ್ರಕಾರ ಈ ಲಿಪಿಗಳು ಈಜಿಪ್ಷಿನ ಸಂಖ್ಯೆಗಳಂತೆ ಸೇರ್ಪಡೆಯ (addictive) ಸಂಖ್ಯೆಗಳಾಗಿವೆ. ಇವು ಉದ್ದದ ಗೆರೆಗಳ ರೀತಿಯಲ್ಲಿದ್ದವು. ಪ್ರತಿ ಸಂಖ್ಯೆಗೂ ನಿರ್ದಿಷ್ಟವಾದ ಚಿಹ್ನೆ ಇತ್ತು. ಇವುಗಳು ಬರೆವಣಿಗೆಗೆ ಸಿಗುವ ಸ್ಥಳವನ್ನನುಸರಿಸಿ ಉದ್ದ ಅಥವಾ ಚಿಕ್ಕವಾಗಿವೆ. ಉದ್ದದ ಗೆರೆಗಳನ್ನು ಮಧ್ಯೆ ಕತ್ತರಿಸಿ ಹೆಚ್ಚಿನ ಸಂಖ್ಯೆಗಳನ್ನು ಸೂಚಿಸಿರುತ್ತಾರೆ. ಮುದ್ರೆಗಳಲ್ಲಿ ಕಂಡುಬರುವ ಒಂಟಿಕೊಂಬಿನ ಪ್ರಾಣಿಯ (unicorn) ಮುಂದೆ ಇರುವ ಚಿತ್ರವನ್ನು ಕೆಲವರು ಊದುಬತ್ತಿ ಸಿಕ್ಕಿಸುವ ವಸ್ತು ಎಂದು ಹೇಳಿದ್ದು, ಅದೇ ಸಿಂಧೂ ನಾಗರೀಕತೆಯಲ್ಲಿ ಅಲಂಕಾರಿಕ ಚಿಹ್ನೆಯಾಗಿ (motif) ಬಳಕೆಯಾಗಿದೆ ಎಂದಿರುತ್ತಾರೆ. ಆದರೆ ಈ ಚಿಹ್ನೆಗಳಲ್ಲಿರುವ ಚುಕ್ಕೆಗಳು ಹಾಗೂ ಗೆರೆಗಳು ಬಾರ್ಲಿ, ಗೋಧಿ, ಹತ್ತಿ ಮುಂತಾದವುಗಳ




ಕೃಪೆ : ಜಿ.ಎಸ್. ಓಝಾ

ಈಜಿಪ್ಟ್ ಸೆಮಿಟಿಕ್ ಮತ್ತು ಭಾರತದ ಪ್ರಾಚೀನ ಅಂಕಿಗಳ ಪಟ್ಟಿ

ಸಿಂಧೂ ಮುದ್ರೆಗಳ ಮೇಲೆ ಇರುವ ಮೂಲ ಸಂಖ್ಯಾ ಚಿಹ್ನೆಗಳು

ಮೂಲ ಆಕಾರ	ಸಂಖ್ಯಾ ಬೆಲೆ	ಇತರೆ
| || ... |||| |||| ||||	1 12	ಖರೋಷ್ಠಿ ಶಾಸನಗಳಲ್ಲಿ ಬಳಸಿದೆ ಬ್ರಾಹ್ಮಿ ಶಾಸನಗಳಲ್ಲಿ ಅಡ್ಡಗೆರೆಡಗಳಲ್ಲಿ ಬಿಡಿಸಿವೆ
□ or ◇ or X	4	X ಖರೋಷ್ಠಿ ಶಾಸನಗಳಲ್ಲಿ ಈ ಚಿಹ್ನೆಯನ್ನು ಬಳಸಲಾಗಿದೆ
⊥□	5	ಈ ಆಕಾರದಿಂದ ಬಂದಿದೆ □
∧	6	∧ ಚೀಣೆಯರಲ್ಲಿ ಬಳಕೆಯಾಗಿದೆ
↑ or ↑ or ʃ	7	↑ ಚೀಣೆಯರಲ್ಲಿ ಬಳಸಲಾಗಿದೆ 7 ಬ್ರಾಹ್ಮಿ ಶಾಸನಗಳಲ್ಲಿ
𝟑 or) or ʃ	8	9) ಕೆಲವು ಬ್ರಾಹ್ಮಿ ಶಾಸನಗಳಲ್ಲಿ ಬಳಸಲಾಗಿದೆ
Ψ or Ψ	9	Ψ ಚೀಣಾದ ಓರಕಲ್ ಮೂಳೆಯಮೇಲೆ ಬರೆದಿದ
♀ or ∝ or ⋈ or) or ⇑ or O or ϕ	10	∝ ಬ್ರಾಹ್ಮಿಶಾಸನಗಳಲ್ಲಿ) ಖರೋಷ್ಠಿ ಶಾಸನಗಳಲ್ಲಿ △ ಅಟ್ಟಿಕ ಮತ್ತು ಗ್ರೀಕರಲ್ಲಿ ಬಳಕೆ ϕ ಚೀಸೀಯರಲ್ಲಿ ಬಳಕೆ
U or O	20	U ಚೀಸೀಯರಲ್ಲಿ ಬಳಕೆ O ಬ್ರಾಹ್ಮಿಶಾಸನಗಳಲ್ಲಿ ಬಳಕೆ
⅄ or H	100	⅄ ಖರೋಷ್ಠಿ ಮತ್ತು ಅಶೋಕ ℋ ಬ್ರಾಹ್ಮಿಶಾಸನಗಳಲ್ಲಿ H ಗ್ರೀಕರಲಿಲ
大	1000	⟩ ಚೀಸೀಯರಲ್ಲಿ ಬಳಕೆ T ಬ್ರಾಹ್ಮಿಶಾಸನಗಳಲ್ಲಿ ಬಳಕೆ

ಕೃಪೆ: ಬಿ.ಪಿ. ಸುಬ್ಬರಾಯಪ್ಪ



ಕೃಪೆ : ಝಾ

ಝಾ ಅವರ ಪ್ರಕಾರ ಸಿಂಧೂ ಅಂಕೆಗಳು

ಸಂಖ್ಯೆಯನ್ನು ಸೂಚಿಸುತ್ತವೆಂದೂ, ನಿರ್ಯಾತವಾಗುವ ವಸ್ತುಗಳನ್ನು ಸೂಚಿಸುತ್ತವೆಯೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಸಿಂಧೂ ಬರೆವಣಿಗೆಗಳು ಲಿಪಿಗಳಲ್ಲ, ಅವು ಸಂಖ್ಯೆಗಳೆಂದು ಸುಬ್ಬರಾಯಪ್ಪನವರ ಅಭಿಪ್ರಾಯ.


ಚೀನಾದ ಅಂಕಲಿಪಿಗಳು

ಈಗಿನ ಚೀನಾದೇಶದಲ್ಲಿ ಎರಡು ಬಗೆಯ ಅಂಕಲಿಪಿಗಳು ಬಳಕೆಯಿದ್ದು, ಪಾರಂಪರಿಕ ಅಂಕೆಗಳು ಒಂದು ಬಗೆಯಾದರೆ ವಾಣಿಜ್ಯ ರೀತಿಯವು ಎರಡನೆಯ ರೀತಿಯವು. ಪಾರಂಪರಿಕ ರೀತಿಯವುಗಳಿಗೂ ವಾಣಿಜ್ಯ ರೀತಿಯವುಗಳಿಗೂ ಅಲ್ಪಸ್ವಲ್ಪ ವ್ಯತ್ಯಾಸಗಳಿವೆ. ವಾಣಿಜ್ಯ ರೀತಿಯ ಅಂಕೆಗಳಲ್ಲಿ ಸೊನ್ನೆಯ ಬಳಕೆಯಿದೆ.

ಪಾರಂಪರಿಕ ಅಂಕೆಗಳು ಅಡ್ಡಗೆರೆಗಳನ್ನು ಹೊಂದಿದ್ದರೆ ವಾಣಿಜ್ಯ ರೀತಿಯವು ಉದ್ದದ ಗೆರೆಗಳನ್ನು ಹೊಂದಿವೆ. ಕ್ರಿ.ಶ.೧೩ನೆಯ ಶತಮಾನದ ಕುಬ್ಲೈಖಾನನ ಕಾಲದಲ್ಲಿ ಲಿ-ಯೆಹ್ ಮತ್ತು ಚಿನ್-ಚಿಯು-ಷಾಓ ಎಂಬುವವರು ಎರಡು ರೀತಿಯ ಸರಳವಾದ ಅಂಕೆಗಳನ್ನು ಬಳಕೆಗೆ ತರುತ್ತಾರೆ. ಇವುಗಳಲ್ಲಿ ಒಂದು ಬಗೆಯದು ಉದ್ದದ ಗೆರೆಗಳನ್ನು ಹೊಂದಿದ್ದರೆ ಇನ್ನೊಂದು ಬಗೆಯದು ಅಡ್ಡ ಅಡ್ಡವಾದ ಗೆರೆಗಳನ್ನು ಹೊಂದಿರುತ್ತದೆ. ಇವೆಲ್ಲವೂ ಸರಳ ರೇಖೆಗಳಲ್ಲಿ ಇರುತ್ತವೆ. ಇದಕ್ಕೂ ಹಿಂದೆ (ಕ್ರಿ.ಶ.೧೧ನೇ ಶತ) ಇದೇ ರೀತಿಯ ಗೆರೆಗಳನ್ನು ಅನುಸರಿಸಿದ್ದರೂ ೫ ಸಂಖ್ಯೆಯನ್ನು X ಚಿಹ್ನೆ ತೋರಿಸುವ ಮೂಲಕ ಬಳಸಿರುತ್ತಾರೆ. ಈಗ ಈ ಚಿಹ್ನೆಯನ್ನು ೪ಕ್ಕೆ ಬಳಸುತ್ತಾರೆ. ಈ ಬಗೆಯ ಅಂಕೆಗಳನ್ನು ಬಳಸಿದಲ್ಲಿ ಬರೆವಣಿಗೆ ಸುಲಭವಾಗುತ್ತಿತ್ತು. ಉದಾ: ೧ ೨ ೩ ಎಂಬ ಸಂಖ್ಯೆಯನ್ನು ಬರೆಯಬೇಕಾದಲ್ಲಿ, – II ☰ ಎಂದೂ, ೬೭೮ ಎಂದು ಬರೆಯಬೇಕಾದಲ್ಲಿ T ≟ TTT ಎಂದೂ ಬರೆಯಲಾಗುತ್ತಿತ್ತು. 'ಹಓಮಾ' ಎಂಬ ರೀತಿಯ ಅಂಕಲಿಪಿ ಬರೆವಣಿಗೆಯಲ್ಲಿ ಉದ್ದದ ಸರಳರೇಖೆಗಳನ್ನು ಬಳಸಿ ಬರೆದರೂ ೪ ೫ ಮತ್ತು ೯ನ್ನು ಕ್ರಮವಾಗಿ X ᓯ Ⲭ ಎಂಬಂತೆ ಬರೆಯಲಾಗುತ್ತಿತ್ತು.

ಈ ಕೆಳಗೆ ಚೀನಾದ ಈಗಿನ ಅಂಕಲಿಪಿಯ ರೂಪ, ಉಚ್ಚಾರ ಮತ್ತು ಹಿಂದಿನ ರೂಪಗಳನ್ನು ತೋರಿಸಲಾಗಿದೆ.

	ಉಚ್ಚಾರ	ಈಗಿನ ರೂಪ	ಪ್ರಾಚೀನ ರೂಪ
ಒಂದು	ಈ		
ಎರಡು	ಎಬ್		
ಮೂರು	ಸನ್		
ನಾಲ್ಕು	ಸ್ಸಊ		
ಐದು	ವ್ವೂ		
ಆರು	ಲಿಯು		
ಏಳು	ಟ್ಸಿ / ಚಿ		
ಎಂಟು	ಪ		
ಒಂಬತ್ತು	ಚಿಯು		
ಹತ್ತು	ಷಿಹ್		
ಇಪ್ಪತ್ತು	ಎಬ್‌ಷಿಹ್		
ಇಪ್ಪತ್ತನಾಲ್ಕು			
ಇಪ್ಪತ್ತೇಳು			
ಮೂವತ್ತು	ಸನ್‌ಷಿಹ್		
ನಲವತ್ತು	ಸ್ಸೂಷಿಹ್		
ನೂರು	ಪೇ		
ಇನ್ನೂರು	ಎಬ್‌ಪೇ		
ಮುನ್ನೂರು			
ಐನೂರು			
ಸಾವಿರ	ಟ್ಸಇಯನ್		



(JARS 1916. p.314-333, 737-771)

ಮಾಯಾ ಅಂಕೆಗಳು

ಮಾಯಾ ಮತ್ತು ಅಜೆಟಿಕ್ ನಾಗರೀಕತೆಯಲ್ಲಿ ೧ ರಿಂದ ೧೦ರ ವರೆಗಿನ ಚಿಹ್ನೆಗಳು ಚುಕ್ಕೆಗಳ ರೀತಿಯಲ್ಲಿದ್ದು, ಹತ್ತು ಚಿಹ್ನೆಗೆ ಚತುಷ್ಕೋಣವನ್ನು ಮುಂದೆ ೨೦, ೧೦೦ ಮುಂತಾದ ಅಂಕೆಗಳಿಗೆ ಬೇರೆ ಬೇರೆ ಚಿಹ್ನೆಗಳನ್ನು ಬಳಸಿರುತ್ತಾರೆ. ಈ ಚಿಹ್ನೆಗಳಿಗೆ ಮೇಲಿನ ಚಿಹ್ನೆಗಳನ್ನು ಸೇರಿಸಿ ಹೆಚ್ಚಿನ ಸಂಖ್ಯೆಗಳನ್ನು ಪಡೆಯುತ್ತಿದ್ದರು.

ಮಾಯಾದಲ್ಲಿ ಈ ಚುಕ್ಕೆಗಳು ಒಂದರ ಪಕ್ಕದಲ್ಲಿ ಬಂದಿದ್ದರೆ ಅಜೆಟಿಕ್‌ದಲ್ಲಿ ಮೂರು ಚುಕ್ಕೆಗಳಂತೆ ಮೇಲಿನಿಂದ ಕೆಳಕ್ಕೆ ಬರೆದು ಅನಂತರ ಎರಡು ಚುಕ್ಕೆಗಳನ್ನು ಬರೆದು ಐದರ ಸಂಖ್ಯೆ ಸೂಚಿಸುತ್ತಿದ್ದರು. ಐದರ ನಂತರ ಮೇಲಿನಿಂದ ಕೆಳಕ್ಕೆ ಗೆರೆಯೊಂದು ಬಂದು ನಂತರದ

ಪ್ರಾಚೀನ ಗ್ರೀಕಿನ ಅಂಕೆಗಳ ಮೇಲೆ ಈಜಿಪ್ಟಿನ ಪ್ರಭಾವವಿದ್ದು ಬೇರೆ ಬೇರೆ ಚಿಹ್ನೆಗಳನ್ನು ಸೇರಿಸುವ ತತ್ವದ ಅಂಕಲಿಪಿಯನ್ನು ಬೆಳೆಸಿರುತ್ತಾರೆ. ಮುಂದೆ ಆಟ್ಟಿಕರು, ಹೇರೋಡೋನಿಯರು ಮತ್ತು ಗ್ರೀಕರು ೧೦ನ್ನು (ದಶಾಂಶ) ಆಧಾರವಾಗುವ ಗುಂಪನ್ನು ಸ್ವೀಕರಿಸಿದರು.

I II III IV V VI VII VIII IX X L C

ಭಾರತದಲ್ಲಿ ಅಂಕಲಿಪಿ

ಅಂಕಲಿಪಿ ಹೀಗೆ ಪ್ರಾಚೀನ ನಾಗರೀಕತೆಗಳಲ್ಲಿ ಕಾಣಿಸಿಕೊಂಡು ಇಂದಿಗೂ ಕೆಲವೆಡೆ ಮುಂದುವರಿದಿದ್ದರೂ ಭಾರತದಲ್ಲಿ ಬರೆವಣಿಗೆಯ ಇತಿಹಾಸವಿರುವುದು ೨೩೦೦ ವರ್ಷಗಳಿಂದ. ಋಗ್ವೇದದಲ್ಲಿ ಸಂಖ್ಯೆಗಳ ಉಲ್ಲೇಖ ಬಂದಿದೆ. ಯಜುರ್ವೇದದಲ್ಲಿ ಏಕ, ದಶ ಶತ, ಸಹಸ್ರ, ಆಯುತ, ನಿಯತ, ಅರ್ಬುದ, ನ್ಯರ್ಬುದ, ಸಮುದ್ರ, ಮಧ್ಯ, ಅಂತ, ಪರಾರ್ಧ ಸಂಖ್ಯೆಗಳನ್ನು ಹೇಳಿದೆ. ಇದೇ ಪಟ್ಟಿ ಮೈತ್ರೇಯನಿಕ ಮತ್ತು ತೈತ್ತರೀಯ ಸಂಹಿತೆಯಲ್ಲಿ ದೊರೆಯುತ್ತವೆ. ಲಲಿತವಿಸ್ತಾರದಲ್ಲಿ ಕೋಟಿ ಸಂಖ್ಯೆಯ ಉಲ್ಲೇಖ ಬರುತ್ತದೆ. (Indian numerals.p.168)

ಸಿಂಧೂ ಲಿಪಿಗೂ, ಬ್ರಾಹ್ಮಿ ಲಿಪಿಗೂ ಸಂಬಂಧದ ಕೊಂಡಿ ಸಿಕ್ಕಿಲ್ಲದಿರುವುದರಿಂದ ಬ್ರಾಹ್ಮಿಲಿಪಿಯ ಅಂಕೆಗಳ ಉಗಮದ ಬಗ್ಗೆ ಸ್ಪಷ್ಟವಾಗಿ ಹೀಗೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಇಂದ್ರಜಿಯ ಪ್ರಕಾರ ಬ್ರಾಹ್ಮಿಯ ಅಂಕೆಗಳು ಬ್ರಾಹ್ಮಿಯ ಅಕ್ಷರಗಳಿಂದಲೇ ಉದಿಸಿವೆಯೆಂದು ಭಾವಿಸಿದ್ದರು. ಆದರೆ ಎಲ್ಲ ಅಂಕೆಗಳನ್ನು ವಿವರವಾಗಿ ಅವರು ತೋರಿಸಿರುವುದಿಲ್ಲ. ಬೂಹ್ಲರ್ ಇವರ ವಾದವನ್ನು ಒಪ್ಪಿದ್ದರು. ಅವರ ಪ್ರಕಾರ ಹ್ರಸ್ವ – ಒಂದು, ದೀರ್ಘ = ಎರಡು, ಪ್ಲುತ = ಮೂರು, ೧೦೦ಕ್ಕೆ ಶು ಎಂಬ ಅಕ್ಷರ.


ಬ್ರಾಹ್ಮಿಯ ಶಾಸನಗಳಲ್ಲಿ ಅಂಕೆಗಳು ಹೇಗೆ ಉದಿಸಿವೆಯೆಂಬ ಬಗ್ಗೆ ದಾನಿಯವರು ಕೆಲವು ವಿವರಗಳನ್ನು ನೀಡಿರುತ್ತಾರೆ. ಈ ಅಂಕೆಗಳು ಮನುಷ್ಯನ ಅಂಗಾಂಗಗಳಿಗೆ ತಾಳೆ ಹೊಂದಿವೆಯೆಂಬುದು ಅವರ ವಾದ. ಅದರಂತೆ ಒಂದರಿಂದ ನಾಲ್ಕು ಅಂಕೆಯವರೆಗೆ ಬ್ರಾಹ್ಮಿ ಮತ್ತು ಖರೋಷ್ಠಿಯಲ್ಲಿ ಸಮಾನಾಂತರವಾಗಿವೆ. ಮುಂದೆ ಎರಡರಲ್ಲೂ ವ್ಯತ್ಯಾಸಗಳು ಕಾಣಬರುತ್ತವೆ. ಬ್ರಾಹ್ಮಿಯ ಅಂಕೆಗಳು ೧ ರಿಂದ ಮೂರರ ವರೆಗೆ ಅಡ್ಡಗೆರೆಗಳನ್ನು ಹೊಂದಿದೆ. ನಾಲ್ಕು ಕೂಡುವ ಚಿಹ್ನೆಯಂತೆ (+) ಬರೆಯಲಾಗಿದೆ. ಐದು ಅಂಕಿಯ ೪ ಎಂಬ ರೂಪದಲ್ಲಿದ್ದು ಇದು ಇಂಗ್ಲೀಷಿನ ಚಿಕ್ಕ 'ಎಚ್' (h) ಅಕ್ಷರದಂತಿದೆ. ಆರನ್ನು ಸೂಚಿಸುವ ಅಂಕಿಯ ಈಗಿನ ಕನ್ನಡ ಅಂಕಿಯ ೬, ಬ್ರಾಹ್ಮಿಯ 'ಜ' ಅಕ್ಷರವನ್ನು ಹೋಲುತ್ತದೆ. ಏಳು ಅಂಕೆಯು ಪ್ರಶ್ನೆಯ ಚಿಹ್ನೆಯಂತೆ ? ಇದೆ. ಎಂಟನೆಯ ಅಂಕೆಯು ಬ್ರಾಹ್ಮಿಯ 'ಹ' ಕಾರದಂತಿದೆ. ಒಂಬತ್ತು ಸಂಖ್ಯೆಯು ಪ್ರಶ್ನಾರ್ಥಕ ಚಿಹ್ನೆಯಂತೆ ಇದೆ. ಹತ್ತು ಸಂಖ್ಯೆಯು ಬ್ರಾಹ್ಮಿಯ 'ಮ'ಕಾರವು ಅಡ್ಡವಾಗಿ ಮಲಗಿದಂತಿದೆ (x). ಇಲ್ಲಿಂದ ಮುಂದೆ ಬೇರೆ ಬೇರೆ ಅಂಕೆಗಳಿಗೆ ಅಂದರೆ ೨೦. ೩೦, ೪೦ ಇತ್ಯಾದಿಗಳಿಗೆ ಬೇರೆ ಬೇರೆ ಚಿಹ್ನೆಗಳನ್ನು ಬಳಸಿರುತ್ತಾರೆ. ಇಲ್ಲಿ ಇತರೆಡೆಯ ಲಿಪಿಗಳಂತೆ ಸೇರ್ಪಡೆಯಾಗಿರದೆ ಪ್ರತ್ಯೇಕ ಚಿಹ್ನೆಗಳನ್ನು ಬಳಸಲಾಗಿದೆ. ದಾನಿಯವರು ಬ್ರಾಹ್ಮಿಯ ಅಂಕೆಗಳು ೫ ರಿಂದ ೧೦೦ ವರೆಗಿನ ಚಿಹ್ನೆಗಳು ಬ್ರಾಹ್ಮಿಯ ಹತ್ತರ ಚಿಹ್ನೆಯಿಂದ ಉದಿಸಿವೆಯೆಂದು ವಾದಿಸಿರುತ್ತಾರೆ. ಹತ್ತು ಅರೆವೃತ್ತಾಕಾರವಾಗಿದ್ದು ಇದಕ್ಕೆ ಹಿಡಿಯೊಂದನ್ನು ಸೇರಿಸಿರುತ್ತಾರೆ. ಈ ಹಿಡಿ ತ್ರಿಕೋಣಾಕಾರವಾಗಿ

ಅಥವಾ ವೃತ್ತಾಕಾರವಾಗಿ ಇರಬಹುದು. ೨೦ರಲ್ಲಿ ಈ ಎರಡು ಅರೆವೃತ್ತಗಳನ್ನು ಸೇರಿಸಿ ಒಂದು ವೃತ್ತ ಮಾಡಿ ಮಧ್ಯೆ ಸಣ್ಣಗೆರೆಯನ್ನು ಎಳೆಯಲಾಗಿದೆ.

೫ರ ಸಂಖ್ಯೆಯಲ್ಲಿ ಮೇಲ್ಮುಖವಾಗಿ ತೆರೆದ ಹತ್ತರ ಸಂಖ್ಯೆಯನ್ನು ಹೊಂದಿದ್ದು ಒಂದು ಉದ್ದವಾದ ಗೆರೆಯನ್ನು ಅದಕ್ಕೆ ಸೇರಿಸಲಾಗಿದೆ. ಆರರ ಸಂಖ್ಯೆಯನ್ನು ಎರಡು ಹತ್ತುಗಳನ್ನು ಒಂದರ ಮೇಲೊಂದು ಜೋಡಿಸಿದಂತೆಯೂ, ಏಳರ ಸಂಖ್ಯೆಯಲ್ಲಿ ಹತ್ತನ್ನು ಬರೆದು ಅದರ ಬಲಗಡೆಗೆ ಒಂದು ಗೆರೆಯನ್ನು ಎಳೆಯಲಾಗಿದೆ. ಎಂಟರ ಸಂಖ್ಯೆ ಹತ್ತರ ಸಂಖ್ಯೆಯ ಚಿಹ್ನೆಯನ್ನು ಮೇಲ್ಮುಖವಾಗಿ ಬರೆದು ಅದರ ಬಲಕ್ಕೆ ಒಂದು ಗೆರೆಯನ್ನು ಎಳೆಯಲಾಗಿದೆ. ಒಂಬತ್ತರ ಸಂಖ್ಯೆಯಲ್ಲಿಯೂ ಹತ್ತರ ಸಂಖ್ಯೆಯನ್ನು ಎಡಮುಖವಾಗಿ ಬರೆದು ಅದರ ಕೆಳಭಾಗದಲ್ಲಿ ಒಂದು ಗೆರೆ ಎಳೆಯಲಾಗಿದೆ. ಇವೆಲ್ಲಾ ಭಾರತೀಯ ಪದ್ಧತಿಯಲ್ಲಿ ಚಿಹ್ನೆಗೆ ಸೇರಿಸುವ ಮೂಲಕ ಅದರ ಬೆಲೆಯನ್ನು ಕಂಡುಹಿಡಿಯುವ ತತ್ವವನ್ನು ಅನುಸರಿಸಲಾಗಿದೆ ಎಂದಿದ್ದಾರೆ.

ವಾಸ್ತವವಾಗಿ

೩೦ =
೪೦ =
೫೦ =
೬೦ =
೭೦ =
೮೦ =
೯೦ =
೧೦೦ =



ಆದರೂ ಅನೇಕ ಸಂಖ್ಯೆಗಳು ಬ್ರಾಹ್ಮಿ ಲಿಪಿಯ ತ್ರ, ಗ್ರ, ಹ್ರ, ಲ ಮುಂತಾದ ಅಕ್ಷರರೂಪಗಳನ್ನು ಹೋಲುತ್ತಿರುವುದು ಇನ್ನೂ ವಿವರಿಸಲಾಗದ ಕಗ್ಗಂಟಾಗಿದೆ. ಅಶೋಕನ ಶಾಸನಗಳಲ್ಲಿ ಎಲ್ಲಾ ಅಂಕೆಗಳೂ ದೊರೆಯುವುದಿಲ್ಲ. ಅವನ ನಂತರದ ಶಾಸನಗಳಲ್ಲಿ ಎಲ್ಲಾ ಅಂಕೆಗಳು ದೊರೆಯಲಾರಂಭಿಸುತ್ತವೆ. ಅಶೋಕನ ಕಾಲದಲ್ಲಿ ಅನೇಕ ಕಡೆ ಅಂಕೆಗಳನ್ನು ಅಕ್ಷರಗಳಲ್ಲಿ ಬರೆದಿರುತ್ತಾರೆ. 'ವಿಸತಿ ವಸಾಭಿಸಿತೇನ' (೨೦), 'ದುವಾದಸ ವಸಾಭಿಸಿತೇನ' (೧೨) ಇತ್ಯಾದಿ. ಹೀಗಾಗಿ ಅಂಕಲಿಪಿಗಳು ಇವನ ಶಾಸನಗಳಲ್ಲಿ ಹೆಚ್ಚಾಗಿ ದೊರೆಯುವುದಿಲ್ಲ. ಆದರೆ ಮುಂದಿನ ಶಾಸನಗಳಲ್ಲಿ ಅಶೋಕನ ಕಾಲದಲ್ಲಿದ್ದಿರಬಹುದಾದ ಅಂಕೆಗಳ ಬಳಕೆಯನ್ನು ಮುಂದುವರಿಸಿರುವುದನ್ನು ಕಾಣಬಹುದಾಗಿದೆ. ಗುಪ್ತರ ಅಂತ್ಯದ ವರೆಗೆ ಈ ಅಂಕಲಿಪಿಗಳೇ ವಿಕಾಸವಾಗುತ್ತಾ ಬರುತ್ತದೆ. ಮುಂದೆ ಜ್ಯೋತಿಷ್ಯ, ಗಣಿತ ಶಾಸ್ತ್ರಗಳು ಬೆಳೆದಂತೆ ೧ ರಿಂದ ೯ ರ ವರೆಗಿನ ಅಂಕೆಗಳನ್ನು ಮುಂದುವರಿಸಿ ೧೦ ರಿಂದಾಚೆಯ ಅಂಕೆಗಳನ್ನು ಕೈ ಬಿಡಲಾಯಿತು. ಇದಕ್ಕೆ ಮುಖ್ಯ ಕಾರಣ ಭಾರತೀಯ ಅಂಕಲಿಪಿಗೆ ಶೂನ್ಯದ ಪ್ರವೇಶ.

ದಶಾಂಶ ಪದ್ಧತಿ

ಭಾರತೀಯ ಶಾಸನಗಳನ್ನು ಗಮನಿಸಿದಾಗ ಕ್ರಿ.ಪೂ.ದಲ್ಲಿಯೇ ಅಂಕೆಗಳನ್ನು ಬಳಸಿದ್ದರೂ ಈಗಿನ ದಶಾಂಶ ಪದ್ಧತಿಯ ಬರೆವಣಿಗೆ ಇರಲಿಲ್ಲ. ಬಹಳಷ್ಟು ಶಾಸನಗಳಲ್ಲಿ ಕಾಲವನ್ನೂ

ಅಕ್ಷರಗಳಲ್ಲಿಯೇ ಬರೆದಿರುತ್ತಾರೆ. ಹೀಗಾಗಿ ಮಾತಿನಲ್ಲಿ ದಶಾಂಶ ಪದ್ಧತಿ ಬಳಸಿದರೂ ಬರೆವಣಿಗೆಯಲ್ಲಿ ಒಂಬತ್ತರಿಂದ ಆಚೆಗೆ ೧೦, ೨೦, ೩೦ ಕ್ಕಿಂತ ಮುಂದಕ್ಕೆ ಬೇರೆ ಬೇರೆ ಚಿಹ್ನೆಗಳನ್ನು ಬಳಸಿ ಅಂಕೆಗಳನ್ನು ಸೂಚಿಸಿರುತ್ತಾರೆ. ದಶಾಂಶ ಪದ್ಧತಿಯಲ್ಲಿ ಪ್ರಮುಖ ಪಾತ್ರವಹಿಸಿರುವ ಸೊನ್ನೆಯ ಬಳಕೆ ಆರಂಭದ ಶಾಸನಗಳಲ್ಲಿ ಕಾಣಬರುವುದಿಲ್ಲ, ಶಾತವಾಹನರ ಕಾಲದಲ್ಲಿ ಬಹಳಷ್ಟು ಅಂಕೆಗಳನ್ನು ಹೆಚ್ಚಿಗೆ ಬಳಸಿರುತ್ತಾರೆ. ಆದರೆ, ಮುಂದೆ ಬಂದ ಕದಂಬರು ಇತರೆ ದಕ್ಷಿಣ ಭಾರತದ ಅರಸರು ಅಂಕ ಲಿಪಿಗಳನ್ನು ಕಡಿಮೆ ಬಳಸಿರುತ್ತಾರೆ ಅಥವಾ ಸಂಸ್ಕೃತ ಭಾಷಾ ಶಾಸನಗಳ ಕಾರಣದಿಂದ ಶಾಸನಗಳ ಒಕ್ಕಣೆ ರೀತಿ ಬದಲಾಗಿ ಅಂಕೆಗಳನ್ನು ಅಕ್ಷರದಲ್ಲಿಯೇ ಹೇಳಿರುತ್ತಾರೆ. ಹೀಗಾಗಿ ಶಾತವಾಹನರ ನಂತರ ಬಾದಾಮಿ ಚಾಲುಕ್ಯರ ಅಂತ್ಯದವರೆಗೆ ಅಂಕೆಗಳ ಉಪಲಬ್ಧ ತೀರ ಕಡಿಮೆ.

ದಶಾಂಶ ಅಂಕಲಿಪಿಗಳ ಕೆಲವು ಶಾಸನಗಳನ್ನು ಓದುವಲ್ಲಿ ತೊಡಕಿದ್ದು ದಶಾಂಶ ಪದ್ಧತಿಯ ಮೊದಲ ಉಲ್ಲೇಖ ಸಕ್ರೈ ಎಂಬಲ್ಲಿನ ಶಿಲಾಶಾಸನದಲ್ಲಿ ಕಾಣಬಹುದು. (E.I.XXVII p.29-32) ಇದರ ಕಾಲವನ್ನು ಛಾಬ್ರ ಅವರು ವಿಕ್ರಮಶಕ ೭೯೯ (ಕ್ರಿ.ಶ.೬೪೨-೪೩) ಎಂದು ಓಗಿರುತ್ತಾರೆ. ಹೀಗಾದಲ್ಲಿ ಇದೇ ದಶಾಂಶ ಪದ್ಧತಿಯ ಅಂಕಲಿಪಿಯ ಮೊದಲ ಉಪಲಬ್ಧ ಶಾಸನ. ದಂತಿದುರ್ಗನ ಶಾಸನವೊಂದರಲ್ಲಿ ಮಿರಾಶಿಯವರು ೪೦೦-೬೦-೩ ಎಂದು ಓದಿದ್ದು , ಗಾಯಿ ಅವರ ಪ್ರಕಾರ ಇದು ಶಕ ೬೦೦-೪೦-೩ ಎಂದಿರಬೇಕು ಹೇಳಿ ಇದರ ಕಾಲವನ್ನು ಕ್ರಿ.ಶ.೭೨೧ ಎಂದಿರುತ್ತಾರೆ. ದಶಾಂಶ ಅಂಕೆಗಳು ಬಳಕೆಗೆ ಬಂದ ಹೊಸದರಲ್ಲಿ ಅವು ಅರ್ಥವಾಗಲೆಂದು ಅಕ್ಷರದಲ್ಲಿಯೂ ಬರೆದಿರುವುದನ್ನು ಇಲ್ಲಿ ಗಮನಿಸಬಹುದು. (E.I.XXV p.25-30) ಧಿನಿಕಿ ಶಾಸನದಲ್ಲಿ ವಿಕ್ರಮ ಸಂವತ್ಸರ ೭೯೪ ಎಂದು ದಶಾಂಶ ಪದ್ಧತಿಯ ಅಂಕಲಿಪಿಯಲ್ಲಿ ಉಲ್ಲೇಖವಾಗಿದ್ದು ಇದರ ಕಾಲ ಕ್ರಿ.ಶ.೭೩೭ ಆಗಿರುತ್ತದೆ. (I.A.XII p.155) ರಾಷ್ಟ್ರಕೂಟ ಕರ್ಕನ ಧುಲಿಯ ಶಾಸನದಲ್ಲಿ ಶಕ ೭೦೧ (ಕ್ರಿ.ಶ.೭೮೯-೯೦) ಎಂದು ದಶಾಂಶ ಅಂಕಲಿಪಿಯಲ್ಲಿ ಉಲ್ಲೇಖವಾಗಿದೆ. ಶೇರ್‌ಘಡದ ಶಾಸನವು ವಿಕ್ರಮ ಸಂವತ್ಸರ ೮೪೭ ಎಂದಿದ್ದು (ಕ್ರಿ.ಶ.೭೯೧-೯೨) ದಶಾಂಶ ಪದ್ಧತಿಯಲ್ಲಿದೆ. ಕಡಬ ಶಾಸನದಲ್ಲಿ ಶಕ ೭೩೫, ಧೋಲ್‌ಪುರದ ಶಕ ೭೬೪ರ ಶಾಸನವಲ್ಲದೆ ವೆಂಗಿಚಾಲುಕ್ಯ ಅಮ್ಮನ ಶಕ ೮೬೭ರ ಶಾಸನದಲ್ಲಿ ಅಕ್ಷರಗಳ ಜೊತೆಗೆ ಅಂಕೆಯಲ್ಲಿಯೂ ಕಾಲವನ್ನು ಹೇಳಿದೆ.

ಚಿಕಾಕೊಲೆ (ಶ್ರೀಕಾಕುಳಂ)ಯ ದೇವೇಂದ್ರವರ್ಮನ ಶಾಸನಗಳಲ್ಲಿ ಭಾಗಶಃ ದಶಾಂಶ ಪದ್ಧತಿಯಲ್ಲಿ ಅಂಕೆಗಳನ್ನು ಬರೆಯಲಾಗಿದೆ. (E.I.XVIII p.310, I.A.XIII p.123) ೧೦೦೩೭., ೧೦೦೩೮, ೧೦೦೫೪, ೧೦೦೮೩ ಎಂಬಂತೆ, ಇವು ಕ್ರಮವಾಗಿ ೧೩೭, ೧೩೮, ೧೫೪, ೧೮೩ ಎಂದಾಗುತ್ತದೆ. ಇದೇ ರಾಜನ ಸುದವ ಶಾಸನದಲ್ಲಿ ೨೦೪ ಎಂದು ಹೇಳಿ ಸ್ಪಷ್ಟವಾಗಿ ದಶಾಂಶ ಪದ್ಧತಿಯ ಅಂಕಲಿಪಿಯನ್ನು ಬಳಸಲಾಗಿದೆ. ಹೀಗಾಗಿ ಈ ದಶಾಂಶ ಪದ್ಧತಿಯು ಕ್ರಿ.ಶ.ಏಳನೆಯ ಶತಮಾನದ ಮಧ್ಯಭಾಗದಲ್ಲಿ ಉಲ್ಲೇಖವಾಗಿದೆ.

ದಶಾಂಶ ಪದ್ಧತಿಯ ಬಳಕೆಗೆ ಕಾರಣವಾದ ಶೂನ್ಯ ಅಥವಾ ಸೊನ್ನೆಯು ಭಾರತದಲ್ಲಿ ಎಂದು ಬಳಕೆಗೆ ಬಂತು ಎಂಬುದನ್ನು ತಿಳಿಯಬೇಕಾಗಿದೆ. ಮೇಲೆ ನೀಡಿದ ಉದಾಹರಣೆಗಳ

ಸಹಾಯದಿಂದ ಭಾರತದಲ್ಲಿ ಕ್ರಿ.ಶ.೬ನೆಯ ಶತಮಾನಕ್ಕಿಂತ ಹಿಂದೆ ದಶಾಂಶ ಪದ್ಧತಿಯ ಅಂಕಲಿಪಿ ಬರೆವಣಿಗೆ ಕಾಣಬರುವುದಿಲ್ಲ. ಅಲ್ಲಿಂದಾಚೆಗೆ ಸೊನ್ನೆಯ ಬಳಕೆ ಬಂದಿರಬೇಕು. ಈ ಸೊನ್ನೆಯ ಉದಯಕ್ಕೆ ಕಾರಣವೇನು. ದಾನಿಯವರ ಪ್ರಕಾರ ಈ ಬಿಂದು ಅಥವಾ ಶೂನ್ಯವು ಬೌದ್ಧರ ಶೂನ್ಯವಾದದ ಆಧಾರದ ಮೇಲೆ ನಿಷ್ಪನ್ನವಾದದ್ದು. ಈ ಶೂನ್ಯ ವಾದವು ಕ್ರಿ.ಶ. ೫ನೆಯ ಶತಮಾನದಲ್ಲಿ ಕಾಣಬರುತ್ತದೆ. ಬೂಹ್ಲರ್ ಅವರ ಪ್ರಕಾರ ಶೂನ್ಯ ಮತ್ತು ಬಿಂದು ಎಂಬುದು ಚುಕ್ಕೆಯನ್ನು ನಿರ್ದೇಶಿಸುತ್ತದೆ ಎಂದಿದ್ದಾರೆ. ಈ ಪದ್ಧತಿಯನ್ನು ಹಿಂದು ಗಣಿತಜ್ಞರು, ಜೋತಿಷ್ಕರು ಕಂಡುಹಿಡಿದರು ಎಂದಿದ್ದು, ವರಾಹಿಮಿಹಿರನ ಕಾಲಕ್ಕೇ ಈ ಪದ್ಧತಿ ಜಾರಿಯಲ್ಲಿತ್ತೆಂದೂ ಇವನು 'ಅಂಕ' ಎಂಬ ಶಬ್ದವನ್ನು ಬಳಸಿರುವನೆಂದು ಹೇಳಿದ್ದಾರೆ. ಸುಬಂಧುವು ನಕ್ಷತ್ರಗಳನ್ನು ಶೂನ್ಯಬಿಂದುವಿನೊಂದಿಗೆ ಹೋಲಿಸಿದ್ದಾನೆ. ಆದರೆ ಗಣಿತ ಮತ್ತು ಜ್ಯೋತಿಷ್ಯದಲ್ಲಿ ಜೈನಮುನಿಗಳು ಪಾರಂಗತರಾಗಿದ್ದರು. ಈ ಜೈನರೇ ಈ ಶೂನ್ಯದ ಬೆಲೆಯನ್ನು ಕಂಡು ಹಿಡಿದಿರಬೇಕು. ರಾಷ್ಟ್ರಕೂಟರ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಬಳಕೆಯಾಗಿರುವುದೂ ಈ ಹೇಳಿಕೆಗೆ ಕಾರಣ.

ಭಾರತದ ವರ್ಣಲಿಪಿಯಲ್ಲಿ ಯೋಗವಾಹಕವಾದ 'ಅಂ' ಎಂಬುದನ್ನು ಹೇಳಲು ಬಿಂದುವನ್ನು ಅಥವಾ ಚುಕ್ಕೆಯನ್ನೂ ಬಳಸಲಾಗಿದೆ. ಅಶೋಕನ ಕಾಲದಿಂದಲೇ ಈ ಚುಕ್ಕೆ ಯೋಗವಾಹಕದ ಕಾರ್ಯವನ್ನು ಮಾಡಿದೆ. ಬಾದಾಮಿ ಚಾಲುಕ್ಯರವರಗೆ ಈ ಚುಕ್ಕೆಯೇ ಬಳಕೆಯಲ್ಲಿರುತ್ತದೆ. ಮುಂದೆ ಅಕ್ಷರದ ವಿಕಾಸವಾದಂತೆ ಈ ಚುಕ್ಕೆಯೂ ಚಿಕ್ಕದಾಗಿ ಸೊನ್ನೆಯಾಗಿ ಕಾಣಿಸಿಕೊಳ್ಳಲಾರಂಭಿಸಿತು ಮತ್ತು ಅಕ್ಷರದ ತಲೆಯ ಮೇಲೆ ಇದ್ದದ್ದು ನಿಧಾನವಾಗಿ ಬಲಪಕ್ಕಕ್ಕೆ ಸರಿದು ಮುಂದೆ ಅಕ್ಷರದ ಪಕ್ಕಕ್ಕೆ ಬಂತು. ಈ ಬಿಂದುವನ್ನು ಅಥವಾ ಸೊನ್ನೆಯನ್ನು ದಶಾಂಶ ಪದ್ಧತಿಯ ಶೋಧಕ ಬಳಸಿಕೊಂಡ. ಈ ಅಂಕೆಯನ್ನು ಬಳಸುವಾಗ ಅನೇಕ ಜನರಿಗೆ ಅರ್ಥವಾಗುತ್ತಿರಲಿಲ್ಲ, ಅದಕ್ಕಾಗಿ ಈ ಅಂಕೆ ಬಳಸುವಾಗ ಅಕ್ಷರಗಳಲ್ಲಿ ಹೇಳಿ ನಂತರ ಅಂಕೆಗಳಲ್ಲಿಯೂ ಹೇಳುತ್ತಿದ್ದರು. ಈ ಪದ್ಧತಿ ಕಲ್ಯಾಣ ಚಾಲುಕ್ಯರ ಅನೇಕ ಶಾಸನಗಳಲ್ಲಿಯೂ ಬಳಕೆಯಲ್ಲಿತ್ತು. ಬೆಳತೂರು ಶಾಸನದಲ್ಲಿ ಈ ದಶಾಂಶ ಪದ್ಧತಿಯಲ್ಲಿ ಕಾಲವನ್ನು ಬರೆದು ಒಂಬತ್ತು ಏಳು ಒಂಬತ್ತು ಎಂದು ಅಕ್ಷರಗಳಲ್ಲಿಯೂ ಬರೆಯಲಾಗಿದೆ. (E.C.III. (R) HG.)

ಈ ದಶಾಂಶ ಪದ್ಧತಿ ಬಳಕೆಗೆ ಬಂದಮೇಲೆ ನಮ್ಮಲ್ಲಿ ಹಿಂದಿನಿಂದ ಇದ್ದ ಅಂಕಲಿಪಿಯ ಬರವಣಿಗೆಯಲ್ಲಿ ೧ ರಿಂದ ೯ ರ ವರೆಗೆ ಮಾತ್ರ ಅಂಕೆಗಳು ಉಳಿದವು ಅದರ ನಂತರದ ಅಂಕಲಿಪಿಯ ಸಂಜ್ಞೆಗಳು ಹಿಂದಕ್ಕೆ ಸರಿದು ಸೊನ್ನೆಗೆ ಅವಕಾಶ ಮಾಡಿಕೊಟ್ಟವು. ಈ ದಶಾಂಶ ಪದ್ಧತಿಯು ಮುಂದೆ ಅರಬರಿಗೆ ಪರಿಚಯವಾಗಿ ಅವರ ಮೂಲಕ ಯೂರೋಪಿನ ದೇಶಗಳಿಗೆ ಸಂಚರಿಸಿತು. ಈ ದಶಾಂಶ ಪದ್ಧತಿಯಲ್ಲಿ ಅಂಕೆಗಳ ಸ್ಥಾನವನ್ನು ಅನುಸರಿಸಿ ಅವುಗಳ ಬಿಡಿ, ಹತ್ತು, ನೂರು, ಸಾವಿರ ಹೀಗೆ ಸ್ಥಾನಗಳು ಮುಂದುವರೆಯುತ್ತವೆ. ಈಗ ರೋಮಿನಲ್ಲಿರುವಂತೆ ಭಾರತದಲ್ಲಿಯೂ ಹಿಂದೆ ಒಂದೊಂದು ಅಂಕೆಗೆ ಒಂದೊಂದು ಚಿಹ್ನೆಯಿತ್ತು.

ಭಾರತದಲ್ಲಿ ಸಂಖ್ಯೆಗಳನ್ನು ಬರೆಯುವ ಅಂಕೆಗಳು ಮುಂದುವರೆದ ಹಾಗೆಯೇ ಅದರೊಂದಿಗೆ ಬೇರೆ ಬೇರೆ ಬಗೆಯ ಅಂಕಲಿಪಿಗಳು ಬಳಕೆಗೆ ಬಂದವು. ಅವುಗಳಲ್ಲಿ ೧. ಕಟಪಯಾದಿ ೨. ಬಾರಖಡಿ ೩. ಸಾಂಕೇತಿಕ ಪದಗಳು ಎಂದ ಮೂರು ಬಗೆ.

ಕಟಪಯಾದಿ

ಈ ಬಗೆಯ ಅಕ್ಷರ ಸಂಜ್ಞೆಗಳು ತಮಿಳುನಾಡು ಹಾಗೂ ಅದರ ಪ್ರಭಾವವಿರುವ ಪ್ರದೇಶಗಳಲ್ಲಿ ಹೆಚ್ಚಿಗೆ ಕಂಡು ಬರುತ್ತದೆ. ಸಂಸ್ಕೃತ ವರ್ಣಮಾಲೆಯ ಸ್ವರ ರಹಿತ ವ್ಯಂಜನಗಳನ್ನು ಇದಕ್ಕೆ ಬಳಸಿಕೊಂಡಿರುತ್ತಾರೆ. ಕ ವರ್ಗದ ಐದು ವ್ಯಂಜನಗಳು ಅನುನಾಸಿಕವೂ ಸೇರಿದಂತೆ ಐದು ಅಂಕೆಗಳನ್ನು ಅಂದರೆ ೧, ೨, ೩, ೪, ೫ ನ್ನೂ ಸೂಚಿಸುತ್ತವೆ. ಹಾಗೆಯೇ ಚ ವರ್ಗದ ಐದು ವ್ಯಂಜನಗಳು ೬ ರಿಂದ ೧೦ನ್ನು ಸೂಚಿಸುತ್ತವೆ. ಮುಂದೆ ಟ ವರ್ಗ ಮತ್ತು ತ ವರ್ಗದ ೧೦ ಅಕ್ಷರಗಳು ೧ ರಿಂದ ೧೦ರ ವರೆಗೂ, ಪ ವರ್ಗದ ವ್ಯಂಜನಗಳು ೧ರಿಂದ ೫ರ ವರೆಗೂ ಬೆಲೆಯನ್ನು ಪಡೆದಿವೆ. ಅವರ್ಗೀಯ ವ್ಯಂಜನಗಳಾದ ಯ ಯಿಂದ ಳ ವರೆಗೆ ಒಂಬತ್ತು ಅಂಕೆಗಳನ್ನು ೧ರಿಂದ ೯ರ ವರೆಗೆ ಬೆಲೆಯನ್ನು ಪಡೆಯುತ್ತವೆ.

೧	೨	೩	೪	೫	೬	೭	೮	೯	೧೦
ಕ	ಖ	ಗ	ಘ	ಙ	ಚ	ಛ	ಜ	ಝ	ಞ
ಟ	ಠ	ಡ	ಢ	ಣ	ತ	ಥ	ದ	ಧ	ನ
ಪ	ಫ	ಬ	ಭ	ಮ					
ಯ	ರ	ಲ	ವ	ಶ	ಷ	ಸ	ಹ	ಳ	

ಈ ಬಗೆಯ ಅಂಕೆಗಳನ್ನು ತಾಳೆಗರಿಗಳ ಮೇಲೆ ಸಂಖ್ಯೆಯನ್ನು ನಮೂದಿಸಲು, ಶಾಸನಗಳಲ್ಲಿ ಕಾಲವನ್ನು ಸೂಚಿಸಲು ಬಳಸಿರುತ್ತಾರೆ. ವ್ಯಂಜನಗಳಿಗೆ ಸ್ವರಗಳನ್ನು ಸೇರಿಸಿದಲ್ಲಿ ಅವುಗಳ ಬೆಲೆಯೇನೂ ಹೆಚ್ಚುವುದಿಲ್ಲ. ಆ ಉಚ್ಚಾರದಲ್ಲಿರುವ ಕೊನೆಯ ವ್ಯಂಜನದ ಬೆಲೆಯೇ ಮುಖ್ಯವಾಗುತ್ತದೆ. ಅನೇಕ ವೇಳೆ ಪದ್ಯಗಳಲ್ಲಿ ಕಾಲಸೂಚಕಗಳು ಬರುವುದರಿಂದ ಪದ್ಯದ ಭಾಗವಾಗಿಯೇ ಇರುತ್ತವೆ. ಉದಾಹರಣೆಗೆ ಶಾಸನವೊಂದರಲ್ಲಿ ಬಂದಿರುವ ಕಾಲದ ಉಲ್ಲೇಖವನ್ನು ಗಮನಿಸಿ, ಕಂಚಿಯ ವರದರಾಜಸ್ವಾಮಿ ದೇವಾಲಯದ ಶಾಸನದಲ್ಲಿ 'ತಲ್ಲಕ್ಷ್ಮೀದ್ಯೇ' ಎಂದಿದ್ದು ಇದು ತ=6, ಲ್ಲ=3, ಕ್ಷ್ಮೀ=೫, ದ್ಯೇ=೧ =೬೩೫೧ ಎಂದಾಗುತ್ತದೆ. ಇದನ್ನು ವಾಮಗತಿಯಲ್ಲಿ (ವಿಲೋಮ ಕ್ರಮ) ಜೋಡಿಸಿದರೆ ಶಕ ೧೫೩೬ ಆಗುತ್ತದೆ. ಇಲ್ಲಿ ಕ್ಷ್ಮೀ ಮತ್ತು ದ್ಯೇ ಎಂಬ ಉಚ್ಚಾರಗಳಲ್ಲಿ ಕ ಅಥವಾ ಷ ಕಾರ ಅಥವಾ ಈ ಕಾರಕ್ಕೆ ಬೆಲೆಯಿಲ್ಲ ಮ ಕಾರಕ್ಕೆ ಮಾತ್ರ ಬೆಲೆ. ಹೀಗಾಗಿ ಇದರ ಬೆಲೆ ೫ ಆಗುತ್ತದೆ. ಹಾಗೆಯೇ ದ್ಯೇ ಎಂಬಲ್ಲಿ ದ ಆಗಲೀ ಏ ಆಗಲೀ ಮುಖ್ಯವಲ್ಲ. ಅಂತ್ಯದ ಉಚ್ಚಾರವಾದ ವ್ಯಂಜನ ಮುಖ್ಯ. ಹೀಗಾಗಿ ಯ ಕಾರ = ೧ ಸಂಖ್ಯೆ ಆಗುತ್ತದೆ.

ಬಾರಖಡಿ

ಇದನ್ನು ಬಾರಖಡಿ ಅಥವಾ ದ್ವಾದಶಾಕ್ಷರಿ ಎಂದೂ ಕರೆಯುತ್ತಾರೆ. ಕಟಪಯಾದಿಯಲ್ಲಿ ವ್ಯಂಜನಗಳು ಬೆಲೆ ಪಡೆದಿದ್ದರೆ ಇಲ್ಲಿ ಸ್ವರಗಳು ಆ ಸ್ಥಾನವನ್ನು ಪಡೆದಿವೆ. ಸಂಸ್ಕೃತದಲ್ಲಿನ ಸ್ವರಗಳು ಅನುಸ್ವಾರ ವಿಸರ್ಗಗಳನ್ನು ಸೇರಿಸಿಕೊಂಡು ೧೬ ಆದರೂ ಅವುಗಳಲ್ಲಿ ಋ ೠ ಌ ೡ ಎಂಬ ನಾಲ್ಕು ಸ್ವರಗಳನ್ನು ತೆಗೆದು ಉಳಿದ ೧೨ ಸ್ವರಗಳನ್ನೂ ೧ರಿಂದ ೧೨ರ ವರೆಗೆ ಅಂಕೆಗಳನ್ನೂ ನಮೂದಿಸಲು ಬಳಸಿರುತ್ತಾರೆ.

೧	೨	೩	೪	೫	೬	೭	೮	೯	೧೦	೧೧	೧೨
ಅ	ಆ	ಇ	ಈ	ಉ	ಊ	ಏ	ಐ	ಓ	ಔ	ಅಂ	ಅಃ

ಮುಂದಿನ ಅಂಕೆಗಳು ಬೇಕಾದಾಗ ಸ್ವರಗಳನ್ನು ಸೇರಿಸುವ ಮೂಲಕ ಹೆಚ್ಚಿಸಿಕೊಂಡಿರುತ್ತಾರೆ.

ಉದಾ: ಅ ಯಿಂದ ಅಃ ವರೆಗೆ ೧ – ೧೨
ಕ ಯಿಂದ ಕಃ ವರೆಗೆ ೧೩ – ೨೪
ಖ ಯಿದ ಖಃ ವರೆಗೆ ೨೫ – ೩೬

ಹೀಗೆ ಮುಂದುವರೆಯುತ್ತದೆ.

ಈ ಬಗೆಯ ಅಂಕಲಿಪಿಗಳು ಪ್ರಮುಖವಾಗಿ ತಾಳೆಗರಿಯ ಮೇಲೆ ಸಂಖ್ಯೆಗಳನ್ನು ನಮೂದಿಸಲು ಬಳಸುತ್ತಾರೆ. ಸಿಂಹಳದಲ್ಲಿ ಈ ಬಾರಾಕಡಿಯಲ್ಲಿ ಋ ೠ ಲೃ ಲೄ ಗಳನ್ನು ಸೇರಿಸಿಕೊಂಡು ೧ ರಿಂದ ೧೬ ರವರೆಗೆ ಲೆಕ್ಕಹಾಕುತ್ತಾರೆ.

ಉದಾ: ಕ ಯಿಂದ ಕಃ ವರಗೆ ೧ ರಿಂದ ೧೬
ಖ ಯಿಂದ ಖಃ ವರೆಗ ೧೭ ರಿಂದ ೩೨.

ಇದಲ್ಲದೆ ೧ ರಿಂದ ೧೦ ರ ವರೆಗಿನ ಸಂಖ್ಯೆಗಳನ್ನು ಕೆಲವು ಅಕ್ಷರಗಳಿಗೆ ಹೇಳಿ ಅವನ್ನು ಪಡೆದಿರುತ್ತಾರೆ.

೧	೨	೩	೪	೫	೬	೭	೮	೯	೧೦
ನ	ನ್ನ	ನ್ಯ	ಷ್ಕ	ಝ್ರು	ಹ	ಗ್ರ	ಪ್ರ	ದ್ರ	ಮ

ಇದನ್ನು ಬಳಸಿ 'ಮನ' ಎಂದು ಬರೆದರೆ ೧೦ + ೧ = ೧೧ ಎಂದರ್ಥ. 'ಹನ' ಎಂದರೆ ೬೧ ಎಂದರ್ಥ, ಹೀಗೆಯೇ ಮುಂದುವರೆಯುತ್ತದೆ. ಬರ್ಮಾ, ಸಿಲೋನ್, ಮಲೆನಾಡು, ಕೇರಳಗಳಲ್ಲಿ ಈ ಬಗೆಯ ಅಂಕ ಲಿಪಿ ಬಳಕೆಯಲ್ಲಿತ್ತು. ಈಗ ಇದರ ಬಳಕೆ ಕಡಿಮೆಯಾಗಿದೆ. ಈಗ ತಮಿಳುನಾಡಿನಲ್ಲಿ ಭಾರತೀಯ ಮೂಲದ ಅಂಕಲಿಪಿ ಬಳಕೆಯಲ್ಲಿಲ್ಲ. ವಿದೇಶಿಯರ ಪ್ರಭಾವದಿಂದ ಪೂರ್ಣವಾಗಿ ಅವನ್ನು ಬಿಟ್ಟು ಅರೇಬಿಯ ಮೂಲದ ಅಂಕೆಗಳನ್ನು ಬಳಸುತ್ತಿದ್ದಾರೆ.

ಶಾರದಾಲಿಪಿಯಲ್ಲಿನ ಅಂಕೆಗಳು ಬ್ರಾಹ್ಮಿಲಿಪಿಯಿಂದಲೇ ಉಗಮವಾಗಿದ್ದರೂ ಈಗಿನ ನಾಗರಿಯ ಲಿಪಿಗಳಿಗಿಂತ ಭಿನ್ನವಾಗಿವೆ. ಒಂದು ಅಂಕೆಯನ್ನು '0' (ಸೊನ್ನೆ) ಎಂದು ಬರೆಯುವ ಮೂಲಕ ತೋರಿಸಿದರೆ ಸೊನ್ನೆಯನ್ನು ಚುಕ್ಕೆಗಳ ಮೂಲಕ ತೋರಿಸಿರುತ್ತಾರೆ. ಅನೇಕ ಕಡೆಗಳಲ್ಲಿ ಉಚ್ಚಾರಣೆಯ ರೀತಿ ಕೂಡ ಬದಲಾಗಿದೆ. (JRAS 1916 p.698 ವಿವರಗಳಿಗೆ I.A. XXXIII ಅಪೆಂಡಿಕ್ಸ್ p.78-81 Genealogy of the Modern Numerals JRAS (NS) VI.14. p. 335ff 15 pp.1 ff)

ಖರೋಷ್ಠಿಯ ಅಂಕಲಿಪಿ

ಬ್ರಾಹ್ಮಿ ಮತ್ತು ಖರೋಷ್ಠಿಗಳೆರಡರಲ್ಲೂ ೧ ರಿಂದ ೪ ರ ವರೆಗೆಗೆ ಅಂಕೆಗಳು ಒಂದೇ ತೆರನಾಗಿವೆ. ಇಲ್ಲಿಂದ ಮುಂದೆ ೪ ಕ್ಕೆ ಗೆರೆಗಳನ್ನು ಸೇರಿಸುವ ಮೂಲಕ ಒಂಬತ್ತರವರೆಗೆ

ಖರೋಷ್ಠಿ ಶಾಸನದಲ್ಲಿನ ಅಂಕ ಲಿಪಿ

ಸ್ಥಳ	ಖರೋಷ್ಠಿ ಅಂಕೆ	ಬರೆದಿರುವ ರೀತಿ	ಈಗಿನ ಬೆಲೆ
ತಕ್ಷಶಿಲೆ	1X	೧+ ೪	೫
ತಕ್ಷಶಿಲೆ	1X⊃	೧+ ೪+ ೧೦	೧೫
ಫತೇಹ್‌ಜಂಗ್	⊃X11	೧೦+ ೪+ ೧+ ೧	೧೬
ಮಾಣಿಕಲಾ	XX⊃	೪ +೪+ ೧೦	೧೮
ಸು ಇ ವಿಹಾರ	1⊃	೧ +೧೦	೧೧
ತರ್ಖ್-ಇ-ಬಾಯಿ	11X33	೧ +೧+ ೪+ ೨೦+ ೨೦	೪೬
ಹಿಡ್ಡಾ	X X33	೪+ ೪ +೨೦+ ೨೦	೪೮
ಫತೇಹ್ ಜಂಗ್	333XX	೨೦+ ೨೦ +೨೦+೪+ ೪	೬೮
ತಕ್ಷ ಶಿಲೆ	333⊃XX	೨೦+ ೨೦ +೨೦+ ೧೦+ ೪+ ೪	೭೮
ತರ್ಖ್-ಇ-ಬಾಯಿ	111ㄨ	೧+ ೧+ ೧+ ೧೦೦	೧೦೩
ಪಾಜ	111⊃ㄨ1	೧+ ೧+ ೧+ ೧೦+ ೧೦೦+ ೧	೧೧೩
ಪಂಜ್‌ತರ್	113ㄨ1	೧+ ೧+ ೨೦+ ೧೦೦+ ೧	೧೨೨
ತಕ್ಷಶಿಲೆ	11X⊃3ㄨ1	೧+ ೧+ ೪+ ೧೦+ ೨೦+ ೧೦೦+ ೧	೧೩೬
ಪೇಶಾವರ	XX333Y1	೪+ ೪+ ೨೦+ ೨೦+ ೨೦+ ೧೦೦+ ೧	೧೬೮
ತಕ್ಷಶಿಲೆ	1⊃3333h1	೧+ ೧೦+ ೨೦+ ೨೦+ ೨೦+ ೨೦+ ೧೦೦+ ೧	೧೯೧
ಲೋರಾಯಿನ್ ತಂಗೈ	XX⊃ᔦ111	೪+ ೪+ ೧೦+ ೧೦೦+ ೧+ ೧+ ೧	೩೧೮
ಜಮಾಲ್ ಘರ್	1XX⊃33ᔦ111	೧+ ೪+ ೪+ ೧೦+ ೨೦+ ೨೦+ ೧೦೦+ ೧+ ೧+ ೧	೩೫೯

ಬರೆಯುತ್ತಾರೆ. ಮುಂದೆ ೧೦ಕ್ಕೆ ಬೇರೆ ಚಿಹ್ನೆ ಬರೆದು ೨೦, ೩೦, ೪೦ಕ್ಕೆ ಅದೇ ಚಿಹ್ನೆಯನ್ನು ಪುನಃ ಪುನಃ ಬರೆಯುವ ಮೂಲಕ ಅಂಕೆಗಳ ಬೆಲೆ ಹೆಚ್ಚಿಸುತ್ತಾರೆ. ಖರೋಷ್ಠಿಯಲ್ಲಿ ೪ರ ಪದ್ಧತಿ ಮತ್ತು ೧೦ ಪದ್ಧತಿ ಮುಖ್ಯವಾಗಿತ್ತು. ೫ ಅಲ್ಲ. ಈ ದಶಾಂಶ ಪದ್ಧತಿಯಲ್ಲಿ ೧೦ನ್ನು ದ್ವಿಗುಣಗೊಳಿಸುವುದು. ಇದು ೯೯ರ ವರೆಗೆ ನಡೆಯುತ್ತದೆ. ಮುಂದೆ ೧೦೦ಕ್ಕೆ ಬೇರೆ ಚಿಹ್ನೆಯನ್ನು ನೀಡುತ್ತಾರೆ. ೧೦೦೦ಕ್ಕೆ ಬೇರೆ ಚಿಹ್ನೆ ಬಳಸಿರುತ್ತಾರೆ. ಈ ಪದ್ಧತಿಯಲ್ಲಿ ತೊಂಬತ್ತು ಬರೆಯಬೇಕಾದಲ್ಲಿ ೨೦+೨೦+೨೦+೨೦+೧೦ ಎಂದು ಬರೆಯಬೇಕು. ಇಪ್ಪತ್ತರ ಸಂಖ್ಯೆಯೂ ಕೂಡ ಖರೋಷ್ಠಿಯ ಒತ್ತಕ್ಷರದ ನಿಯಮದಂತೆ ೧೦ರಲ್ಲಿ ೧೦ ಸೇರಿ ಒಂದೇ ಚಿಹ್ನೆ ಸೃಷ್ಟಿಯಾಗಿದೆ. ಬಹಳಷ್ಟು ಖರೋಷ್ಠಿ ಶಾಸನಗಳಲ್ಲಿ ಈ ಪದ್ಧತಿಯನ್ನೇ ಬಳಸಲಾಗಿದೆ. ಬಲದಿಂದ ಎಡಕ್ಕೆ ಬರೆಯುವ ಲಿಪಿಯಾದ್ದರಿಂದ ಅಂಕೆಗಳನ್ನೂ ಸಹ ಬಲದಿಂದ ಎಡಕ್ಕೆ ಬರೆಯಲಾಗಿವೆ. ಖರೋಷ್ಠಿಯ ಹತ್ತು ಅಂಕೆಯ ಆಕಾರವು ಬ್ರಾಹ್ಮಿಯ ಪ್ರಭಾವದಿಂದ ಬಂದಿರಬಹುದು. ದಾನಿಯವರ ಪ್ರಕಾರ ೧೦೦ ಎಂಬುದು ೧೦ರ ಘಟ್ಟದ ಎಡಕ್ಕೆ ೧ ಗೆರೆ ಎಳೆಯುವ ಮೂಲಕ ಸೃಷ್ಟಿಸಿದುದಾಗಿದೆ. ಇಂದಿಗೂ ನಾಲ್ಕರ ಲೆಕ್ಕವು ಅಳೆಯುವ ಸೇರು, ಪಾವು, ಚಟಾಕುಗಳಲ್ಲಿ ಉಳಿದು ಬಂದಿದೆ. ಭಾರತದಲ್ಲಿ ದಶಾಂಶ ಪದ್ಧತಿ ಜಾರಿಗೆ ಬರುವವರೆಗೆ ಈ ಪದ್ಧತಿ ಉಳಿದಿತ್ತು (ಈಗ ಇಲ್ಲ). ಖರೋಷ್ಠಿಯ

ಹೆಚ್ಚಿನ ಉದಾಹರಣೆಗಳು ಕ್ರಿ.ಪೂ.೨ನೆಯ ಶತಮಾನದಿಂದ ದೊರೆಯಲಾರಂಭಿಸುತ್ತವೆ. ಈ ಖರೋಷ್ಠಿ ಅಂಕಲಿಪಿಯಲ್ಲಿ ಸೊನ್ನೆ ಅಥವಾ ಶೂನ್ಯದ ಬಳಕೆಯಾಗಲಿಲ್ಲ. Sten Konow ಅವರು ಸಂಪಾದಿಸಿರುವ ಖರೋಷ್ಠಿ ಇನ್ಸ್‌ಕ್ರಿಪ್ಷನ್ಸ್ ಸಂಪುಟ II ಭಾಗ I ರಲ್ಲಿನ ಅನೇಕ ಶಾಸನಗಳಲ್ಲಿ ಖರೋಷ್ಠಿ ಅಂಕಲಿಪಿಗಳು ಉದಾಹರಣೆಗಳನ್ನು ಗಮನಿಸಬಹುದಾಗಿದೆ.

ತಕ್ಷಶಿಲೆ ೧೯೧ = ೧+೧೦+೨೦+೨೦+೨೦+೨೦+೧೦೦

ಜಮಾಲ್‌ಘರ್ ೩೫೯ = ೧+೪+೪+೧೦+೨೦+೨೦+೧೦೦+೧+೧+೧

ಸುಇವಿಹಾರ ೧೧ = ೧+೧೦


ಮಾಣಿಕಿಆಲ ೧೮ = ೪+೪+೧೦

ಹಿಡ್ಡಶಾಸನ ೨೮ = ೪+೪+೨೦

ಬರ್ನೆಲ್ ಅವರ ಪ್ರಕಾರ ಖರೋಷ್ಠಿಯ ಅಂಕ ಲಿಪಿಗಳು ಸೆಮೆಟಿಯಾ ಮೂಲದವು. ಬ್ರಾಹ್ಮಿಯ ಅಂಕೆಗಳ ತಲೆಕಟ್ಟುಗಳು ಬ್ರಾಹ್ಮಿ ಲಿಪಿಯು ಅಶೋಕನ ನಂತರ ಬದಲಾವಣೆ ಹೊಂದಿದಂತೆಯೇ ಬದಲಾಗುತ್ತಾ ಬಂದಿವೆ. ಉದಾಹರಣೆಗೆ ತ್ರಿಕೋಣಾಕಾರದ ತಲೆಕಟ್ಟು, ಪೆಟ್ಟಿಗೆಯಾಕಾರವ ಚೌಕಟ್ಟುಗಳನ್ನು ಈ ಅಂಕ ಲಿಪಿಗಳಿಗೂ ಜೋಡಿಸಿರುತ್ತಾರೆ. ಲಿಪಿಕಾರನ ದೃಷ್ಟಿಯಲ್ಲಿ ಇವೂ ಕೂಡ ಲಿಪಿಗಳೇ. ಹೀಗಾಗಿ ಇವೂ ಕೂಡ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದವು.

ಕನ್ನಡದ ಅಂಕಲಿಪಿ ಬೆಳವಣಿಗೆ


ಅಶೋಕನ ಶಾಸನಗಳು ಕರ್ನಾಟಕದಲ್ಲಿ ದೊರಕಿದ್ದರೂ ಆ ಶಾಸನಗಳಲ್ಲಿ ಅಂಕೆಗಳ ಉಲ್ಲೇಖವಿಲ್ಲ. ಆದರೂ ಅಶೋಕನ ನಂತರ ಕರ್ನಾಟಕನವ್ನಾಳಿದ ಶಾತವಾಹನರು ಅಶೋಕನ ವರ್ಣಲಿಪಿ ಮತ್ತು ಅಂಕ ಲಿಪಿಯನ್ನು ತಮ್ಮ ಶಾಸನಗಳಿಗೆ ಬಳಸಿದರು. ಹೀಗಾಗಿ ಅಶೋಕನ ಅಂಕ ಲಿಪಿಯನ್ನೂ ಸ್ವೀಕರಿಸಿದರು. ಈಗಿನ ಕನ್ನಡದ ಅಂಕ ಲಿಪಿಗಳು ಅಶೋಕನ ಅಂಕ ಲಿಪಿಗಳಿಂದಲೇ ಉದಿಸಿವೆ. ಅಶೋಕನ ಶಾಸನಗಳಲ್ಲಿ ದೊರೆಯುವ ಅಂಕೆಗಳೆಂದರೆ ೪, ೬, ೫೦, ೩೦೦ ಮಾತ್ರ. ನಾಲ್ಕು ಕೂಡುವ ಅಂಕೆಯಂತೆ (+ ನಂತೆ) ಇದೆ. ಆರು ಅಂಕೆಯು ಇದೇ ಕಾಲದ ಬ್ರಾಹ್ಮಿ ಲಿಪಿಯ 'ಜ' ಕಾರದಂತೆ ಇದೆ. ೫೦ರ ಚಿಹ್ನೆಯು ಈಗಿನ ಇಂಗ್ಲೀಷ್ ಅಂಕೆ ಆರರಂತೆ ಇದೆ. ೩೦೦ರ ಚಿಹ್ನೆಯು ಇದೇ ಕಾಲದ 'ಸು' ಅಕ್ಷರದಂತೆ ಇದೆ. ಮುಂದೆ ನಾನಾಘಾಟದ ಕಾಲದ ಶಾಸನಗಳಲ್ಲಿ ಅಂದರೆ ಕ್ರಿ.ಪೂ.೨-೧ನೆಯ ಶತಾಬ್ದದಲ್ಲಿ ಇನ್ನೂ ಅನೇಕ ಅಂಕೆಗಳು ಬರೆವಣಿಗೆಗೆ ಬಂದಿರುವುದನ್ನು ಕಾಣಬಹುದಾಗಿದೆ. ಇವುಗಳಲ್ಲಿ ೧, ೨, ೪, ೬, ೭, ೯, ೧೦, ೨೦, ೮೦, ೧೦೦, ೨೦೦, ೩೦೦, ೪೦೦, ೭೦೦ರ ಸಂಖ್ಯೆಗಳು ದೊರೆಯುತ್ತವೆ. ಒಂದರ ಚಿಹ್ನೆಯನ್ನು ಒಂದು ಅಡ್ಡಗೆರೆಯನ್ನು ಸೂಚಿಸುವುದರ ಮೂಲಕ ತೋರಿಸಿದೆ. ಎರಡರ ಚಿಹ್ನೆಯಲ್ಲಿ ಎರಡು ಅಡ್ಡಗೆರೆಗಳನ್ನು ಒಟ್ಟಿಗೆ ತೋರಿಸಿದೆ. ನಾಲ್ಕರ ಚಿಹ್ನೆಯು ಮೌರ್ಯರ ಕಾಲದ ಕ ಅಕ್ಷರದ ತಲೆಯ ಮೇಲೆ ಕವೆಯಂತಹ ತಲೆಯನ್ನು ಬಿಡಿಸಿದೆ. ಆರರ ಸಂಖ್ಯೆಯೂ ಸಹ ಮೌರ್ಯರ ಕಾಲದ ಚಿಹ್ನೆಯ ಬೆಳೆದ ರೂಪವಾಗಿದ್ದು, ಎಡಗಡೆಯ ಗೆರೆಯೊಂದು ಬಲಕ್ಕೆ ಸಾಗಿ ಒಂದು ಸುರುಳಿ ಸೃಷ್ಟಿಸಿ ಕೆಳಕ್ಕೆ ಬಂದಿದೆ. ಏಳರ ಚಿಹ್ನೆಯು ಪ್ರಶ್ನಾರ್ಥಕ ಚಿಹ್ನೆಯಂತೆ ಇದೆ.



ಕ್ರಿ.ಪೂ.೩ನೇ ಶತಮಾನದಿಂದ ಕ್ರಿ.ಶ. ೫ನೆಯ ಶತಮಾನದವರೆಗೆ ಬಳೆದ ಅಂಕಲಿಪಿ ಪಟ್ಟಿಕೆ

ದೇ.ಕೊಂ.ರೆಡ್ಡಿ

ಒಂಬತ್ತರ ಚಿಹ್ನೆಯು ಇಂಗ್ಲೀಷಿನ 'ಯು' ಅಕ್ಷರವನ್ನು ಎಡಮುಖವಾಗಿ ಮಲಗಿಸಿದಂತೆ ಇದ್ದು ಅದರ ಕೆಳಗೆರೆಯಿಂದ ಕೆಳಕ್ಕೆ ಒಂದು ಸಣ್ಣಗೆರೆ ಮೂಡಿದೆ. ಹತ್ತರ ಸಂಖ್ಯೆಯು ಅಶೋಕನ ಕಾಲದ ಬ್ರಾಹ್ಮಿ ಅಕ್ಷರ 'ಮ' ಕಾರವನ್ನು ಬಲಮುಖವಾಗಿ ಮಲಗಿಸಿದಂತೆ ಬಿಡಿಸಿದೆ. ಇಪ್ಪತ್ತರ ಚಿಹ್ನೆಯು ' ವೃತ್ತಾಕಾರದಂತೆ ಇದೆ. ಎಂಬತ್ತರ ಅಂಕೆಯು ಅಂಡಾಕಾರದ ವೃತ್ತಾಕಾರದಲ್ಲಿ ಮೇಲಿನಿಂದ ಕೆಳಕ್ಕೆ ಬರುವಂತೆ ಒಂದು ಗೆರೆ ಬರೆದಿದೆ. ೧೦೦ರ ಚಿಹ್ನೆಯು ಇಂದಿನ ನಾಗರೀ ಲಿಪಿಯ ತಲೆಕಟ್ಟು ತೆಗೆದ 'ಸ' ಕಾರದಂತೆ ಇದೆ. ೨೦೦ರ ಚಿಹ್ನೆಯು ನೂರರ ಸಂಖ್ಯೆಯಂತೆಯೇ ಇದ್ದು ಅದರ ಬಲದಂಡದ ಮೇಲೆ ಬಲಮುಖವಾಗಿ ಅಡ್ಡಗೆರೆ ಬಿಡಿಸಿದೆ. ಮುನ್ನೂರ ಚಿಹ್ನೆಯು ೧೦೦ರ ಚಿಹ್ನೆಯಂತೆ ಇದ್ದು ಬಲದಂಡೆಯಲ್ಲಿ ಬಲಮುಖವಾಗಿ ಎರಡು ಗೆರೆಗಳನ್ನು ಎಳೆಯಲಾಗಿದೆ. ೪೦೦ ಮತ್ತು ೭೦೦ರ ಚಿಹ್ನೆಗಳೂ ಸಹ ೧೦೦ರ ಚಿಹ್ನೆಗೆ ಹೆಚ್ಚಿನ ಗೆರೆಗಳನ್ನು ಸೇರಿಸುವ ಮೂಲಕ ಸೃಷ್ಟಿಸಲಾಗಿದೆ. ಈ ಸಂಖ್ಯೆಗಳೇ ಅಲ್ಲದೆ ನಾನಾಘಾಟದಲ್ಲಿ ಮತ್ತು ಆ ಕಾಲದ ಶಾತವಾಹನರ ಶಾಸನಗಳಲ್ಲಿ ೧೦೦೦, ೨೦೦೦, ೩೦೦೦, ೪೦೦೦, ೬೦೦೦, ೮೦೦೦, ೧೦,೦೦೦, ೨೦,೦೦೦, ೭೦,೦೦೦ದ ವರೆಗಿನ ಅಂಕೆಗಳು ದೊರೆಯುತ್ತವೆ. ಇವುಗಳಲ್ಲಿ ಸಾವಿರವನ್ನು ಇಂಗ್ಲಿಷಿನ 'ಟಿ' ಅಕ್ಷರದ ಆಕಾರದಲ್ಲಿ ಬರೆದಿದ್ದು ಮುಂದೆ ಇದಕ್ಕೆ ಬೇರೆ ಬೇರೆ ಹೆಚ್ಚುವರಿ ಗೆರೆಗಳನ್ನು ಸೇರಿಸಿ, ಬೇರೆ ಬೇರೆ ಹೆಚ್ಚುವರಿ ಸಂಖ್ಯೆಗಳನ್ನು ಪಡೆದಿರುತ್ತಾರೆ.



ಬ್ರಾಹ್ಮಿ ಮತ್ತು ಖರೋಷ್ಠಿ ಅಂಕಲಿಪಿ ಪ್ರಯೋಗಗಳು


ಶಾತವಾಹನರ ನಂತರ ಕರ್ನಾಟಕವನ್ನು ಪಲ್ಲವರು ಆಳುತ್ತಾರೆ. ಬನವಾಸಿ ಪ್ರದೇಶ, ಬಳ್ಳಾರಿ ಪ್ರದೇಶ ಇವೆಲ್ಲಾ ಅವರ ವಶದಲ್ಲಿತ್ತು. ಈ ಪಲ್ಲವರ ಸಮಕಾಲೀನರಾಗಿ ಪೂರ್ವದಲ್ಲಿ ವಿಷ್ಣುಕುಂಡಿನರು, ಸಾಲಂಕಾಯನರು ಆಳುತ್ತಾರೆ. ಇವರೆಲ್ಲಾ ಶಾತವಾಹನರ ಲಿಪಿಯನ್ನು ಮುಂದುವರಿಸುತ್ತಾರೆ. ಅಕ್ಷರಗಳು ವಿಕಾಸ ಹೊಂದಿದಂತೆ ಅಂಕಲಿಪಿಗಳೂ ಬದಲಾಗುತ್ತವೆ. ಶಾತವಾಹನರ ಅಂತ್ಯದ ಕಾಲಕ್ಕಾಗಲೇ ಅಡ್ಡಡ್ಡವಾಗಿ ನೆಟ್ಟಗಿದ್ದ ಗೆರೆಗಳು ಬಾಗಲು ಆರಂಭಿಸಿದ್ದವು ಹಾಗೂ ಕೆಳಮುಖವಾಗಿ ನೇರವಾದ ಗೆರೆಗಳಿಂದ ಕೂಡಿದ ಅಕ್ಷರದ ದಂಡಗಳು ಕೆಳಕ್ಕೆ ಬೆಳೆದು ಎಡಕ್ಕೆ ಬಾಗಿ ಮೇಲಕ್ಕೆ ತಿರುಗಿದ್ದವು. ಕ್ರಿ.ಶ.೪ನೆಯ ಶತಮಾನದ ಮಯಿದವೊಳಲ ಶಾಸನದಲ್ಲಿ ಬಳಸಿರುವ ಅಂಕೆಗಳು ಹಾಗೂ ಜಗ್ಗಯ್ಯಪೇಟ ಶಾಸನಗಳಲ್ಲಿನ ಅಂಕೆಗಳು ಬೆಳವಣಿಗೆಯನ್ನು ತೋರಿಸಿವೆ. ೧೦ರ ಅಂಕೆ ತ್ರಿಕೋಣಾಕಾರವನ್ನು ಪಡೆದಿದೆ. ೫ರ ತಲೆಯ ಮೇಲೆ ಚಿಕ್ಕದಾದ ತ್ರಿಕೋಣಾಕಾರದ ತಲೆಕಟ್ಟು ಬಂದಿದೆ. ಆದರೆ ಸೊನ್ನೆಯ ಬಳಕೆಯಿಲ್ಲ. ಶಾತವಾಹನರ ನಂತರದ ಕರ್ನಾಟಕದ ಶಾಸನಗಳಲ್ಲಿ ಮಯಿದವೋಲು ಮತ್ತು ಹಿರೇಹಡಗಲಿ ಶಾಸನಗಳು ಕರ್ನಾಟಕದಲ್ಲಿ ದೊರೆತ ಮೊದಲ ತಾಮ್ರಶಾಸನಗಳು. ಇವುಗಳಲ್ಲಿ ಮಯಿದವೋಲು ಈಗ ಆಂಧ್ರಪ್ರದೇಶಕ್ಕೆ ಸೇರಿದೆ. ಈ ಶಾಸನಗಳ ತಾಮ್ರಪತ್ರಗಳ ಮೇಲೆ ಅಂಕೆಗಳು ನಮೂದಾಗಿದ್ದು ಇವು ಹೀಗಿವೆ. ಒಂದರ ಸಂಖ್ಯೆ ಸ್ವಲ್ಪಮಟ್ಟಿಗೆ ಅರ್ಧಚಂದ್ರಾಕಾರವಾಗಿ ಕೆಳಕ್ಕೆ ಬಾಗಿದೆ. ಎರಡು ಬೇರೆ ರೀತಿಯಲ್ಲಿ ಬೆಳೆದಿದೆ. ಮೇಲಿನ ಅಂಕೆ ಪಕ್ಕಕ್ಕೆ ಅರ್ಧಚಂದ್ರಾಕಾರವಾಗಿ ತಿರುಗಿದೆ. ಇನ್ನೊಂದು ಗೆರೆ ಕೆಳಭಾಗದಿಂದ ಆರಂಭವಾಗಿ ಮೇಲಕ್ಕೆ ಬೆಳೆದಿದೆ. ಮೂರರ ಅಂಕೆ ಎರಡು ಅಂಕುಡೊಂಕಾದ ಗೆರೆಗಳನ್ನು ಹೊಂದಿದೆ. ನಾಲ್ಕು ತನ್ನ ಮೂಲ ಶಿಲುಬೆಯಾಕಾರದ ಆಕಾರ ಕಳೆದುಕೊಂಡು ಕೆಳಗಿನ ಗೆರೆ ಮೇಲಕ್ಕೆ ಬೆಳೆದು ಅಡ್ಡಗೆರೆಯನ್ನು ಸೇರಿಕೊಂಡು ವೃತ್ತಾಕಾರವನ್ನು ಸೃಷ್ಟಿಸಿದೆ. ಐದರ ಅಂಕೆಯು ಈ ಕಾಲದ 'ಕ' ಕಾರದ ರೂಪವನ್ನು ಹೊಂದಿದೆ. ಸಣ್ಣ ತಲೆಕಟ್ಟು ಹೊಂದಿದೆ. ಅದೇ ಶಾಸನದಲ್ಲಿ ಐದರ ಅಂಕೆಯ ತಲೆಕಟ್ಟು ಬಲಗಡೆಗೆ ಒಂದು ಗೆರೆಯನ್ನು ತಲೆಕಟ್ಟಾಗಿ ಎಳೆಯುತ್ತಾರೆ. ಆರರ ಸಂಖ್ಯೆಯು ಇದೇ ಕಾಲದ ದೀರ್ಘದ 'ದಾ' ಕಾರದಂತಿದೆ. ಏಳರ ಅಂಕೆ ಇಂದಿನ ರೋಮನ್ ಅಂಕೆಯ ಏಳರಂತೆ ಇದೆ. ಎಂಟರ ಸಂಖ್ಯೆಯು ಮೇಲ್ಮುಖವಾಗಿ ಅರ್ಧಚಂದ್ರಾಕಾರವಾಗಿ ಬೆಳೆದು ಬಲಗಡೆಯ ಗೆರೆಯಿಂದ ಕೆಳಮುಖವಾಗಿ ನೇರವಾದ ಗೆರೆ ಬಂದಿದೆ. ಹತ್ತರ ಅಂಕೆಯು ಎರಡು ಅರ್ಧವೃತ್ತಾಕಾರಗಳು ಕೆಳಮುಖವಾಗಿರುವಂತೆ ಬಿಡಿಸಿದೆ. ಹಿರೇಹಡಗಲಿ ಶಾಸನದಲ್ಲಿ ಇವು ಸ್ವಲ್ಪ ಭಿನ್ನವಾಗಿವೆ.

ಶಾತವಾಹನರ ನಂತರ ಕರ್ನಾಟಕವನ್ನಾಳಿದ ಪಲ್ಲವರ ಮ್ಯಾಕಡೋಣಿ ಹಾಗೂ ಹಿರೇಹಡಗಲಿ ಶಾಸನಗಳಲ್ಲಿನ ತಾಮ್ರಪಟಗಳ ಮೇಲೆ ಅಂಕೆಗಳು ನಮೂದಾಗಿದ್ದು ಒಂದರ ಅಂಕೆಯು ಮೇಲಿನಿಂದ ಕೆಳಕ್ಕೆ ಬಾಗಿದಂತೆ ನಾಲ್ಕರ ಅಂಕೆಯು ಮೇಲಿನಿಂದ ಇಳಿದ ಗೆರೆ ಕೆಳಗೆ ಸುರುಳಿ ಸೃಷ್ಟಿಸಿ ಮತ್ತೆ ಮೇಲಿನ ಗೆರೆಯನ್ನು ಸೀಳಿ ಬಲಕ್ಕೆ ಬಂದಿದೆ. ಐದರ ಅಂಕೆಯು ಕ ಕಾರದಂತೆ ಇದ್ದು ಅದರ ತಲೆಯ ಮೇಲೆ ಬಲಕ್ಕೆ ಏರಿದ ಗೆರೆ ಹೊಂದಿದೆ. ಆರರ ಅಂಕೆಯು ಈ ಶಾಸನದಲ್ಲಿ ಎರಡು ರೀತಿ ಬರೆಯಲಾಗಿದೆ. ಒ ಕಾರದ ಅಕ್ಷರಕ್ಕೆ ಅದರ ತಲೆಯ ಮುಂಭಾಗದಿಂದ ಮೇಲೇರಿ ಬಲಕ್ಕೆ ತಿರುಗಿ ಮತ್ತೆ ಕೆಳಕ್ಕೆ ಇಳಿದ ಗೆರೆಯನ್ನು ಹೊಂದಿದೆ. ಏಳರ ಅಂಕೆಯು ಶಾತವಾಹನರ ಅಂಕೆಯೇ ಮುಂದುವರಿದಿದೆ. ಎಂಟರ ಅಂಕೆಯು ಒಳ ಬಾಗಿದ ಎಡಗಡೆಯ ಗೆರೆಯ ಚಿಕ್ಕ ದಂಡಕ್ಕೆ ತಾಕಿದಂತಿದೆ. ಹತ್ತರ ಅಂಕೆಯು ಒಂದರ ಎರಡು ಅಂಕೆಗಳನ್ನು ಒಂದಕ್ಕೊಂದು ಜೋಡಿಸಿದಂತೆ ಇದೆ.

ಇವರ ನಂತರ ಕರ್ನಾಟಕವನ್ನಾಳಿದ ಕದಂಬರ ಗುಡ್ನಪುರ ಶಾಸನದಲ್ಲಿ ೧ ರಿಂದ ೯ ವರೆಗೆ ಅಂಕೆಗಳ ಬಳಕೆಯಾಗಿವೆ. ಕದಂಬ ಲಿಪಿಯಂತೆಯೇ ಅನೇಕ ಲಿಪಿಗಳಿಗೆ ಪೆಟ್ಟಿಗೆಯಾಕಾರದ ತಲೆಕಟ್ಟು ಜೋಡಿಸಲಾಗಿದೆ. ವಾಸ್ತವವಾಗಿ ವಾಕಟಕರ ಶಾಸನವೊಂದರಲ್ಲಿ (ಬಾಸಿಂ) ನಾಲ್ಕರ ಚಿಹ್ನೆಯು ಪೆಟ್ಟಿಗೆಯಾ ಕಾರದ ತಲೆಕಟ್ಟನ್ನು ಹೊಂದಿರುವ ಕ ಕಾರದಂತೆಯೂ, ಐದರ ಚಿಹ್ನೆಯು ನಾಲ್ಕರ ಮಧ್ಯೆ ಬಂದಿರುವ ಗೆರೆಗೆ ಬಲಪಕ್ಕದಲ್ಲಿ ಒಂದು ಮೇಲು ಗೆರೆ ಸೇರಿಸಿದಂತೆಯೂ, ಎಂಟರ ಚಿಹ್ನೆಯು ಕದಂಬರ ಕಾಲದ ರ ಕಾರದ ತಲೆಯಿಂದ ಎಡಕ್ಕೆ ಗೆರೆಯೊಂದು ಬಾಗಿದಂತೆ ಬಿಡಿಸಲಾಗಿದೆ. ಅಕ್ಷರಗಳಲ್ಲಿ ಅಂಕೆಗಳನ್ನು ಹೇಳಿರುತ್ತಾರೆ. ಇದೇ ಪದ್ಧತಿ ಕದಂಬರ ನಂತರ ಕರ್ನಾಟಕವನ್ನಾಳಿದ ಬಾದಾಮಿ ಚಲುಕ್ಯರ ಶಾಸನಗಳಿಗೂ ಅನ್ವಯಿಸುತ್ತದೆ. ಚಲುಕ್ಯರ ಒಂದನೆಯ ಪುಲಕೇಶಿಯ ಶಾಸನದಲ್ಲಿ ಶಕವರ್ಷದ ಉಲ್ಲೇಖವನ್ನು 'ಶಕವರ್ಷೇಷು ಚತುಶ್ಶತೇಷು ಪಞ್ಚಾಷಷ್ಠಿಯುತೇಷು' ಎಂದು ಅಕ್ಷರದಲ್ಲಿಯೇ ಬರೆಯಲಾಗಿದೆ. ಇವರ ಕಾಲದ ಶಾಸನಗಳಲ್ಲಿ ಇನ್ನೂ ದಶಾಂಶ ಪದ್ಧತಿಯ ಬರೆವಣಿಗೆ ಆರಂಭವಾಗಿರಲಿಲ್ಲ. ಒಂದೆರಡು ಅಂಕೆಗಳು ಮಾತ್ರ ದೊರೆಯುತ್ತವೆ. ನಾಲ್ಕು ಅಂಕೆಯು ಮೇಲಿನಿಂದ ಇಳಿಬಿದ್ದ ದಂಡವು ಕೆಳಕ್ಕೆ ಸಾಗಿ ಎಡಕ್ಕೆ ಇಳಿಜಾರಾಗಿ ಬಾಗಿದೆ. ಈ ದಂಡವನ್ನು ಮಧ್ಯದಲ್ಲಿ ಭೇದಿಸಿದ ಸ್ವಲ್ಪ ಬಾಗಿದ ಗೆರೆಯೊಂದು ಇದೆ. ಇದರ ಎಡದಿಂದ ಬಂದ ಲಂಬರೇಖೆಯೊಂದು ಸೇರಿದೆ. ಐದರ ಚಿಹ್ನೆಯು ಚಲುಕ್ಯರ ಕಾಲದ ಕ ಕಾರದಂತಿದ್ದು ತಲೆಕಟ್ಟಿಲ್ಲ. ಎಂಟರ ಚಿಹ್ನೆಯು ಶಾತವಾಹನರ ಕಾಲದ ರೂಪದಲ್ಲಿಯೇ ಮುಂದುವರಿದಿದೆ.

ರಾಷ್ಟ್ರಕೂಟರ ಕಾಲಕ್ಕೆ ದಶಾಂಶ ಪದ್ಧತಿಯ ಅಂಕೆಗಳು ಕಾಣಲಾರಂಭಿಸುತ್ತವೆ. ಆದರೂ ಒಂಬತ್ತರ ವರೆಗಿನ ಅಂಕೆಗಳು ಹಿಂದಿನ ಅಂಕೆಗಳೇ ಆಗಿರುತ್ತವೆ. ಹತ್ತರ ಅಂಕೆ ಮತ್ತು ಅದರ ನಂತರದ ಅಂಕೆಗಳನ್ನು ಕೈ ಬಿಟ್ಟು, ಒಂದರಿಂದ ಒಂಬತ್ತರ ಅಂಕೆಗಳನ್ನು ಪ್ರಧಾನವಾಗಿ ಹೊಂದುತ್ತಾರೆ. ಈ ಕಾಲದಲ್ಲಿಯೂ ಕೂಡ ದಶಾಂಶ ಪದ್ಧತಿ ತಿಳಿಯದವರು ಬಹಳ ಜನರಿದ್ದರು. ಹೀಗಾಗಿ ಅಂಕೆಗಳಲ್ಲಿ ಕಾಲವನ್ನು ಸೂಚಿಸಿದ ಮೇಲೆ ಅದನ್ನು ಅಕ್ಷರಗಳಲ್ಲಿಯೂ ಹೇಳಿ ಆ ತೊಡಕನ್ನು ನಿವಾರಿಸುತ್ತಿದ್ದರು. ಇಲ್ಲಿ ಹತ್ತು ಎಂದು ಬರೆಯಬೇಕಾದಲ್ಲಿ ಹಿಂದಿನ ಪರಂಪರೆಯ ಒಂದೇ ಚಿಹ್ನೆಯನ್ನು ಕೈ ಬಿಟ್ಟು ಒಂದು ಅಂಕೆಯ ಪಕ್ಕದಲ್ಲಿ ಸೊನ್ನೆ ಅಥವಾ ಬಿಂದುವನ್ನು ಸೂಚಿಸುವ ಮೂಲಕ ತೋರಿಸಿರುತ್ತಾರೆ.

ರಾಷ್ಟ್ರಕೂಟರು ಪಾರಂಪರಿಕವಾಗಿ ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಅಂಕಲಿಪಿಯನ್ನೇ ಮುಂದುವರಿಸಿದರು. ತಾಮ್ರಶಾಸನಗಳು ಬಹುತೇಕ ಸಂಸ್ಕೃತ ಭಾಷೆಯವಾದ್ದರಿಂದ ಅವುಗಳಲ್ಲಿ ಅಕ್ಷರಗಳಲ್ಲಿ ಕಾಲವನ್ನು ನಮೂದಿಸಿರುತ್ತಾರೆ. ಶಿಲಾಶಾಸನಗಳಲ್ಲಿ ಮಾತ್ರ ಕಾಲವನ್ನು ಅಂಕೆಗಳಲ್ಲಿ ನಮೂದಿಸಿರುತ್ತಾರೆ. ಆದರೂ ಇವರ ಬಹಳಷ್ಟು ಶಾಸನಗಳಲ್ಲಿ ಕಾಲದ ಉಲ್ಲೇಖವನ್ನು ಅಕ್ಷರದ ಮೂಲಕವೇ ಸೂಚಿಸಿರುತ್ತಾರೆ. ಹತ್ತನೆಯ ಶತಮಾನದ ಅಂತ್ಯದ ಶಾಸನಗಳಲ್ಲಿ ಕಾಲದ ಉಲ್ಲೇಖವು ಸ್ಪಷ್ಟವಾಗಿ ಅಂಕೆಗಳಲ್ಲಿರುತ್ತದೆ. ಕ್ರಿ.ಶ.೭೫೦ ರಿಂದ ೯೭೫ರ ವರೆಗೆ ಆಳಿದ ರಾಷ್ಟ್ರಕೂಟರ ಶಾಸನಗಳಲ್ಲಿಯ ಅಂಕೆಗಳು ಕಾಲದಿಂದ ಕಾಲಕ್ಕೆ ಮಾರ್ಪಾಟು ಹೊಂದಿರುವುದನ್ನು ಕಾಣಬಹುದು.



ಕನ್ನಡ ಅಂಕೆಗಳ ವಿಕಾಸ ಪಟ್ಟಿ

ಪಿ.ಕೊಂ.ರೆಡ್ಡಿ

ಒಂದರ ಅಂಕೆಯು ಬಾದಾಮಿ ಚಲುಕ್ಯರ ಅಂಕೆಯಂತೆ ಒಂಟಿ ಗೆರೆಯು ಎರಡೂ ಕಡೆ ಕೆಳಮುಖವಾಗಿ ಬಾಗಿದಂತೆ ಇದೆ. ಎರಡರ ಚಿಹ್ನೆಯು ಅರ್ಧಚಂದ್ರಾಕೃತಿಯಿಂತೆ ಬಾಗಿ ಎಡಕ್ಕೆ ತೆರೆದಿದೆ. ಈ ಅಂಕೆಯು ಇಂಗ್ಲೀಷಿನ ಯು ಅಕ್ಷರದ ಆಕಾರದಲ್ಲಿದೆ. ಮೂರರ ಅಂಕೆಯು ಇಂದಿನ ಅರಾಬಿಕ್ ಅಕ್ಷರ ಒರ ಆಕಾರಕ್ಕೆ ಸಮೀಪವಾಗಿದೆ. ತಳಭಾಗದಲ್ಲಿ ಗೆರೆಯಿಂದ ಕೆಳಕ್ಕೆ ಇಳಿದ ಚಿಕ್ಕಗೆರೆಯೊಂದಿದೆ. ನಾಲ್ಕರ ಅಂಕೆಯು ಇಂದಿನ ಕನ್ನಡ ಅಂಕಿ ನಾಲ್ಕರ ಆಕಾರಕ್ಕೆ ಸಮೀಪವಾಗಿದ್ದು ಎಡಗಡೆಯ ಗೆರೆಯ ಮೇಲೆ ಕಾಣುವ ಸುರುಳಿ ಇಲ್ಲ. ಇನ್ನೊಂದೆಡೆಯ

ಉದಾಹರಣೆಯಲ್ಲಿ ಮೇಲಿನ ಗೆರೆಗಳು ಬಲಕ್ಕೆ ಸಮಾನಾಂತರವಾಗಿ ಸ್ವಲ್ಪ ಬಾಗಿರುವುದನ್ನು ಗಮನಿಸಬಹುದು. ಐದರ ಅಂಕಿಯು ಎಡಗಡೆ ಕೆಳಗಿನಿಂದ ಬಾಗಿದ ಗೆರೆಯೊಂದು ಮೇಲಕ್ಕೆ ಸಾಗಿ ಮತ್ತೆ ಅದು ಬಲಕ್ಕೆ ತಿರುಗಿ ಕೆಳಮುಖ ಬಾಗಿರುವುದನ್ನು ಗಮನಿಸಬಹುದು. ಆರರ ಅಂಕೆಯು ಮೂರರ ಅಂಕೆಯ ವಿರುದ್ಧ ಮುಖದ ರೂಪದಲ್ಲಿದೆ. ಆದರೆ ಕೆಳಗಿನ ಗೆರೆಯಿಲ್ಲ, ವ್ಯತ್ಯಾಸವೆಂದರೆ ಮೇಲಿನ ಗೆರೆ ಸ್ವಲ್ಪ ಹಿಂದಕ್ಕೆ ಬಾಗಿದ್ದು ಕೆಳಗಿನ ಗೆರೆ ಸ್ವಲ್ಪ ಮುಂದೆ ಬಂದಿದೆ. ಏಳರ ಅಂಕೆಯು ಪ್ರಶ್ನಾರ್ಥಕ ಚಿಹ್ನೆಯಂತೆ ರೂಪ ಪಡೆದಿದೆ. ಎಂಟರ ಚಿಹ್ನೆಯು ಲಂಬರೇಖೆಗೆ ಬಲಗಡೆಗೆ ಅಡ್ಡವಾಗಿ ಗೆರೆ ಎಳೆದಂತೆ ಇದೆ. ಮುಂದುವರಿದ ಶಾಸನಗಳಲ್ಲಿ ಲಂಬರೂಪದ ಗೆರೆಯ ಕೆಳಗೆ ಎಡಮುಖಕ್ಕೆ ಚಿಕ್ಕಗೆರೆಯೊಂದನ್ನು ತೋರಿಸಿರುತ್ತಾರೆ. ಒಂಬತ್ತರ ಚಿಹ್ನೆಯು ಮೆಟ್ಟಿಲ ಆಕಾರದಲ್ಲಿ ಬಂದಿರುವ ಗೆರೆಗಳಂತೆ ಇದೆ. ಮುಂದಿನ ಕಾಲದಲ್ಲಿ ಇದ್ದು ಕೆಳಗಿನ ಸರಳರೇಖೆಗಳು ಬಾಗುರೇಖೆಯಾಗಿ ಅದರ ಬಲದಿಂದ ಗೆರೆಯೊಂದು ಮೇಲಕ್ಕೆ ಬಂದಿದೆ. ಈ ಗೆರೆ ಮೇಲಕ್ಕೆ ಹೋಗುತ್ತ ಸ್ವಲ್ಪ ಪಕ್ಕಕ್ಕೆ ಬಾಗುವ ಲಕ್ಷಣವನ್ನು ಕಾಣುತ್ತೇವೆ. ಇದು ಅಕ್ಷರಕ್ಕಿಂತ ಚಿಕ್ಕದಾಗಿರುತ್ತದೆ.

ಇಲ್ಲಿಂದಾಚೆಗೆ ಮುಂದಿನ ಹಂತಗಳಲ್ಲಿ ಎಲ್ಲಾ ಅಂಕೆಗಳೂ ಈ ರಾಷ್ಟ್ರಕೂಟರ ಅಂಕಲಿಪಿಯಿಂದ ಬೆಳವಣಿಗೆಯನ್ನು ಪಡೆದಿವೆ. ಕೆಲವು ರೂಪಗಳು ಕಲ್ಯಾಣಿ ಚಾಳುಕ್ಯರ ಕಾಲದಲ್ಲಿ ಸ್ಥಿರವಾಗುತ್ತವೆ. ಕಲ್ಯಾಣ ಚಾಳುಕ್ಯರ ಕಾಲದ ಒಂದರ ಅಂಕೆಯು ಹಿಂದಿನ ಲಿಪಿಗಿಂತ ಕೆಳಗೆ ಬಾಗಿದ ಗೆರೆಗಳು ಸ್ವಲ್ಪ ನೀಳವಾಗಿರುತ್ತವೆ. ಎರಡರ ಅಂಕೆಯ ಕೆಳಗಿನ ಗೆರೆಯು ಮೇಲಿನ ಗೆರೆಗಿಂತ ಸ್ವಲ್ಪ ನೀಳವಾಗಿದೆ. ಮೂರರ ಚಿಹ್ನೆಯು ರಾಷ್ಟ್ರಕೂಟರ ಅಂಕೆಯಂತೆ ಇದ್ದರೂ ಅದರ ಕೆಳಭಾಗದ ಗೆರೆಯು ಚಿಕ್ಕದಾಗಿದೆ ಹಾಗೂ ಮಧ್ಯದ ಗೆರೆಯು ಸಮನಾಗಿರದೆ ಕೆಳಕ್ಕೆ ಬಾಗಿದೆ. ನಾಲ್ಕರ ಅಂಕೆಯ ಮೇಲಿನ ಭಾಗವು ನೇರವಾಗಿರದೆ ಸ್ವಲ್ಪ ಒಳಮುಖಕ್ಕೆ ಬಾಗಿದೆ. ಐದರ ಅಂಕೆಯು ಎರಡು ವಕ್ರರೇಖೆಗಳು ಒಂದರ ವಿರುದ್ಧ ಒಂದುತಿರುಗಿರುವಂತೆ ಇದೆ. ಆರರ ಅಂಕೆಯ ಕೆಳಗೆರೆಯು ಸ್ವಲ್ಪ ಮುಂದಕ್ಕೆ ಬೆಳೆದು ಈಗಿನ ರೂಪಕ್ಕೆ ಸಾಮೀಪ್ಯವನ್ನು ಹೊಂದಿದೆ. ಏಳರ ಅಂಕೆಯು ತನ್ನ ರೂಪದಲ್ಲಿ ಸ್ವಲ್ಪ ಬೆಳವಣಿಗೆಯನ್ನು ಹೊಂದಿದೆ. ಮೇಲಿನ ಭಾಗ ಅರ್ಧವೃತ್ತಾಕಾರದಲ್ಲಿದ್ದು ಅಂಕೆಯ ಬಲಗೆರೆಯು ಕೆಳಮುಖವಾಗಿ ೩೦ ಡಿಗ್ರಿ ಬಾಗಿದ ಗೆರೆಯನ್ನು ಹೊಂದಿದೆ. ಎಂಟರ ಅಂಕೆಯೂ ಸಹ ತನ್ನ ಹಿಂದಿನ ಸರಳರೇಖಾ ಗೆರೆಗಳ ರೀತಿಯನ್ನು ಬಿಟ್ಟು ಗೆರೆಯ ಕೆಳಭಾಗವು ಎಡಗಡೆಗೆ ವೃತ್ತಾಕಾರವಾಗಿ ತಿರುಗಿದೆ ಮತ್ತು ಅರೆವೃತ್ತಾಕಾರದ ಗೆರೆಯು ಮೇಲಿನ ಅಡ್ಡಗೆರೆಯಿಂದ ಕೆಳಕ್ಕೆ ಇದೆ. ಒಂಬತ್ತರ ಅಂಕೆಯು ಕೆಳಗಡೆ ಒಂದರಂತೆ ಬಾಗಿನ ಗೆರೆ ಹೊಂದಿದ್ದು, ಇದರಿಂದ ಮೇಲಕ್ಕೆ ಸ್ವಲ್ಪ ಬಾಗಿದ ಗೆರೆಯೊಂದು ಬಂದಿದೆ. ಕೆಲವೆಡೆ ಈ ಗೆರೆ ನೇರವಾಗಿದೆ. ಶೂನ್ಯ ಅಥವಾ ಸೊನ್ನೆಯು ಈ ಕಾಲಕ್ಕೆ ಅನುಸ್ವಾರದ ಸೊನ್ನೆಯನ್ನು ಹೋಲುತ್ತಿತ್ತು.

ಕಲ್ಯಾಣದ ಚಾಳುಕ್ಯರ ನಂತರ ಅಂಕೆಗಳಲ್ಲಿ ಕೆಲವು ಆಂತರಿಕ ಬದಲಾವಣೆಗಳಾಗುತ್ತವೆ. ಕನ್ನಡ ಮತ್ತು ತೆಲುಗು ಅಂಕೆಗಳಲ್ಲಿ ಈ ಆಂತರಿಕ ಬದಲಾವಣೆ ಅಲ್ಪ ಸ್ವಲ್ಪ ಕಾಣಿಸಿಕೊಳ್ಳುತ್ತವೆ. ಇಲ್ಲಿಯವರೆಗೆ ಕನ್ನಡ ಮತ್ತು ತೆಲುಗು ಭಾಷಾ ಶಾಸನಗಳಲ್ಲಿ ಒಂದೇ ರೀತಿಯ ಅಂಕೆಗಳನ್ನು ಬಳಸುತ್ತಿದ್ದು, ಇಲ್ಲಿಂದ ಮುಂದೆ ಅದು ಬದಲಾಗುತ್ತದೆ. ೩, ೭, ೮ ಅಂಕೆಗಳು ಇಂದಿಗೂ ಅಲ್ಪ ವ್ಯತ್ಯಾಸದೊಂದಿಗೆ ತೆಲುಗಿನಲ್ಲಿ ಅಂದಿನಂತೆಯೇ ಉಳಿದಿವೆ.

ವಿಜಯನಗರ ಕಾಲದ ಶಾಸನಗಳಲ್ಲಿ ಒಂದರ ಅಂಕೆ ಅರ್ಧವೃತ್ತಾಕಾರಕ್ಕೆ ತಿರುಗಿದೆ. ಎರಡರ ಅಂಕೆಯ ಮೇಲೆ ಬಾಗಿ ಗೆರೆಯು ಮತ್ತೂ ಒಳಕ್ಕೆ ಬಾಗಿದೆ. ಮೂರರ ಅಂಕೆಯು ಕಲ್ಯಾಣದ ಚಾಳುಕ್ಯರ ಲಿಪಿಯಂತೆ ಇದ್ದರೂ ಅದರ ಕೆಳಗೆರೆಯು ಚಿಕ್ಕದಾಗಿದ್ದು ಅದರಿಂದ ಹೊರಬಂದಿದ್ದ ಕೊಂಡಿಗೆರೆ ಕಾಣುವುದಿಲ್ಲ. ನಾಲ್ಕರ ಅಂಕೆಯ ಬಲಗೆರೆ ಎತ್ತರವಾಗಿದ್ದು, ಎಡಗೆರೆ ಒಳಕ್ಕೆ ಸ್ವಲ್ಪ ಬಾಗಿದೆ. ಐದರ ಅಂಕೆಯು ಎರಡು ಪ್ರತ್ಯೇಕ ಘಟಕಗಳಾಗಿದ್ದು ಒಂದು ಎಡಗಡೆ ಗೆರೆಯ ಮೇಲ್ಭಾಗವು ಒಳಕ್ಕೆ ಸುರುಳಿಯಂತೆ ಬಾಗಿದ್ದು, ಬಲಗಡೆ ಗೆರೆಯು ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಸ್ವಲ್ಪ ಬಾಗಿ ಇದರ ಕೆಳಭಾಗವು ಸ್ವಲ್ಪ ಉದ್ದದ ಅಡ್ಡರೇಖೆಯನ್ನು ಹೊಂದಿದೆ. ಆರರ ಅಂಕೆಯಲ್ಲಿ ಹೆಚ್ಚಿನ ಬದಲಾವಣೆ ಇಲ್ಲ. ಏಳರ ಅಂಕೆಯ ಕೆಳಕ್ಕೆ ಇಳಿದ ಗೆರೆಯು ಈಗ ಅರೆವೃತ್ತಾಕಾರವಾಗಿ ಮೇಲಕ್ಕೆ ತಿರುಗಿದೆ. ಎಂಟರ ಅಂಕೆಯು ಎರಡು ರೇಖೆಗಳು ಇಂಗ್ಲೀಷಿನ 'ವಿ' ಆಕಾರವನ್ನು ಪಡೆದು, ಬಲದ ರೇಖೆಯ ಮೇಲ್ಭಾಗದಿಂದ ಅಡ್ಡಗೆರೆಯೊಂದು ಬಂದಿದೆ. ಒಂಬತ್ತರ ಅಂಕೆಯು ಆರರ ಅಂಕೆಯನ್ನು ತಲೆಕೆಳಗೆ ಮಾಡಿದಂತಿದೆ.


ನಂತರ ಕಾಲದಲ್ಲಿ ಮೂರರ ಅಂಕೆಯಲ್ಲಿ ಕೆಳಗೆ ಬಂದಿದ್ದ ಚಿಕ್ಕಗೆರೆ ನೇರಕ್ಕೆ ಬಲಕ್ಕೆ ಬಂದಿದೆ. ಐದರ ಅಂಕೆಯ ಎರಡು ಪ್ರತ್ಯೇಕ ಘಟಕಗಳು ಒಂದಾಗಲು ಅವೆರಡರ ಮಧ್ಯೆ ಒಂದು ಗೆರೆ ಬಂದಿದೆ ಹಾಗೂ ಮುಂಭಾಗದ ಬಾಗುಗೆರೆಯ ಕೆಳಭಾಗ ಮತ್ತು ಮೇಲ್ಭಾಗದಲ್ಲಿ ವೃತ್ತಗಳು ಬಂದಿವೆ. ಎಂಟರ ಎಡಭಾಗದ ಗೆರೆಯ ಮೇಲ್ಭಾಗದಲ್ಲಿ ವೃತ್ತವೊಂದು ಬಂದಿದೆ. ಇನ್ನೂ ಉಳಿದ ಅಂಕೆಗಳಲ್ಲಿ ಹೇಳಿಕೊಳ್ಳುವಂತಹ ಬದಲಾವಣೆಗಳು ಕಾಣುವುದಿಲ್ಲ. ಅರ್ಧ ಅಂಕೆಗಳನ್ನು ತೋರಿಸಲು ಬೇರೆಯೊಂದು ವ್ಯವಸ್ಥೆಯನ್ನು ಹೊಂದಿದ್ದು, ಅದನ್ನು ಮುಂದೆ 'ಹಲ್‌ಗಳು' ಎಂಬ ವಿಷಯದಡಿಯಲ್ಲಿ ಗಮನಿಸಬಹುದು.

ತಮಿಳು ಅಂಕಲಿಪಿ

ಹಿಂದಿನ ತಮಿಳಿನಲ್ಲಿ ಎರಡು ಬಗೆಯ ಅಂಕೆಗಳ ಬಳಕೆಯಿತ್ತು. ಅವುಗಳು ಅಂಕಪಲ್ಲಿ ಮತ್ತು ಅಕ್ಷರಪಲ್ಲಿ ಎಂದು. ಅಂಕಪಲ್ಲಿಯು ದಶಾಂಶ ರೀತಿಯಲ್ಲಿದ್ದರೆ ಅಕ್ಷರಪಲ್ಲಿಯಲ್ಲಿ ಅಕ್ಷರಗಳೇ ಅಂಕೆಗಳಂತೆ ಬರೆಯಲಾಗುತ್ತವೆ. ಆರಂಭದ ತಮಿಳು ಶಾಸನಗಳಲ್ಲಿ ಅಕ್ಷರಗಳಲ್ಲಿಯೇ ಅಂಕೆಗಳನ್ನು ಹೇಳುತ್ತಿದ್ದರು. ಚೋಳರ ಶಾಸನಗಳಲ್ಲಿಯೂ ಇದು ಕಾಣಬರುತ್ತದೆ. ರಾಜೇಂದ್ರಚೋಳ ದೇವರ್ಕು ಯಾಣ್ಡು ... ಒಂಬತ್ತು ಏಳು ಒಂಬತ್ತು ಮೆನೆ (೯೭೯) ಎಂದೂ, ಪಲ್ಲವರ ಶಾಸನಗಳಲ್ಲಿ 'ಕೋ ವಿಜಯ ನಂದಿವಿಕ್ಕರಮ ಪರುಮಕ್ಕು ಯಾಣ್ಡು ಅಱುಪತ್ತೊನ್ನಾವದು ...' (೬೧ನೇ ವರ್ಷ) ಉಲ್ಲೇಖಗಳಾಗಿವೆ. ಕೆಲವೊಮ್ಮ ಶಾಸನಗಳಲ್ಲಿ ಅಕ್ಷರಗಳಲ್ಲಿ ಹೇಳಿ ಅಂಕೆಗಳಲ್ಲಿಯೂ ಹೇಳುತ್ತಿದ್ದರು.

ತಮಿಳಿನಲ್ಲಿ ೧೦, ೧೦೦, ೧೦೦೦ಕ್ಕೆ ಪ್ರತ್ಯೇಕ ಚಿಹ್ನೆಗಳಿದ್ದು ಇವನ್ನು ೧ ರಿಂದ ೯ರ ವರೆಗಿನ ಅಂಕೆಗಳಿಗೆ ಸೇರಿಸಿ ಹೆಚ್ಚಿನ ಅಂಕೆಗಳನ್ನು ಪಡೆಯುತ್ತಿದ್ದರು. ಬೇರೆಡೆಯಲ್ಲಿ ೧೦, ೨೦, ೩೦ ಮುಂದೆ ೯೦ರ ವರೆಗೆ ಪ್ರತ್ಯೇಕ ಚಿಹ್ನೆಗಳಿವೆ. ೨೦೦, ೨೦೦೦ ಬರೆಯಬೇಕಾದಲ್ಲಿ ಮೊದಲು ೧೦೦ ಅಥವಾ ೧೦೦೦ದ ಚಿಹ್ನೆ ಬರೆದು ಅನಂತರ ಅಂಕೆಗಳನ್ನು ಸೇರಿಸುತ್ತಿದ್ದಾರೆ.

ತಮಿಳು ಅಂಕ ಲಿಪಿ



ನಾಸಿಕ್ ನಾಗಾರ್ಜುನಕೊಂಡ ಬ್ರಿಟೀಷ್ ಮೂಸಿಯಂ ಮಟ್ಟೆಪಾಡು
ಪಿಕಿರಾ ಮದ್ರಾಸ್ ಮ್ಯೂಸಿಯಂ ಶಿನ್ನಮನೂರ್ ಉತ್ತರ ಮೇರೂರ್
ತಿರುವಳಂಗೋಡು ಕೊಲ್ಲೂರು ಮಠ ತಿರುಕ್ಕಳರ್ ಪುದುಕೋಟೆ
ವೆಲ್ವಕುಡಿ ಅನ್‌ಬಿಲ್


ಕೃಪೆ: ಸುಬ್ರಮಣಿಯಂ

ಆದರೆ ೪೦೦ ಅಥವಾ ೪೦೦೦ದಿಂದಾಚೆಗೆ ಅಂಕೆಗಳನ್ನು ಮೊದಲು ಬರೆದು ಸಾವಿರದ ಚಿಹ್ನೆಯನ್ನು ಅನಂತರ ಸೇರಿಸುತ್ತಾರೆ. ಕ್ರಿ.ಶ.೭ನೆಯ ಶತಮಾನದ ನಂತರ ದಶಾಂಶ ಪದ್ಧತಿ ಬಳಕೆಗೆ ಬಂದರೂ ತಮಿಳುನಾಡಿನಲ್ಲಿ ಇದನ್ನು ಬಳಸಿಕೊಳ್ಳಲಿಲ್ಲ. ಸೊನ್ನೆಯ ಬಳಕೆಯಾಗಲಿಲ್ಲ. ಉದಾಹರಣೆಗೆ ೨೪೯೫ ಎಂದು ಬರೆಯಬೇಕಾದಲ್ಲಿ ೨+೧೦೦೦, ೪+೧೦೦,೯+೧೦,೫ ಎಂದೇ ಬರೆಯಬೇಕು. ಇಲ್ಲಿ ಏಳು ಚಿಹ್ನೆಗಳನ್ನು ಬಳಸಬೇಕಾಗುತ್ತದೆ.

ತಮಿಳಿನ ಅಂಕಲಿಪಿಗಳು ಅಶೋಕನ ಬ್ರಾಹ್ಮಿ ಅಂಕಲಿಪಿಗಳಿಂದಲೇ ಬಂದಿವೆ. ಅಶೋಕನಿಂದ ಶಾತವಾಹನರು ಪಡೆದರು. ಶಾತವಾಹನರಲ್ಲಿ ಎಲ್ಲಾ ಅಂಕೆಗಳೂ ದೊರೆಯುತ್ತವೆ. ಆದರೆ ದಶಾಂಶ ಪದ್ಧತಿಯಿಲ್ಲ. ೧೦, ೧೦೦, ೧೦೦೦ಕ್ಕೆ ಬೇರೆ ಚಿಹ್ನೆಗಳನ್ನು ಬಳಸಲಾಗಿದೆ. ಅವರ ಅಂತ್ಯಕಾಲದಲ್ಲಿ ಬಂದ ಇಕ್ಷ್ವಾಕುಗಳು ಶಾತವಾಹನರ ಈ ಅಂಕೆಗಳನ್ನು ಮುಂದುವರಿಸಿದರು. ಶಾತವಾಹನರ ನಂತರ ದಕ್ಷಿಣ ಪ್ರದೇಶಗಳನ್ನು ಆಳಿದ ಪಲ್ಲವರು ಶಾತವಾಹನರ ಅಂಕೆಗಳನ್ನು ಮುಂದುವರಿಸಿದರು. ಮಯಿದವೊಳಲು, ಬ್ರಿಟೀಷ್ ಮ್ಯೂಸಿಯಂ ಶಾಸನಗಳಲ್ಲಿ ಈ ಲಿಪಿಗಳನ್ನು ಕಾಣಬಹುದು. ಮುಂದೆ ಅನಂತವರ್ಮನ ಮಟ್ಟೆಪಾಡು ಶಾಸನದಲ್ಲಿ (EI.XVII) ಇದರ ಮುಂದುವರಿದ ರೂಪಗಳನ್ನು ಕಾಣಬಹುದು. ಇಲ್ಲಿಯವರೆಗೆ ಅಂಕಲಿಪಿಗಳಲ್ಲಿ ಬದಲಾವಣೆಯಿಲ್ಲ. ಮುಂದೆ ಪಾಂಡ್ಯರಾಜ ಜಟಿಲವರ್ಮನ ಪರಾಂತಕನ (IA.XX) ಶಾಸನದಲ್ಲಿ (ಸು.ಕ್ರಿ.ಶ.೭೭೦) ಒಂದು ಎಂಬುದು ಅರ್ಧಚಂದ್ರಾಕಾರವಾಗಿ ಮೇಲ್ಮುಖವಾಗಿದೆ. ಎರಡು ಎಂಬುದು ಇಂದಿನ ಕನ್ನಡ ಅಂಕಿ ೭ ರಂತೆ ಇದೆ. ಮೂರು ಎಂಬುದು ಮೂರು ಪ್ರತ್ಯೇಕ ಅಂಕೆಗಳು ಒಂದುಗೂಡಿ ಇಂದಿನ ಅರಾಬಿಕ್ ಮೂರರಂತಿದ್ದು ಕೆಳರೇಖೆಯಿಂದ ಹಿಂಭಾಗಕ್ಕೆ ಬಾಲವನ್ನು ಪಡೆದಿದೆ. ನಾಲ್ಕು ಎಂಬುದು ಅಶೋಕನ ಕಾಲದ ಕೆ ಅಕ್ಷರದಂತೆ ಇದೆ. ಐದು ಎಂಬುದು ಅರಾಬಿಕ್ ಅಂಕಲಿಪಿ 3 ರಂತೆ ಇದೆ. ಆರು ಎಂಬುದು ಇಂಗ್ಲೀಷಿನ ಸಣ್ಣ ಅಕ್ಷರ T ನಂತೆ ಇದೆ. ಏಳು ಎಂಬುದು ಶಾತವಾಹನರ ಕಾಲದ ರೂಪದಂತೆ ಇದ್ದರೂ ಅಂಕಲಿಪಿಯ ತಳಭಾಗ ಒಳಕ್ಕೆ ಮಡಚಿಲ್ಲ ನೇರವಾಗಿದೆ. ಈ ಲಿಪಿಗಳ ಮುಂದುವರಿದ ಮುಂದಿನ ರೂಪವನ್ನು ಉತ್ತರ ಮೇರೂರ್‌ನ ಪಾರ್ಥಿವೇಂದ್ರವರ್ಮನ (ಸು.೧೦ನೆಯ ಶತಮಾನ) ಶಾಸನದಲ್ಲಿ ಕಾಣಬಹುದು. ಇದರಲ್ಲಿ ಹತ್ತು, ನೂರು, ಸಾವಿರದ ಚಿಹ್ನೆಗಳು ಸಿಕ್ಕುತ್ತವೆ. ತಿರುವಳಂಗೋದಿನ ಒಂದನೆಯ ರಾಜೇಂದ್ರಚೋಳನ (ಸು.ಕ್ರಿ.ಶ.೧೦೨೫) ಶಾಸನದಲ್ಲಿ ಒಂದು ಎಂಬುದು ಅಶೋಕನ ಕಾಲದ 'ಕ' ಕಾರದಂತೆ ಇದೆ. ಎರಡು, ಮೂರು ಹಿಂದಿನ ಪಾಂಡ್ಯರ ಶಾಸನದ ಅಂಕೆಗಳಂತೆಯೇ ಇವೆ. ನಾಲ್ಕು ಮಾತ್ರ ಅಕ್ಷರದ ಕೆಳಭಾಗ ಮೇಲಕ್ಕೆ ಮಡಚಿ ಅಡ್ಡಗೆರೆಗೆ ತಾಕಿದ್ದರೆ ಅಡ್ಡಗೆರೆಯ ಬಲಭಾಗ ಮೇಲಕ್ಕೆ ತಿರುಗಿದೆ. ಏಳರ ಕೆಳಗೆರೆ ಚಿಕ್ಕದಾಗಿದೆ. ಎಂಟು ಬಲದಿಂದ ಕೆಳಕ್ಕೆ ಬಂದ ಗೆರೆ ಪಕ್ಕಕ್ಕೆ ತಿರುಗಿ ಕೆಳಕ್ಕೆ ಇಳಿಬಿದ್ದಿದೆ. ಒಂಬತ್ತು ಕೆಳಕ್ಕೆ ಇಳಿದ ಗೆರೆಯ ಬಲಭಾಗಕ್ಕೆ ಅಂಟಿಕೊಂಡಂತೆ ಅರ್ಧ ಚಂದ್ರಾಕಾರದ ಗೆರೆ ಇದೆ. ಹತ್ತು ತಮಿಳಿನ ಯ ಕಾರದಂತೆ ಇದೆ.

ಮುಂದೆ ತಿರುಕ್ಕಳರ್‌ನ ಮುಮ್ಮಡಿ ಕುಲೋತ್ತುಂಗನ (ಕ್ರಿ.ಶ.೧೨೦೪) ತಾಮ್ರ ಶಾಸನದಲ್ಲಿ ಕಾಣಬಹುದಾಗಿದೆ. ಇಲ್ಲಿ ಒಂದು ಅಂಕೆಗೆ ತಲೆಯ ಮೇಲೆ ತಲೆಕಟ್ಟು ಬಂದಿದೆ. ಎರಡು ಕನ್ನಡದ ೭ ಅಂಕೆಯಂತೆ ಇದೆ. ಮೂರು ತಮಿಳಿನ ನ ಕಾರದ ಬಲಗೆರೆ ಪಕ್ಕಕ್ಕೆ ತಿರುಗಿದಂತಿದೆ. ನಾಲ್ಕು ಇದೇ ಭಾಷೆಯ ಚ ಕಾರ ರೂಪದಂತಿದ್ದು ಮಧ್ಯದ ಅಡ್ಡಗೆರೆ ಮೇಲಕ್ಕೆ ಎದ್ದಿದೆ. ಐದು ತಮಿಳಿನ ರು ಕಾರದಂತಿದೆ. ಆರು ತಮಿಳಿನ ಚ ಕಾರದ ಬಲಗೆರೆಗೆ ಕೆಳಮುಖ ಇಳಿದ ಗೆರೆಯನ್ನು ಇಳಿಸಲಾಗಿದೆ. ಒಂಬತ್ತು ಚ ಕಾರದಂತಿದ್ದು ಚ ಕಾರದ ಮಧ್ಯಗೆರೆಯಿಂದ ಸುರುಳಿ ಬಂದು ಅದರಿಂದ ಮೇಲಕ್ಕೆ ಗೆರೆ ಎದ್ದಿದೆ. ಹತ್ತು ತಮಿಳಿನ ಯ ಕಾರದಂತಿದೆ. ಕ್ರಿ.ಶ.೧೫೮೩ರ ಪಾಂಡ್ಯರ ಪುದುಕೋಟ್ಟೈ ಶಾಸನದಲ್ಲಿ (TAS. Vol.I) ಅಂಕೆಗಳು ಪೂರ್ಣವಾಗಿ ತಮಿಳಿನ ಈಗಿನ ಅಕ್ಷರದ ರೂಪಗಳಿಗೆ ಬದಲಾಗಿವೆ. ಒಂದು ತಮಿಳಿನ 'ಕ' ಕಾರವಾಗಿದೆ. ಎರಡು

ಅರಾಬಿಕ್ ಸಂಖ್ಯೆಗಳ ಬೆಳವಣಿಗೆ



೧. ದೇವನಾಗರಿ ಕ್ರಿ.ಶ.೨ನೆಯ ಶತ ೨. ಹತ್ತನೆಯ ಶತಮಾನದ ಅರಾಬಿಕ್ ಅಂಕಲಿಪಿ ೩. ಲತಿನ ಹಸ್ತಪ್ರತಿಯಲ್ಲಿನ ಅರಾಬಿಕ್ ಅಂಕೆಗಳು ೪. ಅರಾಬಿಕ್ ಲಿಪಿಯ ಪಶ್ಚಿಮದ ಮಾದರಿ ೫-೭ ಅರಾಬಿಕ್ ಅಂಕೆಗಳ ಪೂರ್ವದ ಮಾದರಿ ೮. ಅರಾಬಿಕ್ ಲಿಪಿಯಲ್ಲಿ ಸೇರ್ಪಡೆಯಾಗಿರುವ ಅಂಕಲಿಪಿಗಳು ೯-೧೩. ಹನ್ನೊಂದು-ಹನ್ನೆರಡನೆಯ ಶತಮಾನದ ಅಂಕೆಗಳು ೧೪. ಹನ್ನೆರಡನೆಯ ಶತಮಾನದ ಲಿಪಿ ೧೫-೧೭ ೧೫ನೆಯ ಶತಮಾನದ ಅರಬ್ ಬೈಜಾಂಟೈನ್ ಅಂಕಲಿಪಿ ೧೮. ಕ್ರಿ.ಶ.ಹನ್ನೆರಡನೆಯ ಶತಮಾನದ ಉತ್ತರಾರ್ಧದ ಅಂಕಲಿಪಿ ೧೯. ಕ್ರಿ.ಶ.೧೪ನೆಯ ಶತಮಾನದ ಲಿಪಿ ೨೦. ಕ್ರಿ.ಶ.೧೫ನೆಯ ಶತಮಾನದ ಇಟಲಿಯ ಹಸ್ತಪ್ರತಿಯ ಅಂಕೆಗಳು

ಕೃಪೆ : ಡಿ. ಡಿರಿಂಜರ್

ತಮಿಳಿನ ಉ ಕಾರ, ಮೂರು ತಮಿಳಿನ ನ ಕಾರದ ಬಾಗಿದ ಗೆರೆ ಕೆಳಗಿನಿಂದ ಅಡ್ಡಗೆರೆ ಬಂದಿದೆ. ನಾಲ್ಕು ಚ ಕಾರ, ಐದು-ರು ಕಾರ, ಆರು-ಚ ಕಾರಕ್ಕೆ ಬಲಕ್ಕೆ ಸೇರಿಸಿದ ಎರಡು ಹೆಚ್ಚುವರಿ ಗೆರೆಗಳು. ಏಳು-ಎ ಕಾರ, ಎಂಟು-ಅ ಕಾರಕ್ಕೆ ತಿರುಗಿದೆ. ಹೀಗೆ ಬ್ರಾಹ್ಮಿಯ ಅಂಕೆಗಳು ಅನೇಕ ಹಂತಗಳಲ್ಲಿ ವಿಕಾಸವಾಗಿ ಅಕ್ಷರರೂಪಕ್ಕೆ ಬಂದಿವೆ. ಇವಲ್ಲದೆ ಅಕ್ಷರಪಲ್ಲಿಯ ಅಂಕೆಗಳೂ ದೊರೆಯುತ್ತವೆ. ಉದಾಹರಣೆಗೆ ಪಾಂಡ್ಯರಾಜನ ವೆಳ್ವಿಕುಡಿ ಶಾಸನ ಮತ್ತು ಸುಂದರಚೋಳನ ಅನ್ಬಿಲ್ ಶಾಸನದಲ್ಲಿ ಈ ಅಂಕೆಗಳು ಆ ಕಾಲಕ್ಕೆ ಅಕ್ಷರ ರೂಪಕ್ಕೆ ತಿರುಗಿವೆ. ಈ ವಿವರಗಳನ್ನು ಮುಂದೆ ನೀಡಿರುವ ಚಾರ್ಟಿನಲ್ಲಿ ಕಾಣಬಹುದು.

ತಮಿಳುನಾಡಿನಲ್ಲಿ ಈಗ ಈ ಲಿಪಿಗಳಾವುವೂ ಬಳಕೆಯಲ್ಲಿಲ್ಲ. ಬ್ರಿಟೀಷರ ಆಗಮನದೊಂದಿಗೆ ಮತ್ತು ಅವರು ಸಾಹಿತ್ಯ ರಚನೆಗೆ ಕೈಹಾಕಿದ ಮೇಲೆ ತಾವು ಬಳಸುತ್ತಿದ್ದ ಅರಾಬಿಕ್ ಲಿಪಿಗಳನ್ನು ಬಳಕೆಗೆ ತಂದಿರುತ್ತಾರೆ. ಈಗ ಅರಾಬಿಕ್ ಅಂಕಲಿಪಿಗಳೇ ತಮಿಳುನಾಡಿನಲ್ಲಿ ಪ್ರಚಲಿತದಲ್ಲಿವೆ. ಹಳೆಯ ಕಟಪಯಾದಿಯೂ ಈಗ ಬಳಕೆಯಲ್ಲಿಲ್ಲ.

ಭೂತ ಸಂಖ್ಯೆ

ಭಾರತದ ಶಾಸನಗಳಲ್ಲಿ ವಿಶೇಷವಾಗಿ ಸಂಸ್ಕೃತ ಹಾಗೂ ಅದರಿಂತ ಪ್ರಭಾವಿತ ಶಾಸನಗಳಲ್ಲಿ ಇನ್ನೊಂದು ಬಗೆಯ ಅಂಕಗಳಲ್ಲಿ ಕಾಲವನ್ನು ಹೇಳಲು ಸೂಚಿಸಿರುತ್ತಾರೆ. ಇಲ್ಲಿ ಪದಗಳಿಗೂ ಅಂಕೆಗಳಿಗೂ ಸಂಬಂಧವಿರುವುದಿಲ್ಲ. ಆದರೆ ಪದಗಳಿಗೆ ಅಂಕೆಗಳ ಅರ್ಥವನ್ನು ನೀಡಬೇಕಾಗುತ್ತದೆ. ಉದಾಹರಣೆಗೆ ನಯನ ಎಂದರೆ ಕಣ್ಣುಗಳು ಎಂದರ್ಥ. ಆದರೆ ಈ ಪದವು ಅಂಕೆಗಳ ಸ್ಥಳದಲ್ಲಿ ಬಂದಾಗ ಇದಕ್ಕೆ ಕಣ್ಣುಗಳು ಎಂಬ ಅರ್ಥವು ಗೌಣವಾಗಿ ಕಣ್ಣುಗಳು ಎರಡೇ ಇರುವುದರಿಂದ ಇಲ್ಲಿ ಎರಡು ಎಂಬ ಅರ್ಥವೇ ಪ್ರಧಾನವಾಗುತ್ತದೆ. ಹಾಗೆಯೇ ಆಕಾಶವನ್ನು ಶೂನ್ಯಕ್ಕೂ, ಪುರ, ತ್ರಿನೇತ್ರವನ್ನು ಮೂರಕ್ಕೂ, ವೇದ, ಸಮುದ್ರಗಳನ್ನು ನಾಲ್ಕಕ್ಕೂ ಬಳಸುತ್ತಾರೆ. ಇದು ಹೀಗೆಯೇ ಮುಂದುವರಿಯುತ್ತದೆ. ಈ ಅಂಕೆಗಳನ್ನು ಶಕವರ್ಷವನ್ನು ಸೂಚಿಸಲು ಸಾಮಾನ್ಯವಾಗಿ ಬಳಸಿದ್ದು, ಪದಗಳನ್ನು ಅಂಕೆಗಳಿಗೆ ಬರೆದ ಮೇಲೆ ಅದನ್ನು ವಾಮಗತಿಯಿಂದ ಓದಬೇಕಾಗುತ್ತದೆ. ಉದಾಹರಣೆಗೆ ಹಂಪೆಯ ಶಾಸನದಲ್ಲಿ ಬರುವ 'ದ್ರುಕ್ಪುರ ಶಿಖೀಂದು ಶಶಾಂಕಮಿರಲ್ ...' ಎಂಬುದನ್ನು ಓದಿದಾಗ ೨೩೩೧ ಆಗುತ್ತದೆ. ಇದನ್ನು ವಾಮಗತಿಯಲ್ಲಿ ಓದಿದಾಗ ೧೩೩೨ ಶಕವರ್ಷವಾಗುತ್ತದೆ.

ಹಲ್‌ಗಳು

ವಿಜಯನಗರ ಕಾಲದ ಶಾಸನಗಳನ್ನು ಓದುವಾಗ ಅನೇಕ ವೇಳೆ ಶಾಸನಗಳಲ್ಲಿ ಕೊಟ್ಟ ಹಣದ ಲೆಕ್ಕವನ್ನು ಪೂರ್ಣ ಸಂಖ್ಯೆಗಳಲ್ಲಿಲ್ಲದೆ ಅರೆಸಂಖ್ಯೆಗಳಲ್ಲಿರುತ್ತದೆ. ಅಂದರೆ ಒಂದು ಎಂಬುದು ಪೂರ್ಣ ರೂಪವಾದರೆ ೧/೨, ೧/೪. ೩/೪ ಇವು ಅಪೂರ್ಣ ಸಂಖ್ಯೆಗಳು. ಇವುಗಳನ್ನು ಸೂಚಿಸಲು ಶಾಸನಗಳಲ್ಲಿ ಉದ್ದದ ಗೆರೆಗಳು ಅಥವಾ ಅಡ್ಡಗೆರೆಗಳು ಇವಲ್ಲದೆ ಲ್

ಆಕಾರದ ಮುಂತಾದ ಚಿಹ್ನೆಗಳನ್ನು ಬಿಡಿಸಿರುತ್ತಾರೆ. ಗದ್ಯಾಣವನ್ನು ಸೂಚಿಸಲು ಇಂಗ್ಲೀಷಿನ S ಅಕ್ಷರವನ್ನು ಬರೆದಿರುತ್ತಾರೆ. ಈ ಎಸ್ ಅಕ್ಷರವನ್ನು ಕೆಲವು ಶಾಸನಗಳಲ್ಲಿ ಅಡ್ಡ ಮಲಗಿಸಿ ಬರೆದಿರುತ್ತಾರೆ. ಇವೆಲ್ಲಾ ಹಣದ ರೂಪವನ್ನು ಹೇಳುವ ಚಿಹ್ನೆಗಳಾಗಿವೆ. ಲ್ ಆಕಾರವನ್ನು ತೆಲುಗಿನಲ್ಲಿ 'ಪಳ್ಳಿ' ಎಂದು ಕರೆಯುತ್ತಾರೆ.

ಶಾಸನೋಕ್ತ ಚಿಹ್ನೆಗಳು

ಗಟ್ಟಿ ಗದ್ಯಾಣ 

ಹಣ 

೧/೪ 

೧/೨ 

೩/೪ 

೧/೮ 


ಇನ್ನೊಂದು ರೀತಿಯ ಬರವಣಿಗೆಯಲ್ಲಿ ರೂಪಾಯಿಯ ಪೂರ್ಣಾಂಶನ್ನು ನಾಲ್ಕು ಭಾಗ ಮಾಡಿದ ಲೆಕ್ಕದಂತೆ

ಒಂದಾಣೆ 


ಎರಡಾಣೆ 


ಮೂರಾಣೆ 

ನಾಲ್ಕಾಣೆ 

ಎಂಟಾಣೆ 


ಹನ್ನೆರಡಾಣೆ 

ಒಂದು ರೂಪಾಯಿ ಐದಾಣೆ 

ಒಂದು ರೂಪಾಯಿ ಆರಾಣೆ 

ಒಂದುರೂಪಾಯಿ ಏಳಾಣೆ 

ಒಂದು ರೂಪಾಯಿ ಹನ್ನೊಂದಾಣೆ 

ಎರಡು ರೂಪಾಯಿ 

ಉದಾ. ವಿನಿಯೋಗದ ಬ್ರಾಹ್ಮಣ ಜನ ೩೫ಕ್ಕಂ, ಜನ ೧ ಕಂ ಗದೆ ಖ ೦ ೦ ದ ಲೆಕ್ಕವನೂ ಗದೆ ೧೭ ೦ ಎಂದಿರುವುದನ್ನು ೩೫ ಜನಕ್ಕೆ ಖಂಡುಗ ೧/೨ ದಂತೆ ಒಟ್ಟು ಗದ್ದೆ ಖಂ ೧೭ ೧/೨ ಎಂದು ಓದಬೇಕು. (ಕ.ವಿ.ಶಾ.ಸಂ.೩. ನಂ.೭೪)

ಅಧ್ಯಾಯ - ೭

ಭಾರತೀಯ ಲಿಪಿಗಳ ಹರವು

ಭಾರತದಲ್ಲಿ ಅಶೋಕನು ಬಳಸಿದ ಬ್ರಾಹ್ಮಿ ಲಿಪಿಯು ಮುಂದೆ ಕಾಲದಿಂದ ಕಾಲಕ್ಕೆ ವಿಕಾಸವಾಗುತ್ತ ಬಂದಿತು. ಅಶೋಕನ ನಂತರ ಗುಪ್ತರ ಕಾಲದಲ್ಲಿ ಭಾರತದ ಅನೇಕ ಪ್ರದೇಶಗಳು ಮತ್ತೆ ಒಗ್ಗೂಡಿದವು. ಸಮುದ್ರಗುಪ್ತನು ದಕ್ಷಿಣಕ್ಕೂ ದಂಡೆತ್ತಿ ಬಂದಿದ್ದ. ಇವರ ಕಾಲದಲ್ಲಿ ವೈದಿಕಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತು ಅನೇಕ ಕೃತಿಗಳು ರಚಿತವಾದವು. ಸಂಸ್ಕೃತ ಭಾಷೆ ಎಲ್ಲಾ ಕಡೆ ಬಳಕೆಯಾಗುತ್ತಾ, ಪ್ರಾಕೃತ ಭಾಷೆಯು ಮರೆಯಾಯಿತು. ಸಂಸ್ಕೃತ ಭಾಷೆಯನ್ನು ಗುಪ್ತರೇ ಅಲ್ಲದೆ, ಅವರ ಪ್ರಭಾವವಲಯಕ್ಕೆ ಬಂದ ಅನೇಕ ರಾಜಮನೆತನಗಳು ಬಳಸಿದರು. ಇವರ ಕಾಲದಲ್ಲಿ ಲಿಪಿಯ ಬಳಕೆಯೂ ಹೆಚ್ಚಾಗಿ ಕೆಲವು ಪ್ರಭೇಧಗಳನ್ನು ಪಡೆಯಿತು. ವಿದ್ವಾಂಸರು ಈ ಪ್ರಭೇಧಗಳನ್ನು ಪೂರ್ವ-ಪಶ್ಚಿಮವೆಂದೂ, ಆರ್.ಡಿ. ಬ್ಯಾನರ್ಜಿಯವರು ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಮಧ್ಯ ಏಷಿಯಾ ಲಿಪಿಯೆಂದು ವಿಂಗಡಿಸುತ್ತಾರೆ. ಎಸ್.ಎನ್. ಚಕ್ರವರ್ತಿಯವರು ಈ ವಿಭಾಗಗಳನ್ನು ಒಪ್ಪದೆ, ಪೂರ್ವ ಭಾಗದ ಲಿಪಿಯು ಗುಪ್ತರಿಗಿಂತ ಮೊದಲೇ ಇತ್ತೆಂದು ಹೇಳುತ್ತಾರೆ.

ಮಧ್ಯ ಏಷಿಯಾದ ಲಿಪಿಗಳು

ಗುಪ್ತರ ಕಾಲದಲ್ಲಿ ಬೌದ್ಧಧರ್ಮದ ಹರಡುವಿಕೆಯೊಂದಿಗೆ ಗುಪ್ತರ ಲಿಪಿಯು ಟರ್ಕಿಸ್ತಾನ್ ಮತ್ತು ಪಶ್ಚಿಮ ಚೀನಾ ಪ್ರದೇಶಗಳಿಗೆ ಹರಡುತ್ತದೆ. ಡಾ। ಹಾರ್ನ್ಲೆ ಎಂಬುವವರು ಕ್ರಿ.ಶ.೧೮೯೦ರಲ್ಲಿ ಟರ್ಕಿಸ್ತಾನ್‌ದ ಕೋಟಾನಿಯಾದಲ್ಲಿ ಕೆಲವು ಭೂರ್ಜಪತ್ರದ ಹಾಳೆಗಳನ್ನು ಪತ್ತೆ ಹಚ್ಚಿ ೧೮೯೭ರಲ್ಲಿ ಪ್ರಕಟಿಸಿದರು. ಮುಂದೆ ಇವರೇ ೧೮೯೮ರಲ್ಲಿ ಕೋಟಾನಿಯಾ ಹಸ್ತಪ್ರತಿಗಳನ್ನು ಪ್ರಕಟಿಸುತ್ತಾರೆ. ಈ ಪ್ರದೇಶದಲ್ಲಿ ಗುಪ್ತರ ಎರಡು ರೀತಿಯ ಲಿಪಿಗಳು ಕಂಡುಬಂದಿವೆ. ೧. ನೇರೆಯಾದ ಗುಪ್ತಲಿಪಿ, ೨. ಬಾಗಿದ ಗುಪ್ತಲಿಪಿ.

ಈ ಲಿಪಿಗಳು ಪೂರ್ವ ತುರ್ಕಿಸ್ತಾನ ಮತ್ತು ವಾಯುವ್ಯ ಚೀನಾದ ಪ್ರದೇಶವಾದ ತುನ್-ಹು-ಅಂಗ್‌ನಲ್ಲಿ ದೊರೆತಿದ್ದು ಇವುಗಳ ಲಿಪಿಯು ಭಾರತದ ಗುಪ್ತರ ಲಿಪಿಯಂತೆ ಇದೆ. ವ್ಯಂಜನಗಳು ಸ್ವರಸಹಿತವಾಗಿವೆ. ಅಲ್ಲದೆ ಸ್ಥಳೀಯ ಲಿಪಿಗೆ ಬೇಡವಾದ ಲಿಪಿಗಳನ್ನು ಕೈ ಬಿಟ್ಟು, ಬೇಕಾಗುವಂತಹ ೧೨ ಹೊಸ ಅಕ್ಷರಗಳನ್ನು ಸೇರಿಸಿಕೊಂಡಿರುತ್ತಾರೆ. ಸ್ಥಳೀಯ ಭಾಷೆಯನ್ನು ಬಳಸಿರುತ್ತಾರೆ. ಚಿಯನ್ ಅಥವಾ ತ್ಸಿಯೆನ್-ಫೋ-ತುಂಗ್ (ಸಹಸ್ರ ಬುದ್ಧ ಗುಹೆ) ಎಂಬಲ್ಲಿ

ದೊರೆತ ಶಾಸನದ ಭಾಷೆಯನ್ನು ವಿದ್ವಾಂಸರಲ್ಲಿ ಕೆಲವರು ಪೂರ್ವ ಇರಾನಿ ಭಾಷೆ ಎಂದರೆ ಹೋಲ್‌ಸ್ಟೈನ್ ಎಂಬಾತ ತೊಖಾರಿಯ ಎಂದು ಕರೆದ. ಲ್ಯೂಡರ್ ಎಂಬುವವನು ಶಕರ ಭಾಷೆ ಎಂದು ಕರೆದ. ಮುಂದೆ ಸ್ಟೈನ್ ನೋ ಎಂಬಾತ ಖೋಟಾನಿಯ ಶಕರ ಲಿಪಿ ಎಂದು ಕರೆದ. ಖೋಟಾನಿಯರು ಕ್ರಿ.ಶ.ಸು.೨ನೆಯ ಶತಮಾನದಲ್ಲಿಯೇ ಬರವಣಿಗೆಯನ್ನು ಪ್ರಾರಂಭಿಸಿದ ಸೂಚನೆಗಳಿದ್ದರೂ, ದೊರಕಿರುವ ಹಸ್ತಪ್ರತಿಗಳು ಕ್ರಿ.ಶ.೯–೧೦ನೆಯ ಶತಮಾನಕ್ಕೆ ಸೇರಿದವು. ಖೋಟಾನಿ ಭಾಷೆಗೆ ಬ್ರಾಹ್ಮಿಲಿಪಿಯನ್ನು ಅಳವಡಿಸಿಕೊಂಡಿದ್ದಾರೆ.


ಖೋಟಾನಿಯರ ವ್ಯಂಜನಗಳು ಭಾರತೀಯ ವ್ಯಂಜನಗಳ ಉಚ್ಚಾರಕ್ಕಿಂತ ಭಿನ್ನವಾಗಿವೆ. ಯ, ಲ, ವ, ಸ ಮತ್ತು ಹ ವನ್ನು ವಿಸಂಧಿ (hiatus) ವ್ಯಂಜನಗಳನ್ನಾಗಿ ಬಳಸಲಾಗಿದೆ. ಒತ್ತಕ್ಷರಗಳನ್ನು ಸರಳೀಕರಣಗೊಳಿಸಿ ಒಂದರೊಡನೊಂದನ್ನು ಸೇರಿಸಿರುತ್ತಾರೆ. ಇವುಗಳ ಜೊತೆಗೆ ಹೊಸ ಸಂಯುಕ್ತಾಕ್ಷರಗಳಾದ ಇಚ್, ಜ, ಲ, ಯ, (ich, js, ls, ys) ಅಕ್ಷರಗಳನ್ನು ಆವಿಷ್ಕಾರಗೊಳಿಸಿಕೊಂಡಿರುತ್ತಾರೆ. ಖೋಟಾನಿನ ಈ ಲಿಪಿಗಳು ಸೆಮೆಟಿಕ್ ಲಿಪಿಯಿಂದ ಪ್ರಭಾವ ಹೊಂದಿವೆ. ಬೋವರ್ ಹಸ್ತಪ್ರತಿಯು ಸಂಸ್ಕೃತ ಭಾಷೆಯಲ್ಲಿದ್ದು ಭೂರ್ಜಪತ್ರದ ಮೇಲೆ ಬರೆಯಲಾಗಿದೆ. ಇದರ ಅಂದಾಜು ಕಾಲ ಕ್ರಿ.ಶ.೫ ನೆಯ ಶತಮಾನ.

ಟಿಬೆಟ್ ದೇಶದ ಲಿಪಿ

ಟಿಬೆಟ್ ಭಾಷೆಯನ್ನು ಟಿಬೆಟ್ ದೇಶದಲ್ಲಿ ಮಾತನಾಡುತ್ತಾರೆ. ಇದರಲ್ಲಿ ಟಿಬೆಟ್–ಬರ್ಮಾ, ಟಿಬೆಟ್–ಚೈನಾ ಪ್ರಬೇಧಗಳಿವೆ. ಈ ಭಾಷೆಗಳಿಗೆ ಭಾರತದಲ್ಲಿ 'ಬೋತಿಯ' ಎಂದು ಕರೆಯುತ್ತಾರೆ. ಭೂತಾನ್, ಸಿಕ್ಕಿಂ, ನೇಪಾಳ, ಲಡಖ್ ಮತ್ತು ಬಾಲಿಸ್ತಾನಗಳಲ್ಲಿ ಈ ಭಾಷೆಯನ್ನು ಮಾತನಾಡುತ್ತಾರೆ. ಟಿಬೆಟ್ ಮತ್ತು ಭಾರತದ ಸಂಬಂಧ ಬಹು ಪ್ರಾಚೀನವಾದದ್ದು. ಬೌದ್ಧಧರ್ಮವನ್ನು ಆ ದೇಶವು ಪಡೆದ ಮೇಲೆ ಆ ದೇಶದ ಪ್ರಾಚೀನ ಬರವಣಿಗೆ ಕ್ರಿ.ಶ.೭ ನೆಯ ಶತಮಾನದಿಂದ ಆರಂಭವಾಗುತ್ತದೆ.

ಟಿಬೆಟ್ ಲಿಪಿಯನ್ನು ಕ್ರಿ.ಶ.೬೩೯ರಲ್ಲಿ ಥೋನ್–ಮಿ–ಸಮ್–ಭೋಟ ಎಂಬ ಮಂತ್ರಿಯು ಕಂಡುಹಿಡಿದನಂತೆ. ಈತನು ಸ್ರೋಂಗ್–ಬ್‌ಸ್ತಾನ್–ಸ್ಗಾಮ್–ಪೋ ಎಂಬ ರಾಜನ ಮಂತ್ರಿ. ಆದರೆ ಟಿಬೆಟ್ ಲಿಪಿಯು ಸ್ವತಂತ್ರ ಜನ್ಯ ಲಿಪಿಯಲ್ಲ. ಹಿಂದೆ ಇದ್ದಿರಬಹುದಾದ ಹಳೆಯ ಲಿಪಿಯನ್ನು ಅವಿಷ್ಕಾರ ಮಾಡಿ, ಗುಪ್ತಲಿಪಿಯ ವರ್ಣಮಾಲೆಗನುಸಾರವಾಗಿ ಕೆಲವು ಹೊಸ ಲಿಪಿಗಳನ್ನು ಸೇರ್ಪಡೆ ಮಾಡಿರುತ್ತಾರೆ. ಹೀಗೆ ಜೋಡಿಸುವಾಗ ತಮಗೆ ಅನಾವಶ್ಯಕವೆಂದು ಕಂಡು ಬಂದ ಲಿಪಿಗಳಾದ ಹ್ರಸ್ವಗಳನ್ನು (ಮೆದು ಅಕ್ಷರಗಳು) (soft) ಬಿಟ್ಟರು. ಎ.ಎಫ್. ರುಡಾಲ್ಫ್ ಹಾರ್ನ್ಲೆಯು ಈ ಲಿಪಿಯು ಖೋಟಾನಿಯನಲ್ಲಿದ್ದ ಗುಪ್ತಲಿಪಿಯಿಂದ ಜನ್ಯವಾಗಿರಬೇಕೆಂದು ಹೇಳಿದ್ದಾರೆ.

ಟಿಬೆಟ್ ಲಿಪಿಯನ್ನು ಎರಡು ವಿಧಗಳಲ್ಲಿ ಬರೆಯುತ್ತಾರೆ. ತಲೆಕಟ್ಟಿರುವುದು. ಅಚ್ಚಿಗಾಗಿ ಬಳಸುವ ಲಿಪಿ. ಇದನ್ನು ದ್ಬು–ಚಾನ್ (ಉ–ಚಾನ್) ಎಂದು ಕರೆಯುತ್ತಾರೆ. ಇನ್ನೊಂದು ರೀತಿಯದೆಂದರೆ ತಲೆಕಟ್ಟಿಲ್ಲದ, ಬಾಗಿದ ಗೆರೆಗಳಿಂದ ಕೂಡಿರುವ, ಕೈ ಬರಹದ ಲಿಪಿ. ಇದನ್ನು ದ್ಬು–ಮೇದ್ (ಉ–ಮೇದ್) ಎಂದು ಕರೆಯುತ್ತಾರೆ. ಇವಲ್ಲದೆ ಆಡಳಿತದಲ್ಲಿ ಬಳಸುವ ರಹಸ್ಯ



ಟಿಬೆಟ್ ಲಿಪಿ

ಲಿಪಿಯೂ ಬಳಕೆಯಲ್ಲಿತ್ತು. ಇದನ್ನು ರಿನ್-ಸ್ಪುನ್ಸ್ Rin-spuns ಎಂಬುವವನು ೧೪ನೆಯ ಶತಮಾನದಲ್ಲಿ ಬಳಕೆಗೆ ತಂದ. ಇವನ ಹೆಸರಿನಲ್ಲಿಯೇ ಆ ಲಿಪಿ ಇದೆ.

ಟಿಬೆಟ್ ಲಿಪಿಯು ಬಹು ಸರಳವಾಗಿದೆ. ಉ-ಚಾನ್‌ನಲ್ಲಿ ಎಲ್ಲ ವ್ಯಂಜನಗಳಲ್ಲಿ 'ಅ' ಸ್ವರವು ಸೇರಿದ್ದರೆ ಉಳಿದವುಗಳಲ್ಲಿ ಬೇರೆ ಬೇರೆ ಚಿಕ್ಕ ಚಿಹ್ನೆಗಳನ್ನು ಸೇರಿಸುವ ಮೂಲಕ ತೋರಿಸುತ್ತಾರೆ. ಯ ಕಾರದ ಚಿಹ್ನೆಯನ್ನು 'ಕ್ಷಪ್ಯ' ಎಂದು ಉಚ್ಚರಿಸುತ್ತಾರೆ. ಟಿಬೆಟ್ ಲಿಪಿಯಲ್ಲಿ ಎರಡು ಪ್ರಬೇಧಗಳಿವೆ. ೧. ಪಸ್ಲೆಪ ಅಥವಾ ಫಗ್ಸ-ಪ ಕ್ರಿ.ಶ.೧೨೩೪-೧೨೭೯. ಇದು ಕುಬ್ಲೈಖಾನನು ಮಂಗೋಲಿಯಾವನ್ನು ಗೆದ್ದಮೇಲೆ ಅದನ್ನು ಬೌದ್ಧಧರ್ಮಕ್ಕೆ ಪರಿವರ್ತಿಸಿದ. ೨. ಲೇಪ್ಚ ಲಿಪಿ – ಇದು ಅಲ್ಲಿ ಸಿಕ್ಕಿಂನಲ್ಲಿ ಬಳಕೆಯಲ್ಲಿತ್ತು. ಇದನ್ನು ಸಿಕ್ಕಿಂನ ದೊರೆ ಚಕ್‌ದೋರ್ ನಮ್‌ಗ್ಯೇ ಎಂಬುವವನು ಕಂಡುಹಿಡಿದ. ಈ ಲಿಪಿಯಲ್ಲಿನ ಕ್, ಙ್, ತ್, ನ್, ಪ್, ಮ್, ರ್, ಲ್ ಎಂಬ ವ್ಯಂಜನಗಳು ತಲೆಕಟ್ಟನ್ನು ಹೊಂದಿವೆ.

ದಕ್ಷಿಣ ಏಷಿಯಾದ ಲಿಪಿ

ಸಿಂಹಳಿ ಲಿಪಿ

ಲಂಕಾದ್ವೀಪವನ್ನು ಬೇರೆ ಬೇರೆಯವರು ತಾಪ್ರೊಬನೆ, ಸಿಲೋನ್, ಲಂಕಾ, ತಾಂಬಪಣ್ಣಿ, ಸಿಂಹಳದ್ವೀಪ, ಸೆರೆನ್‌ದಿಬ್, ಈಳಂ ಮುಂತಾದ ಹೆಸರುಗಳಿಂದ ಕರೆದಿರುತ್ತಾರೆ. ಬಹು ಹಿಂದೆಯೇ ಅಂದರೆ ಕ್ರಿಪೂ.ಐದನೆಯ ಶತಮಾನದಲ್ಲಿ ಭಾರತದಿಂದ ಈ ದ್ವೀಪಕ್ಕೆ ಜನರ ವಲಸೆ ಆರಂಭವಾಯಿತು. ಬಂಗಾಳ, ಒರಿಸ್ಸಾ, ಗುಜರಾತ್ ಮತ್ತು ತಮಿಳುನಾಡಿನಿಂದ ಈ ವಲಸೆಗಳು ನಡೆದಿವೆ. ಕ್ರಿಪೂ.ಮೂರನೆಯ ಶತಮಾನದಲ್ಲಿ ಅಂದರೆ ಅಶೋಕನ ಕಾಲದಲ್ಲಿ ಇಲ್ಲಿನ ಜನರು ಬೌದ್ಧಧರ್ಮವನ್ನು ಅವಲಂಬಿಸಿದರು. ಬಹುಶಃ ಅಂದಿನಿಂದಲೇ ಇಲ್ಲಿ ಬರೆವಣಿಗೆ ಆರಂಭವಾಗಿರಬೇಕು.

ಸಿಂಹಳ ಲಿಪಿಯ ಬೆಳೆದ ಹಂತಗಳನ್ನು ವಿದ್ವಾಂಸರು ನಾಲ್ಕು ಹಂತಗಳಲ್ಲಿ ವಿಂಗಡಿಸುತ್ತಾರೆ. ೧. ಪಾಳಿ-ಪ್ರಾಕೃತ ಸಿಂಹಳಿ: ಕ್ರಿ.ಪೂ.ಮೂರನೆಯ ಶತಮಾನಕ್ಕೆ ಸೇರಿಸಬಹುದಾದ ಈ ಶಾಸನಗಳು ಚಿಕ್ಕವು. ನೀರಿನ ಆಸರೆಯ ಬಳಿ ದೊರೆಯುತ್ತವೆ. ಲಂಕಾದ ಪಶ್ಚಿಮ ಭಾಗವನ್ನು ಬಿಟ್ಟು ಉಳಿದೆಲ್ಲಾ ಕಡೆ ಪ್ರಾಚೀನ ಶಾಸನಗಳು ದೊರೆಯುತ್ತವೆ. ಈ ಶಾಸನಗಳಲ್ಲಿ ಸಂಯುಕ್ತಾಕ್ಷರಗಳಿಲ್ಲ. ೨. ಎರಡನೆಯ ಭಾಗವಾದ ಪ್ರಾಚೀನ ಸಿಂಹಳಿಯು ಕ್ರಿ.ಶ.ನಾಲ್ಕನೆಯ ಶತಮಾನದಿಂದ ಕ್ರಿ.ಶ.ಎಂಟನೆಯ ಶತಮಾನದವರೆಗೆ ದೊರೆಯುವ ಶಾಸನಗಳಲ್ಲಿ ಕಾಣಬರುತ್ತದೆ. ಮುಂದೆ ಈ ಲಿಪಿಯ ಜೊತೆಗೆ ಗ್ರಂಥಲಿಪಿಯ ಬಳಕೆಯೂ ಸಾರ್ವತ್ರಿಕವಾಗುತ್ತದೆ. ೩. ಮಧ್ಯದ ಹಂತದ ಸಿಂಹಳೀ ಲಿಪಿಯ ಶಾಸನಗಳು ಕ್ರಿ.ಶ.೯-೧೦ನೆಯ ಶತಮಾನದಲ್ಲಿ ಹೆಚ್ಚಿಗೆ ದೊರೆತಿವೆ. ೧೧ನೆಯ ಶತಮಾನದಲ್ಲಿ ಕಡಿಮೆ ದೊರೆತಿವೆ. ಈ ಲಿಪಿಯೇ ಮುಂದಿನ ಅಥವಾ ಈಗಿನ ಸಿಂಹಳದ ಲಿಪಿಗೆ ಮೂಲವಾಗಿದೆ. ೪. ಈಗಿನ ಸಿಂಹಳಿ ಮತ್ತು ಮಧ್ಯಕಾಲೀನ ಲಿಪಿಗಳ ಮಧ್ಯೆ ಇರುವ ವ್ಯತ್ಯಾಸ ತೀರಾ ಕಡಿಮೆ. ಡಾ| ವಿಮಲಾನಂದ ಅವರು ಸಿಂಹಳಿ ಲಿಪಿಯ ಬೆಳವಣಿಗೆಯನ್ನು (೧) ಕ್ರಿ.ಪೂ.೨೪೭-೦೩, (೨) ಕ್ರಿ.ಪೂ.೩ ರಿಂದ ಕ್ರಿ.ಶ.೪೯೦, (೩) ಕ್ರಿ.ಶ.೪೯೦-೭೦೩ ಮತ್ತು (೪) ಕ್ರಿ.ಶ.೭೦೩ ರಿಂದ ೧೦೭೩ರ ವರೆಗೆ ಗುರುತಿಸಿದ್ದಾರೆ (Indian Palaeography p.215) ಆದರೆ ದಾನಿಯವರು ಸ್ಥಳೀಯ ಕಾರಣಗಳ ಜೊತೆಗೆ ಹೊರಗಿನ ಪ್ರಭಾವವೂ ಸಿಂಹಳದ ಲಿಪಿಗಳು ಬದಲಾಗಲು ಕಾರಣವೆಂದಿದ್ದಾರೆ. ಭಾರತದಲ್ಲಿ ಲಿಪಿಗಳು ಬದಲಾದ ವೇಗದಲ್ಲಿ ಸಿಂಹಳಿಯ ಲಿಪಿಗಳು ಬದಲಾಗಿಲ್ಲ. ಈ ಲಿಪಿಗಳ ಮೇಲೆ ಭಾರತದ ಶಾತವಾಹನ, ಕ್ಷತ್ರಪ, ಇಕ್ಷ್ವಾಕು, ಕದಂಬ ಮತ್ತು ಪಲ್ಲವ ಗ್ರಂಥಲಿಪಿಗಳ ಪ್ರಭಾವವಿದೆಯೆಂದು ದಾನಿಯವರು



ಸಿಂಹಳಿ ಲಿಪಿ

ವೇ.ಕೊಂ.ರಡ್ಡಿ

ಹೇಳುತ್ತಾರೆ. (ಅದೇ. ಪು.೨೧೬) ದುವೆಗಾಲ ಎಂಬಲ್ಲಿನ ಗವಿಯೊಂದರಲ್ಲಿ ದೊರೆತ ಶಾಸನವನ್ನು ಬಲದಿಂದ ಎಡಕ್ಕೆ ಬರೆಯಲಾಗಿದೆ. (ಕ್ರಿ.ಶ.೧ನೆಯ ಶತಮಾನ) ಪ್ರಾಚೀನ ಶಾಸನಗಳು ವೇಸ್ಸಗಿರಿ, ರಿತಿಗಲ, ಕೆರಂಬಯಿನ, ನೌಲ್ಲಟ ಎಂಬಲ್ಲಿನ ಗವಿಗಳಲ್ಲಿ ದೊರೆತಿವೆ. ಈ ಪ್ರಾಚೀನ ಬರೆವಣಿಗೆಯು ನಾನಾಘಾಟದ ಗವಿಯ ಲಿಪಿಗಳಿಗೆ ಸಮೀಪವಾಗಿವೆ. ಈ ಹೊರಗಿನ ಪ್ರಭಾವವಿದ್ದರೂ ಸಿಂಹಳವು ತನ್ನ ಬರೆವಣಿಗೆಯ ರೀತಿಯನ್ನು ಕಾಪಾಡಿಕೊಂಡು ಬಂದಿದೆ. ಮುಂದೆ ಸ್ಥಳೀಯ ಭಾಷೆಗೆ ತಕ್ಕಂತೆ ಬರೆವಣಿಗೆಯನ್ನು ಒಗ್ಗಿಸಿಕೊಂಡಾಗ ಅಕ್ಷರದ ರೀತಿಯು ಬದಲಾಗುತ್ತದೆ.

ಸಿಂಹಳಿ ವರ್ಣಮಾಲೆಯಲ್ಲಿ ೫೪ ಅಕ್ಷರಗಳಿವೆ. ಇವುಗಳಲ್ಲಿ ೧೮ ಸ್ವರಗಳು. ೩೬ ವ್ಯಂಜನಗಳು ಅಥವಾ ಸತ್ತ ಅಕ್ಷರಗಳು. ಪ್ರಾಚೀನ ವರ್ಣಮಾಲೆಯಲ್ಲಿ ೩೩ ಅಕ್ಷರಗಳಿದ್ದು. ಅವುಗಳಲ್ಲಿ ೧೨ ಸ್ವರಗಳು, ೨೧ ವ್ಯಂಜನಗಳು. ಈಗಿನ ಲಿಪಿಗಳಲ್ಲಿ ಎರಡು ಮಾದರಿಗಳಿವೆ. ಪ್ರಾಚೀನ ಕಾವ್ಯ, ಧರ್ಮಗ್ರಂಥ ಮುಂತಾದವನ್ನು ಬರೆಯಲು ಬಳಸುವ ರೂಢವಾದದ್ದನ್ನು 'ಎಳು' ಎಂದು ಕರೆಯುತ್ತಾರೆ. ವಿಕಾಸ ಹೊಂದಿದ ಸಿಂಹಳಿ ಲಿಪಿಯನ್ನು ಮಿಶ್ರವೆಂದು ಕರೆಯುತ್ತಾರೆ. ಈಗ ಮಿಶ್ರಲಿಪಿಯನ್ನು ದಿನ ನಿತ್ಯದ ವ್ಯವಹಾರ ಮತ್ತು ಧರ್ಮಗ್ರಂಥಗಳಿಗೂ ಬಳಸುತ್ತಾರೆ.

ಮಾಲ್ದೀವಿ ಲಿಪಿ

ಮಾಲ್‌ದೀವ್ ದ್ವೀಪಗಳ ಹೆಸರು ದಿವೇಹಿರಾಜ್ಜೆ. ಸುಮಾರು ೨೦೦೦ ದ್ವೀಪಗಳಿರುವ ಈ ಸಮುದಾಯದಲ್ಲಿ ಸು.೨೫೦ರಲ್ಲಿ ಮಾತ್ರ ಜನವಸತಿ ಇದೆ. ಸಿಂಹಳಿ ಭಾಷೆ ಮತ್ತು ಮಾಲ್‌ದೀವಿ ಭಾಷೆಗೆ ಹಿಂದೆ ಸಾಮ್ಯವಿತ್ತು. ೧೩ನೆಯ ಶತಮಾನದಲ್ಲಿ ದೊರೆತಿರುವ ಶಾಸನವು ಎಡದಿಂದ ಬಲಕ್ಕೆ ಬರೆದಿದ್ದು, ಇದು ಅಂದಿನ ಸಿಂಹಳದ ಲಿಪಿಯನ್ನು ಹೋಲುತ್ತದೆ. ಈ ಲಿಪಿಯನ್ನು 'ಎವೇಲ ಅಕುರು' ಎಂದು ಕರೆಯುತ್ತಾರೆ. ಈ ಲಿಪಿಯೇ ಮುಂದೆ 'ದಿವೇಸ್ ಅಕುರು' (ದ್ವೀಪದ ಅಕ್ಷರಗಳು) ಎಂಬ ಲಿಪಿಯಾಗಿ ಮಾರ್ಪಟ್ಟಿತು. ಇದೂ ಕೂಡ ಎಡದಿಂದ ಬಲಕ್ಕೆ ಬರೆಯುವ ಲಿಪಿ. ಈಗ ಧರ್ಮದ ಬದಲಾವಣೆಯಿಂದ ಅರಾಬಿಕ್ ಭಾಷೆ ಮತ್ತು ಲಿಪಿಯ ಬಳಕೆ ಹೆಚ್ಚಾಗಿದೆ. ಹೀಗಾಗಿ 'ಗೊಬಲಿತಾನ' ಎಂಬ ಅಕ್ಷರ ಮಾಲೆಯನ್ನು ಆವಿಷ್ಕರಿಸಿಕೊಂಡಿರುತ್ತಾರೆ. ಇದರಲ್ಲಿನ ಎಂಟು ಅಕ್ಷರಗಳು ಪರ್ಷಿಯಾ ಮತ್ತು ಅರಾಬಿಯಾ ಅಕ್ಷರಗಳಾಗಿವೆ.

ಆಗ್ನೇಯ ಏಷಿಯಾ ದೇಶಗಳ ಲಿಪಿ

ಭಾರತವು ಮ್ಯಮನ್ಮಾರ್ (ಬರ್ಮಾ), ಶ್ರೀಲಂಕಾ, ಕಾಂಬೋಡಿಯಾ, ಸಯಾಂ, ಮಲಯಾ, ಇಂಡೋನೇಷಿಯಾ, ಇಂಡೋಚೀನಾಕ್ಕೆ ಸೇರಿದ ದೇಶಗಳ ಮೇಲೆ ಬಹುವಾಗಿ ಸಾಂಸ್ಕೃತಿಕ ಪ್ರಭಾವವನ್ನು ಬೀರಿದೆ. ವೈದಿಕ ಮತ್ತು ಬೌದ್ಧಧರ್ಮಗಳ ಹರಡುವಿಕೆಯ ಮೂಲಕ ಈ ಸಂಪರ್ಕವನ್ನು ಸಾಧಿಸಿದೆ. ಭಾರತದಿಂದ ವ್ಯಾಪಾರಕ್ಕೆಂದು ಹೋದ ವ್ಯಾಪಾರಿಗಳ ಜೊತೆ ಸೈನಿಕರು, ಮಾಂತ್ರಿಕರು, ವೈದಿಕ ಪುರೋಹಿತರು, ಭಿಕ್ಷುಗಳಿದ್ದರು. ಇವರು ತಾವು ಹೋದ ದೇಶಗಳಲ್ಲಿ ಇಲ್ಲಿನ ಜನರಿಗೆ ಸಂಸ್ಕೃತದಲ್ಲಿ ಹೊಸ ಹೊಸ ಶಾಸ್ತ್ರವಿಧಿಗಳನ್ನು ಬೋಧಿಸಿದರು. ಜೊತೆಗೆ ದಿನನಿತ್ಯದ ಬಳಕೆಯಲ್ಲಿ ಸ್ಥಳೀಯ ಭಾಷೆಯನ್ನೂ ಅಳವಡಿಸಿಕೊಂಡರು. ಹೀಗಾಗಿ

ಸಂಸ್ಕೃತದೊಂದಿಗೆ ಸ್ಥಳೀಯ ಭಾಷೆಯನ್ನೂ ಶ್ರೀಮಂತಗೊಳಿಸಿದರು. ಕ್ರಿ.ಶ.ಐದನೆಯ ಶತಮಾನದ ಹೊತ್ತಿಗೆ ಅನೇಕ ಹೊಸ ಹೊಸ ರಾಜ್ಯಗಳು ಉದಿಸಿ ಅವನ್ನು ಹಿಂದೂಧರ್ಮದ ರಾಜರು ಆಳಿದರು. ಇತಿಹಾಸಕಾರರು, ವಿದ್ವಾಂಸರು ಕೋರಮಂಡಲ ತೀರದಿಂದ ಪಲ್ಲವರು ಮುಂತಾದ ಅರಸರು ಚಂಪಾ ಮತ್ತು ಮಲಯ ದ್ವೀಪ ಸಮುದಾಯಗಳಲ್ಲಿ ತಮ್ಮ ನಾವೆಗಳನ್ನು ಕಳುಹಿಸಿ ದಕ್ಷಿಣ ಭಾರತದ ಸಂಸ್ಕೃತಿ ಅಲ್ಲಿ ಹರಡಲು ಕಾರಣವೆಂದು ತಿಳಿಸಿದರೂ ದೊರೆತಿರುವ ಶಾಸನ ಲಿಪಿಗಳು ಕರ್ನಾಟಕದ ಕದಂಬರ ಪೆಟ್ಟಿಗೆಯಾಕಾರದ ಲಿಪಿ ಮತ್ತು ಗಂಗರ ಲಿಪಿಗಳಿಗೆ ಹತ್ತಿರವಾಗಿವೆ. ಇಲ್ಲಿನ ಅನೇಕ ದೇಶಗಳ ಆರಂಭಿಕ ಲಿಪಿಗೆ ಮೂಲ ಈ ಭಾರತದ ಲಿಪಿಯೇ ಆಗಿದೆ. ಶಿವ ಮತ್ತು ವಿಷ್ಣುವಿನ ಆರಾಧನೆ, ಶಕವರ್ಷದ ಬಳಕೆ ಇವು ದಕ್ಷಿಣ ಭಾರತದ ಪ್ರಭಾವವನ್ನು ತೋರಿಸುತ್ತವೆ.


ಈಗ ಇಲ್ಲಿನ ಬಹುತೇಕ ದೇಶಗಳಲ್ಲಿ ಬೌದ್ಧಧರ್ಮವು ಪ್ರಬಲವಾಗಿದ್ದು, ಕೆಲವು ದೇಶಗಳಲ್ಲಿ ಇಸ್ಲಾಂಧರ್ಮ ಪ್ರಬಲವಾಗಿದೆ. ಕೆಲವೆಡೆ ಕ್ರೈಸ್ತಧರ್ಮೀಯರೂ ಇದ್ದಾರೆ. ಈ ಪ್ರದೇಶದಲ್ಲಿನ ಜನರು ಮುಖ್ಯವಾಗಿ ಟಿಬೆಟೋ-ಚೈನೀಯ, ಆಸ್ಟ್ರೋ-ಏಷಿಯಾ, ಮಲಯಾ-ಪೊಲಿನೇಷಿಯಾ ಎಂಬ ಮೂರು ಜನಾಂಗೀಯ ಗುಂಪುಗಳಿಗೆ ಸೇರುತ್ತಾರೆ.

ಚಾಮ್ ಲಿಪಿ

ಈಗಿನ ಅನ್ನಾಂ ದೇಶದ ದಕ್ಷಿಣಕ್ಕೆ ಈ ಚಾಮ್ ರಾಜ್ಯವಿತ್ತು. ಕ್ರಿ.ಶ.೧೯೨ ರಲ್ಲಿಯೇ ಈ ದೇಶವು ಅಸ್ತಿತ್ವದಲ್ಲಿದ್ದ ಬಗ್ಗೆ ಚೀನಾದ ಬರವಣಿಗೆಗಳು ಉಲ್ಲೇಖಿಸುತ್ತವೆ. ಕ್ರಿ.ಶ.೧೨ನೆಯ ಶತಮಾನದಲ್ಲಿ ಖ್ಮೇರ್ ಅಥವಾ ಕಾಂಬೋಡಿಯಾದವರು ರಾಜ್ಯ ಸ್ಥಾಪನೆ ಮಾಡಿದರು. ಕ್ರಿ.ಶ.೧೫ನೆಯ ಶತಮಾನದ ಹೊತ್ತಿಗೆ ಇದು ಸ್ವತಂತ್ರ ದೇಶವಾಯಿತು. ಟೋಂಗ್‌ಕಿಂಗ್‌ನ ಅನ್ನಾಮಿಯರು ಶಾನ್ ಮೂಲದವರಾಗಿದ್ದು, ಮಂಗೋಲಿಯಾ-ಖ್ಮೇರ್‌ಗಳ ಮಿಶ್ರಭಾಷಿಕರಾಗಿದ್ದು, ಮೊದಲು ಚೀನಾದ ಲಿಪಿಯನ್ನು ಅಳವಡಿಸಿಕೊಂಡಿದ್ದರು. ಮುಂದೆ ಕ್ರಿ.ಶ.೧೦ನೆಯ ಶತಮಾನದ ಹೊತ್ತಿಗೆ ಚೀನೀಯರಿಂದ ಬಿಡುಗಡೆ ಹೊಂದಿದರು. ಇವರು ಎರಡು ಗುಂಪುಗಳಾಗಿದ್ದು ಒಂದು ಗುಂಪು ಅನ್ನಾಂನಲ್ಲಿಯೂ ಇನ್ನೊಂದು ಗುಂಪು ಕಾಂಬೋಡಿಯಾದಲ್ಲಿಯೂ ಇವೆ.

ದಾನಿಯವರು ದಕ್ಷಿಣ ಕಾಂಬೋಡಿಯಾದಲ್ಲಿ ದೊರೆತ ಮುದ್ರಿಕೆಗಳನ್ನು ನಾಲ್ಕು ಭಾಗಗಳನ್ನಾಗಿ ಮಾಡಿ, ಇವು ಮಾಳವ (ಉತ್ತರ ಭಾರತ), ಗುಜರಾತು, ವಾಕಟಕರ ರಾಜ್ಯಗಳಿಂದ ಹೋಗಿವೆಯೆಂಬ ವಾದವನ್ನು ಲಿಪಿಗಳ ರಚನೆಯ ಆಧಾರದ ಮೇಲೆ ಹೇಳಿರುತ್ತಾರೆ. ಹಾಗೂ ಇದು ಕ್ರಿ.ಶ.೫ನೆಯ ಶತಮಾನಕ್ಕೆ ಸೇರಿದುವೆಂದು ತಿಳಿಸಿದ್ದಾರೆ. ಇದಕ್ಕೆ ಆಧಾರವಾಗಿ ಮಿರಾಶಿಯವರು ಮಧ್ಯಪ್ರದೇಶದಿಂದ ಸಂಗ್ರಹಿಸಿದ ಮುದ್ರಿಕೆಗಳಲ್ಲಿ ಉಕ್ತವಾಗಿರುವ ಕೆಲವು ಹೆಸರುಗಳು ಆಗ್ನೇಯ ಏಷಿಯಾದಲ್ಲಿಯೂ ದೊರೆತಿರುವುದನ್ನು ತೋರಿಸಿದ್ದಾರೆ. ಮಿರಾಷಿಯವರು ಈ ಮುದ್ರಿಕೆ ಅಥವಾ ಶಾಸನಗಳನ್ನು ಕ್ರಿ.ಶ.ನಾಲ್ಕನೆಯ ಶತಮಾನಕ್ಕೆ ಸೇರಿಸುತ್ತಾರೆ. (JNSI Vol.III part-II p.100-102)

ಚಂಪಾದ ಪ್ರಾಚೀನ ಶಾಸನವೆಂದರೆ ಕ್ರಿ.ಶ.೨-೩ನೆಯ ಶತಮಾಸಕ್ಕೆ ಸೇರಬಹುದಾದ ಪೋಕನ್ಸ್ ಎಂಬಲ್ಲಿ ದೊರೆತ ಶ್ರೀಮಾರನ ಶಾಸನ. ಸಂಸ್ಕೃತ ಭಾಷೆ ಮತ್ತು ದಕ್ಷಿಣ ಭಾರತದ



ಕೃಪೆ : ಎಸ್. ನಾಗರಾಜು

ಆಗ್ನೇಯ ಏಷ್ಯಾದಲ್ಲಿ ದೊರೆಯುವ ಕೆಲವು ಶಾಸನಗಳ ಸಾಲುಗಳು

ಲಿಪಿಯಲ್ಲಿ ಇದನ್ನು ಬರೆಯಲಾಗಿದೆ. ಚಂಪಾದಲ್ಲಿ ಮುಂದೆ ದೊರೆಯುವ ಶಾಸನಗಳು ಬಹುತೇಕವಾಗಿ ಸಂಸ್ಕೃತ ಮತ್ತು ಚಾಮ್ ಭಾಷೆಯ ದ್ವಿಭಾಷಾ ಶಾಸನಗಳು. ಇದು ದಕ್ಷಿಣ ಭಾರತದ ಲಿಪಿಯನ್ನು ಪಡೆದು ಅದನ್ನು ತನ್ನದಾಗಿಸಿಕೊಂಡಿತ್ತು. ದಾನಿಯವರು ಈ ಲಿಪಿಯನ್ನು ಗುಜರಾತಿನಿಂದ ಪಡೆದಿರಬೇಕೆಂದೂ, ಇದರ ಕಾಲ ಕ್ರಿ.ಶ.೫ನೆಯ ಶತಮಾನದ ಉತ್ತರಾರ್ಧವೆಂದೂ ಹೇಳಿರುತ್ತಾರೆ. (Indian Palaeography p.232) ಆದರೆ ಶಾಸನದಲ್ಲಿನ ಅ, ಕ, ರ ಗಳ ಇಳಿಗೆರೆ ಕೆಳಕ್ಕೆ ಇಳಿದಿಲ್ಲ. ಅಲ್ಲದೆ ಮ, ವ ಗಳು ತ್ರಿಕೋಣಾಕಾರದಲ್ಲಿವೆ. ತಿ, ಈ ಮುಂತಾದ ಕಾರಣಗಳಿಂದ ಇದರ ಕಾಲವನ್ನು ಕ್ರಿ.ಶ.೩ನೆಯ ಶತಮಾನದ ಮಧ್ಯಕ್ಕೆ ಹಾಕಬಹುದಾಗಿದೆ. ಅಲ್ಲದೆ ಬಳಸಿರುವ ಒಟ್ಟಾರೆ ಲಿಪಿಯ ಸ್ವರೂಪವು ದಕ್ಷಿಣ ಭಾರತದ ಪಶ್ಚಿಮ ಕರಾವಳಿಯ ಲಿಪಿಗಳಾಗಿದ್ದು, ಇವು ಶಾತವಾಹನರ ಲಿಪಿಯಿಂದ ಪ್ರೇರಿತ ಲಿಪಿಯೆನ್ನಬಹುದು. ಚಾಮ್ ಭಾಷೆಯೂ ಸಹ ಸಂಸ್ಕೃತದಿಂದ ಪ್ರಭಾವಿತವಾಗಿತ್ತು. ಕ್ರಿ.ಶ.೪ ರಿಂದ ೬ನೆಯ ಶತಮಾನಕ್ಕೆ ಸೇರಬಹುದಾದ ಭದ್ರವರ್ಮನ ಶಾಸನ ಲಿಪಿಯು ಪೆಟ್ಟಿಗೆಯ ಆಕಾರವನ್ನು ಹೊಂದಿದೆ. ಆದರೆ ಅ, ಕ, ರ ಗಳು ಇಲ್ಲಿ ಬೆಳೆದಿಲ್ಲ. ಶ್ರೀಮಾರನ ಶಾಸನದಂತೆಯೇ ಇವೆ. ಮುಂದೆ ಭದ್ರವರ್ಮನ ಮೈಸೋನ್ ಶಾಸನ, ಇಲ್ಲಿಂದಾಚೆಗೆ ಅ, ಕ, ರ ಗಳು ಕೆಳಗೆ ಬಾಗಿ ಮೇಲಕ್ಕೆ ತಿರುಗಿರುವಂತೆ ಬಿಡಿಸಲಾಗಿದೆ. ಇವು ಪೂರ್ಣವಾಗಿ ದಕ್ಷಿಣ ಭಾರತದ ಅದರಲ್ಲೂ ಕರ್ನಾಟಕದಲ್ಲಿ ಗಂಗವಾಡಿಯಲ್ಲಿ ಬಳಕೆಯಲ್ಲಿದ್ದ ಶಾಸನಗಳ ಅಕ್ಷರಗಳಂತೆ ಇವೆ. ಇಲ್ಲಿಂದ ಮುಂದೆ ಸ್ಥಳೀಯವಾಗಿ ಅಕ್ಷರಗಳ ರೂಪ ಬದಲಾಗುತ್ತಾ ಸಾಗಿದೆ. ಕ್ರಿ.ಶ.೬೬೭ರ ಅಂಗ್ ಚುಮ್ನಿಕ್‌ನಲ್ಲಿ ದೊರೆತ ಜಯವರ್ಮನ ಶಾಸನದ ವರೆಗೆ ಈ ಲಿಪಿಗಳ ಮೇಲೆ ಪಲ್ಲವ ಗ್ರಂಥಲಿಪಿಗಳ ಪ್ರಭಾವ ಕಾಣುವುದಿಲ್ಲ.

ಚಾಮ್‌ನ ಶಾಸನಗಳನ್ನು ಎಡದಿಂದ ಬಲಕ್ಕೆ ಬರೆಯಲಾಗಿದೆ. ಇಸ್ಲಾಂನ ಪ್ರಭಾವದಿಂದ ಪುಸ್ತಕದ ಅಂತ್ಯದ ಪುಟದಿಂದ ಬರೆವಣಿಗೆಯನ್ನು ಆರಂಭಿಸುವುದು ವಾಡಿಕೆಯಾಗಿದೆ. ಚಾಮ್

ಲಿಪಿಗಳಲ್ಲಿ ಭಾರತದ ಲಿಪಿ ಮಾಲೆಯಲ್ಲಿದ್ದ ಮೂರ್ಧನ್ಯ (cerebral) ವ್ಯಂಜನಗಳನ್ನು ಬಿಡಲಾಗಿದೆ. ಈ ಭಾಷೆಗೆ ಸರಿಹೊಂದುವಂತೆ ಕೆಲವು ಹೊಸ ಅಕ್ಷರಗಳನ್ನು ಸೇರಿಸಲಾಗಿದೆ. ಈಗಿನ ಚಾಮ್ ಲಿಪಿಮಾಲೆಯಲ್ಲಿ ಏಳು ಹ್ರಸ್ವ, ಏಳು ದೀರ್ಘಸ್ವರ, ಒಂಬತ್ತು ಸಂಯುಕ್ತ ವ್ಯಂಜನಗಳು, ಐದು ಕಂಠ ವ್ಯಂಜನಗಳು, ಆರು ತಾಲವ್ಯಗಳು, ಆರು ದಂತ್ಯಗಳು, ಆರು ಓಷ್ಠ, ನಾಲ್ಕು ಅರೆ ಸ್ವರಗಳು ಎರಡು ೨ 'ಸ' ವರ್ಗದ ಅಕ್ಷರಗಳು, ಊಷ್ಮ ಮಹಾಪ್ರಾಣಾಕ್ಷರ ಹ ಗಳು ಸೇರಿ ೫೩ ಅಕ್ಷರಮಾಲೆಯನ್ನು ಹೊಂದಿದೆ.

ಖ್ಮೇರ್

ಕಾಂಬೋಡಿಯಾದ ಸ್ಥಳೀಯ ಹೆಸರು ಖ್ಮೇರ್ ಎಂದು. ಇಲ್ಲಿನ ಭಾಷೆಯು ಆಸ್ಟ್ರೋ-ಏಷಿಯಾ ಗುಂಪಿಗೆ ಸೇರಿದ್ದು. ಕ್ರಿ.ಶ.ಸು.೬೦೦ರಲ್ಲಿ ದಕ್ಷಿಣ ಭಾರತದಿಂದ ಜನ ಇಲ್ಲಿಗೆ ವಲಸೆ ಬಂದಿರಬೇಕು. ಈ ದೇಶದ ಸಮುದ್ರ ತೀರ ಪ್ರದೇಶದಲ್ಲಿ ತಮ್ಮ ವೈದಿಕ ಸಂಸ್ಕೃತಿ ಮತ್ತು ಸಂಸ್ಕೃತ ಭಾಷೆಯ ಪ್ರಭಾವವನ್ನು ಬೀರಿರುತ್ತಾರೆ. ಈ ದೇಶದ ಪ್ರಾಚೀನ ಶಾಸನವು ಶಕ ೫೨೬ (ಕ್ರಿ.ಶ.೬೦೪)ಕ್ಕೆ ಸೇರಿದುದಾಗಿದೆ. ಖ್ಮೇರ್ ಭಾಷೆಯಲ್ಲಿ ಪ್ರಾಚೀನ ಶಾಸನ ರಚನೆಯಾಗಿರುವುದು ಕ್ರಿ.ಶ.೬೨೯ರಲ್ಲಿ. ಎಲ್ಲಾ ಖ್ಮೇರ್ ಭಾಷೆಯ ಶಾಸನಗಳನ್ನು ದಕ್ಷಿಣ ಭಾರತದ ಲಿಪಿಗಳಲ್ಲಿ ಬರೆಯಲಾಗಿದೆ. ಕ್ರಿ.ಶ.೮೮೯ ರಿಂದ ೯೧೦ರ ವರೆಗೆ ಆಳಿದ ಯಶೋವರ್ಮನ ಶಾಸನದಲ್ಲಿ ಮಾತ್ರ ಉತ್ತರ ಭಾರತದ ಲಿಪಿಗಳನ್ನು ಬಳಸಲಾಗಿದೆ.

ಚಾಮ್ ಮತ್ತು ಖ್ಮೇರ್ ಲಿಪಿಗಳನ್ನು ಫ್ರೆಂಚ್ ವಿದ್ವಾಂಸರು ಮಣಿಯಾಕಾರದ ಲಿಪಿ ಮತ್ತು ಇತ್ತೀಚಿನ ಲಿಪಿಯೆಂದು ಎರಡು ರೀತಿಯಲ್ಲಿ ವಿಂಗಡಿಸುತ್ತಾರೆ.

ಇವಲ್ಲದೆ ಅನ್ನಾಂ ಕಾಂಬೋಡಿಯಾದಲ್ಲಿ ಚಾಮ್‌ಗಳು ನೇರವಾದ ಗೆರೆಗಳುಳ್ಳ 'ಅಖರ್‌ಸ್ರಹ್' ಅಥವಾ 'ಅಖರ್‌ತ್ರಹ್' ಎಂಬ ಈಗಿನ ಲಿಪಿಯನ್ನು ಬಳಸುತ್ತಾರೆ. ಖ್ಮೇರರು ಅಕ್ಷರ್‌ಚ್ರಿಇಂಗ್ ಎಂಬ ಲಿಪಿಯನ್ನು ಬಳಸುತ್ತಾರೆ. ಅಖರ್‌ಸ್ರಹ್ ಲಿಪಿಯು ಅನ್ನಾಂನಲ್ಲಿ ವೃತ್ತಾಕಾರವಾಗಿ ಬರೆದರೆ, ಕಾಂಬೋಡಿಯಾದಲ್ಲಿ ಕೋನಾಕಾರವಾಗಿ ಬರೆಯುತ್ತಾರೆ. ಇವೇ ಅಲ್ಲದೆ ಅಖರ್‌ತಪುಕ್ (ಪುಸ್ತಕಗಳ ಲಿಪಿ) ಎಂಬುದನ್ನು ಚಾಮ್ ಜನರೂ, ಅಕ್ಷರ್‌ಮುಲ್ ಎಂಬುದನ್ನು ಖ್ಮೇರ್‌ರು ಕಾಂಬೋಡಿಯಾದಲ್ಲಿ ಬಳಸುತ್ತಾರೆ. ಈ ಎರಡೂ ಅಲ್ಲದೆ ಚಾಮ್ ಜನರು ಅಖರ್‌ಗಮೀನ್ (ಜೇಡರಹುಳುವಿನ ಕಾಲು) ಎಂಬ ಲಿಪಿಯನ್ನೂ ಬಳಸುತ್ತಾರೆ.

ಅನ್ನಾಂನ ಚಾಮ್ ಹಸ್ತಪ್ರತಿಗಳಲ್ಲಿ ಮೂರು ಬಗೆಯ ಲಿಪಿಗಳನ್ನು ಗುರುತಿಸಬಹುದು. ಪವಿತ್ರವಾದ ಗ್ರಂಥಗಳ ಬರೆವಣಿಗೆಯಲ್ಲಿ ಬಳಸುವ 'ಅಖರ್‌ರಿಕ್' ಎಂಬ ಮಣಿಯಾಕಾರದ ದಪ್ಪ ಅಕ್ಷರಗಳಿಂದ ಕೂಡಿದ ಲಿಪಿ, ಕೂಡಿಸಿ ಬರೆಯುವ ಮುದ್ರೆಗಳ ಬರೆವಣಿಗೆಯಾದ 'ಅಖರ್ ಅತಾಲ್', ಮತ್ತು ಅಕ್ಷರಗಳು ಪೂರ್ಣ ವ್ಯಂಜನಗಳಂತಿದ್ದು ಸ್ವರಗಳನ್ನು ಪ್ರತ್ಯೇಕವಾಗಿ ಸೇರಿಸುವ ಸಂಕೇತ (ರಹಸ್ಯಾರ್ಥ) ಲಿಪಿಯಾದ ಅಖರ್‌ಯೋಖ್.

ಚಕ್ಮಾ ಜನರು (ಬಾಂಗ್ಲಾದೇಶದ ಚಿತ್ತಗಾಂಗ್ ಪ್ರದೇಶದಲ್ಲಿನ ಜನರು) ಖ್ಮೇರ್ ಲಿಪಿಯನ್ನು ಪಡೆದಿದ್ದಾರೆ. ಇವರು ಬಳಸುವ ಲಿಪಿಯು ಬಾಗಿದ ಗೆರೆಗಳನ್ನು ಹೊಂದಿದೆ. ವ್ಯಂಜನಗಳಿಗೆ ಸೇರಿಸುವ 'ಅ' ಕಾರವು ಹ್ರಸ್ವವಾಗಿರದೆ ದೀರ್ಘವಾಗಿರುತ್ತದೆ.

ಬರ್ಮಾ ಬರೆವಣಿಗೆ

ಬರ್ಮಾದೇಶ ಅಥವಾ ಈಗಿನ ಮ್ಯಾನ್ಮಾರ್ ದೇಶವು ಬೆಟ್ಟಗುಡ್ಡಗಳಿಂದ, ನದಿ ಬಯಲುಗಳಿಂದ ಕೂಡಿದ ದೇಶವಾಗಿದ್ದು ಇಲ್ಲಿ ಅನೇಕ ಭಾಷೆಗಳನ್ನಾಡುವ ವಿವಿಧ ಮೂಲದ ಜನರಿದ್ದಾರೆ. ಟಿಬೆಟೋ-ಚೈನಾ, ಆಸ್ಟ್ರೋ-ಏಷಿಯಾ, ಮೊಂಗೋ-ಖ್ಮೇರ್, ಮಲಯ-ಪಾಲಿನೇಷಿಯ ಜನರಿದ್ದಾರೆ.

ಮ್ಯಾನ್ಮಾರ್‌ನಲ್ಲಿ ಪಾಗನ್, ಪೆಗು ಮತ್ತು ಪ್ರೋಮ್‌ಗಳಲ್ಲಿ ಪ್ರಾಚೀನವಾದ ಶಾಸನಗಳು ದೊರೆತಿವೆ. ಈ ಪ್ರಾಚೀನ ಶಾಸನಗಳಲ್ಲಿ ಎರಡು ಮಾತ್ರ ಪಾಳಿಯಲ್ಲಿದ್ದು ಉಳಿದವು ಪ್ಯು ಭಾಷೆಯಲ್ಲಿವೆ. ಪಾಗನ್‌ನಲ್ಲಿ ಬೌದ್ಧಧರ್ಮಕ್ಕೆ ಸಂಬಂಧಿಸಿದ ಅನೇಕ ಮುದ್ರಿಕೆಗಳು ದೊರೆತಿವೆ. ಇವು ಸಂಸ್ಕೃತ, ಪಾಳಿ, ಪ್ಯು, ಮೋನ್ ಮತ್ತು ಬರ್ಮಾ ಭಾಷೆಗಳಲ್ಲಿವೆ.

ಮೋನ್‌ಗಳ ಬರೆವಣಿಗೆ

ಇರಾವಾಡಿ ಮುಖಜ ಭೂಮಿಯಲ್ಲಿ ತಲೈಂಗರೆಂಬ ಜನರಿದ್ದು, ಇವರನ್ನು ಮೋನ್‌ಗಳೆಂದು ಕರೆಯುತ್ತಾರೆ. ಇವರು ಮ್ಯಾನ್ಮಾರ್‌ನ ಪ್ರಾಚೀನ ಕಾಲದ ನಾಗರಿಕ ಜನ. ಇವರ ಭಾಷೆಯು ಮೋನ್-ಖ್ಮೇರ್ ಗುಂಪಿಗೆ ಸೇರಿದೆ. ಈ ಖ್ಮೇರರೇ ಕಾಂಬೋಜರಿಗೆ ಮೂಲವಾದರು. ಇವರೇ ಮುಂದೆ ಪೆಗು ಎಂಬಲ್ಲಿದ್ದು ವ್ಯಾಪಾರಿಗಳಾಗಿ ಪೆಗನರೆಸಿಕೊಂಡರು. ಥಾತೋನ್ ಅಥವಾ ಸುದ್ಧರ್ಮಪುರವು ಇವರ ಮುಖ್ಯ ರೇವುಪಟ್ಟಣವಾಗಿತ್ತು. ಇದು ಪ್ರಮುಖ ಬೌದ್ಧಕೇಂದ್ರವೂ ಆಗಿತ್ತು. ಮೋನರ ಪ್ರಾಚೀನ ಶಾಸನಗಳು ೧೧ನೆಯ ಶತಮಾನದಲ್ಲಿ ದೊರೆತಿವೆ. ಈ ಮೋನರನ್ನು ಬರ್ಮೀಯರು ಸೋಲಿಸಿದರು. ಕ್ರಿ.ಶ.೧೩ನೆಯ ಶತಮಾನದಲ್ಲಿ ಇವರು ಮತ್ತೆ ಸ್ವತಂತ್ರರಾದರು. ಕ್ರಿ.ಶ.೧೫೪೦ರಲ್ಲಿ ಈ ಮೋನರು ಮತ್ತೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು.

ಮ್ಯಜದಿ ಎಂಬಲ್ಲಿನ ಬೌದ್ಧದೇವಾಲಯದ ಬಳಿ ಎರಡು ಸ್ತಂಭಶಾಸನಗಳು ದೊರೆತಿದ್ದು, ಇವು ಕ್ರಿ.ಶ.೧೨ನೆಯ ಶತಮಾನಕ್ಕೆ ಸೇರಿದವಾಗಿವೆ. ಕಂಬಗಳ ನಾಲ್ಕು ಮುಖಗಳಲ್ಲಿ ನಾಲ್ಕು ಭಾಷೆಗಳಲ್ಲಿ (ಪಾಳಿ, ಬರ್ಮಾ, ಮೋನ್ ಮತ್ತು ಪ್ಯು) ಶಾಸನಗಳನ್ನು ಬರೆಯಲಾಗಿದೆ. ಮೋನರ ಶಾಸನ ಲಿಪಿಗಳು ಚಂಪಾ ಮತ್ತು ಜಾವಾದಲ್ಲಿ ದೊರೆಯುವ ಪ್ರಾಚೀನ ಶಾಸನ ಲಿಪಿಗಳನ್ನು ಹೋಲುತ್ತವೆ. ತಮ್ಮ ಭಾಷೆಗೆ ಲಿಪಿಯನ್ನು ಅಳವಡಿಸಿಕೊಳ್ಳುವಾಗ ಕೆಲವು ಅಕ್ಷರಗಳನ್ನು ಬಿಟ್ಟು ಎರಡು ಹೆಚ್ಚುವರಿ ಲಿಪಿಗಳನ್ನು ಸೇರಿಸಿಕೊಂಡಿರುತ್ತಾರೆ. 'ಬ' ಕಾರವು 'ಪ' ಮತ್ತು ಬ ಕಾರದ ಮಧ್ಯದ ಉಚ್ಚಾರ ಮತ್ತು 'ಮ್‌ಬ್' ಎಂಬ ಅಕ್ಷರವಾಗಿದೆ. ಈ ಲಿಪಿಯು ಮೋನ್ ಲಿಪಿಗೆ ಮಾತ್ರವಲ್ಲದೆ ಬರ್ಮಾ, ಷಾನ್ ಲಿಪಿಗೂ ಮೂಲವಾಯಿತು.

ಪ್ಯು ಬರೆವಣಿಗೆ


ಈಗ ಈ ಭಾಷೆಯ ಬಳಕೆಯಿಲ್ಲ. ಸು.೭೦೦ ವರ್ಷಗಳ ಹಿಂದೆ ಕಣ್ಮರೆಯಾಗಿದೆ. ಈ ಭಾಷೆಯ ಶಾಸನಗಳು ದೊರೆತಿರುವುದೂ ಕಡಿಮೆ. ಕ್ರಿ.ಶ.೬-೭ನೆಯ ಶತಮಾನಕ್ಕೆ ಸೇರಿರಬಹುದಾದ ಶಾಸನವು ಪ್ರೋಮ್‌ನಲ್ಲಿ ದೊರೆತಿದೆ. ಇದಲ್ಲದೆ ೨೦ ಪಟಗಳನ್ನುಳ್ಳ ಚಿನ್ನದ ಶಾಸನವೊಂದು ಮೌನ್‌ಗ್ಯುನ್ ಎಂಬಲ್ಲಿ ದೊರೆತಿದ್ದು, ಇದರಲ್ಲಿ ಬೌದ್ಧಧರ್ಮದ ತತ್ವಗಳನ್ನು

ಸಂಗ್ರಹಿಸಿದೆ. ಇಲ್ಲಿಂದಾಚೆಗೆ ಏಳು–ಎಂಟನೆಯ ಶತಮಾನದಲ್ಲಿ ಕೆಲವು ಶಾಸನಗಳು ದೊರೆತಿದ್ದು, ಇವುಗಳ ಮೇಲೆ ಗುಪ್ತರ ಲಿಪಿಯಲ್ಲಿ ಬರೆಯಲಾದ ಸಂಸ್ಕೃತ ಶಾಸನಗಳು, ಪ್ಯು ಭಾಷೆಯ ಶಾಸನಗಳು ದೊರೆತಿವೆ. ಪ್ಯು ಬರೆವಣಿಗೆಯು ಮೋನ್ ಲಿಪಿಯೊಂದಿಗಾಗಲೀ ಅವರ ಇತರ ಬರೆವಣಿಗೆಯೊಂದಿಗಾಗಲೀ ಯಾವುದೇ ಸಂಬಂಧವನ್ನು ಹೊಂದಿರುವುದಿಲ್ಲ. ಬಹುಶಃ ಈ ಲಿಪಿಯು ಕದಂಬರ ಲಿಪಿಯಿಂದ ಉದಿಸಿರಬಹುದು ಎಂದು ಊಹಿಸಬಹುದಾಗಿದೆ. ಪ್ಯು ಬರೆವಣಿಗೆಯ ಕೆಲವು ಶಾಸನಗಳಲ್ಲಿ ಒಂದು ಸಾಲು ಭಾರತದ ಒಂದು ರೀತಿಯ ಲಿಪಿಯಲ್ಲಿದ್ದರೆ, ಇನ್ನೊಂದು ಸಾಲು ಭಾರತದ ಇನ್ನೊಂದು ಪ್ರದೇಶದ ಲಿಪಿಯ ಮಾದರಿಯಲ್ಲಿದೆ.


ದಾನಿಯವರು ಪ್ಯು ಭಾಷೆಯ ಶಾಸನ ಲಿಪಿಗಳಲ್ಲಿ ದಕ್ಷಿಣ ಮತ್ತು ಉತ್ತರ ಭಾರತದ ಲಿಪಿಗಳೆರಡನ್ನೂ ಮಿಶ್ರ ಮಾಡಿಕೊಂಡಿರುವಂತೆ ಇದೆ ಎಂದಿರುತ್ತಾರೆ. ಈ ಮಿಶ್ರಣವು ಕ್ರಿ.ಶ.೬ನೆಯ ಶತಮಾನದಲ್ಲಿಯೇ ನಡೆದಿರಬೇಕು. ಹಾಗೂ ಚಾಲುಕ್ಯರ ಲಿಪಿಯ ಜೊತೆಗೆ ಉತ್ತರದ ಲಿಪಿಗಳನ್ನು ತಿಳಿದವನು ಈ ಲಿಪಿಯನ್ನು ಬಳಸಿರಬೇಕು ಎಂದಿರುತ್ತಾರೆ.

ಬರ್ಮಾ ಲಿಪಿ

ಬರ್ಮೀಯರು ಮೋನರ ಲಿಪಿಯನ್ನು ಪಡೆದುದರ ಜೊತೆಗೆ ಸಿಂಹಳದ ಪಾಳಿ ಗ್ರಂಥಗಳ ಲಿಪಿಯನ್ನೂ ಪಡೆದರು. ಕ್ರಿ.ಶ.೧೧–೧೨ನೆಯ ಶತಮಾನದಲ್ಲಿ ಸಿಂಹಳದಿಂದ ಬೌದ್ಧಧರ್ಮ ಇಲ್ಲಿಗೆ ಬಂತು. ಹಿಂದಿನ ಬರ್ಮದ ಲಿಪಿಗಳಲ್ಲಿ ಎರಡು ಬಗೆ. ೧.ಮಣಿಯಾಕಾರದ ಲಿಪಿ. ೨. ಚೌಕಾಕಾರದ ಲಿಪಿ. ಇವನ್ನು ಬಹು ದಪ್ಪಗೆ ಬಣ್ಣದಲ್ಲಿ ಬರೆದಿರುತ್ತಾರೆ. ಬರ್ಮಾದ ಲಿಪಿ ವೃತ್ತಾಕಾರದ ರೇಖೆಗಳಿಂದ ಕೂಡಿದ ಲಿಪಿಯಾಗಿದೆ. ಇದಕ್ಕೆ ಮುಖ್ಯ ಕಾರಣ ಬರ್ಮೀಯರು ಬಳಸುತ್ತಿದ್ದ ತಾಳೆಗರಿ ಮತ್ತು ಕಂಠ. ಇಂದಿನ ಬರ್ಮಾ ಲಿಪಿಯಲ್ಲಿ ೪೨ ಅಕ್ಷರಗಳಿವೆ. ಅವುಗಳಲ್ಲಿ ೧೦ ಸ್ವರಗಳು, ೩೨ ವ್ಯಂಜನಗಳು. ವ್ಯಂಜನಗಳು ಸ್ವತಂತ್ರವಾಗಿರದೆ ಅ ಕಾರ ಸ್ವರದಿಂದ ಕೂಡಿವೆ. ಗುಣಿತಾಕ್ಷರಗಳನ್ನು ಬರೆಯುವಾಗ ಸ್ವರಗಳನ್ನು ಸ್ವತಂತ್ರವಾಗಿ ಬರೆದು ವ್ಯಂಜನಕ್ಕೆ ಸೇರಿಸುತ್ತಾರೆ.



ಬರ್ಮಾ ವರ್ಣಮಾಲೆ



ಬುದ್ಧಗ ಯಾದ ಬರ್ಮಾಶಾಸನ

ಬರ್ಮಾದಲ್ಲಿ ಕಾರೆನ್ ಎಂಬ ಗುಂಪಿನ ಜನರಿದ್ದು ಇವರು ತಮ್ಮ ಭಾಷೆಗೆ ಬರ್ಮಾಲಿಪಿಯನ್ನೇ ಅಳವಡಿಸಿಕೊಂಡಿರುತ್ತಾರೆ. ಇವರು ಸಿನೋ-ಸಯಾಮಿ ಗುಂಪಿಗೆ ಸೇರಿದ ಭಾಷೆಯನ್ನು ಮಾತನಾಡುತ್ತಾರೆ.

ಸಯಾಮಿ ಲಿಪಿ (ಥಾಯ್‌ಲೇಂಡಿನ ಲಿಪಿ)

ಇದಕ್ಕೆ ಷಾನರ ಲಿಪಿಯೆಂದೂ ಕರೆಯುತ್ತಾರೆ. ದಕ್ಷಿಣದಲ್ಲಿ ಬರ್ಮಾ, ಉತ್ತರಕ್ಕೆ ಚೀನ, ಪಶ್ಚಿಮಕ್ಕೆ ಖಾಮ್ತಿ, ಪೂರ್ವಕ್ಕೆ ಷಾನ್. ಈ ಮಧ್ಯೆ ಇರುವ ಪ್ರದೇಶದಲ್ಲಿ ಷಾನ ಜನಾಂಗವು ವಾಸಿಸುತ್ತದೆ. ಷಾನ್ ಎಂಬ ಪದವು ಬರ್ಮಾ ಭಾಷೆಯ ಪದ. ಸ್ಥಳೀಯ ಪದ ಥಾಯ್ ಎಂದು. ಅಸ್ಸಾಂ, ಸಯಾಂ ಎಂಬ ಪದಗಳು ಷಾನ್ ಎಂಬ ಪದದ ತದ್ಭವರೂಪ. ಈ ಭಾಷೆಯು ಸಿನೋ-ಸಿಂಹಳಿ ಭಾಷಾ ಗುಂಪಿಗೆ ಸೇರಿದೆ. ಥಾಯ್ ಲಿಪಿಯಲ್ಲಿ ಕೆಲವು ಪ್ರಭೇಧಗಳಿವೆ. ಆರಂಭದಲ್ಲಿ ಈ ಪ್ರಭೇಧಗಳಿರಲಿಲ್ಲ. ಈ ಪ್ರಭೇಧಗಳಲ್ಲಿ ಲಾವೊ ಲಿಪಿ ಪ್ರಾಚೀನವಾದದ್ದು.

ಲಾವೋ ಲಿಪಿ

ಲಾವೊ ಲಿಪಿಯು ಈಗ ಸಯಾಮಿನ ಉತ್ತರ ಮತ್ತು ಬರ್ಮಾದ ಅಂಹೆರ್‌ಸ್ಟ್ ಜಿಲ್ಲೆಯಲ್ಲಿ ಬಳಸುತ್ತಿದ್ದಾರೆ. ಈ ಲಿಪಿಯನ್ನು ಬುದ್ಧನು ಗತಿಸಿದ ೧೦೦೦ ವರ್ಷಗಳ ನಂತರದಲ್ಲಿ ಲಾವೋ ರಾಜನಾದ ರೌಂಗ್ ಎಂಬುವವನು ಬಳಕೆಗೆ ತಂದನೆಂಬ ನಂಬಿಕೆಯಿದೆ. ಆದರೆ ಈ ಲಿಪಿಯು ಬೌದ್ಧಧರ್ಮದ ಪಾಳಿಯ ಮೂಲಕ ಮೈನ್ಮಾರ್ ಮುಖೇನ ಹರಡಿದೆ. ಮೋನ್ ಲಿಪಿ ಇದಕ್ಕೆ ಮೂಲ. ಕ್ರಿ.ಶ.೧೦ನೆಯ ಶತಮಾನಕ್ಕೆ ಮೊದಲೇ ಲಾವೋಗಳು ತಮ್ಮ ಲಿಪಿಗೆ ಮೋನರ ಲಿಪಿಯನ್ನು ಬಳಸಿಕೊಂಡರು. ಕ್ರಿ.ಶ.೧೩ನೆಯ ಶತಮಾನಕ್ಕೆ ಸೇರಿದ ಲಾವೋ ಭಾಷೆಯ ತಾಳೆಗರಿ ಹಸ್ತಪ್ರತಿಯಿಂದ ಈ ಲಿಪಿಯು ಆ ಕಾಲಕ್ಕೆ ಬಳಕೆಯಲ್ಲಿತ್ತೆಂಬ ಅಂಶ ತಿಳಿಯುತ್ತದೆ.

ಆರಂಭದ ಲಾವೋ ಬರೆವಣಿಗೆಯನ್ನು ಥಾಕ್‌ಖಾಮ್ (ಹುಣಸೆ ಕಾಯಿ ಆಕಾರದ ಲಿಪಿ) ಎಂದು ಕರೆಯುತ್ತಿದ್ದರು. ಲಾವೋ ಲಿಪಿಯಲ್ಲಿ ೪೫-೪೬ ವ್ಯಂಜನಗಳಿವೆ. ಒಂದು

ಅನುನಾಸಿಕವನ್ನು ವ್ಯಂಜನದಂತೆ ಸೇರಿಸಿರುತ್ತಾರೆ. ಇವುಗಳಲ್ಲಿ ಅರ್ಧದಷ್ಟು ಮಾತ್ರ ಶುದ್ಧ ವ್ಯಂಜನಗಳಾಗಿದ್ದು, ಉಳಿದವನ್ನು ಧ್ವನಿಯ ಮೇಲೆ ಗುರುತಿಸಬೇಕಾಗಿದೆ. ಈ ಲಿಪಿಯಲ್ಲಿ ಥಾಯ್‌ಲಾವೋ, ಥಾಯ್‌ಲು, ಯ್ಯೂನ್-ನಾನ್, ಥಾಯ್-ಯ ಮತ್ತು ಥಾಯ್-ಯುಆನ್ ಎಂಬ ಪ್ರಭೇದಗಳಿವೆ. ಲಾವೋ ಜನ್ಯ ಲಿಪಿಗಳನ್ನು ಮೇಕೋಂಗ್ ಮತ್ತು ಯಾಂಗ್-ಟ್ಸೆ ನದಿಗಳ ಕಣಿವೆಯ ಜನ ಮತ್ತು ದಕ್ಷಿಣ ಚೀನಾದ ಮೋ-ಸೋಗಳು ಬಳಸುತ್ತಾರೆ. ಲೂ ಮತ್ತು ಹ್ಯೂನ್ ಎಂಬ ಭಾಷೆಯನ್ನು ಮಾತನಾಡುವ ಥಾಯಲ್ಯಾಂಡಿನ ಉತ್ತರಕ್ಕಿರುವ ಜನರೂ ಲಾವೋ ಲಿಪಿಗೆ ಸಮೀಪದ ಲಿಪಿಯೊಂದನ್ನು ಬಳಸುತ್ತಾರೆ.

ಅಹೋಮ್ ಎಂಬ ಭಾಷೆಯು ಷಾನ್ ಭಾಷೆಯ ಉಪಭಾಷೆಯಾಗಿದ್ದು ಈಗ ಮೃತಭಾಷೆಯಾಗಿದೆ. ಇದನ್ನು ಅಸ್ಸಾಂನ ಶಿವಸಾಗರ ಜಿಲ್ಲೆಯಲ್ಲಿ ಮಾತನಾಡುತ್ತಿದ್ದರು. ಇದರಲ್ಲಿ ೪೧ ಅಕ್ಷರಗಳಿದ್ದು ಇದರಲ್ಲಿ ೧೮ ಸ್ವರಗಳು, ೨೩ ವ್ಯಂಜನಗಳಿದ್ದವು. ಪ್ರತಿ ವ್ಯಂಜನವು ಸ್ವತಂತ್ರವಲ್ಲ, ಇದರೊಂದಿಗೆ ದೀರ್ಘ 'ಆ' ಕಾರವು ಸೇರಿ ಉಚ್ಚಾರವಾಗುತ್ತದೆ. ಇದರ ವರ್ಣಮಾಲೆಯಲ್ಲಿ ಯ ಮತ್ತು ವ ಅಕ್ಷರಗಳಿಲ್ಲ.

ಸಯಾಮಿ ಲಿಪಿ

ಥಾಯ್‌ಲೇಂಡಿನಲ್ಲಿ ಬಳಕೆಯಲ್ಲಿರುವ ಮುಖ್ಯ ಲಿಪಿ. ಜನಸಂಖ್ಯಾ ಬಾಹುಳ್ಯವುಳ್ಳ ದೇಶ. ಸಯಾಮಿ ಲಿಪಿಯು ಮೂಲದ ಬಗ್ಗೆ ಸ್ಪಷ್ಟ ಕಲ್ಪನೆಯಿಲ್ಲ. ಶಕ ೧೨೧೪ (ಕ್ರಿ.ಶ.೧೨೯೨-೯೩)ರ ಶಾಸನವೇ ಪ್ರಾಚೀನ ಸಯಾಮಿ ಶಾಸನ. ಇದು ಸುಖೋತಾಯ್ (ಸುಖೋದಯ) ಎಂಬಲ್ಲಿ ದೊರೆತಿದೆ. ಶಾಸನದಲ್ಲಿ ಉಲ್ಲೇಖಿತ ರಾಜ ರಾಂ ಖಂ ಹೇಂಗ್ ಎಂಬುವವನು. ಬಹುಶಃ ಖ್ಮೇರ್ ಲಿಪಿಯಿಂದ ಈತ ಲಿಪಿಯನ್ನು ಪಡೆದಿರಬೇಕು. ಇದು ಗ್ರಂಥಲಿಪಿಯಿಂದ ಉದಿಸಿರಬೇಕೆಂದು ಸಿ.ಬಿ.ಬ್ರಾಡ್ಲೆ ಎಂಬ ವಿದ್ವಾಂಸ ಅಭಿಪ್ರಾಯ ಪಡುತ್ತಾನೆ. ಸಯಾಮಿ ಭಾಷೆ ಮತ್ತು ಅದರ ಲಿಪಿ ಹರಡಲು ಬೌದ್ಧ ಬಿಕ್ಕುಗಳು ಕಾರಣ. ಬರೆವಣಿಗೆಗೆ ಬಳಸುವ ಕೋರಿಫ ಎಂಬ ಜಾತಿಯ ತಾಳೆಗರಿಗಳು ಸಯಾಮಿ ಲಿಪಿಗಳು ಬದಲಾವಣೆ ಹೊಂದಲು ಮಹತ್ತರ ಪಾತ್ರ ವಹಿಸಿವೆ. ಬಹುಮುಖ್ಯವಾದ ಗ್ರಂಥಗಳನ್ನು ಆನೆಗಳ ದಂತಗಳ ಮೇಲೆ ಬರೆಯುತ್ತಿದ್ದರು. ರಾಜನ ಬರೆವಣಿಗೆಗೆ ಚಿನ್ನದ ತಗಡನ್ನು ಬಳಸುತ್ತಿದ್ದರು.

ಈಗಿನ ಸಯಾಮಿ ಲಿಪಿಯಲ್ಲಿ ೪೪ ವ್ಯಂಜನಗಳಿವೆ. ವ್ಯಂಜನಗಳು ಸ್ವತಂತ್ರವಲ್ಲ. ಸ್ವರಸಮೇತ ಉಚ್ಚಾರವಾಗುತ್ತವೆ. ೩೦ ಸ್ವರಗಳಿವೆ. ಇವಕ್ಕೆ ಪ್ರತ್ಯೇಕ ಚಿಹ್ನೆಗಳಿಲ್ಲ. ವ್ಯಂಜನದ ಹಿಂದೆ, ಮುಂದೆ, ಕೆಳಗೆ, ಮೇಲೆ ಬರೆಯುವ ಮೂಲಕ ಉಚ್ಚರಿಸುತ್ತಾರೆ. ಅ ಮತ್ತು ಉ ಕಾರವನ್ನು ವ್ಯಂಜನವೆಂದೇ ಭಾವಿಸುತ್ತಾರೆ. ಮುದ್ರಣದ ಆರಂಭದವರೆಗೆ ಸಯಾಮಿಯನ್ನು ಓದುವುದು ಕಷ್ಟವಾಗಿತ್ತು. ಇದಕ್ಕೆ ಇದ್ದ ಮುಖ್ಯ ಅಡಚಣೆಯೆಂದರೆ ವಿರಾಮಚಿಹ್ನೆಗಳು ಇಲ್ಲದಿದ್ದುದು. ಮುದ್ರಣ ಬಂದ ಮೇಲೆ (ಕ್ರಿ.ಶ.೧೮೯೧) ಪ್ರತ್ಯೇಕ ಲಿಪಿಗಳ ಬಳಕೆಗೆ ಕಾರಣವಾಯಿತು.

ಬ್ರಿಟೀಷರ ಮತ್ತು ಚೀನೀಯರ ವಶದಲ್ಲಿದ್ದ ಷಾನ್ ಭಾಷೆಯ ಜನರು ತಮ್ಮ ಭಾಷೆಗೆ ಷಾನ್ ಲಿಪಿಯನ್ನೇ ಬಳಸಿದರೂ ಅವುಗಳಲ್ಲಿ ಅನೇಕ ಪ್ರಭೇದಗಳಿದ್ದವು. ಷಾನ್

ವರ್ಣಮಾಲೆಯಲ್ಲಿ ಗ್, ಘ್, ಜ್, ಝ್, ದ, ಧ, ಬ, ಭ ಎಂಬ ವ್ಯಂಜನಗಳೂ ದೀರ್ಘಸ್ವರವಾದ ಏ ಕಾರವು ಕಾಣುವುದಿಲ್ಲ. 'ಈ' ಕಾರಕ್ಕೆ ಒಂದು ಅಕ್ಷರವಿದ್ದು ಇದೇ ಕೆಲವು ಸಂದರ್ಭಗಳಲ್ಲಿ ಹ್ರಸ್ವ 'ಇ' ಕಾರವಾಗಿಯೂ ಉಚ್ಚಾರವಾಗುತ್ತದೆ.

ಖಮ್ತಿ ಲಿಪಿ

ಅಸ್ಸಾಂನ ಪೂರ್ವ, ಚೈನಾದ ಖಮ್ತಿ ಎಂಬಲ್ಲಿ ಈ ಭಾಷೆಯನ್ನು ಮಾತನಾಡುತ್ತಾರೆ. ಈ ಪ್ರದೇಶಗಳ ಈ ನಾಗರಿಕ ಜನರು ತಮ್ಮ ಭಾಷೆಗೆ ಬಳಸುವ ಲಿಪಿಯು ಷಾನ್ ಲಿಪಿಯ ಒಂದು ಪ್ರಬೇಧವೇ ಆಗಿದೆ. ಇವರ ವರ್ಣಮಾಲೆಯಲ್ಲಿ ೧೬ ಸ್ವರ, ೧೭ ವ್ಯಂಜನಗಳಿವೆ. ಕೈಯಲ್ಲಿ ಬರೆಯುವ ಲಿಪಿಯ ಬರೆವಣಿಗೆ ಮಧ್ಯೆ ಕಪ್ಪು ಚುಕ್ಕೆ ಇಡುತ್ತಾರೆ. ಈ ಪದ್ಧತಿ ಮುದ್ರಣದಲ್ಲಿ ಕಾಣುವುದಿಲ್ಲ. ಈ ಲಿಪಿಯಲ್ಲದೆ ತೈರೋಂಗ್ ಎಂಬ ಲಿಪಿಯನ್ನೂ ಇವರು ಬಳಸುತ್ತಾರೆ. ಇವಲ್ಲದೆ ಐತೋನಿಯ ಲಿಪಿ, ತೊಂಗ್‌ಕಿಂಗ್ ಜನರು ಬಳಸುವ ಚಾನ್‌ಲಾವೋ ಎಂಬ ಲಿಪಿ (೩೬ ಅಕ್ಷರಗಳು), ಆಯಾ ರಾಜಕೀಯ ಪ್ರದೇಶಕ್ಕೆ ತಕ್ಕಂತೆ (ಉದಾಹರಣೆಗೆ ಚೀನಾದ ಷಾನ್ ಜನರು ತಮ್ಮ ಭಾಷೆಗೆ ಚೀನಾ ಲಿಪಿಯನ್ನೂ ಬಳಸುತ್ತಾರೆ.) ಬೇರೆ ಬೇರೆ ಲಿಪಿಗಳನ್ನು ಬಳಸಿರುತ್ತಾರೆ.

ಇಂಡೋನೇಷಿಯಾ ಲಿಪಿ


ಈ ದ್ವೀಪದ ಮೂಲವಾಸಿಗಳು ಮಲಯ್-ಪಾಲಿನೇಷಿಯಾ ಭಾಷಾ ಗುಂಪಿಗೆ ಸೇರಿದವರು. ಈ ಭಾಷಾ ಜನರು ಮಡಗಾಸ್ಕರ್, ಮಲೇಷಿಯಾ ದ್ವೀಪಸಮುದಾಯ, ಫಿಲಿಫೈನ್, ಫಾರ್ಮೋಸಾ, ನ್ಯೂಜಿಲ್ಯಾಂಡ್ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಇಂಡೋನೇಷಿಯಾದ ಎಲ್ಲ ಸಮುದಾಯದವರು ಬಳಸುವ ಭಾಷೆಯನ್ನು 'ಬಜಾರ್ ಮಲಯ್' ಎಂದು ಕರೆಯುತ್ತಾರೆ. ಇದನ್ನು ದ್ವೀಪ ಸಮೂಹದಲ್ಲಿ ಭಾಷಾ ಗೊಂದಲಗಳನ್ನು ನಿವಾರಿಸಲು ಸೃಷ್ಟಿಸಿದ ಭಾಷೆಯಾಗಿದೆ. ಈ ಭಾಷೆಯಲ್ಲಿ ಭಾರತ, ಚೈನಾ, ಅರಾಬಿಕ್, ಪರ್ಷಿಯನ್, ಪೋರ್ಚುಗೀಸ್, ಡಚ್‌ಭಾಷೆಯ ಪದಗಳನ್ನು ಸೇರಿಸಿಕೊಂಡಿದೆ. ಇಂಡೋನೇಷಿಯಾದಲ್ಲಿ ೧೦ ಮುಖ್ಯ ಭಾಷೆಗಳ ಜೊತೆಗೆ ೧೦೦ಕ್ಕೂ ಹೆಚ್ಚಿನ ಉಪಭಾಷೆಗಳಿವೆ. ಈ ಗೊಂದಲವನ್ನು ನಿವಾರಿಸಲು ಬಜಾರ್ ಮಲಾಯ್ ಭಾಷೆಯ ಸೃಷ್ಟಿ. 'ಭಾಸಾ ಇಂಡೋನೇಷಿಯಾ' ಎಂಬುದು ಈಗ ರಾಷ್ಟ್ರೀಯ ಭಾಷೆಯಾಗಿದೆ. ೧೯೨೮ರಲ್ಲಿ ಇಂಡೋನೇಷಿಯಾದಲ್ಲಿ ನಡೆದ ರಾಷ್ಟ್ರೀಯ ಚಳುವಳಿಯಲ್ಲಿ ಈ ಭಾಷೆಯನ್ನು ರೂಪಿಸಲಾಯಿತು. ೧೯೪೫ರಲ್ಲಿ ಇಂಡೋನೇಷಿಯಾ ಸರಕಾರವು ಈ ಭಾಷೆಯ ಬೆಳವಣಿಗೆಗಾಗಿ ಕಮಿಷನ್ ಒಂದನ್ನು ನೇಮಿಸಿತು. ಈ ಭಾಷೆಗೆ ಅರಾಬಿಕ್ ಇಲ್ಲವೆ ಲತಿನ ಲಿಪಿಯನ್ನು ಬಳಸಲಾಗುತ್ತಿದೆ. ಈಗ ಇವೇ ಎಲ್ಲಾ ಕಡೆ ಸರ್ವತ್ರವಾಗಿದೆ (Art of Srivijaya by Diskul). ಶಾಲೆಗಳಲ್ಲಿ ಈ ಭಾಷೆ ಮತ್ತು ಲಿಪಿಗಳನ್ನು ಮಾತ್ರ ಬೋಧಿಸಲಾಗುತ್ತಿವೆ. ಪಾರಂಪರಿಕ ಲಿಪಿಗಳನ್ನು ಸ್ವಂತ ಜವಾಬ್ದಾರಿ ಮೇಲೆ ಕಲಿಯಬೇಕಾದ್ದರಿಂದ ಅವು ಅವಸಾನವಾಗುತ್ತಿವೆ/ವಾಗಿವೆ.

ಇಂಡೋನೇಷಿಯಾದಲ್ಲಿ ವಿದ್ಯಾವಂತ ಜನರು ಅರಾಬಿಯಾ ಅಥವಾ ರೋಮನ್ ಲಿಪಿಯನ್ನು ಬರೆವಣಿಗೆಗೆ ಬಳಸುತ್ತಾರೆ. ಬಹಳಷ್ಟು ಪಂಗಡಗಳು ಪಾರಂಪರಿಕವಾಗಿ ಹಳೆಯ

ಲಿಪಿಯನ್ನೂ ಬಳಸುತ್ತಿದ್ದಾರೆ. ಈ ಪಾರಂಪರಿಕ ಲಿಪಿಗಳೆಲ್ಲವೂ ಭಾರತ ಮೂಲದ ಲಿಪಿಯಿಂದ ಜನಿಸಿದವಾಗಿವೆ. ಹಿಂದೆ ಸಂಸ್ಕರಿಸಿದ ಮರದ ತೊಗಟೆಯನ್ನು, ಕೆಲವರು ಬಿದಿರ ದಬ್ಬೆಗಳನ್ನು ಬರೆವಣಿಗೆಗೆ ಬಳಸುತ್ತಿದ್ದರು. ಸುಮಾತ್ರ, ಸೆಲೆಬಸ್, ಬಾಲಿ, ಸುಂದ, ಜಾವಾ, ಫಿಲಿಫೀನ್ಸ್ ಮುಂತಾದ ಪ್ರದೇಶಗಳ ಕೆಲವು ಪ್ರದೇಶಗಳಲ್ಲಿ ಹಿಂದೆ ಬಳಕೆಯಲ್ಲಿದ್ದ ಪ್ರಾಚೀನ ಲಿಪಿಗಳನ್ನು ಕೆಲವರು ಬಳಸುತ್ತಾರೆ. ಜಾವನ್ನರ ಪ್ರಾಚೀನ ಲಿಪಿಯನ್ನು ಕವಿಲಿಪಿ ಎಂದು ಕರೆಯುತ್ತಾರೆ.

ಪ್ರಾಚೀನ ಜಾವಾ ಲಿಪಿ

ಜಾವಾ ದ್ವೀಪದ ಪಶ್ಚಿಮ ಭಾಗದಲ್ಲಿ ಕ್ರಿ.ಶ.ಸು.೪–೫ನೆಯ ಶತಮಾನಕ್ಕೆ ಸೇರಬಹುದಾದ ಶಾಸನವು ದೊರೆತಿವೆ. ಇದು ಪೂರ್ಣವರ್ಮನ ಪ್ರಶಸ್ತಿ ಶಾಸನವಾಗಿದ್ದು ಸಂಸ್ಕೃತದಲ್ಲಿದೆ. ಈ ದ್ವೀಪದ ಪಶ್ಚಿಮದ ಸಾಮ್ರಾಜ್ಯದ ಮೇಲೆ ಕ್ರಿ.ಶ.೬ನೆಯ ಶತಮಾನದಲ್ಲಿ ಮಧ್ಯಜಾವಾ ದ್ವೀಪವು ತನ್ನ ಅಧಿಕಾರವನ್ನು ಪಡೆಯುತ್ತದೆ. ಮುಂದೆ ಇದು ಮಲಯಾದ್ವೀಪ ಸಮುದಾಯದಲ್ಲಿ ಸೇರುತ್ತದೆ. ಕ್ರಿ.ಶ.೮ನೆಯ ಶತಮಾನದಲ್ಲಿ ಜಾವಾ ದೇಶವು ಶ್ರೀವಿಜಯ ಸಾಮ್ರಾಜ್ಯದಲ್ಲಿ ಲೀನವಾಗುತ್ತದೆ.



ಜಾವಾದ ಪೂರ್ಣವರ್ಮನ ಶಾಸನ

ಶ್ರೀವಿಜಯ ಸಾಮ್ರಾಜ್ಯವು ಕ್ರಿ.ಶ.೮೫೦ ರಿಂದ ಕ್ರಿ.ಶ.೧೪೦೦ರ ವರೆಗೆ ರಾಜ್ಯಭಾರ ಮಾಡುತ್ತದೆ. ಈ ಸಾಮ್ರಾಜ್ಯವನ್ನು ಮಡ್ಜೋಪಹಿತ್ ಅಥವಾ ಮಜಪಹಿತ್ ಎಂದು ಕರೆಯುತ್ತಾರೆ. ಹಿಂದೂಧರ್ಮದ ಜೊತೆಗೆ ಅದರ ಅಂಗಗಳಾದ ದೇವಾಲಯ ರಚನೆ, ಶಾಸನ ರಚನೆಗಳಿವೆ. ಮುಂದೆ ಕ್ರಿ.ಶ.೧೫ನೆಯ ಶತಮಾನದ ನಂತರ ಭಾರತದ ಮೂಲಕ ಮುಸಲ್ಮಾನರು ಇಲ್ಲಿಗೆ ಬಂದು ಈ ಸಾಮ್ರಾಜ್ಯವನ್ನೂ ಕೊನೆಗಾಣಿಸಿ ತಮ್ಮ ಸಂಸ್ಕೃತಿ, ಧರ್ಮ, ಭಾಷೆ, ಲಿಪಿಯನ್ನು ಬಳಕೆಗೆ ತರುತ್ತಾರೆ.


ಜಾವಾದಲ್ಲಿನ ಪ್ರಾಚೀನ ಶಾಸನಗಳನ್ನು (೧) ಪಶ್ಚಿಮ ಜಾವಾದಲ್ಲಿನ ಶಾಸನಗಳು (೨) ಮಧ್ಯ ಜಾವಾದಲ್ಲಿನ ಶಾಸನಗಳು ಎಂದು ವಿದ್ವಾಂಸರು ಎರಡು ಭಾಗ ಮಾಡಿದ್ದಾರೆ.

ಪಶ್ಚಿಮ ಜಾವಾದಲ್ಲಿನ ಚಿ-ಅರುತೋನ್ ಎಂಬಲ್ಲಿ ದೊರೆತ ಪೂರ್ಣವರ್ಮನ ಶಾಸನ ಮುಖ್ಯವಾದುದು. ಉಳಿದ ಶಾಸನಗಳು ಜಂಬೂ, ಕೆಬೋನ್‌ಕೊಪಿ ಮತ್ತು ತುಗು ಎಂಬಲ್ಲಿನ ಶಾಸನಗಳೂ ಇದೇ ಕಾಲಕ್ಕೆ ಸೇರಿವೆ. ಪೂರ್ಣವರ್ಮನ ಶಾಸನದ ಬಳಿ ಶಂಕುಲಿಪಿಯ ಶಾಸನವೂ ಇದೆ. ಮಧ್ಯ ಜಾವಾದಲ್ಲಿನ ಶಾಸನಗಳು ತುಕ್‌ಮಸ್, ಚಂಗ್ಗಲ್ ಎಂಬಲ್ಲಿ ದೊರೆತಿವೆ. ಇವು ಏಳು ಮತ್ತು ಎಂಟನೆಯ ಶತಮಾನಕ್ಕೆ (ಕ್ರಿ.ಶ.೭೩೨) ಸೇರಿದವು. ಈ ಶಾಸನಗಳು ಪಶ್ಚಿಮ ಜಾವಾದ ಶಾಸನಗಳ ಮುಂದುವರಿದ ಲಿಪಿಗಳನ್ನು ಹೊಂದಿವೆ.

ಜಾವಾದಲ್ಲಿ ಬಳಕೆಯಲ್ಲಿದ್ದ ಲಿಪಿಗಳನ್ನು 'ಕವಿಲಿಪಿ'ಗಳೆಂದು ಕರೆಯುತ್ತಾರೆ. ಇದರ ಅರ್ಥ ಪದ್ಯದ ಭಾಷೆಯೆಂದರ್ಥ. ಈ ಲಿಪಿಗೆ ಮೂಲವಾದ ಲಿಪಿಯು ಗುಜರಾತಿನಿಂದ ಬಂದಿರಬಹುದೆಂಬ ಅಭಿಪ್ರಾಯವನ್ನು ಡಾ। ಬ್ರಾಂಡೆಸ್ ಎಂಬ ವಿದ್ವಾಂಸ ವ್ಯಕ್ತಪಡಿಸುತ್ತಾನೆ. ಆದರೆ ಕೆಲವು ವಿದ್ವಾಂಸರು ಭಾರತದ ಪೂರ್ವ ತೀರದಿಂದ ಬಂದಿರಬೇಕೆಂದು ಅಭಿಪ್ರಾಯ ಪಡುತ್ತಾರೆ. ಜಾವನ್ನರ ಪರಂಪರೆಯಂತೆ ಅಜಿಶಕದಲ್ಲಿ ತ್ರಿತ್ರೆಸ್ತಾ ಎಂಬ ಬ್ರಾಹ್ಮಣನು ಜಾವಾಕ್ಕೆ ಬರೆವಣಿಗೆಯನ್ನು ತಂದನೆನ್ನುತ್ತಾರೆ. ಪ್ರೊ। ಕೆರನ್ ಅವರು 'ವೆಂಗಿ ಲಿಪಿ'ಯು ಮೂಲವೆಂದರೆ, ಪ್ರೊ। ವೋಗಲ್ ಎಂಬುವವರು ವೆಂಗಿಲಿಪಿಗೆ ಪ್ರತಿನಾಮವಾಗಿ 'ಪಲ್ಲವ ಲಿಪಿ' ಎಂಬ ಹೆಸರನ್ನು ನೀಡುತ್ತಾನೆ. ಬರ್ನೆಲ್ ಎಂಬುವವನು ಪೂರ್ವದ ಚೇರಲಿಪಿ ಮೂಲವೆಂದಿರುತ್ತಾರೆ. ಇದೇ ಅಭಿಪ್ರಾಯವನ್ನು ದಾನಿಯವರೂ ವ್ಯಕ್ತಪಡಿಸುತ್ತಾರೆ. ಈ ಲಿಪಿಯನ್ನು ಜಾವಾ, ಬೋರ್ನಿಯೋ, ಚಂಪಾ ದೇಶಗಳಲ್ಲಿ ಬಳಸಲಾಗಿದೆ. ಭಾರತದ ಗ್ರಂಥಲಿಪಿಗಿಂತಲೂ ಪ್ರಾಚೀನವಾದ ಈ ಲಿಪಿಗಳು ತಲಕಾಡಿನ ಗಂಗರ ಲಿಪಿಗಳಿಂದ ಹಾಗೂ ಕದಂಬರ ಲಿಪಿಗಳಿಂದ ಪಡೆದಿದ್ದಾರೆಂದು ಇತ್ತೀಚಿನ ಶೋಧಗಳು ತಿಳಿಸುತ್ತವೆ. ಜಾವಾದ ದಿನಯದಲ್ಲಿನ ಶಾಸನದಲ್ಲಿ ಕವಿಲಿಪಿ-ಸಂಸ್ಕೃತಭಾಷೆಯನ್ನು ಬಳಸಲಾಗಿದೆ. ಆದರೆ ಮುಂದಿನ ಶಾಸನಗಳಲ್ಲಿ ಜಾವಾ ಭಾಷೆಯನ್ನು ಬಳಸಲಾಗಿದೆ. ಮಧ್ಯ ಜಾವಾದ ಕಲಸನ್ ಎಂಬಲ್ಲಿ ದೊರೆತಿರುವ ಬೌದ್ಧಶಾಸನವನ್ನು ಕ್ರಿ.ಶ.೮–೧೧ನೆಯ ಶತಮಾನದಲ್ಲಿ ಬಳಕೆಯಲ್ಲಿದ್ದ ನಾಗರಿ ಲಿಪಿಯಲ್ಲಿ ಬರೆಯಲಾಗಿದೆ. ಈ ಶಾಸನವನ್ನು ಶ್ರೀವಿಜಯ ಸಾಮ್ರಾಜ್ಯದ ಶೈಲೇಂದ್ರ ವಂಶದವರು ಬರೆಸಿದ್ದಾರೆ. ಶಾಸನದ ಭಾಷೆಯು ಅರೆಸಂಸ್ಕೃತ-ಅರೆಕವಿ ಭಾಷೆಯಲ್ಲಿದೆ. ಇದು ಮಧ್ಯಜಾವಾದ ರಾಜನಾಗಿದ್ದ 'ವಾವ' (ಕ್ರಿ.ಶ.೯೫೪) ಎಂಬ ರಾಜನದಾಗಿದ್ದು, ಇದರ ಆರಂಭದ ಪದ್ಯಗಳು ಸಂಸ್ಕೃತದಲ್ಲಿವೆ. ಇದನ್ನು 'ಮಿಂಟೋಸ್ಟೋನ್' ಎಂಬ ಹೆಸರಿನಿಂದ ಕರೆಯುತ್ತಾರೆ. ಮುಂದೆ ಈ ಸಾಮ್ರಾಜ್ಯವು ಜಾವಾದ ಪೂರ್ವಕ್ಕೆ ಸ್ಥಳಾಂತರವಾದಾಗ ಹಳೆಯ ಜಾವಾದ ಭಾಷೆಯಾದ 'ಕವಿಭಾಷೆ' ಹೆಚ್ಚು ಅಭಿವೃದ್ಧಿ ಪಡೆಯಿತು. ಕ್ರಿ.ಶ.೧೦೪೧ರ ಶಾಸನವು ಪೆನಾಂಗ್-ಗುಂಗೆನ್ (ಸುರಬಯ) ಎಂಬಲ್ಲಿ ದೊರೆತಿದ್ದು ಈ ಶಾಸನವು ದ್ವಿಭಾಷಾ ಶಾಸನವಾಗಿದೆ. ಈ ಶಾಸನದಲ್ಲಿ ಒಂದೆಡೆ ಕವಿಭಾಷೆ ಇನ್ನೊಂದೆಡೆ ಸಂಸ್ಕೃತ ಭಾಷೆ ಬಳಸಿದೆ. ಕ್ರಿ.ಶ.೧೪೮೬ರ ಶಾಸನವೇ ಕವಿಭಾಷೆಯ ಅಂತಿಮ ಶಾಸನ.

ಕ್ರಿ.ಶ.೧೪೭೮ರಲ್ಲಿನ ಜಾವಾದ ಮಜಪಹಿತ್ ಕವಿಭಾಷೆಯು ಮಧ್ಯಯುಗೀನ ಜಾವಾ ಭಾಷೆಗೆ ನಾಂದಿಯಾಗುತ್ತದೆ. ಇದೇ ಮುಂದೆ ಹೊಸ ಜಾವಾ ಭಾಷೆಗೆ ಮೂಲವಾಗುತ್ತದೆ. ಈಗಿನ ಜಾವಾ ಭಾಷೆಯಲ್ಲಿ ಕೆಲವು ಶಾಖೆಗಳಿವೆ.

ಕವಿ ವರ್ಣಮಾಲೆ



೧. ಕ್ರಮ ಇಂಗ್ಗಿಲ್ : ದೇವತೆಗಳನ್ನು, ಪೂರ್ವಜರನ್ನೂ ಸ್ಮರಿಸುವ ಭಾಷೆ
೨. ಬಾಸಾಕೆಡತಮ್ : ನ್ಯಾಯಾಲಯದ ಭಾಷೆ.
೩. ನ್ಗೊಕೋ : ಸಾಮಾನ್ಯರ ಭಾಷೆ
೪. ಮಧ್ಯ : ಕ್ರಮ ಮತ್ತು ನ್ಗೊಕೋದ ಮಧ್ಯದ ಭಾಷೆ

ಈ ಎಲ್ಲಾ ಭಾಷೆಗಳೂ ಇಸ್ಲಾಂ ಸಂಸ್ಕೃತಿಯಿಂದ ಪ್ರಭಾವಿತವಾಗಿವೆ. ಜಾವನ್ನರ ಲಿಪಿಯನ್ನು ಜಾವನ್ನರು, ಬೋರ್ನಿಯೋದ ಕೆಲವು ಭಾಗಗಳಲ್ಲಿ, ಸುಂದನೀಯ, ಮದುರಸೆ ಮತ್ತು ಬಾಲಿ ಭಾಷೆಗಳಿಗೆ ಬಳಸುತ್ತಾರೆ. ಜಾವಾ ಭಾಷೆ ಜಾವಾದ ಪೂರ್ವ, ಮಧ್ಯದಲ್ಲಿ ಬಳಕೆಯಲ್ಲಿದ್ದರೆ; ಸುಂದನೀಯ ಭಾಷೆಯನ್ನು ಜಾವಾದ ಪಶ್ಚಿಮದಲ್ಲಿ ಮಾತನಾಡುತ್ತಾರೆ. ಮದುರಸೆ ಭಾಷೆಯನ್ನು ಜಾವಾದ ಈಶಾನ್ಯದಲ್ಲಿಯೂ, ಬಾಲಿಯನ್ನು ಬಾಲಿದ್ವೀಪದಲ್ಲಿಯೂ ಮಾತನಾಡುತ್ತಾರೆ. ಜಾವಾ ಭಾಷೆಯನ್ನು ಹೆಚ್ಚಿನ ಜನರು ಬಲ್ಲರು.

ಜಾವಾ ಅಕ್ಷರಮಾಲೆಯಲ್ಲಿ ೨೦ ವ್ಯಂಜನಗಳಿವೆ. ಇವುಗಳಲ್ಲಿ ಯ ಮತ್ತು ವ ಸೇರಿವೆ. ೫ ಸ್ವರಗಳಿವೆ. ಬಹುತೇಕವಾಗಿ ಸ್ವರವು ವ್ಯಂಜನದೊಂದಿಗೆ ಸೇರಿರುತ್ತದೆ. ಕೆಲವು ವೇಳೆ ಪ್ರತ್ಯೇಕವಾದ ವಿಶಿಷ್ಟ ಚಿಹ್ನೆಗಳನ್ನು ತೋರಿಸುವ ಮೂಲಕ ವ್ಯಂಜನಗಳನ್ನು ತೋರಿಸುತ್ತಾರೆ. ಇವಲ್ಲದೆ ಇದರೊಂದಿಗೆ 'ಅಕ್ಷರ ಜಾವ' ರೀತಿಯ ೩೦ ಹೆಚ್ಚುವರಿ ಚಿಹ್ನೆಗಳನ್ನು ಬಳಸುತ್ತಾರೆ. ಇವನ್ನು 'ಅಕ್ಷರ ಪಸಂಗನ್' (ಸಮಾನಾಂತರ ಬಳಕೆಯ ಲಿಪಿ) ಎಂದು ಕರೆಯುತ್ತಾರೆ. ಇದರಲ್ಲಿಯೂ ಅ ಕಾರವು ವ್ಯಂಜನದೊಂದಿಗೆ ಸೇರಿ ಬರುತ್ತಿತ್ತು. ಕೆಲವು ವಿಬೇಧಗಳಲ್ಲಿ ಓ ಕಾರವು ವ್ಯಂಜನದೊಂದಿಗೆ ಸೇರುತ್ತದೆ.

ಸ್ವರಗಳನ್ನು ಬಳಸುವಾಗ ಅವನ್ನು ಪ್ರತ್ಯೇಕವಾಗಿಯೇ ಬಳಸುತ್ತಾರೆ. ಪ್ರತಿಯೊಂದನ್ನು ಪ್ರತ್ಯೇಕ ಹೆಸರಿನಿಂದ ಗುರುತಿಸುತ್ತಾರೆ. ಕೆಲವೆಡೆ ಸ್ವರಗಳನ್ನು ವ್ಯಂಜನಗಳ ಕೆಳಗೆ ಬರೆದಿರುತ್ತಾರೆ. ಅಥವಾ ವ್ಯಂಜನವನ್ನು ಸ್ವರಗಳ ಮಧ್ಯೆ ಬರೆದಿರುತ್ತಾರೆ. ಇವಲ್ಲದೆ 'ನ್ಗಲಲೇತ್', 'ಪಚೇರಕ್' ಎಂಬ ಅಕ್ಷರಗಳು ಇವು ಕ್ರಮವಾಗಿ ಲೆ, ರೆ ಎಂಬ ಉಚ್ಚಾರ ಪಡೆಯುತ್ತವೆ. ವ್ಯಂಜನಾಂತ್ಯದ ಸ್ವರದ ಚಿಹ್ನೆಯನ್ನು ಲೋಪಗೊಳಿಸಲು ಅಕ್ಷರಗಳ ಮೇಲೆ ಕೆಲವು ವಿಶಿಷ್ಟ ಚಿಹ್ನೆಗಳನ್ನು ಬಳಸುತ್ತಾರೆ.

ಜಾವನ್ನರ ಲಿಪಿಯ ಮೇಲೆ ಭಾರತದ ಲಿಪಿಯ ಪ್ರಭಾವವಿದ್ದರೂ ಜಾವನ್ನರ ಲಿಪಿ ಮಾಲೆಯೂ ಭಾರತದ ವರ್ಣಮಾಲೆಯಂತಿಲ್ಲ. ಲಿಪಿಯನ್ನು ಎಡದಿಂದ ಬಲಕ್ಕೆ ಬರೆಯುತ್ತಾರೆ. ಚಿಕ್ಕ ಗೆರೆಗಳನ್ನು ಅಥವಾ 'ಕಾಮ' ಚಿಹ್ನೆಯನ್ನು ತೋರಿಸುವ ಮೂಲಕ ಪೂರ್ಣವಿರಾಮವನ್ನು ತೋರಿಸಿರುತ್ತಾರೆ. ಹಿಂದಿನ ಜಾವಾದವರು ತಾವೇ ತಯಾರಿಸಿದ ಮಸಿಯಲ್ಲಿ ತಾವೇ ತಯಾರಿಸಿದ ಅಥವಾ ಮಾರುಕಟ್ಟೆಯಲ್ಲಿ ದೊರೆಯುವ ಕಾಗದದ ಮೇಲೆ ಬರೆದರೆ, ಬಾಲಿಯರು ತಾಳೆಗರಿ ಕಂಠ ಬಳಸುತ್ತಿದ್ದರು.

ಸುಮಾತ್ರಾ ಲಿಪಿ

ಶ್ರೀವಿಜಯರ ಸಾಮ್ರಾಜ್ಯವನ್ನು ಕೊನೆಗಾಣಿಸುತ್ತಾರೆ. ಶ್ರೀವಿಜಯ ಸಾಮ್ರಾಜ್ಯವು ಅನೇಕ ಅವಶೇಷಗಳು, ಶಾಸನಗಳನ್ನು ಬಿಟ್ಟುಹೋಗಿದೆ. ಈ ದ್ವೀಪದಲ್ಲಿ ಮಲೇಶಿಯಾ ದ್ವೀಪದ ೧೪ ಭಾಷೆಗಳನ್ನು, ಅನೇಕ ಲಿಪಿಗಳನ್ನು ಜನರು ಬಳಸುತ್ತಾರೆ. ಇವರಲ್ಲಿ ಅಚೆಹನಿಯರು, ಸುಮಾತ್ರದ ವಾಯುವ್ಯ ಮತ್ತು ಮಲಯಾದ ತೀರದಲ್ಲಿದ್ದು ಮುಂದುವರಿದ ಜನಾಂಗದವರಾಗಿದ್ದಾರೆ. ಇವರು ಮುಸಲ್ಮಾನರಾಗಿದ್ದು ಅರೇಬಿಯಾ ಲಿಪಿಯನ್ನು ಬಳಸುತ್ತಿದ್ದಾರೆ. ಹಿಂದೆ ಬೇರೆ ಬೇರೆ ಲಿಪಿಗಳನ್ನು ಬಳಸುತ್ತಿದ್ದವರೂ ಈಗ ಬಹುತೇಕವಾಗಿ ಅರೇಬಿಯಾ ಲಿಪಿಯನ್ನು ಬಳಸುತ್ತಿದ್ದಾರೆ. ಸುಮಾತ್ರದ ಪಾರಂಪರಿಕ ಲಿಪಿಗಳನ್ನು ಬತಕರು, ರೆಡ್‌ಜೆಂಗರು ಮತ್ತು ಲಂಪೊಂಗ್ ಜನಾಂಗದವರು ಬಳಸುತ್ತಾರೆ. ಈ ಲಿಪಿಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಜಾವಾದ ಕವಿಲಿಪಿಯಿಂದ ನಿಷ್ಪನ್ನವಾಗಿದೆ.

ಸುಮಾತ್ರದಲ್ಲಿ ಶಕ.೬೦೫ (ಕ್ರಿ.ಶ.೬೮೩) ಮತ್ತು ಶಕ.೬೦೮ (ಕ್ರಿ.ಶ.೬೮೬)ರ ಕಾಲಕ್ಕೆ ಸೇರಿದ ಶಾಸನಗಳು ಕೆರುಕನ್ ಬುಕ್ತಿ ಕೊಕತ್‌ಪುರ ಮತ್ತು ತಲಂಗ್‌ತುವೋ ಮುಂತಾದ ಕಡೆ ದೊರೆತಿದೆ. ಈ ಅಕ್ಷರಗಳಲ್ಲಿ ತಲೆಕಟ್ಟುಗಳ ಬೆಳವಣಿಗೆ ಹೆಚ್ಚಿಗೆ ಇಲ್ಲ, ಕ, ರ, ಲ ಮುಂತಾದವು ಸರಳೀಕರಣಗೊಂಡಿವೆ. ಆದರೂ ಕಾಗುಣಿತ ನೀಡುವಲ್ಲಿ ಜಾವಾ ಮಂತಾದೆಡೆಯಲ್ಲಿ ದೊರೆತಿರುವ ಶಾಸನ ಲಿಪಿಗಳ ಮಾದರಿಯನ್ನೇ ಹೊಂದಿವೆ.

ಬೋರ್ನಿಯೋ ಲಿಪಿ

ಬೋರ್ನಿಯೋದಲ್ಲಿ ಕೋವಟ್ಟೆ (Koetei) ಎಂಬಲ್ಲಿ ಅನೇಕ ಯೂಪ ಶಾಸನಗಳು ದೊರೆತಿದ್ದು, ಇವನ್ನು ಫಿಲಿಪ್ ಜೆ.ವೋಗಲ್ ಅವರು ಪ್ರಕಟಿಸಿದ್ದಾರೆ. ಈ ಶಾಸನಗಳಲ್ಲಿ ಮೂಲವರ್ಮ್ಮ ಎಂಬ ರಾಜನ ಉಲ್ಲೇಖವಿದ್ದು ಲಿನ್-ಇ ಎಂಬಲ್ಲಿ ದೊರೆತ ಭದ್ರವರ್ಮನ ಶಾಸನ ಅಕ್ಷರಗಳನ್ನು ಹೋಲುತ್ತದೆ. ಮೂಲವರ್ಮನ ಶಾಸನವನ್ನು ಕ್ರಿ.ಶ.ಸು.೫ನೆಯ ಶತಮಾನಕ್ಕೆ ಹಾಕಬಹುದಾಗಿದೆ. ಈ ಶಾಸನದ ಇ ಕಾರ, ಉಳಿದ ಅಕ್ಷರಗಳ ತಲೆಕಟ್ಟುಗಳು, ಒತ್ತಕ್ಷರಗಳ ರೀತಿ, ಕಾಗುಣಿತದ ಬೆಳವಣಿಗೆ ಮಂತಾದವುಗಳಿಂದ ಈ ಶಾಸನದ ಅಕ್ಷರಗಳು ಕರ್ನಾಟಕದ ಪಶ್ಚಿಮದಲ್ಲಾಳಿದ ಕದಂಬರ ಕಾಲದ ಅಕ್ಷರಗಳಿಗೆ ಹೋಲಿಕೆ ಪಡೆದಿವೆ.

ಬತಕರ ಲಿಪಿ


ಇವರನ್ನು ನರಮಾಂಸ ಭಕ್ಷಕರೆಂದು ಹಿಂದೆ ಗುರುತಿಸುತ್ತಿದ್ದರು. ತಪೋನೇಯಿಲ್ ಎಂಬಲ್ಲಿ ಹೆಚ್ಚಿಗೆ ವಾಸವಾಗಿದ್ದಾರೆ. ಇವರು ಅನೇಕ ಗುಂಪುಗಳಲ್ಲಿದ್ದು, ಸಂಪ್ರದಾಯ ಮತ್ತು ಭಾಷೆಯಲ್ಲಿ ಭಿನ್ನರಾಗಿದ್ದಾರೆ. ಇವರಲ್ಲಿ ತೋಬಾ ಸರೋವರದ ದಕ್ಷಿಣ ತೀರದಲ್ಲಿ ವಾಸಿಸುವ ತೋಬಾ ಎಂಬ ಗುಂಪು ಪ್ರಮುಖವಾದದ್ದು.

ಇವರು ಬರೆವಣಿಗೆ ಬರೆಯುವ ರೀತಿ ವಿಶಿಷ್ಟವಾದದ್ದು. ಕೆಳಗಿನಿಂದ ಮೇಲಕ್ಕೆ ಒಂದು ಅಕ್ಷರದ ಮೇಲೆ ಒಂದನ್ನು ಬರೆಯುತ್ತಾ ಹೋಗುತ್ತಾರೆ. ಈ ಸಾಲುಗಳು ಎಡದಿಂದ ಬಲಕ್ಕೆ ಬರುತ್ತವೆ. ಇವರ ಪ್ರಾಚೀನ ಕೃತಿಗಳನ್ನು ತೊಗಟೆಯ ಮೇಲೆ ಮಸಿಯಲ್ಲಿ ಬರೆಯಲಾಗಿದೆ. ಇವರು ಕೆಳಗಿನಿಂದ ಮೇಲಕ್ಕೆ ಬರೆಯಲು ಬಿದಿರಿನ ದೆಬ್ಬೆಗಳು ಕಾರಣವೆಂದು ಪ್ರೊ। ಡೆಲಕೌಪೆರೀ ಅವರು ಅಭಿಪ್ರಾಯ ಪಡುತ್ತಾರೆ.

ಅನ್ನಾಂನಲ್ಲಿ ಬಳಕೆಯಲ್ಲಿರುವ ಚಾಮ್ ಲಿಪಿ

ಸ್ವರಗಳು


ವ್ಯಂಜನಗಳು



ಕಾಂಬೋಡಿಯಾದಲ್ಲಿ ಬಳಸುವ ಚಾಮ್‌ಲಿಪಿ

ಸ್ವರಗಳು

ವ್ಯಂಜನಗಳು



ಕೃಪೆ : ಡಿ. ಡಿರಿಂಜರ್

ಲಂಪಾಂಗ್ ಮತ್ತು ರೆಡ್‌ಜಾಂಗ್‌ರ ಲಿಪಿಗಳು

ರೆಡ್‌ಜಾಂಗ್‌ರು ಸುಮಾತ್ರಾ ದ್ವೀಪದ ನೈರುತ್ಯದಲ್ಲಿ ವಾಸಿಸುತ್ತಾರೆ. ದಕ್ಷಿಣ ತುದಿಯಲ್ಲಿ ಲಂಪಾಂಗರು ವಾಸಿಸುತ್ತಾರೆ. ಇವರ ಭಾಷೆಯು ಜಾವ ಮತ್ತು ಬತಕರ ಭಾಷೆಗೆ ಸಮೀಪವಾಗಿದೆ. ಲಂಪಾಂಗರು ಹಿಂದೂ ಜಾವರಿಂದ ಬಹು ಪ್ರಭಾವಿತರಾಗಿದ್ದಾರೆ. ಇವರ ಲಿಪಿಯು ಜಾವಾದ ಕವಿಲಿಪಿಯಿಂದ ನಿಷ್ಪನ್ನವಾಗಿದೆ. ಈ ಲಿಪಿಗಳನ್ನು ಬಿದಿರಿನ ದೆಬ್ಬೆ, ಮರದ ತೊಗಟೆ ಅಥವಾ ಒಂದು ಬಗೆಯ ಎಲೆಗಳ ಮೇಲೆ ಕೊರೆದು ಬರೆಯುತ್ತಿದ್ದರು.

ಇವರ ವರ್ಣಮಾಲೆಯ ವ್ಯಂಜನಗಳು ಸ್ವರಸಮೇತ ಉಚ್ಚಾರವಾಗುತ್ತವೆ. ಸ್ವರಲೋಪವನ್ನು ತೋರಿಸಲು ಅಕ್ಷರಲೋಪ ಚಿಹ್ನೆಯನ್ನು ಅಕ್ಷರದ ಮೇಲೆ ತೋರಿಸುತ್ತಿದ್ದರು. ಅನುನಾಸಿಕ ಅಕ್ಷರಗಳಾದ ನ್, ಮತ್ತು ನ್ಗ್ ಎಂಬ ಅಕ್ಷರಗಳಿಗೆ ಬೇರೆ ಚಿಹ್ನೆಗಳಿವೆ. ಮಹಾಪ್ರಾಣಾಕ್ಷರ 'ಹ' ಕಾರವು ಸ್ವರಕ್ಕೆ ಸಮೀಪವಾದ ಉಚ್ಚಾರವನ್ನು ಹೊಂದಿದೆ.

ಸೆಲೆಬರ ಲಿಪಿ

ಮಲಯಾ ದ್ವೀಪ ಸಮೂಹದ ನಾಲ್ಕನೆ ದೊಡ್ಡ ದ್ವೀಪ. ಈ ದ್ವೀಪದ ಜನರು ಅನೇಕ ಭಾಷೆ ಮತ್ತು ಅವುಗಳ ಉಪಭಾಷೆಗಳನ್ನು ಆಡುತ್ತಾರೆ. ಇವುಗಳಲ್ಲಿ 'ಮೆಂಗ್ಕಸ' ಅಥವಾ 'ಮೆಂಗ್‌ಕಸರ' ಮತ್ತು 'ವಾಗಿ' ಅಥವಾ 'ಬುಗಿ' ಎಂಬ ಜನರು ಹೆಚ್ಚಿನವರು. ವಾಗಿಯರು ಮಾತನಾಡುವ ಭಾಷೆಯನ್ನು 'ಬಾಸತೊವುಗಿಕ್' ಎಂದು ಕರೆದುಕೊಳ್ಳುತ್ತಾರೆ. ಇವರು ಈ ದ್ವೀಪದ ಪ್ರಮುಖ ನಾವಿಕ ಜನಾಂಗ ಮತ್ತು ವ್ಯಾಪಾರಿ ಜನ. ಇದಲ್ಲದೆ ಮಂಧಾರ್ ಭಾಷೆ ಮಾತನಾಡುವ ಮಂಧಾರ್ ಪ್ರದೇಶದ ಜನ, ತುರಜರು ಮಾತನಾಡುವ ತುರಜ ಭಾಷೆ. ಮನದು, ಗುನುಂಗ್‌ನೆಲ, ತೊಂತೆಬೊಅನ್ ಮತ್ತು ಬುಲು ಜನರು ತಮ್ಮ ತಮ್ಮ ಭಾಷೆಯನ್ನು ಮಾತನಾಡುತ್ತಾರೆ.

ಸೆಲಬ ಲಿಪಿಯು ಜಾವಾದ ಕವಿಲಿಪಿಯಿಂದ ಉದಿಸಿವೆ. ಕವಿಲಿಪಿಯಿಂದ ಬತಕರು, ಬತಕರಿಂದ ಸೆಲಬರು ಲಿಪಿಯನ್ನು ಪಡೆದಿರಬಹುದು. ಈ ದ್ವೀಪದಲ್ಲಿ ಪ್ರಾಚೀನವಾದ ಲಿಪಿ ಬಳಕೆಯ ಆಧಾರಗಳು ಕಾಣಬರುವುದಿಲ್ಲ. ಹೀಗಾಗಿ ಎಂದಿನಿಂದ ಇವರು ಲಿಪಿಯನ್ನು ಬಳಸಿದರೆಂಬ ಬಗ್ಗೆ ಆಧಾರಗಳು ದೊರೆಯುವುದಿಲ್ಲ.

ವಾಗಿಯರ ಲಿಪಿ

ಈ ವರ್ಣಮಾಲೆಯಲ್ಲಿ ೨೩ ಅಕ್ಷರಗಳಿದ್ದು ಇವುಗಳಲ್ಲಿ ೧೮ ಬಿಡಿಗಳಾಗಿದ್ದು ಉಳಿದವು ಸಂಯುಕ್ತವಾಗಿವೆ. ಈ ಸಂಯುಕ್ತಾಕ್ಷರಗಳೆಂದರೆ ಚ್ಚ, ಮ್ಬ, ನ್ಕ, ನ್ರ, ನ್ಚ ಅ ಕಾರಕ್ಕೆ ಪೂರ್ಣ ರೂಪವಿದೆ. ಎ–ಇ ಕಾರಗಳಿಗೆ ಮತ್ತು ಒ–ಉ ಕಾರಗಳಿಗೆ ಪೂರ್ಣರೂಪವಿಲ್ಲ. ಕೆಲವು ಗೆರೆಗಳನ್ನು ಸೇರಿಸುವ ಮೂಲಕ ಉಚ್ಚರಿಸುತ್ತಾರೆ. ಎಲ್ಲಾ ವ್ಯಂಜನಗಳಿಗೂ ಸ್ವರ ಸೇರುತ್ತದೆ. ಪೂರ್ಣವಾಗಿ ವ್ಯಂಜನವನ್ನು ಉಚ್ಚರಿಸಲು ತೋರಿಸಲು ಯಾವ ಚಿಹ್ನೆಯೂ ಇಲ್ಲಿ ಇಲ್ಲ.

ಇಂದಿನ ಇಂಡೋನೇಷಿಯಾದಲ್ಲಿ ಇಸ್ಲಾಂ ಧರ್ಮದ ಪ್ರಭಾವದಿಂದ ಬಹುತೇಕವಾಗಿ ತಮ್ಮ ಹಿಂದಿನ ಲಿಪಿಗಳನ್ನು ಬಿಟ್ಟಿದ್ದಾರೆ. ಅವುಗಳ ಬದಲಿಗೆ ಅರಬ್ಬೀ ಲಿಪಿಯನ್ನು ಬಳಸುತ್ತಿದ್ದಾರೆ.

ಇದರೊಂದಿಗೆ ಡಚ್ಚರ ಆಳ್ವಿಕೆಯಿಂದ ಇವರು ಲತಿನ ಲಿಪಿಯನ್ನು ಶಾಲೆಗಳಲ್ಲಿ ಬೋಧಿಸುವುದರಿಂದ ಅದೂ ಕೂಡ ಸಾರ್ವಜನಿಕವಾಗಿ ಬಳಕೆಯಲ್ಲಿದೆ.

ಫಿಲಿಪ್ಪೇನ್ ದ್ವೀಪಗಳ ಲಿಪಿ

ಸುಮಾರು ೭೦೦೦ ನಡುಗಡ್ಡೆಗಳನ್ನು ಹೊಂದಿರುವ ದ್ವೀಪ. ಬಹಳಷ್ಟು ಜನರು ಮಲಯೋ-ಪಾಲಿನೇಷಿಯನ್ ಭಾಷಾ ಗುಂಪಿಗೆ ಸೇರಿದ ಭಾಷೆಯನ್ನು ಮಾತನಾಡುತ್ತಾರೆ. ಇಲ್ಲಿ ವಾಸಿಸುವ ಮುಖ್ಯ ಪಂಗಡಗಳಲ್ಲಿ ಬಿಸಯ/ವಿಸಯರು, ತಗಲಾಗರು/ತಗಲರು, ಹೋಕೋ/ಹೋಕನೂರ, ಪಂಪಂಗನ್ ಮುಂತಾದವರಿದ್ದಾರೆ. ಇವರಲ್ಲಿ ಬಿಸಯರನ್ನು ಸ್ಪೇನ್ ದೇಶದವರು ಪಿಂಟಡಾಸ್ (ಮೈಮೇಲೆ ಹಚ್ಚೆ ಹುಯಿಸಿ ಕೊಳ್ಳುವವರು) ಎಂದು ಕರೆದರು. ತಗಲರು ಮುಂದುವರಿದ ಸಾಹಸಿ ಜನರು. ಇವರ ಭಾಷೆ ಮತ್ತು ಲಿಪಿಗಳೆರಡೂ ಬೆಳವಣಿಗೆ ಹೊಂದಿವೆ.


ಪ್ರಾಚೀನ ಲಿಪಿಗಳು ಪಲ್ವನ್ ಮತ್ತು ಮಿಂಡೋರೋ ದ್ವೀಪಗಳಲ್ಲಿ ಉಳಿದಿವೆ. ಇವುಗಳಲ್ಲಿ ಬುಸಿಯನ್ ಕ್ರಿಶ್ಚಿಯನ್ನರು, ಮುಸಲ್ಮಾನರು, ನಿಗ್ರಿಟೋಗಳು ಮತ್ತು ತಗ್ಯನುವರು ವಾಸಿಸುತ್ತಾರೆ. ಇವರಲ್ಲಿ ಎರಡು ಪಂಗಡ ಬುಹಿಲ್ ಅಥವಾ ಬುಕಿಲ್ (ದೇಶಸ್ಥರು). ಇವರು ನೀಗ್ರೋಗಳ ಜೊತೆ ಮಿಶ್ರವಾಗಿದ್ದಾರೆ. ಇನ್ನೊಂದು ಪಂಗಡ ಹೊನೋನೋ. ಇವರು ಜಾವಾ ಉತ್ತರ ಮಂಗ್ಯನ್ ಭಾಷೆ ಮಾತನಾಡುವವರು.

ಕ್ರಿ.ಶ.೧೫೨೧ರಲ್ಲಿ ಮೆಗಲಾನ್ ಫಿಲಿಪೀನ್ ದೇಶವನ್ನೂ ಕಂಡುಹಿಡಿದ. ಅಲ್ಲಿಯವರೆಗೆ ದ್ವೀಪದ ಜನರಿಗೆ ಅವರದೇ ಆದ ಲಿಪಿ ಬಳಕೆಯಲ್ಲಿತ್ತು. ಮುಂದೆ ಒಂದು ಶತಮಾನದೊಳಗಾಗಿ ಲತಿನ ಲಿಪಿಯು ಸ್ಥಳೀಯ ಲಿಪಿಯನ್ನು ತುಳಿಯಿತು. ಈಗ ಯಾರಿಗೂ ಹಿಂದಿನ ಲಿಪಿಗಳನ್ನು ಓದುವುದು ತಿಳಿದಿಲ್ಲ, ಯೂರೋಪಿಯನ್ನರು ಮಧ್ಯ ಅಮೇರಿಕಾದ ಸಂಸ್ಕೃತಿಯನ್ನು ನಾಶ ಮಾಡಿದಂತೆ ಸ್ಪೇನಿಯರು ಇಲ್ಲಿಯೂ ನಾಶ ಮಾಡುತ್ತಾರೆ.

ಫಿಲಿಪ್ಪೇನಿನಲ್ಲಿದ್ದಿದ್ದುದ್ದು ಚಿತ್ರಲಿಪಿಯಲ್ಲ, ವರ್ಣಲಿಪಿ. ಯಾವುದೇ ಶಾಸನವಾಗಲೀ, ಬರೆವಣಿಗೆಯಾಗಲೀ ಇಂದು ಉಳಿದಿಲ್ಲ, ಸ್ಪೇನಿನ ಕ್ಯಾಥೋಲಿಕ್ ಪಾದ್ರಿಗಳು ಬರೆದಿಟ್ಟಿರುವ ಲಿಪಿಗಳೇ ಈ ದ್ವೀಪದಲ್ಲಿನ ಲಿಪಿಗಳ ಅಸ್ತಿತ್ವದ ಬಗ್ಗೆ ಇರುವ ಸಾಕ್ಷ್ಯಗಳು. ಇದಲ್ಲದೆ ೧೬೩೧ರಲ್ಲಿ ಅಚ್ಚು ಹಾಕಿದ ಪುಸ್ತಕ 'ಬೆಲರ್ಮಿನೋ' ಎಂಬ ಪುಸ್ತಕವು ಈ ಲಿಪಿಯ ಅಭ್ಯಾಸಕ್ಕೆ ಆಧಾರ. ಈ ಪಾದ್ರಿಗಳ ಹೇಳಿಕೆಯಂತೆ ತಗಲಾಂಗ್ ಭಾಷೆಗೆ ನಾಲ್ಕು ಬಗೆಯ ಲಿಪಿಗಳು. ಬಿಸಯಕ್ಕೆ ೨ ಬಗೆಯ ಲಿಪಿಗಳು, ಹೋಕಾನೋಗೆ ೨ ಲಿಪಿಗಳು, ಪಂಗಸಿನನ್‌ಗೆ ಒಂದು ಮತ್ತು ಪಂಪಂಗನ್‌ಗೆ ಒಂದು ಲಿಪಿ ಬಳಕೆಯಲ್ಲಿತ್ತು.

ಫಿಲಿಪ್ಪೀನ್ ವರ್ಣಮಾಲೆಯಲ್ಲಿ ಮೂರು ಸ್ವರಗಳು. ಅ, ಎ ಮತ್ತು ಇ; ವ್ಯಂಜನಗಳು ೧೧ ರಿಂದ ೧೪. ಇವರು ಬರೆಯುತ್ತಿದ್ದ ದಿಕ್ಕಿನ ಬರೆವಣಿಗೆಯ ಬಗ್ಗೆಯೂ ಚರ್ಚೆಯಿದೆ. ಕೆಳಗಿನಿಂದ ಮೇಲಕ್ಕೆ ಎಂದು ಕೆಲವರು ವಾದಿಸಿದರೆ ಕೆಲವರು ಅಡ್ಡಡ್ಡವಾಗಿ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಬರೆವಣಿಗೆಗೆ ಬಳಸುತ್ತಿದ್ದ ಮಾಧ್ಯಮವೆಂದರೆ ಬಿದಿರು, ತಾಳೆಗರಿ ಮತ್ತು ಇತ್ತೀಚೆಗೆ ಕಾಗದ. ಈಗಿನ ಬರೆವಣಿಗೆ ಅಡ್ಡಡ್ಡವಾಗಿದೆ.

ಭಾರತೀಯ ಲಿಪಿಯಿಂದ ಜನ್ಯವಾದ ಇತರೆ ಲಿಪಿಗಳು



೧-೬ ಪ್ರಾಚೀನಜಾವ (ಕವಿ)ಲಿಪಿ ೭-೮ ಪ್ರಾಚೀನ ಸುಮಾತ್ರ ೯ ಬತಕ್‌ಲಿಪಿ ೧೦ ಬುಗಿನೀಸ್ ೧೧-೧೪ ತಗಲಾಗ್
೧೫-೧೬ ಇಲೊಕೊ ೧೭-೧೮ ಬಿಸಯ ೧೯ ಪಂಗಸಿನಸ್ ೨೦ ಪಂಪಂಗನ್ ೨೧ ತಗಬನುವ
೨೨-೨೬ ಮಂಗ್ಯನ್ ರೀತಿ ೨೭-೩೦ ಬುಹಿಲ್

ಕೃಪೆ : ಡಿ. ಡಿರಿಂಜನ್

ತಗಲಾಗ್ ಲಿಪಿ

ಇದು ಫಿಲಿಪ್ಪಿನಿನ ಪ್ರಾಚೀನ ಲಿಪಿ ಮತ್ತು ಮುಖ್ಯವಾದ ಲಿಪಿಯೂ ಆಗಿದೆ. ಇದರಲ್ಲಿ ೧೪ ವ್ಯಂಜನಗಳು ೩ ಸ್ವರಗಳು. ವ್ಯಂಜನಗಳನ್ನು ಸ್ವರಸಮೇತ ಉಚ್ಚಾರಿಸುತ್ತಾರೆ. ತಗಲಾಗ್ ಲಿಪಿಯನ್ನು ಬರೆಯುವುದು ಸುಲಭ. ಆದರೆ ಓದುವುದು ಕಷ್ಟ. ಉದಾ: ಲ ಎಂಬ ಅಕ್ಷರದ ಮೇಲೆ ಚುಕ್ಕೆ ಇಟ್ಟಲ್ಲಿ ಅದನ್ನು ಲೆಲೆ, ಲಿಲಿ, ಲಿಲಿಮ್, ಲಿಲಿಪ್, ಲಿಲಿಸ್, ಲಿಲಿನ್, ಲಿಲಿಕ್, ಲಿಲಿಗ್ ಮುಂತಾಗಿ ಓದಬಹುದಾಗಿದೆ.

ತಗ್‌ಬನೌ ಮತ್ತು ಮನ್ಯ್ಗಾನ್ ಲಿಪಿ

ಈ ಲಿಪಿಗಳು ಜಾವಾ ಲಿಪಿಯಿಂದ ಪ್ರಭಾವಿತಗೊಂಡಿವೆ. ಬಿದಿರಿನ ಮೇಲೆ ಬರೆದಿದ್ದ ಬರೆವಣಿಗೆಯ ಕೆಲವು ತುಣುಕುಗಳು ೧೮೯೮ರಲ್ಲಿ ದೊರೆತಿವೆ. ಇವು ಮನ್ಯ್ಗಾನ್ ಮತ್ತು ತಗ್‌ಬನೌ ಭಾಷೆಯಲ್ಲಿದ್ದವು.

ಅಧ್ಯಾಯ - ೮

ಲಿಪಿ, ವಿದ್ಯೆ ಹಾಗೂ ಸುಧಾರಣೆ

ಲಿಪಿ ಮತ್ತು ವಿದ್ಯೆ ಎರಡೂ ಒಂದಕ್ಕೊಂದು ಪೂರಕವಾದರೂ, ಒಂದು ಇನ್ನೊಂದಕ್ಕಿಂತ ಭಿನ್ನ. ಲಿಪಿಗೂ ವಿದ್ಯೆಗೂ ಯಾವ ಸಂಬಂಧವೂ ಇಲ್ಲ. ವಿದ್ಯೆ ಕೆಲಸ ಮಾಡುತ್ತಾ ಕಲಿಯುವಂತಹದು. ತಂದೆಯಿಂದ ಮಗನಿಗೆ, ಉಪಾಧ್ಯಾಯನಿಂದ ಶಿಷ್ಯನಿಗೆ ಬರುವಂತಹದ್ದು. ಹೀಗೆ ಪ್ರಕೃತಿಯಿಂದ, ತಂದೆಯಿಂದ, ತಾಯಿಯಿಂದ, ಉಪಾಧ್ಯಾಯನಿಂದ ಕಲಿಯುವಂತಹದು. ಇದು ವ್ಯಕ್ತಿಯ ಬದುಕಿಗೆ ಅಥವಾ ಜೀವನೋಪಾಯಕ್ಕೆ ಬೇಕಾಗುವಂತಹದು. ಭಾರತದಲ್ಲಿ ಬ್ರಿಟಿಷರು ರೋಮನ್ (ಇಂಗ್ಲಿಷ್)ಲಿಪಿಗೆ ಮಹತ್ವ ಕೊಡುವವರೆಗೆ ನಮ್ಮವರು ಅಕ್ಷರ (ಲಿಪಿ) ಕಲಿಕೆಗಿಂತ ವಿದ್ಯೆಗೆ ಹೆಚ್ಚಿನ ಮಹತ್ವ ನೀಡಿದ್ದರು. ಹೀಗಾಗಿ ವಿದ್ಯೆ ಮೇಲಾದದ್ದು, ಹಾಗೂ ಬದುಕಲು ಅದು ಅವಶ್ಯಕ. ಲಿಪಿ ಅಥವಾ ಅಕ್ಷರಜ್ಞಾನ ನಂತರದ್ದು. ಅಶೋಕನ ಕಾಲದಲ್ಲಿ ಲಿಪಿ ಜ್ಞಾನ ತೀರಾ ಕಡಿಮೆಯಿದ್ದು ಆತ ಕಂಡುಕೊಂಡ ಉಪಾಯವೆಂದರೆ ತಾನು ಬರೆಸಿದ ಶಾಸನಗಳ ಅರ್ಥವನ್ನು ನಿರ್ದಿಷ್ಟ ದಿನದಂದು ಮಹಾಮಾತ್ರರು ಅಲ್ಲಿ ಸೇರಿದ ಜನಗಳಿಗೆ ಓದಿ ವಿವರಿಸಬೇಕಿತ್ತು. ಲಿಪಿಯ ಬಳಕೆ ಹೆಚ್ಚಿರುವ ಇಂದಿನ ಕಾಲದಲ್ಲಿಯೂ ಅನೇಕ ಯತಿಗಳ, ಸಾಧುಗಳ ಮಾತುಗಳನ್ನು ಕೇಳಲು ಜನ ತಂಡೋಪತಂಡಗಳಾಗಿ ನೆರೆಯುವುದನ್ನು ನಾವು ಕಾಣುತ್ತೇವೆ. ಆ ಸಂತನ ಮಾತುಗಳನ್ನು ಪುಸ್ತಕರೂಪದಲ್ಲಿ ಮುದ್ರಿಸಿದ್ದರೂ ಅದನ್ನೇ ಓದಬಹುದಲ್ಲ. ಭಾಷಣ ಏಕೆ ಕೇಳಬೇಕು. ಇದೆಲ್ಲಾ ನಮ್ಮ ಪರಂಪರೆಯಿಂದ ನಮಗೆ ಬಂದ ಬಳುವಳಿ. ನಮ್ಮ ಪರಂಪರೆಯಲ್ಲಿ ಓದುವುದಕ್ಕಿಂತ ಹೆಚ್ಚಿಗೆ ಗಮನಿಸುವುದು ಜಾಸ್ತಿ. ಓದಿಗೆ ನಾವು ಹೆಚ್ಚಿಗೆ ಪ್ರಾಶಸ್ತ್ಯ ನೀಡಿರಲಿಲ್ಲ.

ಕನ್ನಡದ ಮಟ್ಟಿಗೆ ಹೇಳುವುದಾದಲ್ಲಿ ನಮ್ಮಲ್ಲೂ ಮುಂದುವರಿದ ರಾಷ್ಟ್ರಗಳಾದ, ಆದರೂ ತಮ್ಮ ಪಾರಂಪರಿಕತೆಯನ್ನು ಉಳಿಸಿಕೊಂಡು ಬಂದಿರುವ ಚೀನಾ, ಜಪಾನ್ ದೇಶಗಳಂತೆ ಲಿಪಿ ಕಲಿಕೆಯನ್ನು ವಿದ್ಯಾರ್ಥಿಗಳಿಗೆ ಬೇರೆ ಹಂತಗಳಲ್ಲಿ ಕಲಿಸಬಹುದಾಗಿದೆ.

ಇತ್ತೀಚೆಗೆ ಕನ್ನಡದಲ್ಲಿ ಱ ಕಾರವನ್ನು ಉಳಿಸಿಕೊಳ್ಳಬೇಕೆ ಬಿಡಬೇಕೆ ಎಂಬ ಜಿಜ್ಞಾಸೆ ನಡೆದಿದೆ. ವಿದೇಶಿಪಾದ್ರಿಗಳು ಮುದ್ರಣವನ್ನು ಜನಪ್ರಿಯಗೊಳಿಸುವ ಕಾಲಕ್ಕೆ ಮತ್ತೆ ಹಿಂದಿನ ವರ್ಣಮಾಲೆ ಬಳಕೆಗೆ ಬಂತು ಮುದ್ರಣ ಪ್ರಚಾರಕ್ಕೆ ಬರುವ ಮೊದಲು ಕನ್ನಡದಲ್ಲಿ ಱ ಕಾರದ ಸ್ಥಾನದಲ್ಲಿ ರ ಕಾರವನ್ನೇ ಬಳಸುತ್ತಿದ್ದರು. ಈ ಅಕ್ಷರ ಈಗ ಕನ್ನಡದಲ್ಲಿ ಬಳಕೆಯಾಗುತ್ತಿಲ್ಲ ಹೀಗಾಗಿ ಇದನ್ನು ಕೈ ಬಿಡುವುದರಲ್ಲಿ ಯಾವ ತೊಂದರೆಯೂ ಆಗುವುದಿಲ್ಲ. ದಿನ ನಿತ್ಯದ ಕನ್ನಡ ಬಳಕೆಗೆ ೩೨ ಅಕ್ಷರಗಳ ಕಲಿಕೆ ಸಾಕಾಗುತ್ತದೆ. ಮೂರು ಹಂತಗಳಲ್ಲಿ ಕಲಿಸಬಹುದಾಗಿದೆ.

ಒಂದನೆಯ ಹಂತ : ಪ್ರಾಥಮಿಕ ಹಂತ

೧೧ ಸ್ವರಗಳು – ಅ, ಆ, ಇ, ಈ, ಉ, ಊ, ಎ, ಏ, ಒ, ಓ, ಅಂ
೧೦ ವ್ಯಂಜನಗಳು – ಕ, ಗ, ಚ, ಜ, ಟ, ಡ, ತ, ದ, ಪ, ಬ
೮ ಅವರ್ಗೀಯಗಳು – ಯ, ರ, ಲ, ವ, ಶ, ಸ, ಹ, ಳ
೩ ಅನುನಾಸಿಕಗಳು – ಣ, ನ, ಮ
ಒಟ್ಟು ೩೨ ಅಕ್ಷರಗಳು

ಎರಡನೆಯ ಹಂತ : ಕಾರಕೂನ ಹಂತ

ಉಳಿಕೆ ಸ್ವರ – ಐ, ಔ
ವ್ಯಂಜನಗಳು – ಖ, ಘ, ಠ, ಧ, ಫ, ಭ
ಅವರ್ಗೀಯ – ಷ
ಹಿಂದಿನವು ೩೨ ಅಕ್ಷರಗಳು + ಈಗಿನವು+ ೨+೬+೧=೯
ಒಟ್ಟು ೪೧ ಅಕ್ಷರಗಳು

ಋ ಕಾರದ ಕಲಿಕೆಯನ್ನು ಪೂರ್ಣ ಕೈ ಬಿಡಬಹುದು.

ಮೂರನೆಯ ಹಂತ : ಪಂಡಿತ ಹಂತ

ಉಳಿದ ಸ್ವರಗಳು, ವಿಸರ್ಗ, ಯೋಗವಾಹಕಗಳು
ವ್ಯಂಜನಗಳು – ಛ, ಝ, ಥ
ಅನುನಾಸಿಕಗಳು – ಙ, ಞ
ಅವರ್ಗೀಯ – ಱ, ೞ

ಇನ್ನೂ ಮುಂದುವರಿದು – ಮಹಾಪ್ರಾಣಾಕ್ಷರಗಳ ಬಳಕೆಯನ್ನೇ ತಪ್ಪಿಸಬಹುದು. ಉಚ್ಚಾರದಲ್ಲಿ ಈಗಾಗಲೇ ಇವು ನಶಿಸಿವೆ. ಉದಾರಹಣೆ – ಘಂಟೆ–ಗಂಟೆ, ಛತ್ರಿ–ಚತ್ರಿ, ಘರ್ಜನೆ–ಗರ್ಜನೆ, ಛತ್ರ–ಚತ್ರ, ಖಡ್ಗ–ಕಡ್ಗ, ಠೇಂಕಾರ–ಟೇಂಕಾರ, ಸೇಠ್–ಸೇಟ್, ಥಮ್ಸ್‌ಅಪ್–ತಂಮ್‌ಸ್‌ಅಪ್, ಝೇಂಕಾರ–ಜೇಂಕಾರ. ಈ ಮೇಲಿನ ಶಬ್ದಗಳಲ್ಲಿ ಕನ್ನಡದಲ್ಲಿ ಆರಂಭವಾಗುವ ಮೂಲರೂಪಗಳಿಲ್ಲದಿರುವುದರಿಂದ ಅರ್ಥ ವಿವರಣೆಯಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ. ಈಗಾಗಲೇ ಈ ಶಬ್ದಗಳಲ್ಲಿನ ವ್ಯತ್ಯಾಸವನ್ನು ಸಾಹಿತ್ಯದಲ್ಲಿ ತಿಳಿದೋ ತಿಳಿಯದೆಯೋ ಬಳಸುತ್ತಿರುವುದುಂಟು. ಋ ಕಾರವನ್ನು ಸಾಮಾನ್ಯ ಬಳಕೆಯಲ್ಲಿ ಬಳಸಿದ್ದೇ ಇಲ್ಲ, ಆದ್ದರಿಂದ ಕನ್ನಡ ಅಕ್ಷರ ಕಲಿಕೆಯಲ್ಲಿ ಕೆಲವು ಮಹಾಪ್ರಾಣ ಅಕ್ಷರಗಳನ್ನು ಕಲಿಯದೇ ಹೋದರೆ ಏನೂ ನಷ್ಟವಿಲ್ಲ. ಕೇಶಿರಾಜನೂ ಸಹ ಅಕ್ಷರ ಪ್ರಕರಣದಲ್ಲಿ ಮಹಾಪ್ರಾಣಾಕ್ಷರ ಬಗ್ಗೆ ಹೇಳುವಾಗ ಅವುಗಳನ್ನು ಸಂಸ್ಕೃತಿಯಲ್ಲಿ ಮತ್ತು ಅನುಕರಣಗಳಲ್ಲಿ ಮಾತ್ರ ಬಳಸುತ್ತಾರೆಂದಿದ್ದಾನೆ. ಹೀಗಾಗಿ ಖ, ಘ, ಙ, ಛ, ಝ, ಞ, ಠ, ಧ, ಥ ವರ್ಗಾಕ್ಷರಗಳನ್ನು, ಸ್ವರಗಳಲ್ಲಿ ಋ ಕಾರವನ್ನು

ವಿಸರ್ಗವನ್ನು ಅವರ್ಗೀಯದಲ್ಲಿ ಷ ಕಾರ ಮತ್ತು ಙ, ಞ ವನ್ನು ಕಲಿಸದೆ ಬಿಡಬಹುದು. ಸಾಮಾನ್ಯ ಒಂದು ಹಂತ ತಲುಪಿದ ಮೇಲೆ ಅಕ್ಷರವಂತ ಯುವಕ ಹೆಚ್ಚಿನ ಅಭ್ಯಾಸ ಮಾಡುವಾಗ ಉಳಿಕೆ ಅಕ್ಷರಗಳನ್ನು ಈಗಾಗಲೇ ಕಲಿತಿರುವ ಅಕ್ಷರಗಳ ಸಾಮ್ಯದಿಂದ ಬೇಗ ಕಲಿಯುತ್ತಾನೆ. ಆದ್ದರಿಂದ ಕನ್ನಡದಲ್ಲಿ ಮೊದಲ ಹಂತದಲ್ಲಿ ಕಲಿಯಬೇಕಾಗಿರುವ ಒಟ್ಟು ಅಕ್ಷರಗಳು.

೧೧ – ಸ್ವರಗಳು – ಅ ಆ ಇ ಈ ಉ ಊ ಎ ಏ ಒ ಓ ಅಂ
೧೩ – ವರ್ಗೀಯ ವ್ಯಂಜನಗಳು – ಕ ಗ ಚ ಜ ಟ ಡ ಣ ತ ದ ನ
ಪ ಬ ಮ
೮ – ಅವರ್ಗೀಯ ವ್ಯಂಜನಗಳು – ಯ ರ ಲ ವ ಶ ಸ ಹ ಳ
೩೨ – ಮೂವತ್ತೆರಡು ಅಕ್ಷರಗಳ ಜ್ಞಾನ ಸಾಕಾಗಿದೆ.

ಮೊದಲನೆಯ ಹಂತದಲ್ಲಿ ೩೨ ಅಕ್ಷರಗಳ ಪರಿಚಯ ಸಾಕಾಗುತ್ತದೆ. ಬಹಳಷ್ಟು ವಿದ್ಯಾರ್ಥಿಗಳು ಏಳನೆಯ ತರಗತಿಯ ನಂತರ ಶಾಲೆ ಬಿಡುತ್ತಾರೆ. ಇವರಿಗೆ ಇಷ್ಟೇ ಸಾಕು. ದೈನಂದಿನ ವ್ಯವಹಾರ ಮತ್ತು ಪತ್ರಿಕೆಯನ್ನು ಓದಿ ವಿವರ ತಿಳಿದುಕೊಳ್ಳಲು ಈ ಮೂವತ್ತೆರಡು ಅಕ್ಷರಗಳ ಪರಿಚಯವೇ ಸಾಕಾಗುತ್ತದೆ. ಅಮರಗನ್ನಡ ಲಿಪಿಯಲ್ಲಿ ಸ್ವರಗಳಲ್ಲಿ ಅ ಕಾರವನ್ನು ಬಿಟ್ಟರೆ ಉಳಿದ ಸ್ವರಗಳ ಬಳಕೆಗೆ ಅರೆ ವ್ಯಂಜನಗಳಾದ ಯ ಮತ್ತು ವ ಕಾರವನ್ನು ಉಪಯೋಗಿಸಿರುತ್ತಾರೆ. ಹೀಗಾಗಿ ಎಲ್ಲಾ ಸ್ವರಗಳ ಕಲಿಕೆ ಅನಿವಾರ್ಯವೆ ಎಂಬ ಪ್ರಶ್ನೆ ಎದುರಾಗುತ್ತದೆ ಈ ಬಗ್ಗೆ ಚಿಂತನೆ ಅಗತ್ಯ.

ಎರಡನೆಯ ಹಂತದಲ್ಲಿ ೧೦ನೆಯ ತರಗತಿವರೆಗಿನ ಹಂತ. ಈ ಹಂತವು ಮುಂದೆ ಕಚೇರಿಗಳಲ್ಲಿ ನೌಕರಿ ಮಾಡುವ ವ್ಯಕ್ತಿಗಳಾದ್ದರಿಂದ ಹಾಗೂ ಇತರ ಭಾಷೆಯವರೊಡನೆ ಸಂಪರ್ಕವಿರಿಸಿಕೊಳ್ಳಬೇಕಾದ್ದರಿಂದ ಇವರಿಗೆ ಉಳಿದ ೧೦ ಅಕ್ಷರಗಳ ಪರಿಚಯ ಮಾಡಿಕೊಡಬಹುದು. ಈ ವಯಸ್ಸಿನಲ್ಲಿ ಈ ಹತ್ತು ಅಕ್ಷರಗಳನ್ನು ಇವರು ಕಲಿಯಲು ಸಮರ್ಥರಾಗಿರುತ್ತಾರೆ.

ಮೂರನೆಯ ಹಂತವನ್ನು ಪಾಂಡಿತ್ಯದ ಹಂತವೆಂದು ಕರೆದಿದ್ದೇನೆ. ಇವರಿಗೆ ಲಿಪಿಯ ಎಲ್ಲಾ ಅಕ್ಷರಗಳ ಜ್ಞಾನ ಅವಶ್ಯಕ ಧಾರ್ಮಿಕ ಗ್ರಂಥಗಳು, ಇತರೆ ಪುಸ್ತಕಗಳು ಭಾಷಾಜ್ಞಾನದ ಅವಶ್ಯಕತೆ ಸ್ವಲ್ಪ ಮಟ್ಟಿಗೆ ಆಗಬೇಕಾಗಿರುವುದರಿಂದ ಉಳಿದ ೯ ಅಕ್ಷರಗಳನ್ನು ಕಲಿಸಬಹುದಾಗಿದೆ. ಈ ವಿಂಗಡಣೆಯಲ್ಲಿ S.S.L.C. ಓದುವವನೇ ಎಲ್ಲಾ ಅಕ್ಷರಗಳನ್ನು ಕಲಿಯಬಹುದು. ಆದರೆ ನಿರ್ಬಂಧವಿರಬಾರದು. ಹೆಚ್ಚಿನ ವ್ಯಾಸಂಗ ಮಾಡುವವನು ಹೆಚ್ಚಿನ ಅಕ್ಷರಗಳನ್ನು ಕಲಿಯಬಹುದಾಗಿದೆ. ಈ ಕ್ರಮದಿಂದ ಕನ್ನಡೇತರರು ಬೇಗ ಕನ್ನಡ ಕಲಿಯಲು, ಬಾಲಕರು ಬೇಗ ಕನ್ನಡ ಅಕ್ಷರ ಕಲಿಯಲು ಸಹಾಯವಾಗುತ್ತದೆ.

ಪರಂಪರೆಯಲ್ಲಿ ಕಲಿಯುತ್ತಾ ಬಂದಿರುವ ಲಿಪಿಗಳ ಬಗ್ಗೆಗೌರವವನ್ನಿಟ್ಟು ಅವನ್ನು ಕಾವ್ಯದ ಲಿಪಿಯೆಂಬ ಗೌರವ ನೀಡಿ ದಿನನಿತ್ಯದ ಬಳಕೆಗೆ ಹಾಗೂ ಕನ್ನಡವನ್ನು ಸಾರ್ವತ್ರಿಕವಾಗಿಸಲು ಸಹಾಯಕವಾಗಲು ಎಲ್ಲರು ಕನ್ನಡ ಲಿಪಿ – ಭಾಷೆಯನ್ನು ಬಳಕೆಗೆ ತರಲು ಈ

ಅನಿವಾರ್ಯತೆಗೆ ಒಗ್ಗಬೇಕಾಗುವುದೂ ಸೂಕ್ತವೆನಿಸುತ್ತದೆ. ಇದರಿಂದ ಲಿಪಿ ಮತ್ತು ಅದರ ಬಳಕೆ ಸರಳವಾಗುತ್ತದೆ.

ಒಟ್ಟಿನಲ್ಲಿ ಕನ್ನಡದಲ್ಲಿ ವ್ಯವಹರಿಸಲು, ಈಗಿನ ವ್ಯವಹಾರಿಕ ಕನ್ನಡಕ್ಕೆ ಕೇವಲ ೩೨ ಅಕ್ಷರಗಳು ಮಾತ್ರ ಸಾಕಾಗುತ್ತದೆ.

ಒಟ್ಟಾರೆ ಹೇಳುವುದಾದಲ್ಲಿ ವಿದ್ಯೆ ಕಲಿಕೆಗೆ ಲಿಪಿ ಪೂರಕವಾಗಬೇಕೇ ಹೊರತು ಲಿಪಿಗೆ ವಿದ್ಯೆ ಪೂರಕವಾಗಬಾರದು.

ಭಾಷೆ - ಲಿಪಿ ಮತ್ತು ಧರ್ಮ

ಜಗತ್ತಿನಲ್ಲಿ ಅನೇಕ ಧರ್ಮಗಳಿದ್ದು, ಆ ಧರ್ಮಗಳು ಹುಟ್ಟಿದಾಗ ಯಾವ ಭಾಷೆ ಮತ್ತು ಲಿಪಿಯನ್ನು ಸ್ವೀಕರಿಸಿದವೋ ಅದೇ ಲಿಪಿಯು ಆ ಧರ್ಮ ಇತರ ಕಡೆ ಹಬ್ಬಿದಾಗಲೂ ಅದರ ಬೆಂಬತ್ತಿರುತ್ತದೆ. ಹೀಗಾಗಿ ಒಂದೊಂದು ಧರ್ಮಕ್ಕೆ ಒಂದೊಂದು ಲಿಪಿಯೆಂಬಂತೆ ಹಣೆಪಟ್ಟಿಯನ್ನು ಹಚ್ಚಿಕೊಂಡಿವೆ. ಈ ಧರ್ಮದ ಕಾರ್ಯಗಳಲ್ಲಿ ಮಾತ್ರ ಈ ಲಿಪಿ ಮತ್ತು ಭಾಷೆ ಸಂಯೋಜನೆಗೊಂಡಿದ್ದರೆ ಇಷ್ಟು ತೊಡಕಿರುತ್ತಿರಲಿಲ್ಲ, ಈ ಧರ್ಮವು ರಾಜಕೀಯ ಶಕ್ತಿಯಾಗಿ ಅಥವಾ ಅರಸುತನಗೈಯ್ಯುವಾಗ ಆ ರಾಜಕೀಯದಲ್ಲೂ ತೂರಿ ರಕ್ತಪಾತವನ್ನು ಹರಿಸಿದೆ.

ಜಗತ್ತಿನಲ್ಲಿ ಈಗಿನ ಪ್ರಮುಖ ಧರ್ಮಗಳೆಂದರೆ ವೈದಿಕಧರ್ಮ, ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ, ಕನ್‌ಫ್ಯೂಷಿಯಸ್, ಪಾರ್ಸಿ ಮತಗಳು. ಈ ಎಲ್ಲಾ ಭಾಷೆಗಳ ಆದಿ ಗ್ರಂಥಗಳು ಬೇರೆ ಬೇರೆ ಭಾಷೆಯಲ್ಲಿವೆ. ವೈದಿಕಧರ್ಮದ ಗ್ರಂಥಗಳು ಸಂಸ್ಕೃತಭಾಷೆ ನಾಗರಿಲಿಪಿಯಲ್ಲಿದ್ದರೆ, ಇಸ್ಲಾಂನ ಧಾರ್ಮಿಕ ಗ್ರಂಥ ಕುರ್‌ಆನ್ ಅರಬ್ಬೀ ಭಾಷೆ – ಲಿಪಿಯಲ್ಲಿದೆ. ಕ್ರೈಸ್ತಧರ್ಮದ ಹೊಸ ಮತ್ತು ಹಳೆಯ ಒಡಂಬಡಿಕೆಗಳು ಲತಿನಭಾಷೆ – ಲಿಪಿಯಲ್ಲಿವೆ. ಪಾರ್ಸಿಗಳ ಭಾಷೆ ಜೆಂಡ್‌ಅವೆಸ್ತಾ ಗ್ರಂಥವು ಪಾರ್ಸಿಯ ಉಪಭೇದವಾದ ಅವೆಸ್ತಾದಲ್ಲಿದೆ. ಕನ್‌ಫ್ಯೂಷಿಯಸ್‌ನ ಧರ್ಮದ ಭಾಷೆ ಚೀನಾ. ಬೌದ್ಧಧರ್ಮದ ಗ್ರಂಥಗಳು ಪಾಳಿಭಾಷೆಯಲ್ಲಿದ್ದರೆ, ಜೈನಧರ್ಮದ ಗ್ರಂಥಗಳು ಪ್ರಾಕೃತಭಾಷೆಯಲ್ಲಿವೆ. ಇವಲ್ಲದೆ ಸ್ಥಳೀಯವಾಗಿ ಜನಿಸಿದ ಧರ್ಮದ ಶಾಖೆಗಳಲ್ಲಿಯೂ ಆಯಾ ಧರ್ಮ ಉದಿಸಿದ ಸ್ಥಳದಲ್ಲಿನ ಭಾಷೆಯ ಪ್ರಭಾವವನ್ನು ಕಾಣುತ್ತೇವೆ. ವೀರಶೈವಧರ್ಮಕ್ಕೆ ಕನ್ನಡ ಭಾಷೆಯಾದರೆ ಶ್ರೀವೈಷ್ಣವರ ವೇದಗಳ ಭಾಷೆ (ದ್ರಾವಿಡ ವೇದ) ತಮಿಳು. ಈ ಧರ್ಮದ ಜನ ತಾವು ಗೆದ್ದ ಪ್ರದೇಶಗಳ ಮೇಲೆ ತಾವು ಅನುಸರಿಸುವ ಧರ್ಮವನ್ನಲ್ಲದೆ ಅದಕ್ಕೆ ಬಳಸುವ ಭಾಷೆ ಮತ್ತು ಲಿಪಿಯನ್ನು ಹೇರಿದ್ದರು. ಸೀಖರು ತಮ್ಮ ಧರ್ಮದ ಗ್ರಂಥವು ಗುರ್ಮುಖಿ ಲಿಪಿಯಲ್ಲಿರುವುದರಿಂದ ಆ ಲಿಪಿಗೆ ಅವರು ಹೆಚ್ಚಿನ ಸ್ಥಾನ ನೀಡುತ್ತಾರೆ.

ವೈದಿಕಧರ್ಮವು ಕಾಲ ಕಾಲಕ್ಕೆ ಅನೇಕ ಮಾರ್ಪಾಟುಗಳನ್ನು ಕಂಡರೂ, ಇಂದಿಗೂ ವೈದಿಕಧರ್ಮದ ಭಾಷೆ ಸಂಸ್ಕೃತ. ಹಾಗೆಯೇ ಅದನ್ನು ಬರೆಯಲು ಬಹುತೇಕ ಬಳಸುತ್ತಿದ್ದ ನಾಗರಿಲಿಪಿಗೆ ದೇವನಾಗರಿಯೆಂಬ ಹೆಸರನ್ನು ನೀಡಿ ಅದನ್ನು ಈ ಧರ್ಮ ಪ್ರಚಲಿತವಿರುವ ಕಡೆಯಲ್ಲೆಲ್ಲಾ ಬಳಸಲು ಪ್ರಯತ್ನಿಸಿರುತ್ತಾರೆ. ಹೀಗಾಗಿ ಸಂಸ್ಕೃತ ಭಾಷೆಯು ಭಾರತದಲ್ಲಿ

ಮಾತ್ರವಲ್ಲದೆ ಅದರ ಆಳ್ವಿಕೆಯ ತೆಕ್ಕೆಗೆ ಅಥವಾ ಪ್ರಭಾವಕ್ಕೆ ಬಂದ ದೇಶಗಳಾದ ಭಾರತದ ಎಲ್ಲಾ ಭಾಗಗಳು, ಆಗ್ನೇಯ ಏಷಿಯಾ, ಟಿಬೆಟ್, ಸಿಂಹಳ ಮುಂತಾದ ಕಡೆಗಳಲ್ಲಿ ಈ ಧರ್ಮದ ಸಂಕೇತವಾದ ಭಾಷೆ ಮತ್ತು ಲಿಪಿಯನ್ನು ಕಾಣುತ್ತೇವೆ.

ಬೌದ್ಧ ಧರ್ಮವು ಹರಡಿರುವ ಪ್ರದೇಶಗಳಲ್ಲೆಲ್ಲಾ ಆ ಧರ್ಮದ ಆದಿ ಧಾರ್ಮಿಕ ಗ್ರಂಥಗಳಾದ ಪಾಳಿಗೆ ಮಹತ್ವವನ್ನು ನೀಡಿರುತ್ತಾರೆ. ಅನೇಕ ವೇಳೆ ಈ ಭಾಷೆ ಮತ್ತು ಲಿಪಿಯು ಧರ್ಮದ ಕೇಂದ್ರಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಬೌದ್ಧ ಧರ್ಮದ ಪ್ರಭಾವವಿರುವ ಆಗ್ನೇಯ ಏಷ್ಯಾದೇಶಗಳಲ್ಲಿ ಕೆಲವಲ್ಲಿ ಶಾಸನಗಳು ಸಂಸ್ಕೃತ ಭಾಷೆಯಲ್ಲಿದ್ದಲ್ಲಿ ಅದಕ್ಕೆ ಪಾಳಿ ಭಾಷೆಯೆಂದೇ ಹೆಸರು ನೀಡಿರುತ್ತಾರೆ.

ಇಸ್ಲಾಂ ಧರ್ಮದ ಉಗಮ ಅರಬ್ಬೀದೇಶದಲ್ಲಾದರೂ ಅದರ ಹರವು ಮುಂದೆ ಪ್ರಪಂಚದ ಅನೇಕ ಕಡೆಗಳಲ್ಲಾಗುತ್ತದೆ. ಈ ಹರವು ರಾಜಕೀಯ ಪ್ರೇರಿತವಾಗಿದ್ದು ಇದರಲ್ಲಿ ಧರ್ಮದೊಂದಿಗೆ ಭಾಷೆ ಮತ್ತು ಲಿಪಿಯನ್ನು ಸೇರಿಸಿರುತ್ತಾರೆ. ಹೀಗಾಗಿ ಮಧ್ಯಪ್ರಾಚ್ಯದಲ್ಲಿದ್ದ ಅರಬ್ಬೀ ಮತ್ತು ಪಾರ್ಸಿ ಭಾಷೆಗಳೊಂದಿಗೆ ಅವುಗಳಿಗೆ ಬಳಸುತ್ತಿದ್ದ ಸೆಮೆಟಿಕ್ ಗುಂಪಿನ ಲಿಪಿಗಳ ಬಳಕೆಯೂ ಹೆಚ್ಚಾಗಿ ಬಳಕೆಗೆ ಬಂದಿರುತ್ತದೆ. ಆಫ್ರಿಕಾದ ಪೂರ್ವ-ಉತ್ತರ ಭಾಗಗಳು, ಮಧ್ಯಪ್ರಾಚ್ಯ, ಭರತಖಂಡ, ಇಂಡೋನೇಷಿಯಾ, ಸೋವಿಯತ್ ಖಂಡದ ಬಾಲ್ಟಿಕ್ ಗಣರಾಜ್ಯಗಳ ಮುಸಲ್ಮಾನರು ಈ ಲಿಪಿಯನ್ನು ಬಳಸುತ್ತಿದ್ದಾರೆ. ಉಳಿದ ಮುಸ್ಲಿಂ ರಾಜ್ಯಗಳಲ್ಲಿ ದೇಶೀಯ ಲಿಪಿಗಳೇ ಬಳಕೆಯಲ್ಲಿದ್ದರೂ ಸೆಮೆಟಿಕ್ ಗುಂಪಿನ ಈ ಲಿಪಿಗಳಿಗೆ ಹೆಚ್ಚಿನ ಮರ್ಯಾದೆ ನೀಡಿರುತ್ತಾರೆ.

ಕ್ರೈಸ್ತಧರ್ಮವು ಯೂರೋಪ್ ಖಂಡದ ವ್ಯಾಪಾರಿಗಳ ಮೂಲಕ ಹರಡಿದ ಮೇಲೆ, ವ್ಯಾಪಾರದ ಮೂಲಕ ಧರ್ಮ, ಆ ಧರ್ಮದ ಜೊತೆಗೆ ಆಯಾ ವ್ಯಾಪಾರಿಗಳ ಭಾಷೆ ಮತ್ತು ಲಿಪಿಯೂ ಆ ಪ್ರದೇಶವನ್ನೂ ಪ್ರವೇಶಿಸಿತು. ಲ್ಯಾಟಿನ್ ಮೂಲದ ಲಿಪಿ ಹಾಗೂ ಲತಿನಭಾಷೆ, ಇದು ಕ್ರೈಸ್ತ ಧಾರ್ಮಿಕ ಕೇಂದ್ರಗಳಾದ ಚರ್ಚುಗಳ ಭಾಷೆಯಾಯಿತು. ಸಾಮಾನ್ಯ ಜನರು ಸ್ಥಳೀಯ ಭಾಷೆ ಮತ್ತು ಲಿಪಿಯನ್ನು ಬಳಸಿದರೂ ಚರ್ಚುಗಳಲ್ಲಿ ಲತಿನಭಾಷೆ ಪ್ರಾಮುಖ್ಯತೆಯನ್ನು ಪಡೆದಿದೆ.

ಸ್ಥಳೀಯ ಧರ್ಮಗಳಾದ ವೀರಶೈವ ಮತ್ತು ಶ್ರೀವೈಷ್ಣವದಂತಹ ಮತಗಳು ಮಧ್ಯಯುಗೀನ ಕಾಲದಲ್ಲಿ ರೂಪುಗೊಂಡದ್ದರಿಂದ ಸ್ಥಳೀಯ ಭಾಷೆಯನ್ನು ತಮ್ಮ ಧಾರ್ಮಿಕ ಗ್ರಂಥಗಳ ಭಾಷೆಗಳಾಗಿ ಬಳಸಿರುತ್ತಾರೆ. ವೀರಶೈವ ಮತದ ಪ್ರಮುಖ ವಕ್ತಾರನಾದ ಬಸವಣ್ಣ ಸ್ಥಳೀಯ ಭಾಷೆಯಾದ ಕನ್ನಡದಲ್ಲಿ ಧರ್ಮದ ತತ್ವಗಳನ್ನು ಬೋಧಿಸಿದುದರಿಂದ ಈ ಧರ್ಮದಲ್ಲಿ ಕನ್ನಡಕ್ಕೆ ಅಗ್ರಸ್ಥಾನವಿದೆ. ವೀರಶೈವರಲ್ಲಿನ ಒಂದು ಗುಂಪಾದ ವೀರಶೈವ ಬ್ರಾಹ್ಮಣರು (ಜಂಗಮರು) ಸಂಸ್ಕೃತದ ಪರವಾಗಿದ್ದರೂ, ವಿರಕ್ತ ಪರಂಪರೆಯ ಜನರು ಕನ್ನಡವನ್ನು ತಮ್ಮ ನಿತ್ಯಜೀವನದಲ್ಲಿ ಎತ್ತಿ ಹಿಡಿದಿರುತ್ತಾರೆ. ಶಿವನಿಗೆ ಬೆಳಗುವ ಮಂಗಳಾರತಿ ಪದಗಳು ಕನ್ನಡದಲ್ಲಿ ಮೂಡಿಬರಲು ಇವರು ಕಾರಣರಾಗಿರುತ್ತಾರೆ. ನಿಜಾಮನಿಗೆ ಸೇರಿದ್ದ ಹೈದರಾಬಾದ್ ಪ್ರಾಂತ್ಯದ ಪ್ರದೇಶಗಳಲ್ಲಿ ವೀರಶೈವರು ಕನ್ನಡವನ್ನು ಕಲಿಯುವಲ್ಲಿ ಹಾಗೂ ಅದನ್ನು ಜೀವಂತವಾಗಿರಿಸಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

ಶ್ರೀವೈಷ್ಣವರು ವೈದಿಕಧರ್ಮದ ಭಾಗವೇ ಆಗಿದ್ದರೂ ಆ ಧರ್ಮದ ತತ್ವಗಳನ್ನು ತಮಿಳಿನಲ್ಲಿ ಪ್ರಚಾರಮಾಡಲಾಗಿದ್ದು ಇವರ ಈ ತತ್ವಗಳನ್ನು ದ್ರಾವಿಡವೇದಗಳೆಂದು ಕರೆದು ಗೌರವಿಸಿರುತ್ತಾರೆ. ಇವೆಲ್ಲಾ ತಮಿಳಿನಲ್ಲಿವೆ. ಹೀಗೆ ಧರ್ಮದ ಬೆನ್ನಲ್ಲಿ ಅಂಟಿಕೊಂಡು ಅದರ ಭಾಷೆ ಮತ್ತು ಲಿಪಿ ತನ್ನ ಸ್ಥಾನವನ್ನು ಇಂದಿಗೂ ಭದ್ರಪಡಿಸಿಕೊಂಡಿದೆ.

ರಾಜಕೀಯದ ಆಶ್ರಯದಲ್ಲಿ ಲಿಪಿ

ಲಿಪಿಗೂ ರಾಜಕೀಯಕ್ಕೂ ಒಂದು ಬಗೆಯ ನಂಟಿದೆ. ಆ ನಂಟು ತನ್ನ ಆಳ್ವಿಕೆಯನ್ನು ಇತರ ಪ್ರಾಂತ್ಯಗಳ ಮೇಲೆ ತೋರಿಸಿಕೊಳ್ಳುವುದು. ಇತಿಹಾಸದುದ್ದಕ್ಕೂ ಲಿಪಿಯ ಈ ಹೇರುವಿಕೆ ಅಥವಾ ಅಧಿಕಾರ ಸೂಚಕವಾಗಿ ಲಿಪಿಯನ್ನು ಇತರರ ಮೇಲೆ ಹೇರಿರುವುದನ್ನು ಕಾಣುತ್ತೇವೆ. ಇಸ್ಲಾಂಧರ್ಮದ ರಾಜರು ಒಂದು ಕೈಲಿ ಖಡ್ಗ ಇನ್ನೊಂದು ಕೈಲಿ ಕುರಾನನ್ನು ಹಿಡಿದುಕೊಂಡು ರಾಜ್ಯ ವಿಸ್ತಾರದ ಜೊತೆಗೆ ಧರ್ಮವನ್ನೂ ಹೇರಿದರು. ಅದರೊಂದಿಗೆ ಆ ಧರ್ಮದ ಲಿಪಿಯನ್ನೂ ಸಹ ಹೇರಿದರು. ಮುಂದೆ ಈ ಅರಸರು ತಾವು ಗೆದ್ದು ನೆಲೆಯೂರಿದ ಪ್ರದೇಶಗಳಲ್ಲಿ ತಮ್ಮದೇ ಆದ ಲಿಪಿಯನ್ನು ತಮ್ಮ ಆಡಳಿತದ ಸಂಕೇತವಾಗಿ ಬಳಸಿ ಇತರ ಧರ್ಮೀಯರೂ ಈ ಲಿಪಿಯನ್ನು ಬಳಸಲು ಆಶಿಸಿರುತ್ತಾರೆ. ಹೀಗಾಗಿ ಕೈ ಬೆರಳೆಣಿಕೆ ಜನರು ತಮ್ಮ ಲಿಪಿಯನ್ನು ಇತರೆ ಬಹುಸಂಖ್ಯಾತ ಧರ್ಮದವರ ಮೇಲೆ ಹೇರಿರುವುದನ್ನು ಗಮನಿಸಬಹುದಾಗಿದೆ. ಈ ಬಗೆಯ ಹೇರುವಿಕೆ ಅವರ ಆಳ್ವಿಕೆ ಇದ್ದ ಕಾಲಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಇವರ ಆಳ್ವಿಕೆ ತಪ್ಪಿ ಸ್ಥಳೀಯರ ಕೈಗೆ ಅಧಿಕಾರ ಬಂದ ಕೂಡಲೆ ತಮ್ಮ ಸಂಕೋಲೆಗಳನ್ನು ಕಳಚಿದ ಸಂಕೇತವಾಗಿ ಹಿಂದಿನಿಂದ ಬಳಕೆಯಲ್ಲಿದ್ದ ಸ್ಥಳೀಯ ಲಿಪಿಗಳನ್ನು ಬಳಸಿರುತ್ತಾರೆ.

ಇಂತಹ ಲಿಪಿಗಳನ್ನು ಕಲಿಯುವಾಗ ಇನ್ನೊಂದು ಅಂಶವೆಂದರೆ ಆಡಳಿತದಲ್ಲಿನ ನೌಕರಿ ಆಸೆ. ಬಹುಶ: ಇಂದು ರೋಮನ್ ಲಿಪಿಯ ಸಾರ್ವತ್ರಿಕ ಕಲಿಕೆ ಅಂತಹ ಅಂಶಗಳಲ್ಲಿ ಒಂದು. ಭರತಖಂಡದಲ್ಲಿ ಅಶೋಕನು ಮೊದಲ ಬಾರಿಗೆ ಶಾಸನಗಳನ್ನು ಹಾಕಿಸಿದವನಾಗಿದ್ದು ಅವನ ಶಾಸನಗಳು ನಾಲ್ಕು ಲಿಪಿಗಳಲ್ಲಿ ಕಾಣಬರುತ್ತವೆ. ಆಯಾ ಸ್ಥಳದಲ್ಲಿ ಅವನ ಕಾಲಕ್ಕೆ ಬಳಕೆಯಿದ್ದ ಲಿಪಿಗಳನ್ನು ಬಳಸಿರುತ್ತಾನೆ. ದಕ್ಷಿಣ ಭಾರತದಲ್ಲಿ ಯಾವ ಲಿಪಿಯ ಬಳಕೆಯೂ ಇಲ್ಲದಿದ್ದುದರಿಂದ ಬ್ರಾಹ್ಮಿ ಲಿಪಿಯನ್ನು ಬಳಸಿರುತ್ತಾನೆ. ಬ್ರಹ್ಮಗಿರಿ ಶಾಸನದಲ್ಲಿ ಲಿಪಿಕಾರ ಖರೋಷ್ಠಿಯಲ್ಲಿ ತನ್ನ ಹೆಸರನ್ನು ಬರೆದು ತಾನು ಎರಡು ಲಿಪಿಗಳನ್ನು ಬಲ್ಲನೆಂದು ತನ್ನ ಪರಿಚಯವನ್ನು ಆ ಮೂಲಕ ಮಾಡಿಕೊಂಡಿರುತ್ತಾನೆ.

ಭಾರತದ ಪ್ರಾಚೀನ ರಾಜಕಾರಣದಲ್ಲಿಯೂ ಆಳಿದ ಅರಸರು ಲಿಪಿಯನ್ನು ತಮ್ಮ ವಿಜಯಮುದ್ರೆಯ ಸಂಕೇತವಾಗಿ ಬಳಸಿರುತ್ತಾರೆ. ಬಾದಾಮಿ ಚಾಲುಕ್ಯ ಇಮ್ಮಡಿ ಪುಲಿಕೇಶಿಯನ್ನು ಸೋಲಿಸಿದ ನರಸಿಂಹವರ್ಮನು ಬಾದಾಮಿಯ ಬಂಡೆಯ ಮೇಲಿನ ಒಂದನೆಯ ಪುಲಕೇಶಿ ಶಾಸನವನ್ನು ಅಳಿಸಿ ಆ ಜಾಗದಲ್ಲಿ ಕನ್ನಡ ಲಿಪಿಯಲ್ಲಿ ಶಾಸನವನ್ನು ಬರೆಸುವುದರ ಬದಲು ತನ್ನ ಅಧಿಕಾರ ದ್ಯೋತಕವಾಗಿ ಪಲ್ಲವ ಗ್ರಂಥಲಿಪಿಯಲ್ಲಿ ಶಾಸನವನ್ನು ಬರೆಸಿರುತ್ತಾನೆ. ಹಾಗೆಯೇ ಕಂಚಿಯ ಪಲ್ಲವರನ್ನು ಸೋಲಿಸಿದ ಚಾಲುಕ್ಯ ವಿಕ್ರಮಾದಿತ್ಯನು ಕಂಚಿಯ ರಾಜಸಿಂಗೇಶ್ವರ ದೇವಾಲಯದ ಕಂಬದ ಮೇಲೆ ತಮಿಳಿನಲ್ಲಿ ಶಾಸನ ಬರೆಸುವ ಬದಲಿಗೆ ಕನ್ನಡ ಲಿಪಿ ಹಾಗೂ ಭಾಷೆಯಲ್ಲಿ ಶಾಸನ ಬರೆಸಿರುತ್ತಾನೆ. ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ಮಾಳವವನ್ನು ಗೆದ್ದಾಗ

ಅಲ್ಲಿ (ಮಧ್ಯಪ್ರದೇಶದ ಜುರಾ ಎಂಬಲ್ಲಿ) ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ತನ್ನ ಹೊಗಳಿಕೆಯ ಶಾಸನ ಹಾಕಿಸಿರುತ್ತಾನೆ. ಚೋಳರು ಕರ್ನಾಟಕವನ್ನು ಪ್ರವೇಶಿಸಿದ ಮೇಲೆ ಇಲ್ಲಿ ತಮಿಳು ಶಾಸನಗಳು ಹೆಚ್ಚಿಗೆ ಕಂಡುಬರುತ್ತವೆ. ಈ ಪರಿಪಾಠವು ವಿಜಯನಗರ ಸಾಮ್ರಾಜ್ಯದ ಆರಂಭದವರೆಗೆ ಇರುತ್ತದೆ. ಮುಂದೆ ತಮಿಳಿನ ಸ್ಥಾನವನ್ನು ಈ ಸ್ಥಳದ ಭಾಷೆ ಪಡೆಯುತ್ತದೆ. ಹಾಗೆಯೇ ವಿಜಯನಗರದ ಅರಸರ ಕಾಲದಲ್ಲಿ ಕೃಷ್ಣದೇವರಾಯನ ತೆಲುಗು ಶಾಸನವೊಂದು ಗಯೆಯಲ್ಲಿ ದೊರೆತಿದೆ. ಶ್ರೀರಂಗ, ತಿರುಪತಿ ಮುಂತಾದ ಕರ್ನಾಟಕದಿಂದ ದೂರದ ಪುಣ್ಯಕ್ಷೇತ್ರಗಳಲ್ಲಿ ಕನ್ನಡ ಶಾಸನಗಳನ್ನು ಕಾಣಬಹುದು. ಮೈಸೂರರಸರ ಕಾಲದ ಕನ್ನಡ ಭಾಷೆ ಮತ್ತು ಲಿಪಿಯ ಅನೇಕ ಶಾಸನಗಳು ತಮಿಳುನಾಡಿನಲ್ಲಿ ದೊರೆಯುತ್ತವೆ. ನಿಜಾಂ ಪ್ರದೇಶದಲ್ಲಿ ಉರ್ದುಭಾಷೆ ಮತ್ತು ಲಿಪಿ ಅಧಿಕೃತ ಭಾಷೆಯಾಗಿತ್ತು. ಸರ್ಕಾರದ ಸೇವೆಗೆ ಇವೆರಡೂ ಅವಶ್ಯಕವಾಗಿತ್ತು. ಟೀಪೂ ಸಹ ಅಂತ್ಯ ಕಾಲದಲ್ಲಿ ಉರ್ದು ಭಾಷೆ ಮತ್ತು ಲಿಪಿಗೆ ಹೆಚ್ಚಿನ ಉತ್ತೇಜನ ನೀಡಿದ್ದ ಹಾಗೂ ಅವನ ಆಸ್ಥಾನದಲ್ಲಿ ಅನೇಕ ಉರ್ದು, ಪರ್ಷಿಯಾ ಪಂಡಿತರಿದ್ದರು. ಮರಾಠರು ತಾವು ಗೆದ್ದ ಪ್ರದೇಶಗಳಲ್ಲಿ ಮರಾಠಿಯನ್ನು ಪ್ರಚಾರಕ್ಕೆ ತರುತ್ತಾರೆ. ಪೂರ್ಣಯ್ಯನ ಕಾಲದಲ್ಲಿ ಅನೇಕ ದಾಖಲೆಗಳಲ್ಲಿನ ಸಹಿ ಮರಾಠಿಯಲ್ಲಿದೆ ಹಾಗೂ ಮೋಡಿ ಲಿಪಿ ಇವರ ಕಾಣಿಕೆ.

ಎಲ್ಲಾ ಸಂದರ್ಭ ಅಥವಾ ರಾಜರ ಕಾಲದಲ್ಲಿ ಈ ಬಗೆಯ ಲಿಪಿ ಹೇರುವಿಕೆಯ ಕಾರ್ಯ ನಡೆದಿದೆಯೆಂದು ಭಾವಿಸಲು ಸಾಧ್ಯವಿಲ್ಲ. ಅನೇಕ ಸಂದರ್ಭಗಳಲ್ಲಿ ರಾಜನನ್ನು ಸಂಪ್ರೀತಗೊಳಿಸಲು ಸಾಮಂತರಾಜ ರಾಜನ ಭಾಷೆಯಲ್ಲಿ ಶಾಸನಗಳನ್ನು ಹಾಕಿಸಿರಬಹುದು. ಆದರೂ ಇತರ ಭಾಷೆಯನ್ನಾಡುವ ಸ್ಥಳದಲ್ಲಿ ಬೇರೊಂದು ಭಾಷೆಯ ಶಾಸನ ಹಾಕಿಸಿರುವುದು ಆಳುತ್ತಿದ್ದ ಅಥವಾ ಗೆದ್ದ ಅರಸನು ತನ್ನ ಸಾರ್ವಭೌಮತ್ವವನ್ನು ಪ್ರದರ್ಶಿಸಿರುವ ಕಾರ್ಯವೆಂದೇ ತಿಳಿಯಬೇಕು.

ಬ್ರಿಟಿಷರು ಭಾರತಕ್ಕೆ ಬಂದಾಗ ಅವರು ಅನೇಕ ದಾಖಲೆಗಳನ್ನು ಇಂಗ್ಲೀಷಿನಲ್ಲಿ ಬರೆಸಿರುತ್ತಾರೆ. ಅನೇಕ ವೇಳೆ ಅಧಿಕಾರದ ವ್ಯಾಮೋಹದಿಂದ ಇತರರು ಹೇರಿದ ಲಿಪಿಯನ್ನು ಜನ ಸ್ವತಃ ಕಲಿಯುತ್ತಾರೆ.

ಅಧ್ಯಾಯ - ೬

ಮುದ್ರಣ ಕಾಲದ ಲಿಪಿ

ಬರೆಹವು ಮುದ್ರಣಕ್ಕೆ ಹಸ್ತಾಂತರವಾದ ಮೇಲೆ ಎಲ್ಲಾ ಲಿಪಿಗಳು ಸ್ಥಿತ್ಯಂತರವಾಗ ತೊಡಗಿದವು. ಇಂದು ಮುದ್ರಣಕ್ಕೆ ಅಳವಡದ ಲಿಪಿಗಳೇ ಇಲ್ಲ. ಭಾರತದಲ್ಲಿ ಕ್ರೈಸ್ತ ಮಿಷಿನರಿಗಳ ಆಗಮನದ ನಂತರ ಮುದ್ರಣ ಆರಂಭವಾಯಿತು. ಮೊದ ಮೊದಲು ಧಾರ್ಮಿಕ ಗ್ರಂಥಗಳನ್ನು ಮುದ್ರಣಕ್ಕೆ ಅಳವಡಿಸಲು ಒಪ್ಪದವರೂ ನಿಧಾನವಾಗಿ ಈ ಕ್ರಮವನ್ನು ಒಪ್ಪಿಕೊಂಡರು. ಮುದ್ರಣ ಸಾಕಷ್ಟು ಪ್ರಚಾರ ಪಡೆದ ಮೇಲೂ ತಾಳೆಗರಿಗಳ ಮೇಲೆ ನಕಲು ಮಾಡಿಕೊಂಡಿರುವ ಕೃತಿಗಳು ದೊರೆತಿವೆ. ಅಷ್ಟೇ ಅಲ್ಲ ಮುದ್ರಣವಾದ ಪುಸ್ತಕಗಳನ್ನು ತಾಳೆಗರಿಗಳ ಮೇಲೆ ನಕಲು ಮಾಡಿರುವುದುಂಟು.

ಮುದ್ರಣ ಪ್ರಚಾರಕ್ಕೆ ಬಂದ ಮೇಲೆ ಅಕ್ಷರ ವಿನ್ಯಾಸಗಳು ಹೆಚ್ಚು ಕಡಿಮೆ ಇಂಗ್ಲೀಷ್ ಲಿಪಿಯನ್ನೇ ಅನುಸರಿಸಿದವು. ಅಲ್ಲಿನ ಪದಗಳೇ ಇಲ್ಲಿಯೂ ಬಳಕೆಗೆ ಬಂದವು. ವ್ಯತ್ಯಾಸವಿಷ್ಟೆ ತಯಾರಕರ ಹೆಸರಿನ ಜೊತೆಗೆ ರೋಮನ್ ರೀತಿಯ ಅಕ್ಷರಗಳ ಹೆಸರು ಸೇರ್ಪಡೆಯಾಯಿತು. ಬೃಂದಾವನ್, ಗೌರ್ನಮೆಂಟ್ ಪ್ರೆಸ್ ಇತ್ಯಾದಿ ಹೆಸರುಗಳು ಪ್ರಚಲಿತವಾದವು. ಆದರೆ ಕನ್ನಡದಲ್ಲಿ ಇಂಗ್ಲೀಷಿನಲ್ಲಿರುವಂತೆ ಚಿಕ್ಕಕ್ಷರ, ದೊಡ್ಡಕ್ಷರಗಳಿಲ್ಲ. ಹೀಗಾಗಿ ಇರುವ ಒಂದೇ ರೀತಿಯ ಅಕ್ಷರಗಳನ್ನು ಕಂಪ್ಯೂಟರ್ ಬಂದ ಮೇಲೆ ಇಟಾಲಿಕ್, ಗೋಥಿಕ್, ರೋಮನ್ ಇತ್ಯಾದಿ ಹೆಸರುಗಳ ಅಡಿಯಲ್ಲಿ ಕೆಲವು ಮಾದರಿಗಳನ್ನು ಸೃಷ್ಟಿಸಿರುತ್ತಾರೆ. ಮುದ್ರಣವು ಪ್ರಚಾರಕ್ಕೆ ಬಂದ ಮೇಲೆ ನಾನಾ ಬಗೆಯ ಕೈ ಬರೆವಣಿಗೆಯ ಅಕ್ಷರಗಳ ರೂಪಕ್ಕೆ ತೆರೆ ಎಳೆಯುತ್ತದೆ. ಅಧಿಕೃತ ಲಿಪಿಯಾಗಿ ಮುದ್ರಣದ ಲಿಪಿಯನ್ನು ಅಂಗೀಕರಿಸಿರುತ್ತಾರೆ. ಹೀಗಾಗಿ ಶಾಲಾ ಬೋಧನೆಗಳಲ್ಲಿಯಾಗಲೀ, ಸರ್ಕಾರ, ಸರ್ಕಾರೇತರ ಸಂಸ್ಥೆಗಳಲ್ಲಾಗಲೀ ಇದೇ ಲಿಪಿಯನ್ನು ಅಧಿಕೃತವಾಗಿ ಬಳಸಬೇಕಾದ್ದು ಅನಿವಾರ್ಯ. ಎಷ್ಟೇ ಜನ ಎಷ್ಟೇ ರೀತಿಯಿಂದ ಅಕ್ಷರಗಳನ್ನು ಬರೆದರೂ ಕಲಿಯಬೇಕಾದ್ದು, ಕಲಿಸಬೇಕಾದ್ದು ಸರ್ಕಾರ ಅಂಗೀಕರಿಸಿರುವ ಮುದ್ರಣದ ಅಧಿಕೃತ ಲಿಪಿಗಳನ್ನು. ಇನ್ನು ಮುಂದೆ ಅಕ್ಷರಗಳ ರೂಪವು ಆಕಸ್ಮಿಕ ಅಥವಾ ಲಿಪಿಕಾರನ ರೀತಿಯಿಂದ ಬದಲಾವಣೆಯಾಗುವುದಿಲ್ಲ. ಅನುಕೂಲಕ್ಕಾಗಿ ಉದ್ದೇಶಪೂರ್ವಕವಾಗಿ ಬದಲಿಸಬೇಕಾಗುತ್ತದೆ. ಮುದ್ರಣದ ಮೊಳೆಗಳು ಬಳಕೆಗೆ ಬಂದಾಗ ಪ ಕಾರ ಮುಂತಾದ ಅಕ್ಷರಗಳನ್ನು ಹಾಗೂ ಕಾಗುಣಿತಗಳನ್ನು ಮೊಳೆ ಅಚ್ಚುಗಳಿಗೆ ಸರಿಹೊಂದುವಂತೆ ಬದಲಿಸಿಕೊಂಡರು. ಹೀಗೆ ಬದಲಿಸಿಕೊಳ್ಳುವಾಗ ಆ ಬಗೆಯ ಕೈ ಬರೆವಣಿಗೆ ಅಲ್ಲಲ್ಲಿ ಪ್ರಚಾರದಲ್ಲಿತ್ತು, ಸಾರ್ವತ್ರಿಕವಾಗಿರಲಿಲ್ಲ. ಆದರೆ ಮುದ್ರಣದ ಮೂಲಕ ಅವನ್ನು ಸಾರ್ವತ್ರೀಕರಣಗೊಳಿಸಿದರು. ಯಾರೂ ವಿರೋಧಿಸಲಿಲ್ಲ. ಬದಲಾಗಿ ಅದೇ ಸಂದರ್ಭದಲ್ಲಿ

ತೆಲುಗು ಮತ್ತು ಕನ್ನಡಕ್ಕೆ ಏಕಲಿಪಿ ಸೂತ್ರ ಜಾರಿಗೆ ತಂದಿದ್ದರೆ ಜನರು ಒಪ್ಪಿಕೊಳ್ಳುತ್ತಿದ್ದರು. ವಿರೋಧಿಸಲು ಯಾವ ಭಾಷಾ ಪ್ರದೇಶವೂ ಒಂದು ಆಡಳಿತದಲ್ಲಿರಲಿಲ್ಲ, ಚದುರಿಹೋಗಿದ್ದವು.

ಮುಂದೆ ಆಫ್‌ಸೆಟ್ ಮುದ್ರಣ ಬಳಕೆಗೆ ಬಂದ ಮೇಲೆ ಮತ್ತೆ ಕೈ ಬರಹಕ್ಕೆ ಸ್ವಲ್ಪ ಚಾಲನೆ ಸಿಕ್ಕಿತು. ಆದರೆ ಇದು ಆಹ್ವಾನಪತ್ರಿಕೆಗಳಿಗಷ್ಟೇ ಸೀಮಿತವಾಯಿತು. ಪುಸ್ತಕಗಳ ಮುದ್ರಣಕ್ಕೆ ಈ ತಂತ್ರವನ್ನು ಬಳಸಿಲ್ಲ. ಉರ್ದು ಭಾಷೆಗೆ ಮಾತ್ರ ಕೆಲವು ಕಾಲದವರೆಗೆ ಕಂಪ್ಯೂಟರ್ ಅಳವಡಿಕೆಯವರೆಗೆ ಈ ತಂತ್ರ ಬಳಕೆಯಲ್ಲಿತ್ತು. ಮುದ್ರಣದ ಅಚ್ಚುಗಳಲ್ಲಿ ಕನ್ನಡದಲ್ಲಿ ಕೆಲವು ವೈಶಿಷ್ಟ್ಯಗಳಿದ್ದವು. ಅಕ್ಷರದ ಪೂರ್ಣರೂಪ, ಅರೆರೂಪ ಎಂಬ ಎರಡು ರೀತಿಯ ಅಕ್ಷರಗಳಿದ್ದವು. ಪೂರ್ಣರೂಪದಲ್ಲಿ ತಲೆಕಟ್ಟು ಪೂರ್ಣವಾಗಿದ್ದು ಅದನ್ನು ಹಾಗೆಯೇ ಬಳಸುತ್ತಿದ್ದರು. ಅವುಗಳಿಗೆ ಕಾಗುಣಿತವನ್ನು ನೀಡಬೇಕಾದಲ್ಲಿ ಈ ಅಕ್ಷರಗಳಿಗೆ ಜೋಡಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಅರೆರೂಪದ ತಲೆಕಟ್ಟಿನ ಅಕ್ಷರಗಳನ್ನು ಬಳಸಿ ಅವುಗಳಿಗೆ ಕಾಗುಣಿತದ ರೂಪಗಳನ್ನು ಸೇರಿಸಬೇಕಿತ್ತು. ಏನೇ ತೊಡಕಿದ್ದರೂ ಈ ಮುದ್ರಣದ ವ್ಯವಸ್ಥೆ ಬಹುಬೇಗ ಜನಪ್ರಿಯವಾಗತೊಡಗಿದೆ. ದೈನಂದಿನ ಜೀವನದಲ್ಲಿ ಇದಿಲ್ಲದೆ ಜೀವನ ಸಾಗಲಾರದೆಂಬಷ್ಟು ಪ್ರಭಾವಿತವಾಗಿದೆ.

ಕಾಗದದ ಮೇಲಿನ ಬರೆವಣಿಗೆ

ಪೋರ್ಚುಗೀಸರೊಡನೆ ಭಾರತಕ್ಕೆ ಕಾಗದ ಬಳಕೆಗೆ ಬಂತು. ಮೊದಮೊದಲು ಇದನ್ನು ಬಳಸಲು ಹಿಂಜರಿಯುತ್ತಿದ್ದ ಹಿಂದೂಗಳು ಮುಂದೆ ಕ್ರಮ ಕ್ರಮೇಣ ಬಳಕೆಗೆ ಅಂಗೀಕರಿಸಿದರು. ಮುಸಲ್ಮಾನ ಅರಸರ ಬಹುತೇಕ ಸನ್ನದುಗಳು ಕಾಗದದ ಮೇಲಿವೆ. ಜೈನರ ಕಾವ್ಯಗಳು ಸುಮಾರು ೩೦೦ ವರ್ಷಗಳಷ್ಟು ಹಿಂದೆಯೇ ಕಾಗದದ ಮೇಲೆ ರಚಿತವಾಗಿವೆ. ವೈದಿಕ ಧರ್ಮೀಯರು ಈ ಬಳಕೆಯನ್ನು ನಿಧಾನವಾಗಿ ಅಂಗೀಕರಿಸಿದರು. ಮುಸಲ್ಮಾನ ಅರಸರ ಪ್ರಭಾವದಿಂದ ಮುಖ್ಯವಾಗಿ ಹೈದರಾಲಿ ಕಾಲದಿಂದೀಚೆಗೆ ಹಾಗೂ ಮಿಷಿನರಿಗಳ ಪ್ರಭಾವದಿಂದ ಹಳೆಯ ಮೈಸೂರು ಪ್ರಾಂತ್ಯದಲ್ಲಿ ಕಾಗದದ ಬಳಕೆ ಅತಿಯಾಯಿತು. ಹೈದರಾಲಿಯ ದಾನಪತ್ರಗಳು ಸನ್ನದುಗಳು ಕಾಗದದಲ್ಲಿವೆ. ವೀರಶೈವ ಮಠಗಳ ಕೆಲವು ದಾನಪತ್ರಗಳು ಕಾಗದದಲ್ಲಿವೆ. ಕ್ರಿ.ಶ.೧೭೯೯ರಲ್ಲಿ ಟೀಪೂ ಪತನವಾದ ಮೇಲೆ ಅಳಿದುಳಿದಿದ್ದ ಪಾಳೆಯಗಾರರ ವಂಶಸ್ಥರು ಬ್ರಿಟೀಷ್ ಮತ್ತು ಮೈಸೂರು ಸಂಸ್ಥಾನಗಳಿಗೆ ತಮ್ಮ ವಂಶಾವಳಿ ವಿವರವನ್ನು ಒಪ್ಪಿಸಲು ಕಾಗದದಲ್ಲಿ ಕೈಫಿಯತ್ತುಗಳನ್ನು ಬರೆಸಿದರು. ಹೀಗೆ ಕಾಗದ ತನ್ನ ಬಳಕೆಯನ್ನು ಹೆಚ್ಚಿಸಿಕೊಂಡಿತು.

ದಕ್ಷಿಣ ಭಾರತದಲ್ಲಿ ಪಾರಂಪರಿಕವಾಗಿ ಬಳಸುತ್ತಿದ್ದ ತಾಳೆಗರಿಯ ಮೇಲೆ ಮೊನಚಾದ ಕಂಠದಿಂದ ಅಕ್ಷರಗಳನ್ನು ಕೊರೆಯುತ್ತಿದ್ದರು. ಇದರ ಮೇಲೆ ಲೆಕ್ಕಣಿಕೆಯಲ್ಲಿ ಬರೆದಿರುವುದು ಅಪರೂಪ. ಇಂತಹ ಕಡೆ ಹೊಸತಾಗಿ ಬಂದ ಕಾಗದದ ಮೇಲೆ, ಲೆಕ್ಕಣಿಕೆಯಿಂದ ಮಸಿಯಲ್ಲಿ ಅದ್ದಿ ಬರೆಯುವುದು ಹೊಸ ವಿಧಾನವಾಗಿತ್ತು. ಉತ್ತರ ಭಾರತದಲ್ಲಿ ಭೂರ್ಜಪತ್ರದ ಮೇಲೆ ಲೆಕ್ಕಣಿಕೆಯಿಂದ ಬರೆಯುತ್ತಿದ್ದರು. ಮುಂದೆ ಕಾಗದ ಬಳಕೆ ಜಾಸ್ತಿಯಾದಂತೆ ತಾಳೆಗರಿಯ ಮೇಲಿನ ಬರೆವಣಿಗೆ ಕಡಿಮೆಯಾಗುತ್ತಾ ಬಂತು. ಕಾಗದದ ಮೇಲೆ ಬರೆಯುವಾಗ ಲಿಪಿಕಾರರ ಅಕ್ಷರ ಒಬ್ಬರಿಂದ ಇನ್ನೊಬ್ಬರಿಗೆ ವ್ಯತ್ಯಾಸವಿರುತ್ತಿತ್ತು. ಹಿಂದಿನಂತೆ ಗುಂಡಾಗಿ ಬರೆಯಬೇಕೆಂಬ ನಿಯಮವಿರಲಿಲ್ಲ. ತೋಚಿದಂತೆ ಬರೆಯುತ್ತಿದ್ದರು. ತಾಳೆಗರಿ ಮೇಲೆ ಒತ್ತಿ ಕೊರೆದಂತೆ ಇಲ್ಲಿ

ಬರೆಯಬೇಕಾಗಿರಲಿಲ್ಲ. ತೇಲಿಸಿ ಬರೆಯಬೇಕಿತ್ತು. ಹೀಗಾಗಿ ಕನ್ನಡ ಮೋಡಿ ಉಗಮಿಸಿತು. ತಾಳೆಗರಿ ಮೇಲೆ ಮೋಡಿ ಬರೆವಣಿಗೆ ಬಹುಕಷ್ಟ ಸಾಧ್ಯ. ಹಾಡುಗಳನ್ನು ಮಂಗಳಾರತಿ ಪದಗಳನ್ನು ಬರೆದು ಕೊಳ್ಳುವುದರ ಜೊತೆಗೆ ದೈನಂದಿನ ವೆಚ್ಚದ ವಿವರಗಳನ್ನು ಕಾಗದದಲ್ಲಿ ಬರೆದಿರುತ್ತಾರೆ. ಕಾಗದದ ಮೇಲಿನ ಬರೆವಣಿಗೆ ಇಂದು ಎಷ್ಟೇ ವೈವಿಧ್ಯಗಳಿದ್ದರೂ ಬರೆಯಲು ಮತ್ತು ಕಲಿಯಲು ಮುದ್ರಣಲಿಪಿಯೇ ಆಧಾರವಾಗಿದೆ. ಹೀಗಾಗಿ ಒಬ್ಬ ಬಳಸಿದ ಲಿಪಿಯನ್ನು ಇನ್ನೊಬ್ಬ ಬಳಸಬಹುದು ಅಥವಾ ಬಿಡಬಹುದು. ಯಾರೇ ಅಕ್ಷರಗಳನ್ನು ಗುಂಡಗೆ ಬರೆಯಲಿ ಅದು ಸರ್ಕಾರಿ ನಿಗದಿತ ಲಿಪಿಗೆ ಸಮೀಪವಿರಬೇಕು. ಹೀಗಾಗಿ ಕಾಗದದ ಮೇಲಿನ ಬರೆವಣಿಗೆ ತಾಳೆಗರಿ ಮೇಲಿನ ಲಿಪಿಗಿಂತ ಭಿನ್ನವಾಗಿದೆ.

ಬೆರಳಚ್ಚು, ಕಂಪ್ಯೂಟರ್

ಬರೆವಣಿಗೆಯ ಬಳಕೆ ಜಾಸ್ತಿಯಾದಂತೆ ಕಾಗದ ಪತ್ರಗಳು ಹಾಗೂ ದಾಖಲೆಗಳು ಸುಂದರವಾಗಿರಬೇಕೆಂಬ ಬಯಕೆಯೂ ಹೆಚ್ಚಿತು. ಬರೆವಣಿಗೆಯನ್ನು ಕೆಲವರು ಗುಂಡಗೆ ಬರೆಯುತ್ತಿದ್ದರು. ಕೆಲವರು ಬರೆದಿದ್ದು ಅರ್ಥವಾಗುತ್ತಿರಲಿಲ್ಲ. ಈ ಕಾರಣಗಳಿಂದ ಆವಿಷ್ಕಾರವಾದದ್ದೇ ಬೆರಳಚ್ಚು ಯಂತ್ರ. ಇದರಲ್ಲಿ ಕೀಲಿಮಣೆಯಿದ್ದು ಅದರಲ್ಲಿ ಇಂತಹ ಕೀಲಿ ಒತ್ತಿದರೆ ಇಂತಹದೇ ಅಕ್ಷರ ಮೂಡುತ್ತದೆ ಎಂದು ನಿಗದಿಪಡಿಸಿರುತ್ತಾರೆ. ಇಂಗ್ಲೀಷ್ ಕೀಲಿಮಣೆಯಲ್ಲಿ ಚಿಕ್ಕ ದೊಡ್ಡ ಅಕ್ಷರಗಳು ಮೂಡಿಸಲು ಕೆಲವು ಅನುಕೂಲಗಳನ್ನು ಕಲ್ಪಿಸಿರುತ್ತಾರೆ. ಕೀಲಿಮಣೆಯ ಕೀಲಿಯೊಂದನ್ನು ಒತ್ತಿದ್ದಾಗ ಕೀಲಿಯ ಅಕ್ಷರವು ಬಣ್ಣದ ಬಟ್ಟೆಯ ಪಟ್ಟಿಗೆ ಬಡಿಯುತ್ತದೆ. ಆ ಬಟ್ಟೆಯ ಹಿಂಬದಿಯ ಕಾಗದದಲ್ಲಿ ಅಕ್ಷರ ಮೂಡುತ್ತದೆ. ವೇಗವಾಗಿ ಬೆರಳಚ್ಚು ಮಾಡಲು ಅಭ್ಯಾಸ ಬೇಕು. ಬೆರಳಚ್ಚು ಯಂತ್ರದಲ್ಲಿ ಕನ್ನಡ ಅಕ್ಷರಗಳನ್ನು ಜೋಡಿಸಿದಾಗ ಕೆಲವು ಬದಲಾವಣೆ ಮಾಡಿಕೊಳ್ಳಲೇ ಬೇಕಾಯಿತು. ಕೆಲವು ಒತ್ತಕ್ಷರಗಳಿಗೆ ತಲೆಕಟ್ಟು ಇರಲಿಲ್ಲ. ಉದಾ. ಭ, ಝ, ಕಾರಕ್ಕೆ ಕೀಲಿ ಇರಲಿಲ್ಲ. ಬೇರೆ ಬೇರೆ ಚಿಹ್ನೆಗಳ ಸಂಯೋಜನೆಯಿಂದ ಇದನ್ನು ಪಡೆಯಬೇಕಿತ್ತು. ಹಾಗೆಯೇ ಕಾಗುಣಿತಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡು ಬಂದವು. ಜನರು ಅವನ್ನು ಅನಿವಾರ್ಯವೆಂದು ಸ್ವೀಕರಿಸಿದ್ದರು.

ಇತ್ತೀಚೆಗೆ ಈ ಬೆರಳಚ್ಚು ಯಂತ್ರದ ಸ್ಥಾನವನ್ನು ಕಂಪ್ಯೂಟರ್ ಪಡೆದುಕೊಳ್ಳುತ್ತಿದೆ. ಇದರಲ್ಲಿ ಕೀಲಿಮಣೆ, ಸ್ವೀಕರಣ ಘಟಕ, ತೆರೆ ಮತ್ತು ಮುದ್ರಣ ಎಂಬ ನಾಲ್ಕು ಪ್ರತ್ಯೇಕ ಘಟಕಗಳಿರುತ್ತವೆ. ಇದರ ಕೀಲಿಮಣೆಯು ಬೆರಳಚ್ಚು ಯಂತ್ರದ ಪರಿಷ್ಕೃತ ರೂಪ. ಇದರಲ್ಲಿನ ಕೀಲಿಗಳನ್ನು ಒತ್ತಿದರೆ ಕೀಲಿಮಣೆಗೆ ಅಳವಡಿಸಿರುವ ತೆರೆಯ ಮೇಲೆ ಒತ್ತಿದ ಅಕ್ಷರ ಮೂಡುತ್ತದೆ. ಈ ಒತ್ತಿದ ಅಕ್ಷರವನ್ನು ಬೇಡವಾದಲ್ಲಿ ತೆಗೆಯಲು, ಹೆಚ್ಚುವರಿ ಅಕ್ಷರವನ್ನು ಸೇರಿಸಲು ಇದರಲ್ಲಿ ಅವಕಾಶವಿದೆ. ಯಾವ ರೀತಿಯ ಅಕ್ಷರ ವಿನ್ಯಾಸವನ್ನು ಇದು ಒಳಗೊಂಡಿರುತ್ತದೆಯೋ ಅದರಲ್ಲಿನ ಯಾವುದೇ ಮಾದರಿ ಅಕ್ಷರವನ್ನು ಕೀಲಿಮಣೆಯ ಸಹಾಯದಿಂದ ಪಡೆಯಬಹುದು. ಇದನ್ನು ಕಾಗದದ ಮೇಲೆ ಪಡೆಯಲು ಮುದ್ರಣಯಂತ್ರದ ಸಹಾಯ ಬೇಕು.

ಅಧ್ಯಾಯ - ೧೦

ಸಂಜ್ಞಾ ಲಿಪಿ

ಸಂಜ್ಞೆಗಳ ಮೂಲಕ ವಿವರ ನೀಡುವ ಸಂಕೇತಗಳು ಸಂಜ್ಞಾಲಿಪಿಯೆನಿಸಿಕೊಳ್ಳುತ್ತವೆ. ಇವು ಬಣ್ಣದ ದೀಪಗಳಿರಬಹುದು, ಬಣ್ಣದ ವಸ್ತುಗಳಿರಬಹುದು. ಒಟ್ಟಿನಲ್ಲಿ ಫಲಕದ ಮೇಲೆ ಗುರುತು ಮಾಡಿದ ವಸ್ತುಗಳಾಗಿರುತ್ತವೆ. ವಾಹನಗಳ ಚಾಲಕರಿಗಾಗಿ ಕೆಲವು ಸಂಕೇತಗಳಿದ್ದರೆ ಪಾದಚಾರಿಗಳಿಗಾಗಿ ಕೆಲವು ಸಂಕೇತಗಳಿರುತ್ತವೆ. ಈ ಚಿಹ್ನೆಗಳು ಲಿಪಿಜ್ಞಾನವಿರುವವರಿಗೂ, ಇಲ್ಲದವರಿಗೂ ಒಂದೇ. ಈ ಚಿಹ್ನೆಗಳನ್ನು ಅನುಸರಿಸಿ ನಡೆಯದವನು ತಾನು ಮುಟ್ಟಬೇಕಾದ ಗುರಿ ಮುಟ್ಟದೆ ಅಪಾಯಕ್ಕೀಡಾಗುತ್ತಾನೆ. ಹೀಗಾಗಿ ಈ ಚಿಹ್ನೆಗಳನ್ನು ಆತ ಎಚ್ಚರಿಕೆಯಿಂದ ಗಮನಿಸಿ ಅರ್ಥೈಸಿಕೊಂಡು ನಡೆಯುತ್ತಾನೆ. ಹೀಗಾಗಿ ಲಿಪಿಯ ಬದಲಿಗೆ ಇಲ್ಲಿ ಸಂಜ್ಞಾಸಂಕೇತಗಳು ಬಳಕೆಯಾಗಿವೆ.

ಮೂಕರಿಗೆ ಮತ್ತು ಕಿವುಡರಿಗೆ ಬೆರಳಿನ ಸಂಜ್ಞೆಗಳ ಮೂಲಕ ಭಾಷೆಯನ್ನು ಕಲಿಸಲು ಪ್ರಯತ್ನಿಸಿರುತ್ತಾರೆ. ಇಲ್ಲಿ ಬೆರಳುಗಳನ್ನು ಮಡಚಿ ತೆರೆಯುವುದು, ಆಡಿಸುವುದು, ಕೈಗಳನ್ನು ಮೇಲೆತ್ತುವುದು, ಈ ಮೂಲಕ ಅವರಿಗೆ ಅರ್ಥವಾಗುವಂತೆ ಸಂಜ್ಞೆಗಳ ಬಳಕೆಯಾಗುತ್ತದೆ. ಇದೇ ಬಗೆಯ ಸಂಜ್ಞೆಗಳನ್ನು ಷೇರು ಬಜಾರುಗಳಲ್ಲಿಯೂ ಕಾಣುತ್ತೇವೆ.

ಭರತನಾಟ್ಯದಲ್ಲಿನ ಸಂಜ್ಞೆಗಳನ್ನು ಮುದ್ರೆಗಳೆಂದು ಕರೆಯುತ್ತೇವೆ. ಇಲ್ಲಿ ಕಣ್ಣುಗಳ ಗುಡ್ಡೆಗಳನ್ನು ಆಡಿಸುವುದು, ಕೈಗಳನ್ನು ಹಾಗೂ ಕೈ ಬೆರಳುಗಳನ್ನು ಬೇರೆ ಬೇರೆ ಆಕಾರಕ್ಕೆ ಮಡಚಿ ತೆರೆದು ಪ್ರೇಕ್ಷಕರಿಗೆ ತಾವು ಅಭಿನಯಿಸುತ್ತಿರುವ ವಸ್ತುವಿನ ವಿವರವನ್ನು ನೀಡಲು ಪ್ರಯತ್ನಿಸಿರುತ್ತಾರೆ. ನವರಸಗಳನ್ನು ಈ ಮುದ್ರೆ ಹಾಗೂ ಮುಖಭಾವದ ಮೂಲಕ ಅಭಿನಯಿಸಿ ಪ್ರದರ್ಶಿಸಿರುತ್ತಾರೆ.

ಬ್ರೈಲ್ ಲಿಪಿ

ಕಣ್ಣು ಕಾಣದವರಿಗಾಗಿ ಈ ಲಿಪಿಯನ್ನು ಬ್ರೈಲ್ ಎಂಬುವನು ರೂಪಿಸಿದ, ಹೀಗಾಗಿ ಅವನ ಹೆಸರನ್ನೇ ಈ ಲಿಪಿಗೆ ಇಡಲಾಗಿದೆ. ಇಲ್ಲಿ ಮಾಮೂಲಿ ಬರೆವಣಿಗೆ ಅಥವಾ ಲಿಪಿಯ ಬಳಕೆಯಿರುವುದಿಲ್ಲ. ಅದಕ್ಕೆ ಬದಲಾಗಿ ಚುಕ್ಕೆಗಳ ಮನೆಗಳುಳ್ಳ ಆಯತಾಕಾರದ ಮನೆಗಳನ್ನು ಮೂಲವಾಗಿ ಹೊಂದಿರುವ ತಗಡಿನ ಮಧ್ಯೆ ದಪ್ಪ ಕಾಗದವನ್ನು ಇರಿಸಿ ಚುಕ್ಕೆಗಳನ್ನು ಚುಚ್ಚುತ್ತಾರೆ. ಹೀಗೆ ಚುಚ್ಚುವಾಗ ಮೊದಲ ಚುಕ್ಕೆಯನ್ನು ಚುಚ್ಚಿದರೆ 'ಎ' ಎಂದೂ, ಮೊದಲ ಎರಡು

ಚುಕ್ಕೆಗಳನ್ನು ಚುಚ್ಚಿದರೆ 'ಬಿ' ಎಂದೂ ಓದಬೇಕಾಗುತ್ತದೆ. ಹೀಗೆ ಆರು ಚುಕ್ಕೆಗಳನ್ನು ಸ್ಥಾನಪಲ್ಲಟದಿಂದ ಚುಚ್ಚಿ ನಿರ್ದಿಷ್ಟ ಸ್ಥಾನವನ್ನು ಗುರುತಿಸಿದಾಗ ಆ ಚುಕ್ಕೆಗಳಿಗೆ ನಿರ್ದಿಷ್ಟ ಅಕ್ಷರದ ಸ್ಥಾನ ಲಭ್ಯವಾಗುತ್ತದೆ. ಈ ಉಬ್ಬು ಚುಕ್ಕೆಗಳನ್ನು ಕಣ್ಣಿಲ್ಲದವರು ಮುಟ್ಟುವುದರ ಮೂಲಕ ಅಕ್ಷರವನ್ನು ಗುರುತಿಸುತ್ತಾರೆ. ಅಂಕೆಗಳಿಗೂ ಕೂಡ ಇದೇ ರೀತಿ ಚುಕ್ಕೆಗಳನ್ನು ನಿರ್ದಿಷ್ಟವಾಗಿ ಚುಚ್ಚುವುದರ ಮೂಲಕ ಗುರುತಿಸುತ್ತಾರೆ.

ಮಾರ್ಸ್ ಕೋಡ್

ಇದು ದೂರತಂತಿ ಸಂದೇಶ ಭಾಷೆ. ಇಲ್ಲಿ ಶಬ್ದವೇ ಪ್ರಧಾನ. ಮಾರ್ಸ್ ಎಂಬುವವನು ಈ ಸಂಕೇತ ಭಾಷೆಯನ್ನು ರೂಪಿಸಿದ. ಹೀಗಾಗಿ ಅವನ ಹೆಸರನ್ನೇ ಇಡಲಾಗಿದೆ. ಈಗೀಗ ಇದರ ಬಳಕೆ ಕಡಿಮೆಯಾಗಿದೆಯಾದರೂ, ಹಿಂದೆ ಇದು ದೂರ ಪ್ರದೇಶಗಳಿಗೆ ಪ್ರಮುಖ ಸಂಪರ್ಕವಾಗಿತ್ತು. ಈ ಶಾಬ್ದಿಕ ಭಾಷೆಯನ್ನು ಸೃಷ್ಟಿಸಲು ಸಂಕೇತಗಳನ್ನು ತಿಳಿದಿರಬೇಕಿತ್ತು. ಸಂಕೇತವನ್ನು ಕಳುಹಿಸುವ ವ್ಯಕ್ತಿ ಇಂಗ್ಲೀಷಿನ ೨೬ ಅಕ್ಷರಗಳಿಗೆ ಒಂದೊಂದಕ್ಕೂ ಒಂದೊಂದು ಶಾಬ್ದಿಕ ಸಂಕೇತವನ್ನು ಒತ್ತಿದಾಗ, ಸಂದೇಶವನ್ನು ಪಡೆದುಕೊಳ್ಳುವ ಕಡೆ ಅದು ಟಿಕ್ ಟಿಕ್ ಶಬ್ದವಾಗಿ ಮಾರ್ಪಡುತ್ತಿತ್ತು. ಹೀಗೆ ಸಂದೇಶವನ್ನು ಗ್ರಹಿಸಿದ ವ್ಯಕ್ತಿ ಅದನ್ನು ಇಂಗ್ಲೀಷ್ ಶಬ್ದವಾಗಿ ಬರೆದುಕೊಳ್ಳುತ್ತಿದ್ದ. ಎಷ್ಟು ಸಾರಿ ಗುಂಡಿ ಒತ್ತಿದ ಎಂಬುದರ ಮೇಲೆ ಅಕ್ಷರದ ಉಚ್ಚಾರ ನಿರ್ಧಾರವಾಗುತ್ತದೆ.

ಧಾರ್ಮಿಕ ಚಿಹ್ನೆ

ಧಾರ್ಮಿಕ ಚಿಹ್ನೆಗಳು ಶುದ್ಧ ಬರೆವಣಿಗೆಯಲ್ಲದಿದ್ದರೂ ಅವುಗಳ ಬಳಕೆಯಿಂದ ಅವು ಭಾವಚಿಹ್ನೆಗಳಾಗಿ ಕಾರ್ಯ ನಿರ್ವಹಿಸುತ್ತವೆ. ಜನಸಮುದಾಯವನ್ನು ಗುರುತಿಸುವಲ್ಲಿ ಈ ಧಾರ್ಮಿಕ ಚಿಹ್ನೆಗಳ ಪಾತ್ರ ಬಹು ಮುಖ್ಯ. ಮನೆಗಳ ಬಾಗಿಲು ಅಥವಾ ಪೌಳಿಗಳ ಮೇಲೆ, ದೇವಾಲಯದ ಗೋಡೆ, ಬಾಗಿಲುಗಳ ಮೇಲೆ ಈ ಚಿಹ್ನೆಗಳನ್ನು ನಮೂದಿಸಿದರೆ ಇವು ಇಂತಹ ಸಮುದಾಯಕ್ಕೆ ಸೇರಿದ ದೇವಾಲಯಗಳೆಂದು ಗುರುತಿಸಬಹುದು. ಕರ್ನಾಟಕದಲ್ಲಿನ ಶಿಲಾಶಾಸನಗಳಲ್ಲಿಯೂ ಚಿಹ್ನೆಗಳು ಪ್ರಭಾವವನ್ನು ಬೀರಿವೆ. ಶೈವಶಾಸನಗಳಾದಲ್ಲಿ ಶಿವಲಿಂಗ, ನಂದಿ, ಅದನ್ನು ಪೂಜಿಸುತ್ತಿರುವ ಪೂಜಾರಿ, ವೈಷ್ಣವ ಶಾಸನಗಳಾದಲ್ಲಿ ಶಂಖಚಕ್ರಗಳ ಜೊತೆಗೆ ಮೂರು ನಾಮ, ಜೈನಶಾಸನವಾದಲ್ಲಿ ಮುಕ್ಕೊಡೆ ಕೆಳಗೆ ಕುಳಿತ ಜಿನಬಿಂಬ, ಹೀಗೆ ಧಾರ್ಮಿಕ ಚಿಹ್ನೆಗಳನ್ನು ಕೆತ್ತಿರುತ್ತಾರೆ. ದೇವಾಲಯಗಳಲ್ಲಿಯೂ ಸ್ವಲ್ಪ ಮಟ್ಟಿಗೆ ಈ ಬಗೆಯ ಚಿಹ್ನೆಗಳನ್ನು ಬಳಸಿರುತ್ತಾರೆ. ಇಲ್ಲಿ ವಿಗ್ರಹಗಳು ಈ ಚಿಹ್ನೆಗಳ ಕಾರ್ಯವನ್ನು ಮಾಡುತ್ತದೆ. ದೇವಾಲಯದ ಗೋಪುರದಲ್ಲಿ ಬಸವನ ವಿಗ್ರಹವಿದ್ದರೆ ಅದು ಶೈವ ದೇವಾಲಯವೆಂದೂ, ಸಿಂಹದ ಶಿಲ್ಪವಿದ್ದಲ್ಲಿ ಅದು ಶಕ್ತಿ ದೇವಾಲಯವೆಂದೂ ಗುರುತಿಸುತ್ತೇವೆ. ಹಾಗೆಯೇ ವ್ಯಕ್ತಿಗಳು ತಮ್ಮ ಹಣೆಯ ಮೇಲೆ ಧರಿಸುವ ಲಾಂಛನದಿಂದಲೂ ಅವರ ಮತ, ಉಪಮತವನ್ನು ಗುರುತಿಸಬಹುದು.

ಹಸಿರು ನಿಶಾನೆಯಲ್ಲಿ ಚಂದ್ರನ ಮೇಲೆ ನಕ್ಷತ್ರವಿದ್ದಲ್ಲಿ ಅದು ಮುಸಲ್ಮಾನರ ಧಾರ್ಮಿಕ ಚಿಹ್ನೆಯಾಗುತ್ತದೆ. ಎಲ್ಲೆಲ್ಲಿ ಈ ಚಿಹ್ನೆ ಬಳಸಿರುತ್ತಾರೆ, ಅದು ಅವರಿಗೆ ಸಂಬಂಧಿಸಿದ ಮಸೀದಿ, ದರ್ಗಾ, ಮನೆ ಎಂದು ಗುರುತಿಸಲಾಗುತ್ತದೆ. ಕ್ರಾಸ್ ಚಿಹ್ನೆಯು ಕ್ರೈಸ್ತರ ಧಾರ್ಮಿಕ ಚಿಹ್ನೆಯಾಗಿದ್ದು ಇದನ್ನು ಬಳಸುವೆಡೆಯಲ್ಲೆಲ್ಲಾ ಇವರ ಪ್ರಭಾವವನ್ನು ಕಾಣಬಹುದಾಗಿದೆ. ಕ್ರಾಸ್‌ನಲ್ಲಿರುವ ಒಳಭೇದಗಳಿಂದ ಇದನ್ನು ಸಿರಿಯನ್, ಲ್ಯಾಟಿನ್, ಪ್ರಾಟೆಸ್ಟಂಟ್ ಮುಂತಾಗಿ ಗುರುತಿಸಬಹುದಾಗಿದೆ. ಹೀಗೆ ಧಾರ್ಮಿಕ ಚಿಹ್ನೆಗಳು ಬರೆಹಗಳಲ್ಲದಿದ್ದರೂ ಸೀಮಿತ ಅರ್ಥದಲ್ಲಿ ಬರೆಹದ ಕಾರ್ಯವನ್ನು ಮಾಡುತ್ತವೆ.

ಶೀಘ್ರಲಿಪಿ/ಷಾರ್ಟ್‌ಹ್ಯಾಂಡ್

ವ್ಯಾವಹಾರಿಕ ಬರೆವಣಿಗೆ ಹೆಚ್ಚಾದಂತೆ ಕೆಲಸದ ಒತ್ತಡದಲ್ಲಿ ಬರೆವಣಿಗೆ ನಿಧಾನವಾಗ ತೊಡಗಿತು. ಮುಖ್ಯವಾಗಿ ಅಧಿಕಾರಸ್ಥರು ಹೇಳುವುದನ್ನು ಬರೆದುಕೊಂಡು ಬೆರಳಚ್ಚು ಮಾಡಬೇಕಿತ್ತು. ಮಾತನಾಡುವ ವೇಗಕ್ಕೆ ಬೆರಳಚ್ಚು ಬರೆವಣಿಗೆಯ ಗತಿ ಸಾಗುತ್ತಿರಲಿಲ್ಲ. ಇಂತಹ ಸಮಸ್ಯೆಯನ್ನು ಬಗೆಹರಿಸಲು ಸೃಷ್ಟಿಸಿದ್ದು ಶೀಘ್ರಲಿಪಿ. ಪಿಟ್ಸ್‌ಮನ್ ಎಂಬುವವನು ಇದನ್ನು ಸೃಷ್ಟಿಸಿದ. ಈ ಬರೆಹದಲ್ಲಿ ಒಂದೊಂದು ಪದಕ್ಕೆ ಒಂದೊಂದು ಚಿಹ್ನೆಯಿರುತ್ತದೆ. ಚಿಹ್ನೆಯನ್ನು ಪೆನ್ಸಿಲ್ಲಿನಲ್ಲಿ ಒತ್ತಿ ಅಥವಾ ತೇಲಿಸಿ ಬರೆಯುವ ಸರಳರೇಖೆ, ವಕ್ರರೇಖೆ, ಚುಕ್ಕೆಗಳಿಂದ ಸೂಚಿಸಿರುತ್ತಾರೆ. ಮೊದಲು ಇದು ಇಂಗ್ಲೀಷ್ ಭಾಷೆಗೆ ಮಾತ್ರ ಸೀಮಿತವಿತ್ತು. ಈಗ ಎಲ್ಲಾ ಭಾಷೆಗಳಲ್ಲಿಯೂ ಬಳಸುತ್ತಾರೆ. ಕನ್ನಡದಲ್ಲಿಯೂ ಈ ಶೀಘ್ರಲಿಪಿಯ ಬರೆಹವಿದ್ದು ಇದು ಇಂಗ್ಲೀಷಿನ ಶೀಘ್ರಲಿಪಿಯ ಮಾದರಿಯಲ್ಲಿಯೇ ಇದೆ.

ರಸ್ತೆಯ ಸಂಕೇತಗಳು ಮತ್ತು ಮೋಟಾರ್ ಸಿಗ್ನಲ್‌ಗಳು

ರಸ್ತೆಗಳಲ್ಲಿ ಸಂಚಾರದ ಒತ್ತಡ ಹೆಚ್ಚುತ್ತಿದ್ದಂತೆ ಕೆಲವು ನಿಯಮಗಳನ್ನು ಜಾರಿಗೆ ತಂದಿರುತ್ತಾರೆ. ಅವುಗಳಲ್ಲಿ ಸಂಚರಿಸುವ ವಾಹನಗಳು ಅನುಸರಿಸಬೇಕಾದ ನಿಯಮಗಳನ್ನು ನಿಗದಿತ ಸ್ಥಳಗಳಲ್ಲಿ ಸೂಚಿಸಿರುತ್ತಾರೆ. ಈ ಬರೆಹಗಳು ಬಹುತೇಕ ಅಕ್ಷರರಹಿತ ಚಿಹ್ನೆಯಲ್ಲಿರುವುದೇ ಹೆಚ್ಚು. ಈ ಚಿಹ್ನೆಗಳು ಓದು ಬರುವವರಿಗೂ, ಓದು ಬಾರದವರಿಗೆ ಎಲ್ಲಾ ಒಂದೇ. ಈ ಚಿಹ್ನೆಗಳನ್ನು ಚಾಲಕನು ತಾನು ಡ್ರೈವಿಂಗ್ ಲೈಸನ್ಸ್ ಪಡೆಯುವುದಕ್ಕೆ ಮೊದಲು ತಿಳಿದಿರಬೇಕು. ಇದರಲ್ಲಿ ಸೂಚಿಸಿರುವಂತೆ ವಾಹನವನ್ನು ಓಡಿಸಿದಲ್ಲಿ ಸುರಕ್ಷಿತವಾಗಿ ಮುಟ್ಟಬೇಕಾದ ಸ್ಥಳವನ್ನು ತಲುಪಬಹುದು. ಈ ಚಿಹ್ನೆಗಳಲ್ಲಿ ರಸ್ತೆಗಳಲ್ಲಿ ಸೇತುವೆಗಳಿರುವುದನ್ನು, ಉಬ್ಬುಗಳಿರುವುದನ್ನು, ಕೂಡುರಸ್ತೆ, ಜನವಸತಿ ಸೂಚಿಸಲು, ಹುಡುಗನು ರಸ್ತೆ ದಾಟುತ್ತಿರುವ ಚಿತ್ರ, ನಿಶ್ಶಬ್ದದ ವಾತಾವರಣ ಸೂಚಿಸಲು, ಹಾರ್ನ್ ಮಾಡದಿರುವಂತೆ ತಿರುವುಗಳು, ಪೆಟ್ರೋಲ್ ಬಂಕ್, ದೂರವಾಣಿ ಸೌಲಭ್ಯ ಮುಂತಾದವುಗಳನ್ನು ಸೂಚಿಸಲು ಸೂಚನಾ ಚಿಹ್ನೆಗಳ ಫಲಕಗಳಿರುತ್ತವೆ. ಇಲ್ಲಿ ಈ ಸೂಚನಾ ಫಲಕಗಳು ಭಾಷೆಯ ಸಂಕೇತವನ್ನು ನೀಡುತ್ತವೆ. ಹಾಗೆಯೇ ಈ ಬರೆಹಗಳು ವರ್ಣಲಿಪಿಯಲ್ಲದಿದ್ದರೂ ಸಂಕೇತಗಳನ್ನು ನಿರ್ದಿಷ್ಟ ವ್ಯಕ್ತಿಗಳಿಗೆ ಮುಟ್ಟಿಸುತ್ತವೆ.

ಇವೆಲ್ಲಾ ಹಗಲು ಪ್ರಯಾಣದಲ್ಲಾಯಿತು. ರಾತ್ರಿ ಪ್ರಯಾಣದಲ್ಲಿ ಕೆಲವು ಸೂಚನೆಗಳಿವೆ. ಇವೂ ಕೂಡ ಸಂಕೇತ ಭಾಷೆಯೇ. ಆದರೆ ಇಲ್ಲಿ ಬಳಸುವ ಮಾಧ್ಯಮ ಮಾತ್ರ ದೀಪಗಳು. ಗಾಡಿಯ ಹಿಂದೆ ಇರುವ ಕೆಂಪು ದೀಪಗಳು ಅಪಾಯದ ಸಂಕೇತವಾಗಿದ್ದರೆ ಹಿಂದೆ ಬರುತ್ತಿರುವ ಗಾಡಿಗೆ ದಾರಿ ಬಿಟ್ಟು ಕೊಡಲು ಸಂಕೇತ ದೀಪವನ್ನು ತೋರಿಸುವ ಮೂಲಕ ದಾರಿ ಸುಗಮಗೊಳಿಸುತ್ತಾನೆ. ಇಲ್ಲಿ ಬೆಳಕು ಭಾಷೆಯ ಕಾರ್ಯವನ್ನು ಬೆಳಕಿನ ಸಂಕೇತದ ಮೂಲಕ ಮಾಡುತ್ತದೆ.

ಜನದಟ್ಟಣೆಯಿರುವಲ್ಲಿ ರಸ್ತೆ ದಾಟಬೇಕಾದಲ್ಲಿ ಎಲ್ಲರಿಗೂ ಅನುಕೂಲವಾಗುವಂತೆ ಕೂಡುರಸ್ತೆಗಳಲ್ಲಿ ಮತ್ತು ಅಲ್ಲಲ್ಲಿ ರಸ್ತೆಯಲ್ಲಿ ಸಂಜ್ಞಾದೀಪಗಳನ್ನು ಅಳವಡಿಸಿರುತ್ತಾರೆ. ಪಟ್ಟಣಗಳಲ್ಲಿ ಇವು ಜಾಸ್ತಿ. ಇಂತಹ ಕಡೆ ನಿಲ್ಲಿ ಎಂಬಂತೆ ಸೂಚಿಸಲು ಕೆಂಪು ದೀಪವನ್ನೂ, ಹೊರಡಿ ಎಂದು ಸೂಚಿಸಲು ಹಸಿರು ದೀಪವನ್ನೂ, ಸಿದ್ಧವಾಗಿರಿ ಎಂಬುದನ್ನು ಸೂಚಿಸಲು ಹಳದಿ ದೀಪವನ್ನೂ ಸೂಚಿಸಿರುತ್ತಾರೆ. ಇದು ಎಲ್ಲರಿಗೂ ತಿಳಿಯುವ ಸಂಜ್ಞೆಯಾಗಿರುತ್ತದೆ. ಈ ಬಗೆಯ ದೀಪಗಳು ರೈಲ್ವೆ ನಿಲ್ದಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲಿ ಹಾಕಿರುತ್ತಾರೆ.


ಕೆಲವು ಪ್ರದೇಶಗಳಲ್ಲಿ ಬಣ್ಣಗಳು ಈ ಕಾರ್ಯವನ್ನು ಮಾಡುತ್ತವೆ. ಅಪಾಯದ ಸಂಕೇತ ಸೂಚಿಸಲು ಕೆಂಪು ಬಟ್ಟೆ ಅಥವಾ ಬಣ್ಣವನ್ನು ಸೂಚಿಸುತ್ತಾರೆ. ಚಿತ್ರಕಾರರು ವ್ಯಕ್ತಿಗಳ ಗುಣಗಳನ್ನು ಲಕ್ಷಿಸಿ ಬಣ್ಣಗಳನ್ನು ಬಳಸಿರುತ್ತಾರೆ. ಹಳದಿ ಬಣ್ಣವು ಕಾಮನೆಯ ಸಂಕೇತವಾದರೆ ಶ್ವೇತ ವರ್ಣವು ಶಾಂತಿಯ ಸಂಕೇತವಾಗಿದೆ. ಮಿಲಿಟರಿಯಲ್ಲಿಯೂ ನಿಯೋಗ ಹೋಗಬೇಕಾದಲ್ಲಿ ಬಿಳಿಯ ಬಾವುಟವನ್ನು ಹಿಡಿಯುತ್ತಾರೆ. ರೈಲುಗಾಡಿ ಹೊರಡಬೇಕಾದಲ್ಲಿ ಹಸಿರು ಬಾವುಟ ಬೀಸಬೇಕು. ಇವಲ್ಲದೆ ದೇಶ ದೇಶಗಳ ಬಾವುಟಗಳಲ್ಲಿ ಬಣ್ಣಗಳು ಆ ದೇಶದ ಸಂಸ್ಕೃತಿಯ ಪ್ರತೀಕವಾಗಿ ಇರುತ್ತವೆ. ಇಲ್ಲೆಲ್ಲಾ ಬಣ್ಣಗಳು ಬಾವುಟಗಳು ಸಂಜ್ಞಾಲಿಪಿಯಾಗಿ ಅದರ ಮೂಲಕ ಭಾಷೆಯನ್ನು ಧ್ವನಿಸುತ್ತವೆ.

ನಾಟ್ಯಮುದ್ರೆಗಳು


ನಾಟ್ಯದಲ್ಲಿ ಸಂಗೀತ ಮತ್ತು ತಾಳಗಳು ಗೌಣ. ಅಲ್ಲಿ ಹೆಚ್ಚಿನ ಪ್ರಧಾನತೆಯನ್ನು ಪಡೆಯುವುದು. ಕೈ ಬೆರಳುಗಳನ್ನು ಮತ್ತು ಕಣ್ಣಾಲಿಗಳನ್ನು ಭಾವಕ್ಕೆ ತಕ್ಕಂತೆ ತೋರಿಸುವ ಸೂಚಿಗಳಿದ್ದು, ಇವನ್ನು ಮುದ್ರೆಗಳೆಂದು ಕರೆಯುತ್ತಾರೆ. ಈ ಮುದ್ರೆಗಳು ಎಲ್ಲರಿಗೂ ಅರ್ಥವಾಗುವುದಿಲ್ಲ. ನಾಟ್ಯ ಭಾಷೆಯನ್ನು ಬಲ್ಲವರಿಗೆ ಮಾತ್ರ ತಿಳಿಯುತ್ತದೆ. ಆದರೆ ಈ ಬಗೆಯ ಆಂಗಿಕ ಅಭಿನಯದಿಂದ ತಮ್ಮ ಅಭಿನಯದ ಭಾವವನ್ನು – ಪ್ರೇಕ್ಷಕರಿಗೆ ತಿಳಿಸುವಲ್ಲಿ ಯಶಸ್ವಿಯಾಗುತ್ತಾರೆ.

ಸಹಿ


ಬರೆಯುತ್ತಿದ್ದ. ತಾಮ್ರಶಾಸನಗಳಲ್ಲಿ ರಾಷ್ಟ್ರಕೂಟ ಧ್ರುವ, ಹರ್ಷವರ್ಧನ, ಹೊಯ್ಸಳ ನರಸಿಂಹನ ಸಹಿಗಳು ದೊರೆಯುತ್ತವೆ. ಇಲ್ಲೆಲ್ಲಾ ಲಿಪಿಯನ್ನು ಬಳಸಲಾಗಿದೆ. ವಿಜಯನಗರ ಶಾಸನಗಳಲ್ಲಿ ಹಂಪೆಯ ಅಧಿದೈವ 'ಶ್ರೀ ವಿರೂಪಾಕ್ಷ' ಎಂಬ ಸಹಿಯಲ್ಲದೆ ಮುಂದಿನ ಹಂತದಲ್ಲಿ 'ಶ್ರೀ ವೆಂಕಟಾದ್ರಿ' ಎಂಬ ಸಹಿಯೂ ದೊರೆಯುತ್ತದೆ. ಕಾಗದ ಬಳಕೆಗೆ ಬಂದ ಮೇಲೆಯೂ ಇದು ಮುಂದುವರಿಯುತ್ತದೆ. ಆದರೆ ಬ್ರಿಟೀಷರ ಆಗಮನದ ನಂತರ ಸಹಿ ಯಾರದೆಂದು ತಿಳಿಯಲಾರದಷ್ಟು ಗುಪ್ತವಾಗಿ ಗೀಚಿರುತ್ತಾರೆ. ಇದರ ಕೆಳಗೆ ಹೆಸರು ಬರೆದಲ್ಲಿ ಮಾತ್ರ ತಿಳಿಯುತ್ತದೆ. ಇಲ್ಲವಾದಲ್ಲಿ ಇಲ್ಲ. ಆದರೆ ಈ ಸಹಿಗೆ ಬಹು ಬೆಲೆಯೂ ಇರುತ್ತದೆ. ಹೀಗಾಗಿ ಈ ಪದ್ಧತಿ ಮುಂದುವರಿದಿದೆ. ಇಲ್ಲಿ ಬಳಸುವ ಲಿಪಿಗಳಲ್ಲಿ ಮೊದಲ ಅಕ್ಷರ ಇಲ್ಲವೆ ಅಂತ್ಯದ ಅಕ್ಷರವನ್ನು ಗುರುತಿಸಬಹುದಷ್ಟೆ. ಉಳಿದ ಅಕ್ಷರಗಳು ವಕ್ರರೇಖೆಗಳಾಗಿಯೋ, ಸರಳರೇಖೆಗಳಾಗಿಯೋ ಪರಿವರ್ತಿತವಾಗಿರುತ್ತವೆ.




ರಾಷ್ಟ್ರಕೂಟ ಧ್ರುವನ ಸಹಿ




ಹೊಯ್ಸಳ ಸೋಮೇಶ್ವರನ ಸಹಿ



ಹೊಯ್ಸಳ ನಾರಸಿಂಹನ ಸಹಿ




ಮಾರ್ಸ್‌ಕೋಡು




ಬ್ರೈಲ್ ಲಿಪಿ


ಅಜೆಟೆಕರ ಅಂಕೆಗಳು




ಮಾಯಾ ಜನರ ಅಂಕೆಗಳು




ಅಜೆಟೆಕರ ಚಿತ್ರ ಲಿಪಿ




ಮಾಯ ಜನರ ಚಿತ್ರ ಲಿಪಿ




ಕಾಗುಣಿತ


ಕ
ಕ ಕಾ ಕಿ ಕೀ ಕು ಕೂ ಕೇ ಕೈ ಕೋ ಕೌ
ಬ್ರಾಹ್ಮೀ
ಶಾತವಾಹನ
ಕದಂಬ
ಬಾದಾಮಿ ಚಲುಕ್ಯ
ರಾಷ್ಟ್ರಕೂಟ - ಪೂ
ರಾಷ್ಟ್ರಕೂಟ - ಉ
ಕಲ್ಯಾಣ ಚಾಲುಕ್ಯ
ವಿಜಯನಗರ
ವಿಜಯನಗರೋತ್ತರ
ಚ
ಚ ಚಾ ಚಿ ಚೀ ಚು ಚೂ ಚೇ ಚೈ ಚೋ ಚೌ
ಬ್ರಾಹ್ಮೀ
ಶಾತವಾಹನ
ಕದಂಬ
ಬಾದಾಮಿ ಚಲುಕ್ಯ
ರಾಷ್ಟ್ರಕೂಟ - ಪೂ
ರಾಷ್ಟ್ರಕೂಟ - ಉ
ಕಲ್ಯಾಣ ಚಾಲುಕ್ಯ
ವಿಜಯನಗರ
ವಿಜಯನಗರೋತ್ತರ


ಣ
ಣ ಣಾ ಣಿ ಣೀ ಣು ಣೂ ಣೇ ಣೈ ಣೋ ಣೌ
ಬ್ರಾಹ್ಮೀ
ಶಾತವಾಹನ
ಕದಂಬ
ಬಾದಾಮಿ ಚಲುಕ್ಯ
ರಾಷ್ಟ್ರಕೂಟ – ಪೂ
ರಾಷ್ಟ್ರಕೂಟ – ಉ
ಕಲ್ಯಾಣ ಚಾಲುಕ್ಯ
ವಿಜಯನಗರ
ವಿಜಯನಗರೋತ್ತರ
ತ
ತ ತಾ ತಿ ತೀ ತು ತೂ ತೇ ತೈ ತೋ ತೌ
ಬ್ರಾಹ್ಮೀ
ಶಾತವಾಹನ
ಕದಂಬ
ಬಾದಾಮಿ ಚಲುಕ್ಯ
ರಾಷ್ಟ್ರಕೂಟ – ಪೂ
ರಾಷ್ಟ್ರಕೂಟ – ಉ
ಕಲ್ಯಾಣ ಚಾಲುಕ್ಯ
ವಿಜಯನಗರ
ವಿಜಯನಗರೋತ್ತರ


ಪ
ಪ ಪಾ ಪಿ ಪೀ ಪು ಪೂ ಪೇ ಪೈ ಪೋ ಪೌ
ಬ್ರಾಹ್ಮೀ
ಶಾತವಾಹನ
ಕದಂಬ
ಬಾದಾಮಿ ಚಲುಕ್ಯ
ರಾಷ್ಟ್ರಕೂಟ - ಪೂ
ರಾಷ್ಟ್ರಕೂಟ - ಉ
ಕಲ್ಯಾಣ ಚಾಲುಕ್ಯ
ವಿಜಯನಗರ
ವಿಜಯನಗರೋತ್ತರ


ಮ
ಮ ಮಾ ಮಿ ಮೀ ಮು ಮೂ ಮೇ ಮೈ ಮೋ ಮೌ
ಬ್ರಾಹ್ಮೀ
ಶಾತವಾಹನ
ಕದಂಬ
ಬಾದಾಮಿ ಚಲುಕ್ಯ
ರಾಷ್ಟ್ರಕೂಟ - ಪೂ
ರಾಷ್ಟ್ರಕೂಟ - ಉ
ಕಲ್ಯಾಣ ಚಾಲುಕ್ಯ
ವಿಜಯನಗರ
ವಿಜಯನಗರೋತ್ತರ

ಬ್ರಾಹ್ಮಿಯಿಂದ ಜನ್ಯವಾದ ಭಾರತದ ಪ್ರಮುಖ ಲಿಪಿಗಳ ಪಟ್ಟಿಕೆ

1	ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ ಕ ಖ ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ ಯ ರ ಲ ವ ಶ ಷ ಸ ಹ ಳ
2	అ ఆ ఇ ఈ ఉ ఊ ఋ ఎ ఏ ఐ ఒ ఓ ఔ అం అః క ఖ గ ఘ ఙ చ ఛ జ ఝ ఞ ట ఠ డ ఢ ణ త థ ద ధ న ప ఫ బ భ మ య ర ల వ శ ష స హ ళ
3	அ ஆ இ ஈ உ ஊ எ ஏ ஐ ஒ ஓ ஔ அம் அஃ க · · · ங ச · ஜ · ஞ ட · · · ண த · · · ந ப · · · ம ய ர ல வ ழ ஷ ஸ ஹ ள
4	അ ആ ഇ ഈ ഉ ഊ ഋ എ ഏ ഐ ഒ ഓ ഔ അം അഃ ക ഖ ഗ ഘ ങ ച ഛ ജ ഝ ഞ ട ഠ ഡ ഢ ണ ത ഥ ദ ധ ന പ ഫ ബ ഭ മ യ ര ല വ ശ ഷ സ ഹ ള ക്ഷ ത്ര ജ്ഞ
5	ଅ ଆ ଇ ଈ ଉ ଊ ଋ ଏ ଐ ଓ ଔ ଅଂ ଅଃ କ ଖ ଗ ଘ ଙ ଚ ଛ ଜ ଝ ଞ ଟ ଠ ଡ ଢ ଣ ତ ଥ ଦ ଧ ନ ପ ଫ ବ ଭ ମ ଯ ର ଲ ଵ ଶ ଷ ସ ହ ଳ କ୍ଷ
6	অ আ ই ঈ উ ঊ ঋ এ ঐ ও ঔ অং অঃ ক খ গ ঘ ঙ চ ছ জ ঝ ঞ ট ঠ ড ঢ ণ ত থ দ ধ ন প ফ ব ভ ম য র ল ব শ ষ স হ ল ক্ষ ত্র জ্ঞ
7	अ आ इ ई उ ऊ ऋ ए ऐ ओ औ अं अः क ख ग घ ङ च छ ज झ ञ ट ठ ड ढ ण त थ द ध न प फ ब भ म य र ल व श ष स ह ळ क्ष त्र ज्ञ
8	ਅ ਆ ਇ ਈ ਉ ਊ ਰਿ ਏ ਐ ਓ ਔ ਅੰ ਅਃ ਕ ਖ ਗ ਘ ਙ ਚ ਛ ਜ ਝ ਞ ਟ ਠ ਡ ਢ ਣ ਤ ਥ ਦ ਧ ਨ ਪ ਫ ਬ ਭ ਮ ਯ ਰ ਲ ਵ ਸ਼ ਸ਼ ਸ ਹ ਲ਼ ਕਸ਼ ਤ੍ਰ ਗਿਅ
9	અ આ ઇ ઈ ઉ ઊ ઋ એ ઐ ઓ ઔ અં અઃ ક ખ ગ ઘ ઙ ચ છ જ ઝ ઞ ટ ઠ ડ ઢ ણ ત થ દ ધ ન પ ફ બ ભ મ ય ર લ વ શ ષ સ હ ળ ક્ષ ત્ર જ્ઞ
10	अ आ इ ई उ ऊ ऋ ए ऐ ओ औ अं अः क ख ग घ ङ च छ ज झ ञ ट ठ ड ढ ण त थ द ध न प फ ब भ म य र ल व श ष स ह ळ क्ष त्र ज्ञ
11	अ आ इ ई उ ऊ ऋ ए ऐ ओ औ अं अः क ख ग घ ङ च छ ज झ ञ ट ठ ड ढ ण त थ द ध न प फ ब भ म य र ल व श ष स ह ळ क्ष त्र ज्ञ
12	ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ ಕ ಖ ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ ಯ ರ ಲ ವ ಶ ಷ ಸ ಹ ಳ

1. ಕನ್ನಡ, 2. ತೆಲುಗು, 3. ತಮಿಳು, 4. ಮಳಿಯಾಳಂ, 5. ಒರಿಯಾ, 6. ಬಂಗಾಲಿ

7. ಹಿಂದಿ, 8. ಪಂಜಾಬಿ (ಗುರುಮುಖಿ) 9. ಗುಜರಾತಿ, 10. ಮರಾಠಿ, 11. ಸಂಸ್ಕೃತ

12. ಕನ್ನಡ

ಪುಸ್ತಕದಲ್ಲಿ ಬಳಸಿರುವ ಶಾಸನಗಳ ಪಠ್ಯಗಳು

ಪುಟ 70 ಭಟ್ಟಿಪ್ರೋಲು ಶಾಸನ
(EI.II. p.329)

ಅರಹದಿನಾನಂ ಗೋಠಿಯಾಮಜೂಸ ಚ ಷಮು
ಗೋ ಚ ತೇನ ಕಮಯೇನ ಕುಬಿರಕೋ ರಾಜಾ ಅಂಕಿ

ನೆಗಮಾ
ವಛೋ ಚಾಫೋ
ಜೇತೋ ಜಂಭೋ ತಿಸೋ
ರೇತೋ ಅಚಿನೋ ಷಭಿಕೋ
ಅಖಾಫೋ ಕೇಲೋ ಕೇಸೋ ಮಾಹೋ
ಸೆಟೋಛದಿಕೋ ಒಖಾಬೂಲೋ
ಸೋಣತರೋ ಸಮಣೋ
ಸಮಣದಾಷೋ ಸಾಮಕೋ
ಕಾಮುಕೋ ಚೀತಕೋ

ಪುಟ 88 ಲೋರಿಯ ನಂದಗಡ ಸ್ತಂಭ ಶಾಸನ
ಅಶೋಕ

I. ದೇವನಾಂಪಿಯೇ ಪಿಯದಸಿಲಾಜ ಹೇವಂ ಆಹಾ ಸಡುವೀಸತಿ
ವಸಾ ಅಭಿಸಿತೇನ ಮೇ ಇಯಂ
ದಮ್ಮ ಲಿಪಿ ಲಿಖಾಪಿತಾ ಹಿದತ ಪಾಲತೇ ದುಸಂಪಟಿಪಾದಯೇ ಅಂನತ ಅಗಾಯಾ ಧಮ್ಮ
ಕಾಮತಾಯ
ಅಗಾಯ ಪಲೀಖಾಯ ಅಗಾಯ ಸುಸೂಯಾಯಾ ಅಗೇನ ಭಯೇನಾ
ಅಗೇನ ಉಸಾಹೇನ ಏಸ ಚುಖೋ ಮಮ
ಅನುಸಥೀಯಾ ಧಂಪೇಖಾ ಧಂಮ ಕಾಮತಾ ಚ ಸುವೇ ಸುವೇ ವಾಧಿತಾ
ವಢೀಸತಿ ಚೇವಾ ಪುಲಿಸಾ ಪಿ ಚ ಮೇ
ಉಕಸಾ ಚ ಗೇವಯಾ ಚಾ ಮ ಝ ಮಾ ಚಾ ಅನುವಿ ಧೀಯಂತೀ
ಸಂಪಟಿ ಪಾದಯಂತಿ ಚಾ ಅಲಂ ಚ ಪಲಂ ಸಮಾದ ಪಯಿತ ವೇ।
ಹೇಮೇವ ಅಂತ ಮಹಾಮಾತಾಪಿ ಏಸಹಿ ವಿಧಿಯಾ
ಇಯಂ ಧಂಮೇನ ಪಾಲನಾ ಧಂ ಮೇನ ವಿಧಾನೇ
ಧಂಮೇನ ಸುಖಿಯನಾ
ಧಂ ಮೇನ ಗೋತೀ ತಿ.
II. ದೇವಾನಾಂ ಪಿಯೇ ಪಿಯದಸಿ ಲಾಜ ಹೇವಂ ಆಹಾ ಧಂಮೇ ಸಾಧೂ ಕಿಯಂ ಚು ಧಂಮೇ
ತಿ ಅಪಾಸಿನವೇ ಬಹು ಕಯಾನೇ
ದಯಾ ದಾನೇ ಸಚೇ ಸೋಚಯೇ
ಚಬು - ದಾನೇ ಪಿ ಮೇ ಬಹುವಿಧೇ ದಿಂನೇ ದು ಪದ ಚತುಪದೇಸು ಪಖಿ
ವಾಲಿ ಚಲೇಸು ವಿವಿಧೇ ಮೇ ಅನುಗದೇ ಕಟೇ ಆ ಪಾನ ದಾಖಿನಾಯೇ ಅಂನಾನಿ ಪಿ ಚ ಮೇ
ಬಹೂನಿ ಕಯಾನಾನಿ
ಕಟಾನಿ ಏ ತಾಯೇ ಮೇ ಅಠಾಯೇ ಇಯಂ ಧಂಮಲಿಪಿ ಲಿಖಾ ಪಿತಾ ಹೇವಂ ಅನುಪಟಿ
ಪಜಂತು ಚಿಲಂ ಥಿ ತಿಕಾ ಚ ಹೋತೂ ತೀತಿ
ಯೇ ಚ ಯೇವಂ ಸಂಪಟಿ ಪಜಾಸತೀ ಸುಕಟಂ ಕಛ್ಛತೀತಿ

III. ದೇವಾನಂಪಿಯೇ ಪಿಯದಸಿ ಲಾಜ ಹೇವಂ ಆಹಾ
    ಕಯಾನಂ ಮೇವ ದೇಖತಿ ಇಯಂ ಮೇ ಕಯಾನೇ ಕಟೇ ತಿ ನೋ ಮಿನ ಪಾಪಂ
ದೇಖತಿ ಇಯಂ ಮೇ ಪಾಪೇ ಕಟೇ ತಿ ಇಯಂ ವಾ ಆಸಿ ನವೇ ನಾಮಾ ತಿ
    ದುಪಟಿ ವೇಖೇ ಚುಖೋ ಏಸಾ ಹೇವಂ ಚುಖೋ ಏಸಾ ದೇಖಿಯೇ
ಇಮಾನಿ ಆಸಿನವ ಗಾಮೀನಿ ನಾಮ ಅಥ ಚದಂ ಇಯೇ ನಿಠೂಲಿಯೇ ಕೋಧೇ
    ಮಾನೇ ಇಸ್ಯ ಕಲಾನೇನ ವ ಹಕಂ
ಮಾ ಫಲಿಭಸಯಿಸಂ ಏಸ ಬಾಢಾ ದೇಖಿಯೇ ಇಯಂ ಮೇ ಹಿದತಿ ಕಾಯೇ
    ಇಯಂಮನ ಮೇ ಪಾಲತಿ ಕಾಯೇತಿ
IV. ದೇವಾನಂಪಿಯೇ ಪಿಯದಸಿ ಲಾಜ ಹೇವಂ ಆಹಾ ಸಡು ವೀಸತಿ
    ವಸ ಅಭಿಸಿತೇನ ಮೇ ಇಯಂ ಧಮ್ಮ ಲಿಪಿ ಲಿಖಾಪಿತಾ ಲಜುಕಾಮೇ
ಬಹೂಸು ಪಾನ ಸತ ಸಹಸೇಸು ಜನಸಿ ಆಯತಾ ತೇಸಂ ಯೇ '
    ಅಭಿಹಾಲೇ ವಾ ದಂಡೇ ವಾ ಅತ ಪತಿಯೇ ಮೇ ಕಟೇ ಕಿಂತಿ ಲಜೂಕಾ ಅಸ್ವಥ
ಅಭೀತಾ ಕಂಮಾನಿ ಪವತಯೇವು ಜನಸ ಜಾನಪದಸಾ ಹಿತ
    ಸುಖಂ ಉಪದಹೇವೂ ಅನುಗಹಿ ನೇವು ಚಾ ಸುಖೀಯನ ದುಖೀಯನಂ
ಜಾನಿಸಂತಿ ಧಂಮ ಯುತೇನ ಚ ವಿಯೋವದಿಸಂತಿ ಜನಂ ಜಾನಪದಂ
    ಕಿಂತಿ ಹಿದತಂ ಚ ಪಾಲತಂ ಚ ಆಲಾಧಯೇವು ತಿ ಲಜೂಕಾಪಿ ಲಘಂತಿ
ಪಟಿ ಚಲಿತವೇ ಮಂ ಪುಲಿಸಾನಿ ಪಿ ಮೇ ಛಂದಂನಾನಿ ಪಟಿ ಚಲಿ
    ಸಂತಿ ತೇ ಪಿಚ ಕಾನಿ ವಿಯೋವ ದಿಸಂತಿ ಯೇನ ಮಂ
    ಲಜೂಕಾ ಚಘಂತಿ ಆಲಾಧಯೇತವೇ
ಅಥಾ ಹಿ ಪಜಂ ವಿಯತಾಯೇ ಧಾತಿಯೇ ನಿಸಿಜಿತು ಅಸ್ವಥೇ ಹೋತಿ
    ವಿಯತ ಧಾತಿ ಚಘತಿ ಮೇ ಪಜಂ ಸುಖಂ ಪಲಿ ಹಟವೇತಿ
ಹೇವಂ ಮಮಾ ಲಜೂಕಾ ಕಟಾ ಜಾನಪದಸ ಹಿತಸುಖಾಯೇ
    ಯೇನ ಏತೇ ಅಭೀತಾ ಅಸ್ವಥ ಸಂತಂ ಅವಿಮನಾ ಕಂಮಾನಿ ಪವತಯೇವೂ.
ಏತೇನ ಮೇ ಲಜೂಕಾನಂ ಅಭಿಹಾಲೇ ವ ದಂಡೇವಾ ಅತ ಪತಿಯೇ
    ಕಟೇ ಛಿತಪಿಯೇ ಹಿ ಏಸಾ ಕಿಂತಿ ವಿಯೋಹಾಲ
    ಸಮತಾ ಚ ಸಿಯ ದಂಡ ಸಮತಾ ಚ
ಅವ ಇತೇ ಪಿ ಚ ಮೇ ಆವುತಿ ಬಂಧನ ಬಧಾನಂ ಮನಿ ಸಾನಂ
   ತಿಲಿತ ದಂಡಾನಂ ಪತ ವಧಾನಂ ತಿಂನಿ ದಿವಸಾನಿ ಮೇ
   ಯೋತೇ ದಿಂನೇ ನಾತಿಕಾ ವ ಕಾನಿ
ನಿಝು ಪಯಿಸಂತಿ ಜೀವಿತಾಯೇ ತಾನಂ ನಾಸಂತಂ ವಾ
   ನಿಝುಪಯಿತಾ ದಾನಂ ದಾಹಂತಿ ಪಾಲತಿಕಂ ಉಪವಾಸಂ
   ವಕಚಂತಿ ಇಚಾ ಹಿ ಮೇ ಹೇವಂ
ನಿಲುಧಸಿ ಪಿ ಕಾಲಸಿ ಪಾಲತಂ ಆಲಾಧ ಯೇವೋತಿ ಜನಸ ಚ
   ವಢತಿ ವಿವಿಧೇ ಧಂಮ ಚಲನೇ ಸಂಯಮೇ ದಾನ
   ಸವಿಭಾಗೇತಿ.

ಪುಟ 95 ಶಹಬಾಜ್‌ಘರ್‌ನ ಎಂಟನೆಯ ಶಾಸನ
(ಮೂಲಶಾಸನ ಬಲದಿಂದ ಎಡಕ್ಕೆ ಓದುವಂತಹದು)

ದೇವನಂಪ್ರಿಯೋ ಪ್ರಿಯಸಿ ರಾಜ ಸವ್ರತ್ರ ಇಛತಿ ಸವ್ರ
ಪ್ರಷಂಡ ವಸೇಯು ಸವೇ ಹಿತೇ ಸಯಮೇ ಭಾವಸುಧಿ ಚ ಇಛಷ್ತಿ

ಜನೋಚು ಉಚವುಚ ಛಮ್ದೋ ಉಚವುಚರಗೋ ತೇಸವ್ರಮ್ ವಾ ಏಕದೇಶಮ್
ಪಿ ಕಛಮ್ತಿ ವಿಪುಲೇ ಪಿ ಚುದನೇಯಸ ನಾಸ್ತಿಸಯಮೋ ಭವ
ಸುಧಿಕಿಟ್ರಾಞಾತ ದ್ರಿಢ ಭತಿತ ಸಿಚೇ ಪಢಮ್

ಪುಟ 96 ಕೋಸಂ
(EI.XVIII. p.159)

ನಮೋ ಭಗವತೋ
ಸಥವಾಹಸ
ಮಾಸಿಭವಸ
ಗಹಪತಿಕಸ
ಪಜಾವತಿ ಪುತಸ
ವಾರಿಸಪುತೋ ಗಹಪತಿ ಕೋ
ಸೇಲಿಯಪುತೋ
ಕುಸಪಾಲೋ ನಾಮ
ತಸಪುತೇನ
ಗಹಪತಿಕೇನ
ಗೋತಿಪುತೇನ
ಅಶಿಕಾಯಂ ಕಾರಿತಾ
ವೇದಿಕಾ ಪಿಯತಂ
. . . .

ಪುಟ 97 ಮಥುರಾ ಶಾಸನ
(EI.XIX. p.66-67)

ಬೋದಿಸತ್ವೋ ಸಹಾ ಮಾತಾಪಿತಿಹಿ ಸಹಾ ಉಪಾಝಾ ಯೇನ ಧಂಮಕೇನ
ಸಹಾ ಅತೇವಾಸಿ ಕೇಹಿ ಸಹಾ ಅತೇವಾಸಿನಿಹಿ ಶಿರಿಪಿಹಾರೇ
ಆಚರಿಯನ ಸಮಿತಿಯಾನ ಪರಿಗ್ರಹೇ ಸರ್ವಬುಧಪುಜಾಯೇ

ಪುಟ 100 ಪಭೋಸಾ ಗವಿ ಶಾಸನ
(EI.II. p.243)

ಅಧಿಛತ್ರಾಯಾ ರಾಞೋ ಶೋನಕಾಯನ ಪುತ್ರಸ್ಯ ವಂಗಪಾಲಸ್ಯ
ಪುತ್ರಸ್ಯ ರಾಞೋ ತೇವಣಿಪುತ್ರಸ್ಯ ಭಾಗವತಸ್ಯ ಪುತ್ರೇಣಾ
ವೈಹಿದರಿ ಪುತ್ರೇಣಾ ಆಷಾಢಸೇನೇನ ಕಾರಿತಂ

103 ಮಥುರಾ ಶಾಸನ
(EI. I P. 390)

ಸಿದ್ಧಂ (ಸಂ) . . . . , ೫ ಏತಸ್ಯಾಂ ಪೂ (ರ್ವಾಯಾಂ)
ಭಗವತೋ ನಾಗೇನ್ದ್ರಸ್ಯ ದಧಿಕರ್ಣಸ್ಯ (ಸ್ಥಾ)

ನೇ ಶಿಲಾಪಟ್ಟೇ ಪ್ರತಿಷ್ಠಾಪಿತೋ ಮಾಥುರಾ (ಣಾಂ)
ಶೈಲಾಲ ಕಾನಾಂ ಜಾಸ್ವಕಾ ಭೃತ್ಯಕಾ ಇತಿ ಪಿ (ಷ್ಟೂ)
ಯ ಮಾನಾನಾಂ ತೇಷಂ ಪುತ್ರೇಹಿ ನಸ್ತಿಬಲ ಪ್ರ
ಸುಖೇಹಿ ದಾರಕೇಹಿ ಮಾತಾಪಿತೃ ಣಂ ಅಗ್ರ
ಪ್ರತ್ಯ ಶತಾಯೇ ಭವತು ಸರ್ವ್ವಸತ್ತ್ವಾವ(ನಹಿ ತ)
ಸುಖಾ (ರ್ಥಂ) ಭವತು (॥)

ಪುಟ 103 ಅಲಹಾಬಾದ್ ಸ್ತಂಭಶಾಸನ ಸಮುದ್ರಗುಪ್ತ

ಕ್ರಿ.ಶ.ಸು.೩೫೦

(JBB RAS)

ಮಹಾರಾಜ ಶ್ರೀಗುಪ್ತ ಪ್ರಪೌತ್ರಸ್ಯ ಮಹಾರಾಜ ಶ್ರೀ ಘಟೋತ್ಕಚ ಪೌತ್ರಸ್ಯ ಮಹಾರಾಜಾ
ಧಿರಾಜ ಶ್ರೀ ಚನ್ದ್ರಗುಪ್ತ ಪುತ್ರಸ್ಯ ಲಿಚ್ಛವಿ ದೌಹಿತ್ರಸ್ಯ ಮಹಾದೇವ್ಯಾಂ ಕುಮಾರದೇ
ವ್ಯಾಮುತ್ಪನ್ನಸ್ಯ ಮಹಾರಾಜಾಧಿರಾಜ ಶ್ರೀ ಸಮುದ್ರಗುಪ್ತಸ್ಯ ಸರ್ವ್ವ ಪೃಥಿವೀ ವಿಜಯ
ಜನಿತೋದಯ ವ್ಯಾಪ್ತ ನಿಖಿಲಾವನಿತಲಾಂ ಕೀರ್ತ್ತಿಮಿತ ಸ್ತ್ರಿದಶಪತಿ ಭವನ ಗಮನಾವಾ
ಪ್ತಲಳಿತ ಸುಖವಿಚರಣಾ ಮಾಚಕ್ಷಾಣ ಇವ ಭುವೋ ಬಾಹುರಯ ಮುಚ್ಛ್ರಿತಃ
ಸ್ತಮ್ಭಃ ಯಸ್ಯ ॥ ಪ್ರದಾನ ಭುಜವಿಕ್ರಮ ಪ್ರಶಮ ಶಾಸ್ತ್ರ ವಾಕ್ಯೋದಯ್ಯರುಪರ್ಯ್ಯು ಪರಿಸ
ಞ್ಚಯೋಚ್ಛ್ರಿತಮನೇಕ ಮಾರ್ಗ್ಗಯಶಃಪುನಾತಿ ಭುವನತ್ರಯಂ ಪಶುಪತೇರ್ಜ್ಜಟಾನ್ತರ್ಗುಹಾ . . .

ಪುಟ 104 ಮಂದಸೂರ್‌ನ ನರವರ್ಮನ ಶಾಸನ

ಕೃತವರ್ಷ ೪೬೧ (ಕ್ರಿ.ಶ.೪೦೪)

(EI.XII. p.320)

ಸಿದ್ಧಮ್ ಸಹಸ್ರಶಿರಸೇ ತಸ್ಮೈ ಪುರುಷಾಯಮಿತಾತ್ಮನೇ ಚತುಸ್ಸಮುದ್ರಪರ್ಯ್ಯಙ್ಕತೋಯ
ನಿದ್ರಾಲವೇನ್ನಮಃ ಶ್ರೀರ್ಮ್ಮಾಲವಗಣಾಮ್ನಾತೇ ಪ್ರಶಸ್ತೇ ಕೃತಸಜ್ಞಿತೇ
ಏಕಷಷ್ಠ್ಯಧಿಕೇ ಪ್ರಾಪ್ತೇ ಸಮಾಶತ ಚತುಷ್ಟಯೇ ಪ್ರಾವೃಕ್ಕಾಲೇ ಶುಭೇ ಪ್ರಾಪ್ತೇ ಮನಸ್ತುಷ್ಟಿ
ಕರೇನ್ನೃಣಾಮ್‌ಮಘೇ ಪ್ರವೃತ್ತೇ ಶಕ್ರಸ್ಯ ಕೃಷ್ಣಸ್ಯಾನುಮತೇ ತದಾ
ನಿಷ್ಪನ್ನವ್ರೀಹಿಯವಸಾ ಕಾಶಪುಷ್ಪೈರಲಂಕೃತಾಭಾಭಿರಭ್ಯಧಿಕಂ ಭಾತಿ ಮೇದಿನೀ ಸಸ್ಯ
ಮಾಲಿನೀ ದಿನೇ ಆಶ್ವೇಜ ಶುಕ್ಲಸ್ಯ ಪಂಚಮ್ಯಾಮಥಸತ್ಕೃತೇ
ಈ ದೃಕ್ಕಾಲವರೇ ರಮ್ಯೇ ಪ್ರಶಾಸತಿ ವಸುನ್ಧರಾಮ್ ಪ್ರಕ್ರುಣ್ಯೋಪ ಚಯಾಭ್ಯಾಸಾತ್ಸಂವರ್ದ್ಧಿತ
ಮನೋರಥೇ ಜಯವರ್ಮ ನರೇಂದ್ರಸ್ಯ ಪೌತ್ರೇ ದೇವೇನ್ದ್ರ ವಿಕ್ರಮೇ
ಕ್ಷಿತೀಶೇ ಸಿಙ್ಘವರ್ಮ್ಮಣಸ್ಸಿಙ್ಘವಿಕ್ರಾನ್ತಗಾಮಿನಿ ಸತ್ಪುತ್ರೇ ಶ್ರೀರ್ಮ್ಮಹಾರಾಜ ನರವರ್ಮ್ಮಣೇ
ಪಾರ್ತ್ಥಿವೇ ತತ್ಪಾಲನಗುಣೇ ದೇಶಾದ್ಧರ್ಮ್ಮಪ್ರಾಪ್ತಾರ್ತ್ಥ ವಿಸ್ತರಃ
ಪೂರ್ವಜನ್ಮಾಮ್ಮಾನ್ತರಾಭ್ಯಾಸಾದ್ಬಲಾದಾಕ್ಷಿಪ್ತ ಮಾನಸಃ ಸ್ವಯಶಃ ಪುಣ್ಯ ಸಂಭಾರವಿವರ್ದ್ಧಿತ
ಕೃತೋದ್ಯಮಃ ಮೃಗತೃಷ್ಣಾಜಲಸ್ವಪ್ನವಿದ್ಯುದ್ದೀಪ ಶಿಖಾಚಲಮ್
ಜೀವಲೋಕಮಿಮಂ ಜ್ಞಾತ್ವಾ ಶರಣ್ಯಂ ಶರಣಙ್ಗತಃ ತ್ರಿದಶೋದಾರ ಫಲದಂ ಸ್ವರ್ಗ್ಗ ಸ್ತ್ರೀ·
ಚಾರುಪಲ್ಲವಮ್ ವಿಮಾನಾನೇಕ ವಿಟಪಂ ತೋಯದಾಂಬು ಮಧುಸ್ರಾವಮ್
ವಾಸುದೇವಂ ಜಗದ್ವಾಸಮಪ್ರಮೇಯಮಜಂ ವಿಭುಮ್ ಮಿತ್ರಭೃತ್ಯಾರ್ತ್ಥಸತ್ಕರ್ತ್ತಾ
ಸ್ವಕುಲಸ್ಯಥ ಚನ್ದ್ರಮಾಃ ಯಸ್ಯ ವಿತ್ತಂ ಚ ಪ್ರಾಣಾಶ್ಚ ದೇವಬ್ರಾಹ್ಮಣ ಸಾಗ
ಮಹಾಕಾರುಣಿಕಃ ಸತ್ಯೋಧರ್ಮ್ಮಾರ್ಜ್ಜಿತ ಮಹಾಧನಃ ಸತ್ಪುತ್ರೇ ವರ್ಣ್ಣವೃದ್ಧೇಸ್ತು
ಸತ್ಪೌತ್ರೋಯ ಜಯಸ್ಯ ವೈದುಹಿತರ್ಬ್ಬಲ ಶೂರಾಯಾ ಸತ್ಪುತ್ರೋ ಜಯ..

ಪುಟ 106 ಭಮೋದ್ರ ಮೋಹೋತ ತಾಮ್ರಶಾಸನ - ದ್ರೋಣಸಿಂಹ ವರ್ಷ ೧೮೩

ಒಂದನೆಯ ಹಲಗೆ (ವಲಭಿಯ ಮೈತ್ರಕ ವಂಶದವನು)

(EI.XVI. p.18)

ಸ್ವಸ್ತಿ ವಲಭೀತಃ ಪರಮಭಟ್ಟಾರಕ ಪಾದಾನುಧ್ಯಾತೋ ಮಹಾರಾಜ ದ್ರೋಣಸಿಂಹ
ಮ್ಯುಶಲೀ ಸ್ವವಿಷಯ ಸರ್ವ್ವಾನೇವಾನ್ಯಸ್ತಕಾಯುಕ್ತಕ ವಿನಿಯುಕ್ತಕ ..
ತ್ತರದ್ರಾಙ್ಗಿಕ ಧ್ರುವಸ್ಥಾನಾಧಿಕರಣಂ ಚಾಟಭಟಾದೀಶ್ಚ ಸಮಾಜ್ಞಾಪಯತ್ಯಸ್ತುವೋ ವಿದಿತಂ
ಯಥಾ ಮಹಾವಿಜಯಾಯುರ್ದ್ಧರ್ಮ್ಮಫಲ ಯಶೋವಿಷಯ ವ್ರಿ .
ಯೇ ಸೋ ವರ್ಷಸಹಸ್ರಾಯ ಸರ್ವ್ವ ಕಲ್ಯಾಣಾಭಿಪ್ರಾಯ ಸಂಪತ್ತಯೇ ಚ
ಹಸ್ತ ಪ್ರಾಹರಣ್ಯಾಂ ಶ್ರೀ ಭಗವತ್ಸ್ವಾರ್ಪಣ್ಣುರಾಜ್ಯಾಯಾಃ ಮಾತಾಪಿತ್ರೋ
ಪುಣ್ಯಾಪ್ಯಾಯನ .
ಮಿತ್ತಮಾತ್ಮನಶ್ಚ ಪುಣ್ಯಾಭಿವೃದ್ಧಯೇ ಆ ಚಂದ್ರಾರ್ಕಾರ್ಣ್ಣವ ಕ್ಷಿತಿಸ್ಥಿತಿಸರಿತ್ಪರ್ವ್ವತ
ಸಮಕಾಲೀನಂ ಬಲಿ ಚರು ವೈಶ್ವಾದೇವಾಧ್ಯಾನಾಂ ಕ್ರಿಯಾಣಾಂ
ಸಮುತ್ಸರ್ಪ್ಪ..
ತ್ರಿಸಂಗಮ ಕ ಗ್ರಾಮೋ ಗಂಧಧೂಪದೀಪ ತೈಲ ಮಾಲ್ಯೋಪಯೋಜ್ಯಂ ದೇವಕುಲ್ಯಸ್ಯ
ಚ ಪತಿತ ವಿಶೀರ್ಣ್ಣ ಪ್ರತಿಸಂಸ್ಕಾರಣಾರ್ತ್ಥಂ ಸತ್ರೋಪಯೋಜ್ಯೋ ಸ್ವಹಿ. .
ದೇಯಸ್ಸಹಾನ್ಯೈಶ್ವಾಹನ್ಯೈವಚಾಟಭಟ ಪ್ರವೇಶ್ಯಂ ಬ್ರಹ್ಮದೇಯಸ್ಥಿತ್ಯಾ ಉದಕಾತಿಸರ್ಗ್ಗೇಣ
ನಿಸೃಷ್ಟಃ ಯತೋಸ್ಯೋಪಚಿತನ್ಯಾಯತಭುಜೇಂತಃ ಕೃಶತಃ . . . .
ಮ್ಯರ್ಪಾಪಯತೋ ವಾ ನ ಕೇನಚಿಸ್ವಲ್ಪಾಬಾಧಾ ವಿಚಾರಣಾ ವಾ ಕಾರ್ಯ್ಯಾ
ಯಶಾಚಭಿದ್ಯಮಾನ ಮನುಮೋದೋಯುರಸೌ ಮಹಾಪತಾಕೈಸ್ಸೋಪಪಾ . . .
ಸಂಯುಕ್ತೋಸ್ಮದ್ವಂಶಾಗಾಮಿ ರಾಜಭಿರನ್ಯೈಶ್ಚ ಸಾಮಾನ್ಯಂ ಭೂಮಿದಾಯಮವೇತ್ಯಾಸ್ಮದ್ದಾಯೋ
ನುಮನ್ತವ್ಯೋ ಪಿ ಚಾತ್ರ ವ್ಯಾಸಕೃತಾಃ ಶ್ಲೋಕಾ ಭವ .
ಷಷ್ಟಿಂವರ್ಷ ಸಹಸ್ರಾಣಿ ಸ್ವರ್ಗ್ಗೇ ಮೋದತಿ ಭೂಮಿದಃ ಆಚ್ಛೇತ್ತಾ ಚಾನುಮನ್ತಾ
ಚ ತಾನ್ಯೇವ ನರಕೇವಶೇತ್ ಸ್ವದತ್ತಾಂ ಪರದತ್ತಾಂ ವಾಯೋ ಹರೇತ ವಸು . .
ಗಾವಂ ಶತಸಹಸ್ರಸ್ಯ ಹನ್ತು ಪ್ರಾಪ್ನೋತಿ ಕಿಲ್ಬಿಷಂ ಬಹುಭಿರ್ವ್ವಸುಧಾಭುಕ್ತಾ
ರಾಜಭಿಸಗರಾದಿಭಿಃ ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತ . . .
ಭಿರುವಕ ದೇಪೀ ಕರ್ಮ್ಮಾಸ್ತಿಕಃ ಸಂ ೧೮೦ ೮೦ ೩ ಶ್ರಾವಣ ಶುದ್ಧ ೧೦ ೫ ಸ್ವಯಮಾಜ್ಞಾ
ಲಿಖಿತಂ ಷಷ್ಟಿದತ್ತ ಪುತ್ರೇಣ ಕುಮಾರಿಲ [ಪತಿಕೇನ]

ಪುಟ 108 ಸಾಳುವನಕುಪ್ಪಂ

--

(EI.X. p.12)

ಶ್ರೀಮತೋತ್ಯನ್ತ ಕಾಮಸ್ಯ
ದ್ವಿಷದ್ದರ್ಪ್ಪಾಪಹಾರಿಣಃ ಶ್ರೀನಿ
ಧೇಃ ಕಾಮರಾಗಸ್ಯ ಹರಾರಾಧನ ಸಂಗಿ
ನಃ ॥ ಅಭಿಷೇಕಜಲಾಪೂರ್ಣ್ಣೇ ಚಿತ್ರ ರತ್ನಾಂಮ್ಬು
ಜಾಕರೇ ಆಸ್ತೇ ವಿಶಾಲೇ ಸುಮುಖಿಃ ಶಿರಸ್ಸರ
ಸಿ ಶಂಕರಃ ॥ ತೇನೇದಂ ಕಾರಿತಂ ಶಮ್ಭೋರ್ಭವ
ನಂ ಭೂತಯೇ ಭುವಃ ಕೈಲಾಸ ಮನ್ದರ ನಿಭಂ ಭೂಭೃತಾಂ
ಮೂರ್ದ್ಧ್ನಿ ತಿಷ್ಠತಾ ॥ ಭಕ್ತಿ ಪ್ರಹ್ವೇಣ ಮನಸಾ ಭವಂ ಭೂಷಣಂ

ಲೀಲಯಾ ಮೋಷ್ಟಾ ಚ ಯೋ ಭುವನ್ಸ್ಥೇ ಜೇಯಾತ್ಸ ಶ್ರೀಭರಶ್ಚಿ
ರಮ್ ॥ ಅತಿರಣಚಣ್ಡಾಃ ಪತಿರವಸಿಭು ಜಾಮತಿರ
ಣ ಚಣ್ಡೇಶ್ವರಮಿವ ಕರೋತ್ ಇಹ ಗಿರಿತನಯಾ ಗು
ಹಗಣ ಸಹಿತೋ ನಿಯತಕೃತರತಿರ್ಭವತು ಪಶುಪತಿ॥

110 ದಿವೇ ಗರ್

ಮರಾಠಿ ಶಾಸನ

(EI. XXVIII P. 124)

ಓಂ ಸ್ವಸ್ತಿಶಕ ಸಂವತ್ ೯೮೨ ಸಾವರಿ ಸಂವತ್ಸರೇ ಮಾ
ರ್ಗ್ಗ ಸಿರ ಪೌರ್ಣ್ಣ ಮಾಸ್ಯಾಂ ಶುಕ್ರೇ॥ ಶ್ರೀ ಸ್ಥಿಂತಿಪುರಿಚೇಂ ದೋ
ಸಿ ಸಾಸನೇಂ ವಾಸುದೇವ ಭಟ್ಟ ವಾಂಯೇ ಷಡಂಗವಿ ರಿಸಿಯಪ್ಪ
ಘೈಸಾಸ ಸೀಂಘೂ ಷಡಂಗವಿ ಪತತ್ಸಮುಖೇಂ ಸ್ಥಾನೇಂ ಮೂವಲಭ
ಟ್ಟಂಪಾಸೇಃ ರಪಿಯಲೀಂ॥ ತಥಾ ಸಾತಾಪೀಸೇಂ ಶತಸುವರ್ಣ್ಣಃ ವಾ
ವೋದರಃ ಪಾಸಿ ಟಪಿಯಲೇಂ। ಸುಂ. ಗಾಃ ೧೩೭ ಸುವ್ವರ್ಣ ಯೋಗಕ್ಷೋ
ಮು ಸ್ಥಾನಹಚಾದೀವೇ ಚೇರಿಸಿಯಪ್ಪೆ ಪೌಂವದೇವ ಷಡಂಗ ವಿತಿಕ್ಕೆ
ಷಡಂಗವಿ ಜೀವಣ್ಣೆ ನಾಗರುವ್ರಭಟ್ಟ ಮಧುಪ್ಪೆ ಷಡಂಗವಿ ಮಧುನ
ಯ ದೇವಲು ಹೇ ಜಾಣತಿ । ಜೇಂ ಸುವರ್ಣ್ಣ ಲಿಹಲೇಂ ತೇಂ
ಕಾಂ ಲೇ ಅಃ ಸಮೇತಃ॥

ಪುಟ 110 ಸುನಕ್ ಶಾಸನ ಮುಂಭಾಗ

ಚಾಳುಕ್ಯ ೧ನೆಯ ಕರ್ಣ - ಕ್ರಿ.ಶ.೧೦೯೧

(EI.I. p.316)

೦ ವಿಕ್ರಮ ಸಮ್ವತ್ ೧೧೪೮ ವೈಶಾಖ ಶುದಿ ೧೫ ಸೋಮೆ । ಅದ್ಯೇಹ ಶ್ರೀಮದಣ
ಹಿಲಪಾಟಕೇ ಸಮಸ್ತ ರಾಜಾವಲೀ ವಿರಾಜಿತ ಮಹಾರಾಜಾಧಿರಾಜ ಶ್ರೀಮ
ತ್ರೈಲೋಕ್ಯಮಲ್ಲ ಶ್ರೀಕರ್ಣ್ಣದೇವಃ ಸ್ವಭುಜ್ಯಮಾನ ಶ್ರೀಮಹಾನಂದಪುರ ಪ್ರತಿವಹಷ
ಡ್ವಿಂಶತ್ಯಧಿಕಗ್ರಾಮ ಶತಾಂತಃ ಪಾತಿನಃ ಸಮಸ್ತ ರಾಜಪುರುಷಾನ್ ಬ್ರಾಹ್ಮ
ಣೋತ್ತರಾಂಸ್ತನ್ನಿವಾಸಿ ಜನ ಪದಾಂಸ್ತದ್ಬೋದಯತ್ಯಸ್ತುವಃ ಸಂ ವಿಧಾತಂ ಯಥಾ ।
ಅದ್ಯ ಸೋಮಗ್ರಹಣ ಪರ್ವಣಿ ಚರಾಚರಗುರುಂ ಭಗವಂತಂ ಭವಾನೀ ಪತಿಮ
ಮ್ಯರ್ತ್ಯ ಸಂಸಾರಾಸಾರತಾಂ ವಿಚಿಂತ್ಯ ಐಹಿಕಮಾಮುಷ್ಮಿಕಂ ಚ ಫಲಮಂಗೀಕೃ
ತ್ಯ ಪಿತ್ರೋರಾತ್ಮನಸ್ಯ ಪುಣ್ಯಯಶೋಭಿವೃದ್ಧಯೇ ಸೂನಕಗ್ರಾಮೇ ರಸೋಪಿ
ಕಠಕ್ಕುದಮಹಾದೇವೇನ ಕಾರಿತವಾಪ್ಯೈ ಲಘುಡಾಭೋಗ್ರಾಮೇ ಕುಟುಂಬಿ ಜ.
ಸಪಾಲ । ಲಾಲಾ । ವಕುಲಸ್ವಾಮಿನಾಂ ಸತ್ಕನಾಮೋಪಲಕ್ಷಿತಭೂಮಿ ಪಾ
ಇಲಾಂ ೧೩ ವಹಂತಿ ಹಲ ೪ ಇತಿ ಚತುಷ್ಕಯ ಭೂಮಿ ಶಾಸನೇನೋದ
ಕಪೂರ್ವಮಸ್ಮಾಭಿಃ ಪ್ರದತ್ತಾ । ಅಸ್ಯಾಯ ಭೂಮಿಃ ಪೂರ್ವಸ್ಯಾಂ

ಪುಟ 111 ಇಂಡಿಯಾ ಆಫೀಸ್ ಶಾಸನ ೧೧-೧೨ನೇ ಶತಮಾನ

ಒರಿಸ್ಸಾ, ವಿಜಯರಾಜದೇವ

(EI.III. p.312)

೦ ಸ್ವಸ್ತಿ ಶ್ರೀ ವಿಜಯ ಕಟ್ಟಕೇ ಸಮಾವಾಸಿತ ಪರಮಭಟ್ಟಾರಕ ಮಹಾರಾಜಾಧಿರಾಜ ಪರಮೇಶ್ವರ
ಶ್ರೀವಿಜಯರಾಜದೇವಃ ಕುಶಲೀ

ಶ್ರೀ ಪಿಗಹಪಾಲಮುಸಲಪುತ್ತ್ರ ತಥಾ ಮಿಹಿರಾವಕುಸು ಅರಾ ಪುತ್ತ್ರ ಪಲ್ಲಜಾತಿ ಪ್ರಸಾದ
ಪಟ್ಟಕಂ ಪ್ರಾಯಚ್ಚತ್ರ್ಯನಯಾ ಭಾಷಯಾ ಯಥಾ ಶ್ರೀ ಕೇಸ
ರಿ ಕೋಟ್ಟಪರಿಭೋಗೇ ಕ್ಷೇತ್ತ್ರಾಭೂಮಿ ತಥಾ ಕೂಪ ತಥಾ ಗೃಹಾ ತಥಾ ಕುಟ್ಟುಂಬಿಕ
ಯೋ ಚಣಕಮಪಿ ದಿವಸಂ ಮೂಲದೇವ ಭುಕ್ತಂ ಸಚ ಸಮಸ್ತಂ ಮಯಾಶ್ರೀ ಭ
ಟ್ಟಾರಕೇಣ ಆ ಚಂದ್ರಾರ್ಕ ತಾರಕಾಯಾವ ಕೃತ್ವಾ ತುಸ್ಮಾ ಪುತ್ತ್ರ ಪೌತ್ರ ಪ್ರಪೌತ್ರಾದಿ
ನಿರ್ವ್ವಹಮಾನ ಸದಾತಿಥ್ಯಾ ಪ್ರಸಾದೀಕೃತ್ವಾ ಪ್ರದತ್ತಾ ಕೇನಾಪಿ ಬಲಾದಿ
ಕೃತೇನ ನ ಪರಿಪಂಥನೀಯಾ ಗೋತ್ರಜ ಕಸ್ಯಚಿ ಅನ್ಯಸಾಂಪಿ ಕಾಮಕಾರೋ ನ್ನಾಸ್ತಿ
ಸಹಸ್ತ ಪರಹಸ್ತೇನ ಭೋಕ್ತ ವ್ಯಾ ಸದಾತಿಥ್ಯಾ ಅತ್ತಾಂ ಓ
ಸ್ತಾ ಮಹಾರಾಜ್ಞೀ ಶ್ರೀ ಲಚ್ಚಿದೇವೀ ತಥಾ ಮಹಾರಾಜ್ಞೀ ಹಂಸಿಣೀದೇಪಿ ತಥಾ
ಪೋತಾಗ್ರಾಮಮ್ ದ್ವಿಪದ ಚತುಷ್ಪದ ಕ್ಷೇತ್ತ್ರಾಣಾಂ ಕುಟ್ಟುಂಪಿಕಾ
ನಾಂ ಸಹಿತಂ ಸಮಸ್ತಂ ಶ್ರೀ ಪಿಗ್ರಹಪಾಲ ಪುತ್ತ್ರ ಪೌತ್ತ್ರರಾಣಾಂ ಭತ್ತ್ರಗ್ರಾಮಂ
ಮಾನ್ಯಾ ಶ್ರೀ ಭಟ್ಟಾರಕೇಣ ಪ್ರಸಾದೀಕೃತಂ ಅನ್ಯಪಲ್ಲಕಸ್ಯಚಿ ಕಾಮ
ಕಾರೋ ನಾಸ್ತಿ ಕುಸೌರಾಪುತ್ತ್ರೈ ಪೋತಾಗ್ರಾಮಂ ವರ್ಜ ಇತ್ವಾ ಸೇಸಂ ಯಥಾ
ಲಿಖಿತಂ ಭೋಕ್ತವ್ಯಂ ಸಾಧುಸುಭಾ ಚಾರಾಣಾಂ ಆಜ್ಞಾ ಶ್ರವಣ
ವಿಧೇ ಅಣಾಂ ಉಪರಿಲಿಖಿತಂ ಸರ್ವ್ವಂ ನಿರ್ವ್ವಹಿಸ್ಯತಿ ರಾಜಾದೇಶಾತ್ ಶ್ರೀ ದುರ್ಗಪಾಲ
ವಚನೇನ ಲಿಖಿತಂ ಮಯಾ ಮೂಲದೇವ ಮಂಗುಕ ಸು
ತ ಹೇಮಕಾರೇಣ ಶ್ರೀ ವಿಜಯರಾಜದೇವಃ

ಪುಟ 112 ಹಂಪೆ ನರಸನಾಯಕನ ಶಾಸನ

(ಕ.ವಿ.ಶಾ. ಸಂ.III)

ಶುಭಮಸ್ತು ॥ ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ
೧೪೩೨ನೆಯ ಪ್ರಮೋದೂತ ಸಂವತ್ಸರದ ಕಾರ್ತಿಕ ಸುದ್ಧ ೧೫ಲು ಶ್ರೀ ಮ
ತು ನರಸಣನಾಯಕರ ತಾ॰ ಬುಕ್ಕಾಜಂಮ್ಮನು ಹಂಪೆಯ ತಿರುಮಲ ಭ
ಟ್ಟರ ಮಕ್ಕಳು ಸಾ॰ಭಟ್ಟರಿಗೆ ವಿರೂಪಾಕ್ಷದೇವರ ನೈವೇದ್ಯ . . ವದ ಕಾಲ್ವಿ ಮುದ್ದಾ
ನಹಳ್ಳಿಯಲಿ ಭೂವೃತ್ತಿಯನು ಕೊಂಡು ಕೊಟವಾಗಿ ನೀಉ ನಿಮ್ಮ ವಂಶ ಪಾರಂಪರೆ
ಯವಾಗಿ ನಂಮ ನಿತ್ಯನೈವೇದ್ಯವನು ನೀಉ ನಡೆಸುವಿರಿಯೆಂದು ಬರಸಿ ಕೊಟ ಶಿಲಾ
ಶಾಸನ ॥ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ॥ ತ್ರೈಳೋಕ್ಯನಗರಾರಂಭ ಮೂಲ
ಸ್ತಂಭಾಯ ಶಂಭವೇ ॥

ಪುಟ 116 ಹುಂದ್‌ನ ಶಾರದಾ ಶಾಸನ ಕ್ರಿ.ಶ.೭೭೪

ಸಂಸ್ಕೃತ ಭಾಷೆ

(EI.XXII. p.98)

ಓಂ ಸ್ವಸ್ತಿ ೧॥ ಮಹಾರಾಜ್ಞೀ ಶ್ರೀಕಾಮೇಶ್ವರೀದೇವ್ಯಾ ಸತ್ಕ
ದೇವ ಕುಲೇ ನವಕರ್ಮಪತಿ ಉಪೇನ್ದ್ರ ಪುತ್ರ ಜಯಸ್ತರಾ
ಜ ಶ್ರಾವಸ್ತಿಕೋ ಸೂರ್ಯದ್ವಿಜೋಃ ॥ ಪಂಚಕುಲ ಶ್ರೀಪೀರಾದಿ
ತ್ಯಪುತ್ರ ಶ್ರೀಪಿಲ್ಲಕ ವ್ರಾಹ್ಮಣಾಃ ॥ ॥ ಕಾಯಸ್ಥ ಶ್ರೀ ಪಿಹೇ
ನ್ದಪುತ್ರ ಶ್ರೀ ಘೋಷಿಕ ಸೂರ್ಯದ್ವಿಜಾಃ ॥ ॥ ಇತಿ . .
ಸಂವತ್ ೧೬೮ ಅಶ್ವಯುಜ ವತಿ ೮ ಶ ಸೌ ಅತೋ

ಪುಟ 123 ನಾಸಿಕ್ ಗುಹಾ ಶಾಸನ

(T.A.S. Vol.I. p.230;EI.VIII. p.78)

ಸಿದ್ಧಮ್ ಸ್ವಸ್ತಿ ರಾಜ್ಞೋ ಕ್ಷಹರಾತಸ್ಯ ಕ್ಷತ್ರಪಸ್ಯ ನಹಪಾನಸ್ಯ ಜಾಮಾತ್ರಾ ದಿನಿಕಪುತ್ರೇಣ
ಉಷವದತೇನ . . .
ಪ್ರಭಾಸೇ ಪುಣ್ಯತೀರ್ಥೇ ಬ್ರಾಹ್ಮಣೇಭ್ಯಃ ಅಷ್ಟಭಾರ್ಯಾಪ್ರದೇನ ಭರುಕಛೇ
ದಶಪುರೇ ಗೋವರ್ಧನೇ ಶೋರ್ಪಾರಗೇಚ . . . .

ಪುಟ 123 ಕಾರ್ಲೆ ಸ್ತಂಭಶಾಸನ

(EI.XVIII. p.325)

ಉಮೇಹನಾಕಟಾ ಯವನಸ
ಪಿಟಸಗತಾನಂ ದಾನಂ ಥಮೋ

ಪುಟ 125 ನಾಸಿಕ್ ಶಾಸನ ಬಾಲಶ್ರೀ

ಕ್ರಿ.ಶ.೨ನೆಯ ಶತಮಾನ

ಸವರಾಜ ಲೋಕ ಮಣ್ಡಲ ಪತಿಗಹಿತ ಸಾಸಾನಸ ದಿವಸಕರಕರ ವಿಭೋದಿತ
ಕಮಲ ವಿಮಲಸದಿಸವದನಸ ತಿಸಮುದತೋಯಪೀತವಾಹನಸ ಪಲಿ
ಪೂನ ಚದಮಡಲಸಸಿರಿಕ ಪಿಯದಸನಸ ವರವಾರಣ ವಿಕಮ ಚಾರು ವಿಕಮಸ
ಭುಜಗಪತಿ ಭೋಗಪೀನವಾಟ ವಿಪುಲ ದೋಘ ಸುದರ ಭುಜಸ ಅಭಯೋದಕ ದಾನ
ಕಿಲಿನನಿಭಯಕರಸ ಅವಿಪನ ಮಾತು ಸುಸೂಸಾಕಸ ಸುವಿಭತತಿವಗದೇಸ
ಕಾಲಸ ಪೋರಜನ ನಿವಿಸೇಸ ಸಮಸುಖ ದುಖಸ ಖತಿಯದಪಮಾನ . . .

ಪುಟ 126 ನಾಗಾರ್ಜುನಕೊಂಡ

ವೀರಪುರಿಸದತ್ತ

(E.I.XX.P-17)

ಸಿಧಂ ಮಹಾರಾಜಸ ಅಸ ಮೇಧ ಯಾಜಿಸ ಅನೇಕ ಹಿರಂಣ ಕೋಟಿ
ಗೋಸತ ಸಹಸ ಹಲಸತ
ಸಹಸ ಪದಾಯಿಸ ಸವಥೇಸು ಅಪತಿಹತ ಸಂಕಪಸ ವಾಸಿಠೀ
ಪುತಸ ಇಖಾಕುಸ
ಸಿರಿ ಚಾತಮೂಲಸ ದುಹುತಾ ರಾಂಞೋ ಸಿರಿ ವೀರ
ಪುರಿಸದತಸ ಭಗಿನಿ ಮಹಾಸೇನಾಪತಿಸ ಮಹಾ
ತಲವರಸ ಮಹಾದಂಡ ನಾಯಕಸ ಧನಕಾನಂ ಖಂದ ವಿಸಾಖಿಂ
ಣಕಸ ಭಾಯಾಮಹಾತಲವರಿ
ಅಡವಿ ಚತಿಸಿರಿ ಅಪನೋ ಉಭಯ ಕುಲಂ ಪರಿನಾಮೇನಾ
ಅತನೋ ಚ ಉಭಯ ಲೋಕಹಿತ ಸುಖಿವಹಥನಾ

ಪುಟ 127 ಚಂದ್ರವಳ್ಳಿ

ಮಯೂರಶರ್ಮ

MAR 1929. p 50

ಕದಂಬಾಣಂ ಮಯೂರಶಮ್ಮಣಾ ಪಿಸಿಮ್ಮಿಅಂ
ತಟಾಕಂ ದೂಭತಿಕೂಟ ಅಭೀರ ಪಲ್ಲವ ಪರಿ
ಯಾತ್ರಿಕ ಸಕಸ್ಥಾ (ನ) ಸಯಿನ್ದಖ ಪುಣಾಟ ಮೋ(ಕರಿಣಾ)

ಪುಟ 130 ತಾಳಗುಂದ ಕಾಕುಸ್ಥವರ್ಮ

ಕ್ರಿ.ಶ.೪೫೦

ಅಥಬಭೂವ ದ್ವಿಜಕುಲ ಪ್ರಾಂಶುಪಿಟರಮ್ಮಗ್ಣೇಸ್ತ್ವಂಶುಮಣ್ಡಲಮ್ ತ್ರ್ಯಾರ್ಷವರ್ತ್ಮ
ಹರಿತೀಪುತ್ರಮ್ಮೃಷಿಮುಖ್ಯ ಮಾನವ್ಯಗೋತ್ರಜಮ್ ॥
ಪಿವಿಧ ಯಜ್ಞಾವಭೃಥ ಪುಣ್ಯಾಯ್ಸುನಿಯತಾಭಿಷೇಕಾರ್ದ್ರಮುರ್ದ್ಧಜಮ್ ಪ್ರವಚನಾವಗಾಹ
ನಿಷ್ಣಾತ ವಿಧಿವತ್ಸಮಿದ್ಧಾಗ್ನಿ ಸೋಮಪಮ್ ॥
ಪ್ರಣವ ಪೂರ್ವ ಷಡ್ವಿಧಾಧ್ಯೇಯನಾನರ್ದ್ಯ ಮಾನಸ್ತರಾಲಯಮ್ ॥ ಅಕೃಶ ಚಾತುರ್ಮ್ಮಾಸ್ಯ
ಹೋಮೋಷ್ಟಿ ಪಶುಪಾರ್ವ್ವಣ ಶ್ರದ್ಧ ಪೌಷ್ಟಿಕಮ್ ॥
ಅತಿಥಿ ನಿತ್ಯಸಂಶ್ರಿತಾವಸಥ ಸವನತ್ರಯಾವಸ್ಥನೈತ್ಯಕಮ್ ಗೃಹ ಸಮೀಪದೇಶ ಸಂರೂಡ
ವಿಕಸತ್ಕನಮ್ಮೈಕ ಪಾದಪಮ್ ॥
ತಮುಪಚಾರವತ್ತ ವಾಸ್ಯತರೋಸ್ಮಾನಾಮ್ಯನಾಧರ್ಮ್ಮ್ಯಮಸ್ಯತತ್ ಪ್ರವವೃತೇ ಸತೀರ್ತ್ಥ್ಯ
ವಿಪ್ರಾಣಾಂ ಪ್ರಾಚುರ್ಯ್ಯ ತಸ್ತದ್ವಿಶೇಷಣಮ್ ॥

ಪುಟ 136 ಬೆಂಡಿಗಾನಹಳ್ಳಿ

ಎರಡನೆಯ ಹಲಗೆ - ಹಿಂಭಾಗ

(MAR 1914-15, p.40; IWG No.5)

ರಣಭೂಷಿತಸ್ಯ ಕಾಣ್ವಾಯನ ಸಗೋತ್ರಸ್ಯ ಶ್ರೀಮನ್ಮೃಗೇಶವರ್ಮ್ಮ ಧರ್ಮ್ಮ
ಮಹಾಧಿರಾಜಸ್ಯ ಪುತ್ರೇಣ ಪಿತುರನ್ವಾಗತ ಸಮ್ಯಗ್ಣೇನ ಸ್ವಭು
ಜಹೀಯೋತ್ಸಾಹಿತಾವಗೃಹೀತಾರಿ ವಿಪುಲ ಶ್ರೀರ್ಯ್ಯಶಸಾ ದೇವದ್ವಿಜಗು

ಪುಟ 136 ಚೂಕಟ್ಟೂರು

ಮೊದಲ ಹಲಗೆ - ಹಿಂಭಾಗ

(MAR 1924, p.79-81; IWG No.7)

ಸ್ವಸ್ತಿ ಜಿತಮ್ಭಗವತಾ ಗತಘನ ಗಗನಾಭೇನ ಪದ್ಮನಾಭೇನ ಶ್ರೀಮದ್ಧ್ವಾಷ್ಪದೇಯ ಕುಲಾ
ಮಲವ್ಯೋಮ ಭಾಸನ ಭಾಸ್ಕರಸ್ಯ ಸ್ವಭುಜ ಜವಜಯ ಜನಿತ ಸುಜನ ಜನಪದ
ಸ್ಯ ದಾರಕಾಂಗಣ ವಿಹಾರಣ ರಣೋಪಲಬ್ಧವ್ರಣವಿಭೂಷಣಸ್ಯ ಕಾಣ್ವಾಯನ ಸಗೋತ್ರಸ್ಯ

ಪುಟ 138 ಚಲುವನಹಳ್ಳಿ

ಮೊದಲ ಹಲಗೆ – ಒಳಭಾಗ

(Kannada Sa.pa. Vol.66-67, p.15-26; IWG No.156)

ಸ್ವಸ್ತಿ ಜಿತಮ್ಭಗವತಾ ಗತಘನ ಗಗನಾಭೇನ ಪದ್ಮನಾಭೇನ ಗಂಗವಂಶೋದ್ಯೋತ
ಕರಸ್ಯ ಸ್ವಭುಜ ವೀರ್ಯ್ಯೋಪಾರ್ಜ್ಜಿತ ವಿಭವಸ್ಯ ಅನೇಕ ಸಮರಾವಮರ್ದ್ದವಿಜಯಲಬ್ಧ
ಯಶಃ ಪ್ರಕಾಶಸ್ಯ ಶ್ರೀಕೊಙ್ಗಣಿವರ್ಮ್ಮಧರ್ಮ್ಮಾಧಿರಾಜಸ್ಯ ಪ್ರಪೌತ್ರೇಣ ಶಕ್ತಿತ್ರಯ ಸಮ್ಪನ್ನಸ್ಯ ನೀ
ತಿಶಾಸ್ತ್ರಸ್ಯ ವಕ್ತ ಪ್ರಯೋಕ್ತ್ರುಃ ದತ್ತಕ ಸೂತ್ರಾರ್ತ್ಥ ವ್ಯಾಖ್ಯಾಯಿನಃ ಶ್ರೀ ಮಹಾಧವ ಮಹಾರಾಜಸ್ಯ

ಪುಟ 138 ಪೆನಗೊಂಡೆ

ಎರಡನೆಯ ಹಲಗೆ – ಮುಂಭಾಗ

(EI.XIV p.331-40; IWG No.8)

ಧವ ಮಹಾಧಿರಾಜಸ್ಯ ತಸ್ಯ ಪುತ್ರಸ್ಯ ಅನೇಕ ಯುದ್ಧೋಪಲಬ್ಧ ವ್ರಣ ವಿಭೂಷಿತ ಶರೀರಸ್ಯ ನಾನಾ
ಶಾಸ್ತ್ರೇತಿಹಾಸ ಪುರಾಣತತ್ವಜ್ಞಸ್ಯ ಶ್ರೀಪಲ್ಲವ ಕುಲೇನ್ದ್ರೇಣ ಸಿಂಹವರ್ಮ್ಮ ಮಹಾರಾಜೇನ ಯಥಾರ್ಹಮ
ಭಿಷಿಕ್ತಸ್ಯ ಗಂಗರಾಜಸ್ಯ ಅಯ್ಯವರ್ಮ್ಮಣಃ ಪುತ್ರೇಣ ಪಿತೃಪೈತಾಮಹಾಗುಣ ಸಂಯುಕ್ತೇನ ದೇವ

ಪುಟ 140 ದಿವೇ ಆಗರ್

ನಾಲ್ಕನೆಯ ಹಲಗೆ – ಮುಂಭಾಗ

(ಭಾರತೀಯ ಇತಿಹಾಸ ಸಂಶೋಧನ ಮಂಡಳ ಪೂನ; IWG No.22)

ಸರ್ಗ್ಗಟೀಕಾಕಾರೇಣ ದುರ್ವ್ವಿನೀತ ನಾಮಧೇಯೇನ ಸಮಸ್ತ ಪಾಣ್ನಾಟ ಪುನ್ನಾಟಾಧಿಪತಿನಾ ವೈ
ವಸ್ವತೇನೇವ ಮನುನಾ ವರ್ಣ್ನಾಶ್ರಮಾಭಿ ರಕ್ಷಿಣಾ ದಕ್ಷಿಣಾಸ್ಥಿಶಮಭಗೋಪ್ತುಂ ಪರ್ಯ್ಯಾಪ್ತ
ವತಾ ಪ್ರತಿಜನಿನೇನ ಸುಪ್ರಸಾ ಆತ್ಮನಃಪ್ರವರ್ದ್ಧಮಾನೇ ಚತ್ವಾರಿಂಶತ್ತಮೇತಿ ಜಯ ಸ
ಮ್ವತ್ಸರೇ ವೈಶಾಖೇ ಮಾಸೇ ಶುಕ್ಲಪಕ್ಷೇ ಪುಣ್ಯಾಯಾನ್ತಿಥೌ ರೋಹಿಣೀ ನಕ್ಷತ್ರೇ ಕೌಸ್ತ
ಗೋತ್ರಾಯ ವಾಜಸನೇಯಾಯ ಸೇನಶರ್ಮ್ಮಣೇ ಕೋವಳಾಲವಿಷಯೇ ಪರಲ್ಲೂಡೇ ಪ್ರ
ಭೃತಿ ಚೂಜೂಜಿಗ್ರಾಮ ಚತುರ್ಭಾಗಶ್ಚ ತೋಳಪಕ್ಕುಂಟೇ ತಟಾಕಶ್ಚಯಾನ್ಯೇತಾನಿ ವೃತ್ತಿ

ಪುಟ 140 ಗುಮ್ಮರೆಡ್ಡಿಪುರ

ಮೊದಲ ಹಲಗೆ – ಹಿಂಬದಿ

(MAR 1911-12, p.31-32; IWG No.24)

ಸ್ವಸ್ತಿ ಜಿತಮ್ಭಗವತಾ ಗತಘನಗಗನಾಭೇನ ಪದ್ಮನಾಭೇನ ಶ್ರೀಮಜ್ಜಾಹ್ನವೇಯ ಕುಲಾಮಲವ್ಯೋಮಾ
ವ ಭಾಸನ ಭಾಸ್ಕರಸ್ಯ ಸ್ವಖಡ್ಗೈಕ ಪ್ರಹಾರ ಖಣ್ಡಿತ ಮಹಾಶಿಲಾಸ್ತಮ್ಭಲಬ್ಧ ಬಲಪರಾಕ್ರಮ ಯ
ಶಸಃ ದಾರಣಾರಿಗಣ ವಿದಾರಣ ರಣೋಪಲಬ್ಧ ವ್ರಣವಿಭೂಷಣ ವಿಭೂಷಿತಸ್ಯ ಕಾಣ್ವಾಯನ
ಸಗೋತ್ರಸ್ಯ ಶ್ರೀಮತ್ಕೊಙ್ಗಣಿವರ್ಮ್ಮಧರ್ಮ್ಮ ಮಹಾಧಿರಾಜಸ್ಯ ಪುತ್ರಸ್ಯ ಪಿತರನ್ವಾಗತ
ಗುಣಯುಕ್ತಸ್ಯ ವಿದ್ಯಾ
ವಿನಯ ವಿಹಿತ ವೃತ್ತಸ್ಯ ಸಮ್ಯಕ್ಪ್ರಜಾಪಾಲನ ಮಾತ್ರಾಧಿಗತ ರಾಜ್ಯ ಪ್ರಯೋಜನಸ್ಯ ನಾನಾಶಾಸ್ತ್ರಾರ್ತ್ಥ

ಪುಟ 142 ಕಿರುಮೊರೆಕೋಳಿ
(IWG No.158)

ಸರ್ವ್ವವಿದ್ಯಾಪಾರಗೇಣ ವಿಶೇಷತೋ ನೀತಿಶಾಸ್ತ್ರ ನಿಪುಣ ಬುದ್ಧಿನಾ ಕಿಂ ಬಹುನಾ
ಸಕಲ ಸಂಪದಾ ,
ಧಾರಭೂತೇನ ತೈತ್ತರೀಯ ಚರಣಾಯ ಪ್ರವಚನ ಕಲ್ಪಾಯ ಕುಮ್ಬಶರ್ಮ್ಮಣೇ
ಕಪ್ಪುನಿ ದಕ್ಷಿಣ ತ
ಟೇ ಕಿಱುಮೊಱಿಕೋಳಿ ನಾಮಗ್ರಾಮ ಕಾಶ್ಯಪಗೋತ್ರಾಯ ಉದಕಪೂರ್ವ್ವಂ ಯಥಾ
ವಿಧಿ ಪ್ರಾದಾ
ಯಿ ಸಕಲ ಮಹಾಮನುಷ್ಯ ಪ್ರತ್ಯಕ್ಷಂ ಸಸರ್ವ್ವ ಪರಿಹಾರಂ ವೈಶಾಖಮಾಸೇ ಪ್ರಶಸ್ತ ತಿಥಿ
ಮುಹೂರ್ತೇ ನಕ್ಷತ್ರೇ ದಿನೇ ಅಪಿಚ ಚಾತ್ರ ಮನುಗೀತಃ ಶ್ಲೋಕಾ ಸ್ವದತ್ತಾಂ ಪರದತ್ತಾಂ
ವಾ ಯೋ ಹರೇತ ವಸುನ್ಧರಾಂ
ಷಷ್ಟಿವರ್ಷ ಸಹಸ್ರಾಣಿ ಘೋರೇ ತಮಸಿ ವರ್ತ್ತತೇ ಬಹುಭಿರ್ವ್ವಸುಧಾ ದತ್ತಾ
ಬಹುಭಿಶ್ಚಾಭಿ ಪಾಲಿತಾ

ಪುಟ 143 ಹಳ್ಳೆಗೆರೆ
ಎರಡನೆಯ ಹಲಗೆ – ಮುಂಭಾಗ
(EC III MD.113 (old); IWG No.31)

ಬಲಪಱ್ಯಾಪನ್ನ ಧರ್ಮ್ಮವೃಷೋದ್ಧರಣ ನಿತ್ಯ ಸನ್ನದ್ಧ ಶ್ರೀಮಾನ್ವಿಷ್ಣುಗೋಪ
ಮಹಾಧಿರಾಜಃ ತತ್ಪುತ್ರಃ ಶ್ರೀಮತ್ಕದಮ್ಬ ಕುಲ ಗಗನಗಭಸ್ತಿ ಮಾಲಿ
ನಃ ಶ್ರೀಮತ್ಕೃಷ್ಣವರ್ಮ್ಮ ಮಹಾಧಿರಾಜಸ್ಯ ಪ್ರಿಯಭಾಗಿನೇಯೋ ವಿಜೃಮ್ಭಮಾಣ ಶಕ್ತಿತ್ರಯ
ಸಮ್ಪನ್ನಃ ಸಮ್ಯಮಾವನತ ಸಮಸ್ತ ಸಾಮನ್ತ ಮ
ಣ್ಡಲೋ ವಿದ್ಯಾವಿನಯಾತಿಶಯ ಪರಿಪೂರಿತಾನ್ತರಾತ್ಮಾ ನಿರವಗ್ರಹಃ ಪ್ರಧಾನಶೌರ್ಯ್ಯೋವಿದ್ವತ್ಸು
ಪ್ರಥಮಗಣ್ಯಃ ಶ್ರೀಮತ್ಕೊಙ್ಗಣಿ ಮಹಾ
ಧಿರಾಜಃ ಅವನೀತನಾಮಾ ತತ್ಪುತ್ರಃ ವಿಜೃಮ್ಭಮಾಣ ಶಕ್ತಿತ್ರಯಃ ಅನ್ದರಿ ಅಲತ್ತೂರ್ಪ್ಪೊರುಳಱೆ
ಪೆರ್ನ್ನಗರಾದ್ಯನೇಕ ಸಮರ
ಮುಖ ಮಖಹುತ ಪ್ರಹುತ ಶೂರಪುರುಷ ಪಶೂಪಹಾರ ವಿಘಸವಿಹಸ್ತೀಕೃತ ಕೃತಾನ್ತಾಗ್ನಿಮುಖಃ
ಕಿರಾತಾರ್ಜುನೀಯಪಞ್ಚದ
ಶಸರ್ಗ್ಗಟೀಕಾಕಾರಃ ದುರ್ವ್ವಿನೀತ ನಾಮಧೇಯಃ ಶ್ರೀಮಾನ್ಕೊಙ್ಗಣಿವೃದ್ಧ ರಾಜಃ ತಸ್ಯ ಪುತ್ರ
ದುರ್ದ್ದಾನ್ತವಿಮರ್ದ್ದ ವಿಮೃದಿತ ವಿಶ್ವಮ್ಭರಾಧಿಪ ಮೌಲಿ
ಮಾಲಾಮಕರನ್ದ ಪುಞ್ಜಪಿಞ್ಜರೀಕ್ರಿಯಮಾಣ ಚರಣಯುಗಲನಳಿನಃ ಶ್ರೀಮತ್ಕೊಙ್ಗಣಿ
ವೃದ್ಧರಾಜೋ ಮುಷ್ಕರ ದ್ವಿತೀಯ ನಾಮಧೇಯಃ ತ
ದಾತ್ಮಜಃ ಉದಿತೋದಿತ ಸಕಲ ದಿಗನ್ತರಪ್ರಥಿತ ಸಿನ್ಧುರಾಜ ದುಹಿತೃಜನನೀಕಃ ಶ್ರೀವಿಕ್ರಮ
– ಪ್ರಥಿತ ನಾಮಧೇಯಃ ಶ್ರೀಮಾನ್ಕೊ

ಪುಟ 143 ನಾಗಮಂಗಲ ಶಾಸನ

ಸ್ವಸ್ತಿ ಜಿತಮ್ಭಗವತಾ ಗತಘನಗಗನಾಭೇನ ಪದ್ಮನಾಭೇನ ಶ್ರೀಮಜ್ಜಾಹ್ನವೇಯ
ಕುಲಾಮಲ ವ್ಯೋ
ಮಾವಭಾಸನ ಭಾಸ್ಕರಃ ಸ್ವಖಡ್ಗೈಕ ಪ್ರಹಾರ ಖಣ್ಡಿತ ಮಹಾಶಿಲಾಸ್ತಮ್ಭಲಬ್ಧ
ಬಲಪರಾಕ್ರಮೋ ದಾರುಣಾ

ರಿಗಣ ಪಿದಾರಣೋಪಲಬ್ಧ ವ್ರಣಪಿಭೂಷಣ ಪಿಭೂಷಿತಃ ಕಾಣ್ವಾಯನ ಸಗೋತ್ರಃ
ಶ್ರೀಮತ್ಕೊಙ್ಗಣಿವರ್ಮ್ಮ
ಧರ್ಮ್ಮ ಮಹಾಧಿರಾಜಃ ತಸ್ಯ ಪುತ್ರಃ ಪಿತುರನ್ವಾಗತ ಗುಣಯೋಕ್ತೋ ಪಿದ್ಯಾಪಿನಯ
ಪಿಹಿತ ವತ್ತ . .

ಪುಟ 144 *ಶ್ರೀ ಪುರುಷನ ಶಾಸನ*

ಸ್ವಸ್ತಿ ಜಿತಮ್ಭಗವತಾ ಗತಘನಗಗನಾಭೇನ ಪದ್ಮನಾಭೇನ ಶ್ರೀಮಜ್ಜಾಹ್ನವೇಯ
ಕುಲಾಮಲ ವ್ಯೋಮಾ
ವಭಾಸನ ಭಾಸ್ಕರಸ್ಯ ಸ್ವಖಾಙ್ಗೈಕ ಪ್ರಹಾರ ಖಿಣ್ಡಿತ ಮಹಾ ಶಿಲಾಸ್ತಮ್ಭಲಬ್ಧ
ಬಲಪರಾಕ್ರಮಯ
ಶನಾ ದಾರುಣಾರಿಗಣ ಪಿದಾರಣ ರಣೋಪಲಬ್ಧ ವ್ರಣಪಿಭೂಷಣ ಪಿಭೂಷಿತಸ್ಯ
ಕಾಣ್ವಾಯನ
ಸಗೋತ್ರಸ್ಯ ಶ್ರೀಮತ್ಕೊಙ್ಗಣಿವರ್ಮ್ಮ ಧರ್ಮ್ಮಮಹಾಧಿರಾಜಸ್ಯ ಪುತ್ರಸ್ಯ ಪಿತುರನ್ವಾಗತ
ಗಣಯುಕ್ತಸ್ಯ ಪಿದ್ಯಾ

ಪುಟ 144 ಹೊಸೂರು

ನಾಲ್ಕನೆಯ ಹಲಗೆ - ಹಿಂಬದಿ

(EC.X. Gd.47; IWG No.45)

ದೇ ಪಳಂಗೂಡಲೂರ್ಮ್ಮ ಜಿಯಾಚಿ ಗೂಡಲೂಪ್ಪಜುಪಿ ಶ್ರೀಪುರಮಿತಿ ಚತುರ್ಷುಗ್ರಾಮೇಷು ಗ್ರಾ
ಮಮ್ಪ್ರತಿ ದ್ವಾದಶಖಿಣ್ಡಿಕಾವಪನ ಸಮ್ಮಿತ ಶಾಲ್ಯಾದಿ ವಪನಯೋಗ್ಯಂ ಭೂಮಿತ್ರಿಕುಡ
ಬ ಸಮ್ಮಿತಾವಪನ ಮಾತ್ರ ಗೃಹಸ್ಥಾನಂ ತ್ರಿಶಂಕುಡಬ ಸಮ್ಮಿತಂಮೂರ್ಪ್ಪಾಬಿದ್ಧಿಖಿ
ಣ್ಡಿಕಾವಪನ ಸಮ್ಮಿತಂ ತೋಟಕ್ಷೇತ್ರಂ ತ್ರಿಪತ್ಖಣ್ಡಿಕಾವಪನ ಸಮ್ಮಿತಂ ಪ್ರಿಯಂಗ್ವಾ
ದಿವಪನ ಯೋಗ್ಯಂ ಮಾರಣ್ಯಾಣ್ಣದತ್ತಂ ಏತತ್ಸರ್ವ್ವಂ ಸರ್ವ್ವ ಪರಿಹಾರೋಪೇತಂ ಉದಕಪೂರ್ವ್ವಂ
ದತ್ತಃ ಅಸ್ಯ ದಾನಸ್ಯ ಸಾಕ್ಷಿಣಃ ಷಣ್ಣವತ ಸಹಸ್ರ ಪಿಷಯ ಪ್ರಕೃತಯಃ

ಪುಟ 148 ಬಾದಾಮಿ ಬಂಡೆಗಲ್ಲ ಶಾಸನ

ಒಂದನೆಯ ಪುಲಕೇಶಿ

(K.I.Vol. II)

ಸ್ವಸ್ತಿ ಶಕವರ್ಷೇಷು ಚತುಶ್ಶತೇಷು ಪಞ್ಚ ಷಷ್ಟಿಯುತೇಷು
ಅಶ್ವಮೇಧಾದಿಯಾಜ್ಜ್ವಾ ಶ್ರೌತವಿಧಾನತ
ಹಿರಣ್ಯ ಗರ್ಭೋ ಸಮ್ಭೂತ ಶ್ವಲಿಕ್ಯೋವಲ್ಲಭೇಶ್ವರ
ಧರಾಧರೇನ್ದ್ರ ವಾತಾಪಿಮಜೇಯಮ್ಭೂತಯೇ ಭೂಪ

ಪುಟ 149 ಗೊಡಚಿ

(ಕತ್ತಿ ಅರಸ) ಎರಡನೆಯ ಹಲಗೆ - ಹಿಂಬದಿ

(EI.XXVIII. p.62)

ಷ್ಟ ಸಾಧಾರಣ ವ್ಯಾಖ್ಯಾನ ಸಂಪದಾ ಅದ್ಯಕಾಲ ಬೃಹಸ್ಪತಿನಾ ರಾ
ಜ್ಯ ಸರ್ವ್ವಸ್ವ ಧುರಂಧರೇಣ ವ್ಯಾಘ್ರಸ್ವಾಮಿನಾ ಮಹಾಬ್ರಾಹ್ಮಣೇನ ಪಿ
ಜ್ಞಾಪಿತಃ ಸುಚ್ಛಾಲಿಗ್ರಾಮಸ್ಯ ಮಜುಮಸ್ಥಂ ಸರ್ವ್ವಜಾತಕಂ ಸತೋಟ್ಟಂ ಸಜೀರ

ಕಂ ಸಮಾಸೀಯಂ ಸನಿವೇಶಂ ರಾಜಮಾನೇನ ಪಂಙ್ಕ್ತ್ಯಾ ವಿಂಶತಿ ನಿವರ್ತನಂ
ಕ್ಷೇತ್ರಂ ಕೌಣ್ಡಿನ್ಯ ಸಗೋತ್ರಾಯ ವೇದವೇದಾಂಗ ಪಾರಗಾಯ . . . .

ಪುಟ 150 ತಮಟುಕಲ್ಲು ಶಾಸನ

ಸ್ವಸ್ತಿಶ್ರೀ ಮತ್ತಸಿಕ್ಥಪುರಾಧಿಪತಿಃ ಅಥ ಭಾರದ್ವಾಜ ವಂಶೇ ಧನಾಗಮಸ್ಯ ಪುತ್ರೋ ಮನಾ
ಗಮಃ ತಸ್ಯೈವ ಸೂನುಃ ಗುಣಮಧುರೋನಾಮ ಸತಾ ತ್ಯಾಗವಾನಿತಿ ಪ್ರಶಸ್ತಃ

ಪುಟ 151 ಕೊಪ್ಪರಂ
ಇಮ್ಮಡಿ ಪುಲಿಕೇಶಿ ಶಾಸನ
(EI.XVIII. p.256)

ಸ್ವಸ್ತಿ ಶ್ರೀಮತಾಂ ಸಕಲಭುವನ ಸಂಸ್ತೂಯಮಾನ ಮಾನವ್ಯ ಸಗೋತ್ರಾಣಾಂ ಹಾರಿತೀ
ಪುತ್ರಾಣಾಂ ಸಪ್ತಲೋಕ ಮಾತೃಭಿ ಸಪ್ತಮಾ
ತೃಭಿಃ ಸಮ್ಯಗಭಿವರ್ದ್ಧಿತಾನಾ ಕಾರ್ತಿಕೇಯ ಪರಿಪಾಲನಾಧಿಗತ ಕಲ್ಯಾಣ ಪರಂಪರಾನಾ
ಭಗವಾನ್ನಾರಾಯಣ ಪ್ರಸಾ
ದ ಸಮಸಾದಿತ ವರಾಹಲಾಞ್ಛನೇಕ್ಷಣ ಕ್ಷಣ ವಶೀಕೃತಾಶೇಷ ಮಹೀಭೃತಾಮ
ನೇಕಾಶ್ವಮೇಧಾವಭೃತ ಸ್ನಾ
ನ ಪವಿತ್ರೀಕೃತವಪುಷಾ ಚಾಲುಕ್ಯಾನಾ ಕುಲಮಭ್ಯಲಂಕರಿಷ್ಣೋಃ ಪ್ರತಿಥಕೀರ್ತ್ತಿ ಶ್ರೀ ಕೀರ್ತ್ತಿವರ್ಮ್ಮ
ಪೃಥಿವಿವಲ್ಲಭ ಮ . . .

ಪುಟ 151 ಹಿರೇಗುತ್ತಿ
(ಭೋಜ ಅಶಂಕಿತ) ಮೊದಲ ಹಲಗೆ – ಒಳಭಾಗ
(EI.XXVIII. p.72)

ಜಯತಿ ಸುರಾಸುರ ಮಕುಟಸ್ಫುಟ ಮಣಿಕಿರಣಾವಲೀಢ ಚರಣ
ಯುಗಃ ಅಪರಿಮಿತ ಗುಣಗಣ ಸಿಧಿಸ್ಸ್ನಿಷ್ಯಾನ್ನವಣವತ್ಸಲೋ ಬು
ದ್ಧಃ ಶ್ರೀಭಾಜಾಂ ಭೋಜಾನಾಮನ್ವಯಾಮ್ಬರೇನ್ದುನಾಶಂಕಿತರಾಜೇನ ನ
ಸ್ಥಿಪಲ್ಲಿ ಕೇಕೇಯಾನ್ವಯಾ ಪ್ರಸೂತೇನ ಕೊತ್ತಿಪ್ಪೆಗ್ಗಿಲಿನಾಭ್ಯ . . .

ಪುಟ 152 ಆಮುದಲಪಾಡು
(ಒಂದನೆಯ ವಿಕ್ರಮ-ವರ್ಷ ೫, ಕ್ರಿ.ಶ.೬೫೯-೬೦)
(EI.XXXII. p.175-182)

ರಮುಕ್ಷೇಷು ಚಿತ್ರಕಣ್ಠಾಖ್ಯ ಪ್ರವರ ತುರಂಗ ಮೇಣೈಕೇನೈವ ರಿಪು ನೃ
ಪತಿರುಧಿರ ಜಲಾಸ್ವಾದನ ರಸನಾಯಮಾನ ಜ್ವಲದಮಲ ನಿಶಿ
ತನಿಸ್ತ್ರಿಂಶ ಧಾರಯಾವಧೃತ ಧರಣಿಧರಭುಜಗ ಭೋಗ ಸದೃಶ
ನಿಜಭುಜ ವಿಜಿತ ವಿಜಿಗೀಷುರಾತ್ಮ ಕವಚಾವಮಗ್ನಾನೇಕ
ಪ್ರಹಾರ ಸ್ಸ್ವ ಗುರೋಶ್ಶ್ರಿಯಮವನಿ ಪತಿತ್ರಿತಯಾನ್ತರಿತಾಂ ಮಾ
ತ್ಮಸಾತ್ಕೃತ್ಯ ಕೃತ್ಯೈರಧಿಷ್ಠಿತಾ ಶೇಷರಾಜ್ಯಭರಃ ತಸ್ಮಿನ್ ರಾ
ಜತ್ರಯೇ ವಿನಷ್ಟಾನಿ ದೇವಸ್ವ ಬ್ರಹ್ಮದೇಯಾನಿ ಧರ್ಮ್ಮಾಯ
ಬೋಧಿವೃದ್ಧಯೇ ಸ್ವಮುಖೇನ ಸ್ಥಾಪಿತವಾನ್ ರಣಶಿರಸಿ . . .

ಪುಟ 152 ಹಳದೀಪುರ

ಮೊದಲ ಹಲಗೆ – ಒಳಭಾಗ

(ಇಇ.ಫಿಫಿಇ. ೩.೧೭೮)

ಸ್ವಸ್ತಿ ಪಿಕ್ರಮಾದಿತ್ಯ ಸತ್ಯಾಶ್ರಯ ಶ್ರೀಪ್ರಿಥುಪಿವಲ್ಲಭ ಪಲ್ಲ
ವರಾಜ ಗೋಪಾಲ ದೇವಸ್ಯ ಕೈಕೇಯ ವಂಶೋದ್ಭವೋದ್ಧತ ಪ್ರಧಾನ ಪು
ರುಷಸ್ಯ ಅನೇಕ ಗುಣಗಣಾಲಂಕ್ರತ ಪ್ರಸೇವ್ಯ ಲಕ್ಷ್ಮೀ ನಿವಾ
ಸ ವಕ್ಷಸ್ಥಲಸ್ಯ ಅನೇಕ ರಣಪಿಪುಲ ಶತ್ರುಜನ ಪ್ರಭಞ್ಜನ ಕ
ರಿಕರಾಕಾರ ಬಾಹುದ್ವಯಸ್ಯ ಚಣ್ಡಮಹಸೇನ ಪುತ್ರಸ್ಯ ಪಯ್ಯೋ

ಪುಟ 157 ಮಯಿದವೋಲು

(Select Inscriptions)

ಅನೇಹಿ ಚ ಸವ ಬಹ್ಮ
ದೇಯಮಜಾದಾಯ

ಪುಟ 158 ಹಿರೇ ಹಡಗಲಿ

ಪಲ್ಲವ ಶಿವಸ್ಕಂದ ವರ್ಮ

ಕವಿಶಾ. I ಹಡ. ೫೭

ಅಂಹೇ ಹಿ ಎ ಆಚಂದ ತಾರಕಾಲಿಕ ಕಾತೂಣಂ ಉದಕಾದಿಂಸಪ
ದತ್ತೋ ಏತಂ ಬಂಹಣಾಣಂ ಚಿಲೇರೇಕೋಡುಂವಕವಾಟಕ
ಅಕರಯೋಲ್ಲ ಕವಿನೇಸಿಖಟ್ಟಾವಾಸಂ ಅದೂಧದಧಿಗಹಣಂ
ಅರಥ್ಥಸಂ ವಿನಯಿಕಂ ಅಲೋಣಗುಲ ಚೋಭಂ ಅಕರತೀಥ್ಥಿ

ಪುಟ 152 ಸಾಲಂಕಾಯನ

(ನಂದಿವರ್ಮ) ಒಂದನೆಯ ಹಲಗೆ – ಹಿಂಭಾಗ

(EI.XXXI. p.4-5)

ವಿಜಯ ವೆಂಗಿಪುರಾ ಬಪ್ಪಭಟ್ಟಾರಕ
ಪಾದ ಪರಿಗ್ಗಹಿತಸ್ಸ ಮಹಾರಾಜ
ಸಿರಿನಂದಿವಂಮಸ್ಸ ವಚನೇಣೇನ ಪಿ . . .

ಪುಟ 159 ಮಟ್ಟೆಪಾಡು

(EI.XVII, p.328)

ಗರ್ಬ್ಬೋದ್ಭವೋದ್ಭವಸ್ಯ ಮಹಾರಾಜ ಶ್ರೀ ದಾಮೋದರವರ್ಮ್ಮಣೋ ವಚನೇನಾ
ಕಂಗೂರ ಗ್ರಾಮೇಯಕಾಃ ವಕ್ತವ್ಯಾಃ ಏಭ್ಯೋ ಬ್ರಾಹ್ಮಣೇಭ್ಯೋ ನಾನಾಗೋತ್ರ ಚರಣ·

ಪುಟ 160 ಸಿರಿಪುರಂ

ಅನನ್ತವರ್ಮ (ಕಳಿಂಗ) ೬ನೇ ಶತಮಾನ

(EI.XXIV. p.51)

--- ಸ್ವಸ್ತಿ ವಿಜಯದೇವಪುರಾದ್ವಾಸಿಷ್ಟ ವಿಪುಲಾಮಲ ಸಕಲಚನ್ದ್ರಮಸೋ
ವಿಭ್ರತ್ ಭೂಹಿರಣ್ಯ ಗೋಸಹಸ್ರಾದ್ಯನೇಕ ದಾನಧರ್ಮ್ಮಾಭಿರತಸ್ಯ ಶಕ್ತಿತ್ರಯೋ
ಪನತರಾಜ್ಯ ಸಂಪ್ಪದಸ್ಯ ಅತ್ಯುತಾಮಲ ಶರಚನ್ದ್ರ ಚನ್ದ್ರಿಕಾವದಾತೋರು
ಯಶಸ ಶ್ರೀ(ಮ)ಮಹಾರಾಜ ಗುಣಾವರ್ಮ್ಮಣಃ ಆತ್ಮಜಸ್ಯಾನೇಕ ಗುಣಗಣಾ
ಭ್ಯಲಂಕೃತಸ್ಯ ಶ್ರೀಮಾಂ ಮಹಾರಾಜ ಪ್ರಭಂಜ್ಜನವರ್ಮ್ಮಣಃ ಸೂನುರ್ನ್ನಯ ವಿನಯ
ಸತ್ಯಶೌಚಾಚಾರ ತ್ಯಾಗೌದಾರ್ಯ್ಯದಾಕ್ಷಿಣ್ಯೋತ್ಸಾಹ ಸಾತ್ವಸಪ್ಪನ್ನೋ ಸ್ವಭುಜ

ಪುಟ 160 ಅಚ್ಯುತಾಪುರಂ

ಇಂದ್ರವರ್ಮ-ವರ್ಷ ೮೭

(EI.III. p.128)

--- ಸ್ವಸ್ತಿ ಸರ್ವ್ವರ್ತುರಮಣೀಯಾದ್ವಿಜಯ ಕಲಿಙ್ಗನಗರಾತ್ಸಕಲ ಭುವನನಿರ್ಮ್ಮಾಣೈಕ
ಸೂತ್ರಧಾರಸ್ಯ ಭಗವತೋ ಗೋಕರ್ಣೇಸ್ವಾಮಿನಶ್ಚರಣ ಕಮಲ ಯುಗಲ ಪ್ರಣಾಮಾ
ದಪಗತ ಕಲಿಕಲಙ್ಕೋ ವಿನಯನಯ ಸಮ್ಪದಾಮಾಧಾರಃ ಸ್ವಾಸಿಧಾರಾಪರಿ
ಸ್ಪನ್ದಾಧಿಗತ ಸಕಲ ಕಲಿಙ್ಗಾಧಿರಾಜ್ಯಶ್ಚತುರುದಧಿ ತರಙ್ಗಮೇಖಲಾವನಿತ
ಲ ಪ್ರವಿತತಾಮಲಯಶಾಃ ಅನೇಕ ಸಮರ ಸಂಕ್ಷೋಭ ಜನಿತ ಜಯಶಬ್ದೋ
ಗಾಙ್ಗಾಮಲ ಕುಲಪ್ರತಿಷ್ಠಃ ಪ್ರತಾಪಾತಿಶಯಾನಾಮಿತ ಸಮಸ್ತ ಸಾಮನ್ತ

ಪುಟ 161 ರಾಮತೀರ್ಥಂ

(ವಿಷ್ಣುಕುಂಡಿ) ಇಂದ್ರವರ್ಮ-ವರ್ಷ ೨೭

ಮೂರನೆಯ ಹಲಗೆ - ಮುಂಭಾಗ

(EI.XII. p.135)

ಆಕ್ಷೇಪ್ತಾ ಚಾನುಮನ್ತಾ ಚ ತಾನ್ಯೇವ ನರಕೇ ವಸೇತ್ ಬಹುಭಿರ್ವ್ವಸುಧಾ ದತ್ತಾ ಬಹುಭಿಶ್ಚಾನು
ಪಾಲಿತಾ ಯಸ್ಯ ಯಸ್ಯ ಯ
ದಾ ಭೂಮಿ ತಸ್ಯ ತಸ್ಯ ತದ ಫಲಮ್ ಸ್ವದತ್ತಾಂ ಪರದತ್ತಾಂ ವಾಯತ್ನಾದ್ರಕ್ಷಯುಧಿಷ್ಠಿರ
ಮಹಿಮ್ಮಾಂ ಹಿಮತಾಂ ಶ್ರೇಷ್ಠ ದಾನಾಚ್ಛ್ರೇಯೋ
ನುಪಾಲನಂ ಭೂಮಿ ದಾನಾತ್ ಪರಂ ದಾನಂನ್ನಭೂತ ನಭವಿಷ್ಯತಿ ತಸ್ಯೈವ ಹರಣಾತ್ಪಾಪಂ
ನ ಭೂತನ್ನಭವಿಷ್ಯತಿ ಶ್ರೀಮತೋರಾಜ್ಯಕಾ
ಲಃ ವರ್ಷ್ಷಾಣೇನ್ದ್ರವರ್ಮ್ಮಣಃ ಸಪ್ತಾವಿಂಶತಿಕಂ ಜೇಷ್ಠಮಾಸ ಶುಕ್ಲಪಕ್ಷ ಸಪ್ತಮ್ಯಾಂ ದತ್ತೋ ಗ್ರಾಮಂ
ತಸ್ಮಿನ್ನೇವ ಶಾಸನಾನಿ ಸರ್ಗ್ಗ ಇತಿಸಂಬೋಧ
ನಾತ್ ॥

ಪುಟ 161 ರೇಯೂರು

ಪಲ್ಲವ ನರಸಿಂಹವರ್ಮ ವರ್ಷ ೧೨

(EI.XXIX. p.96)

ಸ್ವಸ್ತಿ ಶ್ರೀಮತ್ ಜಿತಮ್ ಭಗವತಾಮ್ ಕಾಞ್ಚೀಪುರಾಧಿಷ್ಠಾನಾತ್ಪಲ್ಲವಾನಾಮ್ ಭಾರದ್ವಾಜ
ಸಗೋತ್ರಾಣಾಂ ಸ್ವವೀರ್ಯ್ಯಾದಿಗತರಾಜ್ಯಸ್ಯ ಅಭ್ಯರ್ಚ್ಚಿತ ಶಕ್ತಿ ಸಿದ್ಧಿಸಮ್ಪನ್ನಸ್ಯ

ಪ್ರತಾಪೋಪನತ ರಾಜ್ಯಮಣ್ಡಲಸ್ಯ ಮಧ್ಯಮಲೋಕಪಾಲಸ್ಯ ಲೋಕಪಾಲಾನಾಮ್ಪಞ್ಚ
ಮಸ್ಯ ಪರಮ ಬ್ರಹ್ಮಣ್ಯಸ್ಯ ಮಹಾರಾಜಸ್ಯ ಶ್ರೀಮಹೇನ್ದ್ರ ವಿಕ್ರಮವರ್ಮ್ಮಣಃ ಪೌತ್ರಃ ಬಹು
ಸಮರವಿಜಯ ಲಬ್ಧ ಯಶಃ ಪ್ರಕಾಶಸ್ಯ ವಿಧಿವಿಹಿತ ಸರ್ವ್ವಮರ್ಯ್ಯಾದಸ್ಯ ಸ್ಥಿತಿ ಸ್ಥಿತಸ್ಯ . . .

ಪುಟ 164 ಬ್ರಿಟಿಷ್ ಮ್ಯೂಸಿಯಂ ಪ್ಲೇಟ್

ಮೂರನೆಯ ಗೋವಿಂದ ಕ್ರಿ.ಶ.೮೦೪

ಮೊದಲ ಹಲಗೆ – ಒಳಭಾಗ

ಸ್ವಸ್ತಿ ಶಕನೃಪ ಕಾಳಾತೀತ ಸಂವತ್ಸರಂಗಳೇೞ್ನೂಱಿಪ್ಪತ್ತಾಱನೆ
ಯಾ ಸುಭಾನು ಎಮ್ಬಾ ವರ್ಷದಾ ವೈಸಾಖಮಾಸ ಕೃಷ್ಣ ಪ
ಕ್ಷ ಪಞ್ಚಮೀ ಬೃಹಸ್ಪತಿ ವಾರಮಾಗಿ ಸ್ವಸ್ತಿ ಪ್ರಭೂ
ತವರ್ಷ ಶ್ರೀ ಪೃಥುವೀವಲ್ಲಭ ಮಹಾರಾಜಾಧಿರಾಜ ಪರಮೇ
ಶ್ವರ ಗೋಯಿನ್ದರಭಟಾರರಾ ಗಾಮುಣ್ಡಬ್ಬೆ ಮಹಾದೇ
ವಿಯಾರಾಗಿ ರಾಜ್ಯಾಪ್ರವರ್ದ್ಧಮಾನ ಕಾಲದೊಳ್

ಮೂರನೇ ಹಲಗೆ ಒಳಭಾಗ

ನಮೇನಾನ್ಯತೋಭಯಂ ಪೂರ್ವ್ವಸ್ಥಿತಿಕು
ನ್ದೆಮ್ಬತೊಱೆಮೇರೆ ಮಹಾಸನ್ಧಿವಿಗ್ರಾಹಾಧಿ
ಕಾರಧೀಪತೇ ಶ್ರೀಧರಸ್ಯ ಲಿಖಿತಃ ಸ್ಯ

ಪುಟ 165 ಕೊಟ್ಟಂಬಾ

ಎರಡನೆಯ ಹಲಗೆ – ಮುಂಭಾಗ

(MAR 1924, p.72-79; IWG No.50)

ರ್ಮ್ಮ ವೃಷೋದ್ಧರಣ ನಿತ್ಯಸನ್ನದ್ಧಃ ಶ್ರೀಮನ್ಮಾಧವ ಮಹಾಧಿರಾಜಃ ತತ್ಪುತ್ರಃ
ಶ್ರೀಮತ್ಕದಮ್ಬ ಕುಲಗಗನ
ಗಭಸ್ತಿ ಮಾಲಿನಃ ಕೃಷ್ಣವರ್ಮ ಮಹಾಧಿರಾಜಸ್ಯ ಪ್ರಿಯಭಾಗಿನೇಯೋ ವಿದ್ಯಾವಿನಯಾತಿಶಯ
ಪರಿಪೂರಿತಾ
ನ್ತರಾತ್ಮಾ ನಿರವಗ್ರಹ ಪ್ರಧಾನ ಶೌರ್ಯ್ಯೋ ವಿದ್ವಸ್ತುಪ್ರಥಮಗಣ್ಯಃ ಶ್ರೀಮನ್ಕೊಙ್ಗಣಿ
ಮಹಾಧಿರಾಜಃ ಅ
ವಿನೀತನಾಮಾ ತತ್ಪುತ್ರೋ ವಿಜೃಮ್ಭಮಾಣ ಶಕ್ತಿತ್ರಯಃ ಅನ್ದರಿ ಆಲತೂರ್ಪ್ಪೊರುಳಱೆ
ಪೆರ್ನ್ನಗರಾದ್ಯನೇಕ
ಸಮರ ಮುಖಮಖಿಹುಥ ಪ್ರಹತಸೂರಪುರುಷಪಶೂಪಹಾರ ವಿಘಸವಿಹಸ್ತಿಕೃತ ಕೃತಾನ್ತಾಗ್ನಿ ಮು
ಖಃ ಕಿರಾತಾರ್ಜುನೀಯ ಪಞ್ಚದಶ ಸರ್ಗ್ಗ ಟೀಕಾಕಾರೋ ದುರ್ವ್ವಿನೀತ ನಾಮಧೇಯಃ
ತಸ್ಯ ಪುತ್ರೋದುರ್ದ್ದಾನ್ತ
ವಿಮರ್ದ್ದ ವಿಮೃದಿತ ವಿಶ್ವಮ್ಭರಾಧಿಪ ಮೌಲಿಮಾಲಾ ಮಕರನ್ದ ಪುಂಜಪಿಞ್ಜರೀಕೃಯಮಾಣ
ಚರಣ ಯುಗಲನಳ
ನೋ ಮುಷ್ಕರ ನಾಮಧೇಯಃ ತಸ್ಯಪುತ್ರಃ ಚತುರ್ದ್ದಶ ವಿದ್ಯಾಸ್ಥಾನಾಧಿಗತ ವಿಮಲಮತಿಃ
ವಿಸೇಷತೋ ನವಸೇ

ಪಸ್ಯ ನೀತಿಶಾಸ್ತ್ರಸ್ಯ ವಕ್ತೃಪ್ರಯೋಕ್ತೃ ಕುಶಲೋರಿಪು ತಿಮಿರ ನಿಕರ ನಿರಾಕರಣೋದಯ
ಭಾಸುರಃ ಶ್ರೀವಿಕ್ರ
ಮಪ್ರಥಿತ ನಾಮಧೇಯಃ ತಸ್ಯ ಪುತ್ರಃ ಅನೇಕ ಸಮರ ಸಪಾದಿತ ವಿಜೃಂಭಿತ
ದ್ವಿರದರದನ ಕುಲಿಸಾ

ಪುಟ 166 ಪೆರ್ಜ್ಜರಂಗಿ

ಮೂರನೆಯ ಹಲಗೆ - ಹಿಂಭಾಗ

(MAR 1942, p.208-231; IWG No.90)

ರಾತಿಮಣ್ಣಲೋ ಬಹುಸಮರ ಸಮಾರ್ಜ್ಜಿತ ಜಯಪತಾಕಾಶತ ಶಬಲಿತ ನಭಸ್ಥಲಃ
ಯಸ್ಮಿನ್ನಯಾತಪತಿ ಕೋಪಪಸಂಮ್ಮೂರ್ಛಿತೇಯಾನ್ವಿಷಣಪಟಿತ ಭೂಮಿಭುಜೋರ[ಸಾ]
ಗ್ರೇ ಅನ್ತ್ರಾವಲಿವಲಯಭಿಷಣಮಸ್ತಕಸ್ಯ ವಕ್ತ್ರಾನ್ತರಕ್ಷತಜಕರ್ದ್ದಮಮಸ್ನಿರೀ
ಕ್ಷಃ ಸತು ಶಿಶಿರಕರನಿಕರ ನಿರ್ಮ್ಮಲಾ ನಿಜಯಶೋರಾಶಿ ವಿಶದೀಕೃತ ದಶಾಶಾ ಚಕ್ರವ
ರ್ತ್ತಿ ಲಕ್ಷಣೋಪಲಕ್ಷಿತೋ ನಿರಪೇಕ್ಷ ಪರೋಪಕಾರ ಸಂಪದಾಸ್ಯೈಕ ವ್ಯಾಸನಃ ಪ್ರವರ್ತ್ತಿತ ನ್ಯಾ
ಯಬಲ ಸಮುನ್ಮೂಲಿತ ಕಲಿಕಾಲ ವಿಲಸಿತೋ ನಿಪುಣನಿಜನಿತಿ ಪ್ರಯೋಗಾಪ . . .

ಪುಟ 167 ಹೇಮಾವತಿ ಶಾಸನ

(ಕ.ವಿ.ವಿ. ಶಾಸನ ಸಂಪುಟ.೫)

ಸ್ವಸ್ತಿ ಪಲ್ಲವ ಕುಲಾ
. ನಿಜ ಭುಜಗಜ ವೈ
ರಿವಿಜಿತ ಚತುರನ್ತಮ
ಹೀಮಣ್ಡಲ ಸ್ರೀಮತ್ಪ
ಲ್ಲವಾಧಿರಾಜರ ಮಗಂ
ಅವನತ ಸಮಸ್ತ ಸಾ
ಮನ್ತ ಮಕುಟ ಮಣಿಪಿಟಿ
. ಲುಠಿತಮಸೃಣ ಚರ
ಣ ಸರಸಿಜ ಶ್ರೀನೊಳಿ
ಮ್ಬಾಧಿರಾಜರಾತಜ಼್ಗೆ ಸ್ವಸ್ತಿ
ಸತ್ಯವಾಕ್ಯಕೊಙ್ಗಣಿವರ್ಮ್ಮ
ಧರ್ಮ್ಮ ಮಹಾರಾಜ ಕೊವ
ಳಾಲಪುರವರೇಶ್ವರ ನನ್ದ
ಗಿರಿನಾಥ ಶ್ರೀಮದ್ರಾಜಾ
ಮಲ್ಲ ಪೆಮ್ಮಾನಡಿಗಳ ಮ
ಹಾದೇವಿಯರ ಮಗ ನೀತಿ
ಮಾರ್ಗ್ಗ ಪೆಮ್ಮಾಡಿಯ ತ . . .

ಪುಟ 168 ಗಟ್ಟವಾಡಿ

ಆರನೆಯ ಹಲಗೆ - ಮುಂಬದಿ

(EC.XII Supp.Nj.269; IWG No.119)

ವಿಜಿತಮರ್ಚ್ಚಯ ರಾಜರಾಜೋ ಲಕ್ಷ್ಮೀಪತಿಮರ್ಮ್ಮರಮಿವ ಪ್ರತಿಥಂ ಹಂಸ್ವರ್ಧಿಷ್ಟಂಸ್ವದೇಸ್ಥ
ಮಜಯದ್ವಿರಿಯಂ ಸೂಜುಯ್ಯ

ನ್ಯತ್ರ ಸಾಮಿಯರಶೇಪ್ಪಥ ಬೂತುಗೇನ್ದ್ರ ಕೋಪೆಯಟ್ಟಿಳಯಾನಳಸ್ಸುನಕುಜ
ಸ್ತ್ಯಾಗೇಸಥಿಷ್ಟಜ್ಜಿಜಃ ಸರ್ವ್ವಜ್ಞ
ಸ್ಥಕಳಾಗಮೋ ಗಜಮಹಾಶಾಸ್ತ್ರೇ ಕರೇಣ್ವಾತ್ಮಜಃ ಕೊಬ್ಬಾಗ್ನಿಸ್ವಾರಣ ಬಸ್ಸವಾರಣ ಕರಾಜ್ಯತ್ವಾರಣೇ
ಪಣ್ಣಾವಾರ್ಯ್ಯುರ್ಕ್ತಂ ಪ್ರಾಕ್ತನಯೋಗತಾಸ್ಕ
. . . . ಗ್ರಿೀಮ್ಸ್ತುರ್ಗಹೇ ತಸ್ಯ ಸುಮೂರೋಸ್ತಾರಿತ ಸಕಳ ಕಾಳೇಯ ಕಳಜ್ಜಸ್ಯ
ನಾಮಶ್ರವಣ ಮಾತ್ರೇಣೈ
. . . . . ತಗರ್ವ್ವಗಳಗ್ರಹ ಗ್ರಹಗೃಹಿತ ಪಿಗ್ರಹಿ ಭೂಭೃನ್ಮಣ್ಡಳಸ್ಯ ಸಮಸ್ತ ಶಾಸ್ತ್ರಾರ್ತ್ಥಾನುಗಾಮಿ
ಸತ್ಯ
. . . . ತ್ತಸ್ಯ ಪರಮ ಜೈನಸ್ಯ ಗುಣಮತ್ತರಬ್ಬಾಪುರ ನಾಮಧೇಯಸ್ಯ । ಸ್ವಸ್ತಮೋಘವರ್ಷ
ಶ್ರೀಪೃಥಿವೀವಲ್ಲಭ
ಸುತಾಯಾಂ ಶುಭಲಕ್ಷಣ ನಿವಿಳಾವಯವಶೋಭಿತಾಯಾಮ್ । ಅಪಿಚ । ಆಶೀರ್ವ್ವಾದ
ಪರಮ್ಪರಾಪರಿಣತಾ ಕಲ್ಯಾಣ ಕುಲ್ಯೋ
ದಿತೌ ಶ್ರೀಪ್ರಿಕೀರ್ತ್ತಿ ಪಿಶಿಷ್ಟ ಶೀಲ ಸಮಿತೌ ನೃತ್ತಾದಿ ಪಿದ್ಯಾತತೌ ಶಕ್ತೌ ಸಿದ್ಧ್ಯುದಯಾಯದ
ಜಲ ತತೌ ಚನ್ದ್ರೋಬ್ಬಲಬ್ಬ ಪೃಥು

ಪುಟ 169 ಮುಳಗುಂದ

ರಾಷ್ಟ್ರಕೂಟ ಕೃಷ್ಣ ೨

(EI XIII P. 192)

ಶ್ರೀಮತೇ ಮಹತೇ ಶಾನ್ತ್ಯೇ ಯ ಶ್ರೇಯಸೇ ಪಿಶ್ವವೇದಿನೇ ನಮಶ್ಶಸ್ತ್ರಪ್ರಭಾಖ್ಯಾಯ
ಜೈನ ಶಾಸನ
ವೃದ್ಧಯೇ ಶಕ ನೃಪಕಾಳೇಷ್ಪ ಶತೇ ಚತುರೋತ್ತರ ಪಿಂಶಮು
ತ್ತರೇ ಸಂಪ್ರಗ್ರತೇ ಮಂಘುಬಿ ನಾಮನಿ ವರ್ಷೇ ಪ್ರವ
ರ್ತ್ತಮಾನೇ ಜನಾನುರಾಗೋತ್ಕರ್ಷೇ ಶ್ರೀ ಕೃಷ್ಣವಲ್ಲಭನೃಪೇ ಪಾತಿ
ಮಹೀಂ ಪಿತತಯಶಸಿ ಸಕಳಂ ತಸ್ಮಾತ್
ಪಾಲಯತಿ ಮಹಾಶ್ರೀಮತಿ ಪಿನಯಾಂಬುಧಿ ನಾಮ್ನಿ ಧವಳ ಪಿಷಯಂ
ಸರ್ವ್ವಂ ತಸ್ಮಿನ್ ಮುಳ್ಗುಂದಾಖ್ಯೇ
ನಗರೇ ವರ ವೈಶ್ಯ ಜಾತಿಜಾತಃ ಖ್ಯಾತಃ ಚಂದ್ರಾರ್ಯ್ಯಸ್ತತ್ಪುತ್ರ ಶ್ಚೀಕಾರ್ಯ್ಯ
ಚೇಕರಂ ಜಿನೋನ್ನತ ಭವನಂ
ತತ್ತನಯೋ ನಾಗಾರ್ಯ್ಯ ನಾಮಾ ತಸ್ಯಾನುಜೋ ನಯಾಗಮ ಕುಶಲಃ
ಅರಸಾರ್ಯ್ಯ ದಾನಾದಿ ಪ್ರೋಮ್ಮುಕ್ತ
ಸ್ಸಮ್ಯಕ್ತ್ವ ಸಕ್ತ ಚಿತ್ತ ವ್ಯಕ್ತಃ ತೇನ ದರ್ಶನಾಭರಣ ಬೂಷಿತೇನ
ಪಿತ್ರಿಕಾರಿತ ಜಿನಾಲಯ ಚಸ್ಸಿಕವಾಟೇ
ಸೇನಾನ್ವಯಾನುಗಾಯ ನರ ನರಪತಿ ಯತಿಪತಿ ಪೂಜ್ಯಪಾದ ಕುಮಾರ
ಸೇನಾಚಾರ್ಯ್ಯ ಮೌನಿ ಪೀರಸೇನ
ಮುನಿಪತಿ ಶಿಷ್ಯ ಕನಕಸೇನಸೂರಿ ಮುಖ್ಯಾಯ ಕಂದವರ್ಮ್ಮ ಮಾಳ
ಕ್ಷೇತ್ರೇ ಎಟಿ (ಕ) ಮಾಣವಕ ನಕುಳಾರ್ಯ್ಯ
ಕಳಿಯಮ್ಮಾನಾಂ ಹಸ್ತತ್ಸಹಸ್ರ ವಲ್ಲಿ ಮಾತ್ರಕ್ಷೇತ್ರಂ ಪ್ರಪ್ರಸಿಂಘು
ನಾಗ್ರಹಿತ್ವಾ ನಗರಮಹಾಜನ ಸಿದ್ದೇಶೇ
ದತ್ತಂ ತಜ್ಜಿನಾಲಯಾಯ ತ್ರಿಶತಷಷ್ಠಿ ನಗರ್ಯೈ ಚತುರ್ಥಿ
ಶ್ರೇಷ್ಠಿಭಿಃ ಬಳ್ಳಗೆಬ್ ಕ್ಷೇತ್ರೇ ಸಹಾಸ್ರವಲ್ಲಿ
ಮಾತ್ರ ಕ್ಷೇತ್ರಂ ದತ್ತಂ ತಜ್ಜಿನ ಭವನಾಯ ಪಿಂಶತಿ ಶತ ಮಹಾಜನಾನು

ಮಾತಾಪ್ಪೈಳ್ಯಾಳ ಕ್ಷುಳ ಬ್ರಾಹ್ಮಣ್ಯೈ ಕ್ಷ ತತ್

. . . . ಸಹಸ್ರವಲ್ಲಿ ಮಾತ್ರ ಕ್ಷೇತ್ರಂ

ಪಶ್ಚಂ ಪವಂ ತ್ರಿಕ್ಷ್ಯಾಪಿ ನಾಗವಲ್ಲೀ ಕ್ಷೇತ್ರಾಣಿ ಸರ್ವ್ವಪಾದ . .

ಪುಟ 171 ಕಾಡಲೂರು

ಎರಡನೆಯ ಹಲಗೆ – ಹಿಂಬದಿ

(EI.XXXVI. p.97-110; IWG No.139)

ಶ್ರೀವಲ್ಲಭಾಖ್ಯಸ್ಸಮರ ಶತಜಯಾವಾಪ್ತ ಲಕ್ಷ್ಮೀವಿಳಾಸಃ । ತಸ್ಯಾನುಜೋ ನತನರೇನ್ದ್ರ
ತಿರೀಟ ಕೋಟಿ ರತ್ನಾರ್ಕ್ಕದೀಧಿ

ತಿ ವಿರಾಜಿತ ಪಾದಪದ್ಮಃ ಲಕ್ಷ್ಮ್ಯಾಸ್ಸ್ವಯಂವೃತ ಪತಿರ್ನ್ನಿವ ಕಾಮನಾಮಾಶಿಷ್ಟ ಪ್ರಿಯೋರಿಗಣ
ದಾರುಣ ಗೀತ ಕೀ

ರ್ತ್ತಿಃ ॥ ತಸ್ಯ ಕೊಂಗುಣಿಮಹಾಧಿರಾಜಸ್ಯ ಶಿವಮಾರಾಪರನಾಮಧೇಯಸ್ಯ ಪೌತ್ರಃ
ಸಮವನತ ಸಮಸ್ತ ಸಾ

ಮನ್ತ ಮಕುಟತಟಘಟಿತ ಬಹಳರತ್ನ ವಿಳಸದಮರಧನುಃ ಖಣ್ಡಮಣ್ಡಿತ ಚರಣ
ನಖಮಣ್ಡಳೋ ನಾ

ರಾಯಣ ನಿಹಿತ ಭಕ್ತಿಃ ಶೂರಪುರುಷ ತುರುಗ ವರವಾರಣ ಘಟಾ ಸಂಘಟ್ಟದಾರುಣ
ಸಮರ ಶಿರಸಿ ನಿಹಿತಾತ್ಮ

ಕೋಪೋ ಭೀಮಕೋಪಃ ಪ್ರಕಟರತಿ ಸಮಯ ಸಮನುವರ್ತ್ತನ ಯುವತೀಜನಾಳೋಕ

ಧೂರ್ತ್ತೋಳೋಕಧೂರ್ತ್ತಃ ಸುದುರ್ದ್ಧರಾನೇಕ ಯುದ್ಧಮೂರ್ದ್ಧನಲಬ್ಧ ವಿಜಯಸಂಪದ
ಹಿತಗಜ ಘಟಾಕೇಸ

ರೀ ರಾಜಕೇಸರೀ । ಅಪಿಚ ॥ ಯೋ ಗಂಗಾನ್ವಯ ನಿರ್ಮ್ಮಳಾಂಬರತಳವ್ಯಾ ಭಾಸನ
ಪ್ರೋಲ್ಲಸನ್ಮಾರ್ತ್ತಣ್ಡೋ

ರಿಭಯಂಕರಃ ಶುಭಕರಸ್ಸನ್ಮಾರ್ಗ್ಗ ರಕ್ಷಾಕರಃ ಸೌರಾಜ್ಯಂ ಸಮುಪೇತ್ಯ ರಾಜಸಮಿತೌರಾಜನ್ನು

ಣ್ಯೈರುತ್ತಮೈರಾಜಾ ಶ್ರೀಪುರುಷಶ್ಚಿರಂ ವಿಜಯತೇ ರಾಜನ್ಯ ಚೂಡಾಮಣಿಃ ॥ ಅಪಿಚ ।
ಕಾಮೋರಾಮಸುಚೋಪೇದ

ಶರಥ ತನಯೋ ವಿಕ್ರಮೇ ಜಾಮದಗ್ನ್ಯಃ ಪ್ರಾಜ್ಞೈಶ್ವರ್ಯ್ಯೋ ಬಳಾರಿರ್ಬ್ಬಹುಮಹಸಿರಪಿ
ಸ್ವಪ್ರಭುತ್ವೇ ಧನೇಶಃ ಭೂಯೋ

ವಿಖ್ಯಾತ ಶಕ್ತಿಸ್ಫುಟತರಮಖಿಳ ಪ್ರಾಣಭಾಜಾಂ ವಿಧಾತಾ ಧಾತ್ರಾಪ್ತ ಪ್ರಜಾನಾಮ್ಪತಿರಿತಿಕ
ವಯೋಯಂ

ಪುಟ 174 ಕೊಪ್ಪಳ ಶಾಸನ

ಕಪಿಲಾ ॥ ಪು. 84

ಶ್ರೀ ಕೊಣ್ಡ ಕುನ್ದಾನ್ವಯ ಮಗ್ಗ

ವಾರ್ದ್ಧೌ ಪ್ರಸಿದ್ಧಿಮಾಸ್ಲ್ವ್ವಾ

ವಾಮ್ಮೃತಸ್ಯ ಪಿರುದ್ಧೂಪೋ

ವಿಬುಧಾಧಿ ನಸ್ಸ್ಬಿ ಗಣೋ ಭವ

ದ್ದೇಶಿಗಣಮಧಾಮಾ॥ ತಸ್ಮಿ

ನ್ನ ನ್ಯಾತೀವ್ರತಪಃ ಪ್ರಭಾ

ವೋ ಮೃವ ಸ್ಥ ಭಾವ ಕ್ಷಮಹಾಸು

ಭಾವಃ ಆಶಾಂಬರಾಳಂ ಕರಣ್ಯೆ
ಷಷ್ವೈರಿ ಜಗದ್ಗುರುಃ॥ ಶ್ರೀರ
ವಿಚನ್ಷ ಸೂರಿಃ॥ ರವಿಚನ್ಷ
ಮುನೇಂ ಶಿಷ್ಯಙ್ಗಣಡಿತಜನಪುಣ್ದ
ರೀಕಮಾರ್ತ್ತಂಣ್ಡಃ ತ್ರಿಭುವನಚಂ
ದ್ರಮುನೀಂದ್ರಃ ಸಮಜನಿಯಮ
....
ಸ್ಮರವಿಕಾರ ವಿದೂರ ಮತೇಃ ತ್ರಿಭುವ
ನ ಚಂದ್ರಪಣ್ಡಿತ ಯತೇಶ್ವರಣಾಂಬು
ರುಹಂ॥ ಶಿಷ್ಯಸ್ತಸ್ಯ ಬಭೂವ ನಿಮ್ಮಳಾಮ
ತಿಃ ನಿಮತ್ಸರೋ ನಿರ್ಮ್ಮದಃ ಸು ವೃತ್ತಃ ಸದಸ
ದ್ವಿಚಾರನಿರತಿಃ ಸತ್ವಙ್ಗಮೈಕ ಸ್ಪೃಹಃ
ಪ್ರಖ್ಯಾತ. . . ಣಕ್ಯ. . . ಗಣಂ
. . . . . ಯಂ ಶ್ರೀ ಮತ್ಪೂ
ಜ್ಯಪಾದಾಮ್ಬುಜ ಶ್ರೀ ತದಮಃ ಶ್ರೀ ಮೋ
ನಿದೇವೋಮುನಿಃಘ ಮನಮೋ ತತ್ವ ಸಮಾಹಿತಂ
ವಚನಮೋ ಧರ್ಮೋಪದೇಶೋಚಿತಂತ
ನೃಪತಿ ಬ್ರತಪೋಂಭರ ಕ್ಷಮಮೆನಲ್ತ
ತ್ವ ಪ್ರಭೇದ ಜ್ಞರಪ್ಪು ನಮಾಚಾದಿತ ತ
ತ್ವರೆಪ್ಪು ನಮುದಾತ್ತಾಚಾರ ಸಂಪನ್ನರೆಮ್ಬಿನಮೇಂ ಸ
ನ್ದರೋ ಮೋನಿದೇವರೆ ಮನೋ ವಾಕ್ಕಾಯ ಸಂಶುದ್ಧಿಯಿಂ

ಪುಟ 176 ಹುಲಗಿ ಶಾಸನ

ಕ.ವಿ.ವಿ.ಶಾಸನ ಸಂಪುಟ ೨ ಕೊಪ್ಪಳ ೧೪೮

ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಳೋಕ್ಯ ನಗರಾ
ರಂಭ ಮೂಲಸ್ಥಂಬಾಯ ಸಂಭವೇ ॥ ಪ್ರಚಲಿತರವಿಂದು ಮಂಡಳಮಾಕುಂಚಿ
ತ ಶೇಷಮುಚ್ಚಲಜ್ಜಲಧಿರುಧ್ಧೂಳಿತಸ್ಯ ಶಂಭೋರು ಭಯಕರಾಸ್ಫಾಳನಂ ಜಯತು ॥
ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀಪ್ರಿಥ್ವೀವಲ್ಲಭ ಮಹಾರಾರಾಜಧಿರಾಜ ಪರಮೇಶ್ವರಂ ಪರ
ಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣ ಶ್ರೀಮತ್ರಿಭುವನಮಲ್ಲದೇವರ
ವಿಜಯಾರಾಜ್ಯಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನ ಮಾಚಂದ್ರಾರ್ಕ್ಕ ತಾರಂಬರಂ
ಸಲುತ್ತಮಿರೆ ಕಲ್ಯಾಣದ ನೆಲೆವೀಡಿನೊ
ಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರಲು ಸ್ವಸ್ತಿ ಶ್ರೀಮಚ್ಚಾಳುಕ್ಯ
ವಿಕ್ರಮ ಕಾಲದ ಪದಿಮೂಱನೆಯ ವಿಭವ ಸಂವ
ತ್ಸರದ ಚೈತ್ರ ಸುದ್ಧ ಅಕ್ಷಯ ತದಿಗೆ ಸೋಮವಾರಂ ಸಂಕ್ರಾಸ್ತಿ ವ್ಯತೀಪಾತದಂದು
ಕಾಮಕಾಯಗೋತ್ರದ ನಾರಾಯಣ ಭಟ್ಟೋಪಾ
ಧ್ಯಾಯರ ಪುತ್ರರು ॥ ಕ॥ ಧರೆಗತ್ಯಾಶ್ಚರ್ಯ್ಯಮೀ ಯೋಗ್ಯತೆ ತಱಿಸಲವಂ ಕಣ್ದು
ಚಾಳುಕ್ಯ ಚಕ್ರೇಸ್ವರನಾ ಚಂದ್ರಾರ್ಕ್ಕತಾರಂ[ಧ]
[ಳ]ಮೆನೆ ಸಕಾರುಣ್ಯದಿಂ ಪುಲಿಗೆಯೆಂಬೀ ಪುರಮಂ ತ್ರೈಳೋಕ್ಯಮಲ್ಲಂ
ಕುಡೆಪಡೆದನವಷ್ಟಂಭದಿಂ ರಾಹಸೀಹಾರಾರುಚಿತ್ಯಾಭಾಸಿಕೀ[ರ್ತ್ತಿ]
ಮ್ಯತಿ ಧವಳಿತ ದಿಕ್ಕುಂಜ ಚೌವೇದಿಭಟ್ಟ ॥ ಭರದಿಂದೀ ತುಂಗಭದ್ರಾನದಿಯ
ತಟಮನಾರೈಮಿಮಿಂ ಬಾಗಿರಲು ವಾರಿಜನಾ[ಳಂ]
ಸೀೞ್ದು ನೂಲ್ಗೊಳ್ವ ವೊಲವೆಯುವದಿಂ ತನ್ನೀ ಕಾಲುರಂಮ್ ಬಿಡೆಯಲು ವಿಸ್ತಾರಮಾಗಲು

ರವಿ ಶಶಿ ಧರೆ ನಕ್ಷತ್ರಮಾಮೇರು
ನಿಲ್ವನ್ನೆಗ ನೋಡಾರಂಭ ಬ್ರಿಂದಂ ಒಸೆದು ತಣಿಯಲುಂ ತನ್ನ ಚೌವೇದಿಭಟ್ಟ ॥ [ಶ್ರೀ]
ಮಾನಾದಿತ್ಯಭಟ್ಟಸ್ತರಣೀರಿವ ಚತುರ್ವೇ
ವ ವಿದ್ಯಾಭಿರಾಮೋ ವಿಸ್ತೀರ್ಣ್ನಂ ತುಂಗಭದ್ರಾತಟ ಭುವಿ ವಿಳಸತ್ಕೀರ್ತ್ತಿರುಚ್ಚೈರ್ದ್ವಿಜಾನಾಂ
ವ್ಯಾಘ್ರಗ್ರಾಮಂ ಕುಳಾಯ ತ್ರಿಜಗದುದ
ಯನೇ ಸಾಗ್ನಯೇ ಸದ್ಗುಣಾಯ ಪ್ರಾದಾದುದ್ದಾಮಧಾಮ್ನೇ ಭವಭಯ[ವಿವಿ]ನಚ್ಛೇದಿನೇ
ಸಪ್ರಮೋದ(ಂ) ॥ ಅಂತಾಯಯ್ಯನ ಪತ್ನಿ

ಪುಟ 179 ಹಂಪೆಯ ಶಾಸನ

ಕುರುಗೋಡು ಸಿಂಧರು

ಕವಿಶಾ. III ಹಂಪೆ

ಭುವನನುತಂ ಮಾದಯ್ಯಂ ವಿವೇಕಿಯಾಚಯ್ಯ ನಾಯಕ ಪ್ರಿಯತನ
ಯಂ॥ ಆ ಕಾಮವ್ವೆಯ ಲಕ್ಮಲೆಯಾ
ಕಾರಮನವರ ಪುಣ್ಯಮಂ ಸೌಭಾಗ್ಯ ಶ್ರೀಕೃತಮನೆಸೆವ ಗುಣಮಂ ಲೋ
ಕಂ ಬಣ್ಣಿಸುವವುದವರ ವಾಕ್ಯ ತರುತೆಯಂ
ಅನ್ನು ಪುತ್ರ ಮಿತ್ರ ಗೋತ್ರ ಬಂಧು ಶಿಷ್ಟವಿಶಿಷ್ಟ ಜನರಕ್ಷಣೆಯಂ ಮಾಡು
ತ್ತಂ॥ ಧನಮಂ ಬಯ್ತಿಡಲೆಂದು
ಪೇಳ್ದವೆನನೇದಾನಕ್ಕೆ ಧರ್ಮ್ಮಕ್ಕೆ ಸಜ್ಜನರ್ಗ್ಗಿಷ್ಟರ್ಗ್ಗೆರೆವರ್ಗ್ಗೆ ಬಾಂದವರ್ಗೆ
ಜೀರ್ಣೋದ್ಧಾರ ಸಂಸ್ಥಾಪನಕ್ಕನಿಶಂ
ಮಾಡುವ ದೇವತಾರ್ಚ್ಚನಕ್ಕೆ ಯಂದೆಂದಾರ್ಜ್ಜಿಪಂ ಬೆಜಿ
ಸದ್ವಿನಿಯೋಗಕ್ಕೆ ದಲೆಂದು ಪೇಳ್ದವೆಪನೇ ಚೌಡಯ್ಯನೇಂ
ರಂದದಿಂ॥

ಪುಟ 181 ಬೇಲೂರು ಶಾಸನ

ವೀರಬಲ್ಲಾಳ

ತತ್ಸನೆಯಂ ಯಾದವ ವಂಶೋತ್ತಮನವದಾತ್ತ ಕೀ
ರ್ತ್ತಿ ಸಾಹಸಧನನುದ್ವೃತ್ತ ವಿರೋಧಿ ನೃಪಾಳಕ ಮ
ತ್ತದ್ವಿಪ ಸಿಂಹನೆನಿಸಿದಂ ನರಸಿಂಹಂ॥ ಅ
ಸೀದೇಚಲದೇವ್ಯಾಂ ನಾರಸಿಂಹ ಕ್ಷಿತೀಶ್ವರಾ
ತ್ ತಸ್ಯಾಂ ಪಟ್ಟ ಮಹಾದೇವ್ಯಾಂ ಬಲ್ಲಾಳ ಪೃಥಿ
ವೀ ಪತಿಃ॥ ಶ್ರೀಮತಿ ಶ್ರೀ ನರಸಿಂಹ
ದೇವ ನೃಪ ತೇಜ್ಸಾತೋ ಮಹೀಯಾಸ್ಥಿತಸ್ಸಂ
ಪ್ರಾಪ್ತೋರು ಪರಾಕ್ರಮೋ ವಿಜಯತೇ
ಬಲ್ಲಾಳ ಭೂಪಾಳಕಃ ಜಿತ್ವಾ ಪಾಪ ಮಹಾಂ
ಧಕಾರಮಖಿಲಂ ಧರ್ಮ್ಮಂ ಸಮುದ್ದಿಪ
ಯನ್ ಶ್ರೀಮತ್ ಕೇಶವದೇವ ಪಾದಯುಗ
ಳ ಧ್ಯಾನಾ ಮೃತಾ ಸ್ವಾದನಃ॥ ದಶಮುಖ ಭುಜ
ದುಷ್ಕೋತ್ಪಾತ ಕೈಲಾಸ ಶೈಲಂ ಹರಯುವ
ಕಲಿದೇಗೋಚ್ಛಾಲಿತಂ ಧರ್ಮ್ಮಜಾತಂ ಜಗ
ತಿ ಬಿಮಾವಿಧಂ ಯಸ್ಥಾಪಯಾ ಮಾಸ ವೀರ

ಸ್ವಜಯತಿ ರಣಮಲ್ಲೋ ವೀರಬಲ್ಲಾಳ ಭೂ
ಪಃ॥ ಜೀಯಾದ್ವಲ್ಲಾಳ ಬೂಪಾಲಃ ಪಾಲಿತಾ
ಖಿಲ ಭೂತಲಃ ಯತ್ಕೀರ್ತ್ತಿ ಪುಣ್ಡರೀಕಸ್ಯ ಪೃ
ಥಿವೀ ಕರ್ಣ್ನಿಕಾಯತೇ॥ ಎಸೆಯಲ್ ಜಾಳಕ
ಜಾಳಕಂ ವೃಷ ಕವಾಟಂ ದ್ವಾರ ಶಾಖಾಳಿ ಬಾಣಸು
ಕೊಟ್ಟಾರ ಉಪಗ್ರ ವಪ್ರ ಮುಪವಾಸಂ ವಾಸು
ದೇವಾಖ್ಯ ತೀರ್ತ್ಥ ಸರಂ ಶ್ರೀ ವಿಜಯಾದಿಶಬ್ದ

ಪುಟ 186 ಶ್ರವಣ ಬೆಳಗೊಳ

ಬುಕ್ಕರಾಯನ ಶಾಸನ

(EC II (R) SB)

ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ॥ ಪಾಷಾಂಡ ಸಾಗರ ಮಹಾಬಡ
ವಾ ಮುಖಾಗ್ನಿ ಶ್ರೀ ರಂಗರಾಜ ಚರಣಾಂಬುಜ ಮೂಲ ದಾಸ. ಶ್ರೀ ವಿಷ್ಣು
ಲೋಕ ಮಣಿಮಂಟಪಮಾರ್ಗದಾಯಿ ರಾಮಾನುಜೋ ವಿಜಯತೇ ಯತಿ
ರಾಜರಾಜ ॥೦ ಶಕವರ್ಷ೧೨೯೦ನೆಯ ಕೀಲಕ ಸಂವತ್ಸರದ ಭಾದ್ರಪ
ದ ಶುದ್ಧ ೧೨ ಸ್ವಸ್ತಿ ಶ್ರೀಮನ್ಮಹಾ ಮಂಡಳೇಶ್ವರಂ ಅರಿರಾಯ ವಿಭಾಡ ಭಾ
ಷೆಗೆ ತಪ್ಪುವರಾಯರ ಗಂಡ ಶ್ರೀ ವೀರಬುಕ್ಕರಾಯನು ಪ್ರಿಥ್ವೀರಾ
ಜ್ಯವ ಮಾಡುವ ಕಾಲದಲ್ಲಿ ಜೈನರಿಗೂ ಭಕ್ತರಿಗೂ ಸಂವಾಜವಾದಲ್ಲಿ ಆ

ಪುಟ 187 ದೇವರಾಯನ ಹಂಪೆಯ ಶಾಸನ

(ಕ.ವಿ.ಶಾಸನ ಸಂಪುಟ III)

ಸಿದ್ಧಾರ್ತ್ಥಿ ಸಂವಚರದ ಆಸ್ವಜ ಸು ೧೦ ಲು ಶ್ರೀಮಂನ್ಮಹಾರಾಜಾಧಿರಾಜ
ರಾಜಪರಮೇಸ್ವರ ಆರಿರಾಯ ಮನಮ
ರ್ದನ ಶರಣಾಗತರಾಯ ಸ್ಥಪನಾಚಾರ್ಯ ಪೂರ್ವ ದಕ್ಷಿಣ ಪಶ್ಚಿಮ ಸಮುದ್ರಾಧೀಶ್ವರ
ಭಾಸೆಗೆತಪುರರಾಯರ ಗಂ
ಡ ರಾಯಗಜಬ್ಯಟೆಕಾಱ ಶ್ರೀ ವೀರಪ್ರತಾಪ ದೇವರಾಯ ಮಹಾರಾಯರ ಶ್ರೀ ಪಾದ
ಸೇವೆಯ ಕಟಿಗೆಯ ಆ
ಹಮದಖಾನನು ರಾಯರಿಗೆ ಧರ್ಮವಾಗಬೇಕೆಂದು ಕಟಿಸಿದ ಧರ್ಮಸಾಲೆ ಬಾವಿಯನು
ಆ ಚಂದ್ರಾರ್ಕಸ್ಥಾ
ಯಿಯಾಗಿ ಧರ್ಮ್ಮವನು ಪಾಲಿಸುದು

ಪುಟ 190 ಬಯಕಾರ ರಾಮಪ್ಪಯ್ಯನ ಶಾಸನ

ಕವಿ.ಶಾ. I ಪು. ೧೯೨

ಶುಭಮಸ್ತು ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾ
ಹನಶಕವರುಷಂಗಳು ೧೪೮೧ನೆಯ ಸಿದಾರ್ಥಿ
ಸಂವತ್ಸರದ ಕಾರ್ತಿಕ ಶು೧೨ ಯಲೂ ಶ್ರೀಮತಿ ಬಯ
ಕಾರ ರಾಮಪ್ಪಯ್ಯನವರು ತಂಮ ಮಗಳು ಲಖಿರಿಸಂ
ಗುನವರಿಗೆ ಪುಣ್ಯವಾಗಬೇಕೆಂದು ಕಟಿಸಿದ ಮಂಟ
ಪ ಲಕ್ಷ್ಮೀದೇವಿ ಪ್ರತಿಷ್ಟೆ ಬಾವಿ ಆರವಟಿಗೆ ಮಂಗಳ ಮಹಾ
ಶ್ರೀ ಶ್ರೀ

ಪುಟ 192 ಕೆಳದಿ ತಾಮ್ರಶಾಸನ (ಹಿಂಭಾಗ)
(ಕೆಳದಿ ವಸ್ತುಸಂಗ್ರಹಾಲಯ)

ಯಿಗಳಾಗಿ ಸರ್ವಮಾನ್ಯವಾಗಿ ಅನುಭವಿಸಿ ಬಹಿರಿ
ಎಂದು ಕೊಟ್ಟ ಭೂದಾನದ ತಾಂಮ್ರಶಾಸನ ಆದಿತ್ಯ
ಚಂದ್ರಾವನಿಲೋನಶ್ಚದ್ಯೌರ್ಭೂಮಿರ್ಧಾಪೋ ಹ್ರುದಯಂ
ಯಮಶ್ಚ ಅಹಶ್ಚ ರಾತ್ರಿಶ್ಚ ಉಭೇ ಚ ಸಂಧ್ಯೇಧರ್ಮಸ್ಯ
ಜಾನಾತಿ ನರಸ್ಯ ಉತ್ತಂ ದಾನಪಾಲನಯೋರ್ಮಧ್ಯೇ ದಾನಾ
ಛ್ರೇಯೋನು ಪಾಲನಂ ದಾನಾತ್ಸ್ವರ್ಗಮವಾಪ್ನೋತಿ ಪಾಲನಾ
ದಚ್ಯುತಂ ಪದಂ ಸ್ವದತ್ತಾಂ ದ್ವಿಗುಣಂ ಪುಂಣ್ಯಂ ಪರದತ್ತಾ
ನುಪಾಲನಂ ಪರದತ್ತಾಪಹರೇಣ ಸ್ವದತ್ತಂ ನಿಭ್ಫಲಂ ಭ
ವೇತು ಸ್ವದತ್ತಾಂ ಪರದತ್ತಾ ವಾಯೋ ಹರೇತ ವಸುಂಧರಾಂ
ಷಷ್ಟಿರ್ವರುಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ
ಶ್ರೀವೆಂಕಟಾದ್ರಿ

ಪುಟ 193 ಬೆಳ್ಳಾವೆ ಶಾಸನ
ಮೊದಲ ಹಲಗೆ ಮುಂಭಾಗ

ಶ್ರೀರಾಮಃ -- ಶ್ರೀ ಃ ॥ ಶುಭಮಸ್ತು । ಸ್ವಸ್ತಿ ಶ್ರೀ ಜ
ಯಾಭ್ಯುದಯ ಶಾಲಿವಾಹನ ಶಕವರುಷಂಗಳು ೧೫೭೮
ನೆಯ ವಿಳಂಬಿನಾಮ ಸಂವತ್ಸರದ ಮಾಗ ಶು ೧೫ ಲು ಶ್ರೀ
ಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ
ವೀರ ಶ್ರೀರಂಗದೇವ ಮಹಾರಾಯರೈಯನವರು ಪೃಥ್ವೀ . . .

ಪುಟ 198 ಸಿರಗುಪ್ಪ
ಕೊಟ್ಟೂರುಸ್ವಾಮಿ ಮಠದ ಬಾಗಿಲ ಮೇಲೆ
(ಕ..ವಿ.ಶಾಸನ ಸಂ-1, ಸಿರಗುಪ್ಪ)

ಶ್ರೀಗಣಾಧಿಪಥಿಯನಮಃ । ಶ್ರೀ ಕೊಟೂರು ಬಸವೇಶ್ವರಪ್ರಸನ
ಶ್ರೀ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶ್ರೀ ಮಂ ನೃಪಶಾಲಿವಾಹನ ಸ ಶ
ಕವರ್ಷ । ೧೮೦೯ನೆಯಕ ಸರಿಯಾದ ಸರ್ವಜಿತುನಾಮ ಸಂವತರದ
ವೈಸಾಖ ಶುಧ ೧೨ನೆ ಸ್ಟೋಮವಾರದಲ್ಲು ಶ್ರೀ ಕೊಟೂ...
ಬಸವೇಶ್ವರ ಸ್ವಾಮಿದೇವರಂನ ಪು
ತ್ತರಾನಕ್ಷತ್ರ ಹರಪಣಾನಾಮಯೋಗ ಬವಕರಣ ಯಿರತನೆ
ಪ್ರಹರದಲ್ಲಿ ಬಳ್ಳಾರಿಜಿ
ಲಾಯಿದೇತಾಲ್ಲೂಕು ಶಿರಗುಪ್ಪಿಯಲ್ಲಿ ಶಿವಾಚಾರ ಸಂಪನ್ನಾದ
ಶ್ರೀಗುರುಲಿಂಗಜಂಗಮ...

ಪುಟ 198 ಬೆಳ್ಳಾವೆ ತಾಮ್ರ ಶಾಸನ ಭಾಗ

ಅವರಿಗೆ ಸ್ಥಳಗಳೂ ನಿಷ್ಕರುಷೆ ಮಾಡಿಕೊಟು ರಾಜ್ಯ
ವಾಳಿಕೊಂಡು ಸುಕದಲ್ಲಿ ಯಿರಿಯೆಂಬುದಾಗಿ ಅಪ್ಪಣೆ ಕೊಟು ಯಿದ

ರೇಯುಂಮ ಬೊಮ್ಮನಾಯಕರು ಆಗುವವ ಸ್ಥಳ ಪಿಚರಿಸಿ ಮುಹೂ
ರ್ತಪಿಟ್ಟು ಮದಸಮುದ್ರವೆಂಬಯ ಗ್ರಮ ನಿರ್ಮಣ ಮಾಡಿ ಅ ಸ್ಥಳ
ಕೆ ಕಾಟೆ ಗೋತ್ರದ ಯಿರಮುದೇಗೌಡಗೆ ಗೌಡಿಕೆ ನಿಷ್ಕರುಷ ಮಾಡಿ . . .

ಪುಟ 200 ತಿರುನಾಥಕುನ್ರು ಶಾಸನ

(TAS . VOL I. P 231)

ಐಮ್‌ಬತ್ ತೇಟಿನ
ಚನನ್ ನೋಱ್ಱಿ
ಚನ್‌ದಿರನನ್‌ದಿ ಅ
ಟಿಂಗರ್ ನಿಸಿದಿಗೈ

ಪುಟ 203 ವೆಟ್ಟೆಳುತ್ತು ಶಾಸನ

ಪಾಂಡ್ಯರಾಜ ಪರಾಂತಕ

(EI VII P.320)

ಕೋ ಮಾಱಞ್ಚಡೈಯಱ್ಕು ಉ
ಙ್ಪದ ಮ ಸ್ತ್ರಿ ಕಳಕ್ಕುಡಿ ವೈ
ದ್ಯನ ಮೂವೇನ್‌ದಮಙಲ ಪ್
ಪೋರಾಮನ್ ಆಗಿಯ ಮಾಱಙ
ಕಾರಿ ಇಕ್ಕಱ್ಱಳಿ ಚೆಯುದ
ನೀರತ್‌ತಳಿಯಾ ತೇಯ ಕ್ಷ . ಗ್ನಾರೋ
ಹಣಾಕ್ ಚೆಯುದ ಪಿನ್ನೈ ಅವ
ನು ಕ್ಕು ಅನಜನ ಒತ್‌ತಿದ
ಮಸ್ತ್ರಿವದುಮೇಯ ದಿನ ಪಾಣ್‌ಡಿ
ಮಙ್‌ಗಲ ಪಿಟ್ಟೈ ಅಱ್ಱೈಯನ
ಆಕಿಯ ಮಾಱನ್‌ನೇ ಇ
ನ್‌ನ ಮಕಮಣ್‌ಟಮುಙ್ಙಿಚೆ
ಯಿತು ನೀರ ತ್‌ತಳಿತ್‌ತನ್

ಪುಟ 204 ವಿಳವತ್ತಿ (ಸಿಂಹವರ್ಮ)

ಒಂದನೆಯ ಹಲಗೆ – ಒಳಭಾಗ

(EI.XXIV. p.43)

ಸ್ವಸ್ತಿ ಜಿತಂ ಭಗವತಾ ಶ್ರೀವಿಜಯ ಪದ್ಮಕ್ಕರಧಿಷ್ಠಾನೇ ಪರಮ ಬ್ರಹ್ಮಣ್ಯಸ್ಯ ಸ್ವಬಾ
ಹು ನಿರ್ಜ್ಜಿತಾರ್ಜ್ಜಿತ ಕ್ಷಾತ್ರತಪೋನಿಧೇಃ ವಿದಿವಿಹಿತ ಸರ್ವ್ವಮರ್ಯ್ಯಾದಾಸ್ಥಿತಿಸ್ಥಿತ
ಸ್ಯಾಮಿತಾತ್ಮನೋ ಮಹಾರಾಜಸ್ಯ ಪೃಥಿವೀತಲೈಕ ವೀರವರ್ಮ್ಮಣಃ ಪ್ರಪೌ
ತ್ರಸ್ಯಾತ್ಯೂರ್ಜ್ಜಿತಶಕ್ತಿ ಸಿದ್ಧಿಸಮ್ಪನ್ನಸ್ಯ ಪ್ರತಾಪೋಪನತ ರಾಜಮಣ್ಡಲಸ್ಯ ಭಗ

ಫುಟ 205 ಮಂದಗಪಟ್ಟು, ವಿಚಿತ್ರಚಿತ್ರ (ಮಹೇಂದ್ರವರ್ಮ)

ಕ್ರಿ.ಶ.೭ ನೆಯ ಶತಮಾನ

(EI.XVII. p.17)

ಏತಾದನಿಷ್ಟಕಮದ್ರುಮಮಲೋ
ಹಮಸುಧಂ ವಿಚಿತ್ರಚಿತ್ತೇನ
ನಿರ್ಮ್ಮಾಪಿತ ನೃಪೇಣ ಬ್ರಹೇ
ಶ್ವರ ವಿಷ್ಣು ಲಕ್ಷಿತಾಯತನಮ್

ಫುಟ 206 ಸಾಳುವನಕುಪ್ಪಂ

--

(EI.X. p.12)

ಶ್ರೀಮತೋತ್ಯನ್ತ ಕಾಮಸ್ಯ ದ್ವಿಷದ್ದ
ರ್ಪ್ಪಾಪಹಾರಿಣಃ ಶ್ರೀನಿ ಧೇಃ ಕಾಮ
ರಾಗಸ್ಯ ಹರಾರಾಧನ ಸಂಗಿ ನಃ ॥
ಅಭಿಷೇಕಜಲಾಪೂರ್ಣ್ಣೇ ಚಿತ್ರ ರತ್ನಾಂಮ್ಬು ಜಾಕರೇ
ಅಸ್ತೇ ವಿಶಾಲೇ ಸುಮುಖಃ ಶಿರಸ್ಸರ ಸಿ ಶಂಕರಃ ॥
ತೇನೇದಂ ಕಾರಿತಂ ಶಮ್ಭೋರ್ಭವ ನಂ ಭೂತಯೇ ಭುವಃ ಕೈ
ಲಾಸ ಮನ್ದರ ನಿಭಂ ಭೂಭೃತಾಂ ಮೂರ್ಧ್ನಿತಿಷ್ಠತಾ ॥ ಭಕ್ತಿ ಪ್ರಹ್ವೇ
ಣ ಮನಸಾ ಭವಂ ಭೂಷಣ ಲೀಲಯಾ ದೋಷ್ಣಾ ಚ ಯೋ ಭುವನ್ಧತ್ತೇ
ಜೀಯಾತ್ಸ ಶ್ರೀಭರಶ್ಚಿರ
ಮ್ ॥ ಅತಿರಣಚಣ್ಡಃ ಪತಿರವನಿಭು . .

ಫುಟ 209 ಪರಮೇಶ್ವರವರ್ಮನ ಶಾಸನ

(TAS. I)

ಬ್ರಹ್ಮಣ್ಯಾ ಮಮೋ ಮಯಾ ಗಮಯಶ್ರಾಘಾ ಪ್ರಸ್ತಾ....
ನೃತವ್ಯಹಾ ರಾಜಿಹ್ಮಾನನಮ ಜಾತಂ ಯತ್ರರೇಶ್ವರ...

ಫುಟ 209 ಒಂದನೆಯ ರಾಜರಾಜಚೋಳ

(TAS. I)

ಸ್ವಸ್ತಿಶ್ರೀಃ ಏತತ್ ವಿಶ್ವನೃಪ ಶ್ರೇಣಿ ಮೌಲಿಮಾ
ಲೋಪ ಲಾಳಿತಮ್ ಶಾಸನಂ ರಾಜರಾಜ ಕೇ
ಸರಿ ವರ್ಮ್ಮಣಃ॥

ಫುಟ 209 ಜಟಾವರ್ಮ ಸಂದುರ ಪಾಂಡ್ಯ

(TAS. I)

ಹರಿಃ ಓಮ್ ಸ್ವಸ್ತಿಶ್ರೀಃ ಯೇನಾ ನೌ ಕರುಣಾ
ಮನೋಯತದಶಾಂ ಶ್ರೀರಂಗ ಪತ್ಮಾಕರಃ ಕೃತ್ವಾ...

ಪುಟ 207 ಆಲಂಪೂಂಡಿ

ವಿರೂಪಾಕ್ಷ (ತಾಮ್ರಶಾಸನ - ಹಿಂಬದಿ)

(EI.III. p.228)

ಸೋಮಾಪರ್ಯ್ಯನ್ತಮ್ । ಸ್ವದತ್ತಾಂ ಪರದತ್ತಾಂ ವಾ ಯೋ
ಹರೇತ ವಸುನ್ಧರಾಮ್ ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾ
ಯಾಂ ಜಾಯತೇ ಕ್ರಿಮಿಃ । ಸ್ವದತ್ತಾದ್ದ್ವಿಗುಣಮ್ ಪುಣ್ಯ
ಮ್ ಪರದತ್ತಾನುಪಾಲನಮ್ ಪರದತ್ತಾಪಹಾ
ರೇಣ ಸ್ವದತ್ತಾಮ್ ನಿಷ್ಫಲಂ ಭವೇತ್ । ಸಾಮಾನ್ಯೋಯ
ನ್ಧರ್ಮ್ಮಸೇತುರ್ನ್ನೃಪಾಣಾಮ್ ಕಾಲೇ ಕಾಲೇ ಪಾಲ
ನೀಯೋ ಭವದ್ಭಿಃ ಸರ್ವ್ವಾನೇತಾನ್ಭಾವಿನಃ ಪಾ
ರ್ತ್ಥಿವೇನ್ದ್ರಾನ್ ಭೂಯೋ ಭೂಯೋ ಯಾಚತೇ ರಾಮಭದ್ರಃ

ಪುಟ 211 ತಮಿಳ್ ಕ್ರಿ.ಶ.೬೫೦

ಪಲ್ಲವ

(T.A.S.I)

ಪಕಾಪ್‌ಪಿಡಿಗು ಲಳಿತಾಙ್ಕುರನ್
ಚತ್‌ತುರುಮಲ್ಲನ್ ಗುಣಬರನ್

ಪುಟ 211 ನಂದಿವರ್ಮ ಪಲ್ಲವ

ಕ್ರಿ.ಶ.೮೦೦

(T.A.S.I)

ಕೋನೋಲೋಯಾಣ್‌ಡಿರುಪತ್‌ತಿರಣ್‌ಡಾವದು ಊಱ್‌ಱುಕ್‌ಕಾಟ್‌ಟುಕ್‌ಕೋಟ್‌ಟತ್‌ತು
ನಾಟ್‌ಟಾರುಕಾಣ್‌ಕತನ್ ನಾಟ್ಟುಕ್ ಕೊಡುಕೊಳ್‌ಳಿ ಮುನ್ ಪೇಱ್‌ಱಾರ್‌ಯ್ ಮಾಱ್‌ಱಿಬ್ರ
ಹ್ಮವರಾಚನ್ ಪಿಣ್‌ಣಪ್‌ಪತ್‌ತಾಲ್ ಕೋಶ್ವಾಮ ಒನ್‌ನಾಣತ್‌ತಿಯಾಕದೇವ

ಪುಟ 211 ನಂದಿ ವಿಕ್ರಮ ವರ್ಮ

(ಸು.೯ ನೆಯ ಶತಮಾನ)

(T.A.S.I)

ಶ್ರೀ ಮಾವಲಿವಾಣರಾಯರ್ ವಡುಗವಟಿ ಪನ್‌ನೀರ್‌ರಾಯಿರಟಿಮ್
ಳಾ ವಾಣಪುರತ್‌ತು ವಡರೀಕರ ಕೋಯಿಲ್ ಪುದುಕ್‌ಕು
ಪಿತ್‌ತು ಇದಱ್ ಕುಱಱ್‌ಕೀವರ ಮಕಳ್ . . .

ಪುಟ 211 ರಾಜರಾಜಚೋಳ

ಕ್ರಿ.ಶ.೯೮೫-೧೦೧೨

(T.A.S.I)

ಸ್ವಸ್ತಿ ಶ್ರೀ ತಿರುಮಗಳ್ ಪೋಲಪ್‌ಪೆಳ್‌ರು ನಿಲಚ್‌ಚೆಲಪಿಯು ಳು
ನಕ್‌ಕೆಯುರಿಮ್ಮೈ ಪುಣ್‌ಡಮ್ಮೈ ಮುನ್‌ಕ್‌ಕೊ . . . ಚ್‌ಚಾ
ಲೈಕಲವತ್‌ತು ರುಳಿವೇಱ್‌ಕ್ಕಿ ನಾಡು ಱ್ ಕಪಾಡಿಯುಮ್

ಪುಟ 221 ಮುಸಲಿಪಟಂ ತಾಮ್ರಶಾಸನ, ವಿಜಯಾದಿತ್ಯ (ಕ್ರಿ.ಶ.೮೪೪-೮೮)
ಮೊದಲ ಹಲಗೆ
(E.I.V.p.16)

ಸ್ವಸ್ತಿ ಶ್ರೀಮತಾಂ ಸಕಲ ಭುವನ ಸಂಸ್ತೂಯಮಾನ ಮಾನವ್ಯಸ ಗೋತ್ರಾಣಾಂ ಹಾರಿತೀ ಪು
ತ್ರಾಣಾಂ ಕೌಶಿಕೀ ವರಪ್ರಸಾಲಬ್ದ ರಾಜ್ಯಾನಾಂ ಮಾತೃಗಣ ಪರಿಪಾಲಿತಾನಾಂ ಸ್ವಾಮಿ
ಮಹಾಸೇನ ಪಾದನುಧ್ಯಾತಾನಾಂ ಭಗವನ್ನಾರಾಯಣ ಪ್ರಸಾದ ಸಮಾಸಾದಿ
ತ ವರಾಹಲಾಞ್ಛನೇಕ್ಷಣ ಕ್ಷಣ ವಶೀಕೃತಾರಾತಿ ಮಂಡಲಾನಾಮಶ್ವಮೇಧಾವಭೃ
[ಥ]ಸ್ನಾನಪವಿತ್ರೀಕೃತವಪೂಷಾಂ ಚಾಲುಕ್ಯಾನಾಂ ಕುಲಮಲಂಕರಿಷ್ಣೋಃ ಸಮಸ್ತಭುವ

ದೊನೆಪೂಂಡಿ ಶಾಸನ
(EI.IV. p.356)

ಶ್ರೀ ಉಮಾಮಹೇಶ್ವರಾಭ್ಯಾಂನ್ನಮಃ । ಪಾಯಾದ್ವಃ ಕರಿವದನ
ಕ್ರುತನಿಜಾದಾನಾಸುತಾ ವಿವಾರಿಗುಣ । ನಿಸದತಿಮುಹುರ
ಗಪಿದತ್ತೇಕರ್ನ್ಣೋಯಃ ಕರ್ನತಾಲಾಭ್ಯಾಂ ॥ ಶ್ರೀವಿಷ್ಣುರಸ್ತು ಭವ
ದಿಷ್ಟಫಲಪ್ರದಾತಾ ವಾರಾಹಮೂರ್ತ್ತಿರಖಿಳಾಗ
ಮಗೀತಕೀರ್ತಿಃ । ಯೋದಂಷ್ಟ್ರಯಾಸ್ವರಮಣಿಮರಮಬ್ದಿ
ಮಗ್ನಾಂ ಸಂಭೋಗ ಲಂಪಟಮನಾಃ ಕ್ಷಿತಿಮುದ್ದದಾ
ರ ॥ ಅಸ್ತಿ ಪ್ರಶಸ್ತ ನಿಧಿ ಮಂಡಲಮಾಂಧ್ರಖಂಡಮಾರಭ್ಯ ಗೌ

ಪುಟ 224 ಪೆದಕೋಟವೇಮನ ಫಿರಂಗಿಪುರಂ ಶಾಸನ

---- ಶಾಕಾಬ್ದಮುಲು ಸಹಸ್ರಮು
ನು ಮೂನ್ನೂಂಟ ಮುಪ್ಪದಿ ಯೊ
ಕ್ಕಂಡುನು ನ್ನೈನ ಭವ್ಯ ಸಂಖ್ಯ । ವಱಲು
ವಿರೋಧಿ ಸಂವತ್ಸರಂಬುನ ಪಾಲ್ಗು
ನಂಬು ಬಹುಳ ಪಕ್ಷಂಬು ವಿಟಿಯ
ಶುಕ್ರವಾರಂಬುನ ಶುಭಮುಹೂ
ರ್ತಂಬುನ ಶ್ರೀಧಾನ್ಯವಾಟಿ ಪುರಾಧಿಪ
ತಿಯು । ೦ ಕ್ರಿಷ್ಣವೆನ್ನಾ ಜಲಕ್ರೀಡಾ ವಿನೋ
ದುಂಡ್ಡುನಗು ಗನ್ನ ಭೂಪಾಲುನನು
ಂಗುಂಬು ತ್ರಿಪೀರನಾರಾಯಣುಂ
ಡು ವೇಮ ವಿಭುನಿದೇಪಿ । ಭೂರಿಸದ್ಗುಣಾ
ನಿಕರುಂಬ ಸೂರಮಾಂಬ । ಜಗಮು
ತದಿಕ ಪ್ರತಿಷ್ಠೋತ್ಸವಂಭೋನಚ್ಚು ॥ ಜಾಹ್ನ
ವಿಯಮುನಾಟಿ ಸಕಳ ಪಾವನನದಿ
ವಿಮಲತಿರ್ಥ್ಥಂಭಃ ಪವಿತ್ರತಂಭು । ವಿ
ವಿದ ದೇಶಸ್ಥಾಯಿ ಶಿವಮೌಳಿ ಬಾಲೇಂದು
ಕೌಮುದಿ ಸಂಪುಲ್ಲ ಕಿರವಂಬು । ಬ
ಹುಮಹಾಪರಿವಾಹವ್ಯೆದೋಂಚವಾ . . .

ಪುಟ 229 ಬನಸ್‌ಖೇರ ತಾಮ್ರಶಾಸನ

ಹರ್ಷವರ್ಧನ ಕ್ರಿ.ಶ.೬೨೮

(EI.IV. p.208)

ಸ್ವಸ್ತಿ ಮಹಾನೌಹಸ್ತ್ಯಶ್ವ ಜಯಸ್ಕನ್ಧಾವಾರಾಚ್ಛ್ರೀವರ್ದ್ಧಮಾನಕೋಟ್ಯಾ ಮಹಾರಾಜ
ಶ್ರೀ ನರವರ್ದ್ಧನಸ್ಯ ಪುತ್ರಸ್ತತ್ಪಾದಾನುಧ್ಯಾತ
ಶ್ರೀವಜ್ರಿಣಿದೇವ್ಯಾಮುತ್ಪನ್ನಃ ಪಾರಿತ್ಯಭಕ್ತೊ ಮಹಾರಾಜ ಶ್ರೀರಾಜ್ಯವರ್ದ್ಧನಸ್ತಸ್ಯ ಪುತ್ರಸ್ತತ್ಪಾದಾನು
ಧ್ಯಾತ ಶ್ರೀಮದ
ಪ್ಸರೋದೇವ್ಯಾಮುತ್ಪನ್ನಃ ಪರಮಾದಿತ್ಯ ಭಕ್ತೋ ಮಹಾರಾಜ ಶ್ರೀಮಧಾದಿತ್ಯವರ್ದ್ಧನಸ್ತಸ್ಯ
ಪುತ್ರಸ್ತತ್ಪಾದಾನುದ್ಯಾತಶ್ರೀಮ
ಮಹಾಸೇನಗುಪ್ತಾದೇವ್ಯಾಮುತ್ಪನ್ನಶ್ಚತುಸ್ಸಮುದ್ರಾತಿಕ್ರಾನ್ತ ಕೀರ್ತ್ತಿಃಪ್ರತಾಪಾನುರಾಗೋಪನತಾನ್ಯ
ರಾಜೋ ವರ್ಣ್ಣಾಶ್ರಮ
ವ್ಯವಸ್ಥಾಪನ ಪ್ರವೃತ್ತ ಚಕ್ರ ಏಕಚಕ್ರರಥ ಇವ ಪ್ರಜಾನಾಮರ್ತ್ತಿ ಹರಃಪ್ರರಮಾದಿತ್ಯಭಕ್ತ
ಃಪ್ರರಮಭಟ್ಟಾರಕ
ಮಹಾರಾಜಾಧಿರಾಜ ಶ್ರೀ ಪ್ರಭಾಕರವರ್ದ್ಧನಸ್ತಸ್ಯ ಪುತ್ರಸ್ತ . . . . .

ಪುಟ 263 ಆಗ್ನೇಯ ಏಷಿಯಾದ ಶಾಸನ ಸಾಲುಗಳು

(SVASTI SRI P. 78)

ಶ್ರೀ ಸಾರ್ವ್ವ ಭೌಮಸ್ಯ ಸೂನು ಶ್ರೀ ವೀರವರ್ಮ್ಮಣ
ಭಕ್ತ್ಯಾ ಭಗವತಶ್ಯಮ್ಭೋ
ತಸ್ಯಾ ಶೇಷ ವಿಶೇಷಣ್ಯೈಕ ಸಿಲಯ
ಧರ್ಮ್ಮಸ್ಯಾದಿತಿ ಭೂಯೋ ವಿಜ್ಞಾ ಯಾಮಿಯ
ಭದ್ರೇಸ್ವರ ಸ್ವಾಮಿನಃ ಶಿರಸಾ ಪ್ರಣಿಪತ್ಯ

ಪುಟ 270 ಜಾವಾದ ಪೂರ್ಣವರ್ಮನ ಶಾಸನ

(EI.XXII. P.4)

ವಿಕ್ರಾನ್ತಸ್ಯಾವನಿ ಪತೇಃ
ಶ್ರೀಮತಃ ಪೂರ್ಣವರ್ಮ್ಮಣಃ
ನಾರುಮರುಗರೇನ್ದ್ರಸ್ಯ
ವಿಷ್ಣೋರಿವ ಪದದ್ವಯಮ್॥

ಗ್ರಂಥಸೂಚಿ

ಕನ್ನಡ

೧. ಕನ್ನಡ ಲಿಪಿಯ ಉಗಮ ಮತ್ತು ವಿಕಾಸ — ಡಾ। ಎ.ವಿ.ನರಸಿಂಹಮೂರ್ತಿ
೧೯೭೫ — ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

೨. ಕನ್ನಡ ಲಿಪಿಶಾಸ್ತ್ರ — ಶ್ರೀ ಎಂ.ಜಿ. ಮಂಜುನಾಥ
೧೯೯೯ — ಶ್ರೀ ಜಿ.ಕೆ. ದೇವರಾಜಸ್ವಾಮಿ
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-560 018

೩. ಭಾಷಾವಿಜ್ಞಾನದ ಮೂಲ ತತ್ವಗಳು — ಡಾ। ಎಂ.ಚಿದಾನಂದಮೂರ್ತಿ
೧೯೬೫ — ಡಿ.ವಿ.ಕೆ.ಮೂರ್ತಿ
ಕೃಷ್ಣಮೂರ್ತಿಪುರಂ
ಮೈಸೂರು

೪. ಮಾರ್ಗ I II III — ಡಾ। ಎಂ.ಎಂ. ಕಲಬುರ್ಗಿ
ಸಪ್ನ ಬುಕ್ ಸ್ಟಾಲ್
ಗಾಂಧಿನಗರ, ಬೆಂಗಳೂರು

ತೆಲುಗು

1. ಮನಲಿಪಿ ಪುಟ್ಟು ಪೂರ್ವೋತ್ತರಾಲು — ಶ್ರೀ ತಿರುಮಲ ರಾಮಚಂದ್ರ
೧೯೫೭ — ವಿಶಾಲಾಂಧ್ರ ಪ್ರಚುರಣಾಲಯಂ
ಬೆಜವಾಡ

English

1. Akshayani
(Essays presented to
Debala Mitra)

2. Amritadhara
(Dandekekar Felici - Vol)
1984 — Ed. S.D.Joshi
Ajantha Publications
Delhi

3.	Analecta Vol.-II V.S.Sukthankar Memorial Edition, 1945	V.S.S.Memorial Editional Committee Poona-4
4.	Art of Srivijaya	Diskul
5.	Aryan Origen of the Alphabet 1927	L.A. Waddell Luzal and Co. London
6.	Asoka and his Insciptions Parts - I & II 1946	B.M.Barua New Age Publications Culcatta
7.	Asoka (4th ed.) 1972	Radha Kumud Mookarji Motilal Banarasidas Delhi
8.	A Volume of Indian and Iranion Studies 1939	Ed. S.M.Katre & P.K.Gode Karnatak Publishing Bombay
	Bhandarkar R.G. Commeoration Vol. 1971 & 1977	Bharatiya Publications Varanasi
	Bharatiya Prachina Lipimala (The Palaeography of India) (Hindi, III Ed.) 1971	Gourishankar Hirachand Ojah Munshiram Monoharlal New Delhi
	Commemorative Essays presented to R.G.Bhandarkar, 1917	Bhandarkar Oriental Research Institute Poona
2.	Corpus Inscription Indicarum Inscriptions of Vakatakas Vol.V	V.V. Mirashi Archaeological Survay of India, New Delhi
13.	Corpus of Sarada Inscriptions of Kasmir, 1982	B.K. Kaul Deambi Agam Kala Prakashan, Delhi

14. Decipherment of the Indus Script 1982 — S.R. Rao, Asia Publishing House, Bombay

15. Early Telugu Inscriptions upto 1000 A.D. 1971 — Dr. Budaraju Radha-Krishnamurty, Andhra pradesh Sahitya Acadamy, Hyderabad-4

16. Egyptian Kingdoms 1975 — Rosalic David, New Yark

17. Epigraphical Evidences For Tamil Studies 1980 — Dr.A. Velu Pillai, International Institute of Tamil Studies, Madras

17. Hand bookof Pali (II ed) 1999 — O frank furter, Asia Educational Services, Madras

18. Indian Archaeological Heritage (Dr. K.V. Soundararajan Felici., Vol.) 1991 — Agam Kala Prakashan, New Delhi

19. Indian Epigraphy and South Indian Scripts — Dr. C. Shivarama Murthy, Bulletin, Madras Govt. Museum, Madras

20. Indian Epigraphy (1st Ed.) 1965 — D.C. Sircar, Motilal Banarasidas, Delhi

21. Indian Epigraphy Vol.I 1984 — Dr. K.V. Ramesh, Sundeep Prakashan, Delhi

22. Indian Numerals 1967 — Shobhana Laxman Gokhale, Post graduate and Research Institute, Poona-6

23.	Indian Palaeography 1904	J.G. Buhler (Translated by Fleet J.F.) Indian Antiquary XXXIII
24.	Indian Palaeography Part - 1 1957	Raj Bali Pandey Motilal Basarasidas Varanasi
25.	Indian Palaeography 1986	Ahmad Hasan Dani Munshiram Manoharlal Publications, New Delhi
26.	Indus Script 1977	Iravatam Mahadaven Archaeological Survay of India, New Delhi
27.	Indus Script 1987	B.V. Subbarayappa World Culture, Basavanagudi, Bangalore-4
28.	Indus Script Deciphered 1982	M.V.N. Krishna Rao Agam Kala Prakashan New Delhi
29.	Inscriptions of Asoka 1975	D.C. Sircar Publication Division Govt. of India
30.	Inscriptions of Harappa and Mohenjodaro (II Ed.) 1986	Ed. Pran Nath Sri Satguru Publications Delhi
30.	Inscriptions of Westren Gangas 1984	Dr. K.V. Ramesh New Delhi
31.	Kharoshti Inscriptions Vol.II, Part-I 1929	Sten konow Culcutta

32. Litreture and Epigraphy of Tamilnadu 1998 — Dr. A. Krishnan, Bharatiya Kala Prakashan, Delhi

33. Origen of the Bengali Script 1919 — R.D. Banerji, University of Calcutta, Calcutta

34. Palaeography of Malayalam Script 1988 — S.J. Mangalam, Eastren Book Linkers, Delhi

35. Scientific America Vol.248 No.3 The Script of the Indus Vallay Civilization, 1983 — Walter A Fair ser vis Jr

36. South Indian Temple Inscriptions, Vol. III Part-II 1955 — T.N. Subramaniam, Govt. Oriental Manuscripts Library, Madras

38. Sraddanjali (D.C. Sircar Commoration Vol.) 1988 — Delhi

37. Studies in Indian History Epigraphy and Culture 1992 — Dr. G.S. Gai, Srihari Prakashana, Dharwad

38. Studies in South Indian History and Epigraphy Vol.I 1981 — K.G. Krishnan, New Era Publications, Madras

39. Svasti Sri (B.C.Chabbra Felicitation Vol.) 1984 — Agam Kala Prakashan, New Delhi

40. Tamil Brahmi Inscriptions (Lecture delivered by I Mahavaden) 1970 — Department of Archaeology, Madras

41. The Alphabet 1949 — David Divinger, Hutchin Son's, London and New Yark

42. The Deciphered Indus Script Methedology, readings, Interpretations 2000 — N.Jha and N.S.Rajaram, Aditya Prakashan, New Delhi

43. The Splender that was Egypt 1972 — Margarett Murray, London

44. The Unesco Couriar March, 1964

45. World Alphabets Their Origen and Development 1977 — Iswarchandra Rahi, Bhargava Printing Press, Katra, Allahabad, U.P.

* * *

ಪದಸೂಚಿ

ಈ ಪದ ಸೂಚಿಯಲ್ಲಿ ಎಲ್ಲಾ ಪದಗಳ ಮುಂದೆ ಅವುಗಳ ವಿಶೇಷಣಗಳನ್ನು ತಿಳಿಸಿಲ್ಲ. ಕೆಲವು ಪದಗಳ ಅರ್ಥ ಸ್ಪಷ್ಟವಿಲ್ಲದ ಕಡೆ ಮಾತ್ರ ವಿಶೇಷಣಗಳನ್ನು ನೀಡಲಾಗಿದೆ. ಓದುಗರು ಗಮನಿಸಬೇಕಾಗಿ ಸೂಚಿಸಿದೆ.

(ಊ = ಊರು, ಗ್ರಂ = ಗ್ರಂಥ, ಹೆ = ಹೆಸರು)

ಅ

ಅಂಕಲಿಪಿ 235,238, 239, 240, 242,248, 250, 253,
ಅಂಕೆಗಳು 231,232, 235, 236
ಅಂಕಪಲ್ಲಿ 251
ಅಂತೂರುತಾಣ 7
ಅಂತಿಕಿನಿ (ಹೆ) 80
ಅಂತಿಯೋಕ (ಹೆ) 78,80
ಅಕ್ಕಡರು 22
ಅಕ್ಕಲಕೋಟೆ 178
ಅಕ್ಷರಜಾವ 273
ಅಕ್ಷರಪಲ್ಲಿ 251,255
ಅಕ್ಷರಪಸಂಗನ್ 273
ಅಕ್ಸರ್‌ಮುಲ್ 264
ಅಖಮೇನಿಯರು 92
ಅಖಿರ್ ಅತಾಲ್ 264
ಅಖಿರ್ ಗಮೀನ್ 264
ಅಖಿರ್ ತಪ್ರುಕ್ 264
ಅಖಿರ್ ಯೋಕ್ 264
ಅಖಿರ್ ಸ್ರಹ್ 264
ಅಖ್ನಿಕಾ 68
ಅಚ್ಯುತಾಪುರ 160
ಅಜಿಟೆಕ್ 33,34,236
ಅಡ್ಡ್ಯೂಸ್ ಎಫ್.ಆರ್ 78
ಅಣಾಜಿ 156
ಅಣ್ಣಿಗೇರಿ 153
ಅಥೆನ್ಸ್ 56
ಅನಂತವರ್ಮ 160
ಅನಗವಾಡಿ 7
ಅನ್ನಾಂದೇಶ 262
ಅರ್ನೆಸ್ಟ್‌ಮ್ಯಾಕೆ 28
ಅಫೀಸ್(ಊ) 50
ಅಮರಗನ್ನಡ 216,218,221,282
ಅಮರಾವತಿ 97,126,156
ಅಮೀನ್‌ದರ್ಗಾ 228
ಅಮೋಘವರ್ಷ 162,166
ಅಮ್ಮೋನೈಟ್ ಲಿಪಿ 47
ಅಯೋಧ್ಯ 96,97
ಅರಂಸಹನ್ರೈಮ್(ಊ) 50
ಅರಚೋಷಿಯಾದೇಶ 82
ಅರ್ಪೇಯಸ್(ಹೆ) 55
ಅರಬ್ಬೀಲಿಪಿ 227,276
ಅರಬ್ಬೀಪರ್ಷಿಯನ್ 185
ಅರಾಬಿಯಾಲಿಪಿ 51,52,64,65,73
ಅರಾಮಿಯಾ 3,4,43,47,50, 51,55,74,78,82, 90,92,93,95
ಅರಾಬಿಕ್ ಅಂಕೆ 255
ಅರಿಕಮೇಡು 199
ಅರೇಬಿಯಾ 3,45,50,53, 242,274
ಅಲಗಿರಿ(ಊ) 200
ಅಲಿಕಸುದರ (ಹೆ) 80
ಅಲೆಪ್ಪೊ (ಊ) 23,50
ಅಲೆಕ್ಸಾಂಡರ್ 69,82
ಅಲೆಕ್ಸಾಂಡ್ರಿಯಾ 58
ಅಲ್ಪೈಸೂನಿ 69
ಅವಿನೀತ 138, 139, 205
ಅಶೋಕ 68-70,75,76,78, 85,87,89,90,95, 96,102,121,123, 199,200,202, 238,244,253, 257,259,280,285
ಅಷ್ಟುರ್ಬರ್ನೆ(ಹೆ) 71

ಅಷ್ಟಾಧ್ಯಾಯಿ(ಗ್ರಂ) 72
ಅಸ್ಸೀರಿಯಾ 2,21,22,41,50
ಅಹಿಚ್ಛತ್ರ 131
ಅಹೋಮ್ ಭಾಷೆ 268

ಆ

ಆಂಗ್ಲೋಸಾಕ್ಸನ್ 61
ಆಗ್ನೇಯಏಷಿಯಾ 78
ಆಡೂರು 153
ಆರ್ಥರ್ ಈವನ್ಸ್ 40
ಆದವಾನಿ 197
ಆಮುದಲಪಾಡು 152
ಆಫ್ಘಾನಿಸ್ಥಾನ 50,53
ಆರ್ಯಏಳುತ್ತು 214,215
ಆರ್ಯಾವರ್ತ 71
ಆರಿಯದೇಶ 82
ಆಲ್ಬೇನಿಯಾ 58
ಆಲ್‌ಬ್ರೈಟ್(ವ್ಯ) 46,47

ಇ

ಇಂಗ್ಲಿಷ್ 61,64
ಇಂಡಿಕ(ಗ್ರಂ) 69
ಇಂಡೋ-ಆರ್ಯನ್ 33
ಇಂಡೋನೇಷಿಯಾ 64
ಇಂಡೋ-ಬ್ಯಾಕ್ಟ್ರಿಯನ್ 90
ಇಂಡೋ-ಯೂರೋಪಿಯನ್ 22
ಇಂಡೋ ಸಿಥಿಯನ್ 91
ಇಂದಕೂರು 222
ಇಂದ್ರಜಿ(ವ್ಯ) 237
ಇಂದ್ರವರ್ಮ 161
ಇಕ್ಷ್ವಾಕು 126,204,253
ಇಟಲಿ 61
ಇಟಾಲಿಕ್ 61,287
ಇಥಿಯೋಪಿಯಾ 3,46,47
ಇಬೇರಿಯಾ ಲಿಪಿ 49
ಇರಾವಾಡಿನದಿ 265
ಇಸ್ಸಾಕ್ ಟೈಲರ್(ವ್ಯ) 92
ಇರಾನಿಯರು 80

ಈ

ಈಜಿಪ್ಟ್ ಲಿಪಿ 2,4,8-13,15,23, 32,39,40,41,43,44, 50,51,58,80,232
ಈಸ್ಟರ್ ದ್ವೀಪ 35

ಉ

ಉ ತಿಂಗಳು 35
ಉ ಇನಲ್ಸ್ ತಿಂಗಳು 35
ಉಗರಿತ್ ಲಿಪಿ 41
ಉಜ್ಜಯಿನಿ 80,91
ಉಡೆಗೊಳ 81
ಉತ್ತನೂರು 139
ಉತ್ತರಅರೇಬಿಯಾ 45,46
ಉತ್ತರ ಆಫ್ರಿಕ 49
ಉತ್ತರಸಿರಿಯಾ 23
ಉತ್ತರಸೆಮಿಟಿಯಾ 41,46,50
ಉರ್ದು 53
ಉರ್ದುಶಾಸನ 198,227
ಉಮ್ಮ(ಊ) 28
ಉರ್(ಊ) 28
ಉರರ್ತ ಜನ 2
ಉರುವಪಲ್ಲಿ 156,159
ಉರೈಯೂರು 200
ಉಲಾ(ಊ) 45
ಉಷವದತ್ತ 102

ಎ

ಎಟ್ರುಸ್ಕ್ಯಾನ್ ಲಿಪಿ 56,58,61
ಎಮಿಲಿ ಸೆನಾರ್ಟ(ವ್ಯ) 73
ಎಪಿಚಾರ್‌ಮೋಸ್(ವ್ಯ) 55
ಎಪಿರಾಸ್‌ದೇಶ 80
ಎರ್ರಗುಡಿ(ಊ) 70,85
ಎರ್ರಗುಡಿಪಾಡು 222
ಎಲಮೈಟರು 2,22
ಎಳುಲಿಪಿ 261

ಏ

ಏಕಾದಲಿಲಿಪಿ 218
ಏರಾಣ್ ನಾಣ್ಯ 70,105

ಏರಿಕಲ್ಲ ಮುತ್ತುರಾಜ 222
ಏರಿಯಾನ್ ಲಿಪಿ 90
ಏವೇಲ ಅಕುರು ಲಿಪಿ 261
ಏಷಿಯಾ ಮೈನರ್ 23,40,44

ಐ

ಐತರೇಯ ಬ್ರಹ್ಮಣ 72
ಐಶತೋನಿಯಲಿಪಿ 269
ಐರ್‌ಲ್ಯಾಂಡ್ 4
ಐಹೊಳೆ 150

ಒ,ಓ,ಔ

ಒರಿಸ್ಸಾಲಿಪಿ 100
ಓಘಮ್ ಲಿಪಿ 4
ಓಟ್‌ಫ್ರೆಡ್ ಮ್ಯೂಲರ್(ಹೆ) 73
ಓರಕಲ್ ಮೂಳೆಶಾಸನ 27
ಔಯಾಂಗ್(ಹೆ) 24
ಔರಂಗಜೇಬ 191

ಕ

ಕಂಚಿ 107,204,205,
241,285
ಕರ್ಕ 22
ಕಕೇಶಿಯಾ 22
ಕಟಕನಲಿಪಿ 28,37,38
ಕಟಿಸಯಸ್ (ಹೆ) 69
ಕಟಪಯಾದಿ 240,241,255
ಕಡಬ(ಊ) 239
ಕಣ್ಣಯ್ಯನ್(ಹೆ) 199
ಕತ್ರಿಸಿಅರಸ 149
ಕದಂಬರಲಿಪಿ 271
ಕದ್ಮೀಯ ಗ್ರಮ್ಮತ 55
ಕನ್ನಡ 126,180, 250
ಕನ್ನಡ ಮೋಡಿ 197
ಕನ್ನರದೇವ 109
ಕನಾನ್ ದೇಶ 47
ಕನಾನ್(ಹೆ) 73
ಕನಾನ್ಯಟ್ ಲಿಪಿ 23,43,47
ಕನ್ನಿಂಗ್ ಹ್ಯಾಂ 71,90
ಕನ್‌ಫ್ಯೂಷಿಯನ್ 24,283
ಕನ್ಯಾಕುಬ್ಜ 105
ಕನ್ಹೇರಿ 109,123
ಕಮೌಲಿ(ಊ) 118
ಕಪಿಭಾಷೆ 271
ಕಪಿಲಿಪಿ 271,276
ಕಲ್ಲುಂಬಾಳು 194
ಕಲ್ಹಣ 115
ಕಲ್ಲೂರು 134,141
ಕಳಿಂಗ 114
ಕ್ಯಟಬನಿಕ್‌ಲಿಪಿ 45
ಕಾಂಗ್ರಾ 97
ಕಾಂವಾಹಾರ 80
ಕಾಂಬೋಜ 80,265
ಕಾಕುಸ್ಥವರ್ಮ 129,130
ಕಾಕಸೂರಿ ಅಪ್ಪಕವಿ 225
ಕಾರ್ಕೆಮಿಷ್(ಊ) 23,50
ಕಾಡಲೂರು 170
ಕಾಡ್‌ಮೋಸ್(ಹೆ) 55
ಕಾರ್ಥಜಿನಿಯನ್ 49
ಕಾನುಕೊಲ್ಲಿ 158
ಕಾಯ್‌ಷುಲಿಪಿ 25
ಕಾರಿಯಾಲಿಪಿ 14,58
ಕಾಲ್ಡ್ ವೆಲ್(ಹೆ) 202
ಕಾರ್ಲೆ 123,124
ಕಾಶ್ಮೀರ ಲಿಪಿ 115,118
ಕಾಸರಗೂಡು 214
ಕಾಸ್ಸೈಟ್‌ಲಿಪಿ 2,22,23
ಕಾಳಗಿ(ಊರು) 176
ಕ್ಯಾಲಿಗ್ರಫಿ 228
ಕಿರುಮೊರೆಕೋಳಿ(ಊ) 141
ಕಿಷ್(ಊ) 28
ಕ್ಲಿಯೋಪಾಟ್ರ 8,10
ಕೀರ್ತಿವರ್ಮ 153
ಕೀರಾ(ಊ) 115
ಕ್ರೀಟ್ 22,23,40,43,44
ಕುಟಿಲಲಿಪಿ 109
ಕುದಿಳಿಯಂ(ಊ) 136
ಕುಫ(ಊ) 52,227
ಕುಫಿಕ್‌ಲಿಪಿ 52,53,227
ಕುಷ್ಕೈಯಾಸ(ಹೆ) 235,259

ಕುಮ್ಮಟದುರ್ಗ 184
ಕುಮಾರಗುಪ್ತ 105
ಕುರ್-ಆನ್ 283
ಕುರುಗೋಡು 178
ಕುಲೋತ್ತುಂಗ 243
ಕೃಷ್ಣ 162,163,168,170
ಕೃಷ್ಣದೇವರಾಯ 188,189
ಕೃಷ್ಣರಾಜ 109,285
ಕೃಷ್ಣರಾವ್ ಎಂ.ವಿ.ಎನ್ 32
ಕೃಷ್ಣವರ್ಮ 130,135,136
ಕೆಂಪೂರು 153,156
ಕೆಪೆನ್‌ಕೋಪಿ(ಊ) 271
ಕೆರಕುನ್ನುಕ್ಕಿ(ಊ) 274
ಕೆರೆನ್(ಹೆ) 271
ಕೆರೆಗೋಡು ರಂಗಾಪುರ 167
ಕೆರೆಹಳ್ಳಿ 170
ಕೆಳದಿ 191,192
ಕೇರಳಪುರ 80
ಕೇಶಿರಾಜ 1,2,281
ಕೈಷುಲಿಪಿ 37
ಕೊಂಗಣಿವರ್ಮ 135
ಕೊಂಡವೀಡು 222
ಕೊಕತ್‌ಪುರ 274
ಕೊಟಾನಿಯಾಲಿಪಿ 257
ಕೊಟ್ಟಿಂಬಾ(ಊ) 164
ಕೊಡಗು 191,197
ಕೊಡೇಕಲ್ 218
ಕೊಡೇಕಲ್ ಬಸವಣ್ಣ 216,218
ಕೊಪ್ಪರಂ(ಊ) 150
ಕೊಪ್ಪಳ 6,170,174
ಕೊರಡಮುಡಿ(ಊ) 158
ಕೊರಿಯಲಿಪಿ 36
ಕೊರುಮೆಳ್ಳಿ(ಊ) 223
ಕೊಹಲು ರಂಗೋರಂಗೋ 36
ಕೋತೂರು 170
ಕೋಪ್ಸ್(ಹೆ) 73
ಕೋಪ್ಟಿಕ್ ಲಿಪಿ 9,12,15,46,58
ಕೋಲೆಳುತ್ತು 214
ಕೋಸಂ 97
ಕೌತೇಮ್(ಊ) 109
ಕೌಶಾಂಬಿ 96

ಖ

ಖಮ್ತಿಲಿಪಿ 269
ಖವತ್(ಊ) 91
ಖರೋಷ್ಠಿಲಿಪಿ 76,78,82,85
90-95,102,201
237,243,285
ಖರೋಷ್ಠಿ ಅಂಕಲಿಪಿ 242,244
ಖಾನ್ ಎಫ್.ಎ 28
ಖ್ಮೇರ್ ದೇಶ 4
ಖ್ಮೇರ್ ಲಿಪಿ 262,264,268
ಖೋಟಾನಿಲಿಪಿ 258
ಖೋಪ್‌ಲಿಪಿ 3

ಗ, ಘ

ಗಂಗರ ಲಿಪಿ 271
ಗಟ್ಟವಾಡಿ 167
ಗದಗ 176
ಗದಾಧರ(ಊ) 118
ಗದ್ಯಾಣ 255
ಗಬ್ಬೂರು 6,111
ಗ್ರಂಥ 126,198,201,
202,204,206,
210,215,260,
268,271
ಗ್ರಂಥ-ತಮಿಳು 209,210
ಗಾಂದಾರಿಯನ್‌ಲಿಪಿ 90
ಗಾಯತ್ರಿ ಛಂದಸ್ಸು 71
ಗಾವರವಾಡ 178
ಗಿರಿನಾರ್ 82,85
ಗ್ರಿಮ್ಮ್(ಹೆ) 46
ಗ್ರೀಕ್ 3,4,8,12,15,
44,46,55,56,
58,61,65,73,
78,82,90,91,237
ಗ್ರೀಕ್-ಅರಾಮಿಯಾಲಿಪಿ 50
ಗ್ರೀಕ್-ನಬಾತಿಯ ಲಿಪಿ 51
ಗ್ರೀಸ್ 49
ಗುಂಡಾಕೆರೆ 6
ಗುಡ್ನಾಪುರ 248

ಗುಮ್ಮರೆಡ್ಡಿಪುರ	139
ಗುರ್ಮುಖಿ	117,283
ಗುರುಮೂರ್ತಿಶಾಸ್ತ್ರಿ ಆರ್.	226,227
ಗೂಢಲಿಪಿ	221
ಗೆಜರ್(ಊ)	43
ಗೆಜರ್ ಕ್ಯಾಲೆಂಡರ್	47
ಗೆಲ್ಬ್(ಪ)	23
ಗೇ ಏಜ್ ಭಾಷೆ	47
ಗೊಡಚಿ(ಊ)	149
ಗೊಬಿಲಿತಾನಲಿಪಿ	261
ಗೋಥಿಕ್ ಲಿಪಿ	58,61,285
ಗೋಪಥಬ್ರಾಹ್ಮಣ(ಗ್ರಂ)	72
ಗೋಪಿನಾಥರಾವ್	210
ಗೋಯಲ್ ಬಿ.ಆರ್.	199
ಗೋರಖಪುರ	70
ಗೋಟ್‌ಫೆಂಡ್(ಪ)	22
ಗ್ಲೋಬಿಟ್ ದಿ ಆಲ್ವೆಲ್ಲ(ಪ)	73
ಗೌತಮಪುತ್ರ	124
ಘೋಸುಂಡಿ(ಊ)	97

ಚ

ಚಂಗ್ಗಲ್(ಊ)	271
ಚಂದ್ರಗುಪ್ತ	78,82
ಚಂದ್ರನಂದಿ	201
ಚಂದ್ರವಳ್ಳಿ	119,127
ಚಂದ್ರಾದಿತ್ಯದೇವ	79
ಚಂಪಾದೇಶ	262,263,265
ಚರ್‌ಮೋರ್(ಪ)	259
ಚಕ್ರವರ್ತಿ ಆರ್.ಡಿ.	257
ಚಕ್ಮಾಲಿಪಿ	264
ಚಿನ್-ಚಿಯು-ಷಾಓ(ಪ)	235
ಚಿಯಾಂಗ್ ಪಿಯಾಓ(ಪ)	25
ಚಿಯಾ-ಚಿಟ್‌ಲಿಪಿ	26
ಚಾನ್-ಚುಲಿಪಿ	26
ಚಾಸ್ಟಾಪ್ರೋಲಿಪಿ	269
ಚಾಂಪಲಿಯನ್(ಪ)	8
ಚಾಪೇರ್(ಪ)	41
ಚಾಮ್‌ಲಿಪಿ	262,263
ಚಾರ್ಲ್ಸ್‌ಫಿಲಿಪ್ ಬ್ರೌನ್	226
ಚಿಕ್ಕದೇವರಾಜ	194
ಚಿಕ್ಕನಂದಿಹಳ್ಳಿ	151,152
ಚಿಕಾಕೊಲೆ(ಊ)	239
ಚಿ-ಕು-ಲೋ-ಪೋಪೀ(ಗ್ರಂ)	24
ಚಿತ್ರಮರ್ಗ	6,191
ಚಿತ್ರಲಿಪಿ	2,4,8-12,17
	39,43,75,83
ಚೀನಾ ಅಂಕಲಿಪಿ	235
ಚೀನಾ(ಚೈನಾ)	2,3,27,44, 64,257
ಚೀನಾ(ಚೈನಾ)ಲಿಪಿ	4,23,24,27,36
ಚೀನಾಭಾಷೆ	37
ಚುಮ್ಲಿಕ್(ಊ)	203
ಚೂಕಟ್ಟೂರು(ಊ)	136,137
ಚೆಬ್ರೋಲು	224
ಚೆಲುವನಹಳ್ಳಿ	136
ಚೇರಲಿಪಿ	271

ಜ, ಝ

ಜಂಬೂ(ಊ)	271
ಜಗ್ಗಯ್ಯಟಿ	156, 247
ಜಡೆಜ್ಮೋಲಿಪಿ	51
ಜಪಾನ್	27,28,36-38,64
ಜಾಪನಿ ಲಿಪಿ	36,38
ಜಪಾನಿ ಬರೆವಣಿಗೆ	37
ಜಮಾಲ್‌ಘರ್	244
ಜಯವರ್ಮ	263
ಜಯಸಿಂಹ	107,176
ಜಲಗಾವ್	176
ಜಲಗಾರದಿಬ್ಬ	134
ಜಾವಾ	271
ಜಾಪನ್ನರಲಿಪಿ	273
ಜುಲಿಯಸ್ ಪಂಚಾಂಗ	34
ಜೆಂಜಲಿನ್	43
ಜೆಡ್ರೋಷಿಯಾದೇಶ	82
ಜೆನ್‌ಸನ್(ಪ)	73
ಜೇಮ್ಸ್ ಪ್ರಿನ್ಸೆಪ್	73,118,119
ಜೋರ್ಡನ್	51
ಜೋನ್ಸ್(ಪ)	73
ಜೋಸೆಫ್ ಹಲೇವಿ(ಪ)	73
ಝಾ.ಎನ್.	32

ಟ

ಟರ್ಕಿ 53
ಟಾಲೆಮಿ 8,10
ಟೀಪ್ಪೂ 197,230
ಟಿಬೆಟ್ 258
ಟಿಬೆಟ್ ಲಿಪಿ 258
ಟಿಬೆಟೋ-ಚೀನಾಲಿಪಿ 24
ಟೆಟ್-ಎಲ್-ಹೆಸಿ(ಊ) 43
ಟೆಲ್-ಅಲಾಪ್(ಊ) 50
ಟೆಟ್-ಎಲ್-ಅಜ್ಜುಲ್(ಊ) 43
ಟೆಲ್-ಅಲಾಪ್(ಊ) 50
ಟೆಲ್-ಎಲ್.ಅಜ್ಜುಲ್(ಊ) 43
ಟೆಲ್ಲೋಹ(ಪ) 28
ಟೈಗ್ರಿಸ್ ನದಿ 21,22
ಟೋಲ್‌ಟಿಕ್ ಭಾಷೆ 34
ಟ್ರೋಜನ್ 55

ಡ

ಡಂಬಳ 184
ಡ(ದ)ಮಾಸ್ಕಸ್(ಊ) 45,50,52
ಡಿಗೊಡೆ.ಲಂಡಾ(ಹ) 34,356
ಡಿರಿಂಜರ್ 30,39,46,50,
58,71,74
ಡೀಕೆ(ಪ) 73
ಡೆಲಕಾಪಿರೀ(ಪ) 274
ಡೇರಿಯಸ್ 55,78
ಡೇಲ್ಸ್(ಪ) 28
ಡೇ-ಹೇವಸಿ(ಪ) 32
ಡೊಮೆಟಿಕ್ ಲಿಪಿ 12
ಡೌಸನ್(ಪ) 71

ತ

ತಕ್ಷಶಿಲೆ 70,82,96,97,244
ತರ್ಗಬನೌಲಿಪಿ 279
ತಗಲಾಗ್ ಲಿಪಿ 277,279
ತಡಮಲಿಂಗಿ 188
ತಸ್ವ ವಿಳುತ್ತಸ್ಟನ್ 214
ತಪ್ರೋನೋಯಿಲ್(ಊ) 274
ತಮಟುಕಲ್ಲು 150,204
ತಮಿಳು 2,114,126,198,
206,209,210,
251,252,283,285
ತಲಂಗ್ ತುಪ್ರೋ 274
ತಲೆಗಾವ್ 109
ತ್ಸಯಿನ್-ಪ್ರೋ-ತುಂಗ್(ಊ) 257
ತಾ(ತ್ರಾ)ಓಪುಲಿಪಿ 25,37
ತಾಕರಿ ಲಿಪಿ 115
ತಾಮ್ರಪರ್ಣಿ 80
ತಾಳಗುಂದ 5,128,130,134
ತಿಗಳಾರಿ 215
ತಿಗುಳಾರ್ಯ 215,216
ತಿರುಕ್ಕಳರ್(ಊ) 253
ತಿರುಚಿರಪಳ್ಳಿ 201
ತಿರುನಾಥಕುನ್ರು 201
ತಿರುಪತಿ 285
ತಿರುಪ್ಪರಕುನ್ರು 201
ತಿರುಮಲರಾಮಚಂದ್ರ 226
ತಿರುಮಲಾರ್ಯ 194
ತಿರುಮಲೈಚ್ಚೇರಿ 168
ತ್ರಿಭಾಷಾಶಾಸನ 2
ತುರ್ಕ್‌ಮಸ್(ಊ) 271
ತುರ್ಕಿ 64
ತುರ್ಕಿಸ್ತಾನ್ 91
ತುನ್-ಹು-ಅಂಗ್(ಊ) 257
ತುರ್ ವ್ ಟಾನ್ 49
ತುಳುಲಿಪಿ 24,215
ತೆಲುಗು 126,22,225,250
ತೈತ್ತರೀಯ ಸಂಹಿತೆ 71,236

ಥ

ಥಮುದನೆ(ಊ) 45,46
ಥಲ್ ಕಣಿವೆ 91
ಥಾಪರ್(ಪ) 28
ಥಾಮಸ್‌ಯಂಗ್ 8
ಥಾಮಸ್ ಹೈಡ್ 15
ಥೀಬ್ಸ್(ಊ) 55
ಥುತುಮಸ್ 8
ಥೋಬ್ಸ್(ಊ) 55,58
ಥೋನ್-ಮಿ-ಸಮ್-
-ಬೋಟ(ಪ) 258

ದ

ದಂತಿದುರ್ಗ	239
ದಕ್ಷಿಣ ಅರೇಬಿಯಾ	45
ದಕ್ಷಿಣಾಸೆಯಟಿಯಾ	40,45
ದಕ್ಷಿಣಾಚಾರ	76
ದಮಿಳಿ	199,210
ದಶಾಂಶಪದ್ಧತಿ	232,238,239,240, 243,251,252,253
ದಾನಿ ಎ.ಎಚ್.	74,76,83,90 200,205,237
ದಾಮೋದರ	107,205
ದಾಮೋದರವರ್ಮ	159
ದ್ರಾವಿಡಭಾಷೆ	32,71
ದಿಂಡುಗಲ್	197
ದಿವೇಆಗರ್	109,139
ದಿವೇಸ್ ಅಕುರು	261
ದುಸಂದ್(ಹೆ)	41,44,46
ದುರ್ವಿನೀತ	139,141
ದುವೆಗಾಲ(ಊ)	261
ದೆದಾನ್	45
ದೇವನಗರ	194
ದೇವನಾಗರಿಲಿಪಿ	101,102
ದೇವರಕೊಂಡ	222
ದೇವರಾಯ	187,188
ದೇವಶೇಷಲಿಪಿ	115
ದೇವಿಹೊಸೂರು	170
ದೊಡ್ಡಕೃಷ್ಣರಾಜು	194
ದೊನೆಪೂಂಡಿ	224

ಧ

ಧರ್ಮಮಹಾಮಾತ್ಯ	78
ಧರ್ಮಲಿಪಿ –	78,83
ಧಾರ್ಮಿಕಚಿಹ್ನೆ	24
ಧಾರ್ಮಿಕಲಿಪಿ	9,11,14,39
ಧಾರವಾಡ	197
ಧುಲಿಯ(ಊ)	239
ಧೋಲ್‌ಪುರ್	239
ಧೌಲಿ(ಊ)	90

ನ

ನಂದಿನಾಗರಿ	111,112
ನಂದಿವರ್ಮ	158
ನದೀಂ(ಹೆ)	52
ನಬಾತಿಯಾ ಲಿಪಿ	51
ನರವರ್ಮ	105
ನರಸಿಂಹ	180
ನರಸಿಂಹಮೂರ್ತಿ ಎ.ವಿ.	131
ನರಸಿಂಹವರ್ಮ	147,161,285
ನಲ್ಲಾಲಂ(ಊ)	139
ನಸ್ಖ್‌-ಇ-ರುಸ್ತುಂ(ಊ)	78
ನಸ್ಖ್‌ಲಿಪಿ	53, 277
ನ್ಗಲಲೇತ್ ಅಕ್ಷರ	273
ನಾಗಾರ್ಜುನಕೊಂಡ	102,124,126,156
ನಾಗಾರ್ಜುನಿಬೆಟ್ಟ	119
ನಾಗರಾಜು ಎಸ್.	101
ನಾಗರಿಲಿಪಿ	101,102,107, 111,112,114,116, 118,180,210,271
ನಾಗಲಿಪಿ	101
ನಾಗಾಸ್ವಾಮಿ	199
ನಾನಾಮೋನಲಿಪಿ	201
ನಾಭಕದೇಶ	80
ನಾಭಪಂಕ್ತಿ	80
ನಾಮಯನಾಯಕ	224
ನಾರದಸ್ಮೃತಿ	68
ನಾರಾಯಣನ್ ಎಂ.ಜಿ.	202
ನಾರಾಯಣಪಾಲ	118
ನಾಸಿಕ್	102,124
ನಿಗಾಲಿ ಸಾಗರ	83
ನಿಟ್ಟೂರು	80
ನಿಡುಗಲ್ಲು	191
ನೀತಿಮಾರ್ಗ	162,167,170
ನೀರ್ಘಡಿ	193,194
ನೀಬೂರ್ಸ್(ಹೆ)	69
ನೀಲಗುಂದ	11
ನೆಪೋಲಿಯನ್	8
ನೆಲ್ಸನ್	46
ನೆಸ್ಟೋರಿಯಾಲಿಪಿ	51
ನೇಪಾಳಲಿಪಿ	100

ಪ

ಪಂಗಸಿನನ್ ಭಾಷೆ 277
ಪಂಚವಿಂಶಬ್ರಾಹ್ಮಣ(ಗ್ರಂ) 72
ಪಂಪಂಗನ್ ಭಾಷೆ 277
ಪಂಪಿಲಿಯಾಲಿಪಿ 58
ಪಕುಅಲಿಪಿ 24
ಪಚೀರಕ್(ಲಿಪಿ) 273
ಪನ್ನವಣಾಸೂತ್ರ 68
ಪಪೈರಸ್ 14,50,61
ಪರಪಂಸಿದಿದೇಶ 82
ಪರಾಂತಕ 253
ಪರಾಕ್ರಮಪಾಂಡ್ಯ 202
ಪರಾಶರ(ಹೆ) 69
ಪರಿಯನ್ ಪಟ್ಟಿ 201
ಪಲಮದೇಸ್(ಹೆ) 55
ಪಲ್ಲವ 107,126
ಪಲ್ಮೈರ್ಸ್‌ಲಿಪಿ 51
ಪರ್ಷಿಯಾ 2,22,53,54, 75,227
ಪ(ಪೆ)ಹ್ಲವಿ 3,55
ಪಾಂಡ್ಯ 107
ಪಾಗನ್ 265
ಪಾಣಿನಿ(ಹೆ) 72,80,84
ಪಾರ್ಥವ 55
ಪಾರ್ಥಿಯನ್ 55
ಪಾರ್ಥಿವೇಂದ್ರ 253
ಪಾನ್‌ಕೆಂಗ್ (ಹೆ) 25
ಪಾಲನೇಷಿಯಾ-ನೀಗ್ರಾಯಿಡ್ 35
ಪಾಲಸ್ತಾನ್ 23,40,43,44,47
ಪ್ರಾಕೃತ 32,82,83
ಪ್ರಾಚೀನಹೀಬ್ರೂ 47
ಪ್ರಾಣನಾಥ್(ಹೆ) 32
ಪಿಂಟಡಾಸ್ 277
ಪಿಕ್‌ಟಿಷ್‌ಲಿಪಿ 4
ಪಿಟ್ಸ್‌ಮನ್(ಹೆ) 292
ಪಿಪ್ರಾಹ್ವ(ಊ) 70,97,200
ಪಿಲಾಸ್ತಾನೀಯರು 40
ಪೀಕಿಂಗ್ 24
ಪುನಿಕ್‌ಲಿಪಿ 47
ಪುಮಕೋಟ್ಟೈ 253
ಪುಲಕೇಶಿ 150,151,248,285
ಪುಲಿಂದ 80
ಪುಳಮಾವಿ 124
ಪ್ಯುಲಿಪಿ 265
ಪೂರ್ಣಯ್ಯ 197
ಪೂರ್ಣವರ್ಮ 270
ಪೆಗು 265
ಪೆಜ್ಜರಂಗಿ 166
ಪೆಣ್ಣಸೂರು 139,141
ಪೆದಕೋಮಟಿವೇಮ 224
ಪೆನುಗೊಂಡೆ 137,190,225
ಪೆನಾಂಗ್‌ಗುಂಗೆನ್ (ಊ) 271
ಪೆರ್ಸಿಪೋಲಿಯಾ(ಊ) 78
ಪೇರೂರು 136
ಪೈಥಾಗೊರಸ್ 9
ಪೊಂಬೊಳಲು 194
ಪೊಸೀಷಿಯಾ 4,40,42,43, 47,49,55,56,65, 73,74,201
ಪೊಲಿಂದಿ 199
ಪೋರ್ಚುಗಲ್ 61
ಪ್ರೊಮೇಥೇಯಸ್ 55
ಪ್ರೋಂಲಿಪಿ 265

ಫ

ಫ-ವಾನ್-ಷು-ಲಿಲ್(ಹೆ) 69
ಫಿರಿಂಗಿಪುರಂ 224
ಫಿಲಿಪ್ ಜೆ.ವೊಗಲ್ 271,272
ಫಿಲಿಫೀನ್ಸ್ 270,276,277,279
ಫ್ಲಿಂಡರ್ ಪೆಟ್ರೀ(ಹೆ) 40
ಫ್ಲೀಟ್ ಜೆ.ಎಫ್ 90,91,109,137
ಫೆಸಿಫಿಕ್ ಸಾಗರ 35
ಫ್ರೆಂಚ್ 61
ಫೈಜಿಯಾಲಿಪಿ 58

ಬ

ಬತಕರಲಿಪಿ 274,276
ಬಂಗಾಳ ಲಿಪಿ 100,118
ಬಕ್ಷಾಲಿ(ಊ) 116

ಬಗುಮ್ರಾ(ಊ) 109
ಬಜಾರ್ ಮಲಯ್ 269
ಬಡ್ನಿ(ಊ) 70
ಬಣ್ಣದ ರೇಖಾಚಿತ್ರ 6
ಬತಕರಲಿಪಿ 274,276
ಬನವಾಸಿ 123,124,128,245
ಬರ್ಮಾ 3,265,266
ಬಯಕಾರರಾಮಪ್ಪಯ್ಯ 189
ಬರಾಬರ್‌ಗುಹೆ 97
ಬರ್ಲಿ(ಊ) 97
ಬರೂವ(ಹೆ) 80
ಬರ್ನೆಟ್ ಎಲ್.ಡಿ. 101
ಬರ್ನೆಲ್ (ಹೆ) 71,201,244
271
ಬಸ್ರಾ(ಊ) 52
ಬ್ರಹ್ಮಗಿರಿ ಶಾಸನ 76,80,85,91,285
ಬಾಗದಾದ್ 52
ಬಾದಾಮಿ 107,119,147,
153,249,285
ಬಾರಖಡಿ 240,241,242
ಬಾಲಿದ್ವೀಪ 273
ಬಸಾಕೆಡತಮ್ 273
ಬಾಸಾತೊವುಗಿಕ್ 276
ಬ್ಯಾಕ್ಟ್ರಿಯನ್‌ಲಿಪಿ 90
ಬ್ಯಾಕ್ಟ್ರೋಪಾಳಿ 90
ಬ್ಯಾನರ್ಜಿ ಆರ್.ಡಿ. 118,257
ಬ್ಯಾಬಿಲೋನಿಯ 2,21,22,41
ಬ್ರಾಂಡೆಸ್(ಹೆ) 271
ಬ್ಲಾಡ್ಲೆ ಬಿ.ಸಿ.(ಹೆ) 268
ಬ್ರಾಹ್ಮಿಅಂಕೆ 237,255
ಬ್ರಾಹ್ಮಿಲಿಪಿ 4,32,68,71,73-
76,82-84,
90,91,95,102,
105,121,122,
198-202,204,
213,237,238,
242,285
ಬಿಂಬೇಡ್ಕಾ 6
ಬಿಲ್ಹಣ 176
ಬಿಸಯಭಾಷೆ 277
ಬಿಸ್ಟೂನ್(ಊ) 78
ಬಿಹ್ರೋಜ್ನಿ 32
ಬುಕ್ಕ 185,186
ಬೂತುಗ 162
ಬೂಹ್ಲರ್ 69,70,73,75,
91,109,156,201
237,240
ಬೃಹಸ್ಪತಿ(ಹೆ) 68
ಬೆಂಗಳೂರು 191
ಬೆಂಡಿಗಾನಹಳ್ಳಿ 135,137
ಬೆನ್‌ಫೆ(ಹೆ) 73
ಬೆಲರ್ಮಿನೋ(ಗ್ರಂ) 277
ಬೆಶ್ಲಿ(ಹೆ) 210
ಬೆಳತೂರು 240
ಬೇಲೂರು 179
ಬೇಸ್‌ನಗರ್ 97
ಬೈಜನಾಥಪ್ರಶಸ್ತಿ 115
ಬೈಲಿ(ಹೆ) 74
ಬೈಬ್ಲೊ 2;3,41,42–44,46
ಬೋಗಾಜ್‌ಕಾಯ್(ಊ) 23
ಬೋತಿಯ ಭಾಷೆ 258
ಬೋಧಗಯಾ 96,101,109
ಬೋರ್ನಿಯೋಲಿಪಿ 274
ಬೋವರ್‌ಹಸ್ತಪ್ರತಿ 258
ಭಟ್ಟಿಪ್ರೋಲು(ಊ) 70,75,97,121,
122,123,198,
200
ಭದ್ರವರ್ಮ 263,274
ಭಮೋಧರ(ಊ) 97
ಭರಹಾ(ಹೂ)ತ್ 91,96,97,118
ಭಾರವಿ 107,205
ಭಾವಲಿಪಿ 2,17,23,41
ಭಾಸಾ ಇಂಡೋನೇಷಿಯಾ 269
ಭಿಲ್ಸಾ(ಊ) 97
ಭೂತಗಳ ಲಿಪಿ 33
ಭೂತಸಂಖ್ಯೆ 255
ಭೂತಾನ್ 258
ಭೌತಶಾಸ್ತ್ರ 3

ಮ

ಮಂಗಲೇಶ 150,162
ಮಂಗೋಲಿಯಾ 259

ಮಂಚಿಯಾಲಿಪಿ	51	ಮಾರಸಿಂಹ	144,147,164,170
ಮಂಪಗಪಟ್ಟು	205	ಮಾರಿಸ್ ದುಸಂಬ್(ಹೆ)	42
ಮಂದಸೋರ್	105	ಮಾಲ್ದೀವಿ	261
ಮಂದಿಯಾಲಿಪಿ	51	ಮಾರ್ಷಲ್(ಹೆ)	32
ಮಂಥಾರ್ ಭಾಷೆ	276	ಮಾರ್ಸ್‌ಕೋಡ್	291
ಮಗಧ	96	ಮಾಳವ	96
ಮಜಪಹಿತ್‌ವಂಶ	270,271	ಮ್ಯಾಕಡೋಣೆ(ಊ)	247
ಮಟ್ಟಿಪಾಡು	159,253	ಮ್ಯಾಕ್ಸ್ ಮುಲ್ಲರ್(ಹೆ)	74
ಮದೀನ	52,227	ಮಿಂಟೋಸ್ಟೋನ್	271
ಮಥುರಾ	92,97	ಮಿನೋಆನ್ ದೇಶ	50
ಮಧ್ಯಅಮೇರಿಕಾ	44	ಮಿರಾಶಿ(ಹೆ)	239,262
ಮಧ್ಯಪ್ರಾಚ್ಯ	4	ಮಿಶ್ರಲಿಪಿ	261
ಮನ್ಚ್ಯಾನ್ ಲಿಪಿ	279	ಮಿನಿಯಲಿಪಿ	45
ಮಯಿದವೋಲು	156-158,247,253	ಮುಂಡೊಳ್ಳಿ	188
ಮಯೂರವರ್ಮ	128,131	ಮುತ್ತೂರು	130
ಮರಾಠಿ	225	ಮುಲ್ತಾಯ್(ಊ)	109
ಮರಾಠಿಮೋಡಿ	230	ಮುಷ್ಕರ	141
ಮರೈಸ್	44	ಮುಳಗುಂದ	168
ಮಲಯೋ-ಪಾಲನೇಷಿಯನ್	277	ಮೂಲದ್ರಾವಿಡ	37
ಮಲೆಯಾಳ	213,215	ಮೂಲವರ್ಮ	274
ಮಲ್ಲೋಹಳ್ಳಿ	81	ಮೂಲೆಪಾಡು	222
ಮಹಾದೇವನ್.ಐ.	33,199,210,213	ಮೃಗೇಶವರ್ಮ	130
ಮಹಾನಾಮನ್(ಊ)	109	ಮೆಕ್ಕ	52,227
ಮಹಾಲಿಂಗಂ ಟಿ.ವಿ.	199,201	ಮೆಕ್ಸಿಕೋ	33
ಮಹಾವಗ್ಗಜಾತಕ	68	ಮೆಗಾಲಾನ್	277
ಮಹಾಸ್ಥಾನ್(ಊ)	70,97	ಮೆಗಾಸ್ತನೀಸ್	69
ಮಹೇಂದ್ರ	167	ಮೆಡಿಟರೇನಿಯನ್	39,40,45,75
ಮಹೇಂದ್ರಪಾಲ	105	ಮೆದಕೇರಿನಾಯಕ	194
ಮಹೇಂದ್ರವರ್ಮ	107,205	ಮೆರಿಗ್ಗಿ(ಹೆ)	23,30
ಮಹೋದಯ(ಊ)	104	ಮೆರೋಇಟಿಕ್‌ಲಿಪಿ	2
ಮಳವಳ್ಳಿ	126,131	ಮೆಸಪಿಯಲಿಪಿ	58
ಮಾಗಡಿ	119	ಮೆಸಪೊಟೋಮಿಯಾ	16,21,28,44, 50,227,232
ಮಾಣಿಕಿಆಲ(ಊ)	244		
ಮಾದಾಪುರ	189	ಮೆಸಿಡೋನಿಯಾ	80
ಮಾಘೋಸ್ವರೂಪ್‌ವತ್ಸ	28	ಮೇಲುಕೋಟೆ	194
ಮಾಯಾ	35	ಮೈತ್ರೇಯನಿಕಸಂಹಿತೆ	237
ಮಾಯಾಅಂಕೆಗಳು	236	ಮೈನ್ಮಾರ್	266
ಮಾಯಾನಾಗರೀಕತೆ	35	ಮೈಸೂರು	191
ಮಾಯಾಪಂಚಾಂಗ	34	ಮೊನಚುಲಿಪಿ	15,16,21,22,32
ಮಾಯಾಸಾಂಗತ್ಯ	218	ಮೊಳೆಯಾಕಾರದ ಲಿಪಿ	2,3,41,55,74

ಮೊಹೆಂಜೋದಾರೋ	28,91
ಮೋಅಬೈಟ್ ಲಿಪಿ	47
ಮೋಡಿಲಿಪಿ	230
ಮೌನ್‌ಗ್ಲುಸ್	266
ಮೌರ್ಯ	68
ಯಜುರ್ವೇದ	237
ಯಮನ್	45
ಯಮತೊಗನಲಿಪಿ	37
ಯಮ್ರಗುಡಿ	82
ಯಶೋವರ್ಮ	105,264
ಯಿದ್ದಿಷ್ ಲಿಪಿ	51
ಯುದ್ದಾಸ್ಟರ(ಹೆ)	109
ಯುನಿಕಾರ್ನ್	32
ಯುಫ್ರಟಿಸ್ ಟೈಗ್ರಿಸ್	39,74
ಯುಫ್ರಟಿಸ್ ನದಿ	21
ಯುರೋಪಿನ ಲಿಪಿಗಳು	3,4,65
ಯೆಕ್ಕೇರಿ	150
ಯೋನ(ವಂಶ)	80

ರ

ರಮೇಶ್ ಕೆ.ವಿ	33,101,147,199
ರಷಿಯಾ	64
ರಾಬೆಲ್-ಡೆ-ರೊಷೆಟ್(ಹೆ)	73
ರಾಚಕೊಂಡ	222
ರಾಚಮಲ್ಲ	147,162,166,170
ರಾಚಪ್ಪಯ್ಯ	218
ರಾಜಮಹೇಂದ್ರಿ	222
ರಾಜಸಿಂಹ	206
ರಾಜಸಿಂಗೇಶ್ವರ	285
ರಾಜುಲಮಂದಗಿರಿ	90
ರಾಜಾರಾಂಪಸ್.ಎಸ್	32
ರಾಮ್‌ಗಡ್	97
ರಾಮತೀರ್ಥ	161
ರಾವ್ ಎಸ್.ಆರ್	28,33,74
ರಾಷ್ಟ್ರಿಕ	80
ರಾಸ್‌ಷಮ್ರಾ(ಊ)	41
ರಾ(ರೋ)ಸೆಟ್ಟಾ ಶಿಲೆ	8,12
ರಿಚರ್ಡ್‌ಸಾಲೊಮನ್	119
ರುಹಾಲ್ಫಾಸ	258
ರುದ್ರಧಾಮ	102
ರೆಡ್‌ಜಾಂಗ್ ಲಿಪಿ	276
ರೇಷ್	3
ರೇಯೂರು	156,161
ರೋಮನ್	285
ರೋಮನ್ ಲಿಪಿ	85,280
ರೋಟೋಕರು	4
ರೋಸೆನ್ಫಲ್(ಹೆ)	50
ರೈಸ್ ಡೇವಿಡ್(ಹೆ)	74

ಲ

ಲಂಪಾಂಗ್ ಲಿಪಿ	276
ಲಡಾಖ್	115
ಲತಿನಲಿಪಿ	15,38,58,61, 64,284
ಲಲಿತವಿಸ್ತಾರ	69,90,101, 117,237
ಲಕ್ಷ್ಮೇಪುರದ ಶಾಸನ	5
ಲಕ್ಷ್ಮೇಶ್ವರ	151
ಲಾಲ್(ಹೆ)	28
ಲಾವೋಲಿಪಿ	267
ಲ್ಯಾಟಿನ್	2
ಲಿಡಿಯಾ	58
ಲಿಡಿಯಾ-ಆರಾಮಯಾ	50
ಲಿನೋಸ್	55
ಲಿಬಿಯಾ	49
ಲಿಬಿಯಾ-ಪ್ಯೂನಿಕ್	49
ಲಿಬಿಯಾಲತಿನ	49
ಲಿಯೆಹ್ (ಹೆ)	235
ಲಿಷು(ಲಿಪಿ)	25
ಲಿಸಿಯಾ	58
ಲುಂಬಿನಿವನ	82,83
ಲೆಪ್ಷಿಯಸ್	73
ಲೆಷಿರ್(ಊ)	43

ವ

ವಟ್ಟೆಳುತ್ತು	126,198,201, 202,204
ವರ್ಣಗಳ ಹೆಸರು	65
ವರ್ಣನಾಗ	116
ವರ್ಣಮಾಲೆ	3,17,33,55,58

ವರ್ಣಲಿಪಿ	2,3,39,41, 43,44,240
ವಳ್ಳಿಮಲೆ	147
ವರದರಾಜಸ್ವಾಮಿ(ದೇ)	241
ವರಾಹಮಿಹಿರ	240
ವಸಿಷ್ಠ ಧರ್ಮಸೂತ್ರ	69
ವಾಗಿಯರ ಲಿಪಿ	276
ವಾಜಸನೇಯ ಸಂಹಿತೆ	72
ವಾಡೆಲ್ಲ್ ಎಲ್.ಎ.	32
ವಾಮಾಚಾರ	76
ವಾರಣಾಸಿ	82,118
ವಾಸಿಷ್ಠೀಪುತ್ರ	210
ವ್ಯಾಂಗ್‌ಡನ್ (ಹೆ)	25
ವ್ಯಾಸ(ಹೆ)	69
ವಿಕ್ರಮಾದಿತ್ಯ	109,285,151, 175,176
ವಿಕ್ರಮಶಕ	239
ವಿಜಯಾದಿತ್ಯ	153,221
ವಿಜಯನಗರ	185,187
ವಿನಯಪಿಟಕ	68
ವಿನಾಯಕಪಾಲ	109
ವಿಮಲಾನಂದ	260
ವಿರೂಪಾಕ್ಷ	108
ವಿಳವತ್ತಿ	204
ವಿಲ್ಸನ್(ಹೆ)	73
ವಿಷ್ಣು-ಕುಂಡಿ	24
ವಿಷ್ಣುಗೋಪವರ್ಮ	159
ವಿಷ್ಣುತುಂಗ	215
ವಿಷ್ಣುಧರ್ಮಸೂತ್ರ	69
ವಿಷ್ಣುಪುರಾಣ	80
ವಿಷ್ಣುವರ್ಧನ	205
ವೀರಪುರುಷದತ್ತ	126
ವೀರರಾಜೇಂದ್ರ	197
ವುತಿಂಗ್(ಹೆ)	25
ವೆಂಗಿ	158,205
ವೆಂಗಿಲಿಪಿ	271
ವೇಳ್ವಿಕುಡಿ	201,255
ವೆಬರ್(ಹೆ)	73
ವೇಲುಪಿಳ್ಳೆ	204,209,210
ವೊನ್‌ಸೀಟ್ ಜೆನ್(ಹೆ)	73

ಶ

ಶಂಕುಲಿಪಿ	118–120
ಶತಪಥಬ್ರಾಹ್ಮಣ(ಗ್ರಂ)	72
ಶಬ್ದಮಣಿದರ್ಪಣಂ	1
ಶ್ರವಣಬೆಳಗೊಳ	179,186,231
ಶಾತವಾಹನ	100
ಶಾರದಾಲಿಪಿ	115,242
ಶಾಲಿಗ್ರಾಮ	141
ಶಾಸನಕೋಟೆ	138
ಶಿಗ್ಗಾವ್	153
ಶಿರಗುಂದ	141
ಶಿವಮಾಂಧಾತೃವರ್ಮ	130
ಶಿವಮಾರ	141,144, 147,166
ಶಿವರಾಮಮೂರ್ತಿ ಸಿ.	107,119,122, 198,202
ಶಿವಾಜಿ	230
ಶಿವಳ್ಳಿ	130
ಶುಕ್ಲಯಜುರ್ವೇದ	72
ಶ್ರೀಪುರುಷ	135,141,142 144,162
ಶ್ರೀಮಾರ	262,263
ಶ್ರೀರಂಗಪಟ್ಟಣ	197
ಶ್ರೀರಂಗ	285
ಶ್ರೀವಿಕ್ರಮ	141
ಶ್ರೀವಿಜಯ	270,271, 273,274
ಶ್ರೀ ವಿರೂಪಾಕ್ಷ	294
ಶ್ರೀಶೈಲ	127
ಶೇರ್‌ಷಾಹ	239

ಷ

ಷಣ್ಮುಗಂ ಕೆ.	199
ಷರ್-ಇ-ಕುನ(ಊ)	82
ಷಹಬಾಜ್‌ಘರ್	82
ಷಾಂಗ್-ಯಿನ್‌ವಂಶ	25

ಷಾನ್ 267,269
ಷುಂಗ್‌ತ್ಸುಲಿಪಿ 25

ಸ

ಸಂಸ್ಕೃತ ಭಾಷೆ 2, 32
ಸರ್‌ರೈ(ಊ) 239
ಸರ್ಕಾರ್ ಡಿ.ಸಿ. 119
ಸತಿಯಪುತ 80
ಸನ್ನತಿ 97
ಸಮರಿಟಿಕ್ 45
ಸಬೀಯನ್ 45,46
ಸಮವಾಯಾಂಗಸೂತ್ರ 68
ಸಮ್‌ಅಲ್(ಊ) 50
ಸಮುದ್ರಗುಪ್ತ 103,120,257
ಸರ್‌ಜಾನ್‌ಮಾರ್ಷಲ್ 28
ಸವಣೂರು 152
ಸಯಾಮಿಲಿಪಿ 267
ಸಸೇನಿಯರು 55
ಸಹಸ್ರಾಮ್(ಊ) 85
ಸ್ಲವನಿಯಾ 58
ಸಾಂಚಿ 97
ಸಾರ್ಡಿಯನ್ 49
ಸಾಮನಗಡ 109
ಸಾಮಾನ್ಯಲಿಪಿ 8,12
ಸಾಲಂಕಾಯನ 126,247
ಸಾಲ್ವಾನಿಕ್ 53
ಸಾಲೋಮನ್ ದ್ವೀಪ 4
ಸಾಳುವನಕುಪ್ಪಂ 107,205,
ಸಿಂಧೂನಾಗರೀಕತೆ 2,28,44,232
ಸಿಂಧೂಮುದ್ರಿಕೆ 33,74
ಸಿಂಧೂ ಬರವಣಿಗೆ 235
ಸಿಂಧೂಲಿಪಿ 28,33,68,75,237
ಸಿಂಹವರ್ಮ 130,136,16
ಸಿಂಹವಿಷ್ಣು 107,205
ಸಿಂಹಣ 111
ಸಿಂಹಳಲಿಪಿ 259-261
ಸಿದ್ಧಮಾತ್ರಕಾ 101
ಸಿದ್ಧಮಾತ್ರಿಕಾ 101,109,115,116
ಸಿಮೋನಿಡೀಸ್(ವ) 55
ಸಿರಾಸಂಪಿ 191
ಸಿರಿಪುರಂ 160
ಸಿರಿಯಾ 2,4143,44, 46,50,51,80
ಸಿಲ್ವಿಯನ್ ಲಿಪಿ(ಹೆ) 90
ಸಿಸಿಲಿ 49
ಸುಂದರಚೋಳ 255
ಸುಂಪರಿ(ಹೆ) 68
ಸುಇವಿಹಾರ(ಊ) 244
ಸುತ್ತಾಂತ(ಗ್ರಂ) 68
ಸುದ್ಧರ್ಮಪುರ 265
ಸುಬ್ಬರಾಯಪ್ಪ ಬಿ.ವಿ. 32,33,232
ಸುಬ್ರಹ್ಮಣ್ಯ ಅಯ್ಯರ್ ಕೆ.ವಿ. 199
ಸುಬ್ರಹ್ಮಣ್ಯಮಲಯಾಂಡಿ 199
ಸುಮಾತ್ರಾಲಿಪಿ 273
ಸುಮೇರಿಯಾ 2,16,21,32,41,232
ಸುರ್ ಕೋಲ್ಡ್(ಊ) 28
ಸೂಸ(ಊ) 28
ಸ್ಟೂರ್‌ಟೆವಂಟ್(ಹೆ) 1
ಸೆಕ್ರೋಪ್ಸ್(ಹೆ) 55
ಸೆಮೆಟಿಯಾ 3,9,16,21,22,41, 43,44,47,53,56, 64,73-76,83,284
ಸೆಮೆಟಿಯಾ-ಹಮೆಟಿಯಾ 64
ಸೆಲಬರಲಿಪಿ 276
ಸೇಫ(ಹೆ) 46,73
ಸ್ಟೇನ್ 49,53,61
ಸೈನಾಯ್ ಲಿಪಿ 51
ಸೈ(ಸಿ)ನೈಟಿಯಾ 40,41
ಸೈನಾಟಿಯಾ 43,46
ಸೈಪ್ರಸ್ 41,43,69
ಸೈಪ್ರಿಯಾಭಾಷೆ 40
ಸೈಪ್ರೋ-ಫೊನೀಷಿಯಾ 49
ಸೈರಿಲಿಕ್ ಲಿಪಿ 58
ಸೈರೀನ್‌ದೇಶ 80
ಸೊಗಸ ಲಿಪಿ 27
ಸೋಂಪೆ 191
ಸೋಪ್ಪುರಕಲ್ಲಿನಮುದ್ರೆ 22
ಸ್ಟೋ(ಸೌ)ಗಾದ(ಊ) 70,97

ಹ

ಹಂಟರ್(ಪ) 30
ಹಂಪೆ 122,190,231

ಹ-ಓಮಾಬರೆಹ	235	ಹಿಮುಷ್ ದೇಶ	82
ಹತ್ತಿಮತ್ತೂರು	163	ಹಿಬ್ರೂಲಿಪಿ	43,47,51,65
ಹದ್ರಮೌಟಿಕ್	45	ಹಿರಗನಲಿಪಿ	27,37,38
ಹನ್ನಕೊಂಡ	179	ಹಿರಾಗ್ಲಿಫ್	9
ಹಮಟಿಯಾಭಾಷೆ	9	ಹಿರೇಬೆಣಕಲ್	6
ಹಮತ್(ಊ)	23	ಹಿರೇಹಡಗಲಿ	156,157,247
ಹಮ್ಮುರಬಿ(ಹೆ)	2,22	ಹಿರೋಗ್ಲಫಿಕ	9
ಹರತಿ	191	ಹಿಮ್ಯರಿಟಿಕ್	45
ಹರಪ್ಪ	28	ಹಿಸ್ಪಾನಿಯಾ-ಸಿಟೇರಿಯರ್	49
ಹರಪ್ರಸಾದಶಾಸ್ತ್ರಿ	201	ಹ್ಸಿಂಗ್ ಷುಲಿಪಿ	25
ಹರಿಹರ	1,185	ಹ್ಸಿಂಗ್ ಷೇಂಗ್ ಲಿಪಿ	27
ಹಲಸಿ	130	ಹ್ಸಿ ಯಾಂಗ್ ಲಿಪಿ	25
ಹಲ್ಮಿಡಿ	129	ಹ್ಸಿಯಾಂಗ್ ಹ್ಸಿಂಗ್	25
ಹಲ್‌ಗಳು	251,255	ಹುಂದ್(ಊ)	115
ಹರ್ಷ	107	ಹುಯಿಇಲಿಪಿ	26
ಹಸಿಯೊತುನ್(ಊ)	25	ಹುರಿಯನ್	2
ಹಳದೀಪುರ	152	ಹುಲುಗಿ	177
ಹಳ್ಳಗೆರೆ	144	ಹುಷು-ಅನ್	24
ಹಳ್ಳಿ	255	ಹ್ಯೂಯೆನ್ ತ್ಸಾಂಗ್	69
ಹಾಥಿಗುಂಪಾ(ಊ)	96,97	ಹೆನ್ರಿರಾಲಿನ್ ಸನ್(ಹೆ)	22
ಹಾರೋಪೆಲ್ಲೋನ್(ಹೆ)	9	ಹೆರಟಿಕ್ ಲಿಪಿ	11,14,15
ಹಾವಿನನಡಿಗೆಲಿಪಿ	23	ಹೆರಾಸ್(ಹೆ)	32
ಹಿಂದೂಕುಷ್	90	ಹೇಮಾವತಿ	166
ಹಿಂದೂಸ್ತಾನಿಲಿಪಿ	227	ಹೈದರಾಲಿ	197
ಹಿಟ್ಟೈಟ್	2	ಹೊಕಾಸೋ	277
ಹಿಟ್ಟಹೆಬ್ಬಾಗಿಲು	130	ಹೊಟು ಮಟಹ(ಹೆ)	36
ಹಿಡ್ಡಾ(ಊ)	244	ಹೊಸಪೇಟೆ	6
ಹಿತ್ತೈತ್	23,32,43,50	ಹೋಲ್ ಸ್ಟೈನ್(ಊ)	258

* * *

ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ವಿರಳ ಪ್ರಕಾರವಾದ ಲಿಪಿಶಾಸ್ತ್ರದ ಬಗ್ಗೆ ಕೃತಿಗಳು ಅಲಭ್ಯವಿರುವ ಸಂದರ್ಭದಲ್ಲಿ ಡಾ. ದೇವರಕೊಂಡಾರೆಡ್ಡಿಯವರ ಲಿಪಿಯ ಹುಟ್ಟು ಮತ್ತು ಬೆಳವಣಿಗೆ ಕೃತಿ ಅಪರೂಪದದ್ದಾಗಿದೆ. ಲಿಪಿಯ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ಅನೇಕ ವರ್ಷಗಳ ಆಳವಾದ ಅಭ್ಯಾಸದ ಫಲವಾಗಿ ಈ ಕೃತಿ ಮೂಡಿ ಬಂದಿದೆ. ಲೇಖಕರೇ ತಿಳಿಸಿರುವಂತೆ ಈ ವಿಷಯದ ಬಗ್ಗೆ ಇಷ್ಟೊಂದು ಮಾಹಿತಿ ಕನ್ನಡದಲ್ಲಿ ಬೇರೆಲ್ಲೂ ಲಭ್ಯವಿಲ್ಲ. ಅಪ್ಪಟ ಶಾಸ್ತ್ರ ಗ್ರಂಥವಾದ ಇದನ್ನು ಲಿಪಿ ಶಾಸ್ತ್ರದ ಬಗ್ಗೆ ಆಸಕ್ತಿಯುಳ್ಳ ಮತ್ತು ಕನ್ನಡದ ಬಗ್ಗೆ ಅಭಿಮಾನವುಳ್ಳ ಎಲ್ಲರೂ ಸ್ವಾಗತಿಸುತ್ತಾರೆಂಬ ನಂಬಿಕೆ ನನಗಿದೆ.

ಡಾ. ಸಿದ್ದಲಿಂಗಯ್ಯ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ISBN-81-7713-077-3